# ಮಿತ್ತಬೈಲ್ ಯಮುನಕ್ಕ

ಕಾದಂಬರಿ


ತುಳು ಮೂಲ
ಆನಂದಕೃಷ್ಣ (ಡಿ.ಕೆ. ಚೌಟ)

ಅನುವಾದ
ಮುಹಮ್ಮದ್ ಕುಳಾಯಿ



ಪ್ರಕಾಶಕರು

ತುಳುನಾಡು ಪಬ್ಲಿಕೇಶನ್ಸ್
ಮಂಗಳೂರು - 575 001





**MITTABAILU YAMUNAKKA**
A Tulu novel written by
**Ananda Krishna**

Translated by
**Mohammed Kulai**

Published by
**Tulunadu Publications**
C-42, 3rd Floor
Al-Rahaba Plaza
Nellikai Road, Mangalore - 575 001
Mobile : 98450 54191

First Published : 2008

Copies : 2000

Price : Rs. 200

Pages : 312


© Mohammed Kulai


Inner sketches & Cover Design : Gopadkar

Designed & Printed at
**Aakrithi Prints**
K.S. Rao Road, Mangalore - 575 001
Tel. : 0824 2443002

## ಅರ್ಪಣೆ

ತುಳುನಾಡಿನ
ಸಂಸ್ಕೃತಿ ಹಾಗೂ
ಬಂಟರ ಹಿರಿಮೆಯನ್ನು
ದೇಶ ವಿದೇಶಗಳಲ್ಲಿ ಪಸರಿಸಿದ
ಅಬುಧಾಬಿಯ

**ಶ್ರೀ ಬಿ.ಆರ್. ಶೆಟ್ಟಿಯವರಿಗೆ**



## ಕೃತಜ್ಞತೆಗಳು

- ಡಾ. ಯು.ಆರ್. ಅನಂತಮೂರ್ತಿ
- ಡಾ. ವಾಮನ ನಂದಾವರ
- ಡಾ. ಎಚ್. ನಾಗವೇಣಿ
- ಗೋಪಾಡ್ಕರ್
- ಎಸ್. ಮಹಾದೇವ ಭಟ್
- ಎಂ.ಬಿ. ಅಬ್ದುಲ್ ರಹ್ಮಾನ್
- ಎನ್.ಎ.ಎಮ್. ಇಸ್ಮಾಯೀಲ್
- ಕಲ್ಲೂರು ನಾಗೇಶ
- ಹಮೀದ್ ಅತ್ತೂರು



# ಯಮುನಕ್ಕನಿಗೊಂದು ಮುಂದಲೆ

ನನ್ನೊಳಗೊಂದು ಅಹಂಕಾರವಿತ್ತು. ನಾನು ತುಳುವ ನೆಲದವಳು... ತುಳು ಭಾಷಿಕಳು; ಈ ತುಳು ಮಣ್ಣಿನ ಋಣ ತೀರಿಕೆಗೆ ನಾನು, ನನ್ನ ನೆಲದ ಸಾಂಸ್ಕೃತಿಕ ಅನನ್ಯತೆಗಳನ್ನು ನನ್ನ ಹಲವು ಬರಹಗಳಲ್ಲಿ ಸೃಜನಶೀಲವಾಗಿ ದಾಖಲಿಸಿ, ಕನ್ನಡಿಗರ ಮುಂದಿಟ್ಟಿದ್ದೇನೆ – ಎಂಬುದೇ ನನ್ನೊಳಗಿದ್ದ ಅಹಂಕಾರ. ಆದರೆ ಈ ಅಹಂಕಾರ ನನ್ನೊಳಗಿಂದ ಹಂತ ಹಂತವಾಗಿ ಕುಸಿದು ಬಿದ್ದಿದ್ದು ಅಂದು ಅಂಚೆಯಲ್ಲಿ ನನಗೊಂದು ಬುಕ್ ಪಾರ್ಸಲ್ ಬಂದ ನಂತರದ ಕೆಲ ಕ್ಷಣ –ದಿನಗಳಲ್ಲಿ.

ಅಂದು ಅಂಚೆಯಲ್ಲಿ ಬಂದ ಆ ಪುಸ್ತಕ ಸಾಹಿತಿ ಆನಂದ ಕೃಷ್ಣರ 'ಮಿತ್ತಬೈಲ್ ಯಮುನಕ್ಕೆ; ಒಂಜಿ ಗುತ್ತುದ ಕತೆ' ಎಂಬ ತುಳು ಕಾದಂಬರಿ. ಎಂದಿನಂತೆ ನಾನು – ಇದು ಎಲ್ಲ ತುಳು ಕೃತಿಗಳಿಗೆ ಸಲ್ಲಿಸುವ ಗೌರವ – ಎಂಬಂತೆ, ಒಮ್ಮೆ ಕೃತಿಯ ಬಹಿರಂಗದ ಚಂದ, ಅದರ ಮುನ್ನುಡಿ ಬೆನ್ನುಡಿಗಳತ್ತ ಕಣ್ಣಾಡಿಸಿ ಕೃತಿಯನ್ನು ಒಪ್ಪವಾಗಿ ಕಪಾಟದಲ್ಲಿ ಜೋಡಿಸಿಟ್ಟೆ.

'ಮಿತ್ತಬೈಲ್ ಯಮುನಕ್ಕೆ'ಯನ್ನು ಹಾಗೆ ಜೋಡಿಸಿಟ್ಟು ಎರಡು ತಿಂಗಳು ಸರಿಯುತ್ತಿದೆ ಎನ್ನುವಾಗ ಕನ್ನಡ ವಿಶ್ವವಿದ್ಯಾಲಯದ ವಿದ್ವಾಂಸರೊಬ್ಬರು ಆನಂದ ಕೃಷ್ಣರ ಈ ಹೊಸ ಕೃತಿಯ ಬಗ್ಗೆ ಮಾತನ್ನೆತ್ತಿ 'ನಮ್ಮ



ಡಿ.ಕೆ. ಚೌಟರ ಈ ಕಾದಂಬರಿಯ ಬಗ್ಗೆ ಕನ್ನಡ ವಿಶ್ವವಿದ್ಯಾಲಯದಲ್ಲಿ ಒಂದು ಚರ್ಚೆಯನ್ನು ಇಟ್ಟರೆ ಹೇಗೆ?' ಎಂದು ಪ್ರಸ್ತಾಪಿಸಿದಾಗ ಒಂದು ಕ್ಷಣ ನಾನು ಭಯದಿಂದ ಮೌನಳಾಗಿದ್ದೆ. ನಂತರ ನಿಧಾನಕ್ಕೆ ಅಂದೆ – 'ಕನ್ನಡ ವಿಶ್ವವಿದ್ಯಾಲಯದಲ್ಲಿ ಈ ತುಳು ಕೃತಿಯ ಚರ್ಚೆ ಹೇಗೆ ಸಾಧ್ಯ? ತುಳು ಭಾಷೆಯ ಈ ಕೃತಿಯನ್ನು ಇಲ್ಲಿ ಓದಿದವರ್‍ಯಾರು? ಓದುವವರ್‍ಯಾರು? ತುಳುವ ಬೇರಿನ ವಿದ್ವಾಂಸರನ್ನು ಅಥವ ಸೃಜನಶೀಲ ಮನಸ್ಸುಗಳನ್ನು ಎಲ್ಲೆಲ್ಲಿಂದಲೋ ಕರೆಸಿ ಇಲ್ಲಿ ಯಾಕೆ ಚರ್ಚಿಸಬೇಕು? ತುಳುವ ಮಣ್ಣಲ್ಲಿರುವ ಮಂಗಳೂರು ವಿಶ್ವವಿದ್ಯಾಲಯದಲ್ಲಿ ಈ ಚರ್ಚೆ ನಡೆಸಬಾರದೇಕೆ?' ಎಂದು ನಾನು ಹೇಳಿದ್ದೇನಷ್ಟೆ – ಅಷ್ಟರಲ್ಲಿ ಆ ವಿದ್ವಾಂಸರು ನನ್ನನ್ನು ಕೇಳಿದ ಪ್ರಶ್ನೆ 'ನೀವು ಆ ಕೃತಿಯನ್ನು ಓದಿದ್ದೀರಾ...?' ಎಂದು. ಏನು ಹೇಳಲಿ ನಾನು? ಉತ್ತರಿಸಲು ನನಗೆ ಎಲ್ಲಿದೆ ಮುಖ? ಆದರೂ ಉತ್ತರಿಸಿದ್ದೆ. 'ನನಗೆ ತುಳು ಬರಹ ಓದಲು ತುಂಬ ಕಷ್ಟ ಆಗ್ತಾ ಇದೆ. ತುಳು ಭಾಷೆಯಲ್ಲಿ ಮಾತಾಡೋದು ಸುಲಭ, ಆದರೆ ತುಳು ಭಾಷೆಯನ್ನು ಓದೋದು ತುಂಬ ಕಷ್ಟ ಅಲ್ವಾ... ಸರ್, ನಿಧಾನಕ್ಕೆ ಓದಬೇಕೆಂದಿದ್ದೇನೆ' ಎಂದು ಮನದಲ್ಲಂಜುತ್ತಾ ಉತ್ತರಿಸಿದಾಗ,

'ನೀವೇ ಹೀಗೆ ಹೇಳಿದರೆ ಹೇಗೆ? ತುಳು ಸಂಸ್ಕೃತಿಯನ್ನು ಕನ್ನಡದಲ್ಲಿ ದಾಖಲಿಸುವವರು ನೀವು. ತುಳು ಮಣ್ಣಿನ ಬಗ್ಗೆ ಆ ನೆಲದ ಭಾಷಾ ಸೊಗಡಿನಲ್ಲೇ ಬರೆದ ಕೃತಿಯನ್ನು ನೀವು ಮೊದಲು ಓದಿ' ಎಂದು ಆ ವಿದ್ವಾಂಸರು ಹೇಳಿದಾಗ ನನ್ನ ಅಹಂಕಾರದ ಕೋಟೆ ಸಂಪೂರ್ಣ ಕುಸಿದು ಬಿದ್ದಿತ್ತು!

ನನ್ನ ಜೀವಮಾನದ ಪ್ರಥಮವಾಗಿ ಆ ತುಳು ಕಾದಂಬರಿಯನ್ನು ನಾನು ಓದತೊಡಗಿದ್ದೆ! ಆದರೆ ಆ ಮೊದಲ ಓದು ನನಗೆ ಏನೂ ಸಮಾಧಾನ ನೀಡಲಿಲ್ಲ, ಮತ್ತೆ ಓದಿದೆ... ಮತ್ತೆ ಓದಿದೆ. ಒಂದು ತಿಂಗಳಲ್ಲಿ ಆ ಕೃತಿಯ ಇಂಚಿಂಚನ್ನೂ 'ಅರೆದು ಕುಡಿದೆ'. 'ಮಿತ್ತಬೈಲ್ ಯಮುನಕ್ಕೆ' ಎಂಬ ಕೃತಿ ನನ್ನ ಬರಹದ ಅಹಂಕಾರವನ್ನು ಮಾತ್ರವಲ್ಲ, ತುಳು ಭಾಷಾ ಓದಿನ ಸೋಮಾರಿತನವನ್ನು ಸಂಪೂರ್ಣವಾಗಿ ಮುರಿದಿಟ್ಟಂತಹ ಕೃತಿ! ನನ್ನ ಹುಟ್ಟು ನೆಲದಲ್ಲಿ ನಾನು ಕಾಣದ ಹಲವು 'ಲೋಕ ವಿಚಾರ'ಗಳನ್ನು ನನಗೆ ಉಣಿಸುತ್ತ, ತುಳುನಾಡಿನ ಸಾಂಸ್ಕೃತಿಕ ಅನನ್ಯತೆಯನ್ನು ಬಿಂಬಿಸುತ್ತ... ನನ್ನಲ್ಲಿ ತುಳುನಾಡಿನ ಬಗ್ಗೆ ಮತ್ತಷ್ಟು ಮೋಹವನ್ನು ಉಕ್ಕಿಸಿದ ಕೃತಿಯೂ ಹೌದು.

ನಾನು ಈ ಕೃತಿಯನ್ನು ಓದುವವರೆಗೂ ಈ ಕೃತಿಯ ಕರ್ತೃ ಡಿ.ಕೆ. ಚೌಟರು, ನನಗೆ ಹತ್ತಿರದ ಪರಿಚಿತರಾಗಿರಲಿಲ್ಲ, ಅಷ್ಟು ಹೊತ್ತಿಗಾಗಲೇ ಅವರು ಕನ್ನಡ ಸಾಂಸ್ಕೃತಿಕ ಲೋಕದಲ್ಲಿ ಒಬ್ಬ ಪ್ರಮುಖ ಗುರಿಕಾರರೆಂದು ಪ್ರಸಿದ್ಧರಾಗಿ, ತುಳು ಸಾಹಿತ್ಯ ಲೋಕಕ್ಕೂ ಕರಿಯವಜ್ಜೆರೆನ ಕತೆಕುಲು, ಪಿಲಿಪತ್ತಿ ಗಡಸ್, ಪತ್ತ್ ಪಜ್ಜೆಲು, ಧರ್ಮೆತ್ತಿ ಮಾಯೆಯಂತಹ ಕೃತಿಗಳನ್ನು ಕೊಟ್ಟು, ತನ್ನ ಹುಟ್ಟುನೆಲದಲ್ಲೂ ತಮ್ಮ ಸೃಜನಶೀಲತೆಯನ್ನು ದಾಖಲಿಸಿದ್ದರು. ಆ ಸಂದರ್ಭದಲ್ಲಿ ಅವರೊಳಗಿದ್ದ ಸೃಜನಶೀಲತೆಯ ಬೆಳಕಲ್ಲೂ ನನಗವರನ್ನು ಹತ್ತಿರದಿಂದ

ಪರಿಚಯಿಸಿಕೊಳ್ಳಬೇಕೆಂದು ಅನಿಸಲೇ ಇಲ್ಲ. ಆದರೆ ಅವರ ತೂಕದ ವ್ಯಕ್ತಿತ್ವ, ಅನುಭವದ ಗಾಂಭೀರ್ಯ ಇವೆಲ್ಲದರ ನಡುವೆ ಅವರ ಹಲವು 'ಮಾನವೀಯ ಮುಖ'ಗಳ ಬಗ್ಗೆ ದೂರದಿಂದ ಪರಿಚಯವಿದ್ದ ನನಗೆ, ಅವರ ಮೇಲಿದ್ದ ಅಪಾರ ಗೌರವ ಈ ಕಾದಂಬರಿಯ ಓದಿನಿಂದ ಮತ್ತಷ್ಟು ಹೆಚ್ಚಿತ್ತು. ಆನಂದಕೃಷ್ಣ ಕಾವ್ಯನಾಮವುಳ್ಳ ಹಿರಿಯರಾದ ಡಿ.ಕೆ. ಚೌಟರ ಮೇಲಿನ ಗೌರವದಿಂದಾಗಿಯೇ, ಅವರ ಈ ಅನುವಾದಿತ ಕೃತಿಗೆ ನಾನೀಗ ಮುನ್ನುಡಿಯ ತೋರಣ ಕಟ್ಟ ಹೊರಟಿದ್ದೇನೆ.

'ಮಿತ್ತಬೈಲ್ ಯಮುನಕ್ಕೆ' ಕೃತಿಯ ಶೀರ್ಷಿಕೆ ಮೇಲೆ ಒಮ್ಮೆ ಕಣ್ಣಾಡಿಸಿದರೆ ನನ್ನ ಕಣ್ಣ ಮುಂದೆ ಬರುವ ಚಿತ್ರಣವೆಂದರೆ – ಬಾಲ್ಯದಲ್ಲಿ ನನ್ನ ಕಣ್ಣಳತೆಗೆ ಸಿಕ್ಕಂತಹ ಗುತ್ತಿನೊಡತಿಯರ ಮರ್ಜಿಯ ಬದುಕು! ಮಾತೃಪ್ರಧಾನ ವ್ಯವಸ್ಥೆಯುಳ್ಳ ಬಂಟ ಸಮುದಾಯದಲ್ಲಿ ಹುಟ್ಟಿದ ನಾನು, ಆ ಗುತ್ತಿನಮನೆಗಳು..., ಆ ಗುತ್ತಿನ ಮನೆಗಳ ಗತ್ತು –ಗಮ್ಮತ್ತು–ಸಂಪತ್ತು, ದರ್ಪ ದಬ್ಬಾಳಿಕೆ..., ಗುತ್ತಿನೊಡತಿಯರ ಪಕ್ಷಪಾತೀಯ ಕಾರುಬಾರಿನಲ್ಲಿ ನರಳುವ ಅಥವ ಅರಳುವ ಅವರ ಒಡಹುಟ್ಟಿದವರ ನೋವು–ನಲಿವುಗಳನ್ನೆಲ್ಲ ಕಣ್ಣಾರೆ ಕಂಡವಳು.

ಈ ಚಿತ್ರಣಗಳನ್ನೆಲ್ಲ ನಾನು ಚಿತ್ತದಲ್ಲಿಟ್ಟುಕೊಂಡು, ನನಗಿಂತ ಹಲವು ದಶಕಗಳ ಹಿಂದೆಯೇ ಈ 'ಲೋಕ'ವನ್ನು ಕಂಡು, ತುಳುಮಣ್ಣಿನ ಸುಖವನ್ನು ಅನುಭವಿಸಿದ ಈ ಕೃತಿಕರ್ತೃವಿನ ಈ 'ಸಾಂಸ್ಕೃತಿಕ ಕಥನ' ಕೃತಿಯ ಒಡಲನ್ನು ಪ್ರವೇಶಿಸಿದಾಗ, ನನಗೆ ತಕ್ಷಣ ಕಂಡಿದ್ದು ನಾನು ಅದುವರೆಗೂ ಕಾಣದಿದ್ದ ಮತ್ತು ಕಾಣಬೇಕಾಗಿದ್ದ ಗುತ್ತೊಂದರ 'ಒಳಜಗತ್ತು'!

ಈ ಕಥನ, ಬರೀಯ ಬಂಟರ ಗುತ್ತು ಒಂದರ ಅಥವ ಗುತ್ತಿನೊಡತಿಯರ ಕಾರುಬಾರನ್ನು ಮಾತ್ರವೇ ಕಟ್ಟಿ ಕೊಡುತ್ತದೆ ಎಂದು ನಾನು ಭಾವಿಸಿದ್ದೆ. ಆದರೆ ನನ್ನ ಭಾವನೆ ಸುಳ್ಳಾಗುವಂತೆ ನಿಧಾನಕ್ಕೆ ಈ ಕೃತಿಯು ಬಚ್ಚಿಟ್ಟದ್ದು ಕೃತಿಕಾರನ ಭಾವಪ್ರೌಢಿಮೆ, ಭಾಷಾಪ್ರೌಢಿಮೆ ಮತ್ತು ಬೌದ್ಧಿಕ ಪ್ರೌಢಿಮೆಯನ್ನು ಪ್ರತಿಬಿಂಬಿಸುವಂತಹ ಅದ್ಭುತ ಕಥಾ ತಂತ್ರ ಹಾಗೂ ಕಥನ ಕೌಶಲ್ಯವಿರುವ, ತುಳುವ ಮಣ್ಣಿನ ಸಾಂಸ್ಕೃತಿಕ ಅನನ್ಯತೆಯನ್ನು ಮಿಂಚಿಸುವ ಸುಂದರ ಕಥಾಹಂದರವನ್ನು!

'ಮಿತ್ತಬೈಲ್ ಯಮುನಕ್ಕೆ' ತುಳುನಾಡಿನ ಜಾನಪದೀಯ, ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಹಾಗೂ ಜನಾಂಗೀಯ ಇತಿಹಾಸ ಕಥನವು ಮಾತ್ರವೇ ಅಲ್ಲ – ಇದು ಅನನ್ಯ ಹಾಗೂ ಅಪರೂಪದ ತುಳು ನುಡಿಗಟ್ಟು ಮತ್ತು ರೂಪಕಗಳ ಸೂಕ್ಷ್ಮ ಎಳೆಗಳನ್ನಿಟ್ಟು ಸೃಜನಶೀಲ ಕೌಶಲ್ಯದಿಂದ ಹೆಣೆದ ಕೃತಿಯೂ ಹೌದು.

ಟಿಪ್ಪು ಸುಲ್ತಾನನ ಆಡಳಿತ ಕಾಲದಿಂದ ಹಿಡಿದು ಗಾಂಧಿಯ ಕಗ್ಗೊಲೆಯ ಕಾಲಘಟ್ಟದವರೆಗೆ ಆರು ತಲೆಮಾರುಗಳಲ್ಲಿ ಹರಡಿಕೊಂಡಿರುವ ಈ ಕೃತಿಯ ಕಥಾ ಹಂದರದಲ್ಲಿ, ತುಳುನಾಡಿನ ಆ ಕಾಲಘಟ್ಟಗಳ ಮುಖ್ಯ, ಅಮುಖ್ಯ ಸಮುದಾಯಗಳ



ಸಾಂಸ್ಕೃತಿಕ ಅನನ್ಯತೆ, ಅವರ ಬದುಕಿನ ರೀತಿ ನೀತಿ ಹಾಗೂ ಮನುಷ್ಯ ಸ್ವಭಾವಗಳ ಚಿತ್ರಣಗಳಿದ್ದು, ಬ್ರಿಟಿಷರ ವಿರುದ್ಧವೆದ್ದ ಸ್ವಾತಂತ್ರ್ಯದ ಹೋರಾಟದ ಕಥಾ ಎಳೆಯಂತೂ ಕಥಾಹಂದರದ ಆದಿಯಿಂದ ಅಂತ್ಯದವರೆಗೂ ಕಥಾಹೆಣಿಗೆಯಲ್ಲಿ ಕಸೂತಿ ಹಾಕಿದೆ.

ಒಟ್ಟಿನಲ್ಲಿ ಪರಂಪರೆಯಿಂದ ಬಂದಿರುವ ಸಾಂಸ್ಕೃತಿಕ ವಿಶೇಷತೆಗಳನ್ನು ಮತ್ತೆ ಈ ಕೃತಿಯ ಮೂಲಕ ಕಟ್ಟಿಕೊಡುವ ಅಥವ ಪುನರುಜ್ಜೀವನಗೊಳಿಸುವ ಸ್ಪಷ್ಟ ಆಶಯವನ್ನು ಹೊಂದಿರುವ ಈ ಕಾದಂಬರಿಯಲ್ಲಿ ಕೃತಿಕಾರರು ಆ ಕಾಲ ಈ ಕಾಲ – ಎಂಬ ನಿರೂಪಣಾ ತಂತ್ರದ ಮೂಲಕ, ಆರು ತಲೆಮಾರುಗಳ ವಿಸ್ತಾರವಾದ ಕ್ಯಾನ್‌ವಾಸಿನಲ್ಲಿ ತಾನು ಹರಡಿಸಿರುವ ಕಥಾಹಂದರದ ಬಂಧವು ಎಲ್ಲೂ ಕುಸಿಯದಂತೆ, ಕಥನ ವಿನ್ಯಾಸವನ್ನು ಬಲು ನಾಜೂಕಾಗಿ ರೂಪಿಸಿದ್ದು ಅವರೊಳಗಿನ ಸೃಜನಶೀಲ ಕೌಶಲ್ಯಕ್ಕೊಂದು ಸಾಕ್ಷಿ. ಈ ಕೃತಿಯ ನಿರೂಪಣಾ ತಂತ್ರದ ಬಗ್ಗೆ ನಮ್ಮ ನಾಡಿನ ಖ್ಯಾತ ವಿದ್ವಾಂಸ ಪ್ರೊ। ಬಿ.ಎ. ವಿವೇಕ ರೈ ಅವರು ಹೀಗೆ ಪ್ರತಿಕ್ರಿಯಿಸುತ್ತಾರೆ. 'ಈ ಕಾದಂಬರಿಯ ಕಾಲವು ಕೇವಲ ಸಮಯವನ್ನು ಮಾತ್ರ ಸೂಚಿಸದೆ ಭಿನ್ನ ತಲೆಮಾರುಗಳು, ಭಿನ್ನ ಜಾತಿಗಳ, ಭಿನ್ನ ಸಮುದಾಯಗಳ ಗಂಡು ಹೆಣ್ಣಿನ ವೈರುಧ್ಯದ ಬದುಕಿನ ಸಂಕೀರ್ಣಗಾಥೆಯಾಗಿಯೂ ಕಾಣಿಸಿಕೊಳ್ಳುತ್ತದೆ. ಆ ಕಾಲ ಮತ್ತು ಈ ಕಾಲ ಎನ್ನುವ ಎರಡು ಪರಿಮಾಣಗಳ ಮೂಲಕ ವಿಚ್ಛೇದನಗೊಳ್ಳುವ ಈ ಕಾದಂಬರಿ, ಅಂತಿಮವಾಗಿ ಆ ಎರಡೂ ಕಾಲಗಳನ್ನು ಮುಖಾಮುಖಿಯನ್ನಾಗಿಸಿ ಬಹುರೂಪಿ ಸಂಕಥನಗಳನ್ನು ಕಟ್ಟಿಕೊಡುತ್ತದೆ' – ಎಂದು.

ತುಳುನಾಡಿನ ಸಂಸ್ಕೃತಿ ಪರಂಪರೆಯ ಒಂದು ಸಂಕಥನವಾಗಿ ರೂಪುಗೊಂಡಿರುವ ಈ ಕೃತಿಯಲ್ಲಿ, ಮುಂದಿನ ಪೀಳಿಗೆಗೆಂಬಂತೆ ಕಥಾಹಂದರದೊಳಗೆ ಹೆಣೆದುಕೊಂಡಿರುವ ಸಾಗುವಳಿ ಕ್ರಮ, ಕೃಷಿ ಬೆಳೆಗಳು, ವಿವಿಧ ಆಚರಣೆಗಳು, ಸಂಪ್ರದಾಯಗಳು ಬದುಕಿನ ರೀತಿ–ನೀತಿ–ರಿವಾಜು–ವಿಶಿಷ್ಟ ಕಟ್ಟುಪಾಡುಗಳಂತೂ ಮುಂದಿನ ತಲೆಮಾರುಗಳಿಗೆ ಅಚ್ಚರಿಯನ್ನೇ ಉಂಟು ಮಾಡುವಂತಹದ್ದು.

ನೋಡಿ, ಐದಾರು ತಲೆಮಾರುಗಳ ಹಿಂದೆ ಬೆಳೆಯುತ್ತಿದ್ದ ಭತ್ತದ ತಳಿಗಳು ಎಷ್ಟು ವಿಧದವು! ಪುದ್ವಾರ್‌ದೆಚ್ಚಿ ನೇಮದ ಊಟಕ್ಕೆ ಭೂತದ ಗದ್ದೆಯಲ್ಲಿ ಬೆಳೆವ ಸತ್ಯದ ಬೆಳೆ ಅತಿಕಾರ, ಪಾಯಸಕ್ಕಾಗಿಯೇ ಬೆಳೆವ ಅಕ್ಕಿ ಗಂಧಸಾಲೆ, ದಿನನಿತ್ಯದ ಊಟಕ್ಕೆ ಬಳಸುವ ಮಸ್ಕತ್ ಅಕ್ಕಿ ಅಥವ ಚವ್ವೆ ಚವ್ವೆ ಅಕ್ಕಿ, ಮಳೆಗಾಲದ ಎಣೆಲಿನ ಕಾಲಕ್ಕೆ ಬೆಳೆಯುವ ಊಟದ ಅಕ್ಕಿ ಕಯಮೆ... ಹೀಗೆ ದೇಸಿ ತಳಿಗಳ ಪರಿಚಯವನ್ನು ಮುಂದಿನ ತಲೆಮಾರುಗಳಿಗಾಗಿ ದಾಖಲಿಸಿದ್ದು ಈ ಕೃತಿಕಾರರ ಹಿರಿಮೆ.

ಹೀಗೆಯೇ... ಗುತ್ತಿನ ಒಕ್ಕಲಲ್ಲಿ ಚಾಕರಿ ಮಾಡುವ ಮುಗೇರರ ಮಕ್ಕಳು ಮದುವೆಯಾಗಿ ಬೇರೆ ಸಂಸಾರ ಹೂಡುವಾಗ, ಗುತ್ತಿನ ಮನೆಯವರು ಅವರಿಗೊಂದು ಗುಡಿಸಲು ಕಟ್ಟಿ ಕೊಟ್ಟು, ಒಂದು ತೆಂಗಿನ ಮರ, ಒಂದು ಹಲಸಿನ ಮರ, ಒಂದು ಮಾವಿನಮರ, ಒಂದು ಹುಣಿಸೇ ಮರವನ್ನು ಬಿಟ್ಟು, ಗುತ್ತಿನ ಗದ್ದೆಗಳಲ್ಲಿ ಸಾಗುವಳಿ ಕೆಲಸ

ನೀಡುವ ಕ್ರಮ ಇತ್ತು – ಎಂದು ಈ ಸಂಸ್ಕೃತಿ ಕಥನ ಕೊಡುವ ಮಾಹಿತಿ ಈ ತಲೆಮಾರಿಗಂತೂ ಖಂಡಿತ ಹೊಸ ತಿಳುವಳಿಕೆಯೇ ನಿಜ.

ಈ ಕಾದಂಬರಿಯ ಮೂಲ ತುಳು ಕೃತಿಗೆ ಮುನ್ನುಡಿ ಬರೆದಿರುವ ಪ್ರೊ। ಅಮೃತ ಸೋಮೇಶ್ವರ ಅವರು, ಕೃತಿಕಾರರು ಕಥಾಹಂದರದಲ್ಲಿ ಬಹು ಬಗೆಯ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಸನ್ನಿವೇಶಗಳನ್ನು ಪ್ರಸ್ತಾಪಿಸುತ್ತ ಕಂಬಳ, ಪುದ್ವಾರ್, ಬಿಸು, ಕೆಡ್ಡಸ, ಗುತ್ತಿನ ಗಡಿ ಹಿಡಿವ ಕ್ರಮ, ಭೂತದ ನೇಮ, ಕೋಳಿ ಅಂಕ, ನಿಶ್ಚಿತಾರ್ಥ, ಮದುವೆ ಇತ್ಯಾದಿ ಆಚರಣೆಗಳನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುವ ಮೂಲಕ ಕೃತಿಗೆ ಮತ್ತಷ್ಟು ಸಾಂಸ್ಕೃತಿಕ ಜೀವಂತಿಕೆಯನ್ನು ತುಂಬಿದ್ದಾರೆ – ಎಂದು ಗುರುತಿಸಿದ್ದಾರಲ್ಲದೆ, ಬಂಟ ಸಮುದಾಯದ ಅಳಿಯ ಸಂತಾನ ಕೂಡುಕುಟುಂಬದಲ್ಲಿರುವ ಗುಣದೋಷ, ಶ್ರೇಣೀಕೃತ ಸಮಾಜದ ಕಟ್ಟುನಿಟ್ಟು, ಭೂತವನ್ನು ಮುಂದಿಟ್ಟುಕೊಂಡು ನಡೆಸುವ ರಾಜಕೀಯ ಹಾಗೂ ಗ್ರಾಮ ಬದುಕಿನ ಬೇರೆ ಬೇರೆ ಮಟ್ಟದ ರಾಜಕೀಯಗಳ ಜತೆಗೆ ತುಳು ಸಂಸ್ಕೃತಿಯ ಒಟ್ಟು ಚಿತ್ರಣ ಕೊಟ್ಟಿರುವ ಕೃತಿಕಾರರು ನಿಜವಾದ ಅರ್ಥದಲ್ಲಿ ದೊಡ್ಡದೊಂದು 'ಗ್ರಾಮಾಯಣ'ವನ್ನೇ ಬರೆದಿದ್ದಾರೆ – ಎಂದು ಸಂತಸ ವ್ಯಕ್ತಪಡಿಸಿದ್ದರಲ್ಲಿ ಯಾವ ಉತ್ಪ್ರೇಕ್ಷೆಯೂ ಇಲ್ಲ.

'ಮಿತ್ತಬೈಲ್ ಯಮುನಕ್ಕೆ' ಕೃತಿ ಈ ಎಲ್ಲ ವಿಶೇಷಗಳ ನಡುವೆ ಮತ್ತೊಂದು ಕಾರಣಕ್ಕೆ ವಿಶಿಷ್ಟವೆನಿಸಿದ್ದು ಯಾಕೆಂದರೆ, ತುಳು ಭಾಷೆಯ ನುಡಿಗಟ್ಟುಗಳು ಈಗ ಸಾಕಷ್ಟು ಸಂಕರಗೊಂಡಿರುವ ಇಂದಿನ ಸಾಹಿತ್ಯ ಸಂದರ್ಭದಲ್ಲಿ, ಕೃತಿಕಾರರು ಅಳಿದು ಹೋಗಿರುವ ತುಳು ಭಾಷೆಯ ನುಡಿಗಟ್ಟುಗಳನ್ನು ಹಾಗೂ ತುಳುಮಣ್ಣಿಗೆ ಹೊಂದುವ ರೂಪಕಗಳನ್ನು ತಮ್ಮ ಸ್ಮೃತಿಪಟಲದಿಂದ ಹೆಕ್ಕಿ ತಂದು ಈ ಕೃತಿಯಲ್ಲಿ ಸೃಜನವಾಗಿ ಪೋಣಿಸಿ ಹೆಣೆಯುವ ಮೂಲಕ ತುಳು ಭಾಷೆಯನ್ನು ಉಳಿಸುವ ಜವಾಬ್ದಾರಿಯನ್ನು ದೇವರ ಕೆಲಸವೆನ್ನುವಷ್ಟು ತನ್ಮಯತೆಯಿಂದ ನಿರ್ವಹಿಸಿದ್ದಾರೆ.

ಕೃತಿಕಾರರು ತಮ್ಮ ಮೂಲ ಕೃತಿಯಲ್ಲಿ – ತಾವು ಓದಿರುವ ಇತಿಹಾಸ, ಕೇಳಿರುವ ಕತೆಗಳು, ನೋಡಿರುವ ಗುತ್ತು ಗ್ರಾಮಗಳ ಒಟ್ಟು ಅರವತ್ತು ವರ್ಷದ ಹಿಂದಿನ ನಡವಳಿಕೆಗಳನ್ನು ಒಟ್ಟುಗೂಡಿಸಿ, ಇತಿಹಾಸದ ಕ್ಯಾನ್‌ವಾಸ್‌ನಲ್ಲಿ ಅಥವ ಗ್ರಾಮಜೀವನದ ಗೋಡೆಯ ಮೇಲೆ ತನ್ನ ಸೃಜನಶೀಲ ಬಣ್ಣದ ಬರಹದಲ್ಲಿ ದಾಖಲಿಸಿದ್ದೇನೆ – ಎಂದು ಹೇಳಿಕೊಂಡಿದ್ದಾರೆ. ಹೌದು, ಇದು ನಿಜ. ತುಳುನಾಡಿನ ಗ್ರಾಮ ಜೀವನದ ಗೋಡೆ ಮಾತ್ರವಲ್ಲ, ತುಳುನಾಡಿನ ಸ್ವಾತಂತ್ರ್ಯ ಹೋರಾಟದ ನೆನಪಿನ 'ಸ್ಮಾರಕ'ಗಳ ಮೇಲೂ ಸಮರ್ಥವಾಗಿ ತಮ್ಮ ಸೃಜನಶೀಲ ಅಭಿವ್ಯಕ್ತಿಯನ್ನು ಸಾಧಿಸಿದ ಕೃತಿಕಾರ ಆನಂದ ಕೃಷ್ಣರು, ತಮ್ಮ ಈ ಕೃತಿಯ ಮೂಲಕ ತುಳುನಾಡಿನ ಋಣವನ್ನು ಸಂಪೂರ್ಣವಾಗಿ ತೀರಿಸಿದ್ದಾರೆ.


ಹಾಗೆಯೇ ತುಳುವ ಮಣ್ಣಿನ ಎಲ್ಲಾ 'ಸಾಂಸ್ಕೃತಿಕ ಪರಿಮಳ'ವನ್ನು ತನ್ನೊಡಲಲ್ಲಿ ಕಟ್ಟಿಕೊಳ್ಳುತ್ತಾ ಆರೋಗ್ಯಪೂರ್ಣವಾಗಿ ಹುಟ್ಟಿಕೊಂಡ 'ಮಿತ್ತಬೈಲ್ ಯಮುನಕ್ಕೆ' ತುಳು ಕೃತಿ, ಕನ್ನಡಕ್ಕೆ ಭಾಷಾಂತರಗೊಳ್ಳುವ ಸಂದರ್ಭದಲ್ಲಿ ನನ್ನೊಳಗೊಂದು ಆತಂಕವಿತ್ತು. ಪ್ರಾದೇಶಿಕ ಸಂಸ್ಕೃತಿಯ ಕೃತಿಯೊಂದರ ಭಾಷಾಂತರ ಸಾಧ್ಯವೇ? ಎಂದು. ಒಂದು ಪ್ರಾದೇಶಿಕ ಸಂಸ್ಕೃತಿಯ ಕೃತಿಯನ್ನು ಭಾಷಾಂತರಿಸುವಾಗ, ಮೂಲ ಕೃತಿಯಲ್ಲಿದ್ದ ಸಾಂಸ್ಕೃತಿಕ ಸೊಗಡು ಸೋರಿ ಹೋಗುತ್ತದೆ ಎಂಬುದಂತೂ ನಿಜ. ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು', ಕಾರಂತರ 'ಮರಳಿ ಮಣ್ಣಿಗೆ' ಅನ್ಯ ಭಾಷೆಗೆ ಅನುವಾದಗೊಂಡಾಗ ಅದು ಸಾಂಸ್ಕೃತಿಕವಾಗಿ ಬಳಲಿ ಸೊರಗಿದ್ದನ್ನು ನಾವು ಕಂಡಿದ್ದೇವೆ.

ಈ 'ಮಿತ್ತಬೈಲ್ ಯಮುನಕ್ಕೆ'ಯನ್ನು ಭಾಷಾಂತರಿಸುವುದು ಅಷ್ಟು ಸುಲಭವಲ್ಲ, ಅದರ ಮೂಲ ಆಶಯಗಳನ್ನು ಮತ್ತೊಂದು ಭಾಷೆಗೆ ಭಾಷಾಂತರಿಸುವುದು ಸಾಧ್ಯವಿಲ್ಲ – ಎಂದು ನಾನು ವಾದಿಸುತ್ತಿರುವಾಗಲೇ ಕನ್ನಡದ ಕತೆಗಾರ ಮುಹಮ್ಮದ್ ಕುಳಾಯಿ ಅವರು ಈ ಕೃತಿಯನ್ನು ಸಾಕಷ್ಟು ಮುತುವರ್ಜಿಯಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ. ತುಳು ಭಾಷೆಯ ಹಾಗೂ ಸಂಸ್ಕೃತಿಯ ಸೊಗಡನ್ನು ಈ ಅನುವಾದಿತ ಕೃತಿಯಿಂದ ಸೋರಿ ಹೋಗದಂತೆ ತಡೆಯಲು ಅನುವಾದಕರು ಬಾರೀ ಎಚ್ಚರಿಕೆ, ಶ್ರಮ ವಹಿಸಿದ್ದರೂ, ಅವರ ಅರಿವಿಗೆ ಬರದಂತೆಯೇ ಕೃತಿಯ ಭಾಷಾ ಹಾಗೂ ಸಾಂಸ್ಕೃತಿಕ ಸೊಗಡು ಅಲ್ಲಲ್ಲಿ ಮಂಕಾಗಿದೆ. ಆದರೆ ಸಾಂಸ್ಕೃತಿಕ ಭಾಷಾಂತರದಲ್ಲಿ ಇದು ತೀರಾ ಸಹಜ ಎಂಬುದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ.

ಕನ್ನಡದ ಓದುಗರಿಗೆ ಎಲ್ಲೂ ತೊಡಕಾಗದ ಹಾಗೆ, ತುಳು ನುಡಿಗಟ್ಟುಗಳನ್ನು ಕನ್ನಡೀಕರಿಸುವಾಗ ಅನುವಾದಕರು ತೋರಿರುವ ಸೃಜನಶೀಲ ಕೌಶಲ್ಯ ಮೆಚ್ಚುವಂತಹದ್ದು. ಈ ಕಾರಣಕ್ಕಾಗಿ ಅನುವಾದಕರಿಗೆ ನನ್ನ ಅಭಿನಂದನೆಗಳು. ಇಂತಹದ್ದೇ ಅನುಭವ ಎಲ್ಲ ನಮ್ಮ ಕನ್ನಡದ ಓದುಗರಿಗೂ ಆಗುತ್ತದೆ ಎಂಬ ಭರವಸೆ ನನಗಿದೆ. ತುಳುತಾಯಿಗೆ ನಮನ ಸಲ್ಲಿಸುವಂತೆ ಇಂತಹ ಶ್ರೇಷ್ಠ ಹಾಗೂ ಅರ್ಥಪೂರ್ಣ ಕೃತಿಯನ್ನು ಸೃಷ್ಟಿಸಿದ ಕೃತಿಕಾರ ಆನಂದ ಕೃಷ್ಣರಿಗೆ ನನ್ನ ಗೌರವಪೂರ್ವಕ ನಮನಗಳು. ಅದನ್ನು ಕನ್ನಡೀಕರಿಸಿ ಕನ್ನಡದ ಜನತೆಯ ಮುಂದಿಟ್ಟ ಸೃಜನಶೀಲ ಬರಹಗಾರ ಶ್ರೀ ಮುಹಮ್ಮದ್ ಕುಳಾಯಿ ಅವರಿಗೂ ನನ್ನ ನಮನಗಳು.

**ಡಾ. ಎಚ್. ನಾಗವೇಣಿ**

ಮುಖ್ಯಸ್ಥರು
'ಸಿರಿಗನ್ನಡ'
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ



# ಪ್ರಕಾಶಕರ ಮಾತು

ಜಾಗತೀಕರಣದ ಅಬ್ಬರ ಮತ್ತು ಪಾಶ್ಚಾತ್ಯ ಸಂಸ್ಕೃತಿಯ ದಾಳಿಯಿಂದಾಗಿ ನಮ್ಮ ದೇಶೀಯ ಪ್ರಾದೇಶಿಕ ಸಂಸ್ಕೃತಿಗಳು ಅವನತಿಯತ್ತ ಚಲಿಸುತ್ತಿರುವ ಹಾಗೂ ಏಕಸಂಸ್ಕೃತಿ ವಾಹಕರ ಮಾನವ ವಿರೋಧಿ ಬರಹಗಳು ನಮ್ಮ ಕಪಾಟುಗಳನ್ನು ತುಂಬುತ್ತಿರುವ ಕಹಿ ವಾಸ್ತವಿಕತೆಗಳ ಸಂದರ್ಭದಲ್ಲಿ ಮಾನವಪ್ರೇಮಿ ಸಾಹಿತ್ಯಗಳು ತಮ್ಮ ನೆಲೆಗಳನ್ನು ಭದ್ರಪಡಿಸಬೇಕಾದ ಅಗತ್ಯವಿದೆ.


ಈ ನಿಟ್ಟಿನಲ್ಲಿ ಸ್ಥಾಪಿಸಲಾಗಿರುವ 'ತುಳುನಾಡು ಪಬ್ಲಿಕೇಶನ್ಸ್' ಕರ್ನಾಟಕದ ಪ್ರಾದೇಶಿಕ ಭಾಷೆಗಳಾದ ತುಳು, ಬ್ಯಾರಿ, ಕೊಂಕಣಿ, ಕೊಡವ ಸಂಸ್ಕೃತಿಗಳನ್ನು ಕನ್ನಡಕ್ಕೆ ಪರಿಚಯಿಸುವ ಜೊತೆಗೆ ನಾಡಿನ ಬಹುಮುಖಿ ಸಾಂಸ್ಕೃತಿಕ ಅನನ್ಯತೆಯನ್ನು ಯಾವ ಬೆಲೆ ತೆತ್ತಾದರೂ ಉಳಿಸಿಕೊಳ್ಳುವ ಛಲವನ್ನು ಹೊಂದಿದೆ.

ಕರ್ನಾಟಕ ಕರಾವಳಿಯ ತುಳುನಾಡಿನ ಬಹುಮುಖಿ ಸಾಂಸ್ಕೃತಿಕ ಹಿನ್ನೋಟವನ್ನೂ, ಇಲ್ಲಿನ ಬಂಟ ಸಮುದಾಯದ ಗತ ವೈಭವವನ್ನೂ ಸಾರುವ 'ಮಿತ್ತಬೈಲ್ ಯಮುನಕ್ಕ' ಕಾದಂಬರಿಯನ್ನು ನಮ್ಮ ಪ್ರಕಾಶನದ ಚೊಚ್ಚಲ ಕೃತಿಯಾಗಿ ಹೊರತರಲು ಹೆಮ್ಮೆ ಎನಿಸುತ್ತದೆ.


'ಮಿತ್ತಬೈಲ್ ಯಮುನಕ್ಕ' ಮೂಲ ಕೃತಿಗಾರ ಆನಂದಕೃಷ್ಣ (ಡಿ.ಕೆ. ಚೌಟ) ಹಾಗೂ ಅದನ್ನು ಕನ್ನಡಕ್ಕೆ ಅನುವಾದಿಸಿ, ಪ್ರಕಟಿಸಲು ಅನುಮತಿ ನೀಡಿದ ಮಿತ್ರ ಮುಹಮ್ಮದ್ ಕುಳಾಯಿಯವರಿಗೆ ಕೃತಜ್ಞತೆಗಳು.

**ಉಮರ್ ಯು.ಹೆಚ್.**
ಪ್ರಕಾಶನದ ಪರವಾಗಿ






# ಈ ಕಾಲ...







* ಪೊಲಿ ಪೊಲಿ ಪೊಲಿ ಹೆಚ್ಚಾಗು
ಪಂಚ ಪಾಂಡವರ ಪೊಲಿ
ನಿತ್ಯ ದೇವರುಗಳ ಪೊಲಿ
ಕಣಜ ಕಟ್ಟಬೇಕು, ಸಿರಿ ನೋಡಬೇಕು
ಆ ಅಂಗಳದ ಪೊಲಿ, ಈ ಅಂಗಳದ ಪೊಲಿ
ಅರುವತ್ತಾರು ಅಂಗಳದಷ್ಟು ಪೊಲಿ
ಎಪ್ಪತ್ತೇಳು ಕೋಟಿ ಪೊಲಿ
ನನ್ನೊಡೆಯನ ಅಂಗಳಕ್ಕೆ ಬಾ ಪೊಲಿ
ತಾಯಿಯ ಹಿಂಬಾಲಿಸಿ ಮಕ್ಕಳು ಬಂದಂಗೆ ಬರಬೇಕು
ದನದ ಹಿಂದೆ ಕರು ಬಂದಂಗೆ ಬರಬೇಕು
ಹೇಂಟೆಯ ಹಿಂದೆ ಮರಿಗಳು ಬಂದಂಗೆ ಬರಬೇಕು
ಹುಲಿಯ ಹಿಂದೆ ಹುಲಿಮರಿಗಳು ಬಂದಂಗೆ ಬರಬೇಕು
ಕನ್ಯೆಗೆ ತಲೆಗೂದಲು ಬಂದಂಗೆ ಬರಬೇಕು
ಹರೆಯದ ಹೆಣ್ಣಿಗೆ ಮೊಲೆ ಬಂದಂಗೆ ಬರಬೇಕು
ಇರುವೆಯ ಸಾಲು ಬಂದಂಗೆ ಬರಬೇಕು
ಸೂಜಿಯೊಡನೆ ನೂಲು ಬಂದಂಗೆ ಬರಬೇಕು
ಹಕ್ಕಿಗಳ ಬಾಯಿಯಿಂದ ಬರಬೇಕು
ಹೆಬ್ಬುಲಿಯ ನಾಲಗೆಯಿಂದ ಬರಬೇಕು
ನರಿಯ ಬಾಲದಿಂದ ಬರಬೇಕು
ಹಾಲು ಉಕ್ಕಿದಂತೆ ಉಕ್ಕಬೇಕು
ಕಡಲ ತೆರೆ ಉರುಳಿದಂತೆ ಉರುಳಬೇಕು
ನೀರೇರುವಂತೆ ಏರಬೇಕು
ಪೊಲಿ, ಪೊಲಿಯೇ ಪೊಲಿ
ಆ ಅಂಗಳದ ಪೊಲಿ, ಈ ಅಂಗಳದ ಪೊಲಿ



**ತುಳು ಪಾಡ್ದನದ ಕನ್ನಡಾನುವಾದ**

(* ಪೊಲಿ = ಅಭಿವೃದ್ಧಿ)





# ೧

# ಹೊಸ ಅಕ್ಕಿ ಉಣ್ಣುವ 'ಪುದ್ವಾರ್‌ದೆಚ್ಚಿ' ನೇಮ

ಮಿತ್ತಬೈಲು ಮನೆಯ ಮುಂದಿನ ಬಾಕಿಮಾರು ಗದ್ದೆಯಲ್ಲಿ ಇಂದು ಗದ್ದೆ ಹದಮಾಡುವ ಕಂಬಳ.

ಯಮುನಕ್ಕ ಬೆಳಗ್ಗೆ ಏಳುವಾಗ ಕೆಲಸದವರು ಸೆಗಣಿ ಸಾರಿಸುತ್ತಿದ್ದರು. ನಾಲ್ಕು ಮಂದಿ ಹಂಡೆಗೆ ನೀರು ತುಂಬಿಸುವುದೂ ಕಾಣುತ್ತಿತ್ತು. ಮೂವತ್ತು ಮುಡಿ ಗದ್ದೆಯ ಸಾಗುವಳಿ ಮುಗಿಯುತ್ತಾ ಬಂದು ಇಂದು ಸಾಗುವಳಿಯ ಕೊನೆಯ ದಿನ.

ಕಂಬಳ ಎಂದರೆ ಜೋಡುಕರೆಯ ನೀರನ್ನು ನಿಶಾನಿಗೆ ಹಾರಿಸುವ ಕಂಬಳ ಅಲ್ಲ ಇದು. ಇದು ಗದ್ದೆ ಹದಮಾಡುವ ಕಂಬಳ. ಬೇಸಾಯ ಮುಗಿದ ಸಂತೋಷವನ್ನು ಊರಿನವರ ಜೊತೆ, ಮನೆಯವರ ಜೊತೆ ಹಂಚಿಕೊಳ್ಳುವ ಸಂತೋಷದ ಒಂದು ಉತ್ಸವ. ಬಾಕಿಮಾರು ಗದ್ದೆಯನ್ನು ಹದಗೊಳಿಸಿ ಗದ್ದೆಯಲ್ಲಿ ಏಳು ಅಂತಸ್ತಿನ ಪೂಕರೆ ನೆಟ್ಟು ಮೂರು ಮುಡಿ ಭತ್ತದ ಗದ್ದೆ ಬಿತ್ತಿ ಮುಗಿಯುವಾಗ ಮಧ್ಯಾಹ್ನದ ಔತಣಕ್ಕೆ

ತಯಾರಾಗಬೇಕು. ಮಿತ್ತಬೈಲಿನ ಮನೆಯವರು, ಕುಟುಂಬದವರು, ಅವರ ಆದಿಮೂಲ ಮಜಲೋಡಿ ಗುತ್ತಿನವರು, ಒಕ್ಕಲಿನವರು, ಕೆಲಸದವರು ಎಲ್ಲ ಅಂದು ಮಧ್ಯಾಹ್ನದ ಊಟ ಗುತ್ತಿನ ಮನೆಯಲ್ಲಿಯೇ ಮಾಡಬೇಕು. ಕಂಬಳದ ಗದ್ದೆಗೆ ಕೋಣಗಳನ್ನು ಇಳಿಸಿದವರೆಲ್ಲ ಅಂದು ಊಟ ಮಾಡಿಯೇ ಹೋಗಬೇಕು. ಅದು ಗುತ್ತಿನ ರಿವಾಜು.

ಒಕ್ಕಲು ಮನೆಗಳ ಗಂಡಸರು, ಹೆಂಗಸರು, ಮಕ್ಕಳ ಸಂಸಾರ, ಮೂಲದ ಮುಗೇರರ, ತಡಿಕೆಯವರ ಸಂಸಾರ, ಎಲ್ಲ ಅಂದು ಗುತ್ತಿನಮನೆಗೆ ಬಂದು ಹೊಸ ಅಕ್ಕಿಯ 'ಪುದ್ವಾರ್' ಊಟ ಮಾಡಬೇಕು.

ಏಳು ಬಗೆಯ ಪಲ್ಯ, ಕಡುಬು, ಅದಕ್ಕೆ ಹೆಸ್ರಿನ ಗಸಿ, ಹೊಸ ಅಕ್ಕಿಯ ಅನ್ನದ ಊಟವಾದ ಮೇಲೆ, ಹೊಸ ಅಕ್ಕಿಯ ಪಾಯಸ. ಮಿತ್ತಬೈಲಿನ ಆ ಪಾಯಸ ಹೊಸ ಗಂಧಸಾಲೆ ಅಕ್ಕಿಯದ್ದೇ ಆಗಬೇಕು. ಆ ತನಕ ಆ ವರ್ಷ ಹೊಸ ಅಕ್ಕಿಯ ಅನ್ನ ಮುಟ್ಟದ ಮಿತ್ತಬೈಲಿನವರು ಅಂದಿನ ಊಟ ಆದ ಮೇಲೆಯೇ ಹೊಸ ಅಕ್ಕಿಯ ಊಟ ಮಾಡಬಹುದು.

ಮಿತ್ತಬೈಲು ಮನೆಯಲ್ಲೊಂದು ರಿವಾಜು. ಅಲ್ಲಿ ಕಂಬಳದ ದಿನವೇ ಹೊಸ ಅಕ್ಕಿಯ 'ಪುದ್ವಾರ್' ಊಟ. ಅವರ ಮನೆ ದೈವ ಮಲರಾಯನಿಗೂ ಅಂದೇ 'ಪುದ್ವಾರ್' ಊಟ.

ಈ ಕ್ರಮ ಹೆಚ್ಚಿನ ಮನೆಗಳಲ್ಲಿಲ್ಲ, ಇಲ್ಲಿ ಅಷ್ಟು ಮಾತ್ರ ಅಲ್ಲ, ಆ ದಿನ ರಾತ್ರಿ ಅವರ ಭೂತಗಳಿಗೂ ಹೊಸ ಅಕ್ಕಿಯ ಪಾರಣೆ ಆಗಬೇಕು. ಅದಕ್ಕೆಂದೇ ಈ 'ಪುದ್ವಾರ್‌ದೆಚ್ಚಿ ನೇಮ'. ಈ ನೇಮದ ಊಟಕ್ಕೆಂದೇ ಭೂತದ ಗದ್ದೆಯಲ್ಲಿ ಬೆಳೆಸಿದ ಸತ್ಯದ ಬೆಳೆ ಅತಿಕಾರೆ. ಅಂದಿನ ಊಟಕ್ಕೆ ಅತಿಕಾರೆ ಅಕ್ಕಿಯೇ. ಬೆಳ್ತಿಗೆಗೆಂದೇ ಬೆಳೆಸಿದ ಗಂಧಸಾಲೆ ಬೆಳೆ, ಊಟಕ್ಕೆಂದೇ ಬೆಳೆಸಿದ ಮಸ್ಕತ್ ಬೆಳೆ ಗುತ್ತಿನ ಸಿರಿತನವನ್ನು ತೋರಿಸುತ್ತಿತ್ತು. ಮಿತ್ತಬೈಲು ಬಹಳ ಹಿಂದಿನಿಂದಲೇ ಮಸ್ಕತ್ ಅಕ್ಕಿಗೆ ಹೆಸರುವಾಸಿ ಬೈಲು. ಒಂದು ಕಾಲದಲ್ಲಿ ಅಲ್ಲಿಂದ ಮಸ್ಕತ್ ಅಕ್ಕಿ ಕೊಲ್ಲಿ ದೇಶಗಳಾದ ದುಬೈ, ಮಸ್ಕತ್‌ಗಳಿಗೆ ರಫ್ತು ಆಗುತ್ತಿತ್ತು. ಆದರೆ ಗುತ್ತಿನ ಮನೆ ತುಂಬಿಸಲು, ದೈವದ ಗುಂಡ ತುಂಬಿಸಲು ಹೊಸ ಬೆಳೆಯ ಭತ್ತದ ತೆನೆ ಅತಿಕಾರ ಬೆಳೆಯದ್ದೇ ಆಗಬೇಕು.

ಮಾಗಣೆಯ ಹೆಚ್ಚಿನ ಮನೆಗಳಲ್ಲಿ ಹೊಸ ಅಕ್ಕಿಯ 'ಪುದ್ವಾರ್' ಊಟ, ಗದ್ದೆ ಹದಮಾಡುವಂದಿನ ಔತಣ ಬೇರೆ ಬೇರೆಯೇ ಆಗಬೇಕು. ಕೆಲವು ಭೂತಗಳಿಗೆ, ಪುದ್ವಾರ್ ಕಳೆದು ಎಷ್ಟೋ ದಿನಗಳನಂತರ, ಮನೆಯವರಿಗೆ ಬಿಡುವು ಸಿಕ್ಕಿದಾಗ 'ಪುದ್ವಾರ್‌ದೆಚ್ಚಿ ನೇಮ' ಮಾಡಿದರೆ, ಮಿತ್ತಬೈಲು ಮನೆಯಲ್ಲಿ ಈ ಮೂರು ಒಂದೇ ದಿನ ಆಗಬೇಕು.

ಪುದ್ವಾರ್‌ದೆಚ್ಚಿ ನೇಮ ಮನೆದೈವ ಮಲರಾಯನಿಗೆ. ಮಧ್ಯಾಹ್ನದ ಊಟ ಮುಗಿದು ನೇಮಕ್ಕೆ ತಯಾರಾಗುವಾಗ ಕಡಲೆ, ಬಲ್ಯಾರ್ ಮೀನು ಮತ್ತು ಕೋಳಿ ಮಾಂಸದ ಊಟ. ಮನೆಯವರಿಗೆ 'ಮಧು ಪುದ್ವಾರ್'ನ ಊಟ, ಅದಾಗಿ ನೇಮ ಮುಗಿಯುವಾಗ ನಡು



ಇರುಳಾಗುತ್ತದೆ.

ಹಿಂದಿನ ರಾತ್ರಿ ಪ್ರಾರಂಭವಾದ ನೇಮದ ಗೌಜಿ ಕೊನೆಗೊಳ್ಳುವಾಗ ರಾತ್ರಿ ಹಗಲು ಎರಡು ದಿನ. ಪುದ್ವಾರ್‌ದೆಚ್ಚಿ ನೇಮದ ಮರುದಿನ ಕೋಳಿ ಅಂಕ. ರಾತ್ರಿ ಶೇಂದಿ ಮತ್ತು ಕೋಳಿ ಮಾಂಸದ ಊಟವಾಗಿ, ಕೆಲಸದವರ ನಲಿಕೆ ಆಗಿ, ಮೂರನೆ ಹಗಲು ನೆಂಟರೆಲ್ಲ ಹೋದ ಮೇಲೆ ಸುಸ್ತು ಕಳೆಯಲು ಮಲಗಿದವರು ಮತ್ತೆ ಏಳುವುದು ರಾತ್ರಿಯೆ. ಉಂಡವರು ಉಂಡರೆ, ಉಣ್ಣದೆ ಮಲಗಿದವರು ಮರುದಿನ ಬೆಳಗಿನ ತನಕ ಮಲಗುವರು.

ಕೋಳಿ ಅಂಕದ ಮರುದಿನ ಬೆಳಗ್ಗೆ ಯಜಮಾನ-ಯಜಮಾನಿಯರು ಚಾವಡಿಯಲ್ಲಿ ಕುಳಿತುಕೊಂಡು ದೂರದಿಂದ ಬಂದ ಸಂಬಂಧಿಕರು, ಕೆಲಸ ಕಾರ್ಯಕ್ಕೆ ದೂರದೂರಿಗೆ ಹೋಗಿದ್ದ ಕುಟುಂಬದವರ ಸುಖ ದುಃಖಗಳನ್ನು ವಿಚಾರಿಸಿ, ಕಷ್ಟದಲ್ಲಿರುವವರಿಗೆ ಸಹಾಯ ಮಾಡಿ, ದೂರು ತಂದವರನ್ನು ಸಮಾಧಾನ ಮಾಡಿ ಕಳುಹಿಸುವುದು ಗುತ್ತಿನ ಕ್ರಮ.

ಈ ವರ್ಷದ ಕಂಬಳ ಹಿಂದಿನಂತಲ್ಲ. ಈ ಸಲದ ಕಂಬಳ ಮಿತ್ತಬೈಲಿನಲ್ಲಿ ಯಜಮಾನ ಇಲ್ಲದೆ ನಡೆಯುತ್ತಿದೆ. ಮಾಂಕರಾಲ ಸತ್ತ ಮೇಲೆ ಯಜಮಾನಿಕೆ ವಹಿಸಿಕೊಳ್ಳುವವರನ್ನು ಕುಟುಂಬದವರು ತೋರಿಸಿಕೊಡಲಿಲ್ಲ. ಅವರು ಒಮ್ಮನಸಲ್ಲಿ ಭೂತಕ್ಕೆ ಅರಿಕೆ ಮಾಡಿ ಯಜಮಾನನನ್ನು ತೋರಿಸಿಕೊಡಬೇಕಾಗಿತ್ತು.

ಮಾಂಕರಾಲರ ತಮ್ಮ ಮೈಂದರಾಲ ಇರುವವರಲ್ಲಿ ಹಿರಿಯವರು. ಮೈಂದರಾಲರ ಒಂದು ಬೆರಳು ಹಾರೆಯ ಪೆಟ್ಟಿಗೆ ಪಾದದಲ್ಲಿಂದ ತುಂಡಾಗಿತ್ತು. ಭೂತದ ಯಜಮಾನಿಕೆ ವಹಿಸುವವನಿಗೆ ಅಂಗವೈಕಲ್ಯ ಇರಬಾರದು. ಮತ್ತೆ ಯಾರೋ ಹೇಳಿದಂತೆ ಕೋಳಿ, ಕಳ್ಳು ಎರಡನ್ನೂ ಬಿಟ್ಟು ಯಜಮಾನಿಕೆ ವಹಿಸಿಕೊಳ್ಳಲು ಮೈಂದರಾಲರಿಂದ ಸಾಧ್ಯವೇ ಇಲ್ಲ. ಹಾಗಾಗಿ ಅವರು ಮೊದಲೇ ತನ್ನಿಂದ ಯಜಮಾನಿಕೆ ವಹಿಸಲು ಸಾಧ್ಯವಿಲ್ಲವೆಂದು ಎಲ್ಲರಿಗೂ ಹೇಳಿದ್ದರು. ಅವರನಂತರ ಯಮುನಕ್ಕನ ತಮ್ಮ ಸುಬ್ಬಯಣ್ಣನೇ ಗಂಡಸರಲ್ಲಿ ಹಿರಿಯವ. ಕುಟುಂಬದ ಯುವಕರು ಸುಬ್ಬಯಣ್ಣನೇ ಯಜಮಾನಿಕೆ ವಹಿಸಿಕೊಳ್ಳಬೇಕೆಂದು ಹಟ ಮಾಡುತ್ತಿದ್ದರು. ಮಾಂಕರಾಲ ಸತ್ತಮೇಲೆ ಗಾಂಧಿ ಆಶ್ರಮಕ್ಕೆ ಹೋದ ಸುಬ್ಬಯಣ್ಣ ಇನ್ನೂ ಹಿಂದಿರುಗಿಲ್ಲ, ಅವರು ಬರದೆ ಯಜಮಾನಿಕೆ ವಹಿಸುವವರೇ ಇಲ್ಲದಂತಾಗಿದೆ. ಯಮುನಕ್ಕನೂ ತಮ್ಮ ಬಂದು ಯಜಮಾನಿಕೆ ವಹಿಸಿಕೊಳ್ಳಬಹುದು ಎಂಬ ಆಸೆಯಲ್ಲಿ ವಿಷಯವನ್ನು ಮುಂದೂಡುತ್ತಿದ್ದರು. ಆದರೆ ಗ್ರಾಮದ ಬಾರಬೈಲಿನ ತ್ಯಾಂಪಣ್ಣನಂತಹ ಕೆಲವರು ಗುಸುಗುಸು ಮಾತಾಡಲು ಪ್ರಾರಂಭಿಸಿದ್ದರು. ಮಾಂಕರಾಲರನಂತರ ಪಟೇಲತನವನ್ನು ರಾಮಣ್ಣ ನೋಡಿಕೊಳ್ಳಬೇಕೆಂಬುದು ಎಲ್ಲರ ಇಚ್ಛೆ. ಆದರೆ ಅದಕ್ಕೆ ಬಹಳಷ್ಟು ಅಡ್ಡಿ ಮಾಡುತ್ತಿದ್ದವ ಬಾರಬೈಲಿನ ತ್ಯಾಂಪಣ್ಣ. ಆತ ಅದು ಮಾಂಕರಾಲರ ಮಗನಿಗೆ ಸಿಗಬೇಕೆಂದು ಪ್ರಯತ್ನಿಸುತ್ತಿದ್ದ. ಮಾಂಕರಾಲರ ಮಗ ಪಟೇಲನಾದರೆ ತ್ಯಾಂಪಣ್ಣನೇ ಪಟೇಲನಾದಂತೆ.

ಯಜಮಾನಿಕೆ ವಹಿಸುವವನನ್ನು ಕಾಯುತ್ತಾ ಕುಳಿತರೆ ಮನೆಯ ಆಡಳಿತ, ಕೃಷಿ, ಬೇಸಾಯ ಹೇಗೆ ನಡೆಯುವುದು? ಅದು ನಿಲ್ಲುವುದಿಲ್ಲ, ಅದನ್ನೆಲ್ಲ ಗುತ್ತಿನ ಯಜಮಾನತಿ ಕೈಗೆ ತೆಗೆದುಕೊಂಡು ನಡೆಸುತ್ತಿದ್ದರು. ಸಾಮಾನ್ಯವಾಗಿ ಅಳಿಯ ಸಂತಾನದ ಬಂಟರ ಮನೆಯಲ್ಲಿ ಹೆಚ್ಚಾಗಿ ಯಜಮಾನಿಕೆಯ ಕಾರುಬಾರು ಕುಟುಂಬದ ಹಿರಿಯಾಕೆಯ ಒಪ್ಪಿಗೆಯಲ್ಲೇ ನಡೆಯಬೇಕು. ಯಜಮಾನತನಕ್ಕೆ ಹೊರಗಿನ ಮುಖ ಗಂಡಿನದು. ಒಳಗಿನ ಕಾರುಬಾರು ಹೆಣ್ಣಿನದು. ಮನೆಯ ಹಿರಿಯ ಮಹಿಳೆಯ ಒಪ್ಪಿಗೆಯಲ್ಲೇ ಯಜಮಾನ ಆಡಳಿತ ನಡೆಸಬೇಕು.

ಯಮುನಕ್ಕನೂ ಚಾವಡಿಯ ಬಾಜಿರದಲ್ಲಿ ಕುಳಿತುಕೊಂಡು ಎಲ್ಲರನ್ನೂ ವಿಚಾರಿಸಿಕೊಂಡು ಯಾವುದಕ್ಕೂ ಕಡಿಮೆಯಾಗದಂತೆ ಯಜಮಾನಿಕೆ ನಡೆಸುತ್ತಿದ್ದರು. ಮಕ್ಕಳಾದ ರಾಮಣ್ಣ ಹಾಗೂ ದುಗ್ಗಪ್ಪ ತಾಯಿಯ ಕಡೆ ನಿಂತು ಅವರು ಹೇಳಿದ ಮಾತನ್ನು ನಡೆಸಿಕೊಡುತ್ತಿದ್ದರು. ಕೃಷಿ, ಬೇಸಾಯದ ಜವಾಬ್ದಾರಿ ದುಗ್ಗಪ್ಪನದು, ಭೂತ ಹಾಗೂ ಊರಿನ ವಿಚಾರ ರಾಮಣ್ಣನದು.

ರಾತ್ರಿ ಇಡೀ ಊಟದ ತಯಾರಿಯಲ್ಲಿದ್ದ ಮನೆಯವರು ಮಲಗಲಿಲ್ಲ, ಯಮುನಕ್ಕ ಬೆಳಗ್ಗೆಏಳುವಾಗ ಪದಾರ್ಥ ತಯಾರಾಗಿತ್ತು. ಅನ್ನ ಮತ್ತು ಪಾಯಸ ಆಗಲು ಬಾಕಿ ಇತ್ತು. ಸಮಾರಂಭದ ಅಡುಗೆಗೆ ಸಂಕಪ್ಪ ಹಾಗೂ ಅವನ ತಮ್ಮ ಬಂಟು ಹೆಸರುವಾಸಿಯಾದವರು. ಗುತ್ತಿನಲ್ಲಿ ಸಮಾರಂಭ ಆದರೆ ಅವರೇ ಅಡುಗೆ ಮಾಡಬೇಕು. ಅದು ಅವರ ಮನೆಯ ಹಕ್ಕು. ಹಿಂದಿನ ಕಾಲದಲ್ಲಿ ಬಂಟರ ಸಮಾರಂಭದ ಅಡುಗೆಗೆ ಬ್ರಾಹ್ಮಣರನ್ನು ಕರೆಸುವುದು ಬಹಳ ಅಪರೂಪ. ಅದೇನಿದ್ದರೂ ಒಕ್ಕಲು ಮನೆಯ ಮೂಲ್ಯನವರದು ಹಾಗೂ ಒಕ್ಕಲಿಗ ಯುವಕರದೇ ಕೆಲಸ. ಮಿತ್ತಬೈಲಿನಲ್ಲಿ ಔತಣದ ವ್ಯವಸ್ಥೆಯೆಲ್ಲಾ ಸಂಕಪ್ಪನದೇ. ಬಡಿಸುವುದು ಮಿತ್ತಬೈಲು ಮನೆಯ ಯುವಕರು.

ಯಮುನಕ್ಕ ಎದ್ದು ಅಡುಗೆಯ ಚಪ್ಪರಕ್ಕೆ ಬಂದಾಗ ಸಂಕಪ್ಪ ಒಲೆಯಲ್ಲಿ ಕೊಪ್ಪರಿಗೆ ಇಡಲು ತಯಾರಿ ಮಾಡುತ್ತಿದ್ದ. ಕೊಪ್ಪರಿಗೆಗೆ ಅಕ್ಕಿ ಹಾಕಬೇಕಾದರೆ ಮನೆಯ ಹಿರಿಯರು ಮಲರಾಯನ ಗುಂಡದಲ್ಲಿಗೆ ಬಂದು ಅರಿಕೆ ಮಾಡಿಕೊಂಡು ದರ್ಶನ ಬಂದ ಭೂತದ ಪಾತ್ರಿಯ ಅಪ್ಪಣೆ ತೆಗೆದುಕೊಂಡು, ಅವನು ಕೊಪ್ಪರಿಗೆಗೆ ನಾಲ್ಕು ಅಕ್ಕಿ ಕಾಳು ಹಾಕಿ ಅಪ್ಪಣೆ ಕೊಡಬೇಕು.

ಅಕ್ಕಿ ಮುಡಿಗೆ ಕಡ್ತಲೆ ಮುಟ್ಟಿಸಿ ಸಂಕಪ್ಪನಿಗೆ ಒಳ್ಳೆಯ ಔತಣ ತಯಾರಿಸಲು ಅಪ್ಪಣೆ ಕೊಟ್ಟು, ಕೊಪ್ಪರಿಗೆಗೆ ಅಕ್ಕಿ ಹಾಕಿ, ಕೊಡಿ ಎಲೆಯ ಪಿಂಗಾರ, ಗಂಧಪ್ರಸಾದವನ್ನು ಯಾರ ಕೈಗೆ ಕೊಡುವುದೆಂದು ಅಮ್ಮಣ ಪೂಜಾರಿಯ ಮೈಮೇಲೆ ಬಂದ ಭೂತ ನೋಡತೊಡಗಿತು. ಕೊನೆಗೆ ಅದನ್ನು ರಾಮಣ್ಣನ ಕೈಗೆ ಕೊಟ್ಟು ಅವನ ಕೈ ಹಿಡಿದುಕೊಂಡು ಚಾವಡಿಯ ಎದುರು ಬಂದು, ಯಮುನಕ್ಕ ಕುಳಿತಿದ್ದ ಚಾವಡಿಯ ಎದುರು ನಿಂತು ಜೋರಾಗಿ ದರ್ಶನ ಬಂದು, ಕಡ್ತಲೆಯಲ್ಲಿ ಕಡಿದುಕೊಳ್ಳುವಾಗ ಕುಟುಂಬದವರು ಅರಿಕೆ ಮಾಡಿಕೊಂಡು ಅವನ



ಕೋಪಕ್ಕೆ ಕಾರಣ ಕೇಳಿದರು. ಅಬ್ಬರಿಸುತ್ತಲೇ ಗುಂಡದೆದುರು ಬಂದ ಭೂತ ತನ್ನ ಗತಿ ಏನೆಂದು ಕೇಳಲು ಆರಂಭಿಸಿತು. ಭೂತ ಯಜಮಾನನ ಬಗ್ಗೆ ಕೇಳುತ್ತಿದೆ ಎಂದು ಎಲ್ಲರಿಗೂ ತಿಳಿಯಿತು. ಯಮುನಕ್ಕ ಚಾವಡಿಯಲ್ಲಿ ಕುಳಿತಿದ್ದವರು ಎದ್ದು ಅಂಗಳಕ್ಕೆ ಬಂದು ಅರಿಕೆ ಮಾಡಿಕೊಂಡರು.

"ಸಂಜೆ ಕಟ್ಟುವ ನೇಮದಲ್ಲಿ ವಿಮರ್ಶಿಸಲು ನೀನೂ ಇದ್ದಿ, ಅರಿಕೆ ಮಾಡಿಕೊಳ್ಳಲು ನಾವೂ ಇದ್ದೇವೆ. ಆಗ ನೀನು ಕೇಳಿದರೆ ಕುಟುಂಬದವರು ನಿನಗೆ ಸಮಾಧಾನ ಆಗುವಂತಹ ಉತ್ತರ ಕೊಡುತ್ತಾರೆ, ಮೂರು ತಿಂಗಳಲ್ಲಿ ನಡೆಯಲಿರುವ ಬಂಡಿಯ ಉತ್ಸವಕ್ಕೆ, ಹತ್ತು ಸಮಸ್ತರ ಎದುರು ಧರ್ಮ ನೇಮ ಕೊಟ್ಟು ಗಡಿ ಹಿಡಿದ ಗುರಿಕಾರನನ್ನು ನಿನಗೆ ಕೊಡುತ್ತೇವೆ."

ಯಮುನಕ್ಕ ಹೇಳುವಾಗ ಆವೇಶಗೊಂಡಿದ್ದ ಭೂತ ಹೇಳಿತು "ಆಯಿತು ನೋಡೋಣ. ಕಟ್ಟಿದ ನೇಮದಲ್ಲಿ ವಿಮರ್ಶಿಸಲು ನಾನೂ ಇದ್ದೇನೆ. ಅರಿಕೆ ಮಾಡಿಕೊಳ್ಳಲು ನೀವೂ ಇದ್ದೀರಿ. ನನ್ನ ಕುಟುಂಬದ ಸರ್ವರೂ ಸೇರಿ ಬನ್ನಿ. ಹಾಲೋ ನೀರೋ ಅಂತ ಆಗ ಹೇಳುತ್ತೇನೆ."

"ನೀರು ಯಾಕೆ ಆಗಬೇಕು? ನೀರನ್ನೂ ಹಾಲು ಮಾಡುವ ಸತ್ಯ ನೀನಿರುವಾಗ ಹಾಲೋ ನೀರೋ ಎಂಬ ಸಂಶಯ ನಿನಗೆ ಬರಲಾರದು. ನಿಯಮದಂತೆ ದರ್ಶನ ನಡೆಯಲಿ" ಯಮುನಕ್ಕ ಹೇಳಿದರು. ಅಮ್ಮಣ ಪೂಜಾರಿಗೆ ಯಮುನಕ್ಕನ ಮಾತನ್ನು ಮುಂದಕ್ಕೆಳೆಯುವ ಧೈರ್ಯವಿರಲಿಲ್ಲ.

ಅಂಗಳದ ಗುಂಡದ ಮುಂದೆ ಕಟ್ಟು ಕಟ್ಟಲೆಯ ದರ್ಶನ ಮುಗಿದು ಗುಂಡದ ಬಾಗಿಲು ಹಾಕುವಾಗ ಹಜಾರದಲ್ಲಿ ಕುಳಿತಿದ್ದ ಯಮುನಕ್ಕ ಯೋಚನೆಗೆ ಬಿದ್ದರು. ಅವರಿಗೆ ಭೂತದ ಇಂದಿನ ಮಾತಿನಲ್ಲಿ ಒಡಕು ಕಂಡು ಬಂತು.ಸುಬ್ಬಯಣ್ಣ ಬರುವ ವರೆಗೆ ಮಿತ್ತಬೈಲಿನವರು ಯಜಮಾನಿಕೆಯ ಸುದ್ದಿ ತೆಗೆಯಲಾರರೆಂದು ತಿಳಿದಿದ್ದರೂ ಅಮ್ಮಣ ಪೂಜಾರಿ ಬೇಕೆಂದೇ ಈ ವಿಷಯ ಪ್ರಸ್ತಾಪಿಸಿದ್ದಾನೆ. ಈ ನೇಮದಲ್ಲಿ ಯಾವಾಗಲೂ ಕುಟುಂಬದವರು ಅರಿಕೆ ಮಾಡಿಕೊಳ್ಳದೆ ಯಾವ ವಿಷಯವನ್ನೂ ಭೂತ ತಾನಾಗಿ ಪ್ರಸ್ತಾಪಿಸದು. ಅಂತಹದೇನಿದ್ದರೂ ಬಂಡಿಯ ನೇಮದ ವೇಳೆ ಬರಬೇಕಿತ್ತು. ಇಂದು ಅಮ್ಮಣ ಪೂಜಾರಿಯ ಮೂಲಕ ಈ ವಿಷಯವನ್ನು ಕೆದಕಿಸಿದವರು ಯಾರು?

ಮಲರಾಯನ ಪಾತ್ರಿ ಒಕ್ಕಲಿನ ಅಮ್ಮಣ ಪೂಜಾರಿ ಈ ತನಕ ಗುತ್ತಿನ ಮನೆಯ ವಿಷಯದಲ್ಲಿ ಭಾರೀ ಭಯ ಭಕ್ತಿ ಇಟ್ಟುಕೊಂಡವ. ಅವನ ಹಿರಿಯರೂ ಭೂತದ ಸೇವೆ, ಗುತ್ತಿನ ಕೆಲಸ ಮಾಡಿಕೊಂಡು ಜೀವಿಸುತ್ತಾ ಬಂದವರು. ಅಮ್ಮಣ ಒಕ್ಕಲಿನವರಲ್ಲಿ ಸ್ವಲ್ಪ ದೊಡ್ಡ ಕುಳ. ಆತ ಮಾಂಕರಾಲರ ಬಲಗೈ ಬಂಟ ಆಗಿದ್ದವ. ಮಾಂಕರಾಲ ಸಾಯುವಾಗ ಜೊತೆಗೆ ಇದ್ದವ ಅಮ್ಮಣ. ಅವರು ಸಾಯುವಾಗ ಅಮ್ಮಣ ಕುಡಿದು ಪ್ರಜ್ಞೆ ಇಲ್ಲದೆ ಬಿದ್ದಿದ್ದನಂತೆ, ಆದರೆ ಅಮ್ಮಣ ತಾನು ಇಡೀ ರಾತ್ರಿ ಎಚ್ಚರದಲ್ಲಿ ಅವರನ್ನು ಕಾಯುತ್ತಿದ್ದೆ

ಎಂದು ಸುಳ್ಳು ಹೇಳಿದ್ದನಂತೆ.

ಗುತ್ತಿನ ಯುವಕರಿಗೆ ಆ ರಾತ್ರಿ ನಡೆದ ವಿಷಯವೆಲ್ಲ ತಿಳಿದಿದೆಯೆಂದು ಅವನಿಗೂ ಭಯವಿತ್ತು. ಆದರೆ ಅವರು ಈ ತನಕ ಅವನ ಸುದ್ದಿಗೆ ಹೋದವರಲ್ಲ. ಮಾಂಕರಾಲ ಸತ್ತ ಮೇಲೆ ಅಮ್ಮಣ ಪೂಜಾರಿ ಗುತ್ತಿಗೆ ಬರುವುದು ಕಡಿಮೆಯಾಗಿತ್ತು. ನಿನ್ನೆ ಕೆಲಸದ ದೆಯ್ಯು ಬಂದು ಗದ್ದೆ ಹದ ಮಾಡಲು ಕೋಣಗಳನ್ನು ತರುವವರ ಪಟ್ಟಿ ಹೇಳುವಾಗ ಅದರಲ್ಲಿ ಅಮ್ಮಣನ ಕೋಣಗಳ ಲೆಕ್ಕವಿರಲಿಲ್ಲ. ಒಂದು ಕೋಣಕ್ಕೆ ಕಾಲಿಗೆ ನೇಗಿಲು ತಾಗಿ ಗಾಯವಾಗಿದೆಯೆಂದು ಅವನು ಹೇಳಿದನಂತೆ. ಅದು ಕುಂಟು ನೆಪ ಎಂದು ಎಲ್ಲರಿಗೂ ಗೊತ್ತಿತ್ತು. ಅದರೊಂದಿಗೆ ಯಾವಾಗಲೂ ಬರುತ್ತಿದ್ದ ಬಾರಬೈಲಿನ ತ್ಯಾಂಪಣ್ಣನ ಕಂಬಳದ ಕೋಣಗಳೂ ಪಟ್ಟಿಯಲ್ಲಿರಲಿಲ್ಲ. ಯಾಕೆ ಬರುವುದಿಲ್ಲ? ಅಂತ ಕೇಳಿದ ದೆಯ್ಯುವನ್ನು ತ್ಯಾಂಪಣ್ಣ ಗದರಿಸಿ ಹೇಳಿದನಂತೆ,

"ಯಾಕೆ ಎಂದರೆ ಅದು ನನ್ನ ಖುಷಿ. ನಾನೇನು ಮಿತ್ತಬೈಲಿನವರ ಒಕ್ಕಲಿನಲ್ಲಿಲ್ಲ. ಕೋಣ ತಕೊಂಡು ಬರುವುದಿಲ್ಲಾಂತ ಹೇಳು!"

ಭೂತದ ಪಾತ್ರಿ ಅಮ್ಮಣ ಪೂಜಾರಿ ಬಾರಬೈಲಿನ ಅಂಗಳದಲ್ಲಿ ಕುಳಿತು ಶೇಂದಿ ಕುಡಿಯುತ್ತಿದ್ದುದನ್ನು ನೋಡಿದವರು ಬಂದು ಯಮುನಕ್ಕನಿಗೆ ತಿಳಿಸಿದ್ದರು.

ಬಾರಬೈಲಿನ ತ್ಯಾಂಪಣ್ಣ ಈಗ ಸ್ವಲ್ಪ ಗಟ್ಟಿಯಾಗಿ ಬೆಳೆದು ಬಿಟ್ಟಿದ್ದಾನೆ. ಕೆಲವು ವರ್ಷಗಳಿಂದ ಮಾಂಕರಾಲರನ್ನು ಹಿಂಡಿ, ಸ್ವಲ್ಪ ಹಣವೂ ಮಾಡಿಕೊಂಡಿದ್ದಾನಂತೆ. ಅಡಿಕೆ ತೋಟ ಮಾಡಿಯೂ ಸ್ವಲ್ಪ ಕಮಾಯಿ ಮಾಡಿದ್ದಾನಂತೆ. ಮಾಂಕರಾಲರು ಭಕ್ತರ ಮಠದ, ಭಂಡಾರ ಮಠದ ಭೂಮಿಯನ್ನು ಗೇಣಿಗೆ ಮಾಡಿಸಿಕೊಟ್ಟು ಅವನನ್ನು ಸಾಕಿದ್ದಾರೆ. ಐವತ್ತರ ಹರೆಯದ ಆಚೀಚೆ ಇದ್ದ ತ್ಯಾಂಪಣ್ಣನನ್ನು ಮಾಂಕರಾಲರ ಮಗನೆಂದು ಜನ ಬೆನ್ನ ಹಿಂದೆ ಆಡಿಕೊಳ್ಳುತ್ತಿದ್ದರು! ಮನೆಯ ನಾಲ್ಕು ಯುವಕರ ಕೂಟ ಕಟ್ಟಿಕೊಂಡು ಊರಲ್ಲಿ ಸ್ವಲ್ಪ ಪುಂಡಾಟಿಗೆ, ಸ್ವಲ್ಪ ಪಂಚಾಯತಿಗೆ ಮಾಡಿಕೊಂಡಿದ್ದ ತ್ಯಾಂಪಣ್ಣ ಬೋಳಂಗಳದ ಪದವಿನ ಸುತ್ತಲದ ಒಬ್ಬ ಚಿಕ್ಕ ಪೋಕ್ರಿ. ಎಷ್ಟಾದರೂ ಅವ ಕಲ್ಯಾಣಪ್ಪನ ಕಾಟುಕಾಯಿ ತಂಡದ ಜೊತೆ ಗುರುತಿಸಿಕೊಂಡು ಹೆಸರು ಪಡೆದಿದ್ದ ಬೀರಣ್ಣ ಬಂಟನ ಕುಟುಂಬದವ. ಈಗ ಕೇಳಿ ಬರುತ್ತಿರುವ ಒಡಕು ಮಾತಿಗೆ ಬಾರಬೈಲಿನ ತ್ಯಾಂಪಣ್ಣನೇ ಕಾರಣವೆಂದು ಯಮುನಕ್ಕನಿಗೆ ಖಾತ್ರಿಯಾಗಿತ್ತು. 'ಕಳೆದ ವರ್ಷದವರೆಗೆ ಕೋರಿ ಕಂಬಳಕ್ಕೆ ಕೋಣಗಳನ್ನು, ಬಂಡಿಯ ನೇಮದ ಕೋಳಿ ಅಂಕಕ್ಕೆ ಅಂಕದ ಕೋಳಿಗಳನ್ನು ಕಳುಹಿಸುತ್ತಿದ್ದ ತ್ಯಾಂಪಣ್ಣ ತಪ್ಪಿ ಮಾತನಾಡಲು ಪ್ರಾರಂಭಿಸಿದ್ದಾನೆ' ಎಂದು ಯಮುನಕ್ಕ ಮನಸ್ಸಿನಲ್ಲೇ ಅಂದುಕೊಂಡರು.

ಇರಲಿ ನೋಡುವಾ, ಇಂತಹ ತ್ಯಾಂಪಣ್ಣಂದಿರನ್ನು ಮಿತ್ತಬೈಲಿನ ಮಣ್ಣಲ್ಲಿ ಎಷ್ಟು ನೋಡಿದ್ದೇವೆಯೋ ಏನೋ. ಬಾರಬೈಲಿನ ನೀರಲ್ಲಿ ಏನೋ ದೋಷವಿದೆ. ತ್ಯಾಂಪಣ್ಣನ ಹಿರಿಯವನನ್ನು ನನ್ನ ಹಿರಿಯರು ಮಣ್ಣು ಮುಕ್ಕಿಸಿದ್ದು ಬಾರಬೈಲಿನ ಕುಟುಂಬಕ್ಕೆ ಮರೆತಂತಿದೆ. ಈ ವಿಷ ಸರ್ಪಗಳನ್ನು ಮುಗಿಸದಿದ್ದರೆ ಎರೆಹುಳುಗಳೆಲ್ಲ ಸರ್ಪಗಳಾಗಲು



ಹವಣಿಸಬಹುದು. ಈ ವಿಷದ ಬೀಜವನ್ನು ಮೊಳಕೆಯಲ್ಲೇ ಚಿವುಟಬೇಕು. ಇಲ್ಲದಿದ್ದರೆ ಮಿತ್ತಬೈಲನ್ನು ನೆಟ್ಟಗಿರಲು ಬಾರಬೈಲಿನವು ಬಿಡವು. ಸಂಕಮಜ್ಜಿ ಮಾಡಿದ ತಪ್ಪನ್ನು ಅವರು ನೆನಪಿಸಿಕೊಂಡರು.

ಯಮುನಕ್ಕ ಮನಸ್ಸಲ್ಲೇ ಅಂದುಕೊಂಡು ಅಂಗಳ ಇಳಿದು ಎದುರಿನ ಗರಡಿಗೆ ಬಂದರು.

"ರಾಮಾ, ಗದ್ದೆಯ ಬಳಿಗೆ ಅವಲಕ್ಕಿ ಬಾಳೆಹಣ್ಣು ಹೋಯಿತಾ?" ಎಂದು ಕರೆದು ಕೇಳಿದಾಗ ತಂಗಿ ಸಾಂಬಾ ಹೊರಗೆ ಬಂದು ದೊಡ್ಡ ಪಾತ್ರೆಯಲ್ಲಿ ಬೆಲ್ಲ, ಕಾಯಿ ಹಾಕಿ ಕಲಸಿದ ಅವಲಕ್ಕಿಯನ್ನೂ, ಬುಟ್ಟಿಯಲ್ಲಿ ಎರಡು ಗೊನೆ ಬಾಳೆಹಣ್ಣನ್ನೂ ಕಳುಹಿಸಿರುವುದಾಗಿ ಹೇಳಿದಳು. ಒಂದಷ್ಟು ಅವಲಕ್ಕಿಯನ್ನೂ ಕದಳಿ ಹಣ್ಣನ್ನೂ ಚಾವಡಿಯಲ್ಲಿ ಇಟ್ಟಿದ್ದೇನೆಂದು ತಿಳಿಸಿದಳು. ಚಾವಡಿಯಲ್ಲಿ ಅತಿಥಿಗಳಿಗೆ ಎಳನೀರು ಅವಲಕ್ಕಿಯ ಏರ್ಪಾಡು ಮಾಡಿದೆಯೆಂದು ಹೇಳಿದಾಗ ಯಮುನಕ್ಕನ ಮನಸ್ಸಿಗೆ ಸಮಾಧಾನವಾಯಿತು.

ಗಡಿ ಹಿಡಿಯುತ್ತಿದ್ದ ಯಜಮಾನ ತೀರಿ ಹೋದ ಮೇಲೆ ಇದು ಮೊದಲ ಗದ್ದೆ ಹದಗೊಳಿಸುವ ಹಬ್ಬ. ಹಾಗಾಗಿ ಯಾವುದರಲ್ಲೂ ಕೊರತೆಯಾಗದಂತೆ ನೋಡಿಕೊಳ್ಳ ಬೇಕೆಂದು ರಾಮಣ್ಣನಿಗೂ ದುಗ್ಗಪ್ಪನಿಗೂ ಕಟ್ಟಪ್ಪಣೆಯಾಗಿತ್ತು.

ಮಾವ ಮಾಂಕರಾಲ ಕಳೆದ ಐವತ್ತು-ಅರವತ್ತು ವರ್ಷಗಳಲ್ಲಿ ಮಿತ್ತಬೈಲಿನಲ್ಲಿ ಕಾರುಬಾರು ಮಾಡಿದ್ದರು. ಹಿಂದಿನ ಯಜಮಾನ ಚಿಕ್ಕ ಮಂಜಣ್ಣಾಳ್ವರ ಕಾಲದಲ್ಲಿ ಅವರು ಊರಲ್ಲಿ ಮಾಡದ ಕೃತ್ಯಗಳಿರಲಿಲ್ಲ. ಕಳೆದ ಇಪ್ಪತ್ತು ವರ್ಷಗಳಲ್ಲಿ ಗುರಿಕಾರ ಮತ್ತು ಪಟೇಲಗಿರಿ ಎರಡೂ ಅವರ ಕೈಗೆ ಬಂದ ಮೇಲೆ ಅವರನ್ನು ಹಿಡಿಯುವವರಿರಲಿಲ್ಲ. ಸಾಯುವಾಗ ಕುಟುಂಬದ ಪೆಟ್ಟಿಗೆಯನ್ನು ಖಾಲಿ ಮಾಡಿ ಚಿನ್ನ ಒಡವೆಗಳನ್ನೂ ಲೂಟಿ ಮಾಡಿ ಮನೆಯ ನಿತ್ಯದ ಖರ್ಚಿಗೂ ಗತಿ ಇಲ್ಲದಂತೆ ಮಾಡಿ ಸತ್ತರು. ಗುತ್ತಿನ ಖರ್ಚಿಗೆ ಕೊಂಕಣಿಯವರ, ಆನೆಕಲ್ಲಿನ ಬ್ಯಾರಿಯ ಭಂಡಸಾಲೆಯಿಂದ ಸಾಲ ಮಾಡಬೇಕಾದ ಸ್ಥಿತಿ ಯಮುನಕ್ಕನಿಗೆ ಬಂತು. ಗಂಡ ಚಿಕ್ಕಯಣ್ಣ ಗುತ್ತಿನ ಖರ್ಚಿಗೆ ಬೇಕಾಗುವಷ್ಟು ಹಣವನ್ನು ಪಟ್ಟದ ಗುತ್ತಿನಿಂದ ಕೊಡ್ತೇನೆ ಎನ್ನುವಾಗಲೂ ಅವರ ಮಿತ್ತಬೈಲಿನ ಸ್ವಾಭಿಮಾನ ಅವರನ್ನು ಅಲ್ಲಿಂದ ಸಾಲ ಪಡೆಯಲು ಅಥವಾ ಸಹಾಯ ಪಡೆಯಲು ಬಿಡಲಿಲ್ಲ. ಅವರು ತನ್ನ ಕಷ್ಟವನ್ನು ಹೊರಗೆ ತೋರಿಸಿಕೊಳ್ಳದೆ ಕಂಬಳ, ನೇಮಗಳನ್ನು ಗೌಜಿ ಗದ್ದಲದಲ್ಲಿ ನಡೆಸಲು ಹೋರಾಡಿದರು. ಅವರು ಸ್ವತಃ ನಿಂತು ನಡೆಸಿಕೊಡುತ್ತಿದ್ದುದರಿಂದ ಮನೆಯ ಮಕ್ಕಳು, ಯುವಕರು ಉತ್ಸಾಹದಿಂದ ದುಡಿಯುತ್ತಿದ್ದರು.

ಕುಟುಂಬದಲ್ಲಿ ಮಾಂಕರಾಲರ ನಂತರದವರು ಮೈಂದರಾಲ. ಮೈಂದರಾಲರ ಕಾಲ ಬೆರಳು ಅರ್ಧ ತುಂಡಾಗಿ ಅವರಿಗೆ ಮನೆಯಿಂದ ಹೊರಗೆ ಹೋಗಿ ದುಡಿಯುವಷ್ಟು ಶಕ್ತಿ ಇರಲಿಲ್ಲ. ಅಲ್ಲದೆ ಅವರು ಸೌಮ್ಯ ಸ್ವಭಾವದ ವ್ಯಕ್ತಿ. ಅವರಿಗೆ ಏನಿದ್ದರೂ ಸೊಸೆಯಂದಿರು ಅಲ್ಲದಿದ್ದರೆ ಅಳಿಯಂದಿರು ಹೇಳಿಯೇ ಆಗಬೇಕು. ಅವರು ಎಲ್ಲವನ್ನೂ ಯಮುನಕ್ಕನಿಗೆ

ಬಿಟ್ಟುಕೊಟ್ಟಿದ್ದರು.

ಮೈಂದರಾಲರ ನಂತರ ಎಲ್ಲರಿಗಿಂತ ಹಿರಿಯರು ಅಂದರೆ ಯಮುನಕ್ಕ. ಗಂಡು ಸಂತಾನದಲ್ಲಿ ಅವರ ತಮ್ಮ ಸುಬ್ಬಯಣ್ಣ ಹಿರಿಯರು. ಐವತ್ತೈದರ ಸುಬ್ಬಯಣ್ಣ ಮಾತ್ರ ಬೌದ್ಧಿಕವಾಗಿ, ಶಾರೀರಿಕವಾಗಿ ಎಲ್ಲರಿಗಿಂತ ಹಿರಿಯರಂತೆ ಕಾಣುತ್ತಿದ್ದರು.

ಯಮುನಕ್ಕ ಪ್ರಾಯದಲ್ಲಿ ಮಾತ್ರ ದೊಡ್ಡವರಲ್ಲ. ಆಳಂಗದಲ್ಲೂ ಅವರು ಎಲ್ಲರಿಗಿಂತ ಗಟ್ಟಿಗರು. ಊರ ಜನರೆಲ್ಲ ಹೇಳುತ್ತಿದ್ದರು, 'ಅವರಿಗೆ ಮಿತ್ತಬೈಲಿನ ಹಿರಿಯ ಮಂಜಣ್ಣಾಳ್ವರ ಲಕ್ಷಣ ಬಂದಿದೆ' ಎಂದು. ಯಾವ ಗಂಡಸಿನ ಎದುರು ನಿಂತರೂ ಅವನಿಗಿಂತ ಒಂದಂಗುಲ ಎತ್ತರ ಅಲ್ಲದೆ ಗಿಡ್ಡ ಕಾಣುತ್ತಿರಲಿಲ್ಲ ಯಮುನಕ್ಕ. ಆ ಎತ್ತರಕ್ಕೆ ತಕ್ಕ ತೋಳು, ದೊಡ್ಡ ಹಣೆ, ಉದ್ದ ಕಾಲು, ಅಗಲ ಮುಖದಲ್ಲಿ ಕ್ಷೌರ ಮಾಡಿಸಿದ್ದರೆ ಗಲ್ಲ ಮೀಸೆ ಬೆಳೆಯುತ್ತಿತ್ತೇನೋ! ಆ ದೇಹದಷ್ಟೇ ದೊಡ್ಡದು ಯಮುನಕ್ಕನ ದರ್ಪ, ಗಾಂಭೀರ್ಯ. ಅವರ ಮುಂದೆ ನಿಂತು ಕಣ್ಣಿಗೆ ಕಣ್ಣು ಕೊಟ್ಟು ಮಾತನಾಡುವ ಗಂಡು ಮಗ ಮಿತ್ತಬೈಲಿನ ಸುತ್ತಮುತ್ತ ಯಾರೂ ಇಲ್ಲ. ಅವರ ಕಣ್ಣುಗಳಲ್ಲಿ ಪ್ರೀತಿಯ ಜೊತೆ ಕ್ರೌರ್ಯವೂ ನಲಿಯುತ್ತಿತ್ತು. ದರ್ಪ ಮೆರೆಯುತ್ತಿತ್ತು. ಚಾವಡಿಯ ಕಂಬಕ್ಕೆ ಒರಗಿ ಕುಳಿತರು ಎಂದಾದರೆ ಅವರು ಕರೆಯದೆ ಯಾರೂ ಅವರ ಬಳಿ ಸುಳಿಯಲಾರರು. ಮಾಂಕರಾಲ ಒಬ್ಬರನ್ನು ಬಿಟ್ಟು ಉಳಿದವರೆಲ್ಲಾ ಅವರ ಮುಂದೆ ನಿಂತೇ ಮಾತನಾಡಬೇಕು. ಅವರ ಬಳಿ ಸಲಿಗೆಯಿಂದ ಮಾತನಾಡುವ ವ್ಯಕ್ತಿ ಎಂದು ಇದ್ದರೆ ಅದು ಅವರ ತಮ್ಮ ಸುಬ್ಬಯಣ್ಣ ಮಾತ್ರ. ಮನೆಯ ಕಾರ್ಯ ಚಾವಡಿಯಲ್ಲಿ ಕುಳಿತು ನಡೆಸಿದರೆ, ಬೈಲು ಗ್ರಾಮದ ಕೆಲಸ ಗರಡಿಯಲ್ಲಿ ಕುಳಿತು ನಡೆಸುತ್ತಿದ್ದರು.

ಯಮುನಕ್ಕ ಗುತ್ತಿನ ಗುರಿಕಾರಿಕೆ ವಹಿಸಲು ತಮ್ಮ ಸುಬ್ಬಯಣ್ಣನನ್ನು ಕಾಯುತ್ತಿದ್ದರು. ಸುಬ್ಬಯಣ್ಣ ಗಾಂಧೀಜಿಯ ಕಾಂಗ್ರೆಸಿಗೆ ಸೇರಿ ಸುಮಾರು ಇಪ್ಪತ್ತೈದು ವರ್ಷ ಕಳೆಯಿತು. ಅಸಹಕಾರ ಚಳವಳಿಯಿಂದ ಕ್ವಿಟ್ ಇಂಡಿಯಾವರೆಗೆ ಊರೂರು ತಿರುಗಿ ಬಂದ ಸುಬ್ಬಯಣ್ಣ ಊರಿನ ಬಡವರಿಗೆ, ಮೂಲದವರಿಗೆಲ್ಲ 'ಗಾಂಧಿ ದನಿ'ಯಾಗಿದ್ದರು. ಮೇಲು ಜಾತಿಯವರು ತಮ್ಮ ಮಕ್ಕಳನ್ನು ಹಾಳು ಮಾಡಿದರು ಎಂದು ಪ್ರಚಾರದಲ್ಲಿರುವಾಗಲೇ ಒಂದು ದಿನ ಕಾಂಗ್ರೆಸ್ ಸರಕಾರ ಬಂತು. ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿತು.

ಮಾಂಕರಾಲ ಬಂಗಾರ, ಬೆಳ್ಳಿ ಕದ್ದ ಪ್ರಕರಣ, ಅವರು, ರಾವ್ ಬಹದ್ದೂರ್‌ಗೆ, ರಾಣಿಗೆ ಕೊಟ್ಟಿರುವುದಾಗಿ ಹೇಳಿದ ಬೆಳ್ಳಿಯ ಕತೆ. ಅನಂತರ ಅವರು ಅನುಮಾನಾಸ್ಪದ ರೀತಿಯಲ್ಲಿ ಸತ್ತ ಕತೆ, ಅವರು ಸತ್ತದ್ದಲ್ಲ, ಅವರನ್ನು ಯಾರೊ ಕತ್ತು ಹಿಸುಕಿ ಕೊಂದದ್ದು ಎನ್ನುವ ಸಂಶಯವೆಲ್ಲಾ ಸುಬ್ಬಯಣ್ಣನ ಸುಸಂಸ್ಕೃತ ಮನಸ್ಸಿಗೆ ಗಾಸಿ ಮಾಡಿತ್ತು. ಅವರು ಒಂದು ದಿನ, ಶಾಂತಿಯಿಂದ ನಾಲ್ಕು ದಿನ ಆಶ್ರಮದಲ್ಲಿದ್ದು ಬರುತ್ತೇನೆಂದು ಹೋದವರು ಇಂದು ಬರುತ್ತೇನೆ, ನಾಳೆ ಬರುತ್ತೇನೆ ಎಂದು ಪತ್ರ ಬರೆಯುತ್ತಲೇ ಇದ್ದರು. ಯಮುನಕ್ಕ ಕಾಯುತ್ತಲೇ ಇದ್ದರು. ಅವರಿಗೆ ತಮ್ಮ ಬಂದು ಮಿತ್ತಬೈಲಿನ ಗುರಿಕಾರಿಕೆ ವಹಿಸಿಕೊಳ್ಳು



ತ್ತಾನೆಂಬ ವಿಶ್ವಾಸವಿತ್ತು.

ಇಂದು ಗದ್ದೆ ಗೋರುವ ಹದಗೊಳಿಸುವ ಕಂಬಳ ಮಾತ್ರವಲ್ಲ ಪುದ್ವಾರ್‌ನ ಹೊಸ ಅಕ್ಕಿ ಉಣ್ಣುವ ಹಬ್ಬದನಂತರ ಮಲರಾಯನಿಗೂ ಪುದ್ವಾರ್‌ದೆಚ್ಚಿ ನೇಮ. ಇದನ್ನು ಮನೆಯವರೇ ನಡೆಸುವುದು. ಅವರಿಗಾಗಿಯೇ ನಡೆಯುವ ಈ ನೇಮಕ್ಕೆ ಊರಿಗೆ ಹೇಳಿಕೆ ಇಲ್ಲ. ಊರವರು ಹೆಚ್ಚಾಗಿ ಬರುವುದೂ ಇಲ್ಲ. ಬಂದರೂ, ವಾಡಿಕೆಯಂತೆ ಮಿತ್ತಬೈಲಿನ ಯಜಮಾನರಿಗೆ ಗೌರವ ತೋರಿಸಲೆಂದು ಬಂದು ವೀಳ್ಯ ಪಡೆದು, ಊಟವೋ ಫಲಾಹಾರವೋ ಮಾಡಿಕೊಂಡು ಹೋಗುವುದು ಕ್ರಮ. ಕುಟುಂಬದವರ ಒಳಗಿನ ದೂರು, ಅರಿಕೆ ಏನಾದರೂ ಇದ್ದರೆ, ಅದಕ್ಕೆ ಊರವರು ಯಾಕೆ ಇರಬೇಕು? ಅಲ್ಲದೆ ಮಿತ್ತಬೈಲಿನವರು ತಮ್ಮ ಮನೆದೈವವಾಗಿ ಪ್ರತಿಷ್ಠೆ ಮಾಡಲು ಮಲರಾಯ ದೈವವನ್ನು ತಮ್ಮ ಮೂಲಮನೆ ಮಜಲೋಡಿಯಿಂದ ತಂದಿದ್ದಾರೆ. ಕೆಲವು ಕಾಲ ಕಳೆದು ಬೈಲಲ್ಲಿ ಸ್ಥಾನ ಕಟ್ಟಿಸಿದ ಮೇಲೆ ಅದು ಊರ ದೈವವಾದುದು.

ಕೊಪ್ಪರಿಗೆಗೆ ಅಕ್ಕಿ ಹಾಕಿ ಚಾವಡಿಯಲ್ಲಿ ಕುಳಿತುಕೊಳ್ಳುತ್ತಿದ್ದಂತೆಯೇ ಮನೆಯ ಮೂವರು ಮುತ್ತೈದೆಯರು ಯಮುನಕ್ಕನ ಕಾಲಿಗೆ ನಮಸ್ಕರಿಸಿ ಬಾವಿಯ ಕಡೆ ನಡೆದರು. ಮನೆಯ ಒಲೆಯಲ್ಲಿ ಹೊಸ ಅಕ್ಕಿ ಬೇಯಿಸಲು ನೀರಿಗೆ ಹೊರಟವರು, ಬಾವಿಯ ಬಳಿ ಬಂದು ಹರಿವಾಣದಲ್ಲಿ ಬೆಳ್ತಿಗೆ ಅಕ್ಕಿ, ವೀಳ್ಯ, ಅಡಿಕೆ, ಹಣತೆಯನ್ನು ಬಾವಿಯ ಹಾಸುಗಲ್ಲ ಮೇಲಿಟ್ಟು ಬಾವಿಗೊಂದು ಸುತ್ತು ಬಂದು ಕೈ ಮುಗಿದರು. ವೀಳ್ಯ, ಅಡಿಕೆಯನ್ನು ಬಾವಿಗೆ ಸಮರ್ಪಿಸಿ ಮೂರು ಕೊಡ ನೀರು ತೆಗೆದುಕೊಂಡು ಮನೆಯ ಅಡುಗೆಕೋಣೆಗೆ ಹೋದರು.

ಹೊತ್ತು ಮೇಲೇರುವಾಗ ಹಟ್ಟಿಯಿಂದ ಗುತ್ತಿನ ಕಂಬಳದ ಕೋಣಗಳನ್ನು, ಅದರೊಟ್ಟಿಗೆ ಬೇರೆ ಐದು ಜೋಡಿ ಕೋಣಗಳನ್ನು ಕೊಂಬು ವಾದ್ಯಗಳೊಂದಿಗೆ ಪೂಕರೆಯ ಗದ್ದೆಗೆ ಇಳಿಸಿದರು. ಮುಂದಿನಿಂದ ಮೂಗಿನ ಹಗ್ಗವನ್ನು ಹಿಡಿದುಕೊಂಡು ಹೊಸ ಬಟ್ಟೆ, ಹೊಸ ಮುಟ್ಟಲೆ, ಹೊಸ ಹೊಸ ಬೈರಾಸುಗಳನ್ನು ಸೊಂಟಕ್ಕೆ ಬಿಗಿದುಕೊಂಡು ಕೆಲವು ಪರಿಶಿಷ್ಟ ಜನಾಂಗದವರು ಇಳಿದರು. ಅವರ ಹಿಂದೆ ಹೊಸ ಬಟ್ಟೆ ಉಟ್ಟುಕೊಂಡು, ಮುಂಡಾಸು ಕಟ್ಟಿಕೊಂಡು ಮನೆಯ ಯುವಕರು ಇಳಿದರು. ಹಿಂದಿನಿಂದ ಊರ ಬಂಟರ ಯುವಕರು, ಸಿಂಗಾರ ಮಾಡಿಕೊಂಡು ಬಂದ ಒಕ್ಕಲಿನವರ ಮುಖ್ಯಸ್ಥರು, ಕ್ರಿಶ್ಚಿಯನ್ನರು, ಬ್ಯಾರಿಗಳು ಎಲ್ಲ ಅವರವರ ಕೋಣಗಳೊಂದಿಗೆ ಗದ್ದೆಗೆ ಇಳಿದರು.

ಗರಡಿಯ ಮುಂದಿನ ಗದ್ದೆಯೇ ಕಂಬಳದ ಪೂಕರೆ ಗದ್ದೆ. ಚಾವಡಿಯ ಅಂಗಳ ದಾಟಿ ಗರಡಿಯ ಮುಂದಿನ ಹದಿನಾರು ಮೆಟ್ಟಲುಗಳ ಕಲ್ಲು ಹಾಸಿನ ನಡೆ. ನಡೆ ಇಳಿದ ಕೂಡಲೇ ಸಿಗುವ ರಾಜಮಾರ್ಗದಂತಿರುವ ಕಟ್ಟಹುಣಿ. ಊರವರು ಬೈಲು, ಪೇಟೆಗೆ ಹೋಗುವ ದಾರಿ ಅದು. ನಡೆ ಇಳಿದು ಎಡ ಬಲಕ್ಕೆ ಎರಡು ಕಟ್ಟೆಗಳು. ಎಡದ ಕಟ್ಟೆ ದಾಟಿ ಹತ್ತು ಹೆಜ್ಜೆ ನಡೆದರೆ ಪೂಕರೆಯ ಗದ್ದೆಯ ಮೂಲೆಯಲ್ಲಿ ಕಟ್ಟಹುಣಿಯಲ್ಲೊಂದು ಮಂಟಪ.

ಈ ಮಂಟಪ ಗುತ್ತು ಸ್ಥಾಪನೆ ಮಾಡಿದ ಮಂಜಣ್ಣಾಳ್ವರ ಸಮಾಧಿ. ಹಿಂದಿನ ಕಾಲದಲ್ಲಿ ಸಮಾಧಿ ಕಟ್ಟುವಾಗ ನಾಲ್ಕು ಜನ ಕುಳಿತು ವಿಶ್ರಾಂತಿ ಪಡೆಯುವಂತಹ ಮಂಟಪಗಳನ್ನು ಕಟ್ಟಿಸುತ್ತಿದ್ದರು. ಆ ಮಂಟಪಗಳಲ್ಲಿ ದಾರಿ ಹೋಕರು ವಿಶ್ರಾಂತಿ ಪಡೆದು ಬಾಯಾರಿಕೆಗೆಂದು, ಮಣ್ಣಿನ ಪಾತ್ರೆಯಲ್ಲಿರಿಸಲಾಗುತ್ತಿದ್ದ ನೀರು ಕುಡಿದುಕೊಂಡು ಹೋದರೆ, ಅವರ ಮನಸ್ತೃಪ್ತಿಯೇ ಗುತ್ತಿಗೆ ಬಹುದೊಡ್ಡ ಸಂತೋಷ. ಮಿತ್ತಬೈಲಿನ ಈ ಮಂಟಪ, ಸಂಜೆ ಹೊತ್ತು ಯುವಕರು ಸೇರಿ ಪಟ್ಟಾಂಗ ಹೊಡೆಯುವ ಸೋಮಾರಿಗಳ ಕಟ್ಟೆಯೂ ಆಗುತ್ತಿತ್ತು.

ಪೂಕರೆಯ ಗದ್ದೆಯ ಮುಂದಿನ ಬೆಟ್ಟು ಗದ್ದೆಯಲ್ಲಿ ಮಲರಾಯ ದೈವದ ಭೂತಸ್ಥಾನ. ಮಲರಾಯನ ಬಂಡಿಯ ನೇಮ ಜರಗುವ ನೇಮದ ಗದ್ದೆ. ಈ ಗದ್ದೆಯಲ್ಲಿ ಸುಗ್ಗಿಯಲ್ಲಿ ಒಂದೇ ಬೆಳೆ, ಅದು ಅತಿಕಾರೆ ಬೆಳೆ. ಗದ್ದೆ ಹದಗೊಳಿಸಲು ಬರುವ ಮೂವತ್ತು ಜೋಡಿ ಕೋಣಗಳೂ ನೇಮದ ಗದ್ದೆಯಲ್ಲಿ ತಯಾರಾಗಿ ನಿಲ್ಲಬೇಕು. ಗುತ್ತಿನ ಕೋಣಗಳು ಕೊಂಬು ವಾದ್ಯದಲ್ಲಿ ಬಂದು ಕಂಬಳದ ಗದ್ದೆಗೆ ಇಳಿದ ಕೂಡಲೇ ಊರಿನ ಕೋಣಗಳು ಸಾಲುಸಾಲಾಗಿ ಒಂದೊಂದಾಗಿಯೇ ಇಳಿಯಬೇಕು.

ಮೂವತ್ತು ಜೋಡಿ ಕೋಣಗಳು ಎರಡು ಸಾಲು ಉತ್ತು ಮೇಲಿನ ನೇಮದ ಗದ್ದೆಗೆ ಬಂದ ಕೂಡಲೇ ಹತ್ತು ಜೋಡಿ ಕೋಣಗಳು ಓಟದ ಸ್ಪರ್ಧೆಗೆ ಗದ್ದೆಗಿಳಿದವು. ಅದು ಮುಗಿದಾದ ಮೇಲೆ ಹಲಗೆ ಕಟ್ಟಿ ಗದ್ದೆ ಗೋರಿದರು. ನೀರು ಖಾಲಿ ಮಾಡಿ ಹಲಗೆ ಹಾಕಿ ಗದ್ದೆಯನ್ನು ಸಮತಟ್ಟು ಮಾಡಿ ಬಿತ್ತಲು ತಯಾರಿ ಮಾಡುವಾಗ, ಹತ್ತು ಮಂದಿ ಗುತ್ತಿನ ಯುವಕರು ಹೊಸ ಬುಟ್ಟಿಯಲ್ಲಿ ಮೊಳಕೆ ಬಂದ ಅತಿಕಾರೆ ಭತ್ತ ಹಿಡಿದುಕೊಂಡು ಬಂದು ಬಿತ್ತಲು ತಯಾರಾದರು. ಕೋಣಗಳು ಮೇಲೆ ಬಂದವು. ಯುವಕರು ಗದ್ದೆಗೆ ಇಳಿದರು. ಬಿತ್ತಿಯಾದ ಮೇಲೆ ಮನೆಯ ಮೂಲದವರು ಪೂಕರೆಯನ್ನು ಕೊಂಬು ವಾದ್ಯದಲ್ಲಿ ತಂದು ಗದ್ದೆಯಲ್ಲಿ ನೆಟ್ಟು 'ಪೊಲಿ' ಕರೆದರು. ಕೆಲಸದವರು ಕೆಲವರು ಗದ್ದೆಗೆ ನೀರು ಸರಿಯಾಗಿ ಹರಿದು ಹೋಗಲು 'ಕುರುಂಟು' ಹಾಕುವಾಗ, ಕುರುಂಟಿನ ಓಣಿಗಳಲ್ಲಿ ನೀರು ಇಳಿದು ಹೋಗಲು ಶುರುವಾಯಿತು.

ಇಷ್ಟೊಂದು ಸಂಭ್ರಮದಲ್ಲಿ ಗದ್ದೆ ಹದಗೊಳಿಸುತ್ತಿರುವುದನ್ನು ಮಂಟಪದಲ್ಲಿ ಕುಳಿತು ನೋಡುತ್ತಿದ್ದ ಯಮುನಕ್ಕ, ಸ್ವಲ್ಪ ಹೊತ್ತಾದ ಮೇಲೆ ದ್ವಾರದಲ್ಲಿ ಕುಳಿತು ನೋಡುತ್ತಿದ್ದ ಮನೆಯ ಹೆಂಗಸರೊಂದಿಗೆ ಒಳಗೆ ಹೋಗಿ ಚಾವಡಿಯಲ್ಲಿ ಕುಳಿತುಕೊಂಡರು. ಊಟದ ತಯಾರಿಗೆ ಯುವಕರನ್ನು ಕರೆಸಿದರು.

ಚಾವಡಿಯಲ್ಲಿದ್ದ ಮರದ 'ಪೆಠಾರಿ' ಯಮುನಕ್ಕ ಮಲಗುವ ಜಾಗ. ಪೆಠಾರಿಯ ಒಳಗಿನ ಒಂದು ಅಂಕಣದಲ್ಲಿ ಗುತ್ತಿನ ಹಣಕಾಸಿನ ಪೆಟ್ಟಿಗೆ, ಚಿನ್ನ ಬೆಳ್ಳಿಯ ಪೆಟ್ಟಿಗೆ ಇದ್ದರೆ, ಇನ್ನೊಂದು ಅಂಕಣದಲ್ಲಿ ಭೂತದ ಚಿನ್ನ-ಒಡವೆಗಳ ಪೆಟ್ಟಿಗೆ. ಅದರ ಮೇಲೆ ಹಾಸಿಗೆ ಹಾಸಿ ಮಲಗುವ ಯಜಮಾನರು, ಸಂಪತ್ತು ಕಾಯುವ ಏಳು ಹೆಡೆಯ ಶಂಖಪಾಲ ಹಾವಿನಂತೆ ಕುಟುಂಬದ ಸಂಪತ್ತನ್ನು ಕಾಯುವರು ಎಂದು ನಂಬಿಕೆ.



ಮುಂದಿನ ಗರಡಿ, ಪಟೇಲರನ್ನು ಭೇಟಿಯಾಗಲೆಂದು ಬಂದ ಊರವರು ಕುಳಿತುಕೊಳ್ಳುವ ಸ್ಥಳ. ಗರಡಿಯಲ್ಲಿ ಪೆಠಾರಿ, ಬರೆಯಲು ಮೇಜು, ಕುಳಿತುಕೊಳ್ಳಲು ಎರಡು ಪರಂಗಿ ಕುರ್ಚಿ. ಮಧ್ಯೆ ಹಾಕಿದ ಚಪ್ಪರ. ಚಪ್ಪರದಡಿಯಲ್ಲಿ ಕುಳಿತುಕೊಳ್ಳುವವರಿಗೆ ಬೆಂಚುಗಳು, ತೆನೆ ಬಡಿಯುವ ಮಂಚಗಳು. ಸಮಾರಂಭದ ಊಟ ನಡೆಯುವುದು ಆ ಚಪ್ಪರದಡಿಯಲ್ಲಿ, ಅದಕ್ಕೆಂದೇ ಕುಳಿತುಕೊಳ್ಳಲು ಮಾಡಿಸಿದ ಅಡ್ಡ ಮಣೆಗಳು.

ಮಾಂಕರಾಲರಿಗಿಂತ ಹಿಂದಿನ ಯಜಮಾನರು ಗರಡಿಗೆ ಹಂಚು ಹೊದಿಸಿ, ಗರ್ಭಗೃಹಕ್ಕೆ ತಾಮ್ರ ಮುಚ್ಚಿಸಿದ್ದರು. ಹಳೆ ಮನೆಗೆ ಹುಲ್ಲಿನ ಮಾಡೇ ಇರಲೆಂದು ತಂತ್ರಿಗಳು ಹೇಳಿದ್ದುದರಿಂದ ಅದನ್ನು ಬದಲಿಸಿರಲಿಲ್ಲ. ಚಾವಡಿಯ ಎರಡು ಬದಿಗಳಲ್ಲೂ ಮಲಗುವ ಕೋಣೆಗಳು. ಒಳಗೆ ಮಧ್ಯದಲ್ಲಿ ದೊಡ್ಡ ಅಂಗಳ. ಅಂಗಳದ ಕೊನೆಯಲ್ಲಿ ಅಡುಗೆ ಮನೆ. ಒಂದು ಬದಿಯಲ್ಲಿ ಊಟದ ಕೋಣೆ. ಎದುರು ಬದಿ ಮನೆಯ ಸಾಮಾನುಗಳನ್ನು ಇಡುವ ಕೊಠಡಿ. ಹೊರಗೆ ಬಾಕಿಮಾರು ಗದ್ದೆಯಷ್ಟೇ ದೊಡ್ಡ ಅಂಗಳ. ಅದರಲ್ಲಿ ಒಮ್ಮೆಗೆ ಹತ್ತು ಮುಡಿ ಭತ್ತ ಒಣಗಿಸುತ್ತಾರೆ. ಅಂಗಳದ ಎಡ ಬದಿಯಲ್ಲಿ ಸ್ನಾನದ ಮನೆ, ಕೋಳಿಯ ಗೂಡು. ಅಕ್ಕಿ ದಾಸ್ತಾನಿಡುವ 'ಪತ್ತಾಯದ' ಅಟ್ಟ. ಅಟ್ಟದಲ್ಲಿ ಅಕ್ಕಿ, ತೆಂಗಿನಕಾಯಿ, ದವಸಧಾನ್ಯಗಳು.

ಬಲ ಬದಿಯಲ್ಲಿ ಅಂಗಳದ ಕೊನೆಯಲ್ಲಿ ನಾಲ್ಕು ಮೆಟ್ಟಿಲು ಇಳಿದರೆ ಹತ್ತಿಪ್ಪತ್ತು ಜೋಡಿ ಕೋಣಗಳನ್ನು ಕಟ್ಟುವ ಹಟ್ಟಿ. ಕೋಣಗಳಿಗೆ ಹುರುಳಿ ಬೇಯಿಸುವ ಹಂಡೆಗಳು ಸಾಲಾಗಿ ಮಗುಚಿ ಹಾಕಿದ್ದರೆ, ಪಕ್ಕದಲ್ಲೇ ನೊಗ-ನೇಗಿಲುಗಳಿಡುವ ಕೊಟ್ಟಿಗೆ. ಹಟ್ಟಿಯ ಹಿಂದಿನ ಓಣಿಯಲ್ಲಿ ಮೇಲೆ ನಡೆದರೆ ಗುಡ್ಡೆ, ಪದವು. ಕೆಳಗೆ ನಡೆದರೆ ಬೆಟ್ಟುಗದ್ದೆ. ಬೆಟ್ಟುಗದ್ದೆಯ ಕೆಳಗೆ ಬೈಲು. ಮನೆ ಕಟ್ಟಿಸುವಾಗ ಮಂಜಣ್ಣಾಳ್ವರು ಕುಂಬಳೆ ಅರಸರ ಸಾವಿರಾಳಿನ ದಂಡನಾಯಕನಿಗೆ ತಕ್ಕಂತಹ ಮನೆಯನ್ನೇ ಕಟ್ಟಿಸಿದ್ದರು.

ಇಂದು ಯಮುನಕ್ಕ ಅಂಗಳ ದಾಟಿ ಚಾವಡಿಯಲ್ಲಿ ಕುಳಿತಿರಬೇಕಾದರೆ ಊರವರು ಒಬ್ಬೊಬ್ಬರೇ ಊಟದ ಚಪ್ಪರದಲ್ಲಿ ಸೇರಿದರು.ಯುವಕರು ಬಂದವರನ್ನೆಲ್ಲಾ ಬೆಲ್ಲದ ಪಾನಕ ಕೊಟ್ಟು ಚಪ್ಪರದಡಿಯಲ್ಲಿ ಊಟಕ್ಕೆ ತಯಾರು ಮಾಡಿದ್ದ ಅಂಗಳಕ್ಕೆ ಕರೆತರುವಾಗ ಯಮುನಕ್ಕ ಸ್ವತಃ ಸ್ವಾಗತಿಸಿ ಊಟಕ್ಕೆ ಕುಳ್ಳಿರಿಸಿದರು. ಊರ ಒಕ್ಕಲಿಗರ ಮನೆಯ ಹತ್ತು ಸಮಸ್ತರು, ನೆಂಟರು, ಬೀಗರು ಎಲ್ಲ ಮೊದಲ ಪಂಕ್ತಿಯಲ್ಲಿ ಉಂಡಾದ ಮೇಲೆ ಒಕ್ಕಲಿನವರಿಗೂ, ಚಾಕರಿಯವರಿಗೂ ಯಮುನಕ್ಕನೇ ನಿಂತು ವಿಚಾರಿಸಿ ಊಟ ಮಾಡಿಸಿದರು. ಊಟ ಮುಗಿಸಿದವರೆಲ್ಲ ತಾಂಬೂಲ ಹಾಕಿಕೊಂಡು ಯಮುನಕ್ಕನಲ್ಲಿ ಮಾತಾಡಿ ಹೊರಡುವಾಗ ಹೊತ್ತು ಅಡ್ಡಾಗಿತ್ತು.

'ಪುದ್ವಾರ್' ಊಟದಲ್ಲಿ ಅನ್ನಕ್ಕಿಂತ ಹೆಚ್ಚು ಪದಾರ್ಥ ಎಂಬ ಗಾದೆಯೇ ಇದೆ. ಅಲಸಂಡೆ ಪಲ್ಯ ಮತ್ತು ಎಳೆ ಗುಜ್ಜೆಯ ಪಲ್ಯ, ಕಾಡು ಕೆಸುವಿನ ಚೇಟ್ಲ, ಹೆಸರು ಗಸಿ, ಸೌತೆಕಾಯಿ ಚಳ್ಳಿ, ಒಂದೆಲಗದ ಚಟ್ನಿ, ಬದನೆ, ಬೆಂಡೆಕಾಯಿಯ ಸಾಂಬಾರು, ಗಂಧಸಾಲೆ

ಅಕ್ಕಿಯ ಪಾಯಸ, ಅತಿಕಾರೆ ಅಕ್ಕಿಯ ಅನ್ನ, ಹೊಸ ಅಕ್ಕಿಯ ಕಡುಬು ಎಲ್ಲಾ ಮಿತ್ತಬೈಲಿನ ಭೂಮಿಯಲ್ಲಿಯೇ ಬೆಳೆದವು.

ಕೆಲಸದ ಒಕ್ಕಲಿನವರು, ಮೂಲದವರು, ಚಾಕರಿಯವರು ಊಟ ಮುಗಿಸಿ ಕೈ ಬುಟ್ಟಿಗಳಲ್ಲಿ, ತಂದ ಪಾತ್ರೆಗಳಲ್ಲಿ ಏಳು ದಿನಕ್ಕಾಗುವಷ್ಟು ಊಟವನ್ನು ಕೊಂಡೂ ಹೋದರು. ಉಂಡರೆ ಸಾಲದು ಕೊಂಡೂ ಹೋಗಬೇಕು ಎನ್ನುವ ಮಿತ್ತಬೈಲಿನ ಮಾತನ್ನು ಸತ್ಯ ಮಾಡಿಕೊಟ್ಟರು ಯಮುನಕ್ಕನ ಯುವಕರು. ಚಪ್ಪರವನ್ನು ಗುಡಿಸಿ ಸಂಜೆಯ ನೇಮಕ್ಕೆ ತಯಾರು ಮಾಡಲು ಪ್ರಾರಂಭಿಸಿದರು. ಹೆಂಗಸರು ಸಂಜೆಯ ಮಧು ಪುದ್ವಾರ್‌ನ ಊಟದ ತಯಾರಿಗೆ ಒಳಗೆ ಹೋದರು. ಯವುನಕ್ಕ ಬಂದು ಚಾವಡಿಯಲ್ಲಿ ಕುಳಿತುಕೊಂಡರು. ಕೊಟ್ಟಿಗೆಯ ಬದಿಯಲ್ಲಿಯೇ ಕಟ್ಟಿದ್ದ ಪವಿತ್ರ ಪೀಠದಲ್ಲಿಗೆ ನಲಿಕೆಯವನು, ಅವನ ಸಂಸಾರವೂ ಸಂಜೆಯ ನೇಮದ ತಯಾರಿಗೆಂದು ಬಂದರು.

ಯಮುನಕ್ಕ ಮಗ ರಾಮಣ್ಣ, ದುಗ್ಗಪ್ಪರನ್ನೂ, ಗಟ್ಟದಿಂದ ಪುದ್ವಾರ್‌ಗೆಂದೇ ಬಂದ ಕಿನ್ಯನ, ಮಾಬಲ ಇತ್ಯಾದಿ ಯುವಕರನ್ನೂ, ಮದುವೆಯಾಗಿ ಹೋದ ಹೆಣ್ಣು ಮಕ್ಕಳನ್ನೂ, ಮನೆಯೊಳಗಿನ ಹಿರಿಯರನ್ನೂ ಚಾವಡಿಗೆ ಕರೆಸಿದರು. ಕರೆಯದೆ ಅವರ ಮುಂದೆ ಬಂದು ಕುಳಿತುಕೊಳ್ಳುವ ಧೈರ್ಯ ಯಾರಿಗೂ ಇರಲಿಲ್ಲ. ಸಂಕಪ್ಪನನ್ನು ಕರೆದು ನಲಿಕೆಯವರನ್ನು ತೋಟಕ್ಕೆ ಕರೆದೊಯ್ದು ನೇಮಕ್ಕೆ ಬೇಕಾಗುವ ತೆಂಗಿನ ಎಳೆಗರಿ, ಎಳನೀರು, ಪಿಂಗಾರ ತೆಗೆದುಕೊಂಡು ಬರಲು ಹೇಳಿದರು. ಚಾವಡಿಯ ಸುತ್ತ ಯಾರೂ ಇರಬಾರದೆಂಬುದು ಈ ಮಾತಿನ ಅರ್ಥವೆಂದು ಸಂಕಪ್ಪನಿಗೆ ತಿಳಿಯಿತು. ದೆಯ್ಯುವನ್ನು ಕರೆದು ತನ್ನ ಅಪ್ಪಣೆ ಬರುವವರೆಗೆ ಯಾರೂ ಕಟ್ಟಹುಣಿಯಿಂದ  ಅಂಗಳಕ್ಕೆ ಇಳಿಯಬಾರದೆಂದು ಹೇಳಿದರು ಯಮುನಕ್ಕ.

ರಾಮಣ್ಣ, ದುಗ್ಗಪ್ಪ, ಕಿನ್ಯನ, ಮಾಬಲ ಅಲ್ಲದೆ ಬಾಕಿ ಯುವಕರು ಚಾವಡಿಯ ಪಕ್ಕದ ಅಂಗಳದಲ್ಲಿ ನಿಂತುಕೊಂಡು ತಾಯಿಯ ಮುಖ ನೋಡಿದರು. "ಇಂದಿನ ಗದ್ದೆ ಹದಗೊಳಿಸುವ ಕಾರ್ಯದಲ್ಲಿ ಎರಡು ಜೊತೆ ಕೋಣಗಳು ಕಮ್ಮಿ ಇದ್ದವು. ಮಧ್ಯಾಹ್ನದ ಪುದ್ವಾರ್ ಊಟಕ್ಕೆ ಯಾವಾಗಲೂ ಬರುವ ನೆಂಟರಲ್ಲಿ ಒಬ್ಬ ಒಕ್ಕಲಿನವ. ಒಬ್ಬ ಊರ ನೆಂಟ ಬಂದಿರಲಿಲ್ಲ. ನೀವ್ಯಾರಾದರೂ ಗಮನಿಸಿದ್ದೀರಾ?"

ಯಮುನಕ್ಕ ಹೇಳಿದಾಗ ಅವರೆಲ್ಲ ಮುಖ ಮುಖ ನೋಡಲು ತೊಡಗಿದರು. ಅವರ್ಯಾರೂ ಆ ಬಗ್ಗೆ ಅಷ್ಟೊಂದು ಗಮನ ಕೊಟ್ಟಿರಲಿಲ್ಲ.

"ಹೌದಮ್ಮ ಎರಡು ಜೊತೆ ಕಮ್ಮಿ ಇತ್ತು. ಎರಡು ಜನ ಊಟಕ್ಕೆ ಬಂದಿರಲಿಲ್ಲ. ಬಾರಬೈಲಿನ ತ್ಯಾಂಪಣ್ಣ ಮಾವ, ಒಕ್ಕಲಿನ ಅಮ್ಮಣ ಪೂಜಾರಿ. ತ್ಯಾಂಪಣ್ಣರು ದೆಯ್ಯುನಲ್ಲಿ ತಾನೇನು ಮಿತ್ತಬೈಲಿನವರ ಒಕ್ಕಲಿನಲ್ಲಿಲ್ಲಾಂತ ಹೇಳಿದರಂತೆ" ರಾಮಣ್ಣ ಹೇಳಿದ.

"ಅಮ್ಮಣ ಪೂಜಾರಿ ಕೋಣಗಳಿಗೆ ಕಾಲು ನೋವಿನ ಕುಂಟು ನೆಪ ಕೊಟ್ಟು ಕೋಣಗಳನ್ನು ತರಲಿಲ್ಲ. ಭೂತದ ದರ್ಶನ ಆದ ಕೂಡಲೇ ಹೊಟ್ಟೆ ಸರಿಯಿಲ್ಲಾಂತ ಹೇಳಿ



ಊಟಕ್ಕೂ ನಿಲ್ಲದೆ ಓಡಿದ್ದಾನೆ." ದುಗ್ಗಪ್ಪ ದನಿಗೂಡಿಸಿದ

"ಬೇರೆ ಯಾರಾದರೂ ಇನ್ನೇನಾದರೂ ವಿಷಯವನ್ನು ಕೇಳಿದಿರಾ? ನಿಮ್ಮ ಮನಸ್ಸಿಗೇನಾದರೂ ಕಂಡು ಬಂತಾ?"

"ಅಮ್ಮು ಪೂಜಾರಿ ಬೆಳಗ್ಗೆ ದರ್ಶನದಲ್ಲಿ ಒಂದು ಅಧಿಕ ಪ್ರಸಂಗ ಮಾಡಿದ್ದಾನೆ. ಬಂಡಿಯ ನೇಮದಲ್ಲಿ ತೆಗೆಯಬೇಕಾದ ವಿಷಯವನ್ನು ಈ ಪುದ್ವಾರ್‌ದೆಚ್ಚಿ ನೇಮದಲ್ಲಿ ತೆಗೆದಿದ್ದಾನೆ. ಈ ನೇಮದಲ್ಲಿ ನಾವು ಅರಿಕೆ ಮಾಡಿಕೊಂಡದ್ದನ್ನಲ್ಲದೆ ಬೇರೆ ವಿಷಯವನ್ನು ತೆಗೆಯುವ ಕ್ರಮ ಇಲ್ಲವಂತೆ. ತೆಗೆಯಬಾರದೆಂದಲ್ಲ, ಕುಟುಂಬದವರೇ ಅರಿಕೆ ಮಾಡದೆ ಭೂತ ಈ ಮಾತನ್ನು ಕಳಕ್ಕೆ ಹಾಕಬಾರದಿತ್ತು."

ರಾಮಣ್ಣ ಹೇಳಿದಾಗ ಎಲ್ಲರೂ ಮುಖ ಮುಖ ನೋಡಿಕೊಂಡು ''ಹೌದು ಹೌದು'' ಎನ್ನುತ್ತಾ ಗುಸುಗುಸು ಮಾತಾಡಿದರು. ಕಿನ್ಯನ ಹೇಳಿದ,

''ಹೌದಾ ಅಮ್ಮಾ, ಇಂದು ಇನ್ನೂ ಒಬ್ಬರು ಊಟಕ್ಕೆ ಬಂದಿರಲಿಲ್ಲ. ಮೈಂದರಾಲ ಮಾವ ಯಾಕೆ ಬೀಗರ ಮನೆಯಿಂದ ಕುಟುಂಬದವರ ಜೊತೆ ಹೊಸ ಅಕ್ಕಿ ಊಟಕ್ಕೆ ಬರಲಿಲ್ಲ?''

''ಅವರಿಗೆ ಕಾಲು ಬಾತು ಏಳಲಿಕ್ಕೆ ಆಗ್ತಾ ಇಲ್ಲ. ನಾನು ನೋಡಿ ಬಂದಿದ್ದೇನೆ. ಅದಕ್ಕೆ ಬೇರೇನೂ ಅರ್ಥ ಕಲ್ಪಿಸುವುದು ಬೇಡ. ನಿಮ್ಮನ್ನು ಈ ವಿಷಯ ಮಾತಾಡಲೆಂದೇ ನಾನೀಗ ಕರೆದದ್ದು. ಗುತ್ತಿನ ಯಜಮಾನರು ಸತ್ತದ್ದಲ್ಲ, ಅವರನ್ನು ಕೊಂದದ್ದು ಎಂದು ಊರೆಲ್ಲ ಹೇಳುತ್ತಿದೆ. ಹಾಗೆ ಹೇಳುತ್ತಿರುವವರಲ್ಲಿ ಬಾರಬೈಲು ತ್ಯಾಂಪಣ್ಣ ಎಲ್ಲರಿಗಿಂತ ಮುಂದಿದ್ದಾನೆ. ಆತ ಬಾರಬೈಲಿನ ಹಗೆ ತೀರಿಸಿಕೊಳ್ಳುತ್ತಿದ್ದಾನೆ. ನಮ್ಮ ಜೊತೆ, ಮಿತ್ತಬೈಲು ಕುಟುಂಬದ ಜೊತೆ ಎಷ್ಟೇ ಒಳ್ಳೆಯವನಂತಿದ್ದರೂ ಆತ ಹಿಂದಿನಿಂದ ಚೂರಿ ಹಾಕಲು ಹೇಸುವವನಲ್ಲ. ಅವನಿಗೆ ಮಾಂಕರಾಲರ ಮಕ್ಕಳು ಹತ್ತಿರದ ಬಂಧುಗಳು...''

ಯಾರೋ ಮಧ್ಯದಲ್ಲಿ ಹೇಳಿದರು,

''ಅವ ಹುಟ್ಟಿದ್ದೇ ಮಾಂಕರಾಲರಿಗಂತೆ!''

''ನಿಲ್ಲಿಸಿ ಅಂತಹ ಮಾತನ್ನು. ಮಾಡಿದವರ ಪಾಪ ಆಡಿದವರ ಬಾಯಲ್ಲಂತೆ. ಆದರೆ ಅಮ್ಮಣ ಪೂಜಾರಿಯದು ನಿಮಗೆ ತಿಳಿದಿದೆ. ಅವ ಮಾಂಕು ಮಾವನ ಬಲಗೈ ಬಂಟ. ಬಹಳಷ್ಟು ಸಂಪತ್ತು ಮಾಂಕರಾಲರ ಕಚ್ಚೆ ಹರಿದು ಅವನ ಹಿರಿ ಮಗಳಿಗೆ ಸುರಿದು ಹೋಗಿದೆ. ಹಾಗಾಗಿ ಅಮ್ಮಣ ಪೂಜಾರಿಯೂ, ಮಿತ್ತಬೈಲಿನಲ್ಲಿ ಯಜಮಾನಿಕೆ ವಹಿಸಲು ಯೋಗ್ಯರು ಇಲ್ಲದಿದ್ದರೆ ಮಾಂಕರಾಲರ ಮಕ್ಕಳಿಗೆ ಕೊಡಲಿ ಎನ್ನುತ್ತಿದ್ದಾನಂತೆ. ತ್ಯಾಂಪಣ್ಣ ಹೇಗಾದರೂ ಮಾಡಿ ಪಟೇಲಗಿರಿಯನ್ನು ಮಾಂಕರಾಲರ ಮಗನಿಗೆ ಮಾಡಿಸಬೇಕೆಂದು ಸಾವಿರಗಟ್ಟಲೆ ಹಣ ಖರ್ಚು ಮಾಡುತ್ತಿದ್ದಾನಂತೆ''.

ಯಮುನಕ್ಕ ಇದನ್ನೆಲ್ಲ ಹೇಳುವಾಗ ಯುವಕನೊಬ್ಬ ಮೆಲ್ಲ ಹೇಳಿದ. "ಸುಬ್ಬಯ ಮಾವ ಬರುವವರೆಗೆ ಯಜಮಾನಿಕೆಯ ವಿಷಯ ಯಾರೂ ಮಾತನಾಡುವುದು ಬೇಡ.

ಏನಿದ್ದರೂ ಅವರು ಬಂದ ಮೇಲೆಯೇ ತೀರ್ಮಾನವಾಗಲಿ.''

ಯಮುನಕ್ಕನ ಮನಸ್ಸಿನ ಆಸೆಯನ್ನು ಯುವಕ ಹೇಳಿದಾಗ ಅವರಿಗೆ ಸಮಾಧಾನವಾಯಿತು. ಆದರೂ ಮಿಕ್ಕವರ ಮುಖ ನೋಡಿದರು. ಎಲ್ಲರೂ ಸುಬ್ಬಯಣ್ಣ ಬರದೆ ಈ ಮಾತು ತೆಗೆಯಲಿಕ್ಕಿಲ್ಲ ಎಂದರು.

''ಸಂಜೆಯ ನೇಮದಲ್ಲಿ ಅಮ್ಮಣ ಪೂಜಾರಿ ಮತ್ತೆ ಬಾಯಿ ತೆರೆಯದಂತೆ ಅಥವಾ ಆ ನಲಿಕೆಯವ ಕಟ್ಟಿದ ನೇಮದಲ್ಲಿ ಏನೂ ಬೊಗಳದಂತೆ ನೋಡಿಕೊಳ್ಳಬೇಕು. ಆ ನಲಿಕೆಯವ ಬಾರಬೈಲಿನ ಹತ್ತಿರವೇ ಇರುವುದು, ನೆನಪಿರಲಿ''.

''ಆ ಅಮ್ಮಣ ಪೂಜಾರಿ ಎಲ್ಲಿಯಾದರೂ ಈ ಬಗ್ಗೆ ಉಸಿರೆತ್ತಿದರೆ ಅವನ ಕಾಲು ಮುರಿದು ಹಾಕುತ್ತೇನೆ. ಅವನಿಗೆ ಈಗಲೇ ಹೇಳಿ ಬರುತ್ತೇನೆ. ನಲಿಕೆಯವನ ವಿಷಯ ಬಿಡಿ. ಅವನನ್ನು ನಾನು ನೋಡಿಕೊಳ್ಳುತ್ತೇನೆ''.

''ಅದಕ್ಕಾಗಿಯೇ ನಾನು ನಿನ್ನಲ್ಲಿ ಹೇಳದಿದ್ದುದು. ಅವನ ಕಾಲು ಮುರಿದರೆ ಭೂತದ ಪಾತ್ರಿ ನೀನಾಗುತ್ತೀಯ? ತಾಳ್ಮೆಯಿಂದಿರಿ. ಮುಂಗೋಪದ ಕೈಗೆ ಕತ್ತಿ ಕೊಡಬೇಡಿ''.

ಯಮುನಕ್ಕ ದುಗ್ಗಪ್ಪನನ್ನು ಗದರಿಸಿದರು.

''ಇದಲ್ಲದೆ ಸಂಜೆಯ ನೇಮಕ್ಕೆ ತ್ಯಾಂಪಣ್ಣ ಶೆಟ್ಟಿ ಎಲ್ಲಿಯಾದರೂ ಬಂದರೆ ಇನ್ನೂ ಜಾಗ್ರತೆಯಲ್ಲಿರಬೇಕು. ನೀವೆಲ್ಲರೂ ಒಮ್ಮತದಿಂದ ಇದ್ದದ್ದೇ ಆದರೆ ಇದು ಯಾವುದೂ ದೊಡ್ಡ ವಿಷಯ ಅಲ್ಲ. ಇದಕ್ಕಿಂತ ದೊಡ್ಡ ಎಷ್ಟೋ ವಿಷಯಗಳು ನಡೆಯಲಿಕ್ಕಿವೆ. ನಮ್ಮ ಇಡೀ ಕುಟುಂಬ ಅವನ್ನೆಲ್ಲ ಒಗ್ಗಟ್ಟಿನಿಂದ ಎದುರಿಸಬೇಕು. ಮಿತ್ತಬೈಲಿಗೆ ಇದು ಪರೀಕ್ಷೆಯ ಕಾಲ. ನನಗೆ ನಿಮ್ಮ ಒಗ್ಗಟ್ಟಿನ ಬೆಂಬಲ ಇದ್ದರೆ ಇದನ್ನೆಲ್ಲಾ ಸುಧಾರಿಸಿಕೊಂಡು ಮತ್ತೆ ಮಿತ್ತಬೈಲಿನ ಹೆಸರನ್ನು ಈ ಸೀಮೆಯಲ್ಲಿ ಮೆರೆಸುತ್ತೇನೆ. ಪ್ರತಿಯೊಬ್ಬರೂ ಕಣ್ಣುಬಿಟ್ಟು ಎಲ್ಲವನ್ನೂ ಗಮನಿಸುತ್ತಿರಬೇಕು. ಹೋಗಿ ಈವತ್ತಿಗೆ ಇಷ್ಟೇ ಸಾಕು''.

ಯಮುನಕ್ಕ ಅಷ್ಟು ಹೇಳಿ ಎದ್ದರು. ಎಲ್ಲ ಯುವಕರೂ ಗಂಡು, ಹೆಣ್ಣುಗಳೂ ಬಂದು ಅವರ ಕಾಲಿಗೆ ನಮಸ್ಕರಿಸಿ ಗುತ್ತಿನ ಮಾನ ಮರ್ಯಾದೆಯನ್ನು ಜೀವ ಒತ್ತೆ ಇಟ್ಟು ಕಾಯುತ್ತೇವೆ ಎಂದು ಆಣೆ ಹಾಕಿಕೊಂಡರು.

ಎಲ್ಲರೂ ಹೋದ ಮೇಲೆ ಯಮುನಕ್ಕ ಕಟ್ಟಹುಣಿಯಲ್ಲಿ ಕುಳಿತಿದ್ದ ದೆಯ್ಯುವನ್ನು ಕರೆದರು.

ಸುಬ್ಬಯಣ್ಣ ಎಷ್ಟು ಹೇಳಿದರೂ ಮಿತ್ತಬೈಲಿನ ಭೂತದ ಮುಂದಿನ ಅಂಗಳಕ್ಕೆ ಮೂಲದವರು ಪ್ರವೇಶಿಸುವುದಿಲ್ಲ. ಭಂಡಾರ ಹೋಗುವ ದಾರಿಯಲ್ಲಿ ಅಂಗಳ ಹತ್ತುವುದಿಲ್ಲ. ನಲಿಕೆಯವ, ಪಂಬದ, ಮೂಲದವರು, ಕಾಡಿನವರೆಂದು ಎಲ್ಲರೂ ಈ ನಿಯಮವನ್ನು ಇನ್ನೂ ಪಾಲಿಸುತ್ತಿದ್ದಾರೆ. ಆದರೆ ಭೂತ ಕಟ್ಟಿದ ಪಂಬದನಾಗಲಿ, ನಲಿಕೆಯವನಾಗಲೀ ಕಟ್ಟಿದ ನೇಮದಲ್ಲಿ ಇಡೀ ಅಂಗಳ ಸುತ್ತುವರು, ನಡೆಯಲ್ಲೇ ಭಂಡಾರ



ಕೊಂಡು ಹೋಗುವರು. ಈ ಕಟ್ಟುಪಾಡು ಬದಲಾಗಬೇಕಾದರೆ ಕೆಲವು ಸಮಯವೇ ಬೇಕಾಯಿತು.

ಗರಡಿಯ ಬಳಿ ಬಂದ ದೆಯ್ಯುನ ಜೊತೆ ಯಮುನಕ್ಕ ಕೆಲವು ವಿಷಯಗಳನ್ನು ಗುಟ್ಟಿನಲ್ಲಿ ಹೇಳಿ ಕಳುಹಿಸಿದರು.

ಈ ದೆಯ್ಯು ಮಿತ್ತಬೈಲಿನ ಮೂಲದವರಲ್ಲಿ ಬದುಕುಳಿದ ಹಳೆ ತಲೆಗಳಲ್ಲಿ ಒಬ್ಬ. ವಯಸ್ಸಲ್ಲಿ ಯಮುನಕ್ಕನಿಗಿಂತಲೂ ಹಿರಿಯವ. ಮಾಂಕರಾಲರಿಗಿಂತ ಕಿರಿಯವನಂತೆ. ಪರಿಶಿಷ್ಟ ಜನಾಂಗಕ್ಕೆ ಈಗ ಅವನೇ ಯಜಮಾನ. ಬೇಸಾಯದ ಕೆಲಸದ ಎಲ್ಲಾ ಜವಾಬ್ದಾರಿ ದೆಯ್ಯುನದು. ಅವನಲ್ಲಿ ಹೇಳದೆ, ಕೇಳದೆ ಬೇಸಾಯದ ಯಾವ ಕೆಲಸವೂ ನಡೆಯದು. ಮಿತ್ತಬೈಲಿಗೆ ಎರಡನೇ ಯಜಮಾನ ಅಂತ ಯಾರಾದರೂ ಇದ್ದರೆ ಅದು ದೆಯ್ಯು ಎಂದೇ ಹೇಳಬಹುದು. ಆತ ಕುಟುಂಬದವರಿಗೆ ಕುಟುಂಬದವ. ಬೀಗರಿಗೆ ಬೀಗ. ಹಾಗೆ ಹೇಳಿದರೆ ಕೇರಿಯ ಎಲ್ಲಾ ಮೂಲದವರೂ ಮಿತ್ತಬೈಲಿಗೆ ಕುಟುಂಬದವರೇ. ಈ ಮೂಲದ ಮುಗೇರರ ಕೇರಿಯವರಿಗೂ ಗುತ್ತಿನಂತೆ ಗಡಿ ಹಿಡಿದ ಗುರಿಕಾರನಿರಬೇಕು. ಮಾವ ತೀರಿಹೋದ ಮೇಲೆ ಕಳೆದ ಹತ್ತು ವರ್ಷಗಳ ಹಿಂದೆ ಮಾಂಕರಾಲರ ಅಪ್ಪಣೆ ಪಡೆದುಕೊಂಡು ದೆಯ್ಯು ಗುರಿಕಾರಿಕೆ ವಹಿಸಿಕೊಂಡಿದ್ದಾನೆ. ದುಡಿದು ಕಲ್ಲಿನಂತಾಗಿರುವ ಗಟ್ಟಿಮುಟ್ಟಾದ ಗಿಡ್ಡ ದೇಹ. ಯಾವುದಕ್ಕೂ ಹಿಂಜರಿಯದ ಧೈರ್ಯ. ಕೊಲೆ ಮಾಡಲೂ ಹೇಸದ ಮಿತ್ತಬೈಲಿನ ಮೂಲದವರಿಗೆ ಅವ ಗುರಿಕಾರ ಅಂದರೇ ತಿಳಿಯಬಹುದು ಅವನು ಎಂಥವನೆಂದು.

ಕೋಳ್ಯೂರು ಪೈವಳಿಕೆ ಸೀಮೆಯಲ್ಲಿ ಮಿತ್ತಬೈಲಿನ ಮೂಲದ ಮುಗೇರರು ಹೆಸರು ಪಡೆದವರು. ಮಿತ್ತಬೈಲು ಗುತ್ತಿನ ಮಾನ ಮರ್ಯಾದೆ ಎಂದರೆ ಅದು ಅವರದ್ದೇ. ಗುತ್ತಿನ ಮೇಲಿರುವ ಅಭಿಮಾನ, ಭಯಭಕ್ತಿ ಮಿತ್ತಬೈಲಿನ ಅತಿ ದೊಡ್ಡ ಆಸ್ತಿ. ಸುತ್ತಮುತ್ತಲಲ್ಲಿ ಮುಗೇರರ ಕೇರಿಯ ಒಪ್ಪಿಗೆ ಇಲ್ಲದೆ ಮದುವೆಯೂ ನಡೆಯದು. ಗಲಾಟೆ, ಪೆಟ್ಟೂ ಆಗದು. ಮಾನ ಮರ್ಯಾದೆಯಲ್ಲೂ ಅವರು ಮಿತ್ತಬೈಲಿಗಿಂತ ಏನೂ ಕಮ್ಮಿ ಇರಲಿಲ್ಲ. ಹಾಗಾಗಿಯೇ ಪಕ್ಕದ ಗ್ರಾಮದ ಯುವಕನೊಬ್ಬ ಮಿತ್ತಬೈಲು ಗುತ್ತಿನ ವಿಷಯದಲ್ಲಿ ಕೋಳಿ ಅಂಕದ ಸಂದರ್ಭದಲ್ಲಿ ತಪ್ಪಿ ಮಾತನಾಡಿದನೆಂದು ಹಾಡುಹಗಲೇ ಅವರ ಬೀಡಿಗೆ ನುಗ್ಗಿ ಆ ಯುವಕನನ್ನು ಅವರ ಚಾವಡಿಯಲ್ಲೇ ಹತ್ಯೆ ಮಾಡಿ ಬಂದವರು ಮಿತ್ತಬೈಲಿನ ಮುಗೇರರು.

ಕೊಲೆಯ ವಿಷಯ ಬಂದಾಗ ಯಮುನಕ್ಕನಿಗೆ ಇಂದಿಗೂ ಮರೆಯದ ಒಂದು ಘಟನೆಯೆಂದರೆ, ಜೈನರ ಬೀಡಿನೊಳಗೆ ಹೋಗುವಾಗ ಮುಂಡಾಸು ಕಟ್ಟಿಕೊಂಡು ಹೋಗಿದ್ದ ಮಜಲೋಡಿಯ ಯಜಮಾನರ ಮುಂಡಾಸು ತೆಗೆಯಲು ಅಲ್ಲಿನವರು ತಲೆಗೆ ಕೈಹಾಕಿದರು ಎಂಬ ಸುದ್ದಿ ಕೇಳಿದಾಗ ಇದೇ ದೆಯ್ಯು ಮಾಡಿದ ಅವಾಂತರ. ಒಂದು ದಿನ ಬೆಳಗ್ಗೆ ಮಿತ್ತಬೈಲು ಮನೆಗೆ ಬಂದ ಮಜಲೋಡಿಯ ಯಜಮಾನರು ಪಟೇಲರಲ್ಲಿ ಈ ವಿಷಯ ಹೇಳಿದಾಗ ಪಟೇಲರು ದೆಯ್ಯುನ ಮುಖ ನೋಡಿದರಂತೆ. ಅಷ್ಟೇ ಸಾಕಾಯಿತು, ದೆಯ್ಯು ಸಂಜೆಯಾಗುತ್ತಲೇ ಹತ್ತಿಪ್ಪತ್ತು ಮುಗೇರರ ಯುವಕರನ್ನು ಕರೆದುಕೊಂಡು ಹೋಗಿ,

ಜೈನರ ಬೀಡಿಗೆ ಬೆಂಕಿ ಕೊಟ್ಟು, ಮುಂಡಾಸಿಗೆ ಕೈಹಾಕಿದ ಯುವಕನ ಕೈಯನ್ನು ಕಡಿದು ಮನೆಯ ಗಂಡಸರು, ಹೆಂಗಸರನ್ನು, ದನಕರುಗಳನ್ನು ಅಟ್ಟುವಂತೆ ಅಟ್ಟಿ ಹಟ್ಟಿಯಲ್ಲಿ ಕೂಡಿಹಾಕಿದ್ದ. ಈ ಮೊಕದ್ದಮೆ ಮುಗಿಯುವಾಗ ಊರಿನ ಜೈನರು ಬೀಡಿಗೆ ಬೀಡೇ ಒಕ್ಕಲು ಹೋಗಿದ್ದರು. ಯಮುನಕ್ಕನ ತಂದೆಯ ಪಂಚಾಯತಿಕೆಯಲ್ಲಿ ಮಿತ್ತಬೈಲಿನವರು ಜೈನರಿಗೆ ದುಡ್ಡು ಕೊಟ್ಟು, ತಪ್ಪು ಕಾಣಿಕೆ ಕೊಟ್ಟು ಕ್ಷಮೆ ಕೇಳಬೇಕಾಗಿ ಬಂತು. ಆದರೆ ಆ ಭಯಂಕರ ಘಟನೆ ಮಾತ್ರ ಸುತ್ತಮುತ್ತಲ ಊರುಗಳಲ್ಲಿ ಯಾರಿಗೂ ಮರೆತುಹೋಗಿಲ್ಲ.

ಈ ಮೂಲದವರ ಜಗಳ ಕೆಲವು ಸಲ ಕಳ್ಳು ಕುಡಿದು ಕೋಳಿಕಟ್ಟದಲ್ಲಿ ಪ್ರಾರಂಭವಾದರೆ, ಮುಗಿಯುವುದು ಗುತ್ತಿನವರ ಮನೆಯಲ್ಲಿ. ಎರಡು ಮೂರು ಹೆಣ ಬಿದ್ದ ಮೇಲೆಯೇ ಊರ ಹಿರಿಯರು ಯಾರಾದರೂ ಪಂಚಾಯತಿಕೆ ನಡೆಸಿ ಕೊನೆಗೊಳಿಸಬೇಕು. ಎಷ್ಟಾದರೂ ಗುತ್ತಿನವರು ಅವರವರ ಮೂಲದ ಕೆಲಸದವರನ್ನು ಬಿಟ್ಟು ಕೊಡಲಾರರು, ಎಷ್ಟು ತಪ್ಪುಗಳಿದ್ದರೂ ಅವರಿಗೆ ಅವರ ಮೂಲದವರು ಮಾಡಿದ್ದೆಲ್ಲವೂ ಸರಿಯೇ.

ಮಿತ್ತಬೈಲಿನ ಬೈಲು ಗುಡ್ಡೆಯ ಮಧ್ಯೆ ಇರುವ ಬಟ್ಟಲಿನಂತಿರುವ ಸ್ಥಳದಲ್ಲಿ ಮುಗೇರರ ಗುಡಿಸಲುಗಳು. ಆ ತಪ್ಪಲಲ್ಲಿ ಹತ್ತು ಹನ್ನೆರಡು ಗುಡಿಸಲುಗಳು. ಅವುಗಳಲ್ಲಿ ಗಂಡು ಹೆಣ್ಣೆಂದು ನಲ್ವತ್ತು ದೊಡ್ಡವರೂ, ಹತ್ತೈವತ್ತು ಮಕ್ಕಳೂ ಇದ್ದರು. ಅಷ್ಟು ಜನರ ಹೊಟ್ಟೆಗೆ, ಬಟ್ಟೆಗೆ, ಬದುಕಿಗೆ ಗುತ್ತೇ ಆಧಾರ. ಗುತ್ತಿನಲ್ಲಲ್ಲದೆ ಬೇರೆ ಮನೆಯಲ್ಲಿ ಅವರು ಗುತ್ತಿನವರ ಒಪ್ಪಿಗೆ ಇಲ್ಲದೆ ಕೆಲಸಕ್ಕೆ ಹೋಗಬಾರದು. ಏನಿದ್ದರೂ ಗುತ್ತಿನ ಒಪ್ಪಿಗೆಯಿಂದಲೇ ಆಗಬೇಕು. ಎಲ್ಲಾ ಬಿಟ್ಟು ಮದುವೆ ಸಮಾರಂಭಗಳೂ ಕೂಡಾ ಗುತ್ತಿನ ಒಪ್ಪಿಗೆಯಲ್ಲೇ ನಡೆಯಬೇಕು. ಮದುವೆಯಿಂದ ಹಿಡಿದು ಸಾವಿನ ತನಕದ ಶುಭಾಶುಭ ಕಾರ್ಯಗಳು ಗುತ್ತಿನವರ ಖರ್ಚಿನಿಂದಲೇ ನಡೆಯುತ್ತಿದ್ದವು. ಮದುವೆಯಾಗಿ ಯಾರಾದರೂ ಬೇರೆ ಸಂಸಾರ ಮಾಡುವುದಾದರೆ ಅವರಿಗೊಂದು ಗುಡಿಸಲು ಕಟ್ಟಿಕೊಟ್ಟು, ಒಂದು ತೆಂಗಿನ ಮರ, ಒಂದು ಹಲಸಿನ ಮರ, ಒಂದು ಮಾವಿನ ಮರ, ಒಂದು ಹುಣಸೆ ಮರ ಬಿಟ್ಟು ಕೊಡಬೇಕಾದುದು ಗುತ್ತಿನವರ ಹೊಣೆ. ಬಂದ ಹೆಣ್ಣಿಗೂ ಗುತ್ತಿನಲ್ಲೇ ಕೆಲಸ. ಕೆಲವರಿಗೆ ಒಂದು ಬಳ್ಳ ಭತ್ತ ಕೂಲಿಯಾದರೆ, ಇನ್ನು ಕೆಲವರಿಗೆ ಒಂದು ಬಳ್ಳ ಅಕ್ಕಿ ಕೂಲಿ. ಗುತ್ತಿನ ಮನೆಯಲ್ಲಿ ಯಾರಾದರೂ ಸತ್ತರೆ ಮುಗೇರ ಕೇರಿಯವರಿಗೆ ಸೂತಕ, ಕೇರಿಯಲ್ಲಿ ಯಾರಾದರೂ ಸತ್ತರೆ ಗುತ್ತಿನವರಿಗೆ ಸೂತಕ. ಸೂತಕದ ಸಮಯದಲ್ಲಿ ದೈವ-ದೇವರ ಗುಡಿಗೆ ಹೋಗಬಾರದು. ಗುತ್ತಿನ ಯಜಮಾನ ತೀರಿಕೊಂಡರೆ ಕೇರಿಯವರು ಸ್ನಾನ ಮಾಡಿ, ಉಂಡು, ಮದ್ಯಮಾಂಸ ಬಿಟ್ಟಿರಬೇಕು. ಕೇರಿಯಲ್ಲಿ ಯಾರಾದರೂ ಸತ್ತರೆ ಗುತ್ತಿನವರು ಹೆಣ ತೆಗೆಯುವವರೆಗೂ ಉಣ್ಣುವುದಿಲ್ಲ. ಹೀಗಾಗಿ ಈ ಜೀವಕ್ಕೆ ಜೀವ ಕೊಡುವ ಮೂಲದವರು ಮಿತ್ತಬೈಲಿನವರ ಕುಟುಂಬದವರಂತೆ. ದೆಯ್ಯು ಯಮುನಕ್ಕನಿಗೆ ಯಾವ ರೀತಿಯಲ್ಲೂ ಕಮ್ಮಿ ಇಲ್ಲದಂತಹ ಬಲಗೈ ಬಂಟ. ಅವನನ್ನು ಎದುರು ಹಾಕಿಕೊಳ್ಳುವ ಧೈರ್ಯ ಗುತ್ತಿನಲ್ಲಿ ಯಾರಿಗೂ ಇರಲಿಲ್ಲ.



ದೆಯ್ಯುನಲ್ಲಿ ಮಾತಾಡಿ ಬಂದ ಯಮುನಕ್ಕ ಸ್ನಾನ ಮಾಡಿ ಬಂದು ಸಂಜೆಯ ನೇಮಕ್ಕೆ ತಯಾರಾದರು. ಬಂದು ಗುಂಡದ ಮಲರಾಯನಿಗೆ ಕೈಮುಗಿದು ಚಾವಡಿಯಲ್ಲಿ ಕುಳಿತುಕೊಂಡರು. ಅಂಗಳದಲ್ಲಿ ನಡೆಯುವ ಯಾವ ಕೆಲಸವೂ ಅವರ ಕಣ್ಣಿಂದ ತಪ್ಪಿಸಿಕೊಳ್ಳುವುದಿಲ್ಲ.

ಹೊತ್ತು ಕಳೆಯುತ್ತಿರುವಂತೆಯೇ ಹೊನ್ನೆಣ್ಣೆಯ ದೀಪಗಳು, ಕೊರ್ಸಂಡಿ ಎಣ್ಣೆಯ ಸೊಡರುಗಳು, ಚಿಮಿಣಿ ಎಣ್ಣೆಯ ದೀಪಗಳು ಹೊತ್ತಿಕೊಂಡವು. ಅಂಗಳಕ್ಕೆ ಬಂದ ಮಡಿವಾಳ, ಮಡಿವಾಳಗಿತ್ತಿ ದೀವಟಿಗೆಗಳನ್ನು ತಯಾರು ಮಾಡಿದರು. ದೀವಟಿಗೆ ದರಿಗಳು ತಯಾರಾಗುವಾಗ ಚಂದು, ಭಂಡಾರ ಮಠದ ಭಂಡಾರಿಗಳು ಕಳುಹಿಸಿದ್ದ ಗ್ಯಾಸ್‌ಲೈಟ್‌ಗೆ ಚಿಮಿಣಿ ಎಣ್ಣೆ ಹಾಕಿ ಹೊತ್ತಿಸಲು ಶುರು ಮಾಡಿದ. ಭಂಡಾರಿಗಳು ಕಳುಹಿಸಿದ್ದ ಆ ಬೆಳಕು ಹೊತ್ತಿಸಿದರೆ ಊರಿಗೆ ಊರೇ ಹಗಲಾಗುತ್ತಿತ್ತು. ಪಂಜು, ದೀವಟಿಗೆ, ದರಿನಡೆಯ ದೀಪಗಳು ಹಾಗೂ ಗ್ಯಾಸ್‌ಲೈಟ್ ಹೊತ್ತಿಸಿದಾಗ ಅವುಗಳ ಬೆಳಕು ದೂರದ ಬೋಳಂಗಳದ ಪದವಿನಿಂದ ಆನೆಕಲ್ಲಿನ ತನಕ ಕಾಣಿಸುತ್ತಾ ನೇಮದ ಸುದ್ದಿ ಕೊಡುತ್ತಿತ್ತು.

ಸ್ವಲ್ಪ ಹೊತ್ತಾಗುವಾಗ ಒಕ್ಕಲಿನ ಬ್ಯಾರಿ ಬಂದ. ಅವನು ಬರುವುದನ್ನು ಚಾವಡಿಯಲ್ಲೇ ಕುಳಿತು ನೋಡುತ್ತಿದ್ದ ಯಮುನಕ್ಕ 'ಬ್ಯಾರಿಯೂ ಮುದುಕನಾದ' ಎಂದುಕೊಂಡರು. ಬ್ಯಾರಿ ಚಿಕ್ಕ ಹುಡುಗನಿದ್ದಾಗಲೇ ಯಮುನಕ್ಕನ ತಾಯಿ ಅವನಿಗೆ ಹೊಳೆ ಬದಿಯ ಹಿತ್ತಲಲ್ಲೊಂದು ಗುಡಿಸಲು ಕಟ್ಟಿಕೊಟ್ಟು ಮದುವೆ ಮಾಡಿಸಿದ್ದರು. ಮೊದಮೊದಲು ಗುತ್ತಿನ ಮನೆಯಲ್ಲಿ ಈ ಹುಡುಗನನ್ನು ಯಾರೂ ಹತ್ತಿರ ಸೇರಿಸಿಕೊಳ್ಳುತ್ತಿರಲಿಲ್ಲ. ಆದರೆ ಬ್ಯಾರಿ ಕ್ರಮೇಣ ಎಲ್ಲರ ಮನಸ್ಸನ್ನು ಗೆದ್ದುಕೊಂಡ. ಅವನಿಗೆ ತಿಳಿಯದ ವಿದ್ಯೆ ಇರಲಿಲ್ಲ. ಅವನು ಮಾಡದ ಕೆಲಸ ಇಲ್ಲ. ಯಮುನಕ್ಕನ ತಾಯಿಯ ಜನ ಅಂತ ದೂರ ಇಟ್ಟಿದ್ದ ಮಾಂಕರಾಲರಿಗೆ ಸಹ ಅವನು ಬಲಗೈ ಬಂಟನಾದ. ಹೊಳೆಯಲ್ಲಿ ಮೀನು ಹಿಡಿಯುವುದು, ಕಲ್ಲು ಒಡೆಯುವುದು, ಬೆಡಿಮದ್ದು ಕಟ್ಟಿ ಕೊಡುವುದು, ಪಾತ್ರೆಗಳಿಗೆ ಕಲಾಯಿ ಹಾಕಿ ಕೊಡುವುದು ಬ್ಯಾರಿ. ಜಾತ್ರೆ, ಮದುವೆಗಳಿಗೆ ಗರ್ನಲ್ ಸಿಡಿಮದ್ದು ಬ್ಯಾರಿಯ ಮನೆಯದ್ದು. ಜಾತ್ರೆಗೆ ಹೂವಿನ, ಕಿತ್ತಲೆ ಹಣ್ಣಿನ, ಖರ್ಜೂರದ ಸಂತೆ ಬ್ಯಾರಿಯದ್ದು. ಬ್ಯಾರಿ ಕೊನೆಗೆ ಮಿತ್ತಬೈಲಿನ ಸಾಯ್ಬನೇ ಆಗಿಹೋದ.

ಮಿತ್ತಬೈಲಿನ ರಾಜಕೀಯದಲ್ಲಿ ಬ್ಯಾರಿಯನ್ನು ಎಲ್ಲರೂ, ಯಮುನಕ್ಕನ ತಾಯಿಯ, ಅನಂತರ ಮಗಳ ಚಾಡಿಯವನೆಂದೇ ಕಾಣುತ್ತಿದ್ದರು. ಬ್ಯಾರಿ ಕೂಡಾ ತಾಯಿ ಮಗಳನಂತರ ಸುಬ್ಬಯಣ್ಣ, ರಾಮಣ್ಣರ ಮೆಚ್ಚುಗೆಯ ಬಂಟನಾಗಿದ್ದ. ಕೆಲವರು ಸುಬ್ಬಯಣ್ಣ ಸುಡುಮದ್ದು ಸ್ಫೋಟಿಸಿ ಸೇತುವೆ ಸಿಡಿಸಿದಾಗ ಮದ್ದಿನ ಕೆಲಸ ಮಾಡಿದವ ಬ್ಯಾರಿ ಅಂತ ಹೇಳುತ್ತಿದ್ದರು. ಊರು ಏನೇ ಹೇಳಲಿ, ಅವನಿಗೆ ಯಮುನಕ್ಕನೇ ಅಕ್ಕ, ಸುಬ್ಬಯಣ್ಣನೇ ತಮ್ಮ. ತಾಯಿ ತಂದೆ ಇಲ್ಲದ ಅವನಿಗೆ ಯಮುನಕ್ಕ, ಸುಬ್ಬಯಣ್ಣನವರಂತೆ ಚೋಮಕ್ಕನೇ ತಾಯಿಯಾಗಿದ್ದರು. ಬ್ಯಾರಿಗೆ ಇಬ್ಬರು ಗಂಡು, ಇಬ್ಬರು ಹೆಣ್ಣು ಮಕ್ಕಳು. ಹೆಣ್ಣು ಮಕ್ಕಳನ್ನು ಪಟ್ಟದ ಗುತ್ತಿನ

ಒಕ್ಕಲಲ್ಲಿದ್ದ ವ್ಯಾಪಾರಿಗಳಿಗೆ ಕೊಟ್ಟಿದ್ದ. ಗಂಡು ಮಕ್ಕಳಲ್ಲಿ ಒಬ್ಬನನ್ನು ಯಮುನಕ್ಕ ಮಂಜೇಶ್ವರದ ಭಂಡಾರಿಗಳ ಮನೆಯಲ್ಲಿ ಕೆಲಸಕ್ಕೆ ಇಟ್ಟಿದ್ದರು. ಚಿಕ್ಕವ ತಂದೆಯ ಎಲ್ಲಾ ಕೆಲಸಗಳನ್ನು ಕಲಿತು ಮಿತ್ತಬೈಲಿನಲ್ಲೇ ಇದ್ದ.

ಬ್ಯಾರಿಯೂ, ಮಗನೂ ಬಂದು ಯಮುನಕ್ಕನ ಕಾಲು ಮುಟ್ಟಿ, ರಾಮಣ್ಣನಿಗೆ ಸಲಾಂ ಹೇಳಿ ಸುಡುಮದ್ದು ಸಿಡಿಸುವ ತಯಾರಿಗೆ ತೊಡಗಿದರು. ಎರಡು ಗರ್ನಲ್ ಸಿಡಿಸಿ ದುರ್ಸು, ಕದನಿಗಳನ್ನು ಅಂಗಳದ ಮೂಲೆಯಲ್ಲಿ ಹೂತಿಟ್ಟರು. ಮಗ ಒಂದಟ್ಟಿ ಮಂಗಳೂರು ಮಲ್ಲಿಗೆ ಹೂ ತಂದು ಒಳಗಿನ ಹೆಂಗಸರಿಗೆ ಕೊಟ್ಟು ಹೂವಿನ ಕೈಬುಟ್ಟಿಯನ್ನು ಭೂತದಲ್ಲಿಗೆ ತಂದಿಟ್ಟ.

ಗಳಿಗೆ ಕಳೆಯುವಾಗ ನಲಿಕೆಯವನೂ ನಲಿಕೆಯವಳೂ ಅಂಗಳದ ಪಕ್ಕ ಬಂದು ಅಡ್ಡಬಿದ್ದರು.

''ಒಡತಿಯೇ, ನಿಮ್ಮ ಅಪ್ಪಣೆ ಆದರೆ ಪುದ್ವಾರ್‌ದೆಚ್ಚಿ ನೇಮಕ್ಕೆ ಎಣ್ಣೆ ತೆಗೆದುಕೊಳ್ಳುತ್ತೇನೆ''.

''ಇದು ಕಟ್ಟುಕಟ್ಟಳೆಯ ನೇಮ. ಬೇಗ ಮಾಡಿ ಮುಗಿಸಿ. ನಿನ್ನೆಯೂ ನಿದ್ದೆ ಇರಲಿಲ್ಲ''.

''ಬೇಗ ಮುಗಿಸುತ್ತೇವೆ ಒಡತಿ. ದುಗ್ಗ ಒಡೆಯರು ಆಗಲೇ ಹೇಳಿದ್ದಾರೆ''.

ದುಗ್ಗಪ್ಪ ಹೇಳಿದ್ದಾನೆಂದು ಹೇಳಿದಾಗ ಯಮುನಕ್ಕ ಮನಸ್ಸಲ್ಲೇ ನಕ್ಕರು. ದುಗ್ಗಪ್ಪ ಹೇಳಿದರೆ ಸ್ವಲ್ಪ ಜೋರಾಗಿಯೇ ಹೇಳಿರಬೇಕು. ದುಗ್ಗಪ್ಪನ ಕ್ರಮವೇ ಹಾಗೆ. ರಟ್ಟೆಯಲ್ಲಿ ಕಲ್ಲು ಒಡೆಯುವ ತ್ರಾಣ, ಮೂಗಿನ ತುದಿಯಲ್ಲಿ ಊರು ನಾಶ ಗೈಯುವ ಕೋಪ. ಬೇಸಾಯದ ಉಸ್ತುವಾರಿ, ಊರಲ್ಲಿ ಸಣ್ಣಪುಟ್ಟ ಕಾರುಬಾರುಗಳು ದುಗ್ಗಪ್ಪನದು. ಗುತ್ತಿನ ತುಂಡು ಯುವಕರಿಗೆ, ಊರಿನ ಸುತ್ತುಮುತ್ತಲ ಯುವಕರಿಗೆಲ್ಲಾ ಅವನೇ ನಾಯಕ. ಇಪ್ಪತ್ತೈದು ವರ್ಷದ ಯುವಕನಿಗೆ ಕಬ್ಬಿಣ ತಿಂದರೂ ಜೀರ್ಣಿಸಿಕೊಳ್ಳುವ ಹಸಿವು. ಕಬ್ಬಿಣದ ಸರಳನ್ನೂ ಬಗ್ಗಿಸುವ ಶಕ್ತಿ. ಕಂಬಳದ ಕೋಣಗಳನ್ನು ನೊಗದಲ್ಲಿ ಹಿಡಿದು ನಿಲ್ಲಿಸಿದ ಎಂದಾದರೆ ಅವುಗಳ ಹೆಜ್ಜೆ ಮಿಸುಕಾಡದು. ಅವನ ಶಕ್ತಿಯಷ್ಟೇ ಕತೆಗಳೂ ಅವನ ಮುಂಗೋಪದ್ದು. ನೆಕ್ಕರೆ ಮಾವಿನ ಮರಕ್ಕೆ ಒದ್ದ ಎಂದಾದರೆ ಎಳೆಯ ಮಿಡಿ ಸಹ ಉದುರಬೇಕು. ಮುಂಗೋಪ ಅದಕ್ಕಿಂತಲೂ ದೊಡ್ಡದು. ಅವನ ಹೆಚ್ಚಿನ ವ್ಯವಹಾರಗಳು ಪೆಟ್ಟೊಂದು ತುಂಡು ಎರಡು ಅಂದ ಹಾಗೆ. ಯಮುನಕ್ಕನ ತಂದೆ ಸಾಯುವಾಗ ಅವನನ್ನು ಅವರ ಕೈಯಲ್ಲಿಟ್ಟು ಹೋಗಿದ್ದರು. ಹಾಗಾಗಿ ಅವನಿಗೆ ಅವರಲ್ಲಿ ಲೆಕ್ಕಕ್ಕಿಂತ ಹೆಚ್ಚಿನ ಸಲಿಗೆ. ಅವರಿಗೆ ರಾಮಣ್ಣನಿಗಿಂತಲೂ ಹೆಚ್ಚು ಪ್ರೀತಿ ಅವನಲ್ಲಿ, ಸಾಮಾನ್ಯವಾಗಿ ಯಾರೂ ಅವನ ತಂಟೆಗೆ ಬರಲಾರರು. ಬಂದರೂ ಅವನನ್ನು ಎದುರು ಹಾಕಿಕೊಳ್ಳುವವರು ಕಡಿಮೆ. ಅಂತಹ ದುಗ್ಗಪ್ಪ ನಲಿಕೆಯವನಿಗೆ ಹೇಳಿದ್ದಾನೆ ಎಂದಾದರೆ ಹೇಗೆ ಹೇಳಿರಬಹುದೆಂದು ಅವರಿಗೆ ಗೊತ್ತಿತ್ತು. ನಲಿಕೆಯವನ ಗರ್ಭದಲ್ಲಿ ಚಳಿ ಹಿಡಿದಿರಬಹುದು.



ಅವನ ಹಿಂದಿನಿಂದ ಬಂದ ಅಮ್ಮಣ ಪೂಜಾರಿ ಕೈಮುಗಿದು ನೇಮದ ತಯಾರಿಗೆ ಅಪ್ಪಣೆ ಕೇಳಿಕೊಂಡಾಗ ಯಮುನಕ್ಕ ದುಗ್ಗಪ್ಪನನ್ನು ಕರೆದು ಹೇಳಿದರು.

''ದುಗ್ಗಪ್ಪಾ, ನೋಡು ಅಮ್ಮಣ ಪೂಜಾರಿ ಬಂದ. ನೇಮಕ್ಕೆ ತಯಾರಿ ಮಾಡುತ್ತಿದ್ದಾನೆ. ಅವನಿಗೂ ಹೇಳುವಂತಹದು ಹೇಳಿಬಿಡು. ಒಟ್ಟಾರೆ ನೇಮ ಬೇಗ ಮುಗಿಯಬೇಕು''.

ಅಮ್ಮಣ ಪೂಜಾರಿಗೆ ದುಗ್ಗಪ್ಪನಲ್ಲಿ ಕರೆದು ಹೇಳಿದ ಮಾತು ಕೇಳಿ ಚೇಳು ಕಚ್ಚಿದಂತಾಯಿತು. ದುಗ್ಗಪ್ಪ ಬಂದು ಗುಂಡದ ಬದಿಯಲ್ಲಿ ಕಾಸರಕನ ಮರದ ಕೋಲೊಂದನ್ನು ಹಿಡಿದು ಕುಳಿತುಕೊಂಡನು.

ವಾದ್ಯದ ರಾಮು, ಬೆಳ್ಗೊಡೆಯ ಫಕೀರ, ಬಸವನನ್ನು ಹಿಡಿದುಕೊಂಡು ಬಂದ ನರ್ಸಪ್ಪ, ಮುಖವಾಡ ಹಿಡಿಯುವ ಪಕ್ರು, ಆಭರಣಗಳ ಪೆಟ್ಟಿಗೆ ಹಿಡಿದುಕೊಂಡು ಬಂದ ಐತಪ್ಪ ಎಲ್ಲರೂ ಯಜಮಾನಿಯ ಕಾಲಿಗೆ ಬಿದ್ದು ಗುಂಡದ ಪಕ್ಕದಲ್ಲಿ ನಿಂತಾಗ, ತಂತ್ರಿಯವರು ಬಂದರು.

''ಹೇಗಿದ್ದಿ ಯಮುನಕ್ಕ? ಎಲ್ಲರೂ ಕ್ಷೇಮವಲ್ಲವೇ? ಗದ್ದೆ ಗೋರುವ ಕಂಬಳ ಭಾರೀ ಗೌಜಿಯಲ್ಲಿ ನಡೆಯಿತಂತೆ. ಕೇಳಿ ಹಾಲು ಕುಡಿದಷ್ಟು ಸಂತೋಷವಾಯಿತು''.

ತಂತ್ರಿಯವರು ಅಷ್ಟು ಹೇಳಿದಾಗ ಚಾವಡಿಯಲ್ಲಿದ್ದ ಯಮುನಕ್ಕ ಅಂಗಳ ಇಳಿದು ಅವರ ಕಾಲಿಗೆ ನಮಸ್ಕಾರ ಮಾಡಿದರು.

''ಛೇ ಛೇ ಪರವಾಯಿಲ್ಲ, ನೀನು ಮಿತ್ತಬೈಲು ಗುತ್ತಿನ ಯಜಮಾನಿ. ಚಾವಡಿಯಲ್ಲೇ ಕುಳಿತುಕೊಂಡರೆ ಸಾಕು. ನೀನು ನನಗೆ ತಂಗಿಯಂತೆ. ತಗೋ, ಅನ್ನಪೂರ್ಣೇಶ್ವರಿ ದೇವಿಯ ಪ್ರಸಾದ. ನಿನ್ನ ಹೆಸರಲ್ಲಿ ಪೂಜೆ ಮಾಡಿಸಿಕೊಂಡು ಬಂದಿದ್ದೇನೆ''.

ಒಂದು ತುಂಡು ಮಲ್ಲಿಗೆಯನ್ನೂ, ಪಂಚಕಜ್ಜಾಯವನ್ನೂ ಅವರ ಕೈಯಲ್ಲಿ ಹಾಕಿ ಎರಡು ಅಕ್ಷತೆಯ ಕಾಳನ್ನು ಅವರ ತಲೆಗೆ ಹಾಕಿದರು.

''ಶುಭವಾಗಲಿ, ಅನ್ನಪೂರ್ಣೇಶ್ವರಿ ಸದಾ ನಿನ್ನ ಕೈಯಲ್ಲಿ ಊರಿಗೆ ಅನ್ನ ಕೊಡುವ ಭಾಗ್ಯ ನೀಡಲಿ. ಆ ಮಲರಾಯನೂ ಅನ್ನಪೂರ್ಣೇಶ್ವರಿಯೂ ನಿನಗೂ ನಿನ್ನ ಕುಟುಂಬಕ್ಕೂ ಸದಾ ಆಯುರಾರೋಗ್ಯ ಸಂಪತ್ತು ಕೊಡಲಿ''.

ರಾಮಣ್ಣ ಎಳನೀರು ಕೆತ್ತಿಸಿ ತಂದು ತಂತ್ರಿಗಳೆದುರು ಇಟ್ಟು ಕಾಲಿಗೆ ಬಿದ್ದ. ಎಳನೀರು ಕುಡಿದು ಕುಳಿತ ತಂತ್ರಿಯವರಿಗೆ ಯಮುನಕ್ಕ ಎಲೆಅಡಿಕೆಯೊಂದಿಗೆ ನಾಲ್ಕು ವರಹವನ್ನೂ ಇಟ್ಟು ಕೈಮುಗಿದರು.

''ಇದು ಯಾಕೆ ಯಮುನಾ?''

''ನನ್ನ ಹೆಸರಲ್ಲಿ ಒಪ್ಪಿಸಿಕೊಳ್ಳಬೇಕು''

''ಆ ಪೂಜೆಗೆ ಒಟ್ಟು ಖರ್ಚು ನಾಲ್ಕಾಣೆ. ಅದರಲ್ಲಿ ಈ ಬ್ರಾಹ್ಮಣನ ದಕ್ಷಿಣೆಯೂ

ಬಂತು. ನೀನು ಅದಕ್ಕೆ ನಾಲ್ಕು ವರಹವನ್ನು ಯಾಕೆ ಕೊಡಬೇಕು?''

''ಉಳಿದ ಹಣದಲ್ಲಿ ನಾಲ್ಕು ಬ್ರಾಹ್ಮಣರಿಗೆ ನಾಲ್ಕು ದಿನ ಊಟ ಹಾಕಿಸಿ. ಉಂಡ ಬ್ರಾಹ್ಮಣರ ಆಶೀರ್ವಾದ ಮಿತ್ತಬೈಲು ಕುಟುಂಬವನ್ನು ಕಾಯುವ ಬೇಲಿಯಾಗಿ ಇರಲಿ''.

ತಂತ್ರಿಯವರು ಹಣವನ್ನು ಮಡಿಲಲ್ಲಿ ಕಟ್ಟಿಕ್ಕೊಂಡು ನಕ್ಕು ಕೇಳಿದರು,

''ನಿನಗಾಗಲೀ, ಮಿತ್ತಬೈಲಿನ ಕುಟುಂಬಕ್ಕಾಗಲೀ ಬಡಾಜೆಯ ತಂತ್ರಿಯವರ ಆಶೀರ್ವಾದ ದುಡ್ಡು ಕೊಟ್ಟರೆ ಮಾತ್ರ ಸಿಗುವುದಾ? ಯಾವಾಗ ನಿನ್ನ ಹಿರಿಯವ ಅಂದು ನನ್ನ ಹಿರಿಯವನ ಅಪ್ಪಣೆ ತೆಗೆದುಕೊಂಡು ಈ ಭೂಮಿಗೆ ಕಾಲಿಟ್ಟನೋ ಅಂದಿನಿಂದ ಬಡಾಜೆ ತಂತ್ರಿಯವರ ಕುಟುಂಬದವರ ಆಶೀರ್ವಾದ ನಿಮ್ಮ ಮೇಲೆ ನಿಲ್ಲದೆ ಹರಿದು ಬರುತ್ತಿದೆ. ಅದು ಯಾವತ್ತೂ ಕಡಿಮೆಯಾಗಿಲ್ಲ, ಇನ್ನು ಮುಂದೆಯೂ ಕಡಿಮೆ ಯಾಗುವುದಿಲ್ಲ, ಹಾಂ, ಈ ವರ್ಷದ ರಾಮನವಮಿಯ ಪೂಜೆಯಂದು ನಿಮ್ಮ ಪೂಜೆ ಯಲ್ಲದೆ ನಾನು ನಿನ್ನ ಹೆಸರಲ್ಲೊಂದು ಮಂಡಲಪೂಜೆಯ ಸಂಕಲ್ಪ ಮಾಡಿಕೊಂಡಿದ್ದೇನೆ. ಅದಕ್ಕೆ ನೀವೆಲ್ಲ ಕುಟುಂಬದವರು ಬರಬೇಕು. ಅದರ ತಯಾರಿ ನಾನು ಮಾಡುತ್ತೇನೆ. ಪೂಜೆಗೆ ನೀನೂ ಸುಬ್ಬಯನೂ ಕುಳಿತುಕೊಳ್ಳಬೇಕು. ಅದರ ಮರುದಿನವೇ ಅವನಿಗೆ ಕಣ್ವತೀರ್ಥದ ಪುಣ್ಯನೀರನ್ನೂ ಹಾಕಬೇಕು. ನೆನಪಿರಲಿ''.

ಯಮುನಕ್ಕನಿಗೆ ಆಶ್ಚರ್ಯವಾಯಿತು. ಸುಬ್ಬಯಣ್ಣ ಎಲ್ಲಿದ್ದಾರೆಂದೇ ಯಾರಿಗೂ ಗೊತ್ತಿಲ್ಲ, ಯಾವಾಗ ಬರುವರೆಂದೂ ಯಾರಿಗೂ ತಿಳಿದಿಲ್ಲ, ಅವರು ಗಾಂಧೀಜಿಯ ಜೊತೆ ಬಂಗಾಳದ ಯಾವುದೋ ಒಂದು ಊರಲ್ಲಿದ್ದಾರೆಂದು ಯಾರೋ ಹೇಳಿದ ಮಾತು. ಅಂತಹದರಲ್ಲಿ ಅವರಿಗೆ ಪುಣ್ಯನೀರು ಹಾಕುವ ಮಾತು ತಂತ್ರಿಯವರು ಹೇಳಿದರು. ಪುಣ್ಯನೀರು ಹಾಕುವುದು ಮನೆಯ ಯಜಮಾನಿಕೆ ವಹಿಸಿಕೊಳ್ಳುವ ದಿನ ಎಂದು ಯಮುನಕ್ಕನಿಗೆ ಗೊತ್ತಿತ್ತು. ತಂತ್ರಿಯವರು ಯಾರಿಗೂ ಹೇಳುವುದಿಲ್ಲವಾದರೂ ದೊಡ್ಡ ಜ್ಯೋತಿಷಿ ಎಂಬುದು ಲೋಕಕ್ಕೇ ಗೊತ್ತಿರುವ ವಿಷಯ. ಅವರು ಹೇಳಿದ ಮಾತು ಕೇಳಿದ ಕೂಡಲೇ ಯಮುನಕ್ಕ ಕಣ್ಣೊರಸಿಕೊಂಡು ತಂತ್ರಿಯವರ ಕಾಲಿಗೆ ಬಿದ್ದು,

''ನಿಮ್ಮ ಬಾಯಿಗೆ ಸಕ್ಕರೆ ಬೀಳಲಿ ಸ್ವಾಮೀ'' ಎಂದರು.

''ಎಲ್ಲ ಒಳ್ಳೆಯದಾಗುತ್ತದೆ. ಕಾಲ ಕೂಡಿ ಬಂದಿದೆ. ದೈವ-ದೇವರುಗಳು ನಿಮ್ಮ ಕೈಹಿಡಿದು ನಡೆಸುತ್ತಾರೆ. ಹೆದರಬೇಡ, ಏಳು, ಇನ್ನು ನೇಮಕ್ಕೆ ತಯಾರಾಗೋಣ. ಗುಂಡ ದಲ್ಲಿ ದೀಪ-ಧೂಪ ತೋರಿಸಿ ಭಂಡಾರ ಇಳಿಸಿಕೊಟ್ಟು ನಾನು ಹೋದರೆ ಆಗಲಿಕ್ಕಿಲ್ಲವೋ ಯಮುನಾ?''

''ಸ್ವಾಮಿಗಳು ಇಂದು ನೇಮ ಮುಗಿಯುವವರೆಗೆ ಇದ್ದರೆ ಒಳ್ಳೆಯದಿತ್ತು''.

ಯಮುನಕ್ಕ ಅಷ್ಟು ಹೇಳುವಾಗ ಗುಂಡದ ಕಡೆ ಹೆಜ್ಜೆಯಿಟ್ಟ ತಂತ್ರಿಗಳು ಯಮುನಕ್ಕನ ಮುಖ ನೋಡಿದರು. ಮುಖದಲ್ಲಿ ಆತಂಕದ ಛಾಯೆ ಕಂಡು ಹೇಳಿದರು,

''ಹೆದರಬೇಡ, ಎಲ್ಲ ಸರಿಯಾಗುತ್ತದೆ. ಆಗಲಿ, ನಾನು ನೇಮ ಮುಗಿದೇ



ಹೋಗುತ್ತೇನೆ. ಕತ್ತಲೆಯಲ್ಲಿ ಹಿಂದೆ ಹೋಗುವಾಗ ನನಗೊಂದು ಜನ ಕೊಡಬೇಕು''.

''ದುಗ್ಗಪ್ಪನೇ ನಿಮ್ಮನ್ನು ಬಿಟ್ಟು ಬರುತ್ತಾನೆ''.

''ದುಗ್ಗಪ್ಪ! ಅವನ ಅಗತ್ಯವಿಲ್ಲ ಮಾರಾಯಿತಿ, ಭೂತದ ಚಾಕರಿಯವರನ್ನು ಯಾರನ್ನಾದರೂ ಕಳುಹಿಸಿದರೆ ಧಾರಾಳ ಸಾಕು. ಅಲ್ಲ, ನಿನಗೆ ಸಮಾಧಾನ ಇಲ್ಲದಿದ್ದರೆ ನೀನು ಅವನನ್ನೇ ಕಳುಹಿಸು''.

ತಂತ್ರಿಯವರು ಗುಂಡದ ಒಳಗೆ ಹೋಗಿ ಮಂಚದಲ್ಲಿದ್ದ ಭೂತದ ಮುಖವಾಡ, ಖಡ್ಗಕ್ಕೆ ಧೂಪ ತೋರಿಸಿ, ಆರತಿ ಬೆಳಗುವಾಗ ಕುಟುಂಬದವರು ಗುಂಡದ ಮುಂದೆ ನಿಂತುಕೊಂಡರು. ಕೊಂಬು, ವಾದ್ಯ ಮೊಳಗಿ. ಗರ್ನಾಲ್ ಸಿಡಿಯಿತು. ಖಡ್ಗ, ಭೂತದ ಮುಖವಾಡ, ಚಾಮರ, ಕೊಡೆಗಳನ್ನು ಭೂತದ ಚಾಕರಿಯವರು ಒಬ್ಬೊಬ್ಬರೇ ಹಿಡಿದುಕೊಂಡು ಬಂದು ಅಂಗಳದಲ್ಲಿ ಸಾಲು ನಿಂತರು. ದರಿಯ ದೀಪ ಹೊತ್ತಿಸಿದರು. ಭೂತದ ಪಾತ್ರಿ ಒಬ್ಬೊಬ್ಬರನ್ನೇ ಕರೆಯುತ್ತಾ ಸುತ್ತಮುತ್ತ ನೋಡಿದ. ಎಲ್ಲರನ್ನೂ ವಿಚಾರಿಸಿ ತ್ಯಾಂಪಣ್ಣನನ್ನು ಹುಡುಕುವಾಗ ಅವನ ಕಣ್ಣಿಗೆ ಬಿದ್ದದ್ದು ಬಾಳುಕತ್ತಿ ಸೊಂಟಕ್ಕೆ ಸಿಕ್ಕಿಸಿಕೊಂಡು, ಕಾಸರಕನ ಮರದ ಕೋಲು ಹಿಡಿದುಕೊಂಡು ನಿಂತಿದ್ದ ದುಗ್ಗಪ್ಪ. ಎದೆ ಬಡಿತ ನಿಂತಂತಾಯಿತು ಅಮ್ಮಣನಿಗೆ. ಪಕ್ಕಕ್ಕೆ ತಿರುಗಿ ತಂತ್ರಿಯವರಲ್ಲಿ ಕಾಲಾವಧಿಯ ಪುದ್ವಾರ್‌ದೆಚ್ಚಿದ ನೇಮಕ್ಕೆ ಅನುಮತಿ ಕೇಳಿಕೊಂಡ. ತಂತ್ರಿಯವರು ''ಇಂದಿನ ನೇಮ ಕುಟುಂಬದವರು ಕೊಡುವ ಕಟ್ಟುಕಟ್ಟಳೆಯ ಪುದ್ವಾರ್‌ದೆಚ್ಚಿದ ನೇಮ. ಹಾಗಾಗಿ ಇದನ್ನು ಒಳ್ಳೆಯ ರೀತಿಯಲ್ಲಿ ಸ್ವೀಕರಿಸಿ ಕುಟುಂಬದ ಸರ್ವರಿಗೂ ಮುಂದಿನ ವರ್ಷದಲ್ಲಿ ಒಳ್ಳೆಯದಾಗಲಿ ಎಂದು ಅಪ್ಪಣೆ ಕೊಟ್ಟರೆ ಸತ್ಯಕ್ಕೆ ಕೀರ್ತಿ ಬರಬಹುದು'' ಎಂದು ಹೇಳಿ ಗಿಂಡಿಯ ನೀರು ಚಿಮುಕಿಸಿದರು.

ಭೂತದ ಚಾಕರಿಯವರು ಭಂಡಾರವನ್ನು ಅಂಗಳದಲ್ಲಿ ಕಟ್ಟಿದ್ದ ಪವಿತ್ರ ಪೀಠದ ಮೇಲಿಟ್ಟು ಭಂಡಾರ ಇಳಿಸುವ ಕೆಲಸ ಮುಗಿಸಿದರು. ರಾತ್ರಿಯ ಊಟಕ್ಕೆ ಎಲ್ಲರೂ ತಯಾರಾದರು.

ರಾತ್ರಿಯ ಊಟಕ್ಕೆ ಮಧು ಪುದ್ವಾರ್ ಎಂದು ಹೇಳುತ್ತಿದ್ದರು. ಒಳಗಿನ ಕೋಣೆಯಲ್ಲಿ 16 ಎಲೆಗಳಲ್ಲಿ ಗತಿಸಿದ ಹಿರಿಯರಿಗೆ ಮೀನು, ಕೋಳಿ ಬಡಿಸಿ, ದೊಡ್ಡವರು ಚಾವಡಿಯ ಜಗಲಿಯಲ್ಲಿ, ಯುವಕರು ಒಳಗಿನ ಊಟದ ಕೋಣೆಯಲ್ಲಿ ಊಟಕ್ಕೆ ತಯಾರಾದರು. ಕೆಲಸದವರು ಚಪ್ಪರದಲ್ಲಿ ಕುಳಿತುಕೊಂಡರು. ಮಕ್ಕಳು, ಗತಿಸಿದ ಹಿರಿಯರಿಗೆ ಬಡಿಸಿದ್ದ 16 ಎಲೆಗಳನ್ನು ತಂದು ಹಂಚಿಕೊಂಡರು.

ಗರಡಿಯಲ್ಲಿ ಕುಳಿತಿದ್ದ ತಂತ್ರಿಯವರಿಗೆ ಬಾಳೆಹಣ್ಣು, ಎಳನೀರು ತಂದುಕೊಟ್ಟರು. ಸಾಕೆಂದರೂ ಕೇಳದೆ ಯಮುನಕ್ಕ ನಾಲ್ಕು ಬಾಳೆಹಣ್ಣು ಜಾಸ್ತಿ ಹಾಕಿದರು.

ಅಂಗಳದಲ್ಲಿ ಒಕ್ಕಲಿನವರ, ಇತರರ ಊಟವಾಗಿ ಅಂಗಳ ಗುಡಿಸಿ ಸೆಗಣಿ ನೀರು ಚಿಮುಕಿಸಿ, ಹೆಂಗಸರಿಗೂ ಮಕ್ಕಳಿಗೂ ನೇಮ ನೋಡಲು ಕುಳಿತುಕೊಳ್ಳುವ ಚಾಪೆ

ಹಾಸಿದರು. ಅಷ್ಟರಲ್ಲಿ ನಲಿಕೆಯವ ಮುಖಕ್ಕೆ ಅರದಾಳ ಹಚ್ಚಿ ಸುಣ್ಣದ ಬೊಟ್ಟು ಇಡಲು ಪ್ರಾರಂಭಿಸಿದ.

ಆಗಲೇ ನಡೆಯಲ್ಲಿ ತ್ಯಾಂಪಣ್ಣ ಶೆಟ್ಟರು ಬರುವುದು ಕಾಣಿಸಿತು. ಅಮ್ಮಣ ಪೂಜಾರಿ ಏಳುವಾಗ ದುಗ್ಗಪ್ಪ ಅವನನ್ನು ಅಲ್ಲೇ ತಡೆದು ಕುಳ್ಳಿರಿಸಿ, ನಡೆಗೆ ಹೊರಟದ್ದು ನೋಡಿ, ರಾಮಣ್ಣ ಸ್ವತಃ ಬಂದು ಅವರನ್ನು ಎದುರುಗೊಂಡ.

''ಮಧು ಪುದ್ವಾರ್‌ನ ಊಟಕ್ಕೆ ಏಳಬೇಕು. ನಮ್ಮದು ಈಗ ಮುಗಿಸಿ ಎದ್ದದ್ದಷ್ಟೇ'' ಎಂದ.

ಬೇಡ ಮಹಾರಾಯ, ನಾನು ಮನೆಯಲ್ಲಿ ಊಟ ಮುಗಿಸಿ ತೋಟದ ಕಡೆ ಬಂದೆ. ಬರುವಾಗ ಗರ್ನಾಲ್, ಕೊಂಬು ಕೇಳಿಸಿತು. ಪುದ್ವಾರ್‌ದೆಚ್ಚಿ ನೇಮ ಅಂತ ನೆನಪಾಯಿತು. ನೋಡಿ ಬರುವಾ ಅಂತ ಹೊರಟೆ. ಭಂಡಾರ ಇಳಿಸಿ ತುಂಬ ಹೊತ್ತಾಯಿತಾ?''

ತ್ಯಾಂಪಣ್ಣ ಅತ್ತಿತ್ತ ಕಣ್ಣು ಹಾಯಿಸಿದ. ಕುಳಿತು ಗಂಧ ಅರೆಯುತ್ತಿದ್ದ ಅಮ್ಮಣ ಪೂಜಾರಿಯನ್ನೂ, ಪಕ್ಕದಲ್ಲೇ ಕುಳಿತಿದ್ದ ದುಗ್ಗಪ್ಪನನ್ನೂ ನೋಡಿದ.

''ಸ್ವಲ್ಪ ಹೊತ್ತಾಯಿತು. ಕಟ್ಟುಕಟ್ಟಳೆಯ ನೇಮ ಅಲ್ವಾ, ತಂತ್ರಿಯವರಿಗೂ ತಡ ವಾಗುತ್ತದೆಂದು ಬೇಗ ಪ್ರಾರಂಭಿಸಿದೆವು. ಹೊರಗಿನವರು ಯಾರನ್ನೂ ಕಾಯಲಿಕ್ಕಿಲ್ಲವಲ್ಲಾ?''

''ಓಹೋ ತಂತ್ರಿಯವರು ಬಂದಿದ್ದಾರಾ? ಗಡಿ ಹಿಡಿಯುವವರು ಇಲ್ಲದೆ ಧೂಪ ಕೊಡಲು ನೀವೇ ಬರಬೇಕಾಗಿ ಬಂತಲ್ಲವೇ?''

''ಹೌದು, ನಾನು ಯಾವಾಗಿನಂತೆಯೇ ಬೇಗ ಬಂದಿದ್ದೆ. ತ್ಯಾಂಪಣ್ಣ ಶೆಟ್ರು ಈ ನೇಮಕ್ಕೆ ಪ್ರಥಮ ಬಾರಿಗೆ ಬರುತ್ತಿರುವುದು ಅಲ್ಲವೇ? ನಿಮಗೆ ಗೊತ್ತಿಲ್ಲ ಕಾಣುತ್ತದೆ. ಭಂಡಾರ ಇಳಿಸಿಕೊಡುವುದು ಗಡಿ ಹಿಡಿಯುವವರಲ್ಲ, ತಂತ್ರಿಯವರೇ. ಮಾಂಕರಾಲ ಗಡಿ ಹಿಡಿಯುವವನಾಗಿರುವಾಗಲೂ ಭಂಡಾರ ತಂತ್ರಿಗಳೇ ಇಳಿಸಿ ಕೊಡುತ್ತಿದ್ದುದು. ಮತ್ತೇ, ಮಾಂಕರಾಲ ಈ ಮನೆಯ ನೇಮಕ್ಕೆ ನಿಮ್ಮನ್ನು, ಊರವರನ್ನು ಬರಲು ಬಿಡುತ್ತಿರಲಿಲ್ಲ ಅಲ್ಲವೇ...?''

''ಓ! ಹೌದಪ್ಪಾ, ನಾವೆಲ್ಲ ಬೈಲಿನ ಬಂಡಿಯ ನೇಮಕ್ಕೆ ಮಾತ್ರ ಬರುತ್ತಿದ್ದುದು. ನಾನು ಚಿಕ್ಕವನಿದ್ದಾಗ ಒಂದೆರಡು ಸಲ ಬಂದಿದ್ದೆ''.

ತ್ಯಾಂಪಣ್ಣನಿಗೆ ತಂತ್ರಿಯವರು ಹೇಳಿದ ಮಾತಿನ ಅರ್ಥವಾಗಿತ್ತು. 'ನೀನು ಬಂದದ್ದು ಅಧಿಕಪ್ರಸಂಗ' ಎಂದು ಅವರ ಮಾತಿನಲ್ಲಿ ತಿಳಿಯುತ್ತಿತ್ತು. ತ್ಯಾಂಪಣ್ಣ ದುಗ್ಗಪ್ಪನತ್ತ ನೋಡಿ ಕೇಳಿದ,

''ಏನು ದುಗ್ಗಪ್ಪ ಕತ್ತಿ, ಬೆತ್ತ ಹಿಡಿದುಕೊಂಡು?''

''ಅವನು ತಂತ್ರಿಯವರನ್ನು ಮನೆ ತನಕ ಬಿಟ್ಟು ಬರಲೆಂದು ಕುಳಿತದ್ದು''

ದುಗ್ಗಪ್ಪ ಏನಾದರೂ ಪೆದಂಬು ಮಾತನಾಡುವುದಕ್ಕೆ ಮೊದಲೇ ರಾಮಣ್ಣ ಬಾಯಿ



ಹಾಕಿದ.

''ಓ ಹಾಗಾ, ನಾನು ಏನಾದರೂ ಜಗಳಕ್ಕೆ ತಯಾರು ಮಾಡಿಕೊಂಡು ಕುಳಿತಿದ್ದಾನೇನೋ ಅಂತ ಎಣಿಸಿದೆ'' ತ್ಯಾಂಪಣ್ಣ ಬಿಡದೆ ಅಧಿಕಪ್ರಸಂಗ ಮಾತಾಡಿದ.

''ಅದಕ್ಕೂ ತಯಾರಾಗಿಯೇ ಕುಳಿತದ್ದು. ಯಾರಾದರೂ ಹಾದರಕ್ಕೆ ಹುಟ್ಟಿದವರು ಏನಾದರೂ ಅಧಿಕಪ್ರಸಂಗ ಮಾಡಿದರೆ ಬಡಿದು ಅವರ ಕಾಲು ತುಂಡರಿಸಬೇಕೂಂತಿದ್ದೇನೆ'' ದುಗ್ಗಪ್ಪ ಎದ್ದು ನಿಂತು ದುರುಗುಟ್ಟಿ ನೋಡಿದ.

ತ್ಯಾಂಪಣ್ಣನಿಗೆ ಕಣಜದ ಹುಳದ ಗೂಡಿಗೆ ಕೈಹಾಕಿದಂತಾಯಿತು. ಬೇಗ ಸುಧಾರಿಸಿಕೊಂಡ.

''ನಿನ್ನಲ್ಲಿ ಅಧಿಕಪ್ರಸಂಗ ಮಾಡಲು ಹೊರಟವನಿಗೆ ಬುದ್ಧಿಯಿಲ್ಲ, ಅಷ್ಟು ಧೈರ್ಯ ಇರುವ ಮಲೆಮೂರ್ಖ ಈ ಮಾಗಣೆಯಲ್ಲಿ ಯಾರಿದ್ದಾರೆ ಮಾರಾಯ? ಬಿಡು, ನಾನು ಯಜಮಾನಿಯಲ್ಲಿ ಎರಡು ಮಾತನಾಡಿ ಹೋಗಿಬಿಡುತ್ತೇನೆ. ರಾಮಣ್ಣಾ, ತಾಯಿ ಎಲ್ಲಿದ್ದಾರೆ ಮಗಾ?''

''ಅಲ್ಲಿ, ಚಾವಡಿಯಲ್ಲಿದ್ದಾರೆ. ಬನ್ನಿ''

ರಾಮಣ್ಣ ತ್ಯಾಂಪಣ್ಣನನ್ನು ಕರೆದುಕೊಂಡು ಚಾವಡಿಯ ಕಡೆಗೆ ನಡೆದ. ಗರಡಿ ಯಲ್ಲಿದ್ದ ತಂತ್ರಿಯವರು ಕಿಸಕ್ಕ ನಕ್ಕು ಬಾಯಲ್ಲಿದ್ದ ತಾಂಬೂಲವನ್ನು ಪಚಕ್ಕನೆ ಉಗುಳಿದರು.

''ದುಗ್ಗಪ್ಪ, ತ್ಯಾಂಪಣ್ಣ ಶೆಟ್ರು ಹೋಗುತ್ತಾರೆ ಎಂದಾದರೆ ನಾನು ಅವರೊಟ್ಟಿಗೆ ಹೋಗುತ್ತೇನೆ. ನೀನು ಬರಬೇಕೂಂತ ಇಲ್ಲ''.

''ಅದೆಲ್ಲ ಏನೂ ಬೇಡ. ಅಮ್ಮನ ಹೇಳಿಕೆಯಾಗಿದೆ. ನಾನು ಸ್ವತಃ ನಿಮ್ಮನ್ನು ಬಡಾಜೆ ತನಕ ಬಿಟ್ಟು ಬರಬೇಕೆಂದು. ಈ ಬೈಲಿನ ಯಾವ ಸೂ.. ಮಗನನ್ನೂ ನಾನು ಒಂದು ಹೆಜ್ಜೆ ನಂಬಲಾರೆ. ನಿಮಗೇನೂ ಅವಸರ ಇಲ್ಲವಲ್ಲ?''

''ಅವಸರ ಏನೂ ಇಲ್ಲ ಮಾರಾಯ. ನಿನಗೇಕೆ ಸುಮ್ಮನೆ ಕೆಲಸ ಕೊಡುವುದೂಂತ ಅಷ್ಟೆ ನೀನು ಒಪ್ಪಿದರೆ ನೇಮ ಮುಗಿಯುವವರೆಗೆ ಇರುತ್ತೇನೆ. ನೇಮ ಮುಗಿಯುವವರೆಗೆ ನನಗಿಂತ ಹೆಚ್ಚು ನೀನಿರುವುದು ಒಳ್ಳೆಯದು.''

ತಂತ್ರಿಯವರು ಅಷ್ಟು ಹೇಳಿ ಸುತ್ತಮುತ್ತ ನೋಡಿ ಕುಳಿತುಕೊಂಡರು.

ತ್ಯಾಂಪಣ್ಣ ಚಾವಡಿಗೆ ಬಂದವ ಯಮುನಕ್ಕನ ಬಳಿ ಕುಳಿತು ವೀಳ್ಯದೆಲೆಗೆ ಸುಣ್ಣ ಹಚ್ಚುತ್ತಾ ದುಗ್ಗಪ್ಪನನ್ನೇ ನೋಡುತ್ತಿದ್ದ. ದುಗ್ಗಪ್ಪ ಎದ್ದು ಅಂಗಳದಲ್ಲಿ ಕಟ್ಟಿದ್ದ ಪವಿತ್ರ ಪೀಠದ ಬಳಿ ಹೋಗಿ ನಲಿಕೆಯವನಲ್ಲಿ ನೇಮ ಪ್ರಾರಂಭಿಸಲು ಹೇಳಿ ಚಾವಡಿಯತ್ತ ಹೊರಟ. ತ್ಯಾಂಪಣ್ಣ ಎದ್ದು ಯಮುನಕ್ಕನಲ್ಲಿ 'ಬರ್ತೇನೆ' ಅಂದು, ತಂತ್ರಿಯವರು ಇರುವಲ್ಲಿಗೆ ಬಂದು ಅವರಿಗೆ ಕೈಮುಗಿದು ಭೂತದ ಪ್ರಸಾದವನ್ನು ರಾಮಣ್ಣ ಕೊಟ್ಟ ಎರಡು ಎಳನೀರನ್ನೂ ತೆಗೆದುಕೊಂಡು ಹೊರಟ.

ಗುಂಡದಲ್ಲಿಂದ ವೀಳ್ಯ, ಹಿಂಗಾರವನ್ನು ಕೊಡಿ ಎಲೆಯಲ್ಲಿ ಹಿಡಿದು ಬಂದ ಅಮ್ಮಣ

ಪೂಜಾರಿ ದುಗ್ಗಪ್ಪನ ಮುಖ ನೋಡಿ ಹಿಂದೆ ತಿರುಗಿದ.

ತಂತ್ರಿಯವರ ಕಾಲಿಗೆ ಬಿದ್ದು ನಡೆ ಇಳಿದ ತ್ಯಾಂಪಣ್ಣ, ಕಟ್ಟಹುಣಿಯಲ್ಲಿ ನಿಂತುಕೊಂಡು ಜೊತೆಗೆ ಬಂದ ಕೆಲಸದವರನ್ನು ಹುಡುಕತೊಡಗಿದ. ಆತ ಮಿತ್ತಬೈಲಿಗೆ ಬರುವಾಗ ಮದರ, ಮಾಂಕ ಎಂಬ ಇಬ್ಬರು ಬಾಕುಡರನ್ನು ಕರೆತಂದಿದ್ದ. ಕಟ್ಟಹುಣಿಯಲ್ಲಿ ನಿಂತುಕೊಂಡು ಅತ್ತಿತ್ತ ನೋಡಿ ಮುಂದೆ ಬರುವಾಗ ಪಂಜು ಬೀಸಿಕೊಂಡು ಬರುವ ದೆಯ್ಯು ಸಿಕ್ಕಿದ.

''ಒಡೆಯರು ನೇಮಕ್ಕೆ ನಿಲ್ಲುವುದಿಲ್ಲವಾ? ಮನೆಗೇ ಹೋಗುವವರಾ? ಬಾರಬೈಲಿನವರೆಗೆ ಬಿಟ್ಟುಬರಬೇಕಾ ನಾನು?''

''ಬೇಡ ದೆಯ್ಯು. ನಾನು ಬರುವಾಗ ಇಬ್ಬರು ಹಾದರಕ್ಕೆ ಹುಟ್ಟಿದವರನ್ನು ಕರೆತಂದಿದ್ದೆ. ಎಲ್ಲಿ ಸತ್ತರೋ ಅವರು. ನೀನು ಎಲ್ಲಾದರೂ ನೋಡಿದೆಯಾ?''

''ನೀವು ಕೋಣದಂತಿರುವ ಆ ಇಬ್ಬರು ಯುವಕರ ಸುದ್ದಿ ಕೇಳುತ್ತಿಲ್ಲವಲ್ಲ?''

''ಹೌದು, ಅದೇ ಇಬ್ಬರು ಗಿಡ್ಡ ಯುವಕರು''

''ಅವರು ಕತ್ತಲೆಯಲ್ಲಿ ಕುಳಿತಿದ್ದುದನ್ನು ನೋಡಿ ಕಳ್ಳರೂಂತ ಭಾವಿಸಿ ಇಬ್ಬರನ್ನೂ ನಮ್ಮವರಿಗೆ ಹೇಳಿ ಪೂಕರೆಯ ಗದ್ದೆಗೆ ಹಾಕಿ ಎಳೆಸಿದೆವು. ಈಗ ಹೊಳೆಬದಿಯ ಹಾದಿಯ ದಣಪೆಗೆ ಕಟ್ಟಿ ಬಂದಿದ್ದೇನೆ. ತಗೊಳ್ಳಿ, ನೀವೊಂದು ಪಂಜು ಕೈಯಲ್ಲಿ ಹಿಡಿದುಕೊಳ್ಳಿ''.

ದೆಯ್ಯು ಸೋಗೆಯ ಒಂದು ಪಂಜನ್ನು ಹೊತ್ತಿಸಿ ತ್ಯಾಂಪಣ್ಣ ಶೆಟ್ಟರ ಕೈಗೆ ಕೊಡುವಾಗ ಶೆಟ್ಟರ ಮುಖ ಕೆಂಪಾಗಿ, ಕಣ್ಣು ಕೆಂಡ ಉಗುಳುತ್ತಿತ್ತು.

''ನೀವು ಒಳ್ಳೆಯದು ಮಾಡಲಿಲ್ಲ ದೆಯ್ಯು. ಇದು ಇಲ್ಲಿಗೇ ನಿಲ್ಲುತ್ತದೆಂದು ಭಾವಿಸಬೇಡ ಆಯಿತಾ?''

ಶೆಟ್ಟರು ಕೋಪದಿಂದ ನಡುಗುತ್ತಾ ಹೊಳೆಯತ್ತ ನಡೆದರು.

''ಒಳ್ಳೆಯದೋ ಕೆಟ್ಟದೋ! ಅವರು ಇನ್ನು ಮಿತ್ತಬೈಲಿನತ್ತ ತಲೆ ಹಾಕಿ ಮಲಗಲಿಕ್ಕಿಲ್ಲ!''

ದೆಯ್ಯು ನಗುತ್ತಾ ಹೇಳಿ ಗುತ್ತಿನತ್ತ ತಿರುಗಿದ.

ತ್ಯಾಂಪಣ್ಣ ಹೊಳೆಯ ಬದಿಗೆ ತಲುಪುವಾಗ ಹೊಳೆ ಬದಿಯ ದಣಪೆಗೆ ಮಣ್ಣಲ್ಲಿ ಮುಳುಗಿದ್ದ ಇಬ್ಬರು ಯುವಕರನ್ನು ಆಚೀಚೆ ಕಟ್ಟಿಹಾಕಿದ್ದರು. ಶೆಟ್ಟರು ಸೊಂಟದಿಂದ ಚೂರಿ ತೆಗೆದು ಇಬ್ಬರ ಕೈಕಾಲಿನ ಹಗ್ಗವನ್ನು ಕೊಯ್ದು ಕುಂಡೆಗೆ ಒದ್ದು ಹೊಳೆಗೆ ದೂಡಿದರು. ಹೊಳೆಗೆ ಇಳಿದ ತ್ಯಾಂಪಣ್ಣ ಕೋಪದಿಂದ ನಡುಗುತ್ತಿದ್ದ.

''ನಿಮಗೆ ನಾನು ಅನ್ನ ಹಾಕಿದ್ದೇ ದಂಡ. ನಿಮ್ಮ ಬದಲಿಗೆ ಎರಡು ನಾಯಿಗಳನ್ನು ತಂದಿದ್ದರೆ ಅವು ಆ ದೆಯ್ಯುವಿನ ಕುತ್ತಿಗೆಯ ನೆತ್ತರು ಕುಡಿಯುತ್ತಿದ್ದವು''.

ಮದರನೂ, ಮಾಂಕುವೂ ಹೊಳೆಯ ನೀರಲ್ಲಿ ಮುಳುಗಿ ಮೈಮೇಲೆ ಮೆತ್ತಿಕೊಂಡಿದ್ದ ಗದ್ದೆಯ ಮಣ್ಣನ್ನು ತೊಳೆದು ತ್ಯಾಂಪಣ್ಣನ ಮುಂದೆ ಬಂದು ನಿಂತರು.



''ಒಡೆಯಾ, ಕೈಯಲ್ಲಿದ್ದ ಪಂಜು ನಮ್ಮ ಕೈಗೆ ಕೊಡಿ. ಮಿತ್ತಬೈಲಿನ ಮನೆಗೆ ಬೆಂಕಿ ಕೊಟ್ಟು ಬರದಿದ್ದರೆ ನಾವು ಬಾಕುಡರೇ ಅಲ್ಲ. ನೀವು ಇಲ್ಲೇ ಮರಳಲ್ಲಿ ಕುಳಿತು ನೋಡಿ!''

''ನೀವು ಅದು ಬಹಳ ಸುಲಭಾಂತ ಎಣಿಸಿದ್ದೀರಿ. ಕೊಲೆ ಮಾಡಿಯಾದರೂ ದಕ್ಕಿಸಿಕೊಳ್ಳಬಹುದು. ಬೆಂಕಿ ಕೊಟ್ಟು ದಕ್ಕಿಸಿಕೊಳ್ಳಲು ಸಾಧ್ಯವಾಗದು. ಹೊಳೆಯಾಚೆ ಅವರು ನಿಮ್ಮನ್ನೇ ಕಾಯುತ್ತಿರಬಹುದು. ಕಾಲ ಕೂಡಿ ಬರಲಿ, ಇನ್ನೊಂದು ದಿನ ನೋಡುವ. ಈಗ ಬನ್ನಿ''.

ತ್ಯಾಂಪಣ್ಣ ಇಬ್ಬರನ್ನೂ ಕರೆದುಕೊಂಡು ನಡೆದ. ಹೊಳೆ ಬದಿಯ ಪೊದೆಗಳಲ್ಲಿ ಕುಳಿತಿದ್ದ ನಾಲ್ಕೈದು ಯುವಕರು ಎದ್ದು ತಲವಾರು ಬೀಸಿಕೊಂಡು ಮಿತ್ತಬೈಲಿನ ಕಟ್ಟಹುಣಿಯಲ್ಲಿ ನೇಮದಲ್ಲಿಗೆ ನಡೆದರು.

ತ್ಯಾಂಪಣ್ಣ ಶೆಟ್ಟರು ಇಳಿದು ಹೋದ ಕೂಡಲೇ ತಂತ್ರಿಯವರು ಯಮುನಕ್ಕನಲ್ಲಿ ತನ್ನನ್ನು ಕಳುಹಿಸಿಕೊಡುವಂತೆ ಕೇಳಿಕೊಂಡರು.


''ಇಂದಿನ ಕಂಟಕ ಕಳೆಯಿತು. ಹತ್ತು ದಿನ ಕಳೆದು ಅನ್ನಪೂರ್ಣೇಶ್ವರಿಯ ಪ್ರಸಾದ ತೆಗೆದುಕೊಂಡು ಬರುತ್ತೇನೆ. ನೀನೇನೂ ಹೆದರಬೇಡ''.

ಯಮುನಕ್ಕ ನೀರು ತುಂಬಿದ ಕಣ್ಣನ್ನು ಸೆರಗಿನಿಂದ ಒರೆಸಿಕೊಳ್ಳುತ್ತಾ ಚಾವಡಿಯ ಕಂಬಕ್ಕೊರಗಿ ಕುಳಿತು ಅಂಗಳವನ್ನು, ಅಂಗಳದ ತುದಿಯಲ್ಲಿ ನಡೆಯುವ ಪುದ್ವಾರ್‌ದೆಚ್ಚಿಯ ನೇಮವನ್ನೂ ನೋಡಿದರು. ಕಟ್ಟುಕಟ್ಟಳೆಯ ನೇಮ ಮುಗಿದು ಭಂಡಾರ ಗುಂಡಕ್ಕೆ ಏರಿತು. ಸಂಬಳ ಬಟವಾಡೆಯಾಗಿ ಕುಳಿತಾಗ ತಂತ್ರಿಯವರನ್ನು ಬಿಟ್ಟುಬಂದ ದೆಯ್ಯು ಮತ್ತು ದುಗ್ಗಪ್ಪ ಬಂದರು. ಮಧ್ಯರಾತ್ರಿ ಕಳೆಯಿತು. ನೇಮ ಮುಗಿಸಿ ಎಲ್ಲರೂ ಮಲಗಲು ಹೊರಟಾಗ ಕೋಳಿ ಕೂಗುವ ಹೊತ್ತಾಯಿತು.

ಯಮುನಕ್ಕನಿಗೆ, ತನ್ನ ಚಾವಡಿಯ ಪೆಠಾರಿಯ ಮೇಲೆ ಮಲಗಿದವರಿಗೆ ನಿದ್ದೆ ಬರಲಿಲ್ಲ. ಮಿತ್ತಬೈಲು ಗುತ್ತಿನ ಕಥೆ ಅವರ ಕಣ್ಣ ಮುಂದೆ ತೇಲಿ ಬಂತು.

ಮಿತ್ತಬೈಲು ಗುತ್ತಿನ ಕತೆ ಎಲ್ಲಾ ಬಂಟರ ಗುತ್ತಿನ ಕಥೆಯಂತಹದೇ. ಒಂದಲ್ಲ ಒಂದು ರೀತಿಯಲ್ಲಿ ಅದು ಎಲ್ಲ ಗುತ್ತುಗಳ ಇತಿಹಾಸ ಹೇಳುತ್ತದೆ. ಸ್ಥಳ ಬೇರೆ ಬೇರೆ ಇರಬಹುದು, ಕಾಲ ಬೇರೆ ಬೇರೆ ಇರಬಹುದು. ಜನರು, ದೈವ ದೇವರುಗಳು ಬೇರೆ ಇರಬಹುದು, ಆದರೆ ಕಥೆ- ವ್ಯಥೆಗಳು ಒಂದೇ. ದುಡಿಯುವ ದುಡಿಮೆ, ಹೊಡೆದಾಟ ಬಡಿದಾಟ, ಕಂಬಳದ ಕೋಣ, ಕಟ್ಟದ ಕೋಳಿಗಳು ಎಲ್ಲ ಅವೇ. ಯಮುನಕ್ಕನಿಗೆ ಅಜ್ಜಿ ಹೇಳಿದ ಕಥೆಗಳು, ಮಿತ್ತಬೈಲು ಗುತ್ತಿನ ಆದಿಮೂಲದ ಕಥೆಗಳು ಕಣ್ಣಮುಂದೆ ಬಂದುಹೋದವು. ಭೂಮಿಯನ್ನು ಅಗೆದು, ಉತ್ತು, ನೀರು ಹಾಯಿಸಿ ಬೆಳೆ ಬೆಳೆಸಿದ ಹಿರಿಯರ ಕತೆಗಳು, ಒಕ್ಕಲಿಗರ, ಬಂಟರ, ಬಾರಗರ ಇತಿಹಾಸ.

# ಆ ಕಾಲ...





## ೨

## ಕಾಡು ಕಡಿದರು, ಗುಡ್ಡ ಅಗೆದರು, ಬೇಸಾಯ ಮಾಡಿದರು

ಒಂದು ಕಾಲದಲ್ಲಿ ಮಾಯಿಪ್ಪಾಡಿಯ ಬಳಿ ಭಾರೀ ಹೆಸರು ಪಡೆದ ಬಂಟರ ಮನೆ ಮಜಲೋಡಿ ಗುತ್ತು. ಆ ಮನೆಯವರು ಮಾಯಿಪ್ಪಾಡಿಯ ಅರಸು ಮನೆತನಕ್ಕೆ ದಂಡನಾಯಕರಾಗಿ ಇದ್ದರಂತೆ. ಅರಸರಿಗೆ ಪಟ್ಟ ಆಗುವಾಗ ಕೈ ಹಿಡಿದು ಕರೆದುಕೊಂಡು ಹೋಗಿ ಸಿಂಹಾಸನದಲ್ಲಿ ಕುಳ್ಳಿರಿಸುವ ಹಕ್ಕು ಮಜಲೋಡಿ ಗುತ್ತಿನವರಿಗೆ. ಗೌರವದಲ್ಲೂ ಇಚ್ಲಂಪಾಡಿ ಗುತ್ತಿನ ನಂತರ ಇದ್ದ ನಾಲ್ಕೈದು ಸೀಮೆಯ ಮನೆತನಗಳಲ್ಲಿ ಮಜಲೋಡಿಯೂ ಒಂದು. ಬಹಳ ದೊಡ್ಡ ಮನೆ, ಬಹಳ ದೊಡ್ಡ ಮನೆತನ. ಮನೆಯಲ್ಲಿ ಊಟಕ್ಕೆ ಹೊತ್ತಿಗೆ ಎರಡು ಮುಡಿ ಅಕ್ಕಿ ಬೇಯಬೇಕು. ಹಾಗಿದ್ದ ಮನೆಯಲ್ಲಿ ಬೇಸಾಯ ಕಡಿಮೆಯಾಗಿ ಉಣ್ಣುವ ತಿನ್ನುವ ಜನ ಹೆಚ್ಚಾದ ಒಂದು ಕಾಲದಲ್ಲಿ ಮಾವನ ಜೊತೆ ಜಗಳ ಮಾಡಿ ಅವರ ಯಜಮಾನಿಕೆಯನ್ನು ಧಿಕ್ಕರಿಸಿ ಗುತ್ತು ಬಿಟ್ಟು ಮನೆ ಇಳಿದು ಬಂದ ಒಂದೇ ತಾಯಿಯ ಮಕ್ಕಳು ಮಂಜಣ, ಕಿನ್ನನ ಎಂಬ ಇಬ್ಬರು ಯುವಕರು.

ಮಾವನ ಕಾರುಬಾರಿನಲ್ಲಿ ಬೆಳಗ್ಗಿನಿಂದ ಸಂಜೆಯ ತನಕ ದುಡಿದು, ಎರಡು ಹೊತ್ತಿನ ಒಳ್ಳೆಯ ಊಟಕ್ಕೆ ಗತಿಯಿಲ್ಲದಿದ್ದರೂ ಹೊಟ್ಟೆ ಹಸಿವೆಂದು ಕೂರದೆ ದುಡಿಯುತ್ತಿದ್ದ ಮಕ್ಕಳನ್ನು ನೋಡಿ ಮರುಗುತ್ತಿದ್ದ ತಾಯಿಯ ಅಪ್ಪಣೆ, ಆಶೀರ್ವಾದ ಪಡೆದುಕೊಂಡು ಮಾವನಲ್ಲಿ ಹೇಳದೆ ಪಶ್ಚಿಮಕ್ಕೆ ಇಳಿದವರು ಮಂಜಣ, ಕಿನ್ಯನ. ಹುಟ್ಟಿದ ಮನೆ ಪಾವೂರಿಗೆ ಬಂದು ಅಲ್ಲಿ ತಮ್ಮ ಪ್ರಾಯದ ಯುವಕರನ್ನು ಕೂಡಿಸಿಕೊಂಡು ಭೂಮಿ, ಬೇಸಾಯ ಹುಡುಕಿಕೊಂಡು ತಿರುಗುವಾಗ ಕಣ್ಣಿಗೆ ಬಿದ್ದ ಭೂಮಿ ಮಿತ್ತಬೈಲು. ಅಲ್ಲಿ ಇರುವ ಭಟ್ಟರು ಕೇರಳಕ್ಕೆ ಹೋಗುತ್ತಾರೆ, ಹೋಗುವಾಗ ಭೂಮಿಯನ್ನು ಮಾರಿ ಅಥವಾ ಗೇಣಿಗೆ ಕೊಟ್ಟು ಹೋಗುತ್ತಾರೆ ಎಂದು ತಿಳಿದುಬಂತು.

ಬಡಾಜೆ ತಂತ್ರಿಯವರು ಆಗ ಬಹಳ ಹೆಸರು ಪಡೆದ ತಂತ್ರಿಗಳು. ಮಾಯಿಪ್ಪಾಡಿಯ ಅರಸರಿಗೆ ಪಟ್ಟಾಭಿಷೇಕ ಮಾಡುವವರೆಂದು ಎಲ್ಲರಿಗೂ ಅವರಲ್ಲಿ ಭಯಭಕ್ತಿ. ತಂತ್ರ, ಮಂತ್ರಗಳಲ್ಲಿ ಇಡೀ ಮಾಗಣೆಯಲ್ಲಿ, ಮಾಗಣೆಯಿಂದಾಗಿ ಇಡೀ ಅರಸೊತ್ತಿಗೆಯಲ್ಲೇ ಹೆಸರು ಪಡೆದವರು. ಮಾಗಣೆಯ ಪೂಜೆಯ ಬ್ರಾಹ್ಮಣರು ಅವರ ಆಶೀರ್ವಾದ ಇಲ್ಲದೆ ಹೆಜ್ಜೆ ಮುಂದಿಡರು.

ಮಂಜಣ ಪಾವೂರಿನ ಚಿಕ್ಕಪ್ಪನನ್ನು ಕರೆದುಕೊಂಡು ತಂತ್ರಿಯವರ ಬಳಿ ಬಂದು ತಾನು ನೋಡಿದ ಮಿತ್ತಬೈಲಿನ ಭೂಮಿಯ ವಿಷಯವನ್ನು ತಿಳಿಸಿ, ಅಲ್ಲಿದ್ದ ಭಟ್ಟರು ಕೇರಳಕ್ಕೆ ಹೋಗುತ್ತಾರೆ ಅಂತ ತಾನು ಕೇಳಿದ ಸುದ್ದಿಯನ್ನು ಹೇಳಿದ. ತಂತ್ರಿಯವರೂ ಈ ಸುದ್ದಿ ಸತ್ಯ ಅಂತ ಹೇಳಿದರು. ಈ ಮಿತ್ತಬೈಲಿನ ಭೂಮಿಯನ್ನು ಕ್ರಯಕ್ಕೆ ಅಥವಾ ಗೇಣಿಗೆ ತಮಗೆ ಮಾಡಿಕೊಡಬೇಕೆಂದು ಬೇಡಿಕೊಂಡ. ಕಾಲಿಗೆ ಅಡ್ಡ ಬಿದ್ದ ಮಂಜಣನನ್ನು ನೋಡಿ ತಂತ್ರಿಯವರು ಕಣ್ಣು ಮುಚ್ಚಿ ಜಪಿಸಿ, ಅನ್ನಪೂರ್ಣೇಶ್ವರಿಯ ಗಂಧ ಪ್ರಸಾದ ಕೊಟ್ಟು ಕೈಯಲ್ಲೊಂದು ಹಿಡಿ ಹೂವಿನ ಎಸಳು ಹಾಕಿದರು. ಕೈಗೆ ಹಾಕಿದ ಎಸಳುಗಳನ್ನು ಎಣಿಸಲು ಹೇಳಿದಾಗ, ಮಂಜಣ ಎಣಿಸಿ ಮುಗುಳಿ ಬಂತೆಂದು ಹೇಳಿದ್ದು ಕೇಳಿ, ಆ ಹೂವಿನ ಎಸಳುಗಳನ್ನು ಬೈರಾಸಿನಲ್ಲಿ ಕಟ್ಟಿಕೊಳ್ಳಲು ಹೇಳಿದರು. ಮಧ್ಯಾಹ್ನದ ಪೂಜೆಯ ಊಟಕ್ಕೆ ಅವರನ್ನು ನಿಲ್ಲಿಸಿ ಮಿತ್ತಬೈಲಿನ ಭಟ್ಟರಿಗೆ ಜನ ಕಳುಹಿಸಿ ಕರೆಸಿದರು. ಭಟ್ಟರಲ್ಲಿ ಮಾತನಾಡಿ ಭೂಮಿಯನ್ನು ಮಂಜಣನಿಗೆ ಮೂಲಗೇಣಿಗೆ ಕೊಡಲು ನಿಶ್ಚಯ ಮಾಡಿ ಕಳುಹಿಸಿಕೊಟ್ಟರು.

ಅಡ್ಡಬಿದ್ದು ಎದ್ದ ಯುವಕರನ್ನು ನೋಡಿ ತಂತ್ರಿಯವರು ಹೇಳಿದರು ''ಈ ಭೂಮಿಯಲ್ಲಿ ನೀವು ಬಹಳ ಒಳ್ಳೆಯದಾಗುತ್ತೀರಿ ದಂಡನಾಯಕರೇ''

''ನಾನು ಮಂಜಣ, ಇವ ಕಿನ್ಯನ. ನಾವು ಪಾವೂರಿನ ಬಿರ್ಮಣ್ಣಾಳ್ವರ ಮಕ್ಕಳು''.

ಮಂಜಣನ ಮಾತು ಕೇಳಿ, ''ಗೊತ್ತು ನನಗೆ, ನೀವೂ ಗೊತ್ತು ನಿಮ್ಮ ತಂದೆಯವರೂ ಗೊತ್ತು ನನಗೆ, ಗುತ್ತಿನವರೇ''

ಮಂಜಣನಿಗೆ ತಂತ್ರಿಯವರು ದಂಡನಾಯಕರು, ಗುತ್ತಿನವರು ಎಂದು ತಮ್ಮನ್ನು ತಮಾಷೆಗೆ ಹೇಳುತ್ತಿದ್ದಾರೆ ಎಂದು ತೋರಿತು. ''ನಿಮ್ಮ ಆಶೀರ್ವಾದ ಇದ್ದರೆ ಒಂದು ದಿನ



ಅದೂ ಆಗಲು ಸಾಧ್ಯ ಉಂಟು ಸ್ವಾಮೀ'' ಎಂದು ಮನಸ್ಸಲ್ಲೇ ಅಂದುಕೊಂಡರು.

''ನನ್ನ ಆಶೀರ್ವಾದ ಯಾವಾಗಲೂ ಇದೆ ನಿಮಗೆ''

ತಂತ್ರಿಯವರು ಹೇಳಿದಾಗ ಮಂಜಣ ಅವರ ಮುಖ ನೋಡಿದ. ತಂತ್ರಿಯವರು ನಗುತ್ತಲೇ ಇದ್ದರು. ಮತ್ತೊಮ್ಮೆ ಬಗ್ಗಿ ಕಾಲು ಮುಟ್ಟಿದ ಮಂಜಣ ತಮ್ಮ ಕಿನ್ಯನನ ಜೊತೆ ತಂತ್ರಿಯವರ ಬಡಾಜೆಯ ಬೈಲು ಇಳಿದರು.

ಇಬ್ಬರು ಯುವಕರೂ ಅಂದೇ ಮಜಲೋಡಿಗೆ ಬಂದು ತಾಯಿಗೆ ಸುದ್ದಿ ತಿಳಿಸಿದರು. ಮಾವನ ಜೊತೆ ಜಗಳವಾಡಿ, ಅಜ್ಜಿ ಹೇಳಿದರೂ ಕೇಳದೆ ತಾಯಿ – ತಂಗಿಯರನ್ನು ಕರೆದುಕೊಂಡು ಪಾವೂರಿಗೆ ಬಂದರು.

ಮಾವ, ಅಜ್ಜಿ ಕೊಟ್ಟ ನಾಲ್ಕು ವರಹ ಹಣವನ್ನು ಬಡಾಜೆ ತಂತ್ರಿಯವರ ಸನ್ನಿಧಿಯಲ್ಲಿ ಮಿತ್ತಬೈಲಿನ ಭಟ್ಟರಿಗೆ ಕೊಟ್ಟು ಭೂಮಿ ಖರೀದಿಸಿದರು.

ಚೂರುಪಾರು ಇದ್ದ ಚಿನ್ನವನ್ನು ತಂತ್ರಿಯವರೇ ತೋರಿಸಿಕೊಟ್ಟ ಮಂಜೇಶ್ವರದ ಜೈನ ಸೆಟ್ಟಿಯಲ್ಲಿ ಅಡವಿಟ್ಟು ಕೋಣ, ಭತ್ತ, ಬೀಜ ತೆಗೆದುಕೊಂಡರು. ತಂತ್ರಿಯವರಲ್ಲಿ ಒಳ್ಳೆಯ ದಿನ ಕೇಳಿ ಸುಗ್ಗಿ ತಿಂಗಳಲ್ಲಿ ಗೃಹಪ್ರವೇಶ ಮಾಡಿದರು. ಪಾವೂರಿನ ಯುವಕರನ್ನು ಹಿಡಿದುಕೊಂಡು ಬೇಸಾಯದ ಕೆಲಸ ಪ್ರಾರಂಭಿಸುವಾಗ ಚಿಕ್ಕಪ್ಪನವರು ಒಂದು ಜೋಡಿ ಕೋಣಗಳನ್ನು ಕೊಟ್ಟರು. ನೆಡಲು ನೇಜಿ ಕೊಡಿಸಿದರು. ಮಜಲೋಡಿಯಿಂದ ಅವರೊಟ್ಟಿಗೆ ಬಂದ ಇಬ್ಬರು ಮುಗೇರ ಯುವಕರು, ಮಿತ್ತಬೈಲಿನ ಕುಡಿಯರ ಕುಟುಂಬದವರು, ಅವರ ಬೇಸಾಯದ ಕೆಲಸಗಾರರು. ಎಲ್ಲರಿಗೂ ಹೊಸ ಬೇಸಾಯ, ಹೊಸ ಭೂಮಿಯಲ್ಲಿ ದುಡಿಯುವ ಛಲ. ಬೇಸಾಯ ಮುಗಿದ ನಂತರ, ಗುಡ್ಡೆ ಅಗೆದು ಹೊಸ ಗದ್ದೆ ಮಾಡಿದರು. ಬೈಲಿನ ಮೂಲೆಯಲ್ಲಿ ಹರಿದು ಹೋಗುವ ತೋಡಿಗೆ ಕಟ್ಟ ಕಟ್ಟಿ ಬೆಟ್ಟು ಗದ್ದೆಗಳಿಗೆ ನೀರು ಹರಿಸಿ ಸುಗ್ಗಿಯ ಬೆಳೆ ಮಾಡಿದರು. ಪಕ್ಕದಲ್ಲಿದ್ದ ಭಟ್ಟರ ಹಳೆಯ ಬೈಲು ಗದ್ದೆಯನ್ನು ಅಗೆದು ವಿಸ್ತರಿಸಿ, ಪೂಕರೆಯ ಗದ್ದೆಯೆಂದು ಹೆಸರಿಟ್ಟರು. ಪೂಕರೆಯ ಗದ್ದೆ ಬಾಕಿಮಾರು ಗದ್ದೆಯಾಯಿತು. ಬಾಕಿಮಾರು ಗದ್ದೆ ಮುಂದೆ ಕಂಬಳದ ಗದ್ದೆ ಆಯಿತು. ಕೆಲವು ವರ್ಷ ಕಳೆಯುವಾಗ ಅದೇ ಗದ್ದೆ ಮೂರು ಮುಡಿ ಅತಿಕಾರೆ ಭತ್ತ ಬಿತ್ತುವ ಗದ್ದೆಯಾಯಿತು.

ಗದ್ದೆ ಮಾತ್ರ ಬೆಳೆದದ್ದಲ್ಲ, ಹಟ್ಟಿಯಲ್ಲಿ ಎರಡು ಜೋಡಿ ಕೋಣಗಳು, ಎರಡು ಜೋಡಿ ಎತ್ತುಗಳಾದವು. ಕರೆಯುವ ಹಸು, ಕರುಗಳು ತುಂಬಿದವು. ಹಟ್ಟಿಯಲ್ಲಿ ಗೊಬ್ಬರ ತುಂಬಿತು. ಮನೆಯೊಳಗೆ ಹಾಲು ಮೊಸರು ಹರಿಯತೊಡಗಿತು.

ತಾಯಿಯ ಯಜಮಾನಿಕೆಯಲ್ಲಿ ಮಕ್ಕಳು ದುಡಿದು ಒಂದೇ ವರ್ಷದಲ್ಲಿ ನೂರು ಮುಡಿ ಅಕ್ಕಿ ಜೈನ ಸೆಟ್ಟಿಯ ಭಂಡಸಾಲೆಗೆ ಹಾಕಿದರು. ವರ್ಷಗಳು ಕಳೆಯುತ್ತಿದ್ದಂತೆ ಸುತ್ತಮುತ್ತಲ ಬಂಟರ ಸಮಾಜಕ್ಕೆ ಮಂಜಣ – ಕಿನ್ಯನ ಎಂಬ ಯುವಕರ ಸುದ್ದಿ ಮುಟ್ಟಿತು. ಒಂದು ದಿನ ಮಜಲೋಡಿ ಗುತ್ತಿನ ಯಜಮಾನ ಮಾವ ಸುಬ್ಬಾಳ್ವರು ಅಳಿಯಂದಿರನ್ನು

ನೋಡಲು ಬಂದರು.

ಅಂದು ಸಂಕಮ್ಮಕ್ಕನ ಜೀವಮಾನದಲ್ಲಿ ಮರೆಯಲಾಗದ ದಿನ. ಅವರು ಅನುಭವಿಸಿದ ಕಷ್ಟ ಅವರ ದುಡಿತ ಅಂದು ಸಾರ್ಥಕವಾಯಿತು ಎಂದೆನಿಸಿತವರಿಗೆ. ಮಾವ ಬಂದವರು ಅಳಿಯಂದಿರನ್ನು ಅಪ್ಪಿಕೊಂಡಾಗ ಸಂಕಮ್ಮಕ್ಕನ ಕಣ್ಣಲ್ಲಿ ಎರಡು ಹನಿಗಳು ಉದುರಿದವು. ಅಪ್ಪಿ ಹಿಡಿದು ಬೆನ್ನು ಸವರಿದ ಮಾವನ ಕಣ್ಣಲ್ಲೂ ನೀರು ತುಂಬಿತು.

ಬೈಲಿಗಿಳಿದ ಮಾವ ಬಾಕಿಮಾರು ಹುಣಿಯಲ್ಲಿ ನಿಂತು ಬೀಸುವ ಗಾಳಿಗೆ ತೆನೆ ತುಂಬಿ ತೂರಾಡುವ ಬೆಳೆಯನ್ನು ನೋಡಿದರು. ಸುಂದರವಾದ ಅತಿಕಾರೆ ಬೆಳೆಯನ್ನು ನೋಡಿ ಅವರಿಗೆ ಖುಷಿಯಾಯಿತು. ಮಜಲೋಡಿಯ ಪೂಕರೆಯ ಗದ್ದೆಗಿಂತಲೂ ಮಿತ್ತಬೈಲಿನ ಈ ಪೂಕರೆಯ ಗದ್ದೆ ದೊಡ್ಡದು. ಮನೆಯಿಂದ ಬೈಲಿಗೆ ನಡೆಯುವಾಗ ಕಟ್ಟಹುಣಿಯ ಎರಡು ಬದಿಗಳಲ್ಲೂ ಕೊಂಬು ಮೂಡಲು ಪ್ರಾರಂಭವಾದ ತೆಂಗುಗಳು, ಅದರ ಕೆಳಗೆ ಭಟ್ಟರು ಕೊಟ್ಟ ಒಂದು ಗದ್ದೆ, ಕೆಲವು ಕಂಗಿನ ಸಸಿಗಳನ್ನು ನೋಡಿದ ಮಾವನಿಗೆ ತನ್ನ ಅಳಿಯಂದಿರು ಈ ಐದಾರು ವರ್ಷಗಳಲ್ಲಿ ಎಷ್ಟು ದುಡಿದಿದ್ದಾರೆ ಎಂಬುದು ಮನವರಿಕೆಯಾಯಿತು.

ಮಂಜಣ, ಮಾವನನ್ನು ಹೊಳೆಬದಿಯ ತನಕ ಕರೆದೊಯ್ದ. ಹೊಳೆಬದಿಯಲ್ಲಿ ರಚಿಸಿದ್ದ ಏತವನ್ನು ತೋರಿಸಿದ. ಮಜಲೋಡಿಯಲ್ಲಿ ನೋಡದ ಒಂದು ನೀರಿನ ವ್ಯವಸ್ಥೆ ಯನ್ನು ಇಲ್ಲಿ ನೋಡಿ ಗುತ್ತಿನ ಯಜಮಾನರಿಗೆ ಆಶ್ಚರ್ಯ. ಯಜಮಾನರು ಸುತ್ತಮುತ್ತ ತಿರುಗಿ ನೋಡಿ, ಏನೆಂದು ಅರ್ಥವಾಗದೆ ಅಳಿಯನ ಮುಖ ನೋಡಿದರು. ಮಜಲೋಡಿ ಯಲ್ಲಿ ಗುಡ್ಡೆಯಿಂದ ಹರಿದು ಬರುವ ನೀರಿನಲ್ಲಿಯೇ ಬೇಸಾಯ ಆಗುತ್ತಿದ್ದುದು. ತಪ್ಪಿದರೆ ಕೆಲವು ಗದ್ದೆಗಳಿಗೆ ಕೈದಂಬೆಯ ನೀರು ಹಾಕುತ್ತಿದ್ದರು. ಅದಕ್ಕಿಂತ ಹೆಚ್ಚಿನ ವ್ಯವಸ್ಥೆ ಅಲ್ಲಿರಲಿಲ್ಲ. ಸುಗ್ಗಿಯ ಬೆಳೆಗೆ ಕೆಲವು ಕಡೆಗಳಲ್ಲಿ ಕಟ್ಟದ ನೀರಿನ ವ್ಯವಸ್ಥೆಯಲ್ಲದೆ, ಈ ಹೊಳೆಯ ನೀರನ್ನು ಮೇಲೆ ಹಾಕುವ ಏತದ ಮರಿಗೆ, ಏತದ ನೀರನ್ನು ಅವರು ಈ ತನಕ ನೋಡಿರಲಿಲ್ಲ.

ಮಂಜಣ, ಮಾವನ ಆಶ್ಚರ್ಯವನ್ನು ನೋಡಿ ಇಬ್ಬರು ಕೆಲಸದಾಳುಗಳನ್ನು ಕರೆದು ಏತದ ಹಗ್ಗವನ್ನು ಜಗ್ಗಲು ಹೇಳಿದ. ಮಾವ ನೋಡುತ್ತಿದ್ದಂತೆಯೇ ಕೊಡಿಮರದಲ್ಲಿ ತೂಗುತ್ತಿದ್ದ ಮರಿಗೆ ಹೊಳೆಯಲ್ಲಿ ಮುಳುಗಿತು. ಯುವಕರು ಹಗ್ಗ ಹಿಡಿದು ಏತದ ಹೊಂಡಕ್ಕೆ ಜಿಗಿದಾಗ ಮರಿಗೆಯ ತುಂಬ ನೀರು ತುಂಬಿಕೊಂಡು ಅದು ಮೇಲೆ ಬಂತು. ಹೊಳೆಯಿಂದ ಬಂದ ಮರಿಗೆಯ ನೀರನ್ನು ದಂಬೆಗೆ ಬಗ್ಗಿಸುವ ಅಳಿಯನ ತೋಳುಗಳು ಗುತ್ತಿನ ಯಜಮಾನರಿಗೊಂದು ಹೊಸ ಕತೆಯನ್ನೇ ಹೇಳಿದವು. ಬೈಲಿನ ಗದ್ದೆಗಳಿಗೆ ಏತದ್ದೇ ನೀರು ಎಂದಾಗ ಆಶ್ಚರ್ಯವಾಯಿತು, ಮಾತ್ರವಲ್ಲ ಬೈಲಿಡೀ ಏತದ ನೀರಿನಲ್ಲಿಯೇ ಕೊಳಕೆ ಬೆಳೆ ಆಗುತ್ತದೆ. ಅದರಿಂದಲೇ ಈ ಸಲವೂ ನೂರು ಮುಡಿ ಅಕ್ಕಿ ಭಂಡಸಾಲೆಗೆ ಹಾಕಲು ಸಾಧ್ಯವಾಯಿತೆಂದು ಹೇಳಿದಾಗ ಅವರಿಗೆ ಹಾಲು ಕುಡಿದಂತಾಯಿತು.

ಕಟ್ಟಹುಣಿಯಲ್ಲಿ ಬರುವಾಗ ಅಳಿಯ ಮಾವನಿಗೆ ಗುಡ್ಡೆ ಉಳಿದ ಬಯಲುಗಳನ್ನು



ತೋರಿಸಿ ಅವನ್ನು ಹೇಗೆ ಗದ್ದೆ ಮಾಡಲಿದ್ದೇವೆಂದು ವಿವರಿಸುತ್ತಾ ಬಂದ. ಮನೆಯ ಮೂಡು ದಿಕ್ಕಿನಲ್ಲಿ ಅಗೆದು ಮಾಡುತ್ತಿರುವ ಅಡಿಕೆ ತೋಟ ತೋರಿಸಿದ. ಸುತ್ತ ತಾವು ನೆಟ್ಟ ಸುಮಾರು ಐನೂರು ಫಲ ನೀಡಲು ತಯಾರಾದ ಅಡಿಕೆ ಗಿಡಗಳನ್ನು ತೋರಿಸಿದ. ತೋಟದ ಬಾಳೆ, ತೆಂಗುಗಳಲ್ಲಿ ಫಲ ತುಂಬಿ ತುಳುಕುತ್ತಿತ್ತು.

ಕಾಡು ಕಡಿದು ತೋಟ ಮಾಡುವ, ಗುಡ್ಡ ಅಗೆದು ಬೆಟ್ಟುಗದ್ದೆ, ಬಯಲು ಅಗೆದು ಸುಗ್ಗಿಯ ಭೂಮಿ ಮಾಡುವ, ಬೆಟ್ಟು ಗದ್ದೆಯನ್ನು ಬೈಲುಗದ್ದೆ ಮಾಡುವ ಕೆಲಸವೆಲ್ಲ ಕಿನ್ಯನನದು. ಮಾಡಿದ ಭೂಮಿಯಲ್ಲಿ ಮೂರು ಬೆಳೆ, ಎರಡು ಬೆಳೆ, ಬೆಟ್ಟು ಬೆಳೆ ತೆಗೆಯುವ ಕೆಲಸ ತನ್ನದೆಂದು ಹೇಳುವಾಗಲೇ ಗುತ್ತಿನ ಯಜಮಾನರಿಗೆ ಕಿನ್ಯನನ ನೆನಪಾದದ್ದು. ''ಎಲ್ಲಿದ್ದಾನೆ ಕಿನ್ಯನ?''

ಕಿನ್ಯನ ಯುವಕರ ಜೊತೆ, ಮಾವ ಬರುತ್ತಾರೆಂದು ಬೆಳಗ್ಗೆಯೇ ಕಾಡಿಗೆ ಬೇಟೆಯಾಡಲು ಹೋಗಿದ್ದಾನೆಂದು ತಿಳಿಯಿತು. ಎಲ್ಲರಿಗೂ ಗೊತ್ತಿತ್ತು 'ಕಾಡುಕುರಿ' ಅಲ್ಲದಿದ್ದರೆ ಹಂದಿ ಮಾಂಸವೆಂದರೆ ಮಾವನಿಗೆ ಪ್ರಾಣಾಂತ. ಹಾಗಾಗಿ ಪರಿಶಿಷ್ಟ ಜಾತಿಯ ಕೆಲವು ಯುವಕರನ್ನು ಕರೆದುಕೊಂಡು ಅವನು ಬೇಟೆಗೆ ಹೋಗಿದ್ದನು. ಗುತ್ತಿನ ಯಜಮಾನರಿಗೆ ಅಳಿಯಂದಿರು ತನ್ನಲ್ಲಿ ಜಗಳ ಮಾಡಿ ಬಂದಿದ್ದರೂ ತನ್ನನ್ನು ಮರೆತಿಲ್ಲ ಎಂದು ಸಮಾಧಾನವಾಯಿತು.

ಬೇಟೆಗೆ ಹೋದವರು ತಿಮ್ಮಯಾಚಾರಿ ಮಾಡಿಕೊಟ್ಟ ಕಳ್ಳಕೋವಿಯಲ್ಲಿ ಒಂದು ಕಾಡುಕುರಿ ಹೊಡೆದು ತಂದಿದ್ದರು. ಹೆಚ್ಚಾಗಿ ಅಂಗಳಕ್ಕೆ, ಅಲ್ಲದಿದ್ದರೆ ಬೈಲಿಗೆ ಬರುವ ಹುಲಿಗಳನ್ನು, ಆನೆ, ಹಂದಿಗಳನ್ನು ಹೆದರಿಸಲು ಉಪಯೋಗಿಸುತ್ತಿದ್ದ ಕೋವಿ, ಒಮ್ಮೊಮ್ಮೆ ಹಂದಿಯನ್ನೋ, ಕಾಡುಕುರಿಯನ್ನೋ ಹೊಡೆದುಕೊಡುತ್ತಿತ್ತು.

ಕಂಪನಿ ಸರಕಾರ ಬರುವುದಕ್ಕಿಂತ ಮೊದಲು ಉಳ್ಳಾಲದ ಸುತ್ತಮುತ್ತ ಬಹಳಷ್ಟು ಕೋವಿಗಳು ಸಿಗುತ್ತಿದ್ದವಂತೆ. ಉಳ್ಳಾಲದ ರಾಣಿ ಅಬ್ಬಕ್ಕನ ದಂಡು ಜೋರಾಗಿದ್ದ ಕಾಲದಲ್ಲಿ ರಾಣಿ ಕೋವಿಗಳನ್ನು ತರಿಸಿ ಊರೆಲ್ಲ ಹಂಚಿ ಪೋರ್ಚುಗೀಸರ ವಿರುದ್ಧ ಹೋರಾಡಲು ಸಿದ್ಧತೆ ನಡೆಸಿದ್ದಳು. ಆ ತುಪಾಕಿಗಳು ಈಗ ತುಕ್ಕು ಹಿಡಿದು ತೂತು ಬಿದ್ದು ತಿಮ್ಮಯಾಚಾರಿಯ ಬಳಿ ತೇಪೆ ಹಾಕಲು ಬರುತ್ತಿದ್ದವು. ಅವನ ತಂದೆ, ಮಾವ ಎಲ್ಲ ಅಬ್ಬಕ್ಕನ ದಂಡಿಗೆ ಕೋವಿ ಮಾಡಿಕೊಡುತ್ತಿದ್ದವರಂತೆ. ಹಾಗಾಗಿ ತಿಮ್ಮಯಾಚಾರಿಯೂ ಚಿಕ್ಕಂದಿನಲ್ಲೇ ಆ ವಿದ್ಯೆ ಕಲಿತಿದ್ದ. ಅವನಿಗೆ ಯಾರ್‍ಯಾರೋ ಬಂದು ಸೇನೆಯ ಮದ್ದುಗುಂಡು ಕದ್ದು ತಂದುಕೊಡುತ್ತಿದ್ದರು. ಅದನ್ನು ಅವ ಊರವರಿಗೆ ಕದ್ದು ಮಾರುತ್ತಿದ್ದ. ಅಂತಹ ಒಂದು ಕೋವಿಯನ್ನು ಕಿನ್ಯನ ತಿಮ್ಮಯಾಚಾರಿಯಿಂದ ತೆಗೆದುಕೊಂಡು ಅವನಿಂದಲೇ ಗುರಿ ಇಡುವುದು, ಮದ್ದು ತುಂಬಿಸುವುದನ್ನು ಕಲಿತು ಗದ್ದೆಗೆ ಬರುತ್ತಿದ್ದ ಆನೆ, ಹುಲಿಗಳನ್ನು ಹೆದರಿಸುತ್ತಿದ್ದ. ಇಂದು ಮಾವ ಬಂದ ಖುಷಿಯಲ್ಲಿ ಕಾಡಿಗೆ ನುಗ್ಗಿ ಬೇಟೆಯಾಡಿ 'ಕಾಡುಕುರಿ' ತಂದಿದ್ದ.

ಮಧ್ಯಾಹ್ನದ ಊಟ ತಯಾರಾದಾಗ ಕುಡಿಯರನ್ನು ಕರೆಸಿ ಈಚಲು ಮರದ ಶೇಂದಿ ಇಳಿಸಿದರು. ಮಂಜಣನಿಗೆ ಗೊತ್ತಿತ್ತು, ಶೇಂದಿ ಎಂದರೆ ಮಾವ ಕೊಡ ಕೊಟ್ಟರೂ ಕುಡಿಯುವರೆಂದು. ಅದರೊಟ್ಟಿಗೆ ಬೇಟೆಯ ಮಾಂಸ ಇದ್ದರೆ ಕೇಳುವುದೇ ಬೇಡ. ಗುತ್ತಿನ ಯಜಮಾನರು ಮಂಜಣ ಎಣಿಸಿದಂತೆಯೇ ಕೊಡ ಶೇಂದಿ ಮುಗಿಸಿದರು. ಮಧ್ಯಾಹ್ನದ ಊಟವಾಗಿ ಮಲಗಿದವರು ಏಳುವಾಗ ಹೊತ್ತು ಸಂಜೆಯಾಗಿತ್ತು.

ಗುತ್ತಿನ ಯಜಮಾನರು ಸಂಜೆ ಅಳಿಯನೊಂದಿಗೆ ಬೈಲು ಇಳಿದರು. ಏತದಲ್ಲಿ ನೀರೆಳೆಯುವಲ್ಲಿಗೆ ಬಂದು ಹೊತ್ತು ಮುಳುಗುವವರೆಗೆ ಅದನ್ನೇ ನೋಡುತ್ತಾ ನಿಂತವರು ಮಂಜಣನಲ್ಲಿ ಮೆಲ್ಲ, ಇಂತಹದೇ ಒಂದು ಏತ ಮಜಲೋಡಿಯಲ್ಲಿ ಹಾಕಿದರೆ ಹೇಗೆ? ಎಂದು ಕೇಳಿದರು. ಮಂಜಣ, ಕಿನ್ಯನನನ್ನೂ ಕೆಲಸದವರನ್ನೂ ಕರೆದು ಮಾವನ ಆಸೆಯನ್ನು ತಿಳಿಸಿದ. ಎಲ್ಲರೂ ಮಾತನಾಡಿ ಇನ್ನು ಹತ್ತು ದಿನಗಳಲ್ಲಿ ಬಂದು ಮಜಲೋಡಿಯಲ್ಲಿ ಏತ ನಿರ್ಮಿಸಿ ಕೊಡುತ್ತೇವೆಂದು ಒಪ್ಪಿದರು. ಮಾವನ ಕಾಲು ನೆಲದಲ್ಲಿ ನಿಲ್ಲಲಿಲ್ಲ. ಮನೆಗೆ ಬಂದು ತಂಗಿ ಸಂಕಮ್ಮನಿಗೆ ಹೇಳಿ, ರಾತ್ರಿಯಿಡೀ ಅದರನ್ನೇ ವಿವರಿಸತೊಡಗಿದರು. ಏತ ಎಲ್ಲಿ ಹಾಕುವುದು, ಹೇಗೆ ಗದ್ದೆ ಸಾಗುವಳಿ ಮಾಡುವುದು, ಮಂಜಣ, ಕಿನ್ಯನ ಬಂದು ಅದರ ತಯಾರಿ ಮಾಡಿ ಕೊಡುವುದನ್ನು ಹೇಳಿ ಹೇಳಿ ಮತ್ತೆ ಸ್ವಲ್ಪ ಶೇಂದಿ ಕುಡಿದು ಮಲಗಿದವರಿಗೆ ಸುಖದ ನಿದ್ದೆ.

ಬೆಳಗೆದ್ದು ಕಾಲಿಗೆ ಬಿದ್ದ ಅಳಿಯಂದಿರಿಗೆ, ಸೊಸೆಯಂದಿರಿಗೆ ಒಂದೊಂದು ವರಹ ಹಣ ಕೊಟ್ಟು, ತಂಗಿಗೆ ನಾಲ್ಕು ವರಹ ಕೊಟ್ಟರು. ತಂಗಿ, ಮಕ್ಕಳು ಬೇಡ ಬೇಡವೆಂದರೂ ದುಡ್ಡು ಕೊಡುವಾಗ ಸಂಕಮಕ್ಕನಿಗೂ ಸುಬ್ಬಾಳ್ವರಿಗೂ ಕಣ್ಣಲ್ಲಿ ನೀರು ತುಂಬಿಕೊಂಡಿತು. ಕೆಲಸದವರಿಗೂ ಒಂದೊಂದು ವರಹ ದುಡ್ಡು ಕೊಟ್ಟು ಹೊರಟ ಸುಬ್ಬಾಳ್ವರಿಗೆ ಯಾವಾಗ ಹೋಗಿ ತಾಯಿಗೆ ವಿವರ ತಿಳಿಸಲಿಲ್ಲಾ ಎನ್ನುವ ಕಾತರ. ಗುತ್ತಿನ ಯಜಮಾನರು ಹೊರಡುವಾಗ, ಕಿನ್ಯನನಿಗೊಂದು ದಂಡಿನ ಕೋವಿಯನ್ನೂ, ಮನೆಯ ಪೆತಾರಿಯಲ್ಲಿದ್ದ ತೋಟೆಯನ್ನೂ ಕಳುಹಿಸುತ್ತೇನೆಂದು ಹೇಳಿದಾಗ ಅವನಿಗೆ ಸ್ವರ್ಗಕ್ಕೆ ಮೂರೇ ಗೇಣು.

ಮಂಜಣ, ಮಾವ ಹೋದ ಮರುದಿನವೇ ಏತದ ತಯಾರಿಗೆ ಪ್ರಾರಂಭಿಸಿದ. ಕಾಡಿನಿಂದ ಬೇಕಾದ ಮರಗಳನ್ನು ಕಡಿಸತೊಡಗಿದ. ಬೈನೆ ಮರದ ಕಾಂಡವೊಂದನ್ನು ಎಬ್ಬಿಸಿ ಮರಿಗೆ ಕೆತ್ತಿಸಿದ. ಒಳ್ಳೆಯ ಸಾಗುವಾನಿ ಮರವೊಂದನ್ನು ನೋಡಿ ಬೆನ್ನು ತೊಲೆ, ಗಟ್ಟಿಯ ಬಿದಿರಿನಿಂದ ಒಂದು ಕರೆ, ಬೆತ್ತದ ಕೊಡಂಗೆ, ಬೆನ್ನು ತೊಲೆಯ ತುದಿಗೆ ಕಟ್ಟುವ ಕುಂಡಚ್ಚ, ಮಧ್ಯಕ್ಕೆ ಕಟ್ಟುವ ಮುದಲೆ, ತಿರುಗಣೆ, ತಿರುಗಣೆಗೆ ಎರಡು ಕಿವಿ, ದಂಬೆ, ನೀರಕುತ್ತಿ ಹೀಗೆ ಅಡ್ಡಮರ ತಯಾರಾದಾಗ ಹತ್ತು ದಿನ ಆಯಿತು. ಒಂದು ದಿನ ತಾಯಿಯ ಕಾಲಿಗೆ ನಮಸ್ಕಾರ ಮಾಡಿ ಅಣ್ಣ ತಮ್ಮಂದಿರು ಮುಗೇರರ ನಾಲ್ಕು ಯುವಕರನ್ನು ಕರೆದುಕೊಂಡು ಎಲ್ಲವನ್ನೂ ಹೊರಿಸಿಕೊಂಡು ಮಜಲೋಡಿಗೆ ಹೊರಟರು. ಬೆಳಗ್ಗೆ ತಂಗಳನ್ನ, ಮೊಸರು ತಿಂದು ಹೊರಟವರು ಮಜಲೋಡಿಯ ಬೈಲು ತಲುಪುವಾಗ ಮಧ್ಯಾಹ್ನ ಕಳೆದಿತ್ತು.



ಗುತ್ತಿನ ಅಂಗಳದಲ್ಲಿ ಕಾಯುತ್ತಾ ಅಳಿಯಂದಿರ ದಾರಿ ನೋಡುತ್ತಿದ್ದ ಗುತ್ತಿನ ಯಜಮಾನರು ಗುಡ್ಡೆಯ ಪದವಿನಲ್ಲಿ ಸಾಮಾನು ಹೊತ್ತುಕೊಂಡು ಬರುವ ತಲೆಗಳು ಕಂಡಾಗ ಮನೆಯ ಯುವಕರನ್ನು ಹೊರೆ ಬದಲಿಸಲು ಕಳುಹಿಸಿದರು.

ಅಂಗಳಕ್ಕೆ ಬಂದಾಗ ಮಜಲೋಡಿಯ ಅಂಗಳ ತುಂಬ ಜನ. ಐದು ವರ್ಷಗಳ ಹಿಂದೆ ಮನೆ ಬಿಟ್ಟು ಹೋದ ಮಕ್ಕಳು ಯುವಕರಾಗಿ ಬಂದಿದ್ದಾರೆ. ಅವರನ್ನೂ ಅವರು ತಂದ ಸಾಮಾನುಗಳನ್ನೂ ನೋಡಲು ಜನ ಸೇರಿದ್ದರು. ಮಜಲೋಡಿಯ ಅಂಗಳದಲ್ಲಿ ಗೌಜೇ ಗೌಜು. ಮೊದಲೇ ಗುತ್ತಿನ ಯಜಮಾನರು ಕಳೆದ ಹತ್ತು ದಿನಗಳಿಂದ ವಿಷಯ ಮಾತನಾಡುತ್ತಿದ್ದರು. ಅವರಿಗೆ ಮಿತ್ತಬೈಲಿನ ಸಾಗುವಳಿ, ಏತದ ನೀರಿನದ್ದೇ ಮಾತು.

ಕಂಬಳದ ನಿಶಾನಿಗೆ ನೀರು ಹಾಯಿಸಿ ಅಂಗಳಕ್ಕೆ ಬರುವ ಕೋಣಗಳನ್ನು ನೋಡಿ ಅಂಗಳದಲ್ಲಾಗುವ ಗೌಜಿಗಿಂತಲೂ, ಹತ್ತು ಪಾಲು ಗೌಜಿ ಇಂದು ಗುತ್ತಿನ ಅಂಗಳದಲ್ಲಿ.

ಕಿನ್ಯನ ಅಜ್ಜಿಯ ಕಾಲು ಮುಟ್ಟಿ ಮನೆಯೊಳಗೆ ಹೋದ. ಐದು ವರ್ಷಗಳ ಹಿಂದೆ ಒಡೆಯನ ಜೊತೆ ಊರು ಬಿಟ್ಟಿದ್ದ ಮೂಲದವರು ಮಲರಾಯನ ಉಯ್ಯಾಲೆಗೆ ದೂರ ದಿಂದಲೇ ಅಡ್ಡ ಬಿದ್ದು ತಮ್ಮವರ ಗುಡಿಸಲಿಗೆ ಓಡಿದರು. ಮಂಜಣ ಚಾವಡಿಯಲ್ಲಿ ಕುಳಿತುಕೊಂಡು ಅಜ್ಜಿಗೂ ಮಾವನಿಗೂ ಮಿತ್ತಬೈಲಿನ ಸಮಾಚಾರ ಹೇಳಿದ. ಕಿನ್ಯನ ಚಾವಡಿಯಲ್ಲಿ ಯುವಕರ ಮಧ್ಯೆ ಕುಳಿತು ಅವನ ಕಾರುಬಾರಿನ ಕತೆ ಹೇಳುತ್ತಿದ್ದ. ಗುತ್ತಿನ ಯಜಮಾನರು ಮಾತ್ರ ಅಂಗಳದಲ್ಲಿ ಏತದ ವಸ್ತುಗಳಿದ್ದಲ್ಲಿಂದ ಕದಲಲಿಲ್ಲ.

ಕೋಳಿ ಸಾರು, ಕಡುಬಿನ ಅಡುಗೆ ಆಗಿ ಊಟವಾಗುವಾಗ ಮಧ್ಯರಾತ್ರಿ ಕಳೆಯಿತು. ಚಾವಡಿಯಲ್ಲಿ ಅಳಿಯನನ್ನು ತನ್ನ ಬಳಿಯೇ ಮಲಗಿಸಿಕೊಂಡ ಮಾವನಿಗೆ ವಿಷಯ ಕೇಳಿದಷ್ಟು ಮುಗಿಯಲಿಲ್ಲ. ಬೆಳಗ್ಗಿನ ಜಾವ ಕೋಳಿ ಕೂಗುವಾಗ ಎದ್ದು ಹೊರಗೆ ಬಂದ ಅಜ್ಜಿಗೆ  ಮಾವ, ಅಳಿಯ ಕುಳಿತು ಮಾತನಾಡುತ್ತಿರುವುದು ಕಂಡಿತು. ಅಜ್ಜಿ, ಮಗನನ್ನೂ ಮೊಮ್ಮಗನನ್ನೂ ಗದರಿಸಿ ಮಲಗಲು ಹೇಳುವಾಗ ಐದು ವರ್ಷಗಳ ಹಿಂದಿನ ಘಟನೆಗಳು ನೆನಪಾಗಿ ಕಣ್ಣುಗಳು ಒದ್ದೆಯಾದವು.

ಐದು ವರ್ಷಗಳ ಹಿಂದೆ ಇದ್ದದ್ದಕ್ಕೆಲ್ಲಾ ಜಗಳ ಮಾಡುತ್ತಿದ್ದ ಮಂಜಣ, ಕಿನ್ಯನ, ಇವರ ಮಾರಿ ಎಲ್ಲಿಗಾದರೂ ಹೋಗಿದ್ದರೆ ಚೆನ್ನಾಗಿತ್ತು ಎಂದುಕೊಳ್ಳುತ್ತಿದ್ದ ಯಜಮಾನ ಸುಬ್ಬಾಳ್ವರು, ಅವರ ಮಧ್ಯೆ ಕಣ್ಣೀರು ಹಾಕುತ್ತಿದ್ದ ಮಗಳು ಸಂಕಮಕ್ಕ ಇವರನ್ನೆಲ್ಲಾ ನೆನೆದು, ಇಂದು ಮಾತನಾಡುತ್ತಾ ಕುಳಿತಿರುವ ಮಾವನನ್ನೂ, ಅಳಿಯನನ್ನೂ ನೋಡಿ ಮುದುಕಿ ಮನಸ್ಸಲ್ಲೇ ಮುಗಳುನಕ್ಕಿತು.

ತಂದೆ ಸತ್ತು ಹದಿಮೂರನೇ ದಿನ ರಾತ್ರಿ ಇಳಿದು ಬಂದ ಮಕ್ಕಳಿಗಾಗಲಿ, ಮೂವತ್ತು ವರ್ಷ ಗಂಡನ ಮನೆಯಲ್ಲಿ ಸುಖವಾಗಿ ಬಾಳುತ್ತಿದ್ದ ಸಂಕಮ್ಮಕ್ಕನಿಗಾಗಲಿ ಮಜಲೋಡಿಯ ಗುತ್ತು ಹಿಡಿಸಲಿಲ್ಲ. ಎಲ್ಲವೂ ಹೊಸತು ಅವರಿಗೆ. ತಂದೆಯ ಮನೆ ಪಾವೂರು ಗುತ್ತಿನಲ್ಲಿ ಯಾವುದಕ್ಕೂ ಕಡಿಮೆ ಇಲ್ಲದೆ ಬೆಳೆದವರಿಗೆ ಮಾವನ ಬೈಗುಳ, ಅತ್ತೆಯ ಹಿಂಸೆಯಿಂದ ಅನ್ನ

ರುಚಿಸಲಿಲ್ಲ. ಹುಡುಗರೂ ಅವರಿಗೆ ಇಷ್ಟ ಆಗಲಿಲ್ಲ. ದಿನಾಲು ಜಗಳ,ತಕರಾರು. ತಾಯಿ ಕಣ್ಣೀರು ಹರಿಸುತ್ತಾ ಅನ್ನ ನೀರು ಬಿಟ್ಟು ಕುಳಿತಾಗ ನಾಲ್ಕು ದಿನ ಸರಿಯಾದರೂ ಮತ್ತೆ ಏನಾದರೂ ಸಣ್ಣ ವಿಷಯ ಹಿಡಿದುಕೊಂಡು ಕಾಳಗವೇ ನಡೆಯುತ್ತಿತ್ತು. ಅವರು ಎದ್ದು ಊರು ಬಿಟ್ಟು ಹೋದಾಗ ನೋವಾದರೂ, ಹೋದಲ್ಲಿ ಸುಖದಲ್ಲಿದ್ದಾರಂತೆ ಎಂದು ಬೇರೆ ಯವರಿಂದ ಸುದ್ದಿ ತಿಳಿದಾಗ ಅಜ್ಜಿಗೆ ಸಮಾಧಾನವಾಗುತ್ತಿತ್ತು. ಮಲರಾಯನ ಉಯ್ಯಾಲೆಗೆ ಅವರ ಹೆಸರಲ್ಲಿ ಪ್ರತಿ ಸಂಕ್ರಾಂತಿಗೆ ಎಳನೀರು ಕೆತ್ತಿಸಿಡುತ್ತಿದ್ದರು. ಪುದ್ವಾರ್ ಉಣ್ಣುವಾಗ, ವಿಷು ಹಬ್ಬಕ್ಕೆ, ಮಲರಾಯನ ನೇಮಕ್ಕೆ ಆಳು ಕಳುಹಿಸಿ ಅವರನ್ನು ಕರೆಸುವಂತೆ ಮಗನಲ್ಲಿ ಹೇಳಿದರೆ, ಹೋದ ಮಾರಿಯನ್ನು ಮತ್ತೆ ಕರೆತರುವುದು ಗುತ್ತಿನ ಯಜಮಾನರಿಗೆ ಇಷ್ಟವಿರಲಿಲ್ಲ. ಒತ್ತಾಯಕ್ಕೆ ಜನ ಕಳುಹಿಸಿದರೂ ಬಾರದಿರುವ ತಂಗಿ, ಅಳಿಯಂದಿರಿಗೆ ಅಹಂ ಎಂದು ತಾಯಿಯಲ್ಲಿ ಹೇಳಿದಾಗ ಅಜ್ಜಿ ಮನಸ್ಸಲ್ಲೇ ಕೊರಗುತ್ತಾ ಕುಳಿತರು. ಗುತ್ತಿನ ಯಜಮಾನರಿಗೂ ಎಷ್ಟು ಬೈದರೂ ಮನಸ್ಸಿನ ಮೂಲೆಯಲ್ಲೊಂದು ಕಾಸರಕನ ಮುಳ್ಳು ಚುಚ್ಚುತ್ತಲೇ ಇತ್ತು.

ಒಂದು ದಿನ ಮೀನು ಮಾರುತ್ತಾ ಬಂದ ಮೊಗವೀರ ಹೆಣ್ಣೊಬ್ಬಳು ಮಿತ್ತಬೈಲಿನ ವಿಷಯವೆಲ್ಲ ಹೇಳಿದಳು. ಸುಗ್ಗಿಯ ಬೇಸಾಯ ಕಳೆದು ಮಿತ್ತಬೈಲಿನವರು ಮಂಜೇಶ್ವರದ ಜೈನ ಸೆಟ್ಟಿಯ ಭಂಡಸಾಲೆಗೆ ನೂರು ಮುಡಿ ಅಕ್ಕಿ ಹಾಕಿದ ಸಂಗತಿ ಅವಳು ಹೇಳಿದಾಗ ಮಜಲೋಡಿಯವರ ಕಿವಿ ನೆಟ್ಟಗಾಯಿತು. ಗುತ್ತಿನ ಯಜಮಾನರ ಕಿವಿಗೆ ಈ ಗಾಳಿಸುದ್ದಿ ಬಿದ್ದಿತ್ತಾದರೂ ಅದು ಇಲಿ ಹೋದದ್ದು ಹುಲಿ ಹೋಯಿತು ಅಂತಾರಲ್ಲ ಅಂತಹ ಸುದ್ದಿ ಎಂದು ಸುಮ್ಮನಾದರು. ಆದರೆ ಮೀನು ಮಾರುವವಳು ಹೇಳಿದ್ದನ್ನು ತಾಯಿ ಬಿಡಿಸಿ ಬಿಡಿಸಿ ಹೇಳಿದಾಗ ಅವರಿಗೆ ಮಿತ್ತಬೈಲಿನ ವಿಚಾರವನ್ನು ನಂಬಲೇಬೇಕಾಗಿ ಬಂತು. ಅವರು ಮಾಡಿದ ಹೊಸ ತೋಟಗಳು, ಫಲ ಬಿಡುತ್ತಿರುವ ತೆಂಗಿನ ಸಸಿಗಳ ಸಂಗತಿಯನ್ನೆಲ್ಲಾ ಕೇಳುವಾಗ ಆಶ್ಚರ್ಯವೂ ಆಯಿತು. ಸಂತೋಷವೂ ಆಯಿತು.

ಬೆಸ್ತರವಳು ಸುದ್ದಿ ಹೇಳಿದ ರಾತ್ರಿಯೇ ಮಿತ್ತಬೈಲಿಗೆ ಹೊರಡಲು ತೀರ್ಮಾನಿಸಿದ ಸುಬ್ಬಾಳ್ವರು, ಐದು ವರ್ಷಗಳ ಹಿಂದೆ ಮನೆ ಬಿಟ್ಟು ಹೋದ ಯುವಕರನ್ನು ನೆನೆದು, ಹೋಗಲು ಸ್ವಲ್ಪ ಹಿಂಜರಿದು ಪ್ರಯಾಣ ಎರಡು ದಿನ ಮುಂದಕ್ಕೆ ಹಾಕಿದರು. ಕೊನೆಗೆ ತಾಯಿಯ ಒತ್ತಾಯಕ್ಕೆ ಮಣಿದು ಹೊರಟು ಮಿತ್ತಬೈಲಿಗೆ ಬಂದರು. ಅವರಿಗೆ ಮಂಜಣ, ಕಿನ್ನನ ಎಲ್ಲಿಯಾದರೂ ಕೆಲಸದವರ ಅಥವಾ ಮನೆಯ ಯುವಕರ ಮುಂದೆ ತನ್ನನ್ನು ಯಾಕೆ ಬಂದಿರೆಂದು ಕೇಳಿದರೆ ಏನು ಹೇಳುವುದೆಂಬ ಭಯ. ಆದರೂ ಗುತ್ತಿನ ಯಜಮಾನರು ಧೈರ್ಯ ತಂದುಕೊಂಡು ಮಿತ್ತಬೈಲಿಗೆ ಹೋಗಿದ್ದರು.

ಮಿತ್ತಬೈಲಿಗೆ ಹೋಗಿ ಬಂದ ಗುತ್ತಿನ ಯಜಮಾನರ ಸಂತೋಷಕ್ಕೆ ಎಣೆಯೇ ಇಲ್ಲ. ತಾಯಿಯಲ್ಲಿ ಮಿತ್ತಬೈಲಿನ ವರ್ಣನೆಯನ್ನು ಮಾಡಿದಷ್ಟೂ ಮುಗಿಯಲಿಲ್ಲ.

ಮಂಜಣನ ನೀರಿನ ಏತದ ಬಗ್ಗೆ ತಾಯಿಗೆ ವರ್ಣಿಸುವಾಗ ಅದರ ತುದಿ ಬುಡ



ಅರ್ಥವಾಗದಿದ್ದರೂ ಮಗ ಹೇಳಿದ್ದಕ್ಕೆ ತಲೆಯಾಡಿಸಿದರು. ಅಳಿಯ ಮಜಲೋಡಿಯಲ್ಲೂ ಏತದ ಸಾಮಗ್ರಿಗಳನ್ನು ತಂದು ಒಂದು ಏತ ಮಾಡಿಕೊಡಲು ಒಪ್ಪಿದ್ದಾನೆ ಎಂದು ಹೇಳಿದಾಗ ತಾಯಿ ಸಮಾಧಾನದ ಉಸಿರು ಬಿಟ್ಟರು. ತಾಯಿಗೆ ಏತಕ್ಕಿಂತ ಹೆಚ್ಚು ಮಾವ ಅಳಿಯಂದಿರು ಒಬ್ಬರನ್ನೊಬ್ಬರು ಬಿಟ್ಟು ಹಾಕಲಿಲ್ಲವಲ್ಲವೆಂಬ ಸಂತೋಷ. ಅವರಿಗೆ ಏತ, ಅಕ್ಕಿ, ಭತ್ತ, ಭಂಡಸಾಲೆ ಒಂದೂ ತಲೆಗೆ ಹೋಗಲಿಲ್ಲ. ಅವರಿಗೆ ತನ್ನ ಮಗಳು, ಮಕ್ಕಳು ಸುಖವಾಗಿದ್ದಾರೆ, ಮಾವನನ್ನು ಒಳ್ಳೆಯ ರೀತಿಯಲ್ಲಿ ಸ್ವಾಗತಿಸಿದರು ಎಂಬುದೇ ದೊಡ್ಡ ಸಂತೋಷದ ಸಂಗತಿ. ಯಜಮಾನರು ಮನೆಯ ಉಳಿದವರಿಗೆಲ್ಲಾ ಏತದ ವಿಷಯ ವಿವರಿಸಿ, ಏತ ಕೂಡಿಸಲು ಜಾಗ, ಸಾಗುವಳಿಗೆ ಗದ್ದೆ ತಯಾರು ಮಾಡಲು ಹೇಳಿದರು. ಯುವಕರಿಗೆ ಹೊಸ ಕೆಲಸವೂ ಆಯಿತು. ಭೂಮಿಯಲ್ಲಿ ಸಾಗುವಳಿ ಹೆಚ್ಚಿತು. ಮಜಲೋಡಿಯ ಗುತ್ತಿಗೆ ಅಗತ್ಯವಾಗಿ ಬೇಕಾದ ಹೊಸ ಕಾಯಕಲ್ಪ ಆಗುತ್ತದೆ ಎಂಬುದು ಗುತ್ತಿನ ಯಜಮಾನರ ಆಲೋಚನೆ. ಮಂಜಣ, ಕಿನ್ನನರನ್ನು ಮನೆಯವರೆಲ್ಲ ಎದುರು ನೋಡುತ್ತಿದ್ದಂತೆ ಆ ದಿನ ಬಂದಿತ್ತು.

ಬೆಳಗ್ಗೆ ಸ್ವಲ್ಪ ತಡವಾಗಿ ಎದ್ದ ಮಂಜಣ ಅಂಗಳಕ್ಕೆ ಬರುವಾಗ, ಬೈಲು ಸುತ್ತಿ ಬಂದ ಕಿನ್ನನನೂ, ಮಜಲೋಡಿಯ ಯುವಕರೂ ಸಾಮಾನುಗಳನ್ನೆಲ್ಲ ಹೊಳೆ ಬದಿಗೆ ಸಾಗಿಸಿಟ್ಟದ್ದನ್ನು ಹೇಳಿದರು. ಮಾವ ಅಲ್ಲೇ ಬೈಲಲ್ಲಿ ಕುಳಿತು ಮಂಜಣನನ್ನು ಕಾಯುತ್ತಿದ್ದಾರೆಂದು ಹೇಳಿದಾಗ ಅವನಿಗೆ ನಗು ಬಂತು. 'ಮುದುಕ ರಾತ್ರಿ ಮಲಗಲೇ ಇಲ್ಲಾಂತ ಕಾಣುತ್ತದೆ' ಎಂದುಕೊಳ್ಳುತ್ತಾ, ಅಜ್ಜಿ ಕೊಟ್ಟ ತಂಗಳನ್ನ ಬಲ್ಯಾರ್ ಮೀನಿನ ಚಟ್ನಿಯನ್ನು ತಿಂದು ಬೈಲಿಗೆ ಬಂದ. ಬರುವಾಗ ಬೈಲಿಡೀ ಜಾತ್ರೆ ಸೇರಿದ ಹಾಗೆ ಜನ ನೆರೆದಿದ್ದರು. ಎಲ್ಲರಿಗೂ ಈ ಮಜಲೋಡಿಯವರ ಹೊಸ ತಂತ್ರವನ್ನು ನೋಡುವ ಆಸೆ.

ಕುಡಿಯರೂ, ಮುಗೇರರ ಯುವಕರೂ ಮೆಟ್ಟು, ಮರ, ಕಂಬಗಳನ್ನು ನಿಲ್ಲಿಸಿ, ಬೆನ್ನು ತೊಲೆ ಜೋಡಿಸಲು ಮಂಜಣನನ್ನು ಕಾಯುತ್ತಿದ್ದರು. ಮಂಜಣ ಬಂದು 'ಕುಂಡಚ್ಚ', 'ಮುದಲೆ' ಜೋಡಿಸಲು ಗುರುತ ಮಾಡಿಕೊಟ್ಟ. ಚಡಿ ತೆಗೆಸಿ ಬೆನ್ನು ತೊಲೆಯ ತುದಿಯಲ್ಲಿ ಹುರಿ ಹಗ್ಗದಲ್ಲಿ ಕುಂಡೆಚ್ಚವನ್ನು ಜೋಡಿಸಿದರು. ಕುಂಡಚ್ಚಕ್ಕೆ, ಕೊಡಂಗೆಯನ್ನು ಹೆಣೆದರು. ಮಿತ್ತಬೈಲಿನ ಪರಿಶಿಷ್ಟ ಯುವಕರು ಹುಲ್ಲಿನ ಹಗ್ಗ ನೇಯ್ದರು, ಬಾಕಿಯವರು ಬೆನ್ನು ತೊಲೆ ಏರಿಸಿ ಗುತ್ತಿನ ಯಜಮಾನರಿಗಾಗಿ ಕಾದರು. ಯಜಮಾನರು ದೈವಕ್ಕೆ ಎಳನೀರು ಕೆತ್ತಿಸಿ ಇಟ್ಟು ಬರುವಾಗ ಸೂರ್ಯ ನೆತ್ತಿಗೆ ಬಂದ. ಅಜ್ಜಿ ತಂದ ತೆಂಗಿನಕಾಯಿಯನ್ನು ಮಂಜಣ ಏತದ ಅಡ್ಡ ಮರಕ್ಕೆ ಭಾರಕ್ಕೆಂದು ಕಟ್ಟಿದ್ದ ಕಲ್ಲಿಗೆ ಒಡೆದ. ಅಜ್ಜಿ ಕೋಲ್ತಿರಿ ಕುತ್ತಿದ್ದ ಕುಂಬಳ ಕಾಯಿಯನ್ನು ಮಜಲೋಡಿಯ ಮುಗೇರರ ಯಜಮಾನನಿಗೆ ಕೊಟ್ಟು ಒಡೆಯಲು ಹೇಳಿದರು. ಕುಂಬಳಕಾಯಿ ಒಡೆದ ಮೇಲೆ ಎಲ್ಲರೂ ಸೇರಿ ಬೆನ್ನು ತೊಲೆಯನ್ನು ಏರಿಸಿದರು. ಬುಡದಲ್ಲಿ ಕುಳಿತ ಬೆನ್ನು ತೊಲೆ ಕಂಬ ಕೋಲಿನಲ್ಲಿ ಮೇಲೆ ಕೆಳಗೆ ಹೋಯಿತು. ಕೊನೆಯಲ್ಲಿದ್ದ ಅಡ್ಡ ಮರಕ್ಕೆ ಹುಲ್ಲಿನ ಹಗ್ಗ ತೂಗುಹಾಕಿದರು. ಮಂಜಣ

ಬಿದಿರಿನ ಗಳವನ್ನು ಕೊಡಂಗೆಗೆ ಕಟ್ಟಿ, ಕರೆಯಲ್ಲಿ ಕಿವಿಯನ್ನು ಕಟ್ಟಿ, ಹಸಿ ಮರದ ಮರಿಗೆಯನ್ನು ತಿರುಗಣೆಯ ಕೋಲಿನಲ್ಲಿ ಗಳದ ಕಿವಿಗೆ ಹೆಣೆದ. ಏತ ತಯಾರಾಗುವಾಗ ಮೆಟ್ಟು ಮರದಲ್ಲಿ ನಿಂತ ಅಳಿಯಂದಿರ ಹಣೆಗೂ, ಮರಿಗೆಗೂ ದೈವದ ಗಂಧ ಹಚ್ಚಿ, ಏತದ ಬದಿಯಲ್ಲಿ ನಿಂತ ಗುತ್ತಿನ ಯಜಮಾನರು, ಕಣ್ಣು ಮುಚ್ಚಿ ಮಲರಾಯನನ್ನು ನೆನೆದುಕೊಂಡರು. ಅತ್ತ ಯುವಕರಿಗೆಲ್ಲ ಹಗ್ಗದಲ್ಲಿ ತೂಗುವ ಉತ್ಸಾಹ. ಕೊನೆಗೆ ಕಿನ್ಯನನೂ ಕುಡಿಯರೂ ಹತ್ತು ಮರಿಗೆ ನೀರು ಮಗುಚಿ ತೋರಿಸುತ್ತೇವೆಂದು ಏತದ ಹಗ್ಗವನ್ನು ಹಿಡಿದುಕೊಂಡರು.

ಏತದ ಹಗ್ಗದಲ್ಲಿ ತೂಗುವವರು ತೂಗಿ ಏತದ ಹೊಂಡಕ್ಕೆ ಜಿಗಿಯುವಾಗ ಮೇಲಕ್ಕೆ ಬಂದ ಮರಿಗೆಯ ನೀರನ್ನು ಎತ್ತಿ ಮಂಜಣ ದಂಬೆಗೆ ಮಗುಚಿದ. ಮೊದಲ ಮರಿಗೆಯ ನೀರು ಮೇಲೆ ಬರುವಾಗ ಏನೆಂದು ಅರ್ಥವಾಗದ ಜನರು ಎರಡನೇ ಮರಿಗೆಯ ನೀರು ದಂಡೆಗೆ ಬರುವಾಗ 'ಹೋ' ಎಂದು ಹರ್ಷೋದ್ಗಾರ ಮಾಡಿದರು. ಅಜ್ಜಿ ನೀರನ್ನು ಎರಡು ಕೈಗಳಲ್ಲೂ ತೆಗೆದು ಗುಟುಕು ಕುಡಿದು, ನಿಂತಿದ್ದ ಮಜಲೋಡಿಯ ಮನೆಯವರನ್ನು ನೋಡಿ ನಕ್ಕರು. ಮಂಜಣ ನೀರು ಮಗುಚುತ್ತಿದ್ದಂತೆಯೇ ಮನೆಯವರು, ಒಕ್ಕಲಿನವರು ಎಲ್ಲ ಬೊಗಸೆಯಲ್ಲಿ ಹಿಡಿದು ಗುಟುಕು ಗುಟುಕು ಕುಡಿದರು. ಅವರಿಗೆಲ್ಲ ದೇವರ ತೀರ್ಥಕ್ಕಿಂತಲೂ ದೊಡ್ಡ ತೀರ್ಥ ಮಜಲೋಡಿಯ ಏತದ ನೀರಾಗಿತ್ತು.

ಅಳಿಯ ಎಷ್ಟು ತಡೆದರೂ ಕೇಳದೆ ಸುಬ್ಬಾಳ್ವರು ನಾಲ್ಕು ಮರಿಗೆ ನೀರು ಮಗುಚಿ ಹಾಕಿದಾಗ, ಅವರಿಗೆ ಭಗೀರಥ ಮಹಾರಾಜ ಗಂಗೆಯನ್ನು ಭರತಭೂಮಿಗೆ ತಂದಷ್ಟು ಸಂತೋಷವಾಯಿತು.

ಸುಬ್ಬಾಳ್ವರ ಬೆನ್ನಿಗೆ ಮನೆಯ ಮುಗೇರರ ಯಜಮಾನ ಚೋಮ ಮೆಟ್ಟು ಮರದಲ್ಲಿ ನಿಂತ. ಕಿನ್ಯನನೂ ಮಂಜಣನೂ ಮುಖ ಮುಖ ನೋಡಿ ಮಜಲೋಡಿಯ ಮುಗೇರರನ್ನು ಏತದ ಹಗ್ಗದಲ್ಲಿ ತೂಗಲು ಹೇಳಿದರು. ಯುವಕರು ಹಗ್ಗದಲ್ಲಿ ನೇತಾಡಿ ಹೊಂಡಕ್ಕೆ ಜಿಗಿಯುವಾಗ ಯಜಮಾನ ಚೋಮ, ಗಳದ ತುದಿಯಲ್ಲಿ ನೇತಾಡುತ್ತಿದ್ದ. ಅಲ್ಲಿಂದ ದಡ್ಡನೆ ಹೊಳೆಗೆ ಹಾರಿದ ಅವನನ್ನು ನೋಡಿ ಎಲ್ಲರೂ ಹಾಸ್ಯ ಮಾಡುತ್ತಾ ಹೊಟ್ಟೆಗೆ ಕೈ ಹಿಡಿದುಕೊಂಡು ನಕ್ಕರು. ಮಜಲೋಡಿ ಹೊಳೆಯ ನೀರು ಬೈಲಿಗೆ ಹರಿದು ಬಂದ ಮೇಲೆ ಎಲ್ಲರೂ ಅಲ್ಲಿಂದ ಕದಲಿದರು. ಮನೆಯಲ್ಲಿ ಶೇಂದಿ, ಕೋಳಿಯ ಊಟವಾಯಿತು.

ಊಟವಾದ ಮೇಲೆ ಮಾವ, ಅಳಿಯಂದಿರು ಯಾವ ಗದ್ದೆಯಲ್ಲಿ ಸುಗ್ಗಿ, ಕೊಳಕೆ ಮಾಡುವುದೆಂದು ಚರ್ಚೆ ಮಾಡಿ, ಹತ್ತು ಮುಡಿ ಭತ್ತ ಬಿತ್ತುವ ಗದ್ದೆಯ ಕೊಳಕೆ ಸಾಗುವಳಿಗೆ ತಯಾರಾದರು. ಮಂಜಣ ಯುವಕರಿಗೆಲ್ಲ, ಮಳೆಗಾಲ ಪ್ರಾರಂಭವಾದ ಕೂಡಲೇ ಹತ್ತಿರದ ಬಯಲು, ಪೊದೆಗಳನ್ನು ಅಗೆದು ಹೊಸ ಗದ್ದೆಗಳನ್ನು ಮಾಡಿ ಮತ್ತೊಂದು ಏತ ಕೂಡಿಸಿದರೆ ಮೂರು ಬೆಳೆ ಮಾಡಬಹುದು ಎಂದಾಗ ಅವರೆಲ್ಲಾ ಒಪ್ಪಿಕೊಂಡರು. ಅವರಿಗೂ ಇದು ಒಂದು ಹೊಸ ಅನುಭವ, ಹೊಸ ಉಮೇದು, ಉತ್ಸಾಹ.



ಮಂಜಣ ಮರುದಿನ ಬೆಳಗ್ಗೆ ಮಿತ್ತಬೈಲಿಗೆ ಹೊರಟು ನಿಂತಾಗ ಎಲ್ಲರೂ ಅವನಲ್ಲಿ, ಇನ್ನೂ ಎರಡು ದಿನ ಇದ್ದು ಹೋಗಬೇಕೆಂದು ಹಠ ಮಾಡಿದರು. ಮಂಜಣ ಅಜ್ಜಿಯಲ್ಲಿ ಮಿತ್ತಬೈಲಿನಲ್ಲಿ ಬಿಟ್ಟು ಬಂದ ತಾಯಿ, ತಂಗಿಯರ ನೆನಪು ಮಾಡಿದಾಗ ಅಜ್ಜಿಯೂ, ಮಾವನೂ ಒಪ್ಪಿಗೆ ನೀಡಿದರು. ಎಲ್ಲರ ಒತ್ತಾಯಕ್ಕೆ ಮಣಿದ ಕಿನ್ಯನ ಎರಡು ದಿನ ಕಳೆದು ಹೊರಡಲು ಒಪ್ಪಿದ. ಮಂಜಣ ಕೆಲಸದವರೊಟ್ಟಿಗೆ ಮಿತ್ತಬೈಲಿಗೆ ಹೊರಟ. ಕಾಲು ಹಿಡಿದ ಅಳಿಯನ ತಲೆ ಸವರಿದ ಮಾವನ ಕಣ್ಣು ಮಂಜಾಯಿತು.

''ಮಗಾ ಮಂಜಣಾ, ನೀನು ನನ್ನ ಕುಟುಂಬದ ಚಿನ್ನದ ಕದಿರು. ನಿನ್ನಿಂದಾಗಿ ನನ್ನ ಕುಟುಂಬ ಎಲ್ಲಿದ್ದರೂ ಬೆಳಗುತ್ತದೆ''.

ಮಾವ ಆಶೀರ್ವಾದ ಮಾಡಿ ಕೆಲವೇ ದಿನಗಳಲ್ಲಿ ಅಜ್ಜಿಯನ್ನು ಕರೆದುಕೊಂಡು ತಾನು ಮಿತ್ತಬೈಲಿಗೆ ಬರುತ್ತೇನೆ ಎನ್ನುವಾಗ, ಅತ್ತೆ, ಚಿಕ್ಕಮ್ಮ ಎಲ್ಲರೂ ತಾವೂ ಬರುತ್ತೇವೆ ಎಂದರು. ಮಂಜಣ ನಕ್ಕು ''ನಮ್ಮ ಗುಡಿಸಲಿನಲ್ಲಿ ಮಲಗಲು ಜಾಗ ಇಲ್ಲ'' ಎಂದಾಗ ''ನಾವು ಅಂಗಳದ ಚಪ್ಪರದಡಿಯಲ್ಲಿ ಮಲಗುತ್ತೇವೆ'' ಎಂದರು. ಅಜ್ಜಿಗೆ ಮನೆ ಇಳಿದು ಹೋದ ಮಗಳನ್ನು ಅವಳ ಭೂಮಿಯಲ್ಲೇ ನೋಡಬೇಕೆಂಬ ಆಸೆ. ಅವರು ಅವಳನ್ನು ನೋಡಿ ಐದು ವರ್ಷವಾಗಿತ್ತು.

ಮಜಲೋಡಿಯಿಂದ ಮಿತ್ತಬೈಲಿಗೆ ಸಂಜೆ ಬಂದು ಮುಟ್ಟುವಾಗ ತಾಯಿ, ತಂಗಿ ಮನೆಯ ಒಳಗೆ ತಲೆಯ ಮೇಲೆ ಕೈ ಹೊತ್ತು ಕುಳಿತಿದ್ದರು. ವಿಚಾರಿಸಿದಾಗ, ಹುಲಿಯೊಂದು ಹಟ್ಟಿಗೆ ನುಗ್ಗಿ ಎರಡು ಹಸುಗಳು ಹಾಗೂ ಎರಡು ಕೋಣಗಳ ಮೇಲೆ ದಾಳಿ ನಡೆಸಿ, ಒಂದನ್ನು ಹಟ್ಟಿಯಲ್ಲೇ ಕೊಂದು ಹಾಕಿ, ಕರುವೊಂದನ್ನು ಅಂಗಳದಿಂದ ಕಾಡಿಗೆ ಎಳೆದುಕೊಂಡು ಹೋಗಿದೆಯೆಂದು ತಿಳಿಯಿತು. ಬೊಗಳಿ ಮೇಲೆ ಬಿದ್ದ ನಾಯಿಯನ್ನು ಹುಲಿ ಅರೆಜೀವ ಮಾಡಿ ಹಾಕಿತ್ತು. ಮಂಜಣ ತಾಯಿಯನ್ನೂ, ತಂಗಿಯನ್ನೂ ಸಮಾಧಾನಪಡಿಸಿ ಜಮೀನಿನ ಸುತ್ತ ಸುತ್ತಾಡಿ ಬಂದ.

ಕುಡಿಯರೂ, ಮಂಜಣನೂ ಅಂಗಳಕ್ಕೆ ಬರುವ ದಾರಿಗೆಲ್ಲ ಒಣಗಿದ ತೆಂಗಿನ ಗರಿ ಹಾಕಿ ಮುಚ್ಚಿದರು. ಹುಲಿ ಬಂದರೆ, ಅಂಗಳಕ್ಕೆ ನುಗ್ಗಿದರೆ ತೆಂಗಿನ ಗರಿಯ ಶಬ್ದವಾಗುತ್ತದೆಂದು ಅವರ ಯೋಚನೆ. ಕಿನ್ಯನನ ಕೋವಿಗೆ ಮದ್ದು ತುಂಬಿಸಿ ಕಾದು ಕುಳಿತರು. ಕುಡಿಯರು ಅಂಗಳದಲ್ಲಿ ಬೆಂಕಿಯ ಅಗ್ಗಿಷ್ಟಿಕೆ ಹಾಕಿ ಕಾದರು. ರಾತ್ರಿಯ ವಿಷಯ ಕೇಳುವಾಗ ಒಂದಲ್ಲ ಎರಡು ಹುಲಿಗಳು ಬಂದಿದ್ದವೆಂದು ತಿಳಿದುಬಂತು. ಸಂಜೆಯಾಗುವಾಗ ಸುದ್ದಿ ತಿಳಿದು ಪಾವೂರಿನ ಅತ್ತೆಯ ಮಗ ಎಂಕಪ್ಪನೂ, ಬಾರಬೈಲಿನ ಬೀರಣ್ಣನೂ ರಾತ್ರಿ ಕಾವಲು ಕಾಯಲು ಬಂದರು. ರಾತ್ರಿಯಿಡೀ ಕಾದರೂ ಅಂದು ಹುಲಿ ಬರಲಿಲ್ಲ. ಬಾರಬೈಲಿನ ಬೀರಣ್ಣ, ''ಕಿನ್ಯನ ಬಂದ ಮೇಲೆ ಒಂದು ದಿನ ಬೇಟೆಗೆ ಹೋಗುವ'' ಎಂದು ಹೇಳಿಹೋದ.

ಮರುದಿನ ಮಂಜಣ ತಾಯಿಯಲ್ಲಿ ಮಜಲೋಡಿಯ ಏತದ ಸುದ್ದಿ, ಮಾವನು

ಮಾಡಿದ ಆಶೀರ್ವಾದ, ಕುಟುಂಬದ ಯುವ ಕರ ಕೊಳಕೆ ಬೆಳೆ ಮಾಡುವ ತಯಾರಿ ಎಲ್ಲ ಹೇಳುವಾಗ ಸಂಕಮ್ಮಕ್ಕನಿಗೆ ಕೇಳಿ ಹಾಲು ಕುಡಿದಂತಾಯಿತು. ಮಗನಿಗೆಲ್ಲಿಯಾದರೂ ದೃಷ್ಟಿ ತಾಗುವುದು ಬೇಡವೆಂದು ಒಂದಿಷ್ಟು ಉಪ್ಪು ಮತ್ತು ಒಣಮೆಣಸನ್ನು ಒಲೆಗೆ ಹಾಕಿ ದೃಷ್ಟಿ ತೆಗೆದರು. ಮಂಜಣ ತಾಯಿಗೆ, ಅಜ್ಜಿ ಹಾಗೂ ಅತ್ತೆಯವರು ಮಿತ್ತಬೈಲಿಗೆ ಬರುವ ಸುದ್ದಿ ಹೇಳಿದಾಗ ಅವರ ಸಡಗರ ಹೇಳತೀರದು.

ಎರಡು ದಿನ ಕಳೆದು ಕಿನ್ಯನನೂ ಕೆಲಸದವರೂ ಮಜಲೋಡಿಯಿಂದ ಬಂದರು. ಮನೆಯ ಹಟ್ಟಿಯಲ್ಲಿ ನಡೆದಿದ್ದ ಘಟನೆಯನ್ನು ಕೇಳಿ ಮಜಲೋಡಿಯಿಂದ ಬಂದ ಅವರ ಸಂಭ್ರಮವೆಲ್ಲಾ ಒಮ್ಮೆಲೇ ಇಳಿದು ಹೋಯಿತು. ಕಿನ್ಯನ ತಾಯಿಗೆ ಮಾವ ಕೊಟ್ಟ ಜೋಡು ನಳಿಗೆಯ ಸೇನೆಯ ಕೋವಿಯನ್ನು ತೋರಿಸಿದ. ಮರುದಿನ ತಿಮ್ಮಯಾಚಾರಿಯನ್ನು ಬರಲು ಹೇಳಿ ಕೋವಿಯನ್ನು ತೊಳೆದು ಎಣ್ಣೆ ಕೊಟ್ಟು, ಅದಕ್ಕೆ ಬೇಕಾದ ತೋಟೆ ಸಂಪಾದಿಸಲು ಹೇಳಿದ. ತೋಟೆ ಬಂದ ಕೂಡಲೇ ಗೆಳೆಯ ಬೀರಣ್ಣನಲ್ಲೂ ಭಾವಮೈದುನ ವೆಂಕಪ್ಪನಲ್ಲೂ ಮಾತಾಡಿ ಬೇಟೆಗೆ ದಿನ ನಿಗದಿ ಮಾಡಿದ.

ಎರಡು ದಿನ ಕಳೆದು ವೆಂಕಪ್ಪ, ಬೀರಣ್ಣ, ಪಾವೂರು-ಬಾರಬೈಲಿನ ನಾಲ್ಕೈದು ಕುಡಿಯರ ಯುವಕರು, ಮೂಲದವರು ಮತ್ತು ಬೀರಣ್ಣನ ಕೆಲಸದವರೆಂದು ಹತ್ತಿಪ್ಪತ್ತು ಜನ ಕಾಡಿಗೆ ನುಗ್ಗಿದರು. ಒಂದು ಕಡೆಯಿಂದ ಡೋಲು ಬಡಿದುಕೊಂಡು ಕುಡಿಯರು ನಾಯಿಗಳ ಜೊತೆ ಬರುವಾಗ, ಎಲ್ಲ ದಾರಿಗಳಲ್ಲೂ ಯುವಕರು, ಕೋವಿಯವರು ಕಾದು ನಿಂತರು. ಕಾಡಿನಿಂದ ನಾಲ್ಕೈದು ಕೋವಿ ಸಿಡಿಸಿದ ಶಬ್ದ ಅಂಗಳಕ್ಕೆ ಕೇಳಿಸಿತು. ಸಂಜೆಯಾಗುವಾಗ ಎರಡು ಹಂದಿ, ಒಂದು ಕಡವೆಯನ್ನು ಬಡಿಗೆಯಲ್ಲಿ ಹೊತ್ತುಕೊಂಡು ಕೆಲಸದವರು ಅಂಗಳಕ್ಕೆ ತಂದರು. ಒಂದು ಹುಲಿ ಸತ್ತಿರಬೇಕೆಂದು ಅವರ ಅಂದಾಜು. ಮತ್ತೊಂದು ಹುಲಿ ಪೆಟ್ಟಾಗಿ ಗವಿಯ ಒಳಗೆ ನುಗ್ಗಿದ್ದಾಗ, ಒಳಗೆ ಹೊಗೆ ಹಾಕಿ ಹೊರಗೆ ತರಲು ಹೆಣಗಿದರಂತೆ. ಅದು ಮಾತ್ರ ಗುಹೆಯ ಒಳಗಿಂದ ಹೊರಗೆ ಬರಲೇ ಇಲ್ಲ. ಕುಡಿಯರ ಅಭಿಪ್ರಾಯದಂತೆ ಅದು ಕಳಂಜಿ ಮಲೆಯ ಆ ಬದಿಯಲ್ಲಿ ವಿಟ್ಲದ ಹತ್ತಿರ ಹೊರಗೆ ಹೋಗಿರಬೇಕು. ಇನ್ನು ಅದರ ಉಪದ್ರವ ಇರಲಾರದೆಂದು ಎಲ್ಲರ ಅಭಿಪ್ರಾಯ.

ಕೆಲಸದವರು ಅಂಗಳದಲ್ಲಿ ತಂದು ಹಾಕಿದ ಹಂದಿ, ಕಡವೆಗಳನ್ನು ಮಾಂಸ ಮಾಡಿ ಹಂಚುವಾಗ ಬೀರಣ್ಣ ತನಗೆ ಬೇಡ ಎಂದು ಹೇಳಿ ಧುಮುಗುಡುತ್ತ ಅಂಗಳ ಇಳಿದು ಹೋದ. ವೆಂಕಪ್ಪ ಅತ್ತೆಯ ಒತ್ತಾಯಕ್ಕೆ ಮನೆಯಲ್ಲುಳಿದ. ಪಾವೂರಿಗೂ ಬಾರೆಬೈಲಿಗೂ ಕೆಲಸದವರು ಮಾಂಸ ತೆಗೆದುಕೊಂಡು ಹೋದರು. ಉಳಿದವರು ಮಾಂಸವನ್ನು ಹಂಚಿಕೊಂಡು ಅವರವರ ಮನೆ, ಗುಡಿಸಲುಗಳಿಗೆ ಹೋದರು.

ಸಂಕಮಕ್ಕ ಮಗನಲ್ಲಿ ಬೀರಣ್ಣ ಯಾಕೆ ಆ ರೀತಿ ಕೋಪದಲ್ಲಿ ಹೋದ ಎಂದು ಕೇಳಿದಾಗ, ವೆಂಕಪ್ಪ ವಿಷಯವನ್ನು ವಿವರಿಸಿದ.

ಬೀರಣ್ಣನೂ ಕಿನ್ಯನನೂ ಹುಲಿಯ ಬೆನ್ನಟ್ಟಿಕೊಂಡು ಗುಹೆಯ ಕಡೆ ಬರುವಾಗ



ಬೀರಣ್ಣ ಕಿನ್ಯನನ ಹೊಸ ಕೋವಿ ಕೇಳಿದನಂತೆ. ಕಿನ್ಯನ ಆ ಕೋವಿಯನ್ನು ಯಾರಿಗೂ ಕೊಡುವುದಿಲ್ಲವೆಂದು ಹೇಳಿದಾಗ ಎರಡೆರಡು ಮಾತಾಯಿತು. ಕಿನ್ಯನ 'ಮಜಲೋಡಿಯ ಸೇನೆಯ ಕೋವಿಯನ್ನು ಮಜಲೋಡಿಯವರಿಗಲ್ಲದೆ ಬಾಕಿಯವರಿಗೆ ಕೊಡಬಾರದು' ಎಂದು ಯಜಮಾನರು ಹೇಳಿದ್ದಾರೆಂದು ಹೇಳಿದನಂತೆ.

''ಮಜಲೋಡಿಯ ಸೇನೆಯ ಕೋವಿಗಿಂತ ಒಳ್ಳೆಯ ಕೋವಿಯನ್ನು ನಾನು ನಿನಗೆ ತಂದು ತೋರಿಸದಿದ್ದರೆ ಗಂಡುಮಗನೇ ಅಲ್ಲ'' ಎಂದು ಬೀರಣ್ಣ ಹೇಳಿದ್ದಕ್ಕೆ,

''ಒಳ್ಳೆಯ ಬೆತ್ತ ಹಿಡಿಯಲು ಯೋಗ್ಯತೆ ಇಲ್ಲದವನು ಕೋವಿ ಹಿಡಿಯುವುದು ಹೇಗೆ?'' ಅಂತ ಕಿನ್ಯನ ಕೇಳಿದ. ಬೀರಣ್ಣ ಸೊಂಟದಿಂದ ಚಾಕು ತೆಗೆದ. ಕಿನ್ಯನ ಕೋವಿಯನ್ನು ಎದೆಗೆ ಹಿಡಿದ. ಕೊನೆಗೆ ಕೆಲಸದವರೂ ವೆಂಕಪ್ಪನೂ ಇಬ್ಬರನ್ನೂ ಬಿಡಿಸಿ ಅಂಗಳಕ್ಕೆ ಕರೆತಂದದ್ದಂತೆ.

''ಇದೆಲ್ಲ ಒಳ್ಳೆಯದಲ್ಲ. ಊರಲ್ಲಿ ಜಗಳ, ಪೆಟ್ಟಿಗೆ ಅವಕಾಶ ಕೊಡಬೇಡಿ'' ಎಂದು ಹೇಳಿ ತಾಯಿ ಒಳಗೆ ಹೊರಟಾಗ ಮಂಜಣನೂ ಮಂಜೇಶ್ವರಕ್ಕೆ ಹೋದವನು ಬಂದ.

''ಹೇಗಾಯಿತು ನಿಮ್ಮ ಬೇಟೆ? ಬೀರಣ್ಣ ಏನು ಕೋಪದಲ್ಲಿ ಹೋಗುತ್ತಿದ್ದ. ಅವನಿಗೆ ಬೇಕಾದ ಮಾಂಸ ಕೊಡಲಿಲ್ವಾ ಹೇಗೆ? ಮಾತನಾಡದೆ ಹೋದ''

ವೆಂಕಪ್ಪ ಕಾಡಿನಲ್ಲಿ ನಡೆದದ್ದನ್ನೆಲ್ಲಾ ಹೇಳಿದ. ಮಂಜಣ ನಕ್ಕ.

''ಬಿಡಿ, ಬೀರಣ್ಣ ನಾಳೆ ಬರುತ್ತಾನೆ. ಅವನಿಗೆ ಸ್ವಲ್ಪ ಕಾಡುದನದ ಮಾಂಸವನ್ನೂ ಹಂದಿಯ ಮಾಂಸವನ್ನೂ ಇಟ್ಟುಬಿಡಿ''.

ಬೇಟೆಗೆ ಹೋದನಂತರ ಹುಲಿಯ ಕಾಟ ಸ್ವಲ್ಪ ಸಮಯ ಇರಲಿಲ್ಲ. ಮನೆಯವರಿಗೆಲ್ಲ ಮಜಲೋಡಿಯವರು ಮಿತ್ತಬೈಲಿಗೆ ಬರುವ ಸಂಭ್ರಮದಲ್ಲಿ ಬೇಟೆ ಮರೆತು ಹೋಗಿತ್ತು. ಬೀರಣ್ಣನೂ ನೆನಪಾಗಲಿಲ್ಲ. ಬೀರಣ್ಣ ಮಾತ್ರ ಬೇಟೆಯ ದಿನದ ಮಾತುಗಳನ್ನು ಮರೆತಿರಲಿಲ್ಲ.

ಮಂಜಣಾಳ್ವ ಒಂದೊಂದೇ ಕಣಜದ ಭತ್ತ ಖಾಲಿ ಮಾಡಿಸಿ ಎಣೆಲಿನ ಅಕ್ಕಿ ಮಾಡಿಸಲು ಶುರು ಮಾಡಿದ. ಅಂಗಳ ಇಡೀ ಭತ್ತ ಒಣಗಿಸುವುದು, ಕೊಟ್ಟಿಗೆಯಲ್ಲಿ ಅಕ್ಕಿ ಮಾಡಿಸುವುದೂ ನಡೆಯಿತು. ನಾಲ್ಕು ದಿನಗಳಲ್ಲಿ ಎಣೆಲಿನ ಬೆಟ್ಟು ಗದ್ದೆಯ ಬೆಳೆಯಲ್ಲಿ ಇಪ್ಪತ್ತು ಮುಡಿ ಗಂಧಸಾಲೆಯ ಬೆಳ್ತಿಗೆ ಅಕ್ಕಿಯನ್ನೂ, ಮನೆ ಖರ್ಚಿಗೆ ಇಪ್ಪತ್ತೈದು ಮುಡಿ ಚಕ್ಕಚವ್ವೆ ಅಕ್ಕಿಯನ್ನೂ ಮುಡಿ ಕಟ್ಟಿಸಿ ಅಟ್ಟಕ್ಕೆ ಹಾಕಿದರು. ಎಣೆಲು ಬೆಳೆ ಊಟಕ್ಕೆ ಚೆನ್ನಾಗಿರುತ್ತದೆ. ಅದರಲ್ಲೂ ಚಕ್ಕಚವ್ವೆ ಊಟಕ್ಕೆಂದೇ ಬೆಳೆಯುವುದು. ಅಂಗಳದ ಬಾಕಿಮಾರು ಗದ್ದೆಯಲ್ಲಿ ಎಣೆಲಿಗೆ ಕಯಮೆ ನಡಿಸಿದರೆ, ಸುಗ್ಗಿಯಲ್ಲಿ ಗದ್ದೆ ಗೋರಿದ ಬಳಿಕ ಅತಿಕಾರೆ ಬೆಳೆಸುತ್ತಿದ್ದರು. ಆ ಗದ್ದೆಯ ಬೆಳೆ ಮಜಲೋಡಿಯ ಕಂಬಳದ ಗದ್ದೆಯಂತೆಯೇ ಹೆಸರು ಪಡೆಯಬೇಕೆಂಬುದು ಅವರ ಆಸೆ.

ಮಂಜಣ ಅಕ್ಕಿ ಮುಡಿಯನ್ನು ಅಟ್ಟಕ್ಕೆ ಏರಿಸಲು ತಯಾರಾಗುವಾಗ ಮಾವನೊಟ್ಟಿಗೆ

ಅಜ್ಜಿ, ಅತ್ತೆ, ಚಿಕ್ಕಮ್ಮ, ಚಿಕ್ಕಮಾವನವರು ಬಂದು ತಲುಪಿದ್ದರು. ಸಂಕಮ್ಮಕ್ಕನಿಗೆ ತಾಯಿ, ತಂಗಿಯನ್ನು ನೋಡಿ ಕಾಲು ನೆಲದಲ್ಲಿ ನಿಲ್ಲಲಿಲ್ಲ. ಹಿಂದೆ ನಾದಿನಿಯ ಮೇಲೆ, ಸ್ವಲ್ಪ ಅಸಮಾಧಾನ ಇತ್ತಾದರೂ ಅವರನ್ನು ನೋಡಿದ ಮೇಲೆ ಅದು ಮಾಯವಾಗಿತ್ತು. ಮಿತ್ತಬೈಲಿನ ಅಂಗಳದಲ್ಲಿ ಸಡಗರವೋ ಸಡಗರ. ಗುತ್ತಿನ ಯಜಮಾನರಿಗೆ ಅಟ್ಟ ಏರಲು ತಯಾರಾಗಿರುವ ಅಕ್ಕಿ ಮುಡಿಯನ್ನು ನೋಡಿ ಸಂತೋಷವಾಯಿತು. ಅಜ್ಜಿಗೆ ಬೆಳೆದು ನಿಂತ ಮೊಮ್ಮಕ್ಕಳನ್ನು ನೋಡಿದ ಸಂತೋಷ ಒಂದು ಕಡೆಯಾದರೆ, ಇನ್ನೊಂದು ಕಡೆ ಋತುಮತಿಯರಾದ ಮೊಮ್ಮಗಳಂದಿರನ್ನು ಸಾಕಲಿಲ್ಲವಲ್ಲಾಂತ ಸಂಕಟ. ಋತುಮತಿಯಾದ ಹೆಣ್ಣು ಮಕ್ಕಳು ಅಜ್ಜಿಯ ಆರೈಕೆಯಲ್ಲಿ ತಿಂಗಳು ಕಳೆಯುವುದು ಕ್ರಮ. ಇಬ್ಬರು ಹೆಣ್ಣು ಮಕ್ಕಳೂ ಅಜ್ಜಿ, ಮಾವನ ಆರೈಕೆ ಇಲ್ಲದೆ ಚೆಂದದ ಯುವತಿಯರಾಗಿ ಬೆಳೆದಿದ್ದಾರೆ. ದೊಡ್ಡವಳು ಜಾಕೆ ಗಿಡ್ಡ ಆಗಿ ತಾಯಿಯಂತೆಯೇ ಬಿಳಿಬಿಳಿಯಾಗಿದ್ದಳು. ಚಿಕ್ಕವಳು ಮೋಕೆಗೆ ತಂದೆಯ ಲಕ್ಷಣ. ಉದ್ದ ಆಗಿ ಎಣ್ಣೆಕಪ್ಪು. ಮೋಕೆ ಮುದ್ದಿನ ಹೆಣ್ಣಾಗಿ ಬೆಳೆದಿದ್ದಳು. ತಾಯಿ, ಅಜ್ಜಿ, ಚಿಕ್ಕಮ್ಮ, ಅತ್ತೆಯವರನ್ನು ಚಾವಡಿಯಲ್ಲಿ ಮಾತನಾಡಲು ಬಿಟ್ಟು ಮಕ್ಕಳು ರಾತ್ರಿಯಡುಗೆಗೆ ಹೊರಟರು. ಅಂದು ರಾತ್ರಿಯ ಕೋಳಿ, ನೀರು ದೋಸೆಯ ಅಡುಗೆ ಅವರದೇ. ಸಂಕಮಕ್ಕ ಇಬ್ಬರು ಹೆಣ್ಣು ಮಕ್ಕಳಿಗೂ ಅಡುಗೆ ಕಲಿಸಿಕೊಟ್ಟಿದ್ದರು.

ಮಂಜಣ, ಮಾವಂದಿರನ್ನು ಕರೆದುಕೊಂಡು ಅಂಗಳದ ಚಪ್ಪರಕ್ಕೆ ಇಳಿದ. ಚಪ್ಪರದಡಿಯಲ್ಲಿ ತಯಾರು ಮಾಡಿ ಇಟ್ಟಿದ್ದ ಕುಡಿಕೆ ಕುಡಿಕೆ ಶೇಂದಿ, ಉಪ್ಪು ಮೆಣಸು ಹಾಕಿ ಒಣಗಿಸಿಟ್ಟ ಹಂದಿಯ ಮಾಂಸ ನೋಡಿ ಸುಬ್ಬಾಳ್ವರಿಗೂ ತಿಮ್ಮಾಳ್ವರಿಗೂ ಸ್ವರ್ಗಕ್ಕೆ ಮೂರೇ ಗೇಣು. ಸಂಜೆಯ ಶೇಂದಿ ಸಮಾರಾಧನೆ ಮುಗಿದು ಜಾಕೆ-ಮೋಕೆಯರ ಅಡುಗೆಯ ಔತಣ ಆಗಿ ಚಪ್ಪರದಡಿಯಲ್ಲಿ ಕುಳಿತಿದ್ದ ಹಿರಿಯರಿಗೆ ಹೊತ್ತು ಕಳೆದದ್ದೇ ತಿಳಿಯಲಿಲ್ಲ. ಮುಂಜಾನೆ ಮೂತ್ರ ಶಂಕೆಗೆ ಎದ್ದ ಮಂಜಣನಿಗೆ ಇನ್ನೂ ಮಾತುಕತೆಯಲ್ಲೇ ಇರುವ ಮುದುಕರನ್ನು ಕಂಡು ನಗು ಬಂತು. ಹೊರಗೆ ಅಂಗಳದ ಬದಿಗೆ ಹೋಗಿ ಬಂದವನಿಗೆ ತಾಯಿಯ ಮಾತು ಕೇಳಿಸಿತು.

''ಅವರ ಒಪ್ಪಿಗೆ ಇದ್ದರೆ ನನ್ನ ಯಾವ ಅಡ್ಡಿಯೂ ಇಲ್ಲ. ಆದರೆ ನನ್ನ ಇಬ್ಬರು ಹೆಣ್ಣು ಮಕ್ಕಳ ಜವಾಬ್ದಾರಿ ನಿಮ್ಮದು. ಅದಕ್ಕಿಂತ ಹೆಚ್ಚು ನನಗೆ ತಿಳಿಯದು''.

''ಅದು ನನಗೆ ಬಿಡು. ನನ್ನ ಇಬ್ಬರು ಸೊಸೆಯಂದಿರ ಜವಾಬ್ದಾರಿ ನಿನಗಿಂತ ಹೆಚ್ಚು ನನ್ನದು''.

ಚಾಪೆಯಲ್ಲಿ ಮಲಗಿಕೊಂಡವನಿಗೆ ಸುಬ್ಬಣ್ಣಾಳ್ವರ ಮಾತೂ ಕಿವಿಗೆ ಬಿತ್ತು.

''ಇನ್ನು ಎಲ್ಲರೂ ಮಲಗಿ. ರಾತ್ರಿ ಬಹಳ ಆಯಿತು. ಬೆಳಗೆದ್ದು ಹುಡುಗರಲ್ಲಿ ಮಾತನಾಡಿ ಮತ್ತೆ ಮುಂದುವರಿಯುವ. ಸಂಕಮ್ಮ ನೀನು ಸ್ವಲ್ಪ ಮಂಜಣನಲ್ಲಿ ಮಾತನಾಡು''.

ಅಜ್ಜಿ ಹೇಳಿ ಎದ್ದರು. ಎಲ್ಲರೂ ಮಲಗಲು ಹೋದರು. ಸ್ವಲ್ಪ ಹೊತ್ತಿನಲ್ಲಿ



ಗೊರಕೆಯ ಶಬ್ದ ಕೇಳಿಸಿತು. ಆದರೆ, ಮಂಜಣನಿಗೆ ಮಾತ್ರ ನಿದ್ದೆ ಬರಲಿಲ್ಲ. ಅವನ ತಲೆಯಲ್ಲಿ ಬೇರೆಯೇ ತಿರುಗುತ್ತಿತ್ತು. ಮದುವೆಯಂತಹ ಯಾವ ಖರ್ಚಿಗೂ ಆತ ತಯಾರಿರಲಿಲ್ಲ. ಅಜ್ಜಿ ತಾಯಿಯ ಮಾತು ಅವನ ನಿದ್ದೆ ಕೆಡಿಸಿತು. ಅವನಿಗೆ ಇನ್ನು ಎರಡು ವರ್ಷಕ್ಕೆ ನೂರು-ಇನ್ನೂರು ಮುಡಿ ಅಕ್ಕಿಯ ಭೂಮಿಯಾಗಬೇಕು. ಕಾಡು ಕಡಿದು ಏರು-ತಗ್ಗು ಅಗೆದು ನೀರು ಹಾಯಿಸಬೇಕು. ಮಿತ್ತಬೈಲಿನಲ್ಲಿ ಒಂದು ದೊಡ್ಡ ಬೀಡು ಕಟ್ಟಿಸಬೇಕು. ಹೀಗೆ ಭೂಮಿ, ಮಣ್ಣು, ಮನೆ ಎಂಬ ಯೋಚನೆಯ ಮಧ್ಯೆ ಮದುವೆ ಬಹಳ ದೂರವಿತ್ತು. ಇನ್ನು ಎರಡು ಮೂರು ವರ್ಷ ಅಕ್ಕಿ, ಭತ್ತ, ಕಾಯಿ ಮಾರಿದ ಹಣವೆಲ್ಲ ಮನೆ ಕಟ್ಟಿಸಲಿಕ್ಕೆ ಬೇಕು. ಉಳಿದುದು ಭೂಮಿ ಖರೀದಿಸಬೇಕು.

ಬೆಳಗ್ಗೆದ್ದು ಎರಡನೇ ಜಾವದ ಕೋಳಿ ಕೂಗುವ ಹೊತ್ತಿಗೆ ಬೈಲಿಗೆ ಹೋಗಿ ನಾಲ್ನೂರು ಐನೂರು ಮರಿಗೆ ನೀರು ಮಗುಚಿ ಬರುವಾಗ ಕಿನ್ಯನ ದಂಬೆಯಲ್ಲಿ ನೀರು ಎರಚುತ್ತಿದ್ದ. ಬೈಲಿಗೆ ನೀರಾಗಿ, ಕಾಡಿಗೆ ಹೋಗಿ ಸೊಪ್ಪು, ಸೆಳೆಗೊಂಬು ಕಡಿಸಲು ತಯಾರು ಮಾಡುತ್ತಿದ್ದ ಕಿನ್ಯನನಲ್ಲಿ ''ಬೈಲಿಗೆ ದಂಬೆಯ ನೀರು ಹಾಕಿ ಮನೆಗೆ ಬಾ. ಕುಡಿಯರನ್ನು ಕಾಡಿಗೆ ಕಳುಹಿಸು'' ಎಂದು ಹೇಳಿ ಅಂಗಳ ಹತ್ತಿದ.

ಮಂಜಣ ಎಣಿಸಿದಂತೆಯೇ ತಂಗಳನ್ನ, ಮೊಸರಿನೊಂದಿಗೆ ಬಲ್ಯಾರು ಮೀನು, ಒಂದೆಲಗದ ಚಟ್ನಿಯ ಊಟವಾಗಿ ಚಾವಡಿಯ ಎದುರಿನ ಚಪ್ಪರದಡಿಯಲ್ಲಿ ಎಲೆ ಅಡಿಕೆ ಹಾಕುತ್ತಿದ್ದ ಮಾವಂದಿರು ಅವನನ್ನು ಕಾಯುತ್ತಿದ್ದರು. ಅಡುಗೆ ಕೋಣೆಯಲ್ಲಿ ಉಣ್ಣುತ್ತಿರುವಾಗ ಅಮ್ಮ ಮೆಲ್ಲನೆ ಹೇಳಿದರು.

''ಮಗಾ ತಾಯಿಯೂ, ಅಣ್ಣನೂ ನಿನ್ನ ಮದುವೆಯ ಮಾತು ತೆಗೆದರು''.

''ನೀವೇನು ಹೇಳಿದಿರಿ?''

''ನೀನು ಒಪ್ಪಿದರೆ ನನ್ನದೇನೂ ಅಡ್ಡಿಯಿಲ್ಲ ಎಂದೆ''.

''ಇನ್ನು ಎರಡು ವರ್ಷಕ್ಕೆ ಮದುವೆ ಅದು ಇದೂಂತ ಖರ್ಚಿನ ವಿಷಯ ತೆಗೆಯಬಾರದೂಂತ ಎಷ್ಟು ಸಲ ಹೇಳಿಲ್ಲ ನಾನು. ನಿಮಗೆ ಮರೆತಿದೆಯೋ ಏನೋ, ಐದು ವರ್ಷಗಳ ಹಿಂದೆ ನಾನು ನಿಮಗೆ ಕೊಟ್ಟ ಮಾತು. ಮಜಲೋಡಿಯಷ್ಟು ದೊಡ್ಡ ಮನೆ ಕಟ್ಟಿಸಿಯೇ ಆ ಮನೆಯಲ್ಲಿ ಸಮಾರಂಭ ತೆಗೆಯುವುದು. ಮೊದಲು ಜಾಕೆ, ಮೋಕೆಯರ ಮದುವೆ ಮಾಡಿ, ಆ ಮೇಲೆ ಕಿನ್ಯನನೂ ನಾನೂ ಮದುವೆಯಾಗುವುದು. ಮೊದಲು ಇನ್ನೂರು ಮುಡಿ ಗೇಣಿಯ ಭೂಮಿ ಆಗಬೇಕು. ಅಲ್ಲಿಯವರೆಗೆ ಈ ಮನೆಯಲ್ಲಿ ಖರ್ಚಿನ ಸುದ್ದಿ ಎತ್ತಬಾರದೂಂತ ಹೇಳಿದ್ದನ್ನು ಮರೆತುಬಿಟ್ಟಿರಾ ಅಮ್ಮಾ?''

''ಆ ಯಾವ ಮಾತನ್ನೂ ನಾನು ಮರೆತಿಲ್ಲ. ಆದರೆ ಇಂದಿಗೂ ಅಂದಿಗೂ ಬಹಳ ಬದಲಾವಣೆಗಳಾಗಿವೆ. ನನ್ನ ಮಕ್ಕಳು ದುಡಿದು ದುಡಿದು ಕರಕಲಾಗುವುದನ್ನು ಈಗ ನನ್ನಿಂದ ನೋಡಲಿಕ್ಕಾಗುವುದಿಲ್ಲ. ಅದಲ್ಲದೆ ನಿನ್ನ ದೊಡ್ಡ ತಂಗಿಗೆ ಹದಿನಾರು ವರ್ಷ ಕಳೆಯಿತು. ಋತುಮತಿಯಾಗಿ ವರ್ಷ ಎರಡಾಯಿತು. ಮನೆಯಲ್ಲಿ ಪ್ರಾಯದ ಮಕ್ಕಳನ್ನಿಟ್ಟು ಕುಳಿತರೆ

ಲೋಕ ನಗಬಹುದೆಂದು ನನ್ನ ಭಯ''.

''ಅಂಡೆಯ ಬಾಯಿ ಕಟ್ಟಬಹುದು, ದೊಂಡೆಯ ಬಾಯಿ ಕಟ್ಟಬಹುದಾ ಹೇಳಿ? ಲೋಕ ಏನೇನೋ ಹೇಳುತ್ತದೇಂತ ಮಕ್ಕಳನ್ನು ದೂಡಿ ಹೊರಗೆ ಕಳುಹಿಸಲು ಆಗುತ್ತದಾ? ಸಾಗುವಳಿ ಜಾಸ್ತಿಯಾದರೆ, ದೊಡ್ಡ ಮನೆ ಕಟ್ಟಿಸಿದರೆ ಮಕ್ಕಳಿಗೆ ಸರಿಯಾದ ಗಂಡು ಸಿಗುತ್ತದೆ. ಮಾವನಿಗೆ ನಾನು ಹೇಳುತ್ತೇನೆ, ಅಜ್ಜಿಗೆ ನೀವು ಹೇಳಿ. ಇನ್ನು ಎರಡು ವರ್ಷ ಯಾವುದೇ ಮದುವೆ, ಸಮಾರಂಭಕ್ಕೆ ನನ್ನಲ್ಲಿ ದುಡ್ಡು ಇಲ್ಲಾಂತ ಹೇಳಿ''.

''ಯಾವುದಕ್ಕೂ ಮಾವ ಹಿರಿಯರು. ಸ್ವಲ್ಪ ಅವರ ಮಾತು ಕೇಳು. ಅಜ್ಜಿಗೆ ಸಮಾಧಾನದಿಂದ ಸಮಜಾಯಿಸು. ಎಷ್ಟೆಂದರೂ ಕೊನೆಯ ತೀರ್ಮಾನ ಅವರದೇ ಅಲ್ಲವಾ?''

''ಅದು ಮಜಲೋಡಿಯ ಮನೆಯಲ್ಲಿ. ಇಲ್ಲಿ ಅಲ್ಲ. ಇದು ಮಿತ್ತಬೈಲು''

ಅವನಿಗೆ ಹಳೆಯ ನೆನಪುಗಳು ಉಕ್ಕಿ ಬಂದವು. ಕೈ ತೊಳೆದು ಚಾವಡಿಯಿಂದ ಅಂಗಳಕ್ಕಿಳಿದ ಅಳಿಯನನ್ನು ಸುಬ್ಬಾಳ್ವರು ಪ್ರೀತಿಯಿಂದ ''ಮಗಾ, ಮಂಜಣಾ, ಇಲ್ಲಿ ಬಾ ಒಂದು ಗಳಿಗೆ'' ಎಂದು ಕರೆದರು.

''ಭತ್ತ ಕುಟ್ಟಿ ಆಯಿತಾಂತ ನೋಡಿ ಬರುತ್ತೇನೆ. ಅಕ್ಕಿ ಮುಡಿ ಕಟ್ಟದೆ ನಾಳೆಗೆ ಐದು ದಿನ ಆಗುತ್ತದೆ. ನಾಳೆಯಾದರೂ ಕಟ್ಟಬಹುದಾಂತ ನೋಡಿ ಬರುತ್ತೇನೆ''.

ಚಪ್ಪರದಡಿಯ ಆನೆ ಮೆಟ್ಟಲಲ್ಲಿ ಕುಳಿತ ಮಾವ, ಅಜ್ಜಿಯರತ್ತ ನೋಡಿದ ಮಂಜಣನಲ್ಲಿ ಮಾವ ಹೇಳಿದರು,

''ನಿನ್ನಲ್ಲಿ ಒಂದು ವಿಷಯ ಸ್ವಲ್ಪ ಮಾತನಾಡಬೇಕೂಂತ ನಾವೆಲ್ಲ ನಿನ್ನನ್ನು ಕಾಯುತ್ತಾ ಕುಳಿತದ್ದು. ಸಂಕಮ್ಮ ನೀನೂ ಬಾ''. ಅಜ್ಜಿ ಪೀಠಿಕೆ ಹಾಕಿದರು,

''ಕಿನ್ನನ ಎಲ್ಲಿ ಹೋದ? ಅವನೂ ಇದ್ದಿದ್ದರೆ ಚೆನ್ನಾಗಿತ್ತು''

''ಅವನು ನಾಲ್ಕು ಹೊಂಡ ನೀರು ಮಗುಚಿ ಬರಬಹುದು''

ಏತದ ನೀರು ಮಗುಚುವಾಗ ಲೆಕ್ಕಕ್ಕೆಂದು ಎರಡು ಹೊಂಡಗಳಲ್ಲಿ ಐವತ್ತು ಕಲ್ಲು ಹಾಕಿ ಅದನ್ನು ಮರಿಗೆಯ ನೀರು ಮಗುಚುತ್ತಿದ್ದಂತೆಯೇ ಹೊಂಡದಿಂದ ಹೊಂಡಕ್ಕೆ ಬದಲಾಯಿಸಿದರೆ, ಐವತ್ತು ಕಲ್ಲು ಒಂದು ಹೊಂಡದಿಂದ ಇನ್ನೊಂದು ಹೊಂಡಕ್ಕೆ ಬದಲಾಯಿಸುವಾಗ ಒಂದು ಹೊಂಡ ನೀರಾಯಿತೆಂದು ಲೆಕ್ಕ. ಈ ರೀತಿ ತಲಾ ಐವವತ್ತು ಮರಿಗೆಗಳ ನಾಲ್ಕು ಹೊಂಡ ನೀರಾದರೆ ಅದಕ್ಕೆ ಒಂದು ಬಳ್ಳ ಭತ್ತ ಮಜೂರಿ.

''ಮಗಾ ಮಂಜಣ, ನಾನು ಗುತ್ತಿನ ಯಜಮಾನ ಅಥವಾ ಮಾವ ಎಂಬ ಅಧಿ ಕಾರದಲ್ಲಿ ಹೇಳುತ್ತಿದ್ದೇನೆ ಎಂದು ನೀನು ಭಾವಿಸಬಾರದು. ಆ ಅಧಿಕಾರವನ್ನು ನಾಲ್ಕೈದು ವರ್ಷಗಳ ಹಿಂದೆಯೇ ನಾನು ಕಳೆದುಕೊಂಡಿದ್ದೇನೆ. ಆದರೂ ನಿಮಗಿಂತ ಹಿರಿಯವನು. ನೀವು ನನ್ನ ಅಳಿಯಂದಿರೂಂತ ಹೇಳಬೇಕಾದುದನ್ನು ಹೇಳುತ್ತಿದ್ದೇನೆ''.

''ನೀವು ಯಾಕೆ ಹಾಗೆ ಮಾತನಾಡುತ್ತಿದ್ದೀರಿ ಮಾವಾ? ನಾವೇನಾದರೂ ತಪ್ಪಿ



ನಡೆದಿದ್ದೇವಾ? ಅಥವಾ ನಿಮಗೇನಾದರೂ ನೋವಾಗುವಂತಹ ಮಾತನ್ನು ಆಡಿದ್ದೇವಾ?''

''ಇಲ್ಲ. ಅಂತಹ ಯಾವ ತಪ್ಪೂ ನೀವು ತಾಯಿ ಮಕ್ಕಳಿಂದ ಆಗಲಿಲ್ಲ. ನನಗೆ, ಐದು ವರ್ಷಗಳ ಹಿಂದೆ ನೀವು ಮನೆ ಬಿಡಬೇಕಾಗಿ ಬಂದದ್ದನ್ನು ನೆನೆಯುವಾಗ ಕುಂಬಳ ಕಾಯಿ ಕದ್ದವನಂತೆ ಆಗುತ್ತಿದೆ. ಅಂದು ನಡೆದದ್ದನ್ನು ನೀವು ಮರೆಯಬೇಕು. ನನಗಾಗ ತಲೆ ಸರಿ ಇರಲಿಲ್ಲ. ಇಲ್ಲದಿದ್ದರೆ ನೀನು ಇಂದು ಮಿತ್ತಬೈಲಿನಲ್ಲಿ ಮಾಡಿ ತೋರಿಸಿದ್ದನ್ನು ಅಂದು ಮಜಲೋಡಿಯಲ್ಲೇ ಮಾಡುವಾ ಎಂದು ಹೇಳಿದಾಗ, ನಿನ್ನನ್ನು ಏನೇನೋ ಹೇಳಿ ಕಳುಹಿಸಿ ನಾನು ತಪ್ಪು ಮಾಡಿದ್ದೇನೆ. ಒಂದು ರೀತಿಯಲ್ಲಿ ಆದದ್ದೆಲ್ಲ ಒಳ್ಳೆಯದಕ್ಕೇ. ನನ್ನ ಮಜಲೋಡಿಯ ಕುಟುಂಬದ ಹುಡುಗರ ಬೆಲೆ ಇಡೀ ಸೀಮೆಗೆ ಗೊತ್ತಾಯಿತು. ಅದನ್ನು ಮಾತನಾಡಲು ಅಲ್ಲ ನಾನು... ಅಮ್ಮಾ ನೀವೇ ಹೇಳಿ''.

ಗುತ್ತಿನ ಯಜಮಾನರು ತಾಯಿಯ ಮುಖ ನೋಡಿದರು. ಬಾಯಲ್ಲಿದ್ದ ತಾಂಬೂಲದ ರಸವನ್ನು ಪೀಕದಾನಿಗೆ ಉಗುಳಿದ ಅಜ್ಜಿ ಹತ್ತಿರ ಬಂದು ಮಂಜಣನ ಬೆನ್ನು ಸವರಿದರು.

''ನಾನೂ ಒಂದು ತಪ್ಪು ಮಾಡಿದ್ದೇನೆ. ನೀವು ಯುವಕರು ಮನೆ ಇಳಿದು ಹೋಗುವಾಗ ನನ್ನ ಇಬ್ಬರು ಹೆಣ್ಣು ಮಕ್ಕಳನ್ನು ಹೋಗಲು ಬಿಟ್ಟು ತಪ್ಪು ಮಾಡಿದ್ದೇನೆ. ಅವರನ್ನು ಋತುಮತಿಯರಾದ ಮೇಲೆ ಸಾಕುವ ನನ್ನ ಭಾಗ್ಯವನ್ನು ಕಳಕೊಂಡಿದ್ದೇನೆ. ಈಗ ಈ ಅಜ್ಜಿ ಸಾಯುವುದಕ್ಕಿಂತ ಮೊದಲು ಅವರ ಮದುವೆಯಾಗಬೇಕು. ಈ ಮನೆಯಲ್ಲಿ ಮಕ್ಕಳು ಮರಿಗಳು ತುಂಬಬೇಕು. ಹಾಗಾದರೇನೇ ನೀವು ದುಡಿದದ್ದಕ್ಕೆ ಸಾರ್ಥಕ''.

ಅಜ್ಜಿ ಇಷ್ಟು ಹೇಳುವಾಗ ಕಿನ್ನನ ಅಂಗಳಕ್ಕೆ ಬಂದ.

''ಅಣ್ಣಾ, ತಯಾರಾಗಲಿಲ್ಲವಾ? ನೀವು ಮಾವನನ್ನು ಕರೆದುಕೊಂಡು ಹೊಳೆಯ ಆ ಬದಿಗೆ ಬರುತ್ತೀರೀಂತ ಮರಾಟಿಗರಿಗೆ ಹೇಳಿ ಕಳುಹಿಸಿದ್ದೇನೆ. ಇಂದು ಹೊಳೆ ದಾಟಬಹುದು. ಆದರೂ, ಬ್ಯಾರಿಯಲ್ಲಿ ದೋಣಿಯನ್ನು ಈ ಬದಿಗೆ ತಂದು ನಿಮ್ಮನ್ನು ಕಾಯಲಿಕ್ಕೆ ಹೇಳಿದ್ದೇನೆ''.

''ಬಾ, ಬಾ ಮಗ. ಹೊಳೆಯಾಚೆಗೆ ಸ್ವಲ್ಪ ಬಿಸಿಲು ಕಡಿಮೆಯಾದ ಮೇಲೆ ಹೋಗಿ. ಕುಳಿತುಕೋ ನಿನ್ನನ್ನೇ ಕಾಯುತ್ತಿದ್ದದ್ದು''. ಅಜ್ಜಿ ಹೇಳಿದಾಗ ಕಿನ್ನನ ಎಲ್ಲರ ಮುಖ ನೋಡಿದ. ಬಹಳ ಗಂಭೀರವಾದ ಆಲೋಚನೆಯಲ್ಲಿ ಮುಳುಗಿ ಏನೋ ಮಾತುಕತೆ ನಡೆಯುತ್ತಿದೆ ಎಂದೆನಿಸಿತವನಿಗೆ. ಅವನು ತಾಯಿಯ ಪಕ್ಕ ಕುಳಿತುಕೊಂಡ. ಅವನು ಸ್ವಲ್ಪ ಮಕ್ಕಳಾಟಿಗೆ ಯವನಾದರೂ ತಾಯಿಯ ಪ್ರೀತಿಯ ಮಗ. ಮಂಜಣ ಎಷ್ಟು ಸಮಾಧಾನದವನೋ ಅಷ್ಟೇ ದುಡುಕು ಸ್ವಭಾವದವ ಕಿನ್ನನ. ಆದರೆ ಬೇಸಾಯದ ಕೆಲಸದಲ್ಲಿ ಅವ ಮಂಜಣನಿಗಿಂತ ಒಂದು ಹೆಜ್ಜೆ ಮುಂದು. ಉಳುವುದರಲ್ಲಿ, ಹಲಗೆ ಮೆಟ್ಟುವುದರಲ್ಲಿ, ಬದುವಿನ ಹುಲ್ಲು ಕೆರೆದು ತೆಗೆಯುವುದರಲ್ಲಿ ಅವ ಬಹಳ ಜಾಣ. ಗದ್ದೆ ಬಿತ್ತಿದರೆ ಒಂದು ಪೈರು ಕಮ್ಮಿ ಆಗಲಿಕ್ಕಿಲ್ಲ. ಒಂದು ಪೈರು ಜಾಸ್ತಿಯಾಗಲಿಕ್ಕಿಲ್ಲ. ದಂಬೆಯ ನೀರು, ಏತದ ನೀರು

ಮಗುಚುವ ಕೆಲಸದಲ್ಲಿ ಅವನನ್ನು ಸರಿಗಟ್ಟುವವರು ಗ್ರಾಮದಲ್ಲೇ ಇಲ್ಲವೆಂಬ ಹೆಸರು ಗಳಿಸಿದವನು ಕಿನ್ಯನ. ಕಟಾವು ಮಾಡಿಸಿ ಬೆಳೆಯನ್ನು ಅಂಗಳಕ್ಕೆ ಸಾಗಿಸಿ ಭತ್ತ ಹೊಡೆಸಿ, ರಾಶಿಯಿಂದ ಕೈ ಬುಟ್ಟಿಯಲ್ಲಿ ಭತ್ತವನ್ನು ತೆಗೆದು ಹಾರಿಸಿದನೆಂದರೆ ಜಳ್ಳೊಂದು ದಿಕ್ಕಿನಲ್ಲಿ, ಕಾಳೊಂದು ದಿಕ್ಕಿನಲ್ಲಿ, ಭತ್ತದಲ್ಲಿ ಒಂದು ಜಳ್ಳೂ ಕಾಣಸಿಗಲಿಕ್ಕಿಲ್ಲ. ಭತ್ತವನ್ನು ರಾಶಿ ಹಾಕಿ ಪೊಲಿ ಹಾಕಿ ಕರೆದರೆ ಅಂಗಳದಲ್ಲಿ ಭತ್ತ ಉಕ್ಕಬೇಕು. ಅಂತಹ ಕೈ ಅವನದು. ಕಣಜ ಕಟ್ಟಿ ಭತ್ತ ತುಂಬಿಸುವುದು, ಬೈಹುಲ್ಲಿನ ಮೊಟ್ಟೆ ಕಟ್ಟುವುದು, ಕುಟ್ಟಿದ ಅಕ್ಕಿಯನ್ನು ಮುಡಿ ಕಟ್ಟುವುದು ಎಲ್ಲಾ ಕೆಲಸವೂ ಕಿನ್ಯನನದ್ದು. ಬೆಳಗ್ಗೆದ್ದು ಮುಡಿ ಕಟ್ಟಲು ಪ್ರಾರಂಭಿಸಿದರೆ ಹೊತ್ತು ಮೂಡಿ ಮೇಲೆ ಬರುವಾಗ ಇಪ್ಪತ್ತೈದು ಮುಡಿ ಅಕ್ಕಿ ತಯಾರು. ಆದರೆ ಯಾವ ಕೆಲಸ ಆಗಬೇಕಾದರೂ ಅದಕ್ಕೆ ಅಣ್ಣನ ಅಪ್ಪಣೆ ಆಗಲೇಬೇಕು.

''ಕಿನ್ಯನಾ ನೀವು ನಾಲ್ಕು ಮಂದಿ ಮಕ್ಕಳಿಗೂ ಮದುವೆ ಮಾಡಬೇಕೂಂತ ಹಿರಿಯವರಾದ ನಮ್ಮ ಆಸೆ. ನೀವು ನಾಲ್ಕು ಮಂದಿಗೂ ಎರಡು ಹೆಣ್ಣು ಒಂದು ಗಂಡನ್ನು ಯೋಚನೆ ಮಾಡಿ ಇಟ್ಟಿದ್ದೇವೆ. ಇನ್ನೊಂದು ಗಂಡು ನಿಮ್ಮ ತಾಯಿಯ ಆಸೆಯಂತೆ ಮನಸ್ಸಲ್ಲಿ ಇಟ್ಟುಕೊಂಡಿದ್ದೇವೆ. ಇನ್ನು ಸ್ವಲ್ಪ ದಿನಗಳಲ್ಲಿ ಅದನ್ನೂ ಮಾತನಾಡುತ್ತೇವೆ. ಇದು ನಮ್ಮೆಲ್ಲರ, ಎಲ್ಲರ ಎಂದರೆ ನಿಮ್ಮ ತಾಯಿಯದೂ ಆಸೆ''.

ಅಜ್ಜಿ ಹೇಳಿದಾಗ ಕಿನ್ಯನ ಗಲಿಬಿಲಿಗೊಂಡ. ಬಗ್ಗಿದಲ್ಲಿಂದಲೇ ಮೆಲ್ಲ ಅಣ್ಣನ ಮುಖ ನೋಡಿದ. ಅಣ್ಣ ಕಣ್ಸುಸನ್ನೆಯಲ್ಲೇ ಸುಮ್ಮನಿರುವಂತೆ ಹೇಳಿದ.

''ಅಜ್ಜಿ, ನಿಮ್ಮೆಲ್ಲರ ಆಸೆ ಕೇಳಿದೆವು. ಆದರೆ ಮುಂದುವರಿಯುವುದಕ್ಕಿಂತ ಮೊದಲು ನಮ್ಮ ಕೆಲವು ಮಾತನ್ನೂ ಕೇಳಿ. ನಾವು ಈ ಮಿತ್ತಬೈಲು ಭೂಮಿಗೆ ಕಾಲಿಟ್ಟಂದು ಒಂದು ಆಣೆ ಹಾಕಿಕೊಂಡಿದ್ದೇವೆ. ಆ ಆಣೆಗೆ ತಪ್ಪಿದರೆ ತಾಯಿಗೆ, ತಾಯಿಯಂತಿರುವ ಮಲರಾಯನಿಗೆ ತಪ್ಪಿದ್ದೇವೆ ಅಂತ ಅರ್ಥ ಎಂದು ಆಣೆ, ಭಾಷೆ ಹಾಕಿಕೊಂಡಿದ್ದೇವೆ. ತಾಯಿ ಯನ್ನು ಕೇಳಿ. ಇದು ಮಿತ್ತಬೈಲಿನ ಭೂಮಿಯಲ್ಲಿ ಮೊದಲ ಗಂಜಿ ಉಂಡಂದು, ಗಂಜಿಯನ್ನು ಹಿಡಿದು ಹಾಕಿಕೊಂಡ ಆಣೆ''.

ಕಿನ್ಯನ ಅಷ್ಟು ಹೇಳಿದ ಅಣ್ಣನ ಮುಖ ನೋಡಿದ.

''ಈಗ ಇರುವ ಈ ಮನೆಯನ್ನು ಕೆಡವಿ ಮಜಲೋಡಿಯಂತಹದ್ದೇ ಒಂದು ಮನೆ ಕಟ್ಟಿಸಿದ ಮೇಲೆಯೇ ಈ ಮನೆಯಲ್ಲಿ ಸಮಾರಂಭ ತೆಗೆಯುವುದೂಂತ ಆಣೆ ಹಾಕಿಕೊಂಡಿದ್ದೇವೆ'' ಮಂಜಣ ಹೇಳಿದ.

''ಅದಕ್ಕೇನು, ಈ ಮದುವೆ ಮಜಲೋಡಿಯ ಮನೆಯಲ್ಲಿ ಮಾಡುವುದಕ್ಕೆ ನಿಮ್ಮ ಆಣೆ ಅಡ್ಡಿ ಬರಲಿಕ್ಕಿಲ್ಲ. ಗಂಡು – ಹೆಣ್ಣು ಮಜಲೋಡಿಯವರೇ ಆಗಿರುವುದರಿಂದ ಮದುವೆ ಮಜಲೋಡಿಯಲ್ಲೇ ಆಗಲಿ''.

ಗುತ್ತಿನ ಯಜಮಾನರು ಹೇಳಿದಾಗ ಮಂಜಣ ತಾಯಿಯ ಮುಖ ನೋಡಿದ. ಕಿನ್ಯನ ಮಾವನ ಮುಖ ನೋಡಿದ. ಅಜ್ಜಿ ಹೇಳಿದರು,



''ಒಬ್ಬಳು ದೊಡ್ಡ ಮಾವನ ಮಗಳು, ಇನ್ನೊಬ್ಬಳು ಚಿಕ್ಕ ಮಾವನ ಮಗಳು. ಜಾಕೆಗೆ ಯೋಚನೆ ಮಾಡಿದ ಹುಡುಗ ದೊಡ್ಡ ಮಾವನ ಮಗ. ಮತ್ತೆ ಚಿಕ್ಕವಳಿಗೆ, ನಿನ್ನ ಅಮ್ಮ ಒಂದು ಆಸೆಯನ್ನು ಹೇಳಿದಳು. ನಿಮಗೆ ಒಪ್ಪಿಗೆ ಆದರೆ ಹಿರಿಯರು ಅವನನ್ನು ಮಾತನಾಡಿ ನಿಶ್ಚಯ ಮಾಡುತ್ತಾರೆ''.

''ನಿಮ್ಮ ಅಮ್ಮನಿಗೆ ನೀವು ಹುಟ್ಟಿದ ಮನೆ ಪಾವೂರಿನ ಸಂಬಂಧ ಉಳಿಸಿಕೊಳ್ಳಬೇಕೆನ್ನುವ ಆಸೆ. ಹಾಗಾಗಿ ಪಾವೂರಿನ ಅತ್ತೆಯ ಮಗ ವೆಂಕಪ್ಪನಿಗೆ ಚಿಕ್ಕವಳನ್ನು ಮಾತನಾಡುವಾಂತ ಹೇಳುತ್ತಿದ್ದಾಳೆ. ನಿಮ್ಮ ಅತ್ತೆಯಲ್ಲಿ ಕೇಳಿದರೆ ಅವಳೂ ಇದಕ್ಕೆ ಒಪ್ಪುತ್ತಾಳೇಂತ ನಮ್ಮ ನಂಬಿಕೆ''.

ಗುತ್ತಿನ ಯಜಮಾನರು ಹೇಳಿದಾಗ ಎಲ್ಲರೂ ಸ್ವಲ್ಪ ಹೊತ್ತು ಮಾತನಾಡಲಿಲ್ಲ. ಕೊನೆಗೆ ಮಂಜಣನೇ ಬಾಯಿ ತೆರೆದ.

''ನಾನು ಅಮ್ಮನಲ್ಲೂ, ಕಿನ್ಯನನಲ್ಲೂ ಹೇಳದೆ ಇರುವಂತಹ ಒಂದು ವಿಷಯ ಇದೆ. ಮಾಯಿಪ್ಪಾಡಿಯ ಅರಸರ ಆಸ್ಥಾನದಿಂದ ಸೇನೆಗೆ ಸೇರಲು ನನಗೆ ಆಹ್ವಾನ ಬಂದಿದೆ. ಇದರ ಮಧ್ಯೆ ಮದುವೆ ಅಂತ ಹೇಳಿದರೆ ಅದು ಸಾಧ್ಯ ಆಗುವಂತಹದಲ್ಲ. ಹೊಳೆಯ ಆ ಬದಿಯ ಮರಾಟಿಗರಿಗೆ, ಅವರು ಅಡವಿಟ್ಟ ಆಸ್ತಿಯನ್ನು ಬಿಡಿಸಿ ನಾನು ಖರೀದಿಸುತ್ತೇನೆ ಎಂದು ಹೇಳಿದ್ದೇನೆ. ಅಲ್ಲಿ ಬಯಲು ಅಗೆದು ಗದ್ದೆಗಳಾಗಬೇಕು. ಇದಕ್ಕೆಲ್ಲ ಹಣ ಬೇಕು. ಕೈಯಲ್ಲಿರುವ ನಾಲ್ಕು ಕಾಸು ಈಗ ಮದುವೇಂತ ಖರ್ಚು ಮಾಡಿದರೆ ಹೇಗೆ ಹೇಳಿ? ಮನೆ ಕಟ್ಟುವುದೋ? ಭೂಮಿ ಮಾಡುವುದೋ? ಅದಕ್ಕೆ ನಾನು ಹೇಳಿದ್ದು, ನಾಲ್ಕು ವರ್ಷಕ್ಕೆ ಮದುವೆಯ ಸುದ್ದಿ ತೆಗೆಯಬೇಡಿ ಅಂತ.

ಅರಸರ ಹೇಳಿಕೆ ಮಜಲೋಡಿಗೂ ಬಂದಿತ್ತು. ಸೇನೆಗೆ ಜನ ಕಳುಹಿಸದಿದ್ದರೆ ಮಾಯಿಪ್ಪಾಡಿ ರಾಜ್ಯದ ದಂಡನಾಯಕರಲ್ಲಿ ಒಬ್ಬರಾಗಿದ್ದ ಗುತ್ತಿನವರು ಮಾನ ಕಳೆದುಕೊಂಡು ಉಂಬಳಿಯ ಗೌರವವನ್ನು ಬಿಟ್ಟುಕೊಡಬೇಕಾದೀತು. ಯಜಮಾನರಿಗೆ ಅದು ಗೊತ್ತಿತ್ತು. ಒಕ್ಕಲಿಗರ ಮನೆಯಿಂದ ಸೇನೆಗೆ ಹೋಗಲಿಲ್ಲ ಎಂಬ ಮಾತು, ದೇಲಮು ಕೊಟ್ಟಾರಿ ಪಾಣಾರ ಸೇನೆಗೆ ಹೋಗದೆ ಗಡುವು ಇಟ್ಟು ಬಂದಂತೆ ಆದೀತು.

ಮಾವ ಮಾತನ್ನು ಅಲ್ಲಿಗೇ ನಿಲ್ಲಿಸಿ, ಮಂಜಣನ ಜೊತೆ ಹೊಳೆಯ ಆ ಬದಿಯ ಬೈಲಿಗೆ ಹೋಗಿ ಮರಾಟಿಗರ ಭೂಮಿ ನೋಡಿ ಬರುವಾ ಅಂತ ಹೊರಟರು.

ತೆಂಕು ದಿಕ್ಕಿನ ಎರಡು ಗುಡ್ಡೆಗಳ ನಡುವಿನ ತಪ್ಪಲಲ್ಲಿ ಬಟ್ಟಲಿನಂತಿರುವ ಭೂಮಿಯ ಎರಡು ಬದಿಗಳಲ್ಲೂ ಕಾಡು. ಕಾಡಿನ ಮಧ್ಯೆ ಹರಿದುಕೊಂಡು ಬರುತ್ತಿರುವ ನೀರು, ಹಸಿರು ಕಾಡಿನ ಪಕ್ಕದಲ್ಲೇ ಮುಳಿ ಹುಲ್ಲಿನ ಪದವು. ಕೆಳಗಿನ ಪೊದೆಗಳಿಂದ ಕೂಡಿದ ಹಾಡಿಯನ್ನು ಅಗೆದು ಹದಗೊಳಿಸಿದರೆ ಹತ್ತು ಮುಡಿಯ ಬೆಟ್ಟುಗದ್ದೆ, 20 ಮುಡಿಯ ಬೈಲುಗದ್ದೆ ಆಗುವುದರಲ್ಲಿ ಏನೂ ಸಂಶಯವಿಲ್ಲ. ಅದರ ಕೆಳಗೆ ಇರುವ ಇಪ್ಪತ್ತೈದು ಮುಡಿಯ, ಹೊಳೆಯ ಬದಿಯ ಪಟ್ಲ ಗದ್ದೆಗಳು ಸಾಗುವಳಿ ಇಲ್ಲದೆ ಗಾರು ಕಟ್ಟಿವೆ.

ಬಡಗು ದಿಕ್ಕಿನ ಗುಡ್ಡೆಯ ಕೆಳಗೆ ಇನ್ನೊಂದು ಬಯಲು. ಅದನ್ನು ಅಗೆದು ಗದ್ದೆ ಮಾಡಿ ಏತ ಕೂಡಿಸಿದರೆ ಹೊಳೆಯ ನೀರಿನಲ್ಲಿ ಬೇಸಾಯ ಮಾಡಬಹುದು ಎನ್ನುತ್ತಾ ಮಾತಾಡಿಕೊಂಡು ಬರುತ್ತಿದ್ದ ಮಂಜಣನಿಗೂ, ಗುತ್ತಿನ ಯಜಮಾನರಿಗೂ ಮರಾಟಿಗರ ಮುದುಕ ಬಂದು ಅಡ್ಡಬಿದ್ದ.

ಮರಾಟಿಯವನನ್ನು ಮಾತನಾಡಿಸಿ ಹೊಳೆ ದಾಟಿ ಮಿತ್ತಬೈಲಿಗೆ ಬರುವಾಗ ಏತದ ಶಬ್ದ, ಬೈಲಿನಿಂದ ದನಕರುಗಳನ್ನು ಹೊಡೆದುಕೊಂಡು ಬರುವ ಮಕ್ಕಳ ಓ...ಓ... ರಾಗ, ಬೈಲಿನಿಂದ ಕಾಡಿಗೆ ಹಿಂದಿರುಗುವ ಹಕ್ಕಿಗಳ ಚಿಲಿಪಿಲಿ, ನೀರು ಕೋಳಿಗಳ ಸ್ವರ ಸೇರಿ ಇಡೀ ಬೈಲಿಗೆ ಬೈಲೇ ನರ್ತಿಸುತ್ತಿತ್ತು. ಪಶ್ಚಿಮದ ಬಾನು ಕೆಂಪಾಗುತ್ತಿತ್ತು.

ಅಂಗಳಕ್ಕೆ ಬಂದು, ರಾತ್ರಿ ಕೋಳಿ, ಕಡುಬಿನ ಊಟವಾಗಿ ಮಲಗಿದ ಗುತ್ತಿನ ಯಜಮಾನರಿಗೆ ಸರಿಯಾಗಿ ನಿದ್ದೆ ಹತ್ತಲಿಲ್ಲ. ಬೆಳಗ್ಗೆಎದ್ದು ಬೈಲಿಗೆ ಸುತ್ತು ಹಾಕಲು ಕಟ್ಟಹುಣಿ ಇಳಿಯುವಾಗ ಸಿಕ್ಕಿದ ಅಳಿಯ ಮಂಜಣನಲ್ಲಿ ತನ್ನ ಮಗ ಕಾಂತಣ್ಣನನ್ನೂ, ಇಬ್ಬರು ಅಳಿಯಂದಿರನ್ನೂ, ಹತ್ತು ಪರಿಶಿಷ್ಟ ಜಾತಿಯ ಯುವಕರನ್ನೂ ಒಟ್ಟಿಗೆ ದಂಡಿಗೆ ಕಳುಹಿಸುವುದಾಗಿ ಹೇಳಿದರು. ಮಂಜಣ ಮಿತ್ತಬೈಲಿನಿಂದ ತಾನೂ ಇಬ್ಬರು ಕುಡಿಯರೂ ದಂಡಿಗೆ ಸೇರುವುದೆಂದು ನಿಶ್ಚಯಿಸಿದ್ದನ್ನು ಹೇಳಿದ. ಅಲ್ಲದೆ ದಂಡಿಗೆ ಹೋಗುವುದಕ್ಕಿಂತ ಮೊದಲು ಮನೆಯ ಕೆಲಸಕ್ಕೆ ಭೂಮಿ ಪೂಜೆ ಮಾಡುವುದು, ದಂಡಿನಿಂದ ಹಿಂದೆ ಬಂದ ಮೇಲೆ ಮನೆಯ ಕೆಲಸ ಮುಗಿಸುವುದೆಂದು ತೀರ್ಮಾನಿಸಿದ್ದನ್ನೂ ಹೇಳಿದ.

ಮನೆಗೆ ಬಂದ ಮಾವ, ಅಳಿಯ ಗಂಜಿ, ಗಂಜಿಯೊಟ್ಟಿಗೆ ಆರಿಕ್ಕಾಡಿಯ ಒಣ ಸಿಗಡಿಯ ಚಟ್ನಿ, ಮಿಡಿ ಮಾವಿನ ಉಪ್ಪಿನಕಾಯಿ ಹಾಕಿ ಊಟ ಮುಗಿಸಿ ಚಪ್ಪರದಡಿಗೆ ಬಂದವರು ಅಜ್ಜಿಯಲ್ಲಿ ದಂಡಿನ ವಿಷಯವನ್ನೆಲ್ಲ ವಿವರಿಸಿದರು.

ಭೂಮಿಯನ್ನು ನೋಡಿದ ಸುಬ್ಬಾಳ್ವರು ತಾಯಿಯಲ್ಲಿ ಆ ಭೂಮಿಯ ವಿವರ ನೀಡಿ, ಭೂಮಿಗೆ ಹತ್ತು ವರಹ ಕೊಟ್ಟು ಖರೀದಿಸಿ ಸಾಗುವಳಿ ಮಾಡಿಸಬಹುದೆಂಬ ತನ್ನ ಅಭಿಪ್ರಾಯ ಹೇಳಿದರು.

ಮದುವೆಯ ಸುದ್ದಿ ಇನ್ನು ಎರಡು ವರ್ಷಕ್ಕೆ ಬೇಡ. ಆ ಎರಡು ವರ್ಷಗಳಲ್ಲಿ ಮನೆ ಕಟ್ಟಿಸಿ ಮುಗಿಯಬೇಕು. ಹೊಳೆಯ ಆ ಬದಿಯ ಭೂಮಿ ಅಗೆದು ಗದ್ದೆ ಮಾಡಿ ಸಾಗುವಳಿ ಆಗಬೇಕು. ಅದಕ್ಕೆಲ್ಲಾ ದುಡ್ಡು ಬೇಕು. ಜನ ಬೇಕು. ಚಿಕ್ಕಮ್ಮನ ಮಕ್ಕಳು ರಾಮಣ್ಣ, ಲಕ್ಷ್ಮಣ ಇಲ್ಲಿಗೆ ಬಂದರೆ ಒಳ್ಳೆಯದೆಂದು ಮಂಜಣ, ಮಾವನಿಗೆ ಹೇಳಿದ. ಮಾವ ಈ ವಿಷಯ ತಾಯಿಗೆ ಹೇಳಿದಾಗ ಆ ಅಜ್ಜಿಗೆ ಬಹಳ ಖುಷಿಯಾಯಿತು.

ಗುತ್ತಿನ ಯಜಮಾನರು, ಮಜಲೋಡಿಯಿಂದ ಆಗುವ ಎಲ್ಲಾ ಸಹಾಯವನ್ನೂ ಕೊಡುತ್ತೇವೆ. ಆ ಬದಿಯ ಮರಾಟಿಗರ ಭೂಮಿ ಖರೀದಿಸಲು ಹತ್ತು ವರಹ ಹಣ ಅಲ್ಲದೆ ಮಿತ್ತಬೈಲಿನ ಮನೆಗೆ ಬೇಕಾದ ಮರಮಟ್ಟು, ಮಜಲೋಡಿಯಿಂದ ಕಳುಹಿಸುತ್ತೇವೆ ಎಂದರು.

ಮಂಜಣ, ಕಿನ್ಯನರು ಅಜ್ಜಿಯ ಕಾಲು ಮುಟ್ಟಿ ಮಿತ್ತಬೈಲಿನಲ್ಲಿ ಮಜಲೋಡಿ ಗುತ್ತಿನ



ಗೌರವಕ್ಕೆ ಕೊರತೆ ಬಾರದಂತೆ ಮನೆ ಕಟ್ಟಿಸುತ್ತೇವೆ ಎಂದು ಮಾತು ಕೊಟ್ಟರು. ಗುತ್ತಿನ ಯಜಮಾನರಿಗೆ ಮಿತ್ತಬೈಲು, ಮಜಲೋಡಿಯಿಂದ ಪಾಲಾಗಿ ಎರಡು ಮನೆಯಾಗುವುದಲ್ಲ, ಮಜಲೋಡಿಯ ಗುತ್ತು ಬೆಳೆದು ದೊಡ್ಡದಾಗುತ್ತಿರುವುದು ಎನ್ನುವ ಸಂತೋಷ.

ಅಜ್ಜಿ ಎಲ್ಲರನ್ನೂ ಹತ್ತಿರ ಕುಳ್ಳಿರಿಸಿಕೊಂಡು ತನ್ನ ಅಪ್ಪಣೆ ಕೊಟ್ಟರು. ಮಂಜಣನಿಗೆ ಗುತ್ತಿನ ಯಜಮಾನರ ಮಗಳು ಲಚಿಮಿಯನ್ನು, ಕಿನ್ಯನನಿಗೆ ಚಿಕ್ಕಮಾವನ ಮಗಳು ಸೀತುವನ್ನು ತರುವುದೆಂದೂ, ಮೊಮ್ಮಗಳು ಜಾಕೆಯನ್ನು ಗುತ್ತಿನ ಯಜಮಾನರ ಮಗ ಕಾಂತಣ್ಣನಿಗೆ ತರುವುದೆಂದೂ ನಿಶ್ಚಯ ಮಾಡಿದ್ದನ್ನು ಹೇಳಿದರು. ಯಜಮಾನರೂ ಸಂಕಮಕ್ಕನೂ ಪಾವೂರು ಗುತ್ತಿನ ವೆಂಕಪ್ಪನಿಗೆ ಮೋಕೆಯನ್ನು ಕೊಡುವ ವಿಷಯವನ್ನು ಮಾತನಾಡಿ ನಿಶ್ಚಯ ಮಾಡಬೇಕು. ಪಾವೂರು ಗುತ್ತಿನ ವೆಂಕಪ್ಪ, ಸಂಕಮ್ಮನ ಗಂಡನ ಕುಟುಂಬದವ. ಅಲ್ಲದೆ ಮಿತ್ತಬೈಲಿನ ಯಾವ ಕೆಲಸವೂ ವೆಂಕಪ್ಪ ಇಲ್ಲದೆ ನಡೆಯದು. ಅವ ಮೋಕೆಗೆ ಹೇಳಿದ ಗಂಡು. ಮದುವೆ ಎರಡು ವರ್ಷ ಕಳೆದು ಮಾಡುವುದು. ಆದರೆ, ನಿಶ್ಚಿತಾರ್ಥ ಮಾತ್ರ ಈ ವಿಷುವಿನ ಮರುದಿನ, ಮೇಷ ಮಾಸದ ಎರಡನೇ ದಿನ ಮಜಲೋಡಿಯಲ್ಲಿ ನಡೆಯುವುದು ಎಂದು ಅಜ್ಜಿ ಅಪ್ಪಣೆ ಕೊಟ್ಟರು. ಅಜ್ಜಿಯ ಅಪ್ಪಣೆಗೆ ಎಲ್ಲರೂ ಒಪ್ಪಿದರು. ಅಂದು ಮಧ್ಯಾಹ್ನ ಸಿಹಿ ಊಟದ ವಿಶೇಷ ಅಡುಗೆ ಮಾಡಲಾಯಿತು. ಆ ಊಟ ಮಿತ್ತಬೈಲಿನ ಜೀವನವನ್ನೇ ಸಿಹಿ ಮಾಡಿತು.

ಮಧ್ಯಾಹ್ನದ ಊಟವಾಗಿ ಹೊರಟ ಅಜ್ಜಿ, ಸಂಕಮ್ಮಕ್ಕನನ್ನೂ ಮಜಲೋಡಿಗೆ ಕರೆದುಕೊಂಡು ಹೋಗುವುದಾಗಿ ಹಠ ಮಾಡಿದರು. ಐದು ವರ್ಷಗಳಿಂದ ಮನೆಯಿಂದ ಹೊರಗೆ ಕಾಲಿಡದ ತಾಯಿಯನ್ನು ಮಕ್ಕಳೂ ಒತ್ತಾಯ ಮಾಡಿ ಹೊರಡಿಸಿದರು. ಸಂಕಮ್ಮನಿಗೆ ಐದು ವರ್ಷಗಳ ಹಿಂದೆ ತಾನು ವೈಮನಸ್ಸಿನಿಂದ ಹೊರಟು ಬಂದ ಮನೆಗೆ ತಿರುಗಿ ಹೋಗುವುದು ಎನ್ನುವಾಗ ಮನಸ್ಸು ಸ್ವಲ್ಪ ಅಳುಕಿತು. ಎಲ್ಲರ ಒತ್ತಾಯಕ್ಕೆ ಮಣಿದು, ಮಕ್ಕಳಿಗೆ ಜಾಗ್ರತೆ ಹೇಳಿ ಅವರು ಹೊರಟರು. ಆದರೆ ಅವರಿಗೆ ಪಾವೂರು ಗುತ್ತಿಗೆ ಹೋಗಿ ಮಗಳು ಮೋಕೆಯ ನೆಂಟಸ್ತಿಕೆಯ ವಿಷಯ ನಿಶ್ಚಯ ಮಾಡಿ ಬರಬೇಕೆಂಬ ಆಸೆ. ಗುತ್ತಿನ ಯಜಮಾನರು ಅದರ ಜವಾಬ್ದಾರಿ ತೆಗೆದುಕೊಂಡು ಮಂಜಣನನ್ನು ಕರೆದುಕೊಂಡು ಪಾವೂರಿಗೆ ಹೋದರು. ಮಾವ, ಅಳಿಯ ಹೋಗಿ ಪಾವೂರು ಗುತ್ತಿನ ಯಜಮಾನರಲ್ಲಿ ತಾಯಿಯ ಆಸೆ ಹೇಳಿ ವೆಂಕಪ್ಪನ ಮಾವ ಹಾಗೂ ತಾಯಿಯ ಒಪ್ಪಿಗೆ ಪಡೆದುಕೊಂಡು ಬಂದರು.

ಸಂಕಮ್ಮಕ್ಕ ಮಜಲೋಡಿಗೆ ಹೋಗಿ ನಾಲ್ಕು ದಿನ ಇದ್ದು ಹಿಂದಿರುಗಿದರು. ಬರುವಾಗ ರಾಮಣ್ಣ, ಲಕ್ಷ್ಮಣರನ್ನೂ ಕರೆತಂದರು. ಒಟ್ಟಿಗೆ, ಮೂಲದವರ ಎರಡು ಸಂಸಾರಗಳೂ ಬಂದವು. ಸಂಕಮಕ್ಕ ಅಣ್ಣ ಕೊಟ್ಟ ಹತ್ತು ವರಹ ಮಂಜಣನಿಗೆ ಕೊಟ್ಟರು.

ರಾಮಣ್ಣ ಹಾಗೂ ಲಕ್ಷ್ಮಣ ಚೋಮಕ್ಕನ ಅವಳಿ ಮಕ್ಕಳು. ತಾಳಿಪ್ಪಾಡಿ ಗುತ್ತಿನಲ್ಲಿ ಹುಟ್ಟಿದವರು. ಚೋಮಕ್ಕನ ಗಂಡ ಐತಪ್ಪ ರೈಗಳು ತೀರಿಕೊಂಡಾಗ ಮಕ್ಕಳಿಗೆ ಹತ್ತು ವರ್ಷ.

ಹೆಣ್ಣು ಮಕ್ಕಳಿಗೆ ಆರೇಳು ವರ್ಷ. ಚೋಮಕ್ಕನಿಗೂ ಅವರ ಮಕ್ಕಳಿಗೂ ಮಜಲೋಡಿಯಲ್ಲಿ ಕಷ್ಟ ಆಗಲಿಲ್ಲ. ಮಕ್ಕಳು ಚಿಕ್ಕವರಾದುದರಿಂದ ಹೊಂದಿಕೊಂಡು ಬೆಳೆದವು. ತಾಳಿಪ್ಪಾಡಿಯ ಮನೆಯನ್ನು ಮರೆತವು. ಆದರೆ ಚೋಮಕ್ಕನಿಗೆ ಮಾತ್ರ ತಾಳಿಪ್ಪಾಡಿಯ ನೆನಪು ಯಾವತ್ತೂ ಮರೆಯಲಾಗದ್ದು.

ಗಂಡ ಸತ್ತ ಹದಿಮೂರನೆಯ ದಿನದ ರಾತ್ರಿ, ಕಣ್ಣಲ್ಲಿ ನೆತ್ತರು ಇಲ್ಲದಂತಹ ತಾಳಿಪ್ಪಾಡಿ ಮನೆಯ ಹೆಣ್ಣುಮಕ್ಕಳು, ತನ್ನನ್ನು ಮನೆಯಿಂದ ಹೊರಗೆ ಹಾಕಿದ್ದು ಚೋಮಕ್ಕನಿಗೆ ಮರೆತಿಲ್ಲ, ಮರೆಯಲು ಆಗಲಿಲ್ಲ ಅವರಿಗೆ. ಗಂಡ ಸತ್ತ ಹೆಣ್ಣು ಮಗಳು ಉಟ್ಟ ಬಟ್ಟೆಯಲ್ಲಿ ಬೊಜ್ಜದ ರಾತ್ರಿ ಗಂಡನ ಮನೆಯನ್ನು ಬಿಟ್ಟು ಕುಟುಂಬದ ಮನೆಗೆ ಹೋಗುವುದರಲ್ಲಿ ಏನೂ ಆಶ್ಚರ್ಯವಿಲ್ಲ. ಅದು ಅಳಿಯಸಂತಾನದ ಮನೆಗಳ ಕಟ್ಟು. ಗಂಡನ ಮನೆ ಬಿಟ್ಟು ಹೊರಡುವಾಗ ಸಂಬಂಧ ಕಡಿದು ಹೋಗುವವರೂ ಇದ್ದಾರೆ, ಸಂಬಂಧ ಉಳಿಸಿಕೊಂಡು ಮನೆ ಬಿಟ್ಟು ಹೋಗುವವರೂ ಇದ್ದಾರೆ. ಚೋಮಕ್ಕನ ಅನುಭವ ಮಾತ್ರ ಮರೆಯಲಾಗದಂತಹದು. ತಾಳಿಪ್ಪಾಡಿಯ ಮನೆಯಲ್ಲಿ ಅವರ ಚಿನ್ನಾಭರಣಗಳನ್ನು ತೆಗೆದು, ಸೀರೆ ಬಟ್ಟೆಗಳನ್ನು ಕಸಿದು ಉಟ್ಟ ಬಟ್ಟೆಯಲ್ಲೇ ಅವರನ್ನು ಕಳುಹಿಸಿದ ಗುತ್ತಿನ ಹೆಣ್ಣುಮಕ್ಕಳನ್ನು ನೆನೆಯುವಾಗ ಅವರ ಮೈ ಉರಿಯುತ್ತಿತ್ತು.

ಐತಪ್ಪ ರೈಗಳು ಉಳ್ಳಾಲದಲ್ಲಿ ದುಡಿದು ಮಾಡಿದ್ದ ಸ್ವಾರ್ಜಿತ ಆಸ್ತಿ, ಬದುಕನ್ನೂ ಅವರ ಮನೆಯ ಅಹಂಕಾರಿ ಸೊಸೆಯಂದಿರು ಕಸಿದುಕೊಂಡರು. ಮನೆಯಲ್ಲಿ ಎರಡು ಹೊತ್ತಿನ ಊಟವಲ್ಲದೆ ಚಿಕ್ಕಪ್ಪ ರೈಗಳು ಮನೆಯ ಆಸ್ತಿಯಲ್ಲಿ ಚಿಕ್ಕಾಸನ್ನೂ ಸ್ವಂತಕ್ಕಾಗಿ ಪಡೆದುಕೊಂಡವರಲ್ಲ. ಅವರು ಸುಲ್ತಾನನ ಸೇನೆಗೆ ಮತ್ತು ಫರಂಗಿಯವರಿಗೆ ಜನ ಮಾಡಿಕೊಡುವ ಕೆಲಸದಲ್ಲಿ ಬೇಕಾದಷ್ಟು ಸಂಪತ್ತು ಗಳಿಸಿದ್ದರು. ಆ ವೈಭವದ ಬದುಕಿನಲ್ಲಿ ಸೊಸೆಯಂದಿರಿಗೆ, ತನ್ನ ಹೆಂಡತಿ, ಮಕ್ಕಳಿಗೆಲ್ಲಾ ಬಹಳಷ್ಟು ಚಿನ್ನ, ಒಡವೆ ಮಾಡಿಸಿ ಕೊಟ್ಟಿದ್ದರು. ಆದರೆ ಅವರು ಸಾಯುವಾಗ ಆ ಮನೆಯ ಹೆಣ್ಣು ಮಕ್ಕಳಿಗೆ ಅವರು ಮಾಡಿದ ಯಾವ ಉಪಕಾರವೂ ನೆನಪಿನಲ್ಲಿ ಉಳಿಯಲಿಲ್ಲ.

ಆಸ್ತಿ, ಸಂಪತ್ತನ್ನು ಕುಟುಂಬದವರು ಕಸಿದುಕೊಂಡರಾದರೂ ಉಳ್ಳಾಲದ ಬ್ಯಾರಿಗೆ ಬಡ್ಡಿಯ ಮೇಲೆ ಸಾಲ ಕೊಟ್ಟಿದ್ದ ಸ್ವಲ್ಪ ಹಣ ಮಾತ್ರ ಕುಟುಂಬದ ಹೆಣ್ಣು ಮಕ್ಕಳಿಗೆ ಸಿಗಲಿಲ್ಲ. ದುಡ್ಡು ತೆಗೆದುಕೊಂಡಿದ್ದ ಬ್ಯಾರಿ ಒಂದು ದಿನ ಮಜಲೋಡಿಗೆ ಬಂದು ಚೋಮಕ್ಕನಲ್ಲಿ ದುಡ್ಡಿನ ಲೆಕ್ಕ ಕೊಟ್ಟ. ಚೋಮಕ್ಕ ಗುಟ್ಟಿನಲ್ಲಿ, ಆ ದುಡ್ಡನ್ನು ಅವನಲ್ಲೇ ಇಟ್ಟುಕೊಂಡು, ತನ್ನ ಹೆಣ್ಣು ಮಕ್ಕಳ ಮದುವೆ ಸಮಯದಲ್ಲಿ ಕೊಡುವಂತೆ ಹೇಳಿದರು. ಬ್ಯಾರಿ ಆ ಹಣವನ್ನು ತನ್ನ ವ್ಯಾಪಾರದಲ್ಲಿ ತೊಡಗಿಸಿ ಅದರ ಲೆಕ್ಕವನ್ನು ಬೇರೆಯೇ ಇಟ್ಟುಕೊಂಡ. ವರ್ಷ ವರ್ಷ ಬಂದು ಚೋಮಕ್ಕನಿಗೆ ಲೆಕ್ಕ ಕೊಡುತ್ತಿದ್ದ. ಮಜಲೋಡಿಗೆ ಬರುವಾಗ ಸ್ವಲ್ಪ ಮೀನು, ಗೋಣಿಯಲ್ಲಿ ಸ್ವಲ್ಪ ಬೆಲ್ಲ, ಅರಬಸ್ತಾನದ ಖರ್ಜೂರ ತರುತ್ತಿದ್ದ. ಬ್ಯಾರಿ ಬಂದಂದು ಮಜಲೋಡಿಯಲ್ಲಿ ಮಕ್ಕಳಿಗೆಲ್ಲಾ ಖರ್ಜೂರ ಹಣ್ಣಿನ ಔತಣ. ಆ



ಎರಡು ದಿನ ಊಟ ಮಾಡದೆ ಖರ್ಜೂರದಿಂದಲೇ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದ ಮಕ್ಕಳಿಗೆ ಆಮಶಂಕೆ ಏನಾದರೂ ಆಗಿಬಿಡಬಹುದು ಎಂದು ಹಿರಿಯರು ಗದರಿಸುತ್ತಿದ್ದರು. ಖರ್ಜೂರವನ್ನು ಭರಣಿಯಲ್ಲಿ ತುಂಬಿಸಿ ಅಟ್ಟದಲ್ಲಿ ತೆಗೆದಿಟ್ಟರೆ ಮತ್ತೆ ಅದನ್ನು ಮಳೆಗಾಲ ದಲ್ಲಿ ಕುಂಭದ್ರೋಣ ಮಳೆ ಸುರಿಯುವ ಸಮಯದಲ್ಲಿ ಹಂಚುತ್ತಿದ್ದರು.

ಸಂಕಮಕ್ಕ, ಮಗ ಮಂಜಣನನ್ನು ಕರೆದು ಚೋಮಕ್ಕ ಗುಟ್ಟಲ್ಲಿ ಹೇಳಿ ಕಳುಹಿಸಿದ ಮಾತನ್ನು ಹೇಳಿದರು. ''ಮಂಜಣನಿಗೆ ಹಣಕಾಸು ಬೇಕಿದ್ದರೆ ಉಳ್ಳಾಲದ ಬ್ಯಾರಿಯಲ್ಲಿ ಕೇಳಿದರೆ ಆತ ಕೊಡುತ್ತಾನೆ''. ಚೋಮಕ್ಕ ಹೇಳಿದ ಬ್ಯಾರಿಯ ವಿಷಯ ಮತ್ತು ವರ್ಷಕ್ಕೊಮ್ಮೆ ಮಜಲೋಡಿಗೆ ಬರುತ್ತಿದ್ದ ಆ ಬೆಲ್ಲ, ಖರ್ಜೂರದ ಸಂಗತಿಯನ್ನು ತಾಯಿ ವಿವರಿಸಿ ಹೇಳುವಾಗ ಮಂಜಣನಿಗೆ ಆಶ್ಚರ್ಯವಾಯಿತು. ಉಳ್ಳಾಲದ ಬ್ಯಾರಿಯಷ್ಟು ಸತ್ಯಸಂಧರು ಈಗಲೂ ಇದ್ದಾರಲ್ಲ ಅಂತ ಆಶ್ಚರ್ಯವಾಯಿತು. ಈ ಹಣದ ಬಗ್ಗೆ ಚೋಮಕ್ಕ ಮಿತ್ತಬೈಲಿನಲ್ಲಿ ಬಂದು ಕುಳಿತ ಮೇಲೆಯೇ ಮಾತನಾಡುವ, ಈಗ ಬೇಡ ಎಂದು ಮಂಜಣ ತಾಯಿಯಲ್ಲಿ ಹೇಳಿದ.

ಮಂಜಣನ ತಲೆಯಲ್ಲಿ ಮಾತ್ರ ಕೃಷಿ, ಭೂಮಿಯದೇ ಕನಸು. ಆ ಬದಿಯ ಭೂಮಿ ಮಾತ್ರ ಅಲ್ಲ, ಬೇರೆ ಆಸ್ತಿಯನ್ನೂ ಹುಡುಕಿ, ತಮ್ಮ ಕಿನ್ಯನ, ರಾಮಣ್ಣ, ಲಕ್ಷ್ಮಣರಿಗೆ ಮಿತ್ತಬೈಲಿನ ಕೆಲಸವನ್ನು ವಹಿಸಿಕೊಟ್ಟು ತಾನು ಹೊಸ ಭೂಮಿಯನ್ನು ಮಾಡಬೇಕೆಂದು ಕೊಂಡ. ಅವನ ತಲೆಯಲ್ಲಿ ಆಸ್ತಿ-ಬದುಕು, ಒಕ್ಕಲು-ಸಕ್ಕಲು, ಗದ್ದೆ-ತೋಟಗಳೇ ತಿರುಗಲಾರಂಭಿಸಿದವು.ಅವನಿಗೆ ವರ್ಕಾಡಿ, ವಿಟ್ಲ ಸೀಮೆಯ ಸುತ್ತಮುತ್ತ ಎಲ್ಲರಿಗಿಂತ ದೊಡ್ಡ ಆಸ್ತಿಯ ಮನೆ ತನ್ನದಾಗಬೇಕು, ಒಂದು ಸಾವಿರ ಮುಡಿ ಅಕ್ಕಿ ಬೆಳೆಯಬೇಕು, ಒಂದು ಸಾವಿರ ಮುಡಿ ಅಕ್ಕಿಯ ಗೇಣಿ ಬರಬೇಕು, ಬಾಕಿಮಾರು ಗದ್ದೆಯಲ್ಲಿ ಗದ್ದೆ ಗೋರುವ ದಿನ ಇಪ್ಪತ್ತೈದು ಜೋಡಿ ಕೋಣಗಳನ್ನು ಕಟ್ಟಬೇಕು, ಸೀಮೆಯ ಜನರೆಲ್ಲಾ ಅದನ್ನು ನೋಡಲು ಬರಬೇಕು-ಹೀಗೆ ದೊಡ್ಡ ದೊಡ್ಡ ಕನಸುಗಳು ತಲೆ ತುಂಬ ತುಂಬಿಕೊಂಡಿದ್ದವು.

★★★

ದಿನ ಕಳೆದು ತಿಂಗಳಾಯಿತು. ಮಾಯಿ ಕಳೆದು ಸುಗ್ಗಿ ಬಂತು. ಸುಗ್ಗಿಯ ಗದ್ದೆ ಮದುವಣಗಿತ್ತಿಯಂತೆ ಕಂಗೊಳಿಸತೊಡಗಿತು. ಹಸಿರು ಸೀರೆಗೆ ಬಂಗಾರದ ಸೆರಗು, ಅಡಿಕೆ ತೆಂಗಿನಕಾಯಿಗಳ ಸರ ಹಾಕಿಕೊಂಡು ತುಳುವ ತಾಯಿ ಮೆರೆಯುತ್ತಿದ್ದಳು. ಗೇರು, ಮಾವಿನ ಮರಗಳು ಹೂ ಬಿಟ್ಟು ಊರೆಲ್ಲಾ ಪರಿಮಳ ಹರಡುತ್ತಿತ್ತು. ಎಣೆಲು ಅಕ್ಕಿ ಮಾಡಿ ಮುಡಿ ಕಟ್ಟಿಸುತ್ತಿರುವಾಗ ಮಾವನ ಜೊತೆ ಅರಸರ ಕಡೆಯ ಸೇನಾಧಿಕಾರಿಯೊಬ್ಬ ಬಂದು ಮಂಜಣನಿಗೆ ಕುಂಬಳೆಯ ಅರಸರ ಸೇನೆಗೆ ಸೇರಲು ಆಹ್ವಾನ ನೀಡಿದನು. ಮಂಜಣ, ಮಿತ್ತಬೈಲಿನಿಂದ ನಾಲ್ಕು ಜನರನ್ನು ಕರೆದುಕೊಂಡು ಹತ್ತು ದಿನಗಳಲ್ಲಿ ಮಾಯಿಪ್ಪಾಡಿಗೆ

ಬರುವುದಾಗಿ ತಿಳಿಸಿದ. ಸುಬ್ಬಾಳ್ವರು ಮಗ ಕಾಂತಪ್ಪನ ಜೊತೆ ಅಳಿಯಂದಿರು ಮತ್ತು ಮನೆಯ ಒಕ್ಕಲಿನವರನ್ನು ಒಟ್ಟು ಮಾಡಿ ಹತ್ತಿಪ್ಪತ್ತು ಜನರನ್ನು ಕಳುಹಿಸಲು ಒಪ್ಪಿದರು. ಮಂಜಣನ ನಾಯಕತ್ವದಲ್ಲಿ ಮಜಲೋಡಿ ಗುತ್ತಿನಿಂದ ಹತ್ತೈವತ್ತು ಜನ ಸೇನೆಗೆ ಸೇರುವ ವ್ಯವಸ್ಥೆ ಮಾಡಿ, ಸೇನಾಧಿಕಾರಿ ಕುದುರೆ ಹತ್ತಿ ಮುಜುಂಗಾವು ದೇವಸ್ಥಾನದತ್ತ ಹೊರಟ. ಅವನ ಕುದುರೆಯನ್ನೇ ನೋಡುತ್ತಿದ್ದ ಮಂಜಣ ಒಂದು ದಿನ ತಾನೂ ಹಾಗೆಯೇ ಕುದುರೆ ಏರಬೇಕೆಂದುಕೊಂಡ.

ಅವರು ಹೋದ ಮೇಲೆ ಮಂಜಣ ತಮ್ಮಂದಿರನ್ನು ಒಟ್ಟುಗೂಡಿಸಿ ತಾನು ಬರುವವರೆಗೆ ಏನೆಲ್ಲಾ ಕೆಲಸ ಆಗಬೇಕು ಎಂಬುದನ್ನು ವಿವರಿಸಿದ. ತಾಯಿ ಸಂಕಮ್ಮಕ್ಕನಿಗೆ ಮಗ ದಂಡಿಗೆ ಹೋದರೆ ಏನಾಗಬಹುದೋ ಎಂಬ ಭಯವಿದ್ದರೂ ದಂಡಿನ ಗೌರವ ತನ್ನ ಮನೆಗೂ ಬಂತಲ್ಲ ಎಂದು ಸಂತೋಷವೂ ಆಯಿತು. ಮಂಜಣ ಸೇನೆಯ ತರಬೇತಿಗೆ ಹೊರಟ.

ಆ ಕಾಲದಲ್ಲಿ ಮಾಯಿಪ್ಪಾಡಿಯ ಸೇನೆಗೆ ಇಬ್ಬರು ದಂಡನಾಯಕರು. ಒಬ್ಬರು ಮಂಗಳೂರಿನ ಸುಬ್ರಾಯ ಶಾನುಭೋಗರು. ಇನ್ನೊಬ್ಬರು ಇಚ್ಲಂಪಾಡಿಯ ಕೋಚಣ್ಣಾಳ್ವರು. ಮಂಜಣನನ್ನು ನೋಡಿದ ಸುಬ್ರಾಯ ಶಾನುಭೋಗರು ಅವನನ್ನು ತನ್ನೊಟ್ಟಿಗೆ ತರಬೇತಿಗೆ ಕರೆದುಕೊಂಡರು. ಸೀತಾಂಗೋಳಿಯಲ್ಲಿ ಸೇನೆಯ ತರಬೇತಿ ಪ್ರಾರಂಭವಾಯಿತು. ಸೀತಾಂಗೋಳಿಯ ದಂಡನ್ನು ನಾಲ್ಕು ಪಾಲು ಮಾಡಿ ಕತ್ತಿ ವರಸೆ, ಸಿಡಿಮದ್ದು ಸಿಡಿಸುವುದು, ಈಟಿ ಯುದ್ಧ, ಕುದುರೆ ಯುದ್ಧ ಮೊದಲಾದ ಬೇರೆ ಬೇರೆ ವಿದ್ಯೆಗಳನ್ನು ಕಲಿಸಲು ತೊಡಗಿದರು. ಕುದುರೆ ಸವಾರಿ ಮಾತ್ರವಲ್ಲ, ಕುದುರೆಯ ಮೇಲೆ ಕುಳಿತು ಕಸರತ್ತು, ಕತ್ತಿ ಯುದ್ಧ, ತುಪಾಕಿ, ಭರ್ಚಿಗಳ ಯುದ್ಧ ಕಲಿಯುತ್ತಿದ್ದಾಗ ಒಂದು ದಿನ ಸುಬ್ರಾಯ ಶಾನುಭೋಗರೊಟ್ಟಿಗೆ ಬಂದ ರಾಮಂತರಸರು ಸೇನೆಯ ತರಬೇತಿಯನ್ನು ನೋಡಿದರು. ಸುಬ್ರಾಯ ಶಾನುಭೋಗರು ಹೇಳುತ್ತಿದ್ದ ಮಂಜಣನನ್ನು ನೋಡಿ ಅವರಿಗೆ ಖುಷಿಯಾಯಿತು. ರಾಮಂತರಸರು ಮಂಜಣಾಳ್ವನನ್ನು ಐನೂರಾಳುಗಳ ನಾಯಕನನ್ನಾಗಿ ನೇಮಿಸಿದರು. ಸೀತಾಂಗೋಳಿಯ ತರಬೇತಿಯ ವ್ಯವಸ್ಥೆಗೆ ಟಿಪ್ಪು ಸುಲ್ತಾನನ ಸೇನೆಯಲ್ಲಿದ್ದ ಪೀರ್ ಸಾಹೇಬರನ್ನು ತರಿಸಿ, ಮಂಜಣನಿಗೆ ವಿಶೇಷ ತರಬೇತಿ ಕೊಡುವಂತೆ ಹೇಳಿದರು.

ಪೀರ್ ಸಾಹೇಬ ದಂಡನ್ನು ಚಿಕ್ಕ ಚಿಕ್ಕ ತುಕಡಿಗಳಾಗಿ ವಿಂಗಡಿಸಿ ತರಬೇತಿ ಕೊಡುವ ಕ್ರಮ ಜಾರಿಗೆ ತಂದ. ಕಾಲಾಳ ತುಕಡಿ, ಕುದುರೆಗಳ ತುಕಡಿ, ಮದ್ದುಗುಂಡಿನ ತುಕಡಿಗಳು, ರಣಭೂಮಿಯಲ್ಲಿ ಕಾದಾಡುವುದಕ್ಕಾದರೆ, ಒಂದು ತುಕಡಿ ಬೇಹುಗಾರಿಕೆಗೆ. ವಿಭಿನ್ನ ವೇಷ ಹಾಕಿಕೊಂಡು ಊರೂರು ತಿರುಗುವುದು ಹೇಗೆ, ಸುದ್ದಿ ತಿಳಿದುಕೊಂಡು ದಂಡನಾಯಕರಿಗೆ ತಿಳಿಸುವುದು ಹೇಗೆಂದು ಪೀರ್ ಸಾಹೇಬ ಹೇಳಿಕೊಟ್ಟ. ಕಾಂತಣ್ಣನಿಗೆ ಕುದುರೆಯ ಮೇಲಿರುವ ಪ್ರೀತಿ, ಸಾಕುವ ಕ್ರಮ ನೋಡಿ ಅವನನ್ನು ಪೀರ್ ಸಾಹೇಬ ಮತ್ತು ಮಂಜಣ ಕುದುರೆಯ ತುಕಡಿಯ ನಾಯಕನನ್ನಾಗಿ ಮಾಡಿದರು. ಪೀರ್ ಸಾಹೇಬ ಬೆರಳಲ್ಲಿ



ತೋರಿಸಿದ್ದನ್ನು ಮಂಜಣ ಕೈಯಲ್ಲಿ ಹಿಡಿದುಕೊಂಡ. ಕೈಯಲ್ಲಿ ತೋರಿಸಿದ್ದನ್ನು ತಲೆಯಲ್ಲಿ ಹೊತ್ತುಕೊಂಡ.

ಮೂರು ತಿಂಗಳ ತರಬೇತಿ ಮುಗಿದು ಏಳು ದಿನಗಳ ರಜೆ ಕೊಟ್ಟರು. ವಿಷು ಹಬ್ಬಕ್ಕೆ ಮನೆಗೆ ಹೋಗಲು ಬಿಟ್ಟರು. ಎಲ್ಲರಿಗೂ ತಿಂಗಳಿಗೊಂದು ವರಹದಂತೆ ಸಂಬಳ ಕೊಟ್ಟು ಕಳುಹಿಸಿದರು. ಮಂಜಣನಿಗೆ ದಂಡನಾಯಕನೆಂದು ಆರು ವರಹ ಕೊಟ್ಟರು. ಮಂಜಣ ಆ ಹಣವನ್ನು ಸೇನೆಯ ಭಂಡಾರಿಯಲ್ಲಿ ಇಟ್ಟುಕೊಳ್ಳಲು ಹೇಳಿ ತಾನು ಮುಂದಿನ ಸಲ ಮನೆಗೆ ಹೋಗುವಾಗ ಅದನ್ನು ತೆಗೆದುಕೊಳ್ಳುವುದಾಗಿ ತಿಳಿಸಿದ.

ಊರಿಗೆ ಬಂದ ಮಂಜಣನಿಗೆ ಬೈಲಿಗೆ ಬರುವಾಗ ತವರಿಗೆ ಬಂದ ಮಗಳಂತಾಯಿತು. ಕೋವಿ ಹೊತ್ತುಕೊಂಡು ಕುದುರೆ ಓಡಿಸುವುದನ್ನು ಬಿಟ್ಟು ಬಂದವನಿಗೆ ನಾಲ್ಕು ಮರಿಗೆ ನೀರು ಮಗುಚದೆ ಬೈಲು ಬಿಡಲು ಮನಸ್ಸಾಗಲಿಲ್ಲ. ದಂಡಿನ ಬಟ್ಟೆ ಕಳಚಿ ನಾಲ್ಕು ಮರಿಗೆ ನೀರು ಮಗುಚಿ ಹೊಳೆಗೆ ಹಾರಿ ಆ ಬದಿ ಈ ಬದಿ ಈಜುತ್ತಿದ್ದವನು ದಡ ಸೇರಿದಾಗ ತಾಯಿ, ತಮ್ಮಂದಿರು ಬಂದು ಕರೆದಾಗಲೇ ಮೇಲೆ ನೋಡಿದ್ದು. ಇಡೀ ಬೈಲು ಅಲ್ಲಿ ನೆರೆದಿತ್ತು. ಎಲ್ಲರನ್ನೂ ಮಾತನಾಡಿಸಿ ಮನೆಯ ಅಂಗಳಕ್ಕೆ ಬಂದಾಗ ಹೊತ್ತು ಮುಳುಗುತ್ತಿತ್ತು. ಬೈಲಿನವರಿಗೂ ಕೆಲಸದವರಿಗೂ ಮಂಜಣನನ್ನು ನೋಡಿದಷ್ಟೂ ಸಾಲದು. ಅವನೊಂದಿಗೆ ಅಂಗಳಕ್ಕೆ ಬಂದ ಎಲ್ಲರಿಗೂ ಸಂಕಮಕ್ಕ ಬೆಲ್ಲ ನೀರು ನೀಡಿ ಕಳುಹಿಸಿದರು.

ತಾಯಿ ಸಂಕಮಕ್ಕನಿಗೆ, ಈ ಮೂರು ತಿಂಗಳಲ್ಲಿ ಮಗ ತುಂಬಾ ಬದಲಾಗಿದ್ದಾನೆ ಅನ್ನಿಸಿತು. ಮೊದಲೇ ಮಕ್ಕಳಾಟಿಗೆ ಎಂಬುದೇ ಇಲ್ಲದ ಮಂಜಣ ದಂಡಿನ ಶಿಸ್ತು, ಕಾಠಿಣ್ಯವನ್ನು ಮೈದುಂಬಿಸಿಕೊಂಡು ಬಂದಂತೆ ಕಾಣುತ್ತಿತ್ತು. ದಂಡಿನ ದಂಡನಾಯಕನಾಗಿ ತರಬೇತಿ ಪಡೆದು ಬಂದವನಿಗೆ ಯಜಮಾನಿಕೆಯ ಗತ್ತು ಕೇಳದೆ ಬಂದಂತಿತ್ತು. ಚಿಕ್ಕ ಪ್ರಾಯದವನಾದರೂ ಈಗಲೇ ಪ್ರಬುದ್ಧ ಯಜಮಾನನ ನಡವಳಿಕೆ ಮೈಗೂಡಿತ್ತು. ಇಷ್ಟಾದರೂ ಗದ್ದೆ ಉಳುವವನ ಮಣ್ಣಿನ ಪ್ರೀತಿ ಉಳಿದುಕೊಂಡಿತ್ತು.

ತಾಯಿ, ತಮ್ಮಂದಿರ ಒತ್ತಾಯಕ್ಕೆ, ತಂಗಿಯಂದಿರ ಪ್ರೀತಿಗೆ ಮಣಿದು ಮಂಜಣ ದಂಡನಾಯಕನ ಬಟ್ಟೆ, ಮುಂಡಾಸು ಧರಿಸಿ ನಿಂತಾಗ ಮನೆಯವರಿಗೆ ಹೆಮ್ಮೆಯಿಂದ ಬಾಯಿ ಕಟ್ಟಿತು. ಚಿಕ್ಕವರು, ದೊಡ್ಡವರು ಎಲ್ಲ ಅವನನ್ನು ಅಪ್ಪಿಕೊಂಡರು. ತಾಯಿ ಅವನಿಗೆ ತಮ್ಮದೇ ದೃಷ್ಟಿ ಬೀಳಬಹುದೆಂದು ದೃಷ್ಟಿ ತೆಗೆದರು. ಚಪ್ಪರದಡಿಯಲ್ಲಿ ಮನೆಯವರೆಲ್ಲರೂ ಸುತ್ತ ಸೇರಿಕೊಂಡು ಸೇನೆಯ ಕತೆಗಳನ್ನು ಕೇಳಿದರು.

ತಮ್ಮಂದಿರು ತಮ್ಮನ್ನೂ ಸೇನೆಗೆ ಸೇರಿಸಲಿಕ್ಕಾಗುವುದಿಲ್ಲವೇ ಎಂದು ಕೇಳಿದಾಗ ಮಂಜಣ ಅರಸನ ಕಟ್ಟಳೆ, ಸೈನ್ಯದ ರೀತಿ ನೀತಿಗಳನ್ನು ವಿವರಿಸಿದ.

ಆ ಕಾಲದಲ್ಲಿ ದಂಡಿಗೆ ಕರೆಸಿದವರನ್ನು ಮಾತ್ರ ಸೇರಿಸಿಕೊಳ್ಳುತ್ತಿದ್ದರು. ಯಾರೂ ತಾವಾಗಿ ಹೋಗಿ ದಂಡಿಗೆ ಸೇರುವ ಕ್ರಮ ಇರಲಿಲ್ಲ. ಸಾಧ್ಯವಿರುವ ಮನೆಯವರು, ಗುತ್ತಿನವರು ದಂಡಿಗೆ ಸೇರಬೇಕಾದರೆ ಅರಮನೆಯ ಕರೆ ಬರಬೇಕು. ಇಲ್ಲದಿದ್ದರೆ ಆ

ದಂಡಿನಲ್ಲಿ ಅರಸನ ಮೇಲೆ, ರಾಜ್ಯದ ಮೇಲೆ ವಿಶ್ವಾಸ ಇಲ್ಲದವರೂ ಸೇರಿಯಾರು. ಸೇನೆಯಲ್ಲಿ ವಿಶ್ವಾಸ ಇಲ್ಲದವರು ಇರಬಾರದು. ಹಳ್ಳಿ ಹಳ್ಳಿಗಳಲ್ಲಿದ್ದ ಗುತ್ತಿನ ಯಜಮಾನರೇ ಸೇನೆಗೆ ಜನ ಕಳುಹಿಸುವುದು ಕ್ರಮ. ಅದರಲ್ಲಿ ಗುತ್ತಿನವರೇ ದಂಡಿನ ನಾಯಕರಾಗುತ್ತಿದ್ದರು. ಅರಸರ ದಂಡಿನಲ್ಲಿ ಸಹಾಯ ಮಾಡಲು ಸೇನಾಧಿಕಾರಿಗಳಿದ್ದರು. ಅತಿಕಾರಿಗಳೆಂಬ ಗೂಢಚಾರರು ಊರೂರು ತಿರುಗಿ ಬಂದು ವಿವರ ಕೊಡುತ್ತಿದ್ದರು. ಮಾಯಿಪ್ಪಾಡಿಯ ಅರಸರಿಗೆ ಸುಬ್ರಾಯ ಶಾನುಭೋಗರು, ಇಚ್ಲಂಪಾಡಿಯ ಕೋಚಣ್ಣಾಳ್ವರೂ ಆ ಕಾಲದ ದಂಡಿನ ದಳವಾಯಿಗಳಾಗಿ ತರಬೇತಿ, ಕಸರತ್ತಿನ ಕೆಲಸದಲ್ಲಿ ಸಹಾಯ ಮಾಡುತ್ತಿದ್ದರು. ತರಬೇತಿಯಾದ ದಂಡಿನ ಆಳುಗಳನ್ನು ಮೂರು ತಿಂಗಳನಂತರ ಮನೆಗೆ ಹೋಗಲು ಬಿಡುತ್ತಿದ್ದರು. ಹಾಗೆ ಬಂದ ಆಳುಗಳು ಅವರವರ ಕುಲಕಸಬು ಮಾಡಿಕೊಂಡು ಅರಸರು ಬಿಟ್ಟ ಉಂಬಳಿ, ಸಂಬಳವನ್ನು ಅನುಭವಿಸುತ್ತಿದ್ದರು. ಆಯಾ ಊರಿನ ಗುರಿಕಾರ, ಗುತ್ತಿನ ಯಜಮಾನನಿಗೆ ಅವನ ಊರಿನ ಸೈನಿಕರ ಜವಾಬ್ದಾರಿ ಕೊಡುತ್ತಿದ್ದರು. ಗುತ್ತಿನವರು ಹಾಗೆ ತರಬೇತಿ ಮುಗಿಸಿ ಬಂದ ದಂಡಾಳುಗಳನ್ನು ತಮ್ಮ ಒಕ್ಕಲಿನಲ್ಲಿ ಕುಳ್ಳಿರಿಸಿ ಅವರಿಗೆ ಕೆಲಸ, ಅಲ್ಲದಿದ್ದರೆ ದುಡಿಯುವ ಭೂಮಿ ಕೊಟ್ಟು ಸಾಕುತ್ತಿದ್ದರು.

ಗುತ್ತಿನ ಯಜಮಾನರು ಬಂದ ಗೇಣಿಯಲ್ಲಿ ಅರಸರಿಗೆ ಒಂದು ಪಾಲು ಕೊಟ್ಟು ಉಳಿದದ್ದನ್ನು ತಮಗೆ ಇಟ್ಟುಕೊಳ್ಳುತ್ತಿದ್ದರು. ಸೇನೆಯದಲ್ಲದೆ, ಊರಿನ ದೇವಸ್ಥಾನ, ಭೂತಸ್ಥಾನಗಳ ವಿನಿಯೋಗದ ಆಸ್ತಿಯೂ ಗುತ್ತಿನ ಸ್ವಾಧೀನ ಇರುತ್ತಿತ್ತು. ಭೂತದ ಚಾಕರಿಯವರಿಗೆ, ಕೆಲಸಕಾರ್ಯಗಳಿಗೆ ಬೇಕಾದ ಆಸ್ತಿಯನ್ನು ಉಂಬಳಿ ಬಿಟ್ಟು, ಗ್ರಾಮ ಸೀಮೆಯ ರಕ್ಷಣೆ ಗುತ್ತಿನ ಕೈಗೆ ಕೊಟ್ಟು ರಾಜ್ಯಭಾರ ನಡೆಯುತ್ತಿತ್ತು. ಒಮ್ಮೊಮ್ಮೆ ದೇವಾಲಯ ಅಥವಾ ಪೂಜೆಯ ಭಟ್ಟರ, ತಂತ್ರಿಗಳ ಆಸ್ತಿಗಳನ್ನೂ ಗೇಣಿಗೆ ಈ ದಂಡಿನವರಿಗೆ ದುಡಿಯಲು ಬಿಟ್ಟು ಕೊಡುತ್ತಿದ್ದರು. ಈ ಉಂಬಳಿಯ ಆಸ್ತಿಗಳ ಬೇಸಾಯ ಮಾಡುತ್ತಿದವನು ಕಾಲಾನುಕಾಲಕ್ಕೂ ಗುತ್ತಿನ ಗೇಣಿ ಒಕ್ಕಲಿನವನಾಗಿರುತ್ತಿದ್ದ.

ಮಜಲೋಡಿಯಲ್ಲಿ ಭಾರೀ ಗೌಜಿಯಲ್ಲಿ ತಯಾರಿ ನಡೆಯುತ್ತಿತ್ತು. ಇಬ್ಬರು ವರರು ಮತ್ತೆ ದಂಡಿಗೆ ಹೋಗುವುದಕ್ಕೆ ಮೊದಲು ವಿಷುವಿನ ಮರುದಿನ 'ಸಿಂಗಡೆ'ಯ ಅಶುಭ ದಿನ ಮುಗಿದ ಕೂಡಲೇ ನಿಶ್ಚಿತಾರ್ಥ ಮಾಡಬೇಕೆಂದು ಹಿರಿಯರು ನಿಶ್ಚಯ ಮಾಡಿದ್ದರು. ಮಂಜಣ ದಂಡಿಗೆ ಹೋಗಿ ಬರುವಾಗ ಅಜ್ಜಿಯೂ, ಮಾವನೂ ಹೋಗಿ ಮೋಕೆಗೆ, ವೆಂಕಪ್ಪನ ಸಂಬಂಧ ಮಾತನಾಡುವ ಕ್ರಮವನ್ನು ನಡೆಸಿದರು. ಪಾವೂರಿನ ಹಿರಿಯರು ಭಾರೀ ಖುಷಿಯಲ್ಲಿ ಒಪ್ಪಿಗೆ ಕೊಟ್ಟು ಮಜಲೋಡಿಯಲ್ಲೇ ನಿಶ್ಚಯಕ್ಕೆ ಒಪ್ಪಿದರು. ಪಾವೂರಿನ ಹಿರಿಯ, ಕಿರಿಯರೆಲ್ಲರಿಗೂ ಸಂಕಮಕ್ಕ ಎಂದರೆ ಬಹಳ ಪ್ರೀತಿ. ಹಾಗಾಗಿ ಸಂಬಂಧದ ವಿಚಾರದಲ್ಲಿ ಯಾರ ಅಡ್ಡ ಮಾತೂ ಇರಲಿಲ್ಲ.

ಸುಬ್ಬಾಳ್ವರಿಗೆ ಮಗ ಕಾಂತಪ್ಪನ ಮೂಲಕ ಸೇನೆಯ ತರಬೇತಿಯ ವಿವರ ಸಿಕ್ಕಿತು.



ಅಳಿಯ ಮಂಜಣ ಕುಂಬಳೆಯ ಅರಸರ ದಂಡಿನ ದಂಡನಾಯಕ ಆದ ಎಂದು ತಿಳಿದಾಗ ಸಂತೋಷವಾಯಿತು. ಮಗ ಕುದುರೆ ದಂಡಿನ ನಾಯಕ, ಅಳಿಯ ಐನೂರಾಳಿನ ದಂಡನಾಯಕನಾಗಿ ಊರಿಗೆ ಬರುವಾಗ ಯಜಮಾನರು ಊರಿಡೀ ಆ ಸುದ್ದಿಯನ್ನು ಮುಟ್ಟಿಸಿದರು. ಮಜಲೋಡಿಯ ಇಬ್ಬರು ಯುವಕರು ಸೀಮೆಯಲ್ಲಿ ಹೆಸರು ಪಡೆಯುವುದಕ್ಕಿಂತ ಹೆಚ್ಚಿಗೆ ಅವರಿಗೆ ಏನಾಗಬೇಕು? ಅವರ ಕಾಲು ನೆಲದಲ್ಲಿ ನಿಲ್ಲುತ್ತಿರಲಿಲ್ಲ. ಸುತ್ತಮುತ್ತಲಿನ ನೇಮ-ನಡಾವಳಿಗಳಿಗೆ ಹೋದಲ್ಲಿ ಅಳಿಯನದೇ ಮಾತು, ಮಗನದೇ ವಿಷಯ. ಮಗ ಬಂದ ಎರಡು ದಿನಗಳಲ್ಲೇ ಯಜಮಾನರು ಸ್ವತಃ ಗಾಡಿ ಕಟ್ಟಿಸಿ ಮಿತ್ತಬೈಲಿಗೆ ಹೊರಟರು. "ನೀನು ಮಿತ್ತಬೈಲಿಗೆ ಹೋದರೆ ಇಲ್ಲಿ ಯಾರು ಸುಧಾರಿಸುವುದು?"ಎಂದು ತಾಯಿ ಕೇಳಿದುದಕ್ಕೆ ತಮ್ಮನಿಗೆ ಎಲ್ಲಾ ಒಪ್ಪಿಸಿಕೊಟ್ಟು ಹೊರಟರು. ಹೆಂಡತಿ ಹಾಗೂ ಮಗನನ್ನು ಅವರ ಕುಟುಂಬಕ್ಕೆ ಹೇಳಿಕೆ ಕೊಟ್ಟು ಬರಲು ಕಳುಹಿಸಿದರು. ಯಜಮಾನರು ತಾಯಿಯ ಪಿರಿಪಿರಿಗೆ ಕಿವಿ ಕೊಡದೆ ವಿಷುವಿನ ಹಿಂದಿನ ದಿನ ತಂಗಿ ಹಾಗೂ ಮಕ್ಕಳನ್ನು ಕರೆತರುವೆನೆಂದು ಹೇಳಿ ಗಾಡಿ ಬಿಟ್ಟರು.

ದಂಡಿನಿಂದ ಬಂದ ಮಂಜಣನಿಗೆ ಗದ್ದೆಯಲ್ಲಿ ಸುತ್ತಾಡಿ ಬರದೆ ಸಮಾಧಾನವಾಗಲಿಲ್ಲ. ಬೆಳಗ್ಗೆ ಬೇಗ ಎದ್ದು ತಂಗಿಯಂದಿರನ್ನು ಕರೆದುಕೊಂಡು ಹೊಳೆಯಾಚೆಯ ಬೈಲಿಗೆ ಹೊರಟ. ಹೊತ್ತು ಮೂಡುವುದಕ್ಕೆ ಮೊದಲೇ ಆ ಬದಿಯ ಒಕ್ಕಲಿನ ಮರಾಟಿಗರ ಅಂಗಳಕ್ಕೆ ಬಂದು ತಲುಪಿದಾಗ ಎದ್ದು ಬಂದ ಮುದುಕ ಕಾಲಿಗೆ ಅಡ್ಡ ಬಿದ್ದ. ಅವನನ್ನು ವಿಚಾರಿಸಿ ಬೈಲನ್ನು ನೋಡುವಾಗ ಹೊಸತಾಗಿ ಮಾಡಿದ ಎರಡು ಗದ್ದೆಗಳಲ್ಲೂ ಹುರುಳಿ, ಹೆಸರು ಬಿತ್ತಿದ್ದು ಕಂಡಿತು. ತಮ್ಮ ರಾಮ ವಿವರಿಸಿದ. ಅಗೆದು ಮಾಡಿದ ಹೊಸ ಗದ್ದೆಯ ಮಣ್ಣಲ್ಲಿ ಏನೂ ಸತ್ವ ಇರಲಿಕ್ಕಿಲ್ಲ. ಹಾಗಾಗಿ ಭತ್ತ ಮಾಡಲು ಅದು ಯೋಗ್ಯವಲ್ಲವೆಂದು ಹುರುಳಿ, ಹೆಸರು ಬಿತ್ತಿದ್ದು. ಎರಡು ವರ್ಷ ಧಾನ್ಯ ಬಂದರೆ ಮೂರನೇ ವರ್ಷಕ್ಕೆ ಒಳ್ಳೆಯ ಬೆಳೆ ಆಗಬಹುದು. ಸಿಕ್ಕಿದಷ್ಟು ಧಾನ್ಯವನ್ನು ಕೊಯ್ಲು ಮಾಡಿ, ಧಾನ್ಯದ ಸಸಿಗಳನ್ನು ಗದ್ದೆಗೆ ಉತ್ತು ಕೊಟ್ಟರೆ ಬೆಳೆಗೆ ಒಳ್ಳೆಯದು. ಅದರ ಮೇಲೆ ಬೇಸಿಗೆಯಲ್ಲಿ ನಾಲ್ಕು ರಾಶಿ ಸುಡುಮಣ್ಣು ಚೆಲ್ಲಿದರೆ, ಉಳುವ ಹೊತ್ತಿಗೆ ನೂರು ಬುಟ್ಟಿ ಗೊಬ್ಬರ ಹಾಕಿ, ಸೊಪ್ಪು ತರಿದು ಹಾಕಿಬಿಟ್ಟರೆ ಬಂಗಾರದಂತಹ ಬೆಳೆ ತೆಗೆಯಬಹುದೆಂದು ರಾಮಣ್ಣ ವಿವರಿಸಿದಾಗ, ಮಂಜಣ ತಮ್ಮನ ಬೆನ್ನು ತಟ್ಟಿದ. ಬಂಜರು ಗದ್ದೆಯ ಬದು ಕೆರೆದು, ಉತ್ತು ಬೆಳೆ ಮಾಡಿದ್ದು ನೋಡಿ ಬರುವ ವರ್ಷ ಹತ್ತೈವತ್ತು ಮುಡಿ ಭತ್ತ ಅಳೆಯಬಹುದೆಂದು ಮಂಜಣ ಊಹಿಸಿದ. ದೂರದ ಊರಲ್ಲಿದ್ದ ತನ್ನ ಅಳಿಯನನ್ನು ಕರೆಸಿದ ಮರಾಟಿಗರ ಮುದುಕ, ಮಗಳನ್ನೂ ಮಗಳ ಗಂಡನನ್ನೂ ಧನಿಗಳ ಕಾಲಿಗೆ ಅಡ್ಡ ಬೀಳಿಸಿದ. ಇಬ್ಬರೂ ಒಳ್ಳೆಯ ದುಡಿಮೆಗಾರರು ಎಂದು ಕಿನ್ಯನ ಹೇಳಿದಾಗ ಮರಾಟಿಗ ಯುವಕ "ನಮ್ಮನ್ನು ಕಾಪಾಡಬೇಕು ಧನಿಗಳೇ" ಎಂದ. "ಇವರು ಯಜಮಾನರು ಅಲ್ಲ, ಮಾರಾಯಾ! ನನ್ನ ಅಣ್ಣ ಮಂಜಣ, ದಂಡಿಗೆ ಹೋದವರು ಈಗ, ಮಾಯಿಪ್ಪಾಡಿ ಸೇನೆಯ ದಂಡನಾಯಕರು" ಕಿನ್ಯನ

ಹೇಳಿದಾಗ ನಾಯಕ ಹೇಳಿದ.

"ನಿಮಗೆ ಅಣ್ಣ ಆಗಿರಬಹುದು. ಆದರೆ ನಮಗೆ ಬಡವರಿಗೆ ಅವರು ಯಜಮಾನರು. ಈ ಊರಿನಲ್ಲಿ ಬೇರೆ ಯಜಮಾನ ಯಾರಿದ್ದಾರೆ ಧನಿಗಳೇ?"

ರಾಮ, ಲಕ್ಷ್ಮಣ, ಕಿನ್ಯನ ಮುಖ ಮುಖ ನೋಡಿಕೊಂಡರು. ಮೂರು ಜನರೂ ಅಣ್ಣನನ್ನು ಎತ್ತಿ ಹಿಡಿದುಕೊಂಡು 'ಯಜಮಾನರು ಯಜಮಾನರು' ಎನ್ನುತ್ತಾ ಕಟ್ಟಹುಣಿಯಲ್ಲಿ ಓಡುತ್ತಾ ಸೊಂಟದವರೆಗೆ ನೀರಿದ್ದ ಹೊಳೆಗೆ ಹಾರಿದರು. ಮಂಜಣ ಮೂವರು ತಮ್ಮಂದಿರ ಕಿವಿ ಹಿಡಿದು ಹೊಳೆಯ ಹೊಯಿಗೆಯ ದಂಡೆಗೆ ಕರೆತಂದು ಬಿದ್ದುಕೊಂಡ.

"ಅಂತಹ ಮಾತನ್ನು ತಪ್ಪಿಯೂ ಹೇಳಬೇಡಿ. ಸುತ್ತಮುತ್ತಲಿನವರ ಜೊತೆ ನಾವು ಹಗೆ ಕಟ್ಟಿಕೊಳ್ಳಬೇಕಾದೀತು. ನಮಗೆ ಈ ಊರಲ್ಲಿ ಇನ್ನೂ ಬಹಳಷ್ಟು ಕೆಲಸಗಳಾಗಬೇಕು. ನಿಮ್ಮ ಮಕ್ಕಳಾಟಿಗೆಯ ಹುಚ್ಚಿನಲ್ಲಿ ಅದು ಹಾಳಾಗಬಾರದು. ನಮ್ಮಲ್ಲಿ ಎಷ್ಟಾದರೂ ಈಗ ಐವತ್ತು ಮುಡಿಯ ಗದ್ದೆಯಾಗಬಹುದು ಅಷ್ಟೆ. ಕಡಿಮೆಯೆಂದರೆ ಇನ್ನೂರು, ಮುನ್ನೂರು ಮುಡಿಯ ಆಸ್ತಿ ಮಾಡಿ ಅಷ್ಟು ಅಕ್ಕಿ ಮುಡಿಗಳನ್ನು ಭಂಡಸಾಲೆಗೆ ಹಾಕುವವರೆಗೆ ನಾವು ಜಾಗ್ರತೆ ಯಲ್ಲಿರಬೇಕು. ಬೀಡು ಕಟ್ಟಿಸಬೇಕು, ಹಟ್ಟಿ ಕಟ್ಟಿಸಬೇಕು, ಹಟ್ಟಿಯಲ್ಲಿ ಹತ್ತಿಪ್ಪತ್ತು ಜೊತೆ ಕೋಣಗಳನ್ನು ಕಟ್ಟಬೇಕು. ಭಂಡಸಾಲೆಯ ಆದಿ ಸೆಟ್ಟಿಯಲ್ಲಿಗೆ ಮುನ್ನೂರು ಮುಡಿ ಅಕ್ಕಿ ಹಾಕಬೇಕು. ಸಾವಿರ, ಎರಡು ಸಾವಿರ ತೆಂಗಿನಕಾಯಿ ಕೊಂಡು ಹೋಗಿ ಹಾಕಬೇಕು. ಅನಂತರ ದೇವರು ಕಣ್ಣು ತೆರೆದು ನಮ್ಮತ್ತ ನೋಡಿದರಾದರೆ ನಿಮ್ಮ ಆಸೆ ನೆರವೇರಬಹುದು. ಅಲ್ಲಿಯ ತನಕ ಜಾಗ್ರತೆಯಾಗಿರಬೇಕು. ಎಲ್ಲ ಬಿಟ್ಟು ನಮ್ಮ ಮಾವನ ಕಿವಿಗೇನಾದರೂ ಈ ಮಾತು ಬಿದ್ದರೆ ಅವರು ಕೂಡಾ ಬೆಚ್ಚಿ ಬೀಳಬಹುದು."

ಮಂಜಣ ತಮ್ಮಂದಿರ ಬೆನ್ನು ತಟ್ಟಿ ಆಕಾಶದಲ್ಲಿರುವ ನಕ್ಷತ್ರಗಳನ್ನು ಕೊಯ್ಯುವ ತನ್ನ ಕನಸುಗಳನ್ನು ಹೇಳಿದಾಗ, ತಮ್ಮಂದಿರಿಗೆ ತಾವು ಇನ್ನೂ ಈ ಆಲದ ಮರದಡಿಯಲ್ಲಿರುವ ತುಂಬೆ ಗಿಡಗಳು ಅಂತ ಅನಿಸಿತು.

ತಮ್ಮಂದಿರು ಅಣ್ಣನೊಟ್ಟಿಗೆ ಮಿತ್ತಬೈಲಿನ ತೋಟದ ಕಡೆಗೆ ನಡೆದರು. ಮಿತ್ತಬೈಲಿನ ಭಟ್ಟರ ನೂರು ಅಡಿಕೆ ಸಸಿಗಳ ಸುತ್ತ ತಾವೂ ಇಟ್ಟ ಐನೂರು ಅಡಿಕೆ ಸಸಿಗಳಲ್ಲಿ ಹಿಂಗಾರ ಒಡೆಯುತ್ತಿತ್ತು. ಅದರ ಬದಿಯಲ್ಲಿ ಅವರು ಇನ್ನೂರು ಅಡಿಕೆ, ಐವತ್ತು ತೆಂಗಿನ ಸಸಿ ನೆಡಲು ಗುಡ್ಡೆ ಅಗೆದು ಹೊಂಡ ತೆಗೆದು ಹೊಂಡಕ್ಕೆ ಸುಡುಮಣ್ಣು ಹಾಕಿ ಮೊದಲ ಮಳೆ ಬಿದ್ದ ಕೂಡಲೇ ಸಸಿಗಳನ್ನು ನೆಡಲು ಸಿದ್ಧತೆ ನಡೆಸಿದ್ದರು.

ಮನೆಯ ಅಂಗಳಕ್ಕೆ ಬಂದಾಗ, ಇಪ್ಪತ್ತೈದು ಮುಡಿ ಅಕ್ಕಿಯೊಂದಿಗೆ ಮಂಜೇಶ್ವರ ಪೇಟೆಗೆ ಹೋಗಲು ಹತ್ತು ಮಂದಿ ತರುಣರು ತಯಾರಿ ನಡೆಸಿದ್ದರು. ತಾಯಿ ಗಂಜಿ ಮಾಡಿ ಆರಿಕ್ಕಾಡಿಯ ಒಣ ಹೊಟ್ಟು ಸಿಗಡಿಯ ಚಟ್ನಿ ಮಾಡಿ ಮಕ್ಕಳನ್ನು ಕಾಯುತ್ತಿದ್ದರು.

ಇಪ್ಪತ್ತೈದು ಮುಡಿ ಅಕ್ಕಿಯನ್ನು ಹೊರಿಸಿಕೊಂಡು ಪದವಿಗೆ ತರುವಾಗ, ಮಿತ್ತಬೈಲಿನ



ಅಕ್ಕಿ ಮುಡಿಗಳು ಸಾಲು ಸಾಲಾಗಿ ಹೋಗುತ್ತಿರುವುದನ್ನು, ಇಡೀ ಬೈಲು ಬೆರಗುಗಣ್ಣಿನಿಂದ ನೋಡುತ್ತಿತ್ತು. ಪದವಿಗೆ ಬಂದು ಅಕ್ಕಿ ಮುಡಿಗಳನ್ನು ನಾಲ್ಕು ಗಾಡಿಗಳಲ್ಲಿ ಹಾಕಿಕೊಂಡು ಮಂಜೇಶ್ವರಕ್ಕೆ ತಲುಪುವಾಗ, ಮಿತ್ತಬೈಲಿನ ಅಕ್ಕಿ ಹೊತ್ತುಕೊಂಡು ಬರುವ ಯುವಕರನ್ನು ನೋಡಲೆಂದೇ ಪೇಟೆ ತುಂಬಾ ಗಂಡಸರು – ಹೆಂಗಸರು ಸೇರಿದ್ದರು.

ಆದಿ ಸೆಟ್ಟಿ ಬಂಗ್ರಮಂಜೇಶ್ವರದಲ್ಲಿ ಭಂಡಸಾಲೆ ಮಾಡಿ ಕೆಲವು ವರ್ಷಗಳಾದ್ದವು. ಆದರೆ ಅವರಿಗೆ ಮಂಜಣಾಳ್ವರಂತಹ ಯುವಕ ಈ ತನಕ ಸಿಕ್ಕಿರಲಿಲ್ಲ. ಚೆನ್ನಾಗಿ ಒಣಗಿಸಿ ಕುಟ್ಟಿ ತಂದ ಸುಂದರವಾದ ಮುತ್ತಿನಂತಹ ಅಕ್ಕಿ. ಹೇಳಿದ ಸಮಯಕ್ಕೆ ಹೇಳಿದಷ್ಟು ಅಕ್ಕಿ ತಂದುಕೊಡುವ ಮಣ್ಣಿನ ಮಗನ ನಿಯತ್ತಿನ ವ್ಯಾಪಾರ ಆದಿ ಸೆಟ್ಟಿಗೆ ಹಿಡಿಸಿತು. ಸುತ್ತಮುತ್ತಲ ಯುವಕರಂತೆ ಗತ್ತು, ಅಹಂಕಾರವಿಲ್ಲದೆ, ಅಕ್ಕಿ ಹಾಕಿ ಹೋಗುವ ಯುವಕನ ಬಗ್ಗೆ ಆದಿ ಸೆಟ್ಟಿಗೆ ಎಲ್ಲರಿಗಿಂತ ಹೆಚ್ಚಿನ ಗೌರವ. ಅದಿ ಸೆಟ್ಟಿಯಲ್ಲಿಗೆ ಮಂಜಣಾಳ್ವರನ್ನು ಕಳುಹಿಸಿ ಕೊಟ್ಟವರು ಬಡಾಜೆಯ ತಂತ್ರಿಗಳು. ಆದಿ ಸೆಟ್ಟಿಗೆ ತಂತ್ರಿಗಳು ಗುಟ್ಟಿನಲ್ಲಿ ಹೇಳಿದ್ದರು,

''ಮಂಜಣಾಳ್ವ ಒಂದು ದಿನ ಈ ಮಾಗಣೆಯನ್ನು ಆಳಲಿಕ್ಕೆಂದೇ ಹುಟ್ಟಿದವನು''.

ಆದಿ ಸೆಟ್ಟಿಗೆ ಬಡಾಜೆ ತಂತ್ರಿಗಳು ಹೇಳಿದ ಮಾತೆಂದರೆ ವೇದವಾಕ್ಯ. ಎಷ್ಟಾದರೂ ಅವರು ಮಾಯಿಪ್ಪಾಡಿ ಅರಸರ ಪಟ್ಟದ ಪುರೋಹಿತರು. ಅವರು ಆಡಿದ ಯಾವ ಮಾತೂ ಈತನಕ ಸುಳ್ಳಾಗಲಿಲ್ಲ.

ಸೆಟ್ಟಿಯ ಭಂಡಸಾಲೆಗೆ ಮಂಜಣಾಳ್ವ ಬಂದರೆ ಬೇರೆಯವರಿಗೆ ಸೆಟ್ಟಿಯಲ್ಲಿ ಸಮಯವಿಲ್ಲ. ಈ ವರ್ಷ ಎಣೆಲಿನ ಇಪ್ಪತ್ತೈದು ಮುಡಿ ಅಕ್ಕಿ ಭಂಡಸಾಲೆಗೆ ಹಾಕುವಾಗಲೇ, ವಿಷುವಿಗೆ ಮೊದಲು ಸುಗ್ಗಿಯ ಐವತ್ತು ಮುಡಿ ಅಕ್ಕಿ ಹಾಕುತ್ತೇನೆಂದು ಹೇಳಿದ ಮಾತಿನಂತೆ ಮಂಜಣಾಳ್ವ ತಂದು ಹಾಕಿದ್ದ. ಆದಿ ಸೆಟ್ಟಿಗೆ ಮಂಜಣಾಳ್ವ ದಂಡಿನ ಐನೂರಾಳಿನ ದಂಡನಾಯಕ ಎಂಬ ಸುದ್ದಿಯನ್ನು ಕುಂಬಳೆಯಿಂದ ಬಂದವರು ಹೇಳಿದ್ದರು. ಆದಿ ಸೆಟ್ಟಿ ಮಂಜಣಾಳ್ವನನ್ನು ಚಾವಡಿಯಲ್ಲಿ ಹಾಕಿದ್ದ ಗಲ್ಲದ ಗಾದಿಯಲ್ಲಿ ಕುಳ್ಳಿರಿಸಿದ. ಮಂಜಣಾಳ್ವನ ಮನೆಗೆ ಬೇಕಾದ ಸಾಮಾನುಗಳನ್ನು ಅಳೆದು ತಮ್ಮಂದಿರಲ್ಲಿ ಕಳುಹಿಸುವ ವ್ಯವಸ್ಥೆ ಮಾಡಿ ಅವನನ್ನು ಮನೆಗೆ ಕರೆದೊಯ್ದ. ಸೆಟ್ಟಿಯ ಮನೆಯಲ್ಲಿ ಎಲ್ಲರಿಗೂ ಈ ಹೊಸ ದಂಡನಾಯಕನನ್ನು ನೋಡುವ ಆಸೆ. ಪಾಯಸದ ಊಟ ತಯಾರಾಗಿತ್ತು. ಸೆಟ್ಟಿಯ ಒತ್ತಾಯಕ್ಕೆ ಊಟಕ್ಕೆ ನಿಂತ ಮಂಜಣಾಳ್ವ, ತಾನು ಮನೆ ಕಟ್ಟಿಸಲು ಮಾಡಿದ ಆಲೋಚನೆ ಯನ್ನು ಹೇಳಿದ. ಮನೆಯ ಕೆಲಸಕ್ಕೆ ಮರದ ಆಚಾರಿ, ಮಣ್ಣಿನ ಗೋಡೆ ಇಡುವ, ನೆಲದ ಸಾರಣೆಯ ಕೆಲಸದವರನ್ನು ಒದಗಿಸಿಕೊಡಲು ಕೇಳಿಕೊಂಡ. ಬೋದಿಗೆ ಕಂಬಗಳ ಕೆಲಸಕ್ಕೆ ಕಾರ್ಕಳದ ದುಗ್ಗಣಾಚಾರಿಯನ್ನೂ, ಮಣ್ಣಿನ ಕೆಲಸಕ್ಕೆ ನಂದಾವರದ ಅಂತು ಮೂಲ್ಯನನ್ನೂ, ಗೂಟ ಹಾಕಿ ಆಯ ಮಾಡಿ ಮಾಡು ಮಾಡಿಕೊಡುವ ಕೆಲಸಕ್ಕೆ ಮಣೇಲಿನ ಕೊಗ್ಗಾಚಾರಿಯನ್ನೂ ಕಳುಹಿಸಿಕೊಡುವುದಾಗಿ ಸೆಟ್ಟಿ ಒಪ್ಪಿಕೊಂಡ.

ಸೆಟ್ಟಿಯೂ ಮಂಜಣಾಳ್ವರಲ್ಲಿ ತನ್ನ ಒಂದು ಬೇಡಿಕೆಯನ್ನು ಹೇಳಿಕೊಂಡ. ಅವನಿಗೆ

ಈ ತನಕ ಅರಬಸ್ತಾನದವರಿಗೆ ಬೇಕಾದಷ್ಟು ಮಸ್ಕತ್ ಅಕ್ಕಿ ಸಿಕ್ಕಿರಲಿಲ್ಲ. ಪೇಟೆಗೆ ಬರುತ್ತಿದ್ದ ಸ್ವಲ್ಪ ಅಕ್ಕಿಯನ್ನು ರಂಗ ಕಮ್ತಿ ಹೇಗಾದರೂ ಮಾಡಿ ಒಳಗೆ ಹಾಕಿಕೊಳ್ಳುತ್ತಿದ್ದ. ಮಸ್ಕತ್ ಅಕ್ಕಿಯನ್ನು ಅರಬಸ್ತಾನದವರು ಎಷ್ಟು ಸಿಕ್ಕಿದರೂ ನಾಲ್ಕು ಕಾಸು ಹೆಚ್ಚಿಗೆ ಕೊಟ್ಟು ಖರೀದಿಸುತ್ತಿದ್ದರು. ಹಾಗಾಗಿ ಮಂಜೇಶ್ವರದಲ್ಲಿ ಮಸ್ಕತ್ ಅಕ್ಕಿ ಮಾರಾಟಗಾರರಿಗೆ ಹೆಚ್ಚಿನ ವ್ಯಾಪಾರ. ಮಂಜಣ ಇನ್ನು ಎರಡು ವರ್ಷಗಳ ಒಳಗೆ ಸೆಟ್ಟಿಗೆ ಬೇಕಾದಷ್ಟು ಮಸ್ಕತ್ ಅಕ್ಕಿ ಬೆಳೆಸಿಕೊಡಲು ಒಪ್ಪಿಕೊಂಡ.

ಸೆಟ್ಟಿ, ಮಂಜಣನನ್ನು ಬಂಗ್ರಮಂಜೇಶ್ವರದ ಬಸದಿಯವರೆಗೆ ಕರೆದುಕೊಂಡು ಹೋಗಿ, ಬಸದಿಯಲ್ಲೊಂದು ಪೂಜೆ ಮಾಡಿಸಿ ಅವನ ಹೆಸರಿನಲ್ಲೊಂದು ದೀಪ ಹೊತ್ತಿಸಿ ಇಟ್ಟ. ಮಂಜಣ ಮಿತ್ತಬೈಲು ಮನೆಯ ಹೆಸರಿನಲ್ಲಿ ನಂದಾದೀಪದ ಸೇವೆ ಇರಿಸಿ, ಅದಕ್ಕೆ ಬೇಕಾದಷ್ಟು ತೆಂಗಿನ ಎಣ್ಣೆ ಮಿತ್ತಬೈಲಿನಿಂದ ಕಳುಹಿಸಿಕೊಡುತ್ತೇನೆಂದು ಮಾತುಕೊಟ್ಟು, ಬಸದಿಯ ದೇವರಿಗೆ ಅಡ್ಡಬಿದ್ದು ಊರಿಗೆ ಹೊರಟ. ಮಂಜಣಾಳ್ವ ದಂಡನಾಯಕರು ಬಂಗ್ರ ಮಂಜೇಶ್ವರದ ಬಸದಿಗೆ ನಂದಾದೀಪ ಕೊಟ್ಟ ಸುದ್ದಿ ಜೈನರ ಕೇರಿಯಲ್ಲಿ ಕಾಳ್ಗಿಚ್ಚಿನಂತೆ ಹರಡಿತು. ಅಲ್ಲಿಂದ ಹೊರಟ ಮಂಜಣ ಬಡಾಜೆ ತಂತ್ರಿಯವರ ಮನೆಗೆ ಹೋಗಿ ಅನ್ನಪೂರ್ಣೇಶ್ವರಿಗೆ ಅಡ್ಡಬಿದ್ದು, ತಂತ್ರಿಯವರ ಹಾಗೂ ಅವರ ಪತ್ನಿಯ ಕಾಲಿಗೆ ಬಿದ್ದು ಆಶೀರ್ವಾದ ಪಡೆದು ಮಿತ್ತಬೈಲಿಗೆ ಹೊರಟ.

ಬಡಾಜೆಯ ತಂತ್ರಿಗಳ ಮನೆದೇವರೇ, ಮಿತ್ತಬೈಲಿನ ಮಂಜಣಾಳ್ವರ ಮನೆದೇವರೂ ಆದರು. ಅಲ್ಲಿಯೂ ನಂದಾದೀಪ ಕೊಟ್ಟು ವರ್ಷವಿಡೀ ದೀಪ ಇಡಲು ಬೇಕಾದ ತೆಂಗಿನೆಣ್ಣೆ, ತಂತ್ರಿಗಳ ನಿತ್ಯ ಪೂಜೆಗೆ ಬೇಕಾದ ಅಕ್ಕಿ, ಕಾಯಿ ಮಿತ್ತಬೈಲಿನಿಂದ ಕಳುಹಿಸುತ್ತೇನೆಂದು ಹರಕೆ ಹೇಳಿಕೊಂಡ. ತಂತ್ರಿಗಳು ತನ್ನ ಮಾತು ಒಂದೊಂದೇ ನಡೆಯುತ್ತಾ ಬರುತ್ತಿರುವುದನ್ನು ನೋಡಿ ಅನ್ನಪೂರ್ಣೇಶ್ವರಿಗೆ ವಂದನೆ ಸಲ್ಲಿಸಿದರು. ತಂತ್ರಿಗಳ ಪತ್ನಿ, ದೇವರ ಪೂಜೆಯ ಪಂಚಕಜ್ಜಾಯ, ನೈವೇದ್ಯದ ತಿನಿಸುಗಳನ್ನು ಕಟ್ಟಿ ಮಂಜಣನಲ್ಲಿ ಮಿತ್ತಬೈಲಿಗೆ ಕಳುಹಿಸಿದರು.

ಮನೆಗೆ ಬಂದಾಗ ಮಜಲೋಡಿಯಿಂದ ಮಾವನೂ ಬಂದಿದ್ದರು. ಮೇಲಿನ ಪದವಿನಲ್ಲಿ ಗಾಡಿ ನಿಲ್ಲಿಸಿ ಬಂದ ಸುಬ್ಬಾಳ್ವರು, ತಂಗಿ ಹಾಗೂ ಸೊಸೆಯಂದಿರನ್ನು ವಿಷುವಿಗೆ ಕರೆದುಕೊಂಡು ಹೋಗಿ ನಿಶ್ಚಿತಾರ್ಥ ಮುಗಿಸಿ ಹಿಂದೆ ಕಳುಹಿಸುತ್ತೇನೆಂದು ಹೇಳಿದಾಗ ಎಲ್ಲರೂ ಸಂತೋಷದಿಂದ ಒಪ್ಪಿದರು.

ಐದಾರು ವರ್ಷಗಳಲ್ಲಿ ಇದು ಮೊದಲ 'ವಿಷುಕಣಿ' ಅವರು ಮಜಲೋಡಿಯಲ್ಲಿ ನೋಡಲು ಹೊರಟಿರುವುದು. ಮರುದಿನ ಬೆಳಗ್ಗೆ ಎದ್ದ ಯಜಮಾನರು ಬೈಲು ತಿರುಗಿ ಬಂದು ತಂಗಿ, ಸೊಸೆಯಂದಿರನ್ನು ಕರೆದೊಯ್ದರು. ವಿಷು ಹಬ್ಬ ಮಜಲೋಡಿಯಲ್ಲಿ ಬಹಳ ದೊಡ್ಡ ಹಬ್ಬ. ಚಿಕ್ಕವರು, ದೊಡ್ಡವರಿಗೆಲ್ಲ ಅಂದು ಗುತ್ತಿನ ಯಜಮಾನ ಹೊಸ ಬಟ್ಟೆ, ಖರ್ಚಿಗೆ ನಾಲ್ಕು ಕಾಸು ಕೈಯಲ್ಲಿ ಕೊಡುವ ದಿನ. ಇಷ್ಟು ವರ್ಷ ವಿಷು ಹಬ್ಬವನ್ನು



ಮನೆಯಲ್ಲಿಯೇ ಸಣ್ಣ ಮಟ್ಟದಲ್ಲಿ ಮಾಡುತ್ತಿದ್ದ ಸಂಕಮ್ಮಕ್ಕನಿಗೆ ಮಜಲೋಡಿಗೆ ವಿಷು ಹಬ್ಬಕ್ಕೆ ಹೋಗುವ ಸಂಭ್ರಮ. ಯಜಮಾನರು ಎಲ್ಲ ಮಕ್ಕಳಿಗೂ, ತಂಗಿಗೂ ವಿಷುವಿಗೊಂದು, ನಿಶ್ಚಿತಾರ್ಥಕ್ಕೊಂದು ಹೀಗೆ, ಬೇರೆ ಬೇರೆ ಸೀರೆ, ಶಲ್ಯ, ಧೋತಿ ತಂದುದನ್ನು ಸಂಕಮ್ಮಕ್ಕ ಮಗನಿಗೆ ತೋರಿಸಿದರು. ಕಂಜೂಸ್ ಯಜಮಾನರ ಧಾರಾಳತನವನ್ನು ನೋಡಿ ಎಲ್ಲರೂ ಮುಗುಳು ನಕ್ಕರಾದರೂ, ತಾಯಿಯ ಮೇಲೆ ಮಾವನಿಗಿರುವ ಪ್ರೀತಿ ನೋಡಿ ಸಂತೋಷವಾಯಿತು. ತಾಯಿ-ತಂಗಿಯರನ್ನು ಗಾಡಿಯಲ್ಲಿ ಕುಳ್ಳಿರಿಸಿ ತಾವೆಲ್ಲ ವಿಷುವಿನಂದು ಬೆಳಗ್ಗೆ ಕಣಿ ಇಡುವುದಕ್ಕೆ ಮೊದಲು ಬರುತ್ತೇವೆಂದು ಮಾವನಿಗೆ ಮಾತು ಕೊಟ್ಟ.

ರಾತ್ರಿ ಮಾತಿಗೆ ಕುಳಿತಿದ್ದಾಗ ಸುಬ್ಬಾಳ್ವರು ಮಿತ್ತಬೈಲಿನ ಅಂಗಳಕ್ಕೆ ಗಾಡಿ ಬರುವ ಹಾಗೆ ರಸ್ತೆ ಮಾಡಬೇಕೆಂದು ಹೇಳಿ ಅದರ ಅಗತ್ಯವನ್ನು ವಿವರಿಸಿದ್ದರು. ಮನೆ ಕಟ್ಟಿಸುವ ಸಮಯಕ್ಕೆ ಸಾಮಾನು ಸಾಗಿಸುವುದಕ್ಕಾಗಿ ಗಾಡಿ ಬರಲು ರಸ್ತೆ ಎಷ್ಟು ಅಗತ್ಯ ಎಂದು ಹೇಳುವಾಗ ಮಂಜಣನಿಗೂ ಹೌದೆಂದು ತೋರಿತು. ಮರುದಿನ ಬೆಳಗ್ಗೆ ತಾಯಿ ಹೋದ ಮೇಲೆ ಅಣ್ಣ, ತಮ್ಮಂದಿರು ಗುಡ್ಡ ತಿರುಗಿ ಗಾಡಿ ಬರಲು ರಸ್ತೆ ಮಾಡುವ ಕೆಲಸದ ಜವಾಬ್ದಾರಿಯನ್ನು ಕಿನ್ಯನನಿಗೆ ವಹಿಸಿಕೊಟ್ಟರು. ಮಂಜಣ ರಾಮಣ್ಣನಲ್ಲಿ ಆದಿಸೆಟ್ಟಿ ಹೇಳಿದ ಮಸ್ಕತ್ ಅಕ್ಕಿಯ ವಿಷಯ ತಿಳಿಸಿದ. ರಾಮಣ್ಣ ಮುಂದಿನ ಬೆಳೆಯನಂತರ ಮಸ್ಕತ್ ಅಕ್ಕಿ ಬೆಳೆಸುವ ಜವಾಬ್ದಾರಿ ವಹಿಸಿಕೊಂಡ. ಮಜಲೋಡಿಯಿಂದ ಬೀಜ ತರಿಸಲು ಒಪ್ಪಿ ರಾಮಣ್ಣ ಉಳ್ಳಾಲಕ್ಕೆ ಹೋಗಿ ಬ್ಯಾರಿಯಲ್ಲಿ ಮಸ್ಕತ್ ಬೀಜ ಸಂಗ್ರಹಿಸಿ ಕೊಡಲು ಹೇಳುವುದೆಂದು ತೀರ್ಮಾನಿಸಿದರು. ಮನೆ ಕಟ್ಟುವ, ಕಟ್ಟಿಸುವ ಜವಾಬ್ದಾರಿಯನ್ನು ಕಿನ್ಯನನಿಗೂ, ಲಕ್ಷ್ಮಣನಿಗೂ, ಸಾಗುವಳಿಯ ಜವಾಬ್ದಾರಿಯನ್ನು ರಾಮಣ್ಣನಿಗೂ ವಹಿಸಿಕೊಟ್ಟು, ಮರುದಿನ ಬೆಳಗ್ಗೆ ಆದಿ ಸೆಟ್ಟಿ ಕಳುಹಿಸಿಕೊಡುವ ಆಚಾರಿ, ಮೇಸ್ತ್ರಿಯವರನ್ನು ಅಣ್ಣ-ತಮ್ಮಂದಿರು ಕಾಯತೊಡಗಿದರು.

ತಾಯಿ-ತಂಗಿಯರನ್ನು ಮಜಲೋಡಿಗೆ ಕಳುಹಿಸಿ, ಕಿನ್ಯನನೊಟ್ಟಿಗೆ ಮಂಜೇಶ್ವರಕ್ಕೆ ನಡೆಯುತ್ತಾ ಬೋಳಂಗಳದ ಪದವಿನಿಂದ ಹಾದು ಹೋಗುವಾಗ, ಕೆಳಗೆ ಬೈಲಿನಲ್ಲಿ ಕಾಣುತ್ತಿದ್ದ ಬಾರಬೈಲಿನ ಮನೆ, ಭೂಮಿ ನೋಡುವಾಗ ಬೀರಣ್ಣ ಬಂಟನ ನೆನಪಾಯಿತು.

ಮಂಜಣನನ್ನು ಮಾಯಿಪ್ಪಾಡಿ ಅರಸರು ಕರೆಸಿಕೊಂಡು ಸೇನೆಗೆ ಸೇರಿಸುವಾಗ ಬೀರಣ್ಣನೂ ದಂಡಿಗೆ ಸೇರಲು ಪ್ರಯತ್ನಿಸಿದ್ದ. ಸುಬ್ರಾಯ ಶಾನುಭೋಗರು ಅವನು ಬೇಡ ಎಂದು ಹೇಳಿದಾಗ ಅವನಿಗೆ ಹಟ ಬಂತು. ಆ ಹಟದಲ್ಲಿ ಅವನು ಸುಳ್ಯಕ್ಕೆ ಹೋಗಿ, ಅಲ್ಲಿಂದ ವಿರಾಜಪೇಟೆಗೆ ಹೋಗಿ ಕಲ್ಯಾಣಪ್ಪನನ್ನು ನೋಡಿ ಅವನ ದಂಡಿಗೆ ಸೇರಿದ. ಕಲ್ಯಾಣಪ್ಪ ಕಂಪನಿ ಸರಕಾರದ ವಿರುದ್ಧ ದಂಗೆ ಏಳಲು ತಯಾರಿ ಮಾಡುತ್ತಿದ್ದ. ಮಂಜಣನಿಗೆ ಬೀರಣ್ಣನ ಸುದ್ದಿ ಕೇಳಿ ಬೇಸರವಾಯಿತು. ಒಂದು ಕಾಲದಲ್ಲಿ ತನ್ನ ತಂಗಿಯರಲ್ಲಿ ಒಬ್ಬಳನ್ನು ಬೀರಣ್ಣನಿಗೆ ಕೊಟ್ಟು ಮದುವೆ ಮಾಡಬೇಕು ಎಂದುಕೊಂಡಿದ್ದ ಮಂಜಣ ಮನಸ್ಸಿನಲ್ಲೇ ಅಂದುಕೊಂಡ 'ಆಗುವುದೆಲ್ಲ ಒಳ್ಳೆಯದಕ್ಕೆ'. ತನ್ನ ತಂಗಿಯಂದಿರ ಯೋಗ

ಚೆನ್ನಾಗಿದೆ, ಕಾಂತಪ್ಪನಂತಿರುವ ಒಳ್ಳೆಯ ಹುಡುಗನಿಗೆ ಮದುವೆ ಮಾಡಿಕೊಡುವುದು ಕುಟುಂಬದ ಭಾಗ್ಯ, ಹೆಣ್ಣಿನ ಪುಣ್ಯ.

ಮಂಜಣ ಮಂಜೇಶ್ವರಕ್ಕೆ ತಲುಪುವಾಗ ಆದಿ ಸೆಟ್ಟಿ ಆಚಾರಿಯನ್ನೂ, ಮೇಸ್ತ್ರಿಯನ್ನೂ ಕರೆಸಿ ಮಾತನಾಡಿಸಿದ್ದ. ಮಂಜಣ ಮಿತ್ತಬೈಲಿಗೆ ಆಚಾರಿಯನ್ನೂ, ಮೇಸ್ತ್ರಿಯನ್ನೂ ಕರೆದುಕೊಂಡು ಬಂದಾಗ ಅವರಿಗೆ ಮಿತ್ತಬೈಲನ್ನು ನೋಡಿ ಆಶ್ಚರ್ಯವಾಯಿತು. ಇಬ್ಬರೂ ಮಿತ್ತಬೈಲಿಗೆ ಚಿಕ್ಕಂದಿನಲ್ಲಿ ಭಟ್ರು ಮನೆ ಕಟ್ಟಿಸುವಾಗ ಕೆಲಸಕ್ಕೆ ಬಂದಿದ್ದರಂತೆ. ಆಗ ನೋಡಿದ ಎರಡು ಮುಡಿ ಅಕ್ಕಿಯ ಬೇಸಾಯ ಎಲ್ಲಿ? ಈ ಇಪ್ಪತ್ತು ಮುಡಿ ಬೇಸಾಯ ಎಲ್ಲಿ? ಆಚಾರಿ, ಮಿತ್ತಬೈಲಿನ ಭೂಮಿ ಇದುವೇನಾ ಎಂದು ಮಂಜಣನಲ್ಲಿ ಕೇಳಿದ. ಮಂಜಣ ಇದುವೇ ಎಂದಾಗ ಮೇಸ್ತ್ರಿ ಹೇಳಿದ. ''ಹಿಂದೆ ನಾವು ಇಲ್ಲಿಗೆ ಕೆಲಸಕ್ಕೆ ಬಂದಿದ್ದಾಗ ಒಂದು ಚಿಕ್ಕ ಕೊಂಪೆ ಇದ್ದ ನೆನಪು. ಈಗ ಈ ಬೈಲಿನ ಸ್ವರೂಪವೇ ಬದಲಾಗಿದೆ'' ಎಂದಾಗ ಮಂಜಣ, ಐದು ವರ್ಷಗಳ ಹಿಂದೆ ತಾವು ಈ ಭೂಮಿಯನ್ನು ಖರೀದಿಸಿ ಹೇಗೆ ಅಭಿವೃದ್ಧಿಗೊಳಿಸಿದೆವು ಎಂಬುದನ್ನು ವಿವರಿಸಿದ. ಆಚಾರಿಗೆ ಆದಿ ಸೆಟ್ಟಿ ಹೇಳಿದ ಮಾತು ನೆನಪಾಯಿತು.

''ಮಂಜಣಾಳ್ವರು ಒಂದು ದಿನ ಈ ಮಾಗಣೆಯನ್ನು ಆಳಲಿಕ್ಕೆಂದೇ ಹುಟ್ಟಿದವರು. ಅವರಿಗೆ ನಿನ್ನ ಚತುರತೆ, ಜಾಣತನಗಳನ್ನೆಲ್ಲಾ ತೋರಿಸಿ ಆ ಮಾಗಣೆಗೆ ಹೆಸರು ಬರುವಂತಹ ಮನೆ ಕಟ್ಟಿಕೊಡಬೇಕು. ಕುಂಬಳೆಯ ಅರಸರ ದಂಡನಾಯಕರಿಗೆ ತಕ್ಕುದಾದ ಮನೆ ಕಟ್ಟಿಕೊಡು. ಹಣಕಾಸಿನ ಬಗ್ಗೆ ಹಿಂದೆ ಮುಂದೆ ನೋಡಬೇಡ''.

ಆಚಾರಿಗೂ ಮೇಸ್ತ್ರಿಗೂ ಮನೆಯ ಜಾಗ ತೋರಿಸಿ 'ಪತ್ತನಾಜೆ'ಗೆ ಮೊದಲು ಭೂಮಿಪೂಜೆ ಮಾಡಿ ನವರಾತ್ರಿಯಲ್ಲಿ ಕೆಲಸ ಪ್ರಾರಂಭಿಸುವುದೆಂದು ತೀರ್ಮಾನಿಸಿದರು. ಇಬ್ಬರಿಗೂ ಅಕ್ಕಿ, ಕಾಯಿಯ ಹೊರೆ ಕೊಟ್ಟು ಕಳುಹಿಸಿದರು.

ಆಚಾರಿಯವರನ್ನು ಕಳುಹಿಸಿ ಅಣ್ಣ ತಮ್ಮ ಮಜಲೋಡಿಗೆ ಹೊರಟರು. ನಾಲ್ಕು ಕೆಲಸದವರು ತೆಂಗಿನ ಗರಿಯ ಬುಟ್ಟಿಗಳಲ್ಲಿ ನಾಲ್ಕು ನಾಲ್ಕು ಅಂಕದ ಹುಂಜಗಳನ್ನು ತುಂಬಿಸಿಕೊಂಡು ಮರಾಟಿಗರಿಗೆ ಮನೆ ಕಾಯಲು ಹೇಳಿ ಗುತ್ತಿಗೆ ಹೊರಟರು. ಮಜಲೋಡಿಗೆ ಬುಟ್ಟಿ ಬಂದು ಮುಟ್ಟುವಾಗ ಕತ್ತಲೆಯಾಗಿತ್ತು. ಆ ಕತ್ತಲೆಯಲ್ಲೂ ಚಿಕ್ಕ ಮಾವ ಕೋಳಿಗಳನ್ನು ಬುಟ್ಟಿಯಿಂದ ಹೊರಗೆ ತೆಗೆದು ಅದರ ಬಾಲ ಸವರಿದಾಗ ಮಜಲೋಡಿಯ ಹತ್ತು ಮುಡಿ ಭತ್ತ ಒಣಗುವ ಅಂಗಳ ಇಡೀ ಕಟ್ಟಿಹಾಕಿದ್ದ ಕೋಳಿಗಳು ಕೂಗಲು ಆರಂಭಿಸಿದವು. ಅಂಗಳದಲ್ಲಿ ಅಂದು ಕೋಳಿಗಳದ್ದೂ, ನೆಂಟರದ್ದೂ ಗೌಜೇ ಗೌಜು. ವಿಷು ಹಬ್ಬಕ್ಕೆ, ಅದರ ಮರುದಿನದ ನಿಶ್ಚಿತಾರ್ಥಕ್ಕೆ ಒಬ್ಬೊಬ್ಬರೇ ಬಂದು ಸೇರ ತೊಡಗಿದರು.

ಇಡೀ ಅಂಗಳಕ್ಕೆ ಸೋಗೆಯ ಚಪ್ಪರ. ಕಂಬ ಕಂಬಗಳಿಗೆ ಮಾವಿನ ಎಲೆಯ ತೋರಣ. ಕೆಲವು ಕಂಬಗಳಿಗೆ ಎಳನೀರಿನ ಗೊನೆ, ಮತ್ತೆ ಕೆಲವಕ್ಕೆ ಅಡಿಕೆಯ ಗೊನೆ, ಬಾಳೆ



ಗೊನೆ, ಬಾಳೆಗಿಡ ಕಟ್ಟಿ ಸಿಂಗರಿಸಿದ್ದರು. ಒಟ್ಟಾರೆ ಎರಡು ದಿನಗಳ ಸಡಗರಕ್ಕೆ ಇಡೀ ಬೈಲೇ ತಯಾರಾಗಿತ್ತು.

ವಿಷುವಿನಂದು ಬೆಳಗ್ಗೆದ್ದ ಮಕ್ಕಳು, ಮರಿಗಳು, ಗಂಡಸರು, ಹೆಂಗಸರು, ನೆಂಟರು ಹೊಳೆ ಕೆರೆಗಳಿಗೆ ಹೋಗಿ ಸ್ನಾನ ಮಾಡಿ ಹೊಸ ಬಟ್ಟೆ ಉಟ್ಟುಕೊಂಡರು. ಹೆಂಗಸರು ವಿಷುವಿನ ಅಡುಗೆಯ ತಯಾರಿಯಲ್ಲಿದ್ದರು.

ಒಂದು ಕಡೆಯಲ್ಲಿ ವಿಷುವಿನ ಪಾಯಸ, ಮತ್ತೊಂದು ಕಡೆ ಗೇರುಬೀಜ, ಎಳೆ ತೊಂಡೆಯ ಸಾರು, ಕಡಲೆ, ಬಲ್ಯಾರ್ ಮೀನಿನ ಪಲ್ಯ, ಸೌತೆಕಾಯಿಯ ಪಚ್ಚಡಿ, ಮಾವಿನ ಹಣ್ಣಿನ ಗೊಜ್ಜು, ಸೌತೆಯ ಸಾಂಬಾರು, ಅಲಸಂಡೆ, ಹೀರೆಕಾಯಿಯ ಉಪ್ಪುಕರಿ, ಬೆಂಡೆ, ಬದನೆಯ ಮೆಣಸಿನ ಗಸಿ ಹೀಗೆ ಹತ್ತು ಹನ್ನೆರಡು ಬಗೆಯ ತಯಾರಿ ನಡೆಯುತ್ತಿತ್ತು. ಮಕ್ಕಳು, ನೆಂಟರು ಎಲ್ಲ ಬೇಗ ಬೇಗ ಸ್ನಾನ ಮುಗಿಸಿ ಚಾವಡಿಯ ಹೊರಗೆ ಹಾಕಿದ್ದ ಚಪ್ಪರದಲ್ಲಿ ಸೇರಿದರು. ಯಜಮಾನರು ಗದ್ದೆಯಿಂದ ಬಂದು ಗುಂಡದ ಮಂಚದಲ್ಲಿದ್ದ ದೈವದ ಮುಖವಾಡ, ಗಂಟೆ, ಕಡ್ತಲೆಗಳನ್ನು ಕಿಸ್ಕಾರದ ಹೂ, ಹಿಂಗಾರಗಳಿಂದ ಸಿಂಗಾರ ಮಾಡಿ ಗಂಧದ ಧೂಪ ಕೊಟ್ಟರು. ಅಲ್ಲಿಂದ ಬಂದು ಚಾವಡಿಯಲ್ಲಿ ಕಣಿ ಇಡಲು ತಯಾರಾಗುವಾಗ ವಿಷುವಿನ ಬೋಣಿಗೆ ಎರಡು ಸಾಲು ಉಳಲು ಹೋಗಿದ್ದ ಸಿಂಗಾರ ಮಾಡಿದ್ದ ಕೋಣಗಳು ಬಂದವು. ಚಿಕ್ಕ ಮಾವ ಮುಂಡಾಸು ಕಟ್ಟಿ ಬಂದವರು, ಕೋಣಗಳಿಗೆ ಅವಲಕ್ಕಿ, ಬಾಳೆಹಣ್ಣು ಕಲಸಿ ಅಂಗಳದಲ್ಲಿ ತಿನ್ನಲು ಕೊಟ್ಟರು. ಚಾವಡಿಯಲ್ಲಿ ಕಣಿ ತಯಾರಾಯಿತು.

ಅಂಗಳದ ಭೂತದ ಕೊಟ್ಟಿಗೆಯ ಎದುರು ಎಲ್ಲಾ ತರಕಾರಿಗಳನ್ನು ಇಟ್ಟು ಚಿನ್ನದ, ಹಣದ ಪೆಟ್ಟಿಗೆ ಇಟ್ಟರು. ತಂಬಿಗೆಯಲ್ಲಿ ನೀರು, ಆ ನೀರಿನ ತಂಬಿಗೆಯ ಮೇಲೆ ಒಂದು ಹೊಸ ಬಟ್ಟೆ, ಕೊಡಿ ಎಲೆಯಲ್ಲಿ ಒಂದು ಬಳ್ಳ ಬೆಳ್ತಿಗೆ ಅಕ್ಕಿ, ಬದಿಯಲ್ಲಿ ತೆಂಗಿನಕಾಯಿ ಅಡಿಕೆ, ಸುತ್ತ ಮಲ್ಲಿಗೆಯ ಮಾಲೆ ಇಟ್ಟು, ಒಂದು ಕಲಶ ಕನ್ನಡಿ ಇಟ್ಟು, ಗುತ್ತಿನ ಮನೆಯ ಯಜಮಾನರು ಕಣಿಗೆ ಅಡ್ಡ ಬಿದ್ದರು. ಆ ಹೊಸ ದಿನದಂದು ಮನೆಯ ಧನ ಧಾನ್ಯ ಸಂಪತ್ತುಗಳ ಪೂಜೆ ಮಾಡುವುದೇ ವಿಷುವಿನ ಕಣಿ ಪೂಜೆ. ಒಕ್ಕಲಿನವರಿಗೂ ಧನಿಗಳ ಮನೆಯ ಕಣಿಯ ಸಂಪತ್ತು ಸೌಭಾಗ್ಯಕ್ಕೆ ಅಡ್ಡಬಿದ್ದು ಅವರ ಭಾಗ್ಯ ಹೆಚ್ಚಾಗಲೆಂದು ಕೈಮುಗಿದು ಅಡ್ಡ ಬೀಳುವುದೇ ಸೌಭಾಗ್ಯ!!

ಮನೆಯ ಕಿರಿಯರೆಲ್ಲರೂ ಭೂತದ ಗುಂಡಕ್ಕೆ ಕೈಮುಗಿದು ಚಾವಡಿಗೆ ಬಂದು ಗುತ್ತಿನ ಯಜಮಾನರ ಕಾಲಿಗೆ ಬಿದ್ದರು. ಯಜಮಾನರು ಎಲ್ಲರಿಗೂ 'ಆಯುರಾರೋಗ್ಯ ದಿಂದ ಸುಖವಾಗಿ ಬಾಳಿ' ಎಂದು ಆಶೀರ್ವಾದ ಮಾಡಿದರು. ಜೊತೆಗೆ ಹಿರಿಯರಿಗೆ ಒಂದು ವರಹ, ಮಕ್ಕಳಿಗೆ ಅರ್ಧ ವರಹ, ಒಕ್ಕಲಿನವರಿಗೆ ಒಂದೊಂದು ಬೆಳ್ಳಿಯ ರೂಪಾಯಿ ಕೊಟ್ಟು ಕಳುಹಿಸಿದರು.

ಒಕ್ಕಲಿನವರು ಚಪ್ಪರದಲ್ಲಿ ಬೆಳೆ ಕಾಣಿಕೆ ಇಟ್ಟು, ಸಂಸಾರ ಸಮೇತ ಮಲರಾಯನಿಗೆ

ಅಡ್ಡಬಿದ್ದು, ಕಣೆಗೆ ಕೈಮುಗಿದು, ಗುತ್ತಿನವರ ಕಾಲಿಗೆ ಬಿದ್ದರು. ಯಜಮಾನರು ಅವರ ಕಷ್ಟಸುಖ ವಿಚಾರಿಸಿ ಮನೆಯ ಕೊಟ್ಟಾರಿಯ ಬಳಿ ಕಳುಹಿಸಿದರು. ಗೇಣಿಯಲ್ಲಿ ಮೋಸ ಮಾಡುವವರನ್ನು ಒಕ್ಕಲೆಬ್ಬಿಸುವುದು, ಕಷ್ಟದಲ್ಲಿದ್ದವರಿಗೆ ಗೇಣಿ ಮಾಫಿ ಮಾಡುವುದು ಎಲ್ಲ ಮುಗಿಸಿ ಯಜಮಾನರು ಚಾವಡಿಯಿಂದ ಅಂಗಳಕ್ಕೆ ಬಂದರು. ಅಂಗಳದಲ್ಲಿ ರಾಶಿ ಬಿದ್ದಿರುವ ಬೆಳೆ ಕಾಣಿಕೆಗಳನ್ನು ನೋಡಿ, ಅಂದು ಬಂದ ಅಂಕದ ಕೋಳಿಗಳ ಬಾಲ ಸವರಿ ಒಬ್ಬೊಬ್ಬರನ್ನೇ ಮಾತನಾಡಿಸಿ ಅವರನ್ನು ಊಟಕ್ಕೆಬ್ಬಿಸಿದರು.

ಬೆಳೆ ಕಾಣಿಕೆಯಾಗಿ ಬಂದ ಚೀನಿಕಾಯಿ, ಕುಂಬಳಕಾಯಿ, ಮುಳ್ಳುಸೌತೆ, ಸೌತೆಗಳ ರಾಶಿ ಒಂದು ಕಡೆಯಲ್ಲಿ, ಅಕ್ಕಿ, ಭತ್ತದ ಮುಡಿಗಳ ರಾಶಿ, ಓಲೆ ಬೆಲ್ಲದ ಕಟ್ಟುಗಳು, ಕೊಡ ತುಂಬ ಗಾಣದೆಣ್ಣೆ, ಅವಲಕ್ಕಿ ಚೀಲ, ಕತ್ತಿ, ಹಾರೆಗಳು, ಹೀಗೆ ಒಕ್ಕಲಿನವರ ಬೆಳೆ ಕಾಣಿಕೆ, ಆಯಾ ಕಸಬಿನವರ ಕಾಣಿಕೆಯೂ ಆಗಿತ್ತು. ಶಾನುಭೋಗರ ಕೆಲಸ ನಡೆದೇ ಇತ್ತು. ಹಳೆ ಗೇಣಿಯ ಲೆಕ್ಕ ಆಗಿ, ಹೊಸ ವರ್ಷದ ಗೇಣಿಯ ತೀರ್ಮಾನವಾಗಿ ಒಕ್ಕಲಿನವರು ಹೋಗಬೇಕಿತ್ತು. ಅದು ಮುಗಿಯುವಾಗ ಸಂಜೆಯಾಯಿತು.

ವಿಷುವಿನ ಊಟ ಮುಗಿಸಿ ಹೋಗುವಾಗ ಯಜಮಾನರು ಮರುದಿನದ ನಿಶ್ಚಿತಾರ್ಥದ ಊಟಕ್ಕೆ ಎಲ್ಲರನ್ನೂ ಆಹ್ವಾನಿಸಿದರು. ಕೆಲವರನ್ನು ಸಂಜೆ ಕೆಲಸಕ್ಕೆ ನೆರವಾಗಲು ಬರುವಂತೆ ಹೇಳಿದರು.

ವಿಷುವಿನ ಮರುದಿನ ಮೇಷ ಎರಡರಂದು ಬೀಗರ ಕಡೆಯವರೆಲ್ಲಾ ಬೆಳಗ್ಗೆಯೇ ಬಂದು ಸೇರಿದ್ದರು. ಬೀಗರೆಲ್ಲಾ ಅಂಕದ ಕೋಳಿಗಳನ್ನು ಕಳುಹಿಸಿಕೊಟ್ಟಿದ್ದರು. ಬೆಳಗ್ಗೆ ನಿಶ್ಚಿತಾರ್ಥದ ಕೋಳಿ ಅಂಕ ಬೆಟ್ಟು ಗದ್ದೆಯಲ್ಲಿ ಪ್ರಾರಂಭವಾಯಿತು. ಅಂದು ಕಮ್ಮಿ ಎಂದರೂ ಒಂದು ನೂರು ಕೋಳಿಗಳನ್ನು ಸಾಲಾಗಿ ಕಟ್ಟಿಹಾಕಿದ್ದರು. ಬಿಸಿಲು ನೆತ್ತಿಗೇರುವುದಕ್ಕೆ ಮೊದಲು ಕೋಳಿ ಅಂಕ ಮುಗಿದು ಸತ್ತ ಕೋಳಿಗಳು ಸಾರಿಗೆ ತಯಾರಾದವು. ಕೋಳಿ ಗಸಿ, ಕೋಳಿ ಸಾರು ತಯಾರಾಗುವಾಗ ನೆಂಟರು ಅಂಗಳದ ಚಪ್ಪರದಲ್ಲಿ ಸೇರಿದರು. ಬಂಬ್ರಾಣದ ಯಜಮಾನರು, ಕೊಡೆಯಾಲ ಗುತ್ತಿನವರು, ಕಳ್ಳಿಗೆಯ ಹಿರಿಯರು, ಮಜಲೋಡಿಯ ಪೆಗ್ಗೆ ಕುಳ, ಕುಂಡಡ್ಕ, ಕುರಿಯ, ಕೂಳೂರು, ಪಾವೂರು, ಕಾವೂರು, ಬಾಕ್ರಬೈಲು, ಮಜಿಬೈಲು ಎಂದು ಸುತ್ತುಮುತ್ತಲಿನ ಸೀಮೆಗಳ ಗುರಿಕಾರರ ಪಟಾಲಮ್ಮೇ ಸೇರಿತ್ತು. ಅಂದಿನ ಸಭೆಯಲ್ಲಿ ನಾರ್ಯದ ನಾಞರಾಲರು, ಮಲಾರಿನ ಕೊಗ್ಗಾಳ್ವರು ಇದ್ದವರಲ್ಲಿ ಹಿರಿಯರು. ಸುಬ್ಬಾಳ್ವರು ಅವರನ್ನು ಸಭೆಗೆ ಕರೆತಂದು ಅವರ ಒಟ್ಟಿಗೆ ಸಭೆಗೆ ಕೈ ಮುಗಿದರು. ಹಿರಿಯರಾದ ನಾಞರಾಲರು ನೋಡಲು 60ರ ಹರೆಯದವರಂತೆ ಕಾಣುತ್ತಿದ್ದರಾದರೂ 80 ವರ್ಷ ದಾಟಿರಬಹುದು ಎಂದು ಎಲ್ಲರ ಅಂದಾಜು. ಗಟ್ಟಿಮುಟ್ಟಾದ ದೇಹ, ಗಲ್ಲ ಮೀಸೆ, ಬೋಳು ತಲೆ, ಅದರ ಮೇಲೊಂದು ಮುಂಡಾಸು ಕಟ್ಟಿದ್ದ ನಾಞರಾಲರು ಎದ್ದು ನಿಂತು ಕೈಮುಗಿದಾಗ ಸಭೆ ನಿಶ್ಶಬ್ದವಾಯಿತು.

''ಸಭೆಯ ಸರ್ವರಿಗೂ ನಮಸ್ಕಾರ. ಇಂದು ನಾವು ಒಂದು ಒಳ್ಳೆಯ ಕೆಲಸಕ್ಕೆ



ಸೇರಿದ್ದೇವೆ. ಮಜಲೋಡಿಯ ಯುವಕರಾದ ಮಂಜಣ, ಕಿನ್ಯನ ನಿಮಗೆಲ್ಲ ತಿಳಿದಂತೆ ಮಿತ್ತಬೈಲು ಎಂಬ ಭೂಮಿಯಲ್ಲಿ ವಾಸಿಸುತ್ತಿದ್ದಾರೆ. ಅವರಿಗೂ, ಸಿರಿಬಾಗಿಲು ಕುಟುಂಬದ ಕಾಂತಪ್ಪ, ಪಾವೂರು ಗುತ್ತಿನ ವೆಂಕಪ್ಪ ಎಂಬ ಗುರಿಕಾರರಿಗೂ ಮಜಲೋಡಿಯ ಗುರಿಕಾರರು ಸುಬ್ಬಾಳ್ವರ ಮತ್ತು ತಿಮ್ಮಾಳ್ವರ ಹೆಣ್ಣು ಮಕ್ಕಳಾದ ಲಕ್ಷ್ಮಿ ಮತ್ತು ಸೀತುವನ್ನೂ, ಕೀರ್ತಿಶೇಷರಾದ ಕೊರಗಾಳ್ವರ ಮೋಕೆ, ಜಾಕೆ ಎಂಬ ಹೆಣ್ಣು ಮಕ್ಕಳನ್ನೂ ಕೊಟ್ಟು ಮದುವೆ ಮಾಡಲು ಹಿರಿಯರು ಒಪ್ಪಿದ್ದಾರೆ. ಇದಕ್ಕೆ ಯಾರದೂ ಏನೂ ಅಡ್ಡಿ ಇಲ್ಲದಿದ್ದರೆ ಸಭೆಯಲ್ಲಿರುವ ಸರ್ವರ ಒಪ್ಪಿಗೆಯಲ್ಲಿ ತಾಂಬೂಲ ಬದಲಿಸಿ ನಿಶ್ಚಿತಾರ್ಥ ಮಾಡಿಕೊಳ್ಳುತ್ತೇವೆ. ಸಭೆಯ ಸರ್ವರಿಗೂ ಒಪ್ಪಿಗೆಯಾ?''

ಒಂದು ಗಳಿಗೆ ಕಾದು ಆಮೇಲೆ ಸಭೆಯ ಹಿರಿಯರು ಒಪ್ಪಿಗೆ ಕೊಟ್ಟರು. ಹಿಂದಿನ ಕಾಲದಲ್ಲಿ ಈ ರೀತಿಯ ಒಪ್ಪಿಗೆ ಕೇಳುವ ಅಗತ್ಯ ಇತ್ತು. ಕೆಲವು ಸಲ ತಂದೆ-ತಾಯಿ, ತಂಗಿ-ಅಣ್ಣನ ಮಕ್ಕಳಿಗೆ ಮದುವೆ ಮಾಡಿ ಕೊಡುತ್ತೇವೆ ಎಂದು ಮಾತು ಕೊಟ್ಟಿರುತ್ತಾರೆ. ಎಷ್ಟೋ ಕಡೆ ತೊಟ್ಟಿಲ ಮಕ್ಕಳಿಗೇ ಮದುವೆ ನಿಶ್ಚಯವಾಗುತ್ತದೆ. ಆ ಮಾತು ದೊಡ್ಡವರಾಗುವಾಗ ಮರೆತಿರಲು ಸಾಕು. ಮತ್ತೆ ಕೆಲವು ಸಲ ಅಕ್ಕ ತಂಗಿಯ ಹೆಣ್ಣು ಮಕ್ಕಳನ್ನು ಅಣ್ಣನ ಅಥವಾ ತಮ್ಮನ ಗಂಡು ಮಕ್ಕಳಿಗೆ ಮದುವೆ ಮಾಡಿ ಕೊಡುವ ಹಕ್ಕು ಕುಟುಂಬದ ಹೆಣ್ಣಿಗೆ ಇತ್ತು. ಆ ಹಕ್ಕಿಗೆ ಯಾವುದೇ ರೀತಿಯ ಧಕ್ಕೆ ಬರದಂತೆ ಮಾಡಲು ಇಂತಹ ಒಪ್ಪಿಗೆ ಕೇಳುವ ಕ್ರಮವಿತ್ತು. ಸಭೆ ಒಪ್ಪಿಗೆ ಕೊಟ್ಟು ತಾಂಬೂಲ ಬದಲಿಸಿದ ಮೇಲೆ ಯಾವ ಕಾರಣಕ್ಕೂ ನಿಶ್ಚಯ ಕಡಿದು ಹೋಗುವುದಿಲ್ಲ.

ನಾಞರಾಲರು ಗಂಡು-ಹೆಣ್ಣುಗಳ ಮಾವಂದಿರನ್ನು ಎದುರೆದುರು ನಿಲ್ಲಿಸಿ ತಾಂಬೂಲ ಬದಲಿಸಿದರು. ತುಳುನಾಡಿನ ಅಳಿಯ ಸಂತಾನದ ಕಟ್ಟಳೆಯಲ್ಲಿ ಗಂಡು-ಹೆಣ್ಣಿನ ಹಿರಿಯರು, ಕುಟುಂಬದ ಹಿರಿಯರು ಅಥವಾ ಅತ್ತೆ-ಮಾವಂದಿರು ಹೊರತು ತಂದೆ-ತಾಯಿ ಅಲ್ಲ. ನಿಶ್ಚಯ, ಮದುವೆಯ ಹೊಣೆಗಾರಿಕೆಯೂ ಗಂಡಿನ ಅಥವಾ ಹೆಣ್ಣಿನ ಮಾವನದೇ ಹೊರತು ತಂದೆಯದಲ್ಲ.

ನಿಶ್ಚಿತಾರ್ಥ ಆಗಿ, ವರ್ಷ ಕಳೆದ ಮೇಲೆ ಮದುವೆ ಎಂದು ಸಭೆಯ ಸರ್ವರಿಗೂ ಹೇಳಿಕೆ ಕೊಟ್ಟು ಊಟಕ್ಕೆ ಏಳುವಾಗ ಹೊತ್ತು ಮಧ್ಯಾಹ್ನ ದಾಟಿತ್ತು. ಊಟದ ಚಪ್ಪರಕ್ಕೆ ಬರುವಾಗ ಹೆಂಗಸರು, ಯುವಕರು ಊಟಕ್ಕೆ ತಯಾರಾಗಿದ್ದರು. ಅಂಕದ ಕೋಳಿಗಳ ಸುಕ್ಕ, ಸಾರು, ಬಲ್ಯಾರು ಮೀನಿನ ಗಸಿ, ಹೆಸರುಬೇಳೆ ಪಾಯಸ, ಕಡಲೆಬೇಳೆ ಪಾಯಸ, ರೊಟ್ಟಿ, ಗಟ್ಟಿ, ನೀರು ದೋಸೆ, ಲಾಡೆಂದು ಹಲವು ಬಗೆಯ ಭಕ್ಷ್ಯ ಭೋಜ್ಯಗಳ ಊಟ ಮುಗಿದು ಸಭೆ ಎದ್ದಿತು. ಯಜಮಾನರೆಲ್ಲ ಮೇನೆಗಳಲ್ಲಿ ಹಿಂದಿರುಗಿದರು. ಊರವರೆಲ್ಲ ಹೋಗಿಯಾದ ಮೇಲೆ ಮನೆಯ ಬೀಗರು, ಹಿರಿಯರು ಚಪ್ಪರದಲ್ಲೇ ಚಾಪೆ ಹಾಕಿ ಅಡ್ಡಬಿದ್ದರು. ಸಂಜೆ ಬೈಲು ಸುತ್ತಿ ಬರುವಾಗ ಶೇಂದಿಯ ಸೇವೆಗೆ ತಯಾರಿ ನಡೆದಿತ್ತು. ಕತ್ತಲಾಗುವಾಗ ಪಕ್ಕದ ಅಂಗಳದಲ್ಲಿ ಶೇಂದಿ ಕುಡಿದ ಕೆಲಸದವರ ಲೇ ಲೇ ಶುರುವಾಯಿತು. ಅವರ

ಡೋಲು ಉರಳು ಸೇವೆ, ದುಡಿಯ ಪಾಡ್ದನ ಮುಗಿದಾಗುವಾಗ ಅರ್ಧ ರಾತ್ರಿ ಕಳೆದಿತ್ತು. ತಲೆ ನೆಟ್ಟಗೆ ಇದ್ದವರು ಹೊರಟು ಹೋದರು. ಮಿಕ್ಕವರು ಅಲ್ಲಲ್ಲೇ ಬಿದ್ದುಕೊಂಡರು.

ಮಿತ್ತಬೈಲಿನವರು ಬೆಳಗ್ಗೆಯೇ ಹೊರಟರು. ಸೇನೆಗೆ ಹೊರಡುವುದಕ್ಕಿಂತ ಮೊದಲು ಮನೆ ಕಟ್ಟಿಸುವ ವಿವರಗಳನ್ನು ತಮ್ಮಂದಿರ ಜೊತೆ ಚರ್ಚಿಸಿ ಹೋಗುವ ತಯಾರಿಯಲ್ಲಿದ್ದ ಮಂಜಣ, ಚಿಕ್ಕ ತಾಯಿ ಚೋಮಕ್ಕನನ್ನು ಮಿತ್ತಬೈಲಿಗೆ ಕರೆದುಕೊಂಡು ಹೋಗಲು ಅಜ್ಜಿಯಲ್ಲಿ ಅಪ್ಪಣೆ ಕೇಳಿದಾಗ ಅವರು ಸಂತೋಷದಿಂದ ಒಪ್ಪಿಕೊಂಡರು. ಮನೆ ಕಟ್ಟಿಸುವಾಗ ಚಿಕ್ಕಮ್ಮ ಇದ್ದರೆ ಅಮ್ಮನಿಗೆ ನಾಲ್ಕು ಕೈಯ ಬಲ ಬರುತ್ತದೆ. ತಂಗಿಯಂದಿರಿಗೂ ಇನ್ನೆರಡು ಹೆಂಗಸರು ಜೊತೆಗಿದ್ದರೆ ಅಡುಗೆ ಕೆಲಸ, ಬೇಸಾಯದ ಕೆಲಸ ಸುಲಭ ಆಗಬಹುದೆಂದು ಖುಷಿಯಾಯಿತು. ಇಷ್ಟು ವರ್ಷ ಇಬ್ಬರೇ ಇದ್ದವರಿಗೆ ಈಗ ಮನೆ ತುಂಬಾ, ಬೈಲು ತುಂಬಾ ಜನ ನೋಡಿ ಬಹಳ ಸಂಭ್ರಮವೆನಿಸಿತು. ರಾಮಣ್ಣ, ಲಕ್ಷ್ಮಣರಿಗೂ ತಾಯಿ ತಮ್ಮ ಜೊತೆ ಮಿತ್ತಬೈಲಿನಲ್ಲೇ ಇರಬೇಕೆಂಬ ಆಸೆ ಇತ್ತು. ಆದರೆ ಹಿರಿಯರ ಮುಂದೆ ಅದನ್ನು ಬಾಯಿ ಬಿಟ್ಟು ಹೇಳಲಿಕ್ಕಾಗದೆ ಒದ್ದಾಡುತ್ತಿದ್ದರು.

ಮಿತ್ತಬೈಲಿಗೆ ಬಂದ ಮಂಜಣ ಮರುದಿನ ಮಂಜೇಶ್ವರಕ್ಕೆ ಬಂದು ಆದಿ ಸೆಟ್ಟಿಯ ಜೊತೆ ಮನೆ ಕಟ್ಟುವ ವಿವರವನ್ನು ನೀಡಿ ಅದಕ್ಕೆ ಬೇಕಾದ ಸಾಮಾನುಗಳನ್ನು ಕಳುಹಿಸಿ ಕೊಡುವಂತೆ ಹೇಳಿ ತಾನು ಇಲ್ಲದಿದ್ದರೂ ತಮ್ಮಂದಿರು ತಂಗಿಯರು ಬಂದು ಕೊಂಡುಹೋಗಲು ವ್ಯವಸ್ಥೆ ಮಾಡಿದ.

ಮಿತ್ತಬೈಲಿನ ಸುತ್ತಮುತ್ತ ಬೇಸಾಯದ ಭೂಮಿ ಇದ್ದರೆ ಅದನ್ನು ಖರೀದಿಸುವ ತನ್ನ ಆಸೆಯನ್ನು ಹೇಳಿದ. ಆದಿ ಸೆಟ್ಟಿ ಮಂಜಣನನ್ನು ಮಾಗಣೆಯ ಶಾನುಭೋಗ ದೇವಯ ಭಂಡಾರಿಯವರ ಮನೆಗೆ ಕರೆದುಕೊಂಡು ಹೋಗಿ ಪರಿಚಯ ಮಾಡಿಕೊಟ್ಟ.

ದೇವಯ ಭಂಡಾರಿ ಮಂಜೇಶ್ವರದ ಒಂದು ದೊಡ್ಡ ಮನೆತನದ ಕೊಂಕಣಿ. ಅವರ ಹಿರಿಯರು ಗೋವಾದಲ್ಲಿ ಪೋರ್ಚುಗೀಸರ ಹಿಂಸೆ ಸಹಿಸಲು ಸಾಧ್ಯವಾಗದೆ ಕನ್ನಡ ಸೀಮೆಗೆ ಓಡಿ ಬಂದವರು. ಮಂಜೇಶ್ವರದ ಶ್ರೀಮದನಂತೇಶ್ವರ ದೇವಸ್ಥಾನ ನೋಡಿ ಅಲ್ಲಿಯೇ ಬೀಡು ಬಿಟ್ಟ ಭಂಡಾರಿಯ ಹಿರಿಯರು, ಭಂಡಾರ ಮಠದಲ್ಲಿ ಬಹು ದೊಡ್ಡ ಮನೆ ಸ್ಥಾಪಿಸಿದರು. ಗೋವಾದಿಂದ ಸಾಧ್ಯವಾದಷ್ಟು ಆಸ್ತಿ-ಸಂಪತ್ತನ್ನು ಮಂಜೇಶ್ವರಕ್ಕೆ ತಂದರು. ತಲೆತಲಾಂತರದಿಂದ ಮಾಯಿಪ್ಪಾಡಿ ಅರಸರಿಗೆ ಕಂದಾಯ, ಸುಂಕ ವಸೂಲಿಯ ಶಾನುಭೋಗರಾಗಿ ದೇವಯ ಭಂಡಾರಿಯ ಹಿರಿಯರು ಕೆಲಸ ಮಾಡಿದ್ದಾರೆ. ಅರಸರು ಕೊಟ್ಟ ಆ ಅಧಿಕಾರ ದೇವಯ ಭಂಡಾರಿಯ ಭಂಡಾರ ಮಠಕ್ಕೆ ದೊಡ್ಡ ಗೌರವ ಸ್ಥಾನ ಒದಗಿಸಿತ್ತು. ಆದಿ ಸೆಟ್ಟಿ, ಮಂಜಣಾಳ್ವರನ್ನು ಪರಿಚಯ ಮಾಡಿಸಿದ ಸಮಯದಲ್ಲೇ ದೇವಯ ಭಂಡಾರಿಗೂ ಒಬ್ಬ ಬಲಾಢ್ಯ ಗೆಳೆಯನ ಅಗತ್ಯವಿತ್ತು. ಕಂದಾಯ ವಸೂಲಿ, ಸುಂಕ ವಸೂಲಿ ಮಾಡುವಾಗ ಎಷ್ಟೋ ಆಸ್ತಿಗಳನ್ನು ಬಲಾತ್ಕಾರದಿಂದ ವಶಪಡಿಸಿಕೊಳ್ಳ ಬೇಕಾಗಿ ಬಂದರೆ ಅದಕ್ಕೊಂದು ಜನ ಬೇಕು. ಸ್ವಂತಕ್ಕೆ, ಭಂಡಾರ ಮಠದ ಹೆಸರಿಗೆ ಎಷ್ಟೋ



ಆಸ್ತಿಯನ್ನು ದೇವಯ ಭಂಡಾರಿ ಮಾಡಿಕೊಂಡದ್ದು ಹೀಗೆಯೇ. ಆ ಕಾಲದಲ್ಲಿ ಬೇಸಾಯ ಮಾಡುತ್ತಿದ್ದ ಒಕ್ಕಲಿನವರಿಂದ ಹೆಬ್ಬೆಟ್ಟು ಹಾಕಿಸಿಕೊಂಡಿದ್ದ ಭಂಡಾರಿ, ಭಂಡಾರ ಮಠಕ್ಕೆ ಮುಲ್ಕಿ ಸೀಮೆಯಿಂದ ಹಿಡಿದು ಬೇಕಲಕೋಟೆಯವರೆಗೆ ಆಸ್ತಿ ಮಾಡಿಕೊಂಡಿದ್ದ. ಕೆಲವು ಬೇಸಾಯಗಾರರು ತಮಗೆ ಗೊತ್ತಿಲ್ಲದೇ ಭಂಡಾರಿಯ ಒಕ್ಕಲಾಗಿದ್ದರು. ಆ ಕಾಲದಲ್ಲೇ ಆತ ಒಂದು ಸಾವಿರ ಮುಡಿ ಗೇಣಿ ಬರುವ ದೊಡ್ಡ ಕುಳ. ಅವನಿಗೆ ಮಂಜಣ ಸಿಕ್ಕಿದ್ದು ಬೆಂಕಿಗೆ ಗಾಳಿ ಸಿಕ್ಕಿದಂತಾಯಿತು. ಆದರೆ ವಿಧಿಯ ತೀರ್ಮಾನ ಬೇರೆಯೇ ಆಗಿತ್ತು. ಮಂಜಣಾಳ್ವ ರಿಗೆ ಭಂಡಾರಿ ಊರಿನ ಗೇಣಿಯ ಗದ್ದೆಗಳನ್ನು ಮಾತ್ರವಲ್ಲ, ತನ್ನ ಮನೆಯ ಗೇಣಿ ಇಲ್ಲದ ಬೈಲುಗದ್ದೆಯನ್ನೂ ಕೊಟ್ಟುಬಿಟ್ಟ.



## ಈ ಕಾಲ...





೩

# ಬೇಸಾಯಕ್ಕೆ ಗದ್ದೆ ಕೊಡಿಸಿ ವಿಷ ಬೀಜ ಬಿತ್ತಿದ

ಪುದ್ವಾರ್‌ದೆಚ್ಚಿ ನೇಮ ಮುಗಿದು ಎರಡು ವಾರ ಕಳೆಯಿತು. ಯಮುನಕ್ಕ ಮಂಜೇಶ್ವರಕ್ಕೆ ನರಸಯ ಭಂಡಾರಿಯವರನ್ನು ಭೇಟಿಯಾಗಲು ಹೊರಟರು. ಭಂಡಾರಿಯವರು ಮಂಜೇಶ್ವರದ ಕೊಂಕಣಿ ಸಮಾಜದ ಹೆಸರಾಂತ ಮನೆತನದ ಯಜಮಾನ. ಭಂಡಾರ ಮಠ ಇಡೀ ರಾಜ್ಯದಲ್ಲೇ ಕೊಂಕಣಿಗಳು ಗೌರವಿಸುವ ಮನೆ. ದೇವಯ ಭಂಡಾರಿಯವರ ಕಾಲದಲ್ಲಿ ಮಿತ್ತಬೈಲಿನ ಆದಿಯ ಯಜಮಾನ ಮಂಜಣಾಳ್ವರಿಗೂ ಅವರಿಗೂ ಅಣ್ಣತಮ್ಮಂದಿರಂತಹ ಆತ್ಮೀಯತೆ.

ನರಸಯ ಭಂಡಾರಿಯವರ ತಂದೆ ಕೊಗ್ಗ ಭಂಡಾರಿ, ದೇವಯ ಭಂಡಾರಿ ಮಾಡಿಟ್ಟ ಸಾವಿರ ಮುಡಿ ಗೇಣಿಯ ಭೂಮಿಗೆ ಮತ್ತೂ ಒಂದು ಸಾವಿರ ಮುಡಿಯ ಆಸ್ತಿ ಸೇರಿಸಿದ್ದರು. ಸುತ್ತಮುತ್ತ ಸಾಲ ಕೊಟ್ಟು ನಾಲ್ಕೈದು ವರ್ಷಗಳಲ್ಲಿ ಅಡವು ಇಟ್ಟ ಭೂಮಿಯನ್ನೇ ನುಂಗಿದವರೆಂದು ಅವರಿಗೆ ಕೆಟ್ಟ ಹೆಸರಿತ್ತು. ಊರಿನ ಶಾನುಭೋಗರಾಗಿದ್ದುದರಿಂದ ತೀರ್ವೆ,

ಕಂದಾಯ ಕೊಡಲು ಬಾಕಿಯಿದ್ದವರ ಭೂಮಿಯನ್ನೆಲ್ಲಾ ತನ್ನ ಹೆಸರಿಗೆ ಬರೆಸಿ ತೀರ್ವೆ ಕಟ್ಟಿ ಭೂಮಿ ಒಳಗೆ ಹಾಕಿದ್ದವರು ಕೊಗ್ಗ ಭಂಡಾರಿ. ತೀರ್ವೆ ವಸೂಲಿಗೆ ಊರ ಒಳಗೆ ಹೋಗುವಾಗ ಯಾರದು ಎಷ್ಟು ಬಾಕಿ ಇದೆ, ಯಾರ ಆಸ್ತಿ ಏಲಂ ಮಾಡುವುದೆಂದು ತೀರ್ಮಾನ ಮಾಡಿಯೇ ಅವರು ಹೋಗುವುದು. ಕೊಂಕಣಿ ನುಗ್ಗಿದ ಊರು, ಆಡು ನುಗ್ಗಿದ ಕಾಡಿನ ಹಾಗೆ. ಈ ಗಾದೆ ಕೊಗ್ಗ ಭಂಡಾರಿಯನ್ನು ನೋಡಿಯೇ ಹುಟ್ಟಿರಬೇಕು.

ಅವರ ನಂತರ ಶಾನುಭೋಗರಾದ ಅವರ ಮಗ, ಹಳ್ಳಿ ಹಳ್ಳಿಗೆ ಹೋಗಿ ಭೂಮಿ ತೆಗೆದುಕೊಳ್ಳುವುದನ್ನು ಬಿಟ್ಟಿದ್ದರು. ಶಾನುಭೋಗಿಕೆಯನ್ನು ತಂಗಿಯ ಮಗ ಸುಬ್ರಾಯ ಕಮ್ತಿಯವರಿಗೆ ಬಿಟ್ಟುಕೊಟ್ಟಿದ್ದರು. ಅವರು ಮಂಗಳೂರಿನಿಂದ ಕುಂಬಳೆಯ ತನಕ ಪೇಟೆಯ ವ್ಯಾಪಾರಿಗಳಿಗೆ ಬಡ್ಡಿಗೆ ಸಾಲ ಕೊಡುವ ವ್ಯವಹಾರ ಪ್ರಾರಂಭಿಸಿದ್ದರು. ದೂರದ ಹಳ್ಳಿಗಳಲ್ಲಿನ ತನ್ನ ಭೂಮಿಯನ್ನು ಒಳ್ಳೆಯ ಬೆಲೆಗೆ ಸಿಕ್ಕಿದರೆ ಮಾರಿಬಿಡುತ್ತಿದ್ದರು. ಯಮುನಕ್ಕನ ಗಂಡ ಚಿಕ್ಕಪ್ಪ ರೈಯವರಿಗೂ ಕೆಲವು ಆಸ್ತಿಗಳನ್ನು ಅವರು ಮಾರಿದ್ದರು.

ಮಿತ್ತಬೈಲಿಗೂ ಭಂಡಾರಿ ಮಠಕ್ಕೂ ತಲೆ ತಲಾಂತರದಿಂದ ನಡೆದುಕೊಂಡ ಬಂದ ಸ್ನೇಹಾಚಾರ ಈಗಲೂ ಮುಂದುವರಿದಿದೆ. ಹಿರಿಯರು ಎಷ್ಟೋ ಸಲ ಮಿತ್ತಬೈಲಿನಲ್ಲಿ ತಮ್ಮ ಮಕ್ಕಳು ಮರಿಗಳನ್ನು ಬಿಟ್ಟು ಬಂದು ದೇವಯ ಭಂಡಾರಿಯವರು ಹಾಕಿಕೊಟ್ಟ ಸಂಪ್ರದಾಯವನ್ನು ಮುಂದುವರಿಸಿಕೊಂಡು ಬಂದಿದ್ದರು. ಮಿತ್ತಬೈಲಿನಲ್ಲಿ 'ಭಂಡಾರ ಮಠದ ಪೆಠಾರಿ' ಎಂಬ ಹೆಸರಿನ ಪೆಠಾರಿಯೊಂದು ಈಗಲೂ ಇದೆ. ಇದು ದೇವಯ ಭಂಡಾರಿಯವರ ಕಾಲದಲ್ಲಿ ನಗ-ನಾಣ್ಯ, ಬಂಗಾರ, ಒಡವೆ ತಂದು ಇಡುತ್ತಿದ್ದುದಕ್ಕೆ ಸಾಕ್ಷಿಯಾಗಿದೆ. ಕಲ್ಯಾಣಪ್ಪನ ಕಾಟುಕಾಯಿಯಲ್ಲಿ ಪ್ರಾರಂಭವಾದ ಈ ಸ್ನೇಹಾಚಾರಕ್ಕೆ ಈ ತನಕ ಯಾವುದೇ ಕುಂದು ಬಂದಿಲ್ಲ. ಯಮುನಕ್ಕನಿಗೆ ಈಗಲೂ ಭಂಡಾರ ಮಠದ ನರಸಯ್ಯ ಭಂಡಾರಿ ಅಣ್ಣನಂತೆ. ಭಂಡಾರಿಯ ಮನೆಯವರಿಗೂ ಯುಮನಕ್ಕ ಮನೆಯ ಮಗಳಂತೆ.

ಯಮುನಕ್ಕ ದಂಡಿಗೆಯಿಂದ ಇಳಿಯುವಾಗ ಭಂಡಾರಿ ಸ್ವತಃ ಹೊರಗೆ ಬಂದು ಅವರನ್ನು ಸ್ವಾಗತಿಸಿ, ಚಾವಡಿಗೆ ಬಂದು ಹೆಂಡತಿಯನ್ನು ಕರೆದರು. ''ಗೌರೀ, ಹೊರಗೆ ಬಾರೇ. ಯಾರು ಬಂದಿದ್ದಾರೆ ನೋಡು... ಯಜಮಾನ್ತಿ ಬಂದಿದ್ದಾರೆ. ಬಾಯಾರಿಕೆ ಕಳುಹಿಸು'' ಎಂದರು. ಹೊರಗೆ ಬಂದು ಯಮುನಕ್ಕನ ಕಾಲು ಮುಟ್ಟಿ ನಮಸ್ಕರಿಸಿದ ಗೌರಮ್ಮ ''ಅಕ್ಕ! ಆಗಲೇ ಮನೆ ತುಂಬ ದಿವಿಹಲಸು, ಎಳೆ ಗೇರು ಬೀಜ, ಎಳೆ ಬದನೆ, ಕಾಡು ಹೀರೆ, ಮಾವಿನ ಮಿಡಿ ಎಲ್ಲಾ ಬಂದು ತಲುಪಿದೆ. ಸುದ್ದಿಯಿಲ್ಲದೆ ಅಷ್ಟು ಅವಸರದಲ್ಲಿ ಏನು ಬಂದಿರಿ? ಭಂಡಾರಿಯವರಲ್ಲಿ ಮಾತಾಡಿ ಮುಗಿದ ಮೇಲೆ ಒಳಗೆ ಬನ್ನಿ. ಸುಖ-ದುಃಖ ಮಾತನಾಡುವ. ಮೂರು ತಿಂಗಳ ಮಾತು ಬಾಕಿ ಇದೆ''.

''ಆಯಿತು ಮಹಾರಾಯಿತಿ. ಸ್ವಲ್ಪ ಉಸಿರು ಬಿಡಲು ಅಕ್ಕನಿಗೆ ಅವಕಾಶ ಕೊಡುತ್ತೀಯಾ? ಒಂದು ಗಳಿಗೆ ಈ ತಮ್ಮನ ಸುಖ-ದುಃಖ ವಿಚಾರಿಸಿ ಅನಂತರ ನಿನ್ನ



ಅಡುಗೆ ಕೋಣೆಗೆ ಬಂದರೆ ಸಾಲದಾ? ನಿನ್ನ ದಾಲ್ ತೋವೆ-ಅಂಬಡೆ ಮಾಡು ನೋಡುವ. ಈಗ ನಮಗೆ ದಿವಿಹಲಸಿನ ಎರಡು ಪೋಡಿ ಕಳುಹಿಸಿದರೆ ಒಳ್ಳೆಯದು. ಊಟಕ್ಕೆ ಆ ಹೊಸ ಖರ್ಜೂರದ ಪಾಯಸ ಮಾಡಿದಿ ಎಂದಾದರೆ ಅಕ್ಕ ರುಚಿ ನೋಡಿ ಸರ್ಟಿಫಿಕೇಟು ಕೊಡಬಹುದು'' ಎಂದರು ಭಂಡಾರಿಯವರು.

''ಅಗೋ ನೋಡಿ ಅಕ್ಕ! ಅವರಿಗೆ ಬೇಕಾದ ತಿಂಡಿಯ ಪಟ್ಟಿ ಹೇಳಿದರು. ನಿಮಗೆ ಬೇಕಾಗಿ ಅಲ್ಲ-ನಿಮ್ಮ ಹೆಸರು ಹೇಳಿ ತಾನು ತಿನ್ನುವ ತಂತ್ರ ಇದು. ಎಳೆ ಗೇರು ಬೀಜದ ಉಪ್ಕರಿ ಬೇಡವಾ?''

''ಅದು ಮಾಡದೆ ಇರುವುದಿಲ್ಲಾಂತ ನನಗೆ ಗೊತ್ತಿತ್ತು. ಅದಕ್ಕೆ ಹೇಳಲಿಲ್ಲ ನಾನು''.

ಗಂಡ-ಹೆಂಡತಿಯ ಸರಸ ಯಮುನಕ್ಕ ಯಾವಾಗ ಬಂದರೂ ಇದ್ದದ್ದೇ. ಎಷ್ಟೋ ಸಲ ಅವರ ಮನಸ್ಸಿನ ಒಳಗಿನ ಆಳದಲ್ಲಿ ಮತ್ಸರ ಮೂಡಿದ್ದೂ ಇದೆ. ಗುತ್ತಿನ ಮನೆಗಳಲ್ಲಿ ಗಂಡ-ಹೆಂಡಿರ ಇಂತಹ ಮಾತು, ತಮಾಷೆ ಅಪರೂಪ. ಆದರೆ ಯಮುನಕ್ಕನಿಗೆ ಗಂಡ-ಹೆಂಡತಿ ಇಬ್ಬರೂ ಅಕ್ಕಾಂತ ಕರೆಯುವಾಗ ಅದರಲ್ಲೇ ಹೊಟ್ಟೆ ತುಂಬುತ್ತಿತ್ತು.

''ಗೌರಮ್ಮಾ, ದಾಲ್‌ತೋವೆಗೂ, ದಿವಿಹಲಸಿನ ಪೋಡಿಗೂ ಅದೇನೋ ಇಂಗೂಂತ ಎಂತಹದೋ ಹಾಕುತ್ತೀಯಲ್ಲ, ಅದನ್ನು ಸ್ವಲ್ಪ ಮರೆಯದೆ ಹಾಕಿಬಿಡು. ನೀವು ಗಂಡ-ಹೆಂಡತಿಯ ಒತ್ತಾಯಕ್ಕೆ ಲೆಕ್ಕಕ್ಕಿಂತ ಜಾಸ್ತಿ ತಿಂದರೆ ಹೊಟ್ಟೆ ಉಬ್ಬರಿಸುತ್ತದೆ. ವಾಯು ತುಂಬುತ್ತದೆ''.

ಯಮುನಕ್ಕ ಅಷ್ಟು ಹೇಳುವಾಗ ಪಾನಕವೂ ಒಂದಷ್ಟು ಚಕ್ಕುಲಿ, ಉಂಡೆಯೂ ಬಂತು. ಗೌರಮ್ಮ ಒಳಗೆ ಅಡುಗೆಯ ತಯಾರಿಗೆ ಹೋದರು.

''ಅಕ್ಕ ಭಂಡಸಾಲೆಗೆ ಬಂದಿರಾ. ಅಲ್ಲ ಬೇರೇನಾದರೂ ಕೆಲಸದಲ್ಲಿ ಬಂದಿರಾ?''

ಭಂಡಾರಿಯೂ ಯಮುನಕ್ಕನೂ ಒಂದೇ ವಯಸ್ಸಿನವರು. ಆದರೆ ಭಂಡಾರಿಯವರು ಯಮುನಕ್ಕನನ್ನು ಅಕ್ಕ ಎಂದೂ, ಯಮುನಕ್ಕ ಭಂಡಾರಿಯವರನ್ನು ಅಣ್ಣ ಎಂದೂ ಕರೆಯುವುದು ಅವರ ಕ್ರಮ.

''ನಿಮ್ಮಲ್ಲಿ ಸ್ವಲ್ಪ ಕೆಲಸ ಇತ್ತು. ಅದಕ್ಕೆಂದೇ ಬಂದೆ. ಕೆಲಸ ಆಗಿ ಊಟ ಮುಗಿಸಿ ವಿಶ್ರಾಂತಿ ಪಡೆದು ಸಂಜೆ ಹೋಗುವಾಗ ಭಂಡಸಾಲೆಗೂ ಹೋಗಬೇಕು''.

ಯಮುನಕ್ಕ ಹೇಳಿದಾಗ ಏನೋ ಅಗತ್ಯದ ವಿಷಯ ಮಾತನಾಡಲು ಬಂದಿದ್ದಾರೆ ಎಂದೆಣಿಸಿದ ಭಂಡಾರಿಯವರು ಅವರ ಮುಖವನ್ನೇ ನೋಡುತ್ತಾ ಕುಳಿತುಕೊಂಡರು.

''ನೀವು ಯಾವಾಗಲೂ ಆಸ್ತಿ ಖರೀದಿಸು ಆಸ್ತಿ ಖರೀದಿಸೂಂತ ಹೇಳುತ್ತಿರುತ್ತೀರಿ. ನಾನು ಈ ತನಕ ಆ ಬಗ್ಗೆ ಮನಸ್ಸು ಮಾಡಲಿಲ್ಲ. ಆದರೆ ಈಗ ನನ್ನ ಕಣ್ಣು ಒಂದು ಆಸ್ತಿಯ ಮೇಲಿದೆ. ಬಡಾಜೆಯ ಬಾರಬೈಲಿನ ಆಸ್ತಿ ಗೇಣಿ ಒಕ್ಕಲಿನದು ಅಂತ ಕೇಳಿದ ನೆನಪು ನನಗೆ. ಬಾರಬೈಲಿನ ಆಸ್ತಿ ನಿಮ್ಮದಾ ಅಲ್ಲ ಭಕ್ತರ ಮಠದ್ದಾಂತ ತಿಳಿದುಕೊಳ್ಳಬೇಕಾಗಿತ್ತು. ಅದಕ್ಕೆ ನಿಮ್ಮಲ್ಲಿಯೇ ಕೇಳುವಾಂತ''.

''ಏನು ಯಮುನಕ್ಕ ಆ ಆಸ್ತಿಗೆ ಕಣ್ಣು ಹಾಕಿದ್ದೀರಿ?''

''ಅದು ಯಾರದ್ದೂಂತ ಗೊತ್ತಾದರೆ, ನಾನು ತಿಳಿದುಕೊಂಡಂತೆ ಬಾರಬೈಲಿನದು ಗೇಣಿಯ ಆಸ್ತಿ ಹೌದಾದರೆ, ನಿಮ್ಮದ್ದೋ ಅಥವಾ ಭಕ್ತರ ಮಠದ್ದೋ ಅಂತ ತಿಳಿದರೆ ಆಮೇಲೆ ಯೋಚನೆ ಮಾಡುವ. ನಿಮ್ಮದಾದರೆ ಅದರಲ್ಲಿ ನನ್ನ ಕಣ್ಣುಂಟು. ನೀವಿದನ್ನು ಈಗ ಗುಟ್ಟಿನಲ್ಲಿ ಇಟ್ಟುಕೊಳ್ಳಬೇಕು. ಹುಸೇನನಿಗೂ ಇದನ್ನು ಹೊರಗೆ ಯಾರಿಗೂ ತಿಳಿಸಬಾರದು ಎಂದು ಹೇಳಬೇಕು''.

ಯಮುನಕ್ಕ ಮಾತು ಮುಗಿಸಿದ ಮೇಲೆ ಭಂಡಾರಿಯವರು ಹುಸೇನ್ ಬ್ಯಾರಿಯನ್ನು ಕರೆಸಿದರು. ಬ್ಯಾರಿ ಬಂದವನೇ ಯಮುನಕ್ಕನಿಗೆ ಕೈ ಮುಗಿದು ಭಂಡಾರಿಯವರ ಮುಖ ನೋಡಿದ.

''ಹುಸೇನ, ಬಡಾಜೆಯಲ್ಲಿ ಬಾರಬೈಲಿನ ಆಸ್ತಿ ಯಾವುದಾದರೂ ನಮ್ಮಲ್ಲಿ ಉಂಟಾ ನೋಡು. ಹಾಗೆಯೇ ಭಕ್ತ ಮಠದವರಿಗೂ ಅಲ್ಲಿ ಉಂಟಾ ನೋಡು''.

ಹುಸೇನ್ ಬ್ಯಾರಿ, ನರಸಯ ಭಂಡಾರಿಯವರ ಗೇಣಿ ವಸೂಲು ಮಾಡುವ ಉಗ್ರಾಣಿ. ಭಂಡಾರಿಯವರು ಶ್ಯಾನುಭೋಗರಾಗಿದ್ದಾಗಲೂ ಹುಸೇನ್ ಅವರ ಉಗ್ರಾಣಿಯಾಗಿದ್ದವನು. ಹತ್ತಿಪ್ಪತ್ತು ವರ್ಷಗಳಿಂದಲೂ ಅವನು ಭಂಡಾರಿಯವರ ಜೊತೆಗಿದ್ದಾನೆ. ಊರಿನ ಯಾವ ಆಸ್ತಿಯ ವಿವರ ಕೇಳಿದರೂ ಹುಸೇನ್‌ನ ಬಾಯಲ್ಲೇ ಇದೆ. ನಾಲ್ಕು ಗ್ರಾಮಗಳ ಅಂಗುಲ-ಅಂಗುಲ ಆಸ್ತಿಯ ವಿವರವೂ ಅವನಿಗೆ ಗೊತ್ತಿತ್ತು. ಹುಸೇನ್ ಮೆಲ್ಲ ಯಮುನಕ್ಕನ ಮುಖ ನೋಡಿ ಹೇಳಿದ,

''ಏನಮ್ಮಾ! ನಿಮಗೆ, ಬಾರಬೈಲಿನ ಭೂಮಿಯ ವಿವರ ಬೇಕಾ? ಅವರ ಮನೆಯ ಅಡಿ ಸಹ ಗೇಣಿಯ ಆಸ್ತಿ. ಹಿತ್ತಲು, ಮನೆ, ಗದ್ದೆಗಳು, ಭಂಡಾರ ಮಠದವು. ಸ್ವಲ್ಪ ಬೆಟ್ಟು ಗದ್ದೆ, ತೋಟ ಭಕ್ತರ ಮಠದ್ದು. ನೀವು ಕೇಳಿದ್ದೀರೋ ಏನೋ, ಸುಮಾರು ನೂರು ವರ್ಷಗಳ ಹಿಂದೆ ಕಂಪನಿ ಸರಕಾರ ಬಾರಬೈಲಿನ ಆಸ್ತಿಯನ್ನೆಲ್ಲಾ ಸ್ವಾಧೀನ ಮಾಡಿಕೊಂಡು ಮುಟ್ಟುಗೋಲು ಹಾಕಿ ಅವರನ್ನು ಊರಿಂದ ಹೊರಗೆ ಹಾಕಿತ್ತು. ಆಗ ಅವರ ಆಸ್ತಿಯನ್ನು ದೇವಸ್ಥಾನಕ್ಕೆ ಗೇಣಿ ಬರುವ ಹಾಗೆ, ಸೇನೆಗೆ ಸೇರಿದ ಯಾವನೋ ಮೂಲ್ಯನಿಗೆ ಉಂಬಳಿ ಬಿಟ್ಟಿದ್ದರು. ಮೂಲ್ಯ, ಬ್ಯಾರಿಗಳಿಗೆ ಕೊಟ್ಟು ಹೋದ. ಬ್ಯಾರಿಗಳಿಂದ ತೀರ್ವೆ ಕೊಡಲಾಗದೆ ಏಲಂ ಆದ ಆಸ್ತಿಯನ್ನು ದನಿಗಳೂ, ಭಕ್ತರ ಮಠದವರೂ ಖರೀದಿಸಿ ಪುನಃ ಬ್ಯಾರಿಗಳಿಗೇ ಗೇಣಿಗೆ ಕೊಟ್ಟರು. ಹಿಂದಿನ ಪಟೇಲ ಮಾಂಕರಾಲರ ಒತ್ತಾಯಕ್ಕೆ ಭಂಡಾರ ಮಠದವರೂ, ಭಕ್ತರ ಮಠದವರೂ ಬ್ಯಾರಿಗಳಿಂದ ಅದನ್ನು ಬಿಡಿಸಿ ಬಾರಬೈಲಿನ ತ್ಯಾಂಪಣ್ಣ ಶೆಟ್ಟರಿಗೆ ಗೇಣಿಗೆ ಕೊಡಿಸಿದರು. ಭಂಡಾರ ಮಠಕ್ಕೆ 30 ಮುಡಿ ಅಕ್ಕಿ, ಭಕ್ತರ ಮಠಕ್ಕೆ ಹತ್ತು ಮುಡಿ ಅಕ್ಕಿ, ಸಾವಿರ ತೆಂಗಿನ ಕಾಯಿ, ಒಂದು ಖಂಡಿ ಅಡಿಕೆ ಗೇಣಿಯ ಆಸ್ತಿ ಬಾರಬೈಲು''.

ಹುಸೇನ್ ಬ್ಯಾರಿ ಇಷ್ಟು ವಿವರಿಸುವಾಗ ನರಸಯ್ಯ ಭಂಡಾರಿಗೆ ನೆನಪಾಯಿತು. ''ಹೌದು ಯಮುನಕ್ಕ, ಆ ತ್ಯಾಂಪಣ್ಣ ಶೆಟ್ಟಿ ಸರಿಯಾಗಿ ಗೇಣಿ ಕೊಡುತ್ತಿರಲಿಲ್ಲ, ವಿಷು



ಹಬ್ಬಕ್ಕೆ ಬಂದು ಏನೋ ಒಂದು ಸ್ವಲ್ಪ ಬೆಳೆ ಕಾಣಿಕೆ ಕೊಟ್ಟು, ಗೇಣಿ ಚೀಟು ಮಾಡಿಕೊಟ್ಟು ಹೋಗುತ್ತಿದ್ದ. ಪಟೇಲ ಮಾಂಕರಾಲರ ತರಹ ಇದ್ದವನು, ಅವನೇ ಅಲ್ಲವಾ ಬ್ಯಾರಿ?''

''ಹೌದು, ಅವರೇ. ಈಗ ಮಾತ್ರ ತ್ಯಾಂಪಣ್ಣ ಶೆಟ್ರು ಅಳಿಯಂದಿರನ್ನು ವಿಷು ಹಬ್ಬಕ್ಕೆ ಕಳುಹಿಸಿ ಕೊಡುತ್ತಿದ್ದಾರೆ. ಯಾವಾಗಲಾದರೂ ಬಂದು ಗೇಣಿ ಚೀಟಿಗೆ ದಸ್ಕತ್ತು ಹಾಕಿ ಹೋಗುತ್ತಿದ್ದಾರೆ. ಅವರಿಗೆ ಸ್ವಲ್ಪ ಅಹಂಕಾರ ಬಂದಿದೆ''.

''ಆಯಿತು ಹುಸೇನ. ಸಂಜೆ ಅದರ ಎಲ್ಲಾ ರಿಕಾರ್ಡು ತಂದು ತೋರಿಸು. ಹಾಗೆಯೇ, ವಿಷಯ ನಿನ್ನಲ್ಲಿಯೇ ಇರಲಿ''.

ಭಂಡಾರಿ ಅವನನ್ನು ಕಳುಹಿಸಿ ಯಮುನಕ್ಕನ ಮುಖ ನೋಡಿದರು.

''ಆ ಆಸ್ತಿ ನನಗೆ ಬೇಕು. ಭಂಡಾರ ಮಠ ಹಾಗೂ ಭಕ್ತರ ಮಠಗಳ ಎರಡೂ ಆಸ್ತಿಗಳನ್ನೂ ನಿಮ್ಮ ಈ ತಂಗಿಗೆ ಮಾಡಿಕೊಡಬೇಕು. ನನ್ನ ಈ ಚಿಕ್ಕ ಆಸೆಯನ್ನು ನಿಮ್ಮ ತಂಗಿಯ ಆಸೇಂತ ತಿಳಿದು ನೀವು ನೆರವೇರಿಸಿಕೊಡಬೇಕು''.

ಯಮುನಕ್ಕ ಇಷ್ಟು ಹೇಳುವಾಗ ಗೌರಮ್ಮ ಒಳಗಿಂದ ಬಂದರು. ಸ್ವಲ್ಪ ಮಾತು ಅವರ ಕಿವಿಗೂ ಬಿತ್ತು.

''ಅಯ್ಯೋ ಯಮುನಕ್ಕ ಒಂದು ತಿಂಡಿಯನ್ನೂ ಮುಟ್ಟಿಲ್ಲ! ಪಾನಕವೂ ಹಾಗೆಯೇ ಇದೆ! ಅದೆಂತಹದು ನಿಮ್ಮದು ಅಷ್ಟು ದೊಡ್ಡ ಆಸೆ? ತಂಗಿಯ ಆಸೆಯನ್ನು ನಡೆಸಿಕೊಡ ಬೇಕೂಂತ ಈ ಭಂಡಾರಿಯವರಲ್ಲಿ ಬೇಡಿಕೊಳ್ಳುವಷ್ಟು ದೊಡ್ಡ ಆಸೆ ಏನು ನಿಮ್ಮದು?''

ಗೌರಮ್ಮ ಕೇಳುತ್ತಾ ಯಮುನಕ್ಕನ ಪಕ್ಕ ಕುಳಿತುಕೊಂಡರು. ಯಮುನಕ್ಕ ಮಿತ್ತಬೈಲಿನಲ್ಲಿ ಮಾಂಕರಾಲರು ಮಾಡಿದ ಅನ್ಯಾಯವನ್ನು, ಅವರು ಲೂಟಿ ಮಾಡಿದ ಚಿನ್ನ, ದುಡ್ಡು, ಅವರು ಸತ್ತದ್ದು, ಅದಕ್ಕೆ ಮೊದಲು ಚಿನ್ನ, ಹಣ ಕದ್ದುಕೊಂಡು ಹೋದದ್ದನ್ನು, ಕಲೆಕ್ಟರ್ ಆಫೀಸಿಗೆ ಕೊಂಡುಹೋದದ್ದು ಎಲ್ಲ ಹೇಳಿದಾಗ ಭಂಡಾರಿಯವರು ಕೇಳಿದರು,

''ಮಾಂಕರಾಲರನ್ನು ನೀವು ಕುಟುಂಬದವರು ಕೊಂದದ್ದೂಂತ ಊರೆಲ್ಲ ಸುದ್ದಿ ಉಂಟಲ್ಲ ಯಮುನಕ್ಕ?''

''ನನ್ನ ತಮ್ಮ ಸುಬ್ಬಯನ ಮೇಲೆ ಎಲ್ಲರದೂ ಅದೇ ಆರೋಪ. ಅದಕ್ಕಾಗಿಯೇ ಆತ ಊರು ಬಿಟ್ಟು ಹೋದದ್ದೂಂತ ಸುದ್ದಿ ಹಬ್ಬಿಸಿದ್ದಾರೆ. ನಿಮಗೆ ಗೊತ್ತಿದೆ, ಸುಬ್ಬಯ ಗಾಂಧಿ ಇಜಿ, ಸ್ವಾತಂತ್ರ್ಯಾಂತ ಹೇಳಿಕೊಂಡು ದೇಶ ಸುತ್ತುತ್ತಿದ್ದಾನೆ. ಆದರೆ ಊರಿನ ಪುಂಡರಿಗೀಗ ಮಿತ್ತಬೈಲಿನವರೊಂದಿಗೆ ಜಗಳ ಕಾಯುತ್ತಿರಬೇಕೂಂತ ಆಸೆ. ಗಂಡು ದಿಕ್ಕಿಲ್ಲದ ಮನೇಂತ ಅವರ ತಲೆಯಲ್ಲಿ. ಆ ಪುಂಡರ ನಾಯಕ ಬಾರಬೈಲಿನ ತ್ಯಾಂಪಣ್ಣ''.

ಯಮುನಕ್ಕ, ಗಂಡ ಹೆಂಡತಿಗೆ ಬಾರಬೈಲಿನ ತ್ಯಾಂಪಣ್ಣ ಹೇಗೆ ಪುಂಡರನ್ನು ಮತ್ತು ಮಾಂಕರಾಲರ ಮಕ್ಕಳನ್ನು ಕಟ್ಟಿಕೊಂಡು ತೊಂದರೆ ಕೊಡುತ್ತಿದ್ದಾನೆ ಎಂಬುದನ್ನು ವಿವರಿಸಿದರು. ಮಾಂಕರಾಲರ ತಮ್ಮ ಮೈಂದರಾಲರಿಗೆ ದುರ್ಬೋಧನೆ ನೀಡಿ ಅವನನ್ನು ಹೇಗೆ ತನ್ನ ಮಕ್ಕಳಿಗೆ ಎದುರು ನಿಲ್ಲಿಸುತ್ತಿದ್ದಾನೆ ಎಂಬುದನ್ನೂ ತಿಳಿಸಿದರು.

ಮಾಂಕರಾಲರ ಹೆಂಡತಿಯೂ, ವೈಂದರಾಲರ ಹೆಂಡತಿಯೂ ಒಂದೇ ಮನೆಯವರು. ತ್ಯಾಂಪಣ್ಣನ ಹೆಂಡತಿಯೂ ಅದೇ ಮನೆಯವಳು. ಹಾಗಾಗಿ ತ್ಯಾಂಪಣ್ಣ, ವೈಂದರಾಲರಿಗೆ ಯಜಮಾನಿಕೆ ಕೊಡಿಸಬೇಕೆಂದೂ, ಮಾಂಕರಾಲರ ಮಗನನ್ನು ಪಟೇಲ ಮಾಡಬೇಕೆಂದೂ ಪ್ರಯತ್ನಿಸುತ್ತಿದ್ದಾನೆ. ಅದನ್ನು, ನಿಮ್ಮ ಅಳಿಯ ಸುಬ್ರಾಯ ಕಮ್ತಿ ಮಾಡಿಕೊಡುತ್ತೇನೇಂತ ಹೇಳಿದ್ದಾನಂತೆ''.

ಹೀಗೆ ಒಂದಲ್ಲ ಎರಡಲ್ಲ ಹಲವು ರೀತಿಯಿಂದ ತ್ಯಾಂಪಣ್ಣ ತೊಂದರೆ ಕೊಡುತ್ತಿರುವುದನ್ನು ಯಮುನಕ್ಕ ವಿವರಿಸಿದಾಗ ಭಂಡಾರಿಯವರಿಗೆ ಯಮುನಕ್ಕ ಮಿತ್ತಬೈಲಿ ನಲ್ಲಿ ಎಂತಹ ಹಿಂಸೆ ಅನುಭವಿಸುತ್ತಿದ್ದಾರೆಂಬುದು ಅರ್ಥವಾಯಿತು. ಅದಕ್ಕಾಗಿಯೇ ಯಮುನಕ್ಕ ತ್ಯಾಂಪಣ್ಣನ ಬುಡಕ್ಕೇ ಕೈಹಾಕಲು ಯೋಜನೆ ಹಾಕಿ ಭಂಡಾರಿಯವರ ಬಳಿ ಬಂದದ್ದು. ಗೌರಮ್ಮ ಇಬ್ಬರನ್ನೂ ಊಟಕ್ಕೆ ಎಬ್ಬಿಸಿದರು.

ಬಹಳ ಸೊಗಸಾದ ಊಟವಾಯಿತು. ಭಂಡಾರಿಗಳು ಹೇಳಿದ ಎಲ್ಲಾ ಬಗೆ ಇತ್ತು. ಅದರ ಜೊತೆಗೆ ಯಮುನಕ್ಕನ ಪ್ರೀತಿಯ ಮರ ಕೆಸುವಿನ ಪತ್ರೊಡೆ, ಹಲಸಿನ ಎಲೆಯ ಕಡುಬು, ಹುರುಳಿ ಸಾರು ಇತ್ತು. ಊಟ ಮುಗಿದು, ಖರ್ಜೂರದ ಪಾಯಸ ಸವಿದು ಭಂಡಾರಿಯವರು ಹೊರಗೆ ಬಂದರು. ಗೌರಮ್ಮನೂ ಯಮುನಕ್ಕನೂ ಪಕ್ಕದ ಕೋಣೆಯಲ್ಲಿ ಅಡ್ಡಾಗಿ ಸುಖ-ದುಃಖ ಮಾತನಾಡಿಕೊಂಡರು. ಭಂಡಾರಿಗಳು ಹುಸೇನ್ ಬ್ಯಾರಿಯನ್ನು ಕರೆದು ಭಕ್ತರ ಮಠಕ್ಕೆ ಕಳುಹಿಸಿದರು. ದೊಡ್ಡ ಭಕ್ತರಿಗೆ, ಸಂಜೆ ತನಗೊಮ್ಮೆ ಕಾಣಸಿಗುವಂತೆ ಹೇಳಿ ಕಳುಹಿಸಿದರು.

ಯಮುನಕ್ಕ ಎದ್ದು ಚಾವಡಿಗೆ ಬರುವಾಗ ಭಂಡಾರಿಯವರು ಎಲ್ಲಾ ರಿಕಾರ್ಡು ಗಳನ್ನು ತೆಗೆದು ಒಂದು ಕಟ್ಟು ಮಾಡಿ ಇಟ್ಟಿದ್ದರು.

''ಯಮುನಕ್ಕ, ನೀವು ಹದಿನೈದು ದಿನ ಕಳೆದು ಬನ್ನಿ. ಆವತ್ತು ನಮ್ಮ ಜಮೀನಿನ ರಿಜಿಸ್ಟ್ರಿ ಮಾಡಿಸುವ. ಭಕ್ತರದ್ದನ್ನೂ ಅಂದೇ ಮಾಡಿಸುವ ಹಾಗೆ ಪ್ರಯತ್ನಿಸುತ್ತೇನೆ. ನೀವು ಈ ವಿಷಯದಲ್ಲಿ ನಿಶ್ಚಿಂತೆಯಿಂದ ಹೋಗಬಹುದು. ಆದರೆ ಒಂದು ಮಾತು, ನೀವು ಈ ತ್ಯಾಂಪಣ್ಣನ ವಿಷಯದಲ್ಲಿ ಜಾಗ್ರತೆಯಾಗಿರಬೇಕು. ಎಷ್ಟಾದರೂ ಅವರು ಬೀರಣ್ಣ ಬಂಟನ ಕುಟುಂಬದವರು. ಮಿತ್ತಬೈಲು, ಭಂಡಾರ ಮಠಗಳ ಮೇಲಿನ ಹಗೆತನ ನೂರು ವರ್ಷ ಗಳಿಂದ ಅವರ ರಕ್ತದಲ್ಲಿಯೇ ಇದೆ. ಆತ ಅಷ್ಟೊಂದು ಸುಲಭದಲ್ಲಿ ಆಸ್ತಿಯನ್ನು ಬಿಟ್ಟುಕೊಡಲಾರ, ನೆನಪಿರಲಿ. ಹೊಡೆದಾಟ, ಗಲಾಟೆಯಾಗದಂತೆ ನೋಡಿಕೊಳ್ಳಿ. ನಿಮ್ಮ ಪ್ರೀತಿಯ ಸಾಕು ಮಗ ದುಗ್ಗಪ್ಪ ಸ್ವಲ್ಪ ಮುಂಗೋಪದವನಂತೆ. ಅವನೇನಾದರೂ ಮುಂದೆ ನುಗ್ಗದಂತೆ ಜಾಗ್ರತೆಯಲ್ಲಿರಬೇಕು ನೀವು''.

ಭಂಡಾರಿ ಇಷ್ಟು ಹೇಳುವಾಗ ಯಮುನಕ್ಕನ ಕಣ್ಣಲ್ಲಿ ನೀರು ತುಂಬಿತು. ಭಂಡಾರಿಗಳ ಕಾಲು ಮುಟ್ಟಿ ಕಣ್ಣೊರೆಸಿದಾಗ,

''ಏನು ಯಮುನಕ್ಕ, ಯಾಕೆ ಕಣ್ಣೀರು? ನಾನೇನಾದರೂ ತಪ್ಪು ಮಾತು



ಹೇಳಿದೆನಾ?''

''ಸಂತೋಷದ ಕಣ್ಣೀರು ಸ್ವಾಮೀ. ಮಿತ್ತಬೈಲಿಗೆ ನಿಮ್ಮಂತಹ ಸಹೋದರರ ಸಹಾಯ ಇರುವಾಗ ಏನೂ ತೊಂದರೆ ಬರಲಿಕ್ಕಿಲ್ಲ''

''ಛೇ, ಛೇ, ಮಿತ್ತಬೈಲಿನ ಋಣ, ಮಂಜೇಶ್ವರದ ಕೊಂಕಣಿಗಳು ಎಷ್ಟು ತೀರಿಸಿದರೂ ಮುಗಿಯುವಂತಹದ್ದಲ್ಲ. ಭಂಡಾರ ಮಠವೂ ಮಿತ್ತಬೈಲೂ ಒಂದೇ ಕುಟುಂಬದವರಂತೆ. ಮಾನ-ಮರ್ಯಾದೆ, ಕಷ್ಟ-ಸುಖಗಳಲ್ಲಿ ಅವರಿಗೆ ಸಮಪಾಲು. ನಿಮ್ಮ ಹಿರಿಯರು ಇಲ್ಲದಿರುತ್ತಿದ್ದರೆ, ಇಂದು ಭಂಡಾರದ ಮನೆ ನೋಡಲಿಕ್ಕೇ ಇರುತ್ತಿರಲಿಲ್ಲ. ಬೀರಣ್ಣ ಬಂಟ ಅದನ್ನು ನಿರ್ನಾಮ ಮಾಡುತ್ತಿದ್ದ. ಹಾಗಾಗಿ ನೀವು ಕಣ್ಣೀರು ಹರಿಸುವ ಅಗತ್ಯವಿಲ್ಲ. ಇದರಲ್ಲಿ ಉಪಕಾರ ಗಿಪಕಾರ ಏನೂ ಇಲ್ಲ. ಇದೆಲ್ಲ ಅಂದಿನ ಸಾಲದ ಬಡ್ಡಿ''.

ಯಮುನಕ್ಕ, ಗೌರಮ್ಮನನ್ನು ಕರೆದು ಆಲಿಂಗಿಸಿ ಬೀಳ್ಕೊಟ್ಟು ದಂಡಿಗೆಯಲ್ಲಿ ಕುಳಿತುಕೊಳ್ಳುವಾಗ ಕೆಲಸದವನೊಬ್ಬ ತಿಂಡಿ ತಿನಿಸುಗಳ ಕಟ್ಟನ್ನು ಹೊತ್ತುಕೊಂಡು ಮಿತ್ತಬೈಲಿಗೆ ನಡೆದ. ಇಂದು ಮಿತ್ತಬೈಲು ಮನೆಯಲ್ಲಿ ಹಬ್ಬ. ಭಂಡಾರಿಗಳು ಯಮುನಕ್ಕನಲ್ಲಿ ಒಂದು ಚೀಟಿ ಕೊಟ್ಟು,

''ಯಮುನಕ್ಕಾ, ಈ ಚೀಟಿಯಲ್ಲಿ ನಿಮ್ಮ ಲೆಕ್ಕ ಉಂಟು. ನನ್ನ ಹತ್ತಿರ ನಿಮ್ಮ ಲೆಕ್ಕದಲ್ಲಿ ಈಗ ಎಷ್ಟು ಹಣವಿದೆ ಎಂದು ಬರೆದಿದೆ. ರಾಮಣ್ಣನಲ್ಲಿ ಕೊಡು, ಅವನು ನೋಡಿ ನಿನಗೆ ವಿವರಿಸುತ್ತಾನೆ. ರಾಮಣ್ಣ ನಾಳೆ ಒಮ್ಮೆ ಇಲ್ಲಿಗೆ ಬಂದು ಹೋಗಲಿ. ಸ್ವಲ್ಪ ಕೆಲಸ ಇದೆ''.

ಭಂಡಾರಿಗಳು ಯಮುನಕ್ಕನ ಜೊತೆ ಪೇಟೆಯ ಭಂಡಸಾಲೆಯವರೆಗೆ ಬಂದು ಅವರನ್ನು ಕಳುಹಿಸಿಕೊಟ್ಟರು.

ಸಂಜೆ ಬಂದ ಭಕ್ತರಿಗೆ ಬಾರಬೈಲಿನ ಆಸ್ತಿಯನ್ನು ಮಾರಿಸಿಕೊಡುತ್ತೇನೆಂದು ಭಂಡಾರಿಗಳು ಹೇಳಿದಾಗ ಅವರಿಗೆ ಬಹು ದೊಡ್ಡ ಹೊರೆಯೊಂದು ಕೆಳಗಿಳಿಸಿ ದಂತಾಯಿತು. ಅವರಿಗೂ ಬಾರಬೈಲಿನ ತ್ಯಾಂಪಣ್ಣನ ಕಾಟ ಸಾಕಾಗಿ ಹೋಗಿತ್ತು. ಹುಸೇನ ಗುಟ್ಟಲ್ಲಿ ಭಂಡಾರಿಯವರಿಗೆ ವಿಷಯವೆಲ್ಲ ವಿವರಿಸಿದ್ದ. ತ್ಯಾಂಪಣ್ಣನ ಅಹಂ, ಅದರ ಮೇಲೆ ಎರಡೆರಡು ವರ್ಷಗಳ ಗೇಣಿ ಬಾಕಿ, ಅವನಿಂದ ಭೂಮಿಯನ್ನು ಬಿಡಿಸಿ ಬೇರೆ ಯಾರಿಗಾದರೂ ಕೊಡೋಣವೆಂದರೆ, ತ್ಯಾಂಪಣ್ಣನ ಭಯದಿಂದ ಮುಳ್ಳು ಪೊದರಿಗೆ ಕೈಹಾಕಲು ಯಾರೂ ತಯಾರಿರಲಿಲ್ಲ. ಗೇಣಿ ವಸೂಲಿಗೆ ಹೋದ ಮೊಯ್ಲಿಯನ್ನು ಅವ ಗದರಿಸಿ ಕಳುಹಿಸುತ್ತಿದ್ದ. ಭಂಡಾರಿಯವರು ಭೂಮಿಯನ್ನು ಮಾರಿಸಿ ಕೊಡುತ್ತೇನೆ ಎಂದಾಗ ಭಕ್ತರು ಬೆಲೆಯ ಬಗ್ಗೆ ಏನೂ ಮಾತನಾಡಲಿಲ್ಲ. ಅವರು ಹೇಳಿದ್ದಕ್ಕೆ ಒಪ್ಪಿದರು. ಮುಂಗಡ ಕೊಟ್ಟು ಹದಿನೈದು ದಿನದಲ್ಲಿ ರಿಜಿಸ್ಟರ್ ಮಾಡುವುದೆಂದು ಭಂಡಾರಿಯವರು ನಿಶ್ಚಯಿಸಿದಾಗ ಭಕ್ತರಿಗೆ ಆಶ್ಚರ್ಯ. ಕೊನೆಗೆ ಭಂಡಾರಿಯವರು ಆಸ್ತಿ ಯಾರಿಗೆಂದು ಹೇಳಿ, ಮುನ್ನೂರು ರೂಪಾಯಿಗೆ ಇಡೀ ಆಸ್ತಿಯನ್ನು ಕೊಡುವುದೆಂದು ಭಕ್ತರಲ್ಲಿ ಹೇಳಿದಾಗ, ''ಆ ಹೆಂಗಸನ್ನು ಕೊಂಡು ಹೋಗಿ ಕೆಂಜಿಗದ ಗೂಡಿಗೆ ಯಾಕೆ ಹಾಕುತ್ತೀರಿ ಭಂಡಾರಿಗಳೇ?''

ಎಂದು ಭಕ್ತರು ಕೇಳಿದರು.

ಭಂಡಾರಿಯವರು ಆಸ್ತಿ ಮಾರಾಟದ ಬಗ್ಗೆ ತೀರ್ಮಾನ ಮಾಡಿ ತಂಗಿಯ ಮಗ ಸುಬ್ರಾಯ ಕಮ್ತಿಯನ್ನು ಕರೆಸಿದರು. ಸುಬ್ರಾಯ ಕಮ್ತಿ ಈಗ ಮಂಜೇಶ್ವರ ವರ್ಕಾಡಿ ಮಾಗಣೆಯ ಶಾನುಭೋಗ. ಈ ಶಾನುಭೋಗಿಕೆಯನ್ನು ಕೆಲವು ವರ್ಷಗಳ ಹಿಂದೆ ನರಸಯ್ಯ ಭಂಡಾರಿಯವರು, ಮನೆತನದ ಹಕ್ಕನ್ನು ಬಿಟ್ಟು ತಂಗಿಯ ಮಗನಿಗೆ ಮಾಡಿಸಿ ಕೊಟ್ಟಿದ್ದರು. ನರಸಯ ಭಂಡಾರಿಯವರು ಕೆಲವು ವರ್ಷ ಶಾನುಭೋಗಿಕೆಯನ್ನು ಮಾಡಿಕೊಂಡಿದ್ದವರು, ತನ್ನ ಬಡ್ಡಿ ವ್ಯವಹಾರ ಅಭಿವೃದ್ಧಿಯಾದ ಮೇಲೆ ಸುಬ್ರಾಯ ಕಮ್ತಿಗೆ ಅದನ್ನು ಮಾಡಿಸಿ ಕೊಟ್ಟರು. ಸುಬ್ರಾಯ, ನರಸಯ ಭಂಡಾರಿಯವರಿಗಿಂತ ವಯಸ್ಸಲ್ಲಿ ಚಿಕ್ಕವನಾದರೂ ಮಹಾ ಚುರುಕು ಬುದ್ಧಿಯ ಕೊಂಕಣಿ. ಕೊಂಕಣಿಗರ ಜಾಣತನ, ಕೊಂಕು, ಹುಷಾರುತನ ಎಲ್ಲವೂ ಅವನಲ್ಲಿತ್ತು. ಕಳೆದ ಎರಡು ವರ್ಷಗಳ ಶಾನುಭೋಗಿಕೆಯಲ್ಲಿ ಮಣೆಗಾರರು, ತಹಶೀಲ್ದಾರರು, ಕಲೆಕ್ಟರ್ ಆಫೀಸುಗಳಲ್ಲಿ ಸುಬ್ರಾಯನ ಮಾತು ನಡೆಯುತ್ತಿತ್ತು. ಹಾಗಾಗಿ ಕಾಸರಗೋಡು ತಾಲೂಕಿನಲ್ಲಿ ಸುಬ್ರಾಯ ಕಮ್ತಿ ಎಲ್ಲರಿಗೂ ಬೇಕಾದ, ಎಲ್ಲರಿಗೂ ಗೊತ್ತಿದ್ದ ಶಾನುಭೋಗ. ಕೆಲಸದಲ್ಲಿಯೂ ಒಳ್ಳೆಯ ಅನುಭವ ಅವನಿಗಿತ್ತು. ಸುಬ್ರಾಯ ಕಮ್ತಿ, ಕೊಗ್ಗ ಭಂಡಾರಿಯವರ ಮೊಮ್ಮಗನಾದರೂ ಮಾವ ನರಸಯ ಭಂಡಾರಿಯವರ ಒಳ್ಳೆಯತನ ಅವನಲ್ಲಿ ಧಾರಾಳವಾಗಿತ್ತು. ಬಡವರಿಗೆ ತೊಂದರೆ ಕೊಡದೆ, ಮನೆಯ ಮಾನ ಮರ್ಯಾದೆಗೆ ಕುಂದು ಬಾರದಂತೆ ಶಾನುಭೋಗಿಕೆಯನ್ನು ಆತ ಜಾಣತನದಿಂದ ನಡೆಸುತ್ತಿದ್ದ.

ಮಾಂಕರಾಲರು ಮಿತ್ತಬೈಲಿನಲ್ಲಿ ಗ್ರಾಮದ ಪಟೇಲರಾಗಿದ್ದರು. ಅವರನಂತರ ಆ ಪಟೇಲಗಿರಿಯ ವಿಷಯದಲ್ಲಿ ತಕರಾರು ಬಂದು ಅದನ್ನು ಸರಕಾರ ತಾತ್ಕಾಲಿಕವಾಗಿ ನೋಡಿಕೊಳ್ಳುವಂತೆ ವರ್ಕಾಡಿಯ ಪಟೇಲರಿಗೆ ವಹಿಸಿತ್ತು. ಆ ಎರಡು ಗ್ರಾಮಗಳಿಗೂ ಸುಬ್ರಾಯ ಕಮ್ತಿ ಶಾನುಭೋಗನಾಗಿದ್ದ. ನರಸಯ ಭಂಡಾರಿಗಳು ಮಿತ್ತಬೈಲಿನ ಪಟೇಲಗಿರಿಯ ವಿಷಯವನ್ನು ಅಳಿಯನಲ್ಲಿ ವಿಚಾರಿಸಿದರು. ಹೇಗಾದರೂ ಮಾಡಿ ಆ ಪಟೇಲಗಿರಿ ಮಿತ್ತಬೈಲಿನವರಿಗೇ ಸಿಗುವಂತೆ ನೋಡಿಕೊಳ್ಳಬೇಕೆಂದು ನರಸಯ ಭಂಡಾರಿಗಳು ಸುಬ್ರಾಯ ಕಮ್ತಿಗೆ ಹೇಳಿದಾಗ ಅವ ಸ್ವಲ್ಪ ಹಿಂಜರಿದ. ಕಮ್ತಿಗೆ ನರಸಯ ಭಂಡಾರಿಗಳು, ಮಿತ್ತಬೈಲಿನ ಹಿರಿಯರಾದ ಮಂಜಣಾಳ್ವರು ಭಂಡಾರ ಮಠವನ್ನು ಹೇಗೆ ಉಳಿಸಿಕೊಟ್ಟಿದ್ದರು ಎಂಬುದನ್ನು ನೆನಪು ಮಾಡಿಕೊಟ್ಟರು. ಆ ಋಣವನ್ನು ಮರೆಯ ಬಾರದೆಂದು ಹೇಳಿದರು.

ಸುಬ್ರಾಯ ಕಮ್ತಿ ಈ ಪಟೇಲಗಿರಿಯನ್ನು ಮಾಂಕರಾಲರ ಮಗನಿಗೆ ಮಾಡಿಸಿ ಕೊಡಲು ತ್ಯಾಂಪಣ್ಣ ಶೆಟ್ಟಿಯವರಲ್ಲಿ ಒಪ್ಪಿದ್ದ. ಅದಕ್ಕಾಗಿ ಮಾಂಕರಾಲರ ಹಿರಿಯ ಮಗನಿಗೆ ಪಟೇಲಗಿರಿಯ ಪರೀಕ್ಷೆಗೆ ಕುಳಿತು ಪಾಸಾಗುವಂತೆ ಹೇಳಿದ್ದ. ಈ ಕೆಲಸದಲ್ಲಿ ಸ್ವಲ್ಪ ದುಡ್ಡು ಮಾಡಬಹುದೆಂದು ಕಮ್ತಿ ಲೆಕ್ಕ ಹಾಕಿದ್ದ. ಆದರೆ ಈಗ ತನ್ನ ಮಾವ-ತನಗೆ ಶಾನುಬೋಗಿಕೆ



ಯನ್ನು ಬಿಟ್ಟು ಕೊಟ್ಟವರೇ-ಹೇಳುತ್ತಿರುವಾಗ ಸುಬ್ರಾಯ ಧರ್ಮಸಂಕಟದಲ್ಲಿ ಬಿದ್ದ. ಅವನ ಚತುರ ಬುದ್ಧಿ ಮಾಂಕರಾಲರ ಮಗ ಪಟೇಲಗಿರಿಯ ಪರೀಕ್ಷೆಯಲ್ಲಿ ಪಾಸಾಗದ ಹಾಗೆ ನೋಡಿಕೊಳ್ಳಬೇಕೆಂದು ಲೆಕ್ಕ ಹಾಕಿ, ಮಾವ ನರಸಯ ಭಂಡಾರಿಯವರ ಅಪ್ಪಣೆಯನ್ನು ನಡೆಸಿಕೊಡುತ್ತೇನೆಂದು ಒಪ್ಪಿಕೊಂಡ. ಮರುದಿನ ಬೆಳಗ್ಗೆಯೇ ಮಿತ್ತಬೈಲಿನಿಂದ ರಾಮಣ್ಣನನ್ನು ಕರೆಸಿ ಕೆಲಸ ಪ್ರಾರಂಭಿಸಿದ.

ಭಂಡಾರಿಗಳ ಹೇಳಿಕೆಯಂತೆ ಮಂಜೇಶ್ವರ ಮಠಕ್ಕೆ ಬಂದ ರಾಮಣ್ಣ ಅಲ್ಲಿಯೇ ಸುಬ್ರಾಯ ಕಮ್ತಿಯನ್ನು ಭೇಟಿಯಾದ. ನರಸಯ ಭಂಡಾರಿಗಳು ರಾಮಣ್ಣನಿಗೆ ವಿಷಯ ವನ್ನೆಲ್ಲ ವಿವರಿಸಿ ಅವನನ್ನು ಸುಬ್ರಾಯ ಕಮ್ತಿಗೆ ಪರಿಚಯಿಸಿ ಒಪ್ಪಿಸಿಬಿಟ್ಟರು. ಅಲ್ಲಿಯ ತನಕ ಈ ಪಟೇಲಗಿರಿಯ ವಿಷಯದಲ್ಲಿ ಆಸೆ ಇತ್ತಾದರೂ ಆ ಬಗ್ಗೆ ಹೆಚ್ಚು ಮುತುವರ್ಜಿ ವಹಿಸದೆ ಇದ್ದ ರಾಮಣ್ಣನಿಗೆ ನರಸಯ ಭಂಡಾರಿಗಳು ಅದರ ಅಗತ್ಯವನ್ನು ವಿವರಿಸಿದರು. ಸುಬ್ರಾಯನಿಗೆ ರಾಮಣ್ಣನನ್ನು ನೋಡಿ ಖುಷಿಯಾಯಿತು. ತನ್ನದೇ ಪ್ರಾಯದ ರಾಮಣ್ಣ ಪಟೇಲರಾಗುವುದು ತನ್ನ ಏಳಿಗೆಗೆ ಒಳಿತೆಂದು ಅವನಿಗೆ ಕಂಡಿತು. ಸುಬ್ರಾಯ ರಾಮಣ್ಣನನ್ನು ತನ್ನ ಮನೆಗೆ ಕರೆದುಕೊಂಡು ಹೋಗಿ ಪಟೇಲಗಿರಿಯ ಅರ್ಜಿ ಸಿದ್ಧಪಡಿಸಿ ಅವರಿಬ್ಬರೂ ಕಾಸರಗೋಡಿಗೆ ಹೋದರು.

ರಾಮಣ್ಣನನ್ನು ಕರೆದುಕೊಂಡು ಕಾಸರಗೋಡಿಗೆ ಹೋದ ಕಮ್ತಿ ಒಂದು ವಾರದ ಒಳಗೆ ಪಟೇಲಗಿರಿಯ ಆರ್ಡರ್ ರಾಮಣ್ಣನ ಹೆಸರಿಗೆ ಮಾಡಿಸಿಯೇ ಹಿಂದಿರುಗಿದ್ದು. ಯಮುನಕ್ಕನಿಗೆ ಒಂದು ವಾರ ಮಗ ಎಲ್ಲಿ ಹೋದನೆಂದು ಚಿಂತೆಯಾಯಿತಾದರೂ ನರಸಯ ಭಂಡಾರಿಗಳ ಮೇಲಿನ ವಿಶ್ವಾಸದಿಂದ ಸುಮ್ಮನಿದ್ದರು. ಒಂದು ದಿನ ಬೆಳಗ್ಗೆ ಹುಸೇನ್ ಬ್ಯಾರಿ, ಯಮುನಕ್ಕನನ್ನು ಭಂಡಾರ ಮಠಕ್ಕೆ ಬರಹೇಳಲು ಬಂದಿದ್ದ. ಅವನಲ್ಲಿ ಕೇಳಿದಾಗ, ರಾಮಣ್ಣ ಮರುದಿನ ಬೆಳಗ್ಗೆ ಕಾಸರಗೋಡಿನಿಂದ ಬರುತ್ತಾನೆಂದು ಬ್ಯಾರಿ ಹೇಳಿದ.

ಯಮುನಕ್ಕ ಭಂಡಾರ ಮಠಕ್ಕೆ ಬಂದಾಗ ಭಕ್ತರು, ರಿಜಿಸ್ಟ್ರಾರ್, ನರಸಯ ಭಂಡಾರಿಗಳು ಅವರನ್ನು ಕಾಯುತ್ತಿದ್ದರು. ಭಂಡಾರಿಗಳು, ಯಮುನಕ್ಕ ಬಂದ ಕೂಡಲೇ ಎರಡೂ ಆಸ್ತಿಗಳನ್ನೂ ಅವರ ಹೆಸರಿಗೆ ರಿಜಿಸ್ಟರ್ ಮಾಡಿಸಿಕೊಟ್ಟರು.

ನರಸಯ ಭಂಡಾರಿಗಳು, ಭಕ್ತರ ಮಠದ ಆಸ್ತಿಗೆ ಮುನ್ನೂರು ರೂಪಾಯಿ ಕೊಟ್ಟದ್ದನ್ನು ಹೇಳಿ, ಭಂಡಾರ ಮಠದ ಆಸ್ತಿಗೆ ಯಾವುದೇ ಬೆಲೆ ತೆಗೆದುಕೊಳ್ಳಲು ಒಪ್ಪಲಿಲ್ಲ. ಕೊನೆಗೆ ಯಮುನಕ್ಕನ ಒತ್ತಾಯಕ್ಕೆ ತನ್ನ ಹಿರಿಯರು ಏಲಂನಲ್ಲಿ ಕೊಟ್ಟಿದ್ದ ಹನ್ನೊಂದು ರೂಪಾಯಿಯ ತೀರ್ವೆಯ ಹಣವನ್ನು ಮಾತ್ರ ತೆಗೆದುಕೊಂಡು, ರೆಕಾರ್ಡಿನ ಕಟ್ಟನ್ನು ಹುಸೇನ್ ಬ್ಯಾರಿಯಲ್ಲಿ ಮರುದಿನ ಮಿತ್ತಬೈಲಿಗೆ ಕಳುಹಿಸುವಂತೆ ಹೇಳಿದರು.

ಗೌರಮ್ಮ ಯಮುನಕ್ಕನನ್ನು ಊಟ ಮಾಡಿಸಿ ದೇವಸ್ಥಾನಕ್ಕೆ ಕರೆದುಕೊಂಡು ಹೋಗಿ ಪೂಜೆ ಮಾಡಿಸಿ, ಮನೆಗೆ ಬಂದಾಗ ರಾಮಣ್ಣನೂ ಸುಬ್ರಾಯನೂ ಕಾಸರಗೋಡಿನಿಂದ

ಬಂದವರು ಅವರನ್ನು ಕಾಯುತ್ತಿದ್ದರು. ರಾಮಣ್ಣ ತಾಯಿಯ ಹಾಗೂ ಗೌರಮ್ಮನ ಕಾಲು ಮುಟ್ಟಿ ನಮಸ್ಕರಿಸಿ, ನರಸಯ ಭಂಡಾರಿಗಳೂ, ಸುಬ್ರಾಯ ಕಮ್ತಿಯವರೂ ಮಿತ್ತಬೈಲಿನ ಪಟೇಲಗಿರಿಯನ್ನು ಹೇಗೆ ತನಗೆ ಮಾಡಿಸಿ ಕೊಟ್ಟರು ಎಂಬುದನ್ನು ವಿವರಿಸಿದ. ನರಸಯ ಭಂಡಾರಿಗಳು ಎಲ್ಲಾ ಖರ್ಚುಗಳನ್ನು ತಾವೇ ಕೊಟ್ಟು ಸುಬ್ರಾಯ ಕಮ್ತಿಯಿಂದ ಅದನ್ನು ಮಾಡಿಸಿದರು ಎಂಬುದನ್ನು ಕೇಳಿ ಯಮುನಕ್ಕನ ಗಂಟಲು ಕಟ್ಟಿತು. ಕಣ್ಣು ತುಂಬಿತು. ಏನೂ ಮಾತನಾಡಲು ತೋಚದೆ ಕಮ್ತಿಯ ತಲೆ ಸವರಿ ಆಶೀರ್ವಾದ ಮಾಡಿದರು. ತಾಯಿ, ಮಗ ಮತ್ತೊಮ್ಮೆ ನರಸಯ ಭಂಡಾರಿಗಳ ಕಾಲು ಮುಟ್ಟಿ ನಮಸ್ಕರಿಸಿದರು. ಗೌರಮ್ಮನನ್ನು ಯಮುನಕ್ಕ ಅಪ್ಪಿ ಹಿಡಿದು "ನಿಮ್ಮ ಮನೆಯ ಋಣ ನಮ್ಮಿಂದ ತೀರಿಸಲು ಸಾಧ್ಯವಿಲ್ಲ" ಎಂದಾಗ ಭಂಡಾರಿಗಳು, "ನಾವು ಒಂದೇ ಮನೆಯವರು ಎಂಬುದನ್ನು ಮರೆಯಬೇಡ" ಎಂದು ಸಲಿಗೆಯಿಂದ ಗದರಿಸಿದರು. ಯಮುನಕ್ಕ ಸುಬ್ರಾಯ ಕಮ್ತಿಯನ್ನು ಕರೆದು ತನ್ನ ಕೊರಳಲ್ಲಿದ್ದ ಚಿನ್ನದ ಸರ, ಅದರಲ್ಲಿ ತೂಗುತ್ತಿದ್ದ ರಾಣಿ ಮೊಹರ್‌ನ ಡಾಲರನ್ನು ಅವನ ಕೈಯಲ್ಲಿ ಕೊಟ್ಟಾಗ ಕಮ್ತಿ ತೆಗೆದುಕೊಳ್ಳಲು ನಿರಾಕರಿಸಿದ. "ನಿನ್ನ ಹೆಂಡತಿಗೆ ನನ್ನ ಆಶೀರ್ವಾದ" ಅಂತ ಹೇಳಿದಾಗಲೂ ತೆಗೆದುಕೊಳ್ಳದ ಕಮ್ತಿಗೆ ನರಸಯ ಭಂಡಾರಿಗಳು "ಅಕ್ಕನ ಆಶೀರ್ವಾದ ಅದು ತೆಗೆದುಕೋ" ಎಂದರು.

''ರಾಮಣ್ಣ, ಸುಬ್ರಾಯ, ನಮ್ಮ ಹಿರಿಯರ ಕಾಲದಿಂದಲೂ ನಡೆದುಕೊಂಡ ಬಂದ ಈ ಬಾಂಧವ್ಯವನ್ನು ಎಷ್ಟು ಕಷ್ಟದಿಂದಾದರೂ ಮರೆಯದೆ ನಡೆಸಿಕೊಂಡು ಬಂದಿರಿ ಎಂದಾದರೆ ಅದು ನಮ್ಮ ಹಿರಿಯರಿಗೆ ನೀವು ಕೊಡುವ ಗೇಣಿ. ಅದನ್ನು ಉಳಿಸಿಕೊಳ್ಳಿ. ಸುಬ್ರಾಯ, ಯಮುನಾ ನಿನಗೆ ತಾಯಿಯಂತೆ ಎಂದು ಮರೆಯಬೇಡ''.

ನರಸಯ್ಯ ಭಂಡಾರಿಯವರು ಅವರನ್ನು ಕಳುಹಿಸಿ ಕೊಡುವಾಗ ತಹಶೀಲ್ದಾರರು ಬಂದು, ಪಟೇಲಗಿರಿ ವಹಿಸಿ ಕೊಡುವವರೆಗೆ ಇಂದಿನ ವಿಷಯಗಳೆಲ್ಲ ಗುಟ್ಟಿನಲ್ಲಿರಲಿ ಎಂದರು.

ಎರಡು ದಿನ ಕಳೆಯುವಾಗ ಸುಬ್ರಾಯ ಕಮ್ತಿಯ ಉಗ್ರಾಣಿ ಬಂದು, ಇನ್ನೆರಡು ದಿನದಲ್ಲಿ, 'ಕೆಡ್ಡಸ'ದ ಮರುದಿನ ತಹಶೀಲ್ದಾರರು ಮಿತ್ತಬೈಲಿಗೆ ಬರುತ್ತಾರೆ ಎಂದು ಹೇಳಿಕೆ ಕೊಟ್ಟ.

ರಾಮಣ್ಣ, ದುಗ್ಗಪ್ಪನನ್ನು ಕರೆದು ಮರು ದಿನದ ಕೆಡ್ಡಸದ ಬೇಟೆಯ ಕಾರ್ಯಕ್ರಮ ರದ್ದುಪಡಿಸುವಂತೆ ತಿಳಿಸಿದ. ಕೆಡ್ಡಸದ ಬೇಟೆ ಎಂದರೆ ದುಗ್ಗಪ್ಪನ ಬಹಳ ದೊಡ್ಡ ಪೌರುಷದ ಬೇಟೆ. ವರ್ಷಕ್ಕೊಮ್ಮೆ ಕಾಡಿಗೆ ಹೋಗಿ ಒಕ್ಕಲಿನವರ ಜೊತೆ ಬೇಟೆಯಾಡಿ ಬರುವಾಗ ತಿಂಗಳುಗಟ್ಟಲೆಗೆ ಬೇಕಾಗುವಷ್ಟು ಮಾಂಸದ ಮೃಗಗಳನ್ನು ಗುಡಿಸಿಕೊಂಡು ಬರಬೇಕು. ಒಕ್ಕಲಿನವರಿಗೆ, ತಡಿಕೆಯವರಿಗೆಲ್ಲಾ ಗೌಜಿಯ ಬೇಟೆಯೆಂದರೆ ಕೆಡ್ಡಸದ ಬೇಟೆ. ಕೆಲವೊಮ್ಮೆ ಜಗಳ, ಪೆಟ್ಟು ಪ್ರಾರಂಭವಾಗುವುದೇ ಈ ಬೇಟೆಯಿಂದ. ಹಾಗೆ ಪ್ರಾರಂಭವಾದ ಪೆಟ್ಟು, ಗಲಭೆಗಳು ವರ್ಷವಿಡೀ ಹೊಗೆಯಾಡುತ್ತಾ ಇರುವುದುಂಟು.



ಹಾಗಾಗಿ ಈ ಪಟೇಲಗಿರಿಯ ಮಧ್ಯೆ ಪೆಟ್ಟು, ಗಲಭೆಗಳೇನಾದರೂ ಆಗುವುದು ಬೇಡ ಎಂದು ರಾಮಣ್ಣ ಬೇಟೆಯನ್ನು ನಿಲ್ಲಿಸಿದ್ದನು. ಯಮುನಕ್ಕನೂ ದುಗ್ಗಪ್ಪನನ್ನು ಗದರಿಸಿ ಮನೆಯಲ್ಲೇ ಇರುವಂತೆ ಹೇಳಿದರು. ದುಗ್ಗಪ್ಪನಿಗೆ ಇಷ್ಟೆಲ್ಲಾ ತಯಾರು ಮಾಡಿ ಈಗ ಬೇಟೆಗೆ ಹೋಗುವುದು ಬೇಡ ಎಂದರೆ ಹೇಗಾಗಬಹುದು! ಅದರಲ್ಲೂ ಬಾರಬೈಲಿನ ತ್ಯಾಂಪಣ್ಣನ ಮುಂದೆ ತಮ್ಮ ಗೌರವ ಉಳಿಯಬಹುದಾ?

ದುಗ್ಗಪ್ಪ ಯಮುನಕ್ಕನ ಪ್ರೀತಿಯ ಸಾಕುಮಗ. ತಂಗಿ ಮರಣ ಹೊಂದುವಾಗ ಮಗು ದುಗ್ಗಪ್ಪನನ್ನು ಯಮುನಕ್ಕನ ಕೈಗೆ ಹಾಕಿ ಕೊನೆಯುಸಿರೆಳೆದಿದ್ದಳು. ಅವನನ್ನು ತಾಯಿಯಂತೆ ಸಾಕಿದ್ದ ಯಮುನಕ್ಕ, ಹಿರಿಮಗ ರಾಮಣ್ಣನಿಗಿಂತಲೂ ಹೆಚ್ಚಿನ ಪ್ರೀತಿಯಿಂದ ಬೆಳೆಸಿದ್ದರು. ಕಡಂಬಾರಿನ ಅಯ್ಯನ ಶಾಲೆಗೆ ಕಳುಹಿಸಿ ನಾಲ್ಕು ವರ್ಷ ವಿದ್ಯೆ ಕಲಿಸಿದ್ದರು. ಆತ ರಾಮಣ್ಣನಂತಲ್ಲ. ತಾಯಿಯ ಅತಿಯಾದ ಪ್ರೀತಿಯಿಂದ ಸ್ವಲ್ಪ ಹಠಮಾರಿಯಾಗಿದ್ದ. ಮುಂಗೋಪಿಯಾಗಿ ಬೆಳೆದ ದುಗ್ಗಪ್ಪ ಯಾರದಾದರೂ ಮಾತು ಕೇಳುತ್ತಾನೆಂದರೆ ಅದು ಯಮುನಕ್ಕ, ತಪ್ಪಿದರೆ ರಾಮಣ್ಣನದು ಮಾತ್ರ. ಅವರ ಅಪ್ಪಣೆ ಅವನಿಗೆ ವೇದ ವಾಕ್ಯ. ಅವರ ಮಾತಿಗೆ ಮಿಸುಕಾಡಲಾರ. ತಲೆಯ ಮೇಲೆ ಕೈ ಹೊತ್ತು ಕುಳಿತಿದ್ದ ದುಗ್ಗಪ್ಪನನ್ನು ರಾಮಣ್ಣ ತೋಟದ ಕೆರೆಯ ಕಟ್ಟಹುಣಿಗೆ ಕರೆದೊಯ್ದ. ಕಟ್ಟಹುಣಿಯಲ್ಲಿ ಕುಳಿತುಕೊಂಡು, ಇನ್ನು ಎರಡು ದಿನ ಕಳೆದು ತಹಶೀಲ್ದಾರರು ಬಂದು ಮಿತ್ತಬೈಲಿನ ಪಟೇಲಗಿರಿಯನ್ನು ಕುಟುಂಬದವರಿಗೆ ವಹಿಸಿಕೊಡುತ್ತಾರೆ. ತನ್ನನ್ನು ಊರಿನ ಪಟೇಲ ಮಾಡುತ್ತಾರೆ ಎಂದು ಹೇಳಿದಾಗ ದುಗ್ಗಪ್ಪ ರಾಮಣ್ಣನನ್ನು ಅಪ್ಪಿ ಎತ್ತಿ ಹಿಡಿದು ಎರಡು ಸುತ್ತು ತಿರುಗಿಸಿದ.

''ಇದಕ್ಕೇ ನೋಡು ನಿನ್ನಲ್ಲಿ ಕೆಡ್ಡಸದ ಬೇಟೆ ಬೇಡ ಎಂದದ್ದು. ತಹಶೀಲ್ದಾರ್ ಬರುವವರೆಗೆ ಈ ಸುದ್ದಿ ಗುಟ್ಟಿನಲ್ಲಿರಲಿ''.

''ಯಾಕೆ ಗುಟ್ಟಲ್ಲಿಡಬೇಕು ರಾಮಣ್ಣ?''

''ಯಾಕೆಂದರೆ ಪಟೇಲಗಿರಿಯ ಮೇಲೆ ಕಣ್ಣಿಟ್ಟು ಎಷ್ಟೋ ಜನ ಪ್ರಯತ್ನಿಸುತ್ತಿದ್ದಾರೆ. ಸುದ್ದಿ ಸಿಕ್ಕಿದರೆ ಎದುರರ್ಜಿ ಕೊಟ್ಟು ತಪ್ಪಿಸಲು ಎಷ್ಟೋ ಜನ ಇದ್ದಾರೆ. ಅದಕ್ಕೆ ಪಟೇಲಗಿರಿ ಕೈಗೆ ಬರುವವರೆಗೆ ಜಾಗ್ರತೆಯಲ್ಲಿರುವ''.

''ಹಾಗೆ ಯಾರಾದರೂ ಫಿರ್ಯಾದಿ ಕೊಟ್ಟರೆ ಅವನ ಎದೆಗೆ ಚೂರಿ ಹಾಕುತ್ತೇನೆ. ಅದನ್ನೆಲ್ಲ ನನಗೆ ಬಿಡು''

''ಆಗ ಕೊಲೆಗಾರನ ಅಣ್ಣನಿಗೆ ಪಟೇಲಗಿರಿ ಕೊಡಬಾರದೆಂದು ತಹಶೀಲ್ದಾರರು ಬರೆದಿಟ್ಟು ಹೋಗ್ತಾರೆ''

''ಹೂಂ, ಆಯಿತು. ಎರಡು ದಿನ ಅಲ್ವ, ಬಾಯಿ ಮುಚ್ಚಿ ಕುಳಿತುಕೊಳ್ಳುತ್ತೇನೆ. ಆದರೆ ಅನಂತರ ಸುಮ್ಮನಿರಬೇಕು ಎಂದರೆ ನನ್ನಿಂದಾಗದು ಪಟೇಲರೇ''.

''ಹಾಗಾದರೆ ಇನ್ನೊಂದು ಸುದ್ದಿ ಇದೆ. ಇದಕ್ಕಿಂತಲೂ ದೊಡ್ಡ ಸುದ್ದಿ. ನಿನ್ನಲ್ಲಿ ಹೇಳುವುದಿಲ್ಲ ನಾನು. ಹೇಳಿದರೆ ಅನರ್ಥ ಮಾಡುತ್ತೀ ನೀನು''

''ಅದೆಂತಹದು ರಾಮಣ್ಣ ಇದಕ್ಕಿಂತಲೂ ದೊಡ್ಡ ಸುದ್ದಿ?''

''ನನ್ನ ತಲೆಯ ಮೇಲೆ ಕೈಯಿಟ್ಟು ಆಣೆ ಹಾಕಿ ಹೇಳು. ಅಮ್ಮ ಹೇಳುವವರೆಗೆ ಈ ಸುದ್ದಿಯನ್ನು ಯಾರಲ್ಲಿಯೂ ಹೇಳುವುದಿಲ್ಲಾಂತ''.

''ನಿನ್ನಾಣೆ. ಅಮ್ಮ ಹೇಳುವವರೆಗೆ ನಾನು ಸುದ್ದಿಯ ಚಕಾರ ತೆಗೆಯುವುದಿಲ್ಲ ಆಯ್ತಾ''

ರಾಮಣ್ಣ, ದುಗ್ಗಪ್ಪನಿಗೆ ನರಸಯ ಭಂಡಾರಿಗಳ ಮತ್ತು ಭಕ್ತರ ಮತದ ಬಾರಬೈಲಿನ ಆಸ್ತಿ ಖರೀದಿಸಿದುದನ್ನು ವಿವರಿಸಿದ. ದುಗ್ಗಪ್ಪನಿಗೆ ಸಂತೋಷದಿಂದ ಗಂಟಲು ಉಕ್ಕಿ ಬಂತು. ಸ್ವಲ್ಪ ಹೊತ್ತು ಅಲ್ಲೇ ಕಟ್ಟಪುಣಿಯಲ್ಲಿ ಮಲಗಿಕೊಂಡ. ಅವನಿಗೆ ಈ ಸುದ್ದಿ ಕೇಳಿ ತನ್ನ ಎದೆ ಎಲ್ಲಿಯಾದರೂ ಸಂತೋಷದಿಂದ ಒಡೆದು ಹೋಗುತ್ತದೋ ಎಂಬಂತಾಯಿತು.

''ರಾಮಣ್ಣ, ತಾಯಿಯಾಣೆ ಇದು ಸತ್ಯ ಅಲ್ವ? ಬಾ, ಹೋಗುವ. ನನಗೆ ಇಂದು ತಾಯಿಯ ಕಾಲು ಹಿಡಿಯಬೇಕು, ಈಗಲೇ''.

ರಾಮಣ್ಣ ಅವನಲ್ಲಿ ಮತ್ತೆ ಮತ್ತೆ ಸುದ್ದಿಯನ್ನು ಗುಟ್ಟಿನಲ್ಲಿಡಬೇಕೆಂದು ಮನವೊಲಿಸಿ ಮನೆಗೆ ಬರುವಾಗ ಚಾವಡಿಯಲ್ಲಿ ಕುಳಿತಿದ್ದ ಯಮುನಕ್ಕನಿಗೆ ದುಗ್ಗಪ್ಪನ ನಡವಳಿಕೆ ನೋಡಿಯೇ ತಿಳಿಯಿತು, ರಾಮಣ್ಣ ದುಗ್ಗಪ್ಪನಿಗೆ ವಿಷಯ ತಿಳಿಸಿದ್ದಾನೆಂದು. ಅವರು ಮನಸ್ಸಲ್ಲೇ ನಕ್ಕರು. ಮಲರಾಯನ ಗುಂಡಕ್ಕೆ ಅಡ್ಡ ಬಿದ್ದು ತನ್ನ ಕಾಲು ಹಿಡಿದ ದುಗ್ಗಪ್ಪನ ಕಿವಿ ಹಿಡಿದು ತಿರುವಿದರು. ನೋಡುತ್ತಿದ್ದವರಲ್ಲಿ ಯಾರೋ ಒಬ್ಬರು ಹೇಳಿದರು, ''ಎಲ್ಲೋ ಒಂದು ಜಗಳ ಮಾಡಿ ಬಂದಿರಬೇಕು'' ಎಂದು. ದುಗ್ಗಪ್ಪನಿಗೆ ಮಾತ್ರ ಇನ್ನು ಎರಡು ದಿನ ಹೇಗೆ ಕಳೆಯುವುದೆಂಬುದೇ ಚಿಂತೆ.

ಎರಡು ದಿನ ಕಳೆಯಿತು. ತಹಶೀಲ್ದಾರರು, ಮಣೆಗಾರರು, ವರ್ಕಾಡಿಯ ಪಟೇಲರು, ಮಂಜೇಶ್ವರದ ಶಾನುಭೋಗರು ಮಿತ್ತಬೈಲಿನ ಅಂಗಳಕ್ಕೆ ಬಂದರು. ತಹಶೀಲ್ದಾರರು ಸರಕಾರದ ಪಟೇಲಗಿರಿಯ ಆದೇಶವನ್ನು ರಾಮಣ್ಣನ ಕೈಯಲ್ಲಿ ಕೊಟ್ಟು, ವರ್ಕಾಡಿ ಪಟೇಲರಲ್ಲಿ ಹೇಳಿ ಪಟೇಲಗಿರಿಯ ರಿಕಾರ್ಡುಗಳನ್ನೆಲ್ಲಾ ಮಿತ್ತಬೈಲಿನ ಗರೋಡಿಯಲ್ಲಿರಿಸಿದರು. ತಹಶೀಲ್ದಾರರು, ಮಣೆಗಾರರು ರಾಮಣ್ಣನನ್ನು 'ರಾಮಣ್ಣ ಪಟೇಲರು' ಎಂದು ಕರೆದಾಗ, ಮಿತ್ತಬೈಲಿನ ಬೆಟ್ಟುಗದ್ದೆಯಲ್ಲಿ ಕದನಿ ಸಿಡಿಯಿತು. ಉಗ್ರಾಣಿ ಪೂವಣಿ ಬೆಳಗ್ಗೆಯೇ ಇಡೀ ಊರನ್ನು ಮಿತ್ತಬೈಲಿನ ಅಂಗಳದಲ್ಲಿ ಸೇರಿಸಿದ್ದ. ಅವರೆಲ್ಲರ ಎದುರಲ್ಲೇ ತಹಶೀಲ್ದಾರರು ಪಟೇಲಗಿರಿಯನ್ನು ಮಿತ್ತಬೈಲಿನ ರಾಮಣ್ಣಾಳ್ವರಿಗೆ ವಹಿಸಿಕೊಟ್ಟು ಎಳನೀರು ಕುಡಿದು ಸುಬ್ರಾಯ ಕಮ್ತಿಯ ಜೊತೆ ಮಂಜೇಶ್ವರಕ್ಕೆ ಹೊರಟರು. ಸುಬ್ರಾಯ ಕಮ್ತಿ ಚಾವಡಿಯಲ್ಲಿ ಕುಳಿತಿದ್ದ ಯಮುನಕ್ಕನನ್ನು ತಹಶೀಲ್ದಾರರಿಗೆ ತೋರಿಸಿ, ''ಇವರು ನಮ್ಮೆಲ್ಲರ ತಾಯಿ'' ಎಂದು ಪರಿಚಯ ಮಾಡಿಕೊಡುವಾಗ ತಹಶೀಲ್ದಾರರು, ಪಟೇಲಗಿರಿಯ ಹಿಂದಿರುವ ಯಜಮಾನಿ ಇವರೇ ಎಂದು ಮನಸ್ಸಿನಲ್ಲೇ ಅಂದುಕೊಂಡರು. ತಹಶೀಲ್ದಾರರು ಹೋದ ಮೇಲೆ ಸ್ವಲ್ಪ ಹೊತ್ತು ದುಗ್ಗಪ್ಪ ಹಾಗೂ ಬ್ಯಾರಿಯ ಸಿಡಿಮದ್ದುಗಳ ಭರಾಟೆಯಲ್ಲಿ



ಕಿವಿ ಬಿಟ್ಟು ಕುಳಿತುಕೊಳ್ಳಲು ಸಾಧ್ಯವಾಗಲಿಲ್ಲ. ಊರಿನ ಜನರಿಗೆ ಚಪ್ಪರದಡಿಯಲ್ಲಿ ಅವಲಕ್ಕಿ, ಬಾಳೆಹಣ್ಣು, ಎಳನೀರು, ಪಾನಕಗಳ ಸೇವೆ ನಡೆಯಿತು.

ಸಂಜೆಯಾಗುವಾಗ ಊರವರು ಒಬ್ಬೊಬ್ಬರೇ ಬಂದು ಹೊಸ ಪಟೇಲರನ್ನು ಕಂಡು ಹೋದರು. ಕೆಲವರು ಕೋಳಿ ಹಿಡಿದುಕೊಂಡು ಬಂದರೆ, ಇನ್ನು ಕೆಲವರು ಮುಡಿ ಅಕ್ಕಿ ಕಾಣಿಕೆಯಾಗಿ ತಂದರು. ಬಡವರು ತಂದದ್ದನ್ನೆಲ್ಲಾ ಹಿಂದೆ ಕಳುಹಿಸಿದ ಹೊಸ ಪಟೇಲರ ಕ್ರಮ ನೋಡಿ ಗ್ರಾಮದವರಿಗೆ ಖುಷಿಯಾಯಿತು. ಬಡವರೆಲ್ಲಾ ಬಾಯಿ ತುಂಬಾ ಆಶೀರ್ವಾದ ಮಾಡಿ ಗುತ್ತಿನ ಯಜಮಾನಿಯ ಕಾಲಿಗೆ ನಮಸ್ಕಾರ ಮಾಡಿ ಹೋದರು.

ಮತ್ತೆರಡು ದಿನಗಳಲ್ಲಿ ಇಡೀ ಊರೇ ಪಟೇಲರನ್ನು ನೋಡಲು ಬಂತು. ಆದರೆ ಬಾರಬೈಲಿನ ತ್ಯಾಂಪಣ್ಣನ ಮನೆಯಿಂದ ಯಾರೂ ಬಂದಿಲ್ಲ ಎಂಬುದನ್ನು ಯಮುನಕ್ಕ ಗಮನಿಸಿದರು. ಎರಡು ದಿನ ಕಳೆದು, ಮೂರನೇ ದಿನ ಸಂಜೆ ರಾಮಣ್ಣನನ್ನೂ, ದೆಯ್ಯುವನ್ನೂ ಕರೆದುಕೊಂಡು ಯಮುನಕ್ಕ ಬಾರಬೈಲಿಗೆ ಬಂದರು. ಯಮುನಕ್ಕ ಬಂದಾಗ ತ್ಯಾಂಪಣ್ಣ ಮನೆಯಲ್ಲಿರಲಿಲ್ಲ. ತ್ಯಾಂಪಣ್ಣನ ತಾಯಿ ಆಚಕ್ಕ, ಹೆಂಡತಿ ರತ್ನಾ ಯಮುನಕ್ಕನನ್ನೂ, ರಾಮಣ್ಣನನ್ನೂ ಸ್ವಾಗತಿಸಿ ಎಳನೀರು ತೆಗೆಸಿ ಕುಡಿಯಲು ಕೊಟ್ಟು ಗೌರವಿಸಿದರು.

''ಅತ್ತೇ, ಹಿರಿಯರ ಕಾಲು ಹಿಡಿದು ಆಶೀರ್ವಾದ ಪಡೆದುಕೊಂಡು ಬರಬೇಕೊಂತ ರಾಮಣ್ಣ ಬಂದಿದ್ದಾನೆ. ಅವನನ್ನು ಸರಕಾರ ಮಿತ್ತಬೈಲಿನ ಪಟೇಲರಾಗಿ ನೇಮಕ ಮಾಡಿದೆ. ನನಗೂ ತ್ಯಾಂಪಣ್ಣನಲ್ಲಿ ಸ್ವಲ್ಪ ಕೆಲಸ ಇತ್ತು. ನಿಮ್ಮನ್ನೂ ನೋಡದೆ ತುಂಬಾ ದಿನಗಳಾದವು. ಹಾಗೆ ಬಂದೆವು ನಾವು''.

ರಾಮಣ್ಣ ಅಜ್ಜಿಯ, ತ್ಯಾಂಪಣ್ಣನ ಹೆಂಡತಿ ರತ್ನಾಳ ಕಾಲು ಮುಟ್ಟಿ ನಮಸ್ಕರಿಸಿದ. ಆಚಕ್ಕ ತುಂಬು ಮನಸ್ಸಿನಲ್ಲಿ ಅವನ ಬೆನ್ನು ಸವರಿ ಹೇಳಿದರು.

''ನೂರು ಕಾಲ ಬಾಳಿ ಒಳ್ಳೆಯ ಪಟೇಲನಾಗು. ಒಳ್ಳೆಯ ಹೆಸರು ಪಡೆ ಮಗಾ''.

ಯಮುನಕ್ಕ ಅಂಗಳಕ್ಕೆ ಇಳಿದವರು,

''ಈ ಕೊಳಕೆಬೈಲು ಎಲ್ಲಾ ಭಂಡಾರ ಮತದ್ದು ಅಲ್ಲವಾ ಅತ್ತೆ? ಮತ್ತೆ ಭಕ್ತರ ಮತದ್ದು ಯಾವುದು? ಮನೆ, ಹಿತ್ತಲು, ಎದುರಿನ ತೋಟ, ಮನೆಯ ಪಕ್ಕದ ಬೆಟ್ಟು ಗದ್ದೆಗಳು ಭಕ್ತರ ಮತದ್ದಲ್ಲವೇ?''

ಯಮುನಕ್ಕ ಕೇಳುವಾಗ ಆಚಕ್ಕನಿಗೆ ಆಶ್ಚರ್ಯವಾದರೂ ಅಂಗಳ ಇಳಿದು ಜಮೀನನ್ನೆಲ್ಲ ತೋರಿಸಿದರು.

''ಅತ್ತೆ, ಮಿತ್ತಬೈಲಿಗೆ ಬಂದು ಬಹಳ ಸಮಯವಾಯಿತು. ನಾಳೆ ತ್ಯಾಂಪಣ್ಣ ಬರುವಾಗ ನೀವೂ ಬನ್ನಿ. ಎರಡು ದಿನ ಇದ್ದು ಬರಬಹುದು. ನಿಮ್ಮ ಕೈಯ ಕೋಳಿ ಗಸಿ ತಿನ್ನದೆ ಎಷ್ಟು ಸಮಯವಾಯಿತೋ ಏನೋ?''

''ನೀನು ಇಂದು ಇಲ್ಲೇ ಇರು. ಕೋಳಿಯ ಗಸಿ, ಮಣ್ಣಿನ ಕಾವಲಿಯ ರೊಟ್ಟಿಯನ್ನೂ ಮಾಡುತ್ತೇನೆ. ನನಗೆ ಗೊತ್ತು, ಆ ರೊಟ್ಟಿ ಎಂದರೆ ನಿನಗೆ ಜೀವಾಂತ. ನಾಳೆ ಬೆಳಗ್ಗೆ

ತ್ಯಾಂಪಣ್ಣ ನಿನ್ನನ್ನು ಮಿತ್ತಬೈಲಿಗೆ ಬಿಟ್ಟು ಬರಬಹುದು'' ಅಜ್ಜಿ ಪ್ರೀತಿಯಲ್ಲಿ ಹೇಳಿದರು.

''ಬೇಡ ಅತ್ತೆ, ಈಗ ಬೆಳಗ್ಗೆ ಸಂಜೆ ರಾಮಣ್ಣನನ್ನು ಕಾಣಲು ಬರುವವರಿಗೆ ಲೆಕ್ಕ ಇಲ್ಲ. ಅಲ್ಲದೆ ನಾಳೆ ಭಂಡಾರಿಗಳ ಹಾಗೂ ಭಕ್ತರ ಜನ ಬರಬಹುದು. ಹಾಗಾಗಿ ನಾನಲ್ಲಿ ಇರಬೇಕು. ನೀವೇ ನಾಳೆ ತ್ಯಾಂಪಣ್ಣನೊಟ್ಟಿಗೆ ಬಂದಿದ್ದರೆ ಒಳ್ಳೆಯದಿತ್ತು. ಬಂದವರು ಎರಡು ದಿನ ಇದ್ದು ಬನ್ನಿ. ತ್ಯಾಂಪಣ್ಣನನ್ನು ಅಗತ್ಯ ಬರಹೇಳಿ''.

''ಆಯಿತು ಮಗಾ. ಹೇಳುತ್ತೇನೆ. ಸಾಧ್ಯವಾದರೆ ನಾನೂ ಬರುತ್ತೇನೆ''.

''ರತ್ನಾ, ನೀನೂ ಬಾ ಅತ್ತೆಯ ಜೊತೆ''.

ಯಮುನಕ್ಕ, ಆಚಕ್ಕನನ್ನೂ ರತ್ನಳನ್ನೂ ಬರಹೇಳಿ ಅಂಗಳ ಇಳಿದರು. ಬಾರಬೈಲಿನ ಆಳು ಮಕ್ಕಳು ಬಂದು ಹೊಸ ಪಟೇಲರಿಗೆ ಕೈ ಮುಗಿದರು. ಅಂಗಳದ ಕೊನೆಯಿಂದ 'ಅಡ್ಡ ಬಿದ್ದೆವು ಒಡೆಯ' ಎಂದು ಹೇಳಿಕೊಂಡರು.

ಯಮುನಕ್ಕನೂ ರಾಮಣ್ಣನೂ ಎಲ್ಲರನ್ನೂ ಮಾತನಾಡಿಸಿಕೊಂಡು, ಸುಖ ದುಃಖ ವಿಚಾರಿಸಿಕೊಂಡು ಬೈಲು ಇಳಿದು ಮಿತ್ತಬೈಲಿನ ಹಾದಿ ತುಳಿದರು. ಹೊಳೆಯ ಬದಿ ಕಾಯುತ್ತಿದ್ದ ಕೆಲಸಗಾರರೂ, ದುಗ್ಗಪ್ಪನೂ ಅವರ ಜೊತೆ ಸೇರಿಕೊಂಡರು.

ಬಾರಬೈಲಿನ ಗುಡ್ಡೆಗೆ ಹೋದವರು, ಪದವಿನ ಪೇಟೆಗೆ ಬಂದು ಸೇರಿದವರು ಎಲ್ಲರ ಬಾಯಲ್ಲೂ ಯಮುನಕ್ಕ ಬಾರಬೈಲಿಗೆ ಬಂದದ್ದೇ ಸುದ್ದಿಯಾಯಿತು. ತ್ಯಾಂಪಣ್ಣ ಹೊಸ ಪಟೇಲರನ್ನು ಕಾಣಲು ಹೋಗದೆ ಇರುವುದರಿಂದಲೇ ಯಮುನಕ್ಕ ಬಂದಿರಬಹುದೆಂದು ಆಚಕ್ಕನೂ ರತ್ನಳೂ ಮಾತಾಡಿಕೊಂಡರು. ತ್ಯಾಂಪಣ್ಣ ಮಿತ್ತಬೈಲಿನ ಪಟೇಲಗಿರಿಯನ್ನು ಮಾಂಕರಾಲರ ಮಗನಿಗೆ ಮಾಡಿಸಿ ಕೊಡುತ್ತೇನೆಂದು ಮೀಸೆ ತಿರುವುತ್ತಿದ್ದ ಸುದ್ದಿ ಮಿತ್ತಬೈಲಿನ ಯಮುನಕ್ಕನ ಕಿವಿಗೆ ಬಿದ್ದಿರಬೇಕು. ಹಿಂದಿನಿಂದಲೂ ಇದ್ದ ವೈಮನಸ್ಸು ಈಗ ಮತ್ತೂ ಹೆಚ್ಚಾಯಿತು. ಈಗ ಯಮುನಕ್ಕ ಕೊಟ್ಟ ಪೆಟ್ಟು ಬಾರಬೈಲು ತ್ಯಾಂಪಣ್ಣನ ಪರಾಕ್ರಮಕ್ಕೊಂದು ಸವಾಲು. ಅದನ್ನು ತೋರಿಸಲೆಂದೇ ಯಮುನಕ್ಕ ಬಾರಬೈಲಿಗೆ ಬಂದದ್ದೆಂದು ಎಲ್ಲರೂ ಲೆಕ್ಕ ಹಾಕಿದಕಾದರೂ, ಆಚಕ್ಕನ ಮನಸ್ಸಿನ ಒಳಗೆ ಎರಡು ಮಾತುಗಳು ಚುಚ್ಚುತ್ತಲಿದ್ದವು. ಒಂದು ಯಮುನಾ  ಭಕ್ತರ ಮಠ, ಭಂಡಾರ ಮಠದ ವಿವರ ಕೇಳಿದ್ದು, ಇನ್ನೊಂದು ಮರುದಿನ ಬೆಳಗ್ಗೆ ಅವರ ಜನ ಮಿತ್ತಬೈಲಿಗೆ ಬರುತ್ತಿದ್ದಾರೆ ಎಂದದ್ದು.

ಕಳೆದ ಮೂರ್ನಾಲ್ಕು ತಲೆಮಾರುಗಳಿಂದ ಬೆಳೆದು ಬಂದಿದ್ದ ಹಗೆತನ ಕಾಡಿನ ಕುಂಬು ಮರದಲ್ಲಿ ಹೊಗೆಯಾಡುತ್ತಿದ್ದ ಬೆಂಕಿಯಂತೆ, ಮಳೆ ಬರುವಾಗ ಆರಿದಂತಾಗಿ, ಬೇಸಗೆಯಲ್ಲಿ ಮತ್ತೆ ಹೊತ್ತಿಕೊಂಡು ಉರಿಯುತ್ತಿತ್ತು. ಯಮುನಕ್ಕ ಈಗ ಆ ಕುಂಬು ಮರವನ್ನೇ ಕಡಿದು ಹಾಕಬೇಕೆಂದು ಹೊರಟಿದ್ದಾರೆ. ಬಾರಬೈಲಿನವರು ಮಿತ್ತಬೈಲಿನವರ ಒಕ್ಕಲಿನವರಾಗಿದ್ದರೆ ಹೆಡೆ ಎತ್ತಿ ಕುಟುಕುವುದು ಕಮ್ಮಿಯಾಗಬಹುದೆಂದು ಅವರ ಲೆಕ್ಕಾಚಾರ.

ಸಂಜೆ ಬಂದ ತ್ಯಾಂಪಣ್ಣನಿಗೆ ತಾಯಿಯಿಂದ ವಿಷಯ ತಿಳಿದಾಗ ಆತ ಉರಿದು ಬಿದ್ದ. ಅವನಿಗೆ ದುಗ್ಗಪ್ಪನ ಆಳುಗಳು ಬಾರಬೈಲಿನ ಆಳುಗಳನ್ನು ಕಂಬಳದ ಗದ್ದೆಯಲ್ಲಿ



ಎಳೆದಾಡಿ ಹೊಳೆ ಬದಿಯ ದಣಪೆಗೆ ಕಟ್ಟಿ ಹಾಕಿದ್ದನ್ನು ಇನ್ನೂ ಮರೆಯಲಿಕ್ಕೆ ಸಾಧ್ಯವಾಗಲಿಲ್ಲ. ಹಿರಿಯರ ಕಾಲದಿಂದ ಬಂದ ಹಗೆತನ ಅವನ ರಕ್ತದಲ್ಲಿ ತುಂಬಿಕೊಂಡಿತ್ತು. ಬೀರಣ್ಣ ಬಂಟನಿಂದ ಬಂದಿದ್ದ ದ್ವೇಷದ ನೆತ್ತರು ಇಂದೂ ಬಿಸಿಯಾಗಿಯೇ ಇತ್ತು. ಅದು ಆರಿರಲಿಲ್ಲ. ಮಾಂಕರಾಲರ ಕಾಲದಲ್ಲಿ ಆ ಹಗೆತನ ಸ್ವಲ್ಪ ಕಮ್ಮಿಯಾಗಿತ್ತು. ಮಾಂಕರಾಲ, ಮೈಂದರಾಲರ ಬೀಗರು ಕಜಕೋಡಿಯವರು. ತ್ಯಾಂಪಣ್ಣನಿಗೆ ಹೆಣ್ಣು ಕೊಟ್ಟ ಮೇಲೆ ತೋರಿಕೆಗೆ ಸಂಬಂಧ ಚೆನ್ನಾಗಿತ್ತು. ಆದರೆ ಮಾಂಕರಾಲರು ಸತ್ತ ಮೇಲೆ ಮತ್ತೆ ಬಾರಬೈಲಿನವರ ಹಗೆತನದ ಬೆಂಕಿ ಒಳಗಿಂದಲೇ ಜ್ವಲಿಸತೊಡಗಿತ್ತು.

ತ್ಯಾಂಪಣ್ಣನ ಹೆಂಡತಿಯೂ ಮಾಂಕರಾಲರ ಹೆಂಡತಿಯೂ ಒಂದೇ ಮನೆಯವರು. ರತ್ನಳಿಗೆ ಅವರು ಚಿಕ್ಕಮ್ಮ. ತ್ಯಾಂಪಣ್ಣನಿಗೆ ಅತ್ತೆಯಾಗುತ್ತಾರೆ. ಹಾಗಾಗಿಯೇ ತ್ಯಾಂಪಣ್ಣ ಮಾಂಕರಾಲರನಂತರ ಅವರ ಮಕ್ಕಳಿಗೆ ಪಟೇಲಗಿರಿ ಸಿಗಬೇಕೆಂದು ಬಹಳ ಪ್ರಯತ್ನಿಸಿದ. ಆದರೆ ಈ ಯಮುನ ಎಲ್ಲರಿಗೂ ಚಳ್ಳೆ ಹಣ್ಣು ತಿನ್ನಿಸಿದಳು. ಅದನ್ನು ತೋರಿಸಲೆಂದೇ ಅವಳು ಬಾರಬೈಲಿಗೆ ಬಂದದ್ದು. ಈ ಹೆಣ್ಣು ಮಗಳು ಇಷ್ಟು ದೊಡ್ಡ ಕಾರುಬಾರು ಹೇಗೆ ಮಾಡಿದಳೆಂದು ಕೇಳಬೇಕೆಂದೇ ತ್ಯಾಂಪಣ್ಣ ಮಂಜೇಶ್ವರದ ಸುಬ್ರಾಯ ಕಮ್ತಿಯಲ್ಲಿಗೆ ಹೋಗಿದ್ದ. ಮಾಂಕರಾಲರ ಮಗನಿಗೆ ಮಾಡಿಕೊಡುತ್ತೇವೆ ಎಂದಿದ್ದ ಪಟೇಲಗಿರಿ ಯಮುನಾಳ ಮಗನಿಗೆ ಹೇಗೆ ಆಯಿತೆಂದು ಕೇಳಲು ಹೋದರೆ, ಸುಬ್ರಾಯ ಕಮ್ತಿ ಅವನನ್ನು ಗಣ್ಯವೇ ಮಾಡದೆ ಕಳುಹಿಸಿದ್ದ. ಒಪ್ಪಿದ್ದ ಸುಬ್ರಾಯ ಉಲ್ಟಾ ಆಗಬೇಕಾದರೆ ಇದರ ಹಿಂದೆ ಬಹಳ ದೊಡ್ಡ ಮಸಲತ್ತು ನಡೆದಿರಬೇಕೆಂದು ಲೆಕ್ಕ ಹಾಕಿಕೊಂಡು ತಲೆ ಕೆಳಗೆ ಹಾಕಿಕೊಂಡು ಬಂದ ತ್ಯಾಂಪಣ್ಣನಿಗೆ, ಮೆಣಸು ತಿಂದವನಿಗೆ ಬಾಯಿ ಮುಕ್ಕಳಿಸಲು ಬಿಸಿ ನೀರು ಕೊಟ್ಟಂತಾಗಿತ್ತು.

ಸಂಜೆಯವರೆಗೆ ಮಂಜೇಶ್ವರದಲ್ಲೇ ಅಲೆದಾಡಿ ಹೊರಡುವಾಗ ತ್ಯಾಂಪಣ್ಣನಿಗೆ ತಿಳಿದದ್ದು ಇಷ್ಟೇ. ಯಮುನಕ್ಕ ಭಂಡಾರ ಮಠಕ್ಕೆ ಹತ್ತು ದಿನದಲ್ಲಿ ಎರಡು ಸಲ ಬಂದಿದ್ದಳು. ಹಾಗೆ ಬಂದವಳು ಇತ್ತೀಚೆಗೆ ಭಕ್ತರು ಮತ್ತು ಭಂಡಾರಿಯವರೊಂದಿಗೆ ದೇವಸ್ಥಾನಕ್ಕೆ ಬಂದು ರಂಗಪೂಜೆ ಮಾಡಿಸಿ ಹೋಗಿದ್ದಾಳೆ. ಪಟೇಲಗಿರಿ ರಾಮಣ್ಣನಿಗೆ ಸಿಗುವಲ್ಲಿ ಭಂಡಾರಿಗಳ ಕೈವಾಡ ಇದೆ ಎಂಬ ತ್ಯಾಂಪಣ್ಣನ ಸಂಶಯ ಗಟ್ಟಿಯಾಯಿತು.ಎಷ್ಟಾದರೂ ಸುಬ್ರಾಯ ಕಮ್ತಿಯ ಮಾವ ಅಲ್ಲವೇ ಭಂಡಾರಿಯವರು. ಆದರೆ ಈ ಕೆಲಸಕ್ಕೂ ಭಕ್ತರ ಮಠದವರಿಗೂ ಏನು ಸಂಬಂಧ?

ಇಂತಹ ಸಾವಿರ ಸಮಸ್ಯೆಗಳನ್ನು ಹೊತ್ತುಕೊಂಡು ಮನೆಗೆ ಬಂದ ತ್ಯಾಂಪಣ್ಣನಿಗೆ ಯಮುನಕ್ಕ, ರಾಮಣ್ಣ ಹಾಗೂ ದುಗ್ಗಪ್ಪನನ್ನು ಕರೆದುಕೊಂಡು ಬಾರಬೈಲಿಗೆ ಯಾಕೆ ಬಂದಳು? ಇತ್ಯಾದಿ ನಾನಾ ಪ್ರಶ್ನೆಗಳು ತಲೆಯಲ್ಲಿ ತಿರುಗುತ್ತಿರುವಾಗ, ಅಮ್ಮ ಹೇಳಿದ ಒಂದು ಮಾತು ಚಾಕುವಿನಿಂದ ತಿವಿದಂತಾಯಿತು.

''ಯಮುನಾ ಭಂಡಾರ ಮಠದ ಗದ್ದೆಗಳು ಯಾವುವು? ಭಕ್ತರ ಮಠದ ಗದ್ದೆಗಳು

ಯಾವುವು? ತೋಟ ಯಾರದು ಭಕ್ತರ ಮಠದ್ದಾಂತ ಕೇಳಿದಳು.''

ಅಮ್ಮ ಇಷ್ಟು ಹೇಳಬೇಕಾದರೆ ತ್ಯಾಂಪಣ್ಣನ ಸಂಶಯ ನಿಜವಾಗುತ್ತಾ ಬಂತು. ಬಟ್ಟಲಿನ ಅನ್ನವನ್ನು ಅಲ್ಲೇ ಬಿಟ್ಟು ಅಂಗಳದಲ್ಲಿ ಅತ್ತಿತ್ತ ತಿರುಗಲು ಪ್ರಾರಂಭಿಸಿದ. ಅಮ್ಮನನ್ನು ಕರೆದು, ''ಯಮುನಕ್ಕ ಬೇರೇನು ಹೇಳಿದಳು?'' ಎಂದು ಕೇಳಿದಾಗ, ''ನಾಳೆ ನನ್ನನ್ನೂ ನಿನನ್ನೂ ಮಿತ್ತಬೈಲಿಗೆ ಬರಲು ಹೇಳಿದ್ದಾಳೆ. ಭಕ್ತರ ಮಠದ ಮೊಯ್ಲಿ, ಭಂಡಾರ ಮಠದ ಬ್ಯಾರಿ ಮಧ್ಯಾಹ್ನಕ್ಕೆ ಮೊದಲು ಮಿತ್ತಬೈಲಿಗೆ ಬರುತ್ತಾರೆ. ಆಗ, ನೀನು ಅಲ್ಲಿ ಇರಬೇಕು ಎಂದು ಹೇಳಿದ್ದಾಳೆ'' ಎಂದರು.

ತ್ಯಾಂಪಣ್ಣನಿಗೆ ಎಲ್ಲ ತಿಳಿಯದಿದ್ದರೂ ಬಾರಬೈಲು ಮನೆಯ ಅಡಿಪಾಯವೇ ಕುಸಿಯುತ್ತಿದೆ. ಅದನ್ನು ಹೇಗಾದರೂ ಅಲ್ಲಿಗೇ ನಿಲ್ಲಿಸಬೇಕು ಎಂದುಕೊಂಡು, ಮುಂಜಾನೆ ಕೋಳಿ ಕೂಗುವ ಮೊದಲೇ ಅಳಿಯಂದಿರನ್ನು ಜೊತೆಗೆ ಕರೆದುಕೊಂಡು ಮಂಜೇಶ್ವರಕ್ಕೆ ಬಂದ. ದೇವಸ್ಥಾನದ ದಾರಿಯಲ್ಲಿ ಸಿಕ್ಕಿದ ಭಕ್ತರೂ, ಭಂಡಾರಿಯವರೂ ತಮ್ಮ ಬಾರಬೈಲಿನ ಆಸ್ತಿಯನ್ನು ಮಿತ್ತಬೈಲಿನ ಯಮುನಕ್ಕನಿಗೆ ಮಾರಿದ್ದೇವೆಂದು ಹೇಳಿದಾಗ ತ್ಯಾಂಪಣ್ಣನ ಪಿತ್ತ ನೆತ್ತಿಗೇರಿತು. ಇಬ್ಬರಿಗೂ ಬೇಡದ ಮಾತುಗಳನ್ನು ಹೇಳಿ, ಕೊಲ್ಲುತ್ತೇನೆ, ಹೊಡೆಯುತ್ತೇನೆ ಎಂದು ಅಬ್ಬರಿಸುತ್ತಾ, ಬೈಯುತ್ತಾ ಬಾರಬೈಲಿಗೆ ಬಂದವನು, ತಲೆಯ ಮೇಲೆ ಕೈ ಹೊತ್ತು ಕುಳಿತ. ಮಗನಲ್ಲಿ ಆಚಕ್ಕ ಏನು ನಡೆಯಿತ್ತೆಂದು ಕೇಳಿದಾಗ, ನಡೆದದ್ದನ್ನೆಲ್ಲಾ ಹೇಳಿದ ಮಗನ ಮಾತು ಕೇಳಿ ಅವರು ಹೇಳಿದರು,

''ಈಗ ಏನು ಮಾಡ್ತಿ? ಭಕ್ತರಿಗೂ ಭಂಡಾರಿಗಳಿಗೂ ಕೊಡುತ್ತಿದ್ದ ಗೇಣಿಯನ್ನು ಯಮುನನಿಗೆ ಕೊಡುತ್ತೇವೆಂದು ಸಮಾಧಾನದಲ್ಲಿ ಹೇಳಿ ಅವಳಲ್ಲಿ ರಾಜಿಯಲ್ಲಿ ಇರುವುದು ಒಳ್ಳೆಯದಲ್ಲವಾ ನಮಗೆ?''

ಅಮ್ಮ ಅಷ್ಟು ಹೇಳಿದ್ದು ಕೇಳಿ ತ್ಯಾಂಪಣ್ಣ ಮುಖಕ್ಕೆ ಮೆಣಸಿನ ಬಿಸಿ ನೀರು ಎರಚಿ ಕೊಂಡವನಂತೆ ಉರಿಯತೊಡಗಿದ. ಒಲೆಗೆ ಹಾಕಿದ ಸಾಸಿವೆಯಂತೆ ಸಿಡಿದು ಹಾರಾಡ ತೊಡಗಿದ. ಎರಡು ತಂಬಿಗೆ ನೀರು ಕುಡಿದು ಕುಳಿತವನ ಮುಂದೆ ಹೆಂಡತಿ ಬಟ್ಟಲಲ್ಲಿ ಗಂಜಿಯನ್ನೂ ಚಟ್ನಿಯನ್ನೂ ತಂದಿಟ್ಟಳು. ಅದನ್ನು ಅವಳ ಮುಖಕ್ಕೆ ಎರಚಿ, ಅಂಗಳ ಕ್ಕಿಳಿದವನು ಅಲ್ಲೇ ಪಕ್ಕದಲ್ಲಿ ಕುಳಿತಿದ್ದ ಅಳಿಯಂದಿರನ್ನು ಕರೆದು ಹೇಳಿದ.

''ಬನ್ನಿ, ಬಾಳುಕತ್ತಿ, ಬರ್ಚಿ ತಗೊಳ್ಳಿ, ಇವತ್ತೇ ಕೊನೆಗೊಳಿಸೋಣ ಈ ಮಿತ್ತಬೈಲಿನ ಹೆಣ್ಣಿನ ಅಹಂಕಾರವನ್ನು! ಅವಳೇನು ಈ ಊರಿನ ರಾಣೀಂತ ತಿಳಿದಿದ್ದಾಳಾ? ಬನ್ನಿ ಅವಳಿಗೆ ನಾಲ್ಕು ಮಾತು ಹೇಳಿಯೇ ಬರೋಣ. ನನ್ನ ಸುದ್ದಿಗೆ ಬಂದು ಕಣಜದ ಹುಳದ ಗೂಡಿಗೆ ಕೈ ಹಾಕಿದ್ದಾಳೆ ಎಂಬುದನ್ನು ನೆನಪಿಸಿಕೊಡೋಣ. ಬಾರಬೈಲಿನವರು ಬಳೆ ಹಾಕಿ ಕುಳಿತಿಲ್ಲ ಎಂಬುದನ್ನು ತೋರಿಸೋಣ!''

ತ್ಯಾಂಪಣ್ಣ ಇಷ್ಟು ಹೇಳುವಾಗ  ಆಚಕ್ಕ ರತ್ನಳ ರಟ್ಟೆ ಹಿಡಿದು ಅಂಗಳಕ್ಕೆ ಎಳೆದು ತಂದಳು.



''ಖಬರ್‌ದಾರ್! ಅಂಗಳದಿಂದ ಬೈಲಿಗೆ ಇಳಿಯುವುದಕ್ಕೆ ಮೊದಲು ಇವಳ ಮಂಗಲಸೂತ್ರ ಬಿಚ್ಚಿ, ಕುಂಕುಮ ಅಳಿಸಿ ಹೋಗಿ. ನನ್ನ ಹೆಣಕ್ಕೂ ಒಂದು ಕಾಷ್ಟ ಮಾಡಿ ಬಿದಿರಿನ ಚಟ್ಟ ಮಾಡಿಟ್ಟು ಹೋಗಿ. ನೀವು ಹೋದ ಮೇಲೆ ಇಲ್ಲಿ ಕಾಷ್ಟ ತಯಾರಿಸಲೂ ಜನ ಇರಲಿಕ್ಕಿಲ್ಲ. ಜಾಗ್ರತೆ, ಯಾರಾದರೂ ಅಂಗಳ ಇಳಿದರೆ ಜುಮಾದಿ ದೈವದ ಮೇಲೆ ಆಣೆ. ನೀವು ಹೊಳೆ ದಾಟುವುದಕ್ಕಿಂತ ಮೊದಲು ನನ್ನ ಹೆಣ ಅಂಗಳದಲ್ಲಿರುತ್ತದೆ! ಹೋಗುವುದಾದರೆ ಹೋಗಿ!''

''ನಿಮ್ಮ ಯೋಚನೆ ನಾನು ಸಾಯಬೇಕೂಂತಲಾ? ಮರ್ಯಾದೆ ಕಳಕೊಂಡು ನಾನು ಬದುಕುವುದಿಲ್ಲ!''

– ಅಂಗಳದಲ್ಲಿ ತಲೆಯ ಮೇಲೆ ಕೈ ಹೊತ್ತು ಕುಳಿತಿದ್ದ ಮಗನನ್ನು ತಾಯಿ ಸಮಾಧಾನ ಮಾಡಿ ಚಾವಡಿಗೆ ಕರೆತಂದು ಬುದ್ಧಿ ಹೇಳಿದಳು,

''ದ್ವೇಷದ ಕೈಗೆ ಬುದ್ಧಿ ಕೊಟ್ಟು ನಿನ್ನದಷ್ಟೇ ಅಲ್ಲ, ಇಡೀ ಕುಟುಂಬದ ಜೀವನವನ್ನೇ ಹಾಳು ಮಾಡುವ ಕೆಲಸಕ್ಕೆ ನೀನು ಹೊರಟಿದ್ದಿ. ನಾವು ಮೊದಲು ಮಿತ್ತಬೈಲಿನವರ ಯೋಜನೆ ಏನೆಂದು ತಿಳಿದುಕೊಳ್ಳೋಣ. ಮುಳ್ಳು ತೆಗೆಯಲು ಮುಳ್ಳನ್ನಲ್ಲದೆ ಕೊಡಲಿ ಹಿಡಿಯಬಾರದು. ಸಮಾಧಾನದಿಂದ ಮಿತ್ತಬೈಲಿಗೆ ಹೋಗಿ ಯಮುನಾ ಏನು ಹೇಳುತ್ತಾಳೆ ಎಂಬುದನ್ನು ತಿಳಿಯುವಾ. ಮತ್ತೆ ಬಂದು ದಾರಿ ಏನೆಂದು ಯೋಚನೆ ಮಾಡುವಾ. ಯುಕ್ತಿಯಿಂದ ಪರಿಹಾರ ಹುಡುಕುವಾ, ಬಾಳು ಕತ್ತಿಯಿಂದಲ್ಲ.''

ತಾಯಿಯ ಮಾತು ಕೇಳಿದ ತ್ಯಾಂಪಣ್ಣ ಸ್ವಲ್ಪ ಮೆತ್ತಗಾದ.

''ಏನು ಮಾಡುವಾ ಈಗ?''

''ಏನೂ ಮಾಡಬೇಡ ಈಗ. ಇಂದು ಮಿತ್ತಬೈಲಿಗೆ ಹೋಗಿ ಅವರು ಏನು ಹೇಳುತ್ತಾರೆಂದು ಕೇಳುವಾ. ಅಗತ್ಯವೆಂದು ಕಂಡರೆ ನಾನು ಮಿತ್ತಬೈಲಿನಲ್ಲೇ ರಾತ್ರಿ ಕಳೆದು ಯಮುನಾಳ ಮನಸ್ಸಿನಲ್ಲಿ ಏನಿದೇಂತ ತಿಳಿಯಲು ಪ್ರಯತ್ನಿಸುತ್ತೇನೆ. ಒಳಗಿನ ಸಂಗತಿ ಏನು? ಹೊರಗೆ ಕಾಣುತ್ತಿರುವುದೂ ಒಳಗೆ ನಡೆಯುತ್ತಿರುವುದೂ ಒಂದೇನಾಂತ ತಿಳಿದು ಆಮೇಲೆ ಮುಂದಿನ ಕೆಲಸಕ್ಕೆ ಹೊರಡುವ''

ಸ್ವಲ್ಪ ತಾಳ್ಮೆಯಿಂದ ಕುಳಿತು ಯೋಚನೆ ಮಾಡಿದ ತ್ಯಾಂಪಣ್ಣನಿಗೆ ತಾಯಿ ಹೇಳಿದ ಮಾತು ಸರಿಯೆಂದು ಕಂಡಿತು. ಅವನು ತಾಯಿಯೊಂದಿಗೆ ಮಿತ್ತಬೈಲಿಗೆ ಬಂದು ತಲುಪಿದ.

ಮಿತ್ತಬೈಲಿನ ಅಂಗಳಕ್ಕೆ ಬಂದು ತಲುಪುವಾಗ ಗ್ರಾಮದ ಜನರೊಂದಿಗೆ ಕುಳಿತಿದ್ದ ರಾಮಣ್ಣ ಎದ್ದು ಅಜ್ಜಿಯನ್ನೂ ತ್ಯಾಂಪಣ್ಣನನ್ನೂ ಚಾವಡಿಗೆ ಕರೆದುಕೊಂಡು ಹೋದ. ತ್ಯಾಂಪಣ್ಣನ ಕಾಲು ಮುಟ್ಟಿದಾಗ ಬೆನ್ನು ತಟ್ಟಿದ ತ್ಯಾಂಪಣ್ಣ ಚಾವಡಿಯಲ್ಲಿ ಕುಳಿತುಕೊಂಡ. ಆಚಕ್ಕ ಒಳಗೆ ಹೋದರು. ಒಳಗಿಂದ ಬಾಯಾರಿಕೆಗೆ ಬೆಲ್ಲ-ನೀರು ಬಂತು. ರಾಮಣ್ಣ ಅಂಗಳದಲ್ಲಿ ಸೇರಿದ್ದ ಊರವರನ್ನು ಮಾತನಾಡಿಸಿ ಕಳುಹಿಸಿದ. ಮತ್ತೆ ಉಳಿದವರು ಭಕ್ತರ

ಮಠದ ಗೇಣಿ ವಸೂಲಿಯ ಮೊಯ್ಲಿಯೂ, ಭಂಡಾರ ಮಠದ ಉಗ್ರಾಣಿ ಬ್ಯಾರಿ. ಯಮುನಕ್ಕ ಆಚಕ್ಕನೊಟ್ಟಿಗೆ ಚಾವಡಿಗೆ ಬಂದಳು. ಬ್ಯಾರಿ ಚಾವಡಿಯ ಬದಿಗೆ ಬಂದು ಚಪ್ಪರದಲ್ಲಿದ್ದ ಬೆಂಚಿನಲ್ಲಿ ಕುಳಿತು ಹೇಳಿದ,

"ತ್ಯಾಂಪಣ್ಣ ಶೆಟ್ಟರೇ, ಇನ್ನು ಈ ವರ್ಷದಿಂದ ನಿಮಗೆ ನಮ್ಮ ಕಾಟ ಇಲ್ಲ, ಅದನ್ನು ಹೇಳಿ ಹೋಗಲು ನಿಮ್ಮನ್ನು ಕಾಣುವಾಂತ ನಾವು ಬಂದದ್ದು."

"ಏನು? ನಿಮ್ಮ ಬದಲಿಗೆ ಬೇರೆ ಯಾರಾದರೂ ಬರುತ್ತಾರಾ? ಅದನ್ನು ಬಾರಬೈಲಿಗೇ ಬಂದು ಹೇಳಿ ಹೋಗಬಹುದಿತ್ತಲ್ಲ."

– ತ್ಯಾಂಪಣ್ಣ ಏನೂ ತಿಳಿಯದವನಂತೆ ಮಾತನಾಡಿದ.

"ನರಸಯ ಭಂಡಾರಿಗಳು ಬೆಳಗ್ಗೆ ನಿನ್ನಲ್ಲಿ ಬಾರಬೈಲಿನ ಆಸ್ತಿಯನ್ನು ನನಗೆ ಮಾರಿದ್ದನ್ನು ಹೇಳಿದ್ದಾರಂತೆ! ಹೇಳಲಿಲ್ಲವೇ ತ್ಯಾಂಪಣ್ಣ?"

– ಯಮುನಕ್ಕ ಕೇಳುವಾಗ ತ್ಯಾಂಪಣ್ಣ, ಹಣ್ಣಾಗಿ ಕೊಳೆತ ಕುಂಬಳಕಾಯಿ ಬಿಸಿಲಿಗೆ ಮುದುಡುವಂತೆ ಮುದುಡಿ ಹೋದ.

"ಹೌದು, ಹಾಗಲ್ಲ........"

ತ್ಯಾಂಪಣ್ಣ ತೊದಲುವಾಗ ಯಮುನಕ್ಕ ಹೇಳಿದರು,

"ಹಾಗಲ್ಲ, ಹೀಗಲ್ಲ ಎಂಬ ಮಾತೆಲ್ಲ ಬೇಡ. ಈಗ ಬ್ಯಾರಿಯೂ, ಮೊಯ್ಲಿಯೂ ಆಸ್ತಿಯ ರಿಕಾರ್ಡುಗಳನ್ನು ನನಗೆ ಕೊಟ್ಟು ಗೇಣಿ ಚೀಟಿ ಬದಲಿಸಲು ಬಂದದ್ದು. ಅದಕ್ಕೆ ಅವಸರ ಇಲ್ಲ, ವಿಷು ಹಬ್ಬಕ್ಕೆ ಹೇಗೂ ಹೊಸ ಗೇಣಿ ಚೀಟಿ ಆಗಬೇಕಲ್ಲ, ಆಗಲೇ ನೋಡೋಣ. ಅಲ್ಲವಾ ಅತ್ತೆ? ಹುಸೇನ್ ಬ್ಯಾರೀ, ಭಂಡಾರಿಗಳಿಗೆ ನನ್ನ ಅಭಿನಂದನೆ ಹೇಳಿಬಿಡಿ. ಮೊಯ್ಲಿಯವರೇ, ಭಕ್ತರಿಗೆ ನನ್ನ ನಮಸ್ಕಾರ ತಿಳಿಸಿ ಬಿಡಿ. ಇಬ್ಬರಿಗೂ ಭಂಡಸಾಲೆಯಲ್ಲಿ ಸಿಗುತ್ತೇನೆಂದು ಹೇಳಿ. ದುಗ್ಗಪ್ಪಾ ಇಬ್ಬರಿಗೂ ಕೊಟ್ಟು ಕಳುಹಿಸು."

ದುಗ್ಗಪ್ಪ ಒಂದೊಂದು ಮುಡಿ ಅಕ್ಕಿಯನ್ನೂ ಇಪ್ಪತ್ತೈದಿಪ್ಪತ್ತೈದು ತೆಂಗಿನ ಕಾಯಿಗಳನ್ನೂ ಅವರೊಂದಿಗೆ ಕೊಟ್ಟು ಕಳುಹಿಸಿದ.

"ಬರುತ್ತೇವೆ ಯಜಮಾನ್ತಿ. ಬರುತ್ತೇವೆ ಪಟೇಲರೇ, ದುಗ್ಗಪ್ಪಣ್ಣ ಬರುತ್ತೇವೆ. ನಮಗೇನಾದರೂ ಚಾಕರಿ ಇದ್ದರೆ ಹೇಳಿ ಕಳುಹಿಸಿ ಅಮ್ಮಾ."

– ಬ್ಯಾರಿಯೂ, ಮೊಯ್ಲಿಯೂ ಅಂಗಳ ಇಳಿದ ಮೇಲೆ ಯಮುನಕ್ಕ, ಆಚಕ್ಕ–ತ್ಯಾಂಪಣ್ಣರತ್ತ ತಿರುಗಿ,

"ಇದಕ್ಕೆ ಬೇಕಾಗಿ ನಾನು ನಿಮ್ಮನ್ನು ಬರ ಹೇಳಿದ್ದು ಅತ್ತೆ. ಮಿತ್ತಬೈಲಲ್ಲಿ ನಮ್ಮ ಹಿರಿಯರು ಆಸ್ತಿಯನ್ನು ಮಾರಿ, ಸಂಪತ್ತನ್ನು ಲೂಟಿ ಮಾಡಿ ಮನೆಯನ್ನು ಲಗಾಡಿ ಮಾಡಲು ನೋಡಿದರು. ಅದಕ್ಕಾಗಿ ಏನಾದರೂ ಸರಿ, ಮಿತ್ತಬೈಲಿನ ಕೈಬಿಟ್ಟು ಹೋದ ಆಸ್ತಿಗೆ ತಕ್ಕ ಸುತ್ತಮುತ್ತಲಿನ ಆಸ್ತಿಯನ್ನು ಖರೀದಿಸಬೇಕು ಎಂದು ಯೋಚಿಸುವಾಗ, ಬಾರಬೈಲಿನ ಆಸ್ತಿಯನ್ನು ಮಾರುತ್ತಾರೆ ಎಂಬ ಸುದ್ದಿ ಕಿವಿಗೆ ಬಿತ್ತು. ನನ್ನ ಗಂಡ ಕೊಟ್ಟಿದ್ದ ಸ್ವಲ್ಪ ಹಣ



ಹಿಡಿದುಕೊಂಡು ಭಂಡಾರಿಯವರಲ್ಲಿ ಹೇಳಿದಾಗ ಬಾರಬೈಲಿನ ಆಸ್ತಿ ಮಾರುವ ವಿಷಯ ಹೇಳಿದರು ಅತ್ತೆ. ನಿಮ್ಮ ಮನೆಯವರು ಕಾಸಿಲ್ಲ ಎಂದರಂತೆ. ಹಾಗಾಗಿ, ನಮ್ಮ ಗ್ರಾಮದ ಒಳಗಿನ ಭೂಮಿಯನ್ನು ಯಾರೋ ಹೊರಗಿನ ಬ್ಯಾರಿಗಳೋ ಬ್ರಾಹ್ಮಣರೋ ಖರೀದಿಸುವುದ ಕ್ಕಿಂತ ನಾವೇ ಖರೀದಿಸುವುದು ಒಳ್ಳೆಯದಲ್ಲವೇ ಅತ್ತೆ? ನಿಮ್ಮಲ್ಲಿದ್ದ ಭೂಮಿಯಲ್ಲಿ ನಾವೇನೂ ಬೇಸಾಯ ಮಾಡಲು ಬರುವುದಿಲ್ಲ, ಕೊಂಕಣಿಯವರಿಗೆ ಕೊಡುವ ಗೇಣಿಯನ್ನು ನೀವು ಮಿತ್ತಬೈಲಿಗೆ ಕೊಟ್ಟರೆ ಆಯಿತು. ನಮಗೆ ನಮ್ಮ ಜಾತಿ ಮಕ್ಕಳು ದುಡಿದು ಬದುಕುವುದು ಸಂತೋಷವೇ."

ಯಮುನಕ್ಕ ಅಷ್ಟು ಹೇಳಿ ಮುಗಿಸಿದಾಗ ತ್ಯಾಂಪಣ್ಣನ ಮುಖ ಕಪ್ಪಾಯಿತು, ಕಣ್ಣು ಕೆಂಪಾಯಿತು!

"ಖರೀದಿಸುವುದಕ್ಕಿಂತ ಮೊದಲು ಒಂದು ಮಾತು ನಮ್ಮ ಜೊತೆಯೂ ಕೇಳಬಹುದಿತ್ತು"

"ನಾನು ಖರೀದಿಸುವ ಬದಲಿಗೆ ಯಾರಾದರೂ ಬ್ಯಾರಿಗಳು ಖರೀದಿಸಿದ್ದರೆ ನಿನಗೆ ಒಳ್ಳೆಯದಾಗುತ್ತಿತ್ತು ಅಲ್ಲವಾ? ಏನು ತ್ಯಾಂಪಣ್ಣ, ಏನು ಮಾತಾಡ್ತಿ ನೀನು?"

– ಯಮುನಕ್ಕ ಸ್ವಲ್ಪ ಗಟ್ಟಿಯಾಗಿ ಹೇಳಿದರು.

"ಛೇ ಛೇ ಬ್ಯಾರಿಗಳಿಗಿಂತ ನಮ್ಮ ಬಳಿಯೇ ಇರುವುದು ಎಷ್ಟೋ ಒಳ್ಳೆಯದಲ್ಲವಾ?"

– ತ್ಯಾಂಪಣ್ಣನ ತಾಯಿ ಮಧ್ಯೆ ಬಾಯಿ ಹಾಕಿ ಹೇಳಿದರು.

ಮಧ್ಯಾಹ್ನದ ಊಟ ಮುಗಿಸಿ ತ್ಯಾಂಪಣ್ಣ ಬಾರಬೈಲಿಗೆ ಹಿಂದಿರುಗಿದ. ಹೋಗುವಾಗ ದಾರಿಯಲ್ಲಿ ನಿಂತಿದ್ದ ದೆಯ್ಯು ಕೇಳಿದ.

"ಒಡೆಯಾ, ಕೋಣಗಳನ್ನು ತರಲಿಲ್ಲವಾ ಇಂದು?"

ತ್ಯಾಂಪಣ್ಣ ಕಣ್ಣು ಕೆಕ್ಕರಿಸಿ ಅವನನ್ನು ನೋಡಿ ಮಾತನಾಡದೆ ನಡೆದ. ಆಚಕ್ಕ ಅಲ್ಲೇ ಒಂದು ದಿನ ಇದ್ದು ಬರುತ್ತೇನೆ ಎಂದು ಉಳಿದರು.

ಆಚಕ್ಕ ಹಿಂದೆಯೂ ಮಿತ್ತಬೈಲಿಗೆ ಬಂದು ಒಂದೆರಡು ದಿನ ಇದ್ದು ಹೋಗುತ್ತಿದ್ದರು. ಹಿಂದೆ ರಾಮಣ್ಣ ಹುಟ್ಟಿದಾಗ ಬಾಣಂತನ ಮಾಡಿದ್ದು ಅವರೇ. ಆಗ ತಿಂಗಳುಗಟ್ಲೆ ಇದ್ದು ಹೋಗುತ್ತಿದ್ದರು. ಆ ಬಡತನದ ದಿನಗಳಲ್ಲಿ ಮಳೆಗಾಲದ ಖರ್ಚಿಗೆ ತೆಂಗಿನ ಕಾಯಿ, ಅಕ್ಕಿ, ಭತ್ತ ಹೋಗುತ್ತಿದ್ದುದು ಮಿತ್ತಬೈಲಿನಿಂದಲೇ.

ಬಾಣಂತನ ಮಾಡುವುದರಲ್ಲಿ ಆಚಕ್ಕ ಹೆಸರುವಾಸಿ. ಕಹಿಜೀರಿಗೆ, ವೋಮ ಹಾಕಿದ ಎಣ್ಣೆ ಕಾಯಿಸಿ ಮೈಗೆಲ್ಲಾ ತಿಕ್ಕಿ, ಬೆನ್ನಿಗೆ, ಸೊಂಟಕ್ಕೆ ಬಿಸಿ ಕುದಿಯುವ ನೀರು ಹಾಕಿ, ತಲೆಗೆ ನೀರೆರೆದು ಮಲಗಿಸಿದರು ಎಂದಾದರೆ ಎಷ್ಟು ಗಟ್ಟಿಯ ಬಾಣಂತಿಯಾದರೂ ನಾಲ್ಕು ಗಳಿಗೆ ನಿದ್ರಿಸಲೇಬೇಕು. ಅಷ್ಟೊಂದು ಗಟ್ಟಿ ಜೀವದ ಯಮುನಕ್ಕನೂ ಗಂಟೆಗಟ್ಟಲೆ, ಸಂಜೆಯ ತನಕ ಮಲಗಿ ಬಿಡುತ್ತಿದ್ದರು. ಆಚಕ್ಕ, ಮಗುವನ್ನು ಸ್ನಾನ ಮಾಡಿಸಿ ಬಾಣಂತಿಗೆ ಬಗೆಬಗೆಯ ತಿನಿಸು ಮತ್ತು ಬಗೆಬಗೆಯ ಲೇಹ, ಮಣ್ಣಿ ಮಾಡಿ ತಿನ್ನಿಸಿದರಾದರೆ ಎಂತಹ ಬಾಣಂತಿಗೂ

ಹೊಟ್ಟೆ ನೋವು ಕಾಣಿಸದು. ಮೊಲೆಹಾಲು ಕಮ್ಮಿಯಾಗದು. ಯಮುನಕ್ಕನಿಗೆ ಎಲ್ಲಕ್ಕಿಂತ ಹೆಚ್ಚಾಗಿ ಆಚು ಅತ್ತೆಯ ಕೋಳಿ ಗಸಿ, ಮಣ್ಣಿನ ಕಾವಲಿಯ ರೊಟ್ಟಿ ಎಂದರೆ ಪ್ರಾಣ.

ಆಚಕ್ಕ ಯೌವನದಲ್ಲಿ ಬಹಳ ಸುಂದರಿಯಾಗಿದ್ದರಂತೆ. ಗಂಡ ತೀರಿಕೊಂಡ ಮೇಲೆ, ಚಿಕ್ಕಪ್ರಾಯದಲ್ಲೇ ಬಾರಬೈಲಿಗೆ ಬಂದವರಿಗೆ ಬಳ್ಳಿಗೆ ಮರದಂತೆ ಆಧಾರ ಕೊಟ್ಟವರು ಮಾಂಕರಾಲರು. ಬಾರಬೈಲಿನವರು ಬೇಸಾಯದ ಕೂಲಿ ಮಾಡಿ ಬದುಕುತ್ತಿದ್ದ ಕಾಲ ಅದು. ಮರು ಮದುವೆಯಾಗದೆ ಮನೆಯಲ್ಲೇ ಇದ್ದ ಹದಿಹರೆಯದ ಆಚಕ್ಕನಿಗೆ ಪ್ರಾಯಕ್ಕೆ ಸಹಜವಾದ ಆಸೆಗಳಿದ್ದವು. ಮಾಂಕರಾಲರು ಊರಿಗೆಲ್ಲ ತಿಳಿದಿರುವಂತೆ ಕಚ್ಚೆ ಹರಕ ಪಟೇಲ. ದಿನ ಕಳೆಯುತ್ತಿದ್ದಂತೆಯೇ ಮಾಂಕರಾಲರು ಬಾರಬೈಲಿಗೆ ಹೋಗುವುದು ಜಾಸ್ತಿ ಯಾಯಿತು. ಆಚಕ್ಕ ಹಾಗೂ ಮಾಂಕರಾಲರ ಸಂಬಂಧ ಹತ್ತಿರವಾಯಿತು, ಗಟ್ಟಿಯಾಯಿತು. ಎರಡು ಮನೆಗಳಲ್ಲೂ ಕೆಲವರಿಗೆ ಈ ಸಂಬಂಧದ ಬಗ್ಗೆ ಅಸಮಾಧಾನ ಇತ್ತು. ಆದರೆ ಮಾಂಕರಾಲರ ಎದುರು ಮಾತನಾಡುವ ಧೈರ್ಯ ಯಾರಿಗೂ ಇರಲಿಲ್ಲ. ಮಳೆಗಾಲದಲ್ಲಿ ಉಣ್ಣಲಿಕ್ಕೇ ಕಷ್ಟ ಇದ್ದ ಬಾರಬೈಲಿನವರು ಕಣ್ಣು ಮುಚ್ಚಿ ಮಾಂಕರಾಲರಿಗೆ ಚಾಪೆ ಹಾಸಿ ಕೊಟ್ಟರು.

ಒಂದು ದಿನ ಮಾಂಕರಾಲರು ನೋಡುತ್ತಿದ್ದಂತೆಯೇ, ಉದಾರ ಗುತ್ತಿನ ಯಜಮಾನರು ಬಂದು ಆಚಕ್ಕನನ್ನು ಉಡಿಕೆ ಮಾಡಿ ಕರೆದುಕೊಂಡು ಹೋದರು. ಅನಂತರ ಮಾಂಕರಾಲರ ಸಂಬಂಧ ಕಮ್ಮಿಯಾದರೂ ಕಡಿದು ಹೋಗಲಿಲ್ಲ. ಉದಾರ ಗುತ್ತಿನಿಂದ ಬಾರಬೈಲಿಗೆ ಮತ್ತೆ ವಿಧವೆಯಾಗಿ ಬಂದ ಆಚಕ್ಕನಿಗೆ ಮಾಂಕರಾಲರೇ ಗತಿಯಾಗಬೇಕಾಗಿ ಬಂತು. ಇತ್ತೀಚಿನ ಕೆಲವು ವರ್ಷಗಳಿಂದ ಮಾಂಕರಾಲರು ಮನೆಗೆ ಬರುವುದೆಂದರೆ ಮಗ ತ್ಯಾಂಪಣ್ಣ ಉರಿದು ಬೀಳುತ್ತಿದ್ದ. ಮಿತ್ತಬೈಲಿನವರ ಹೀಯಾಳಿಸುವಿಕೆ ತಡೆಯಲು ಸಾಧ್ಯವಾಗದೆ ಆಚಕ್ಕ ತನ್ನ ಸಂಬಂಧಕ್ಕೆ ತಡೆ ಹಾಕಿದರು.

ಮಾಂಕರಾಲರಿಗೆ, ಆಚಕ್ಕನ ಸಂಬಂಧ ಹಳತಾಗುತ್ತಿದ್ದಂತೆ, ಒಕ್ಕಲಿನ ಐತಪ್ಪನ ಮನೆ ಹತ್ತಿರವಾಯಿತು. ಪೂವಮ್ಮ ಸುಂದರಿಯಾದ ಯುವತಿ. ಐತಪ್ಪ ಒಳ್ಳೆಯ ಮೂರ್ತೆಯವ. ಅಲ್ಲದೆ ಓಲೆ ಬೆಲ್ಲಕ್ಕೆ ಹೆಸರುವಾಸಿ. ಅವನು ತಯಾರಿಸಿದ ಓಲೆ ಬೆಲ್ಲವನ್ನು ಕಾದು, ಕಾದಿರಿಸಿ ಹೋಗುತ್ತಿದ್ದರು. ಮಿತ್ತಬೈಲಿನಲ್ಲಿದ್ದ ಹತ್ತಿಪ್ಪತ್ತು ತಾಳೆ ಮರಗಳನ್ನು ಕಟ್ಟುವವನು ಐತಪ್ಪನೇ. ಊರಲ್ಲಿ ವರ್ಷಕ್ಕೆ ಒಂದು ತಾಳೆಗೆ ಕಟ್ಟುವುದಕ್ಕೆ ಉಳಿದವರಿಗೆ ಒಂದು ವರಹ ಗೇಣಿಯಾದರೆ, ಐತಪ್ಪನಿಗೆ ವರ್ಷಕ್ಕೊಂದು ಕಟ್ಟು ಬೆಲ್ಲ ಗೇಣಿ. ಅದೂ ವಿಷುವಿನಂದು ಮಾತ್ರ.

ಐತಪ್ಪ ಮನೆಯಲ್ಲಿ ಇರಲಿ, ಇಲ್ಲದಿರಲಿ. ಮಾಂಕರಾಲರಿಗೆ, ಸಂಜೆಯಲ್ಲಿ ಪೂವಮ್ಮ ತನ್ನ ಕೈಯಾರೆ ಸುರಿದು ಕೊಟ್ಟ ಶೇಂದಿ, ಬೆಂಕಿಗೆ ಹಾಕಿ ಸುಟ್ಟ ಬಲ್ಯಾರ್ ಮೀನಿನ ಸೇವೆ ಯಾಗಿ, ಅಂಗಳದಲ್ಲಿ ಹಾಕಿದ್ದ ಚಾಪೆಯಲ್ಲಿ ಒಂದು ಗಳಿಗೆ ಮಲಗಿಯೇ ಹೋಗಬೇಕು. ಪೂವಮ್ಮನ ಶೇಂದಿ, ತಾಟೆ ಮೀನು, ಅಂಗಳದಲ್ಲಿ ಹಾಕಿದ ಚಾಪೆಯ ಸೇವೆ ದೊರಕ



ತೊಡಗಿದ ಮೇಲೆಯೇ ಮಾಂಕರಾಲರಿಗೆ ಆಚಕ್ಕನ ಹುಚ್ಚು ಕಡಿಮೆಯಾದದ್ದು.

ಆಚಕ್ಕನ ಮಕ್ಕಳು ದೊಡ್ಡವರಾಗಿ, ಮಾಂಕರಾಲರು ಭಕ್ತರ ಮಠ, ಭಂಡಾರ ಮಠದವರಿಂದ ಗೇಣಿಗೆ ಕೊಡಿಸಿದ್ದ ಆಸ್ತಿಯಲ್ಲಿ ದುಡಿದು ಮನೆ ನಡೆಸುತ್ತಿದ್ದರು. ಹಾಗಾಗಿ ಆಚಕ್ಕನಿಗೆ ಮಾಂಕರಾಲರು ಆ ಮನೆಗೆ ಬರದಿದ್ದರೂ ನಡೆಯುತ್ತಿತ್ತು.

ಆದರೆ ಮಿತ್ತಬೈಲಿನ ಸಂಬಂಧ ಮಾತ್ರ ಗಟ್ಟಿಯಾಯಿತು. ಮಾಂಕರಾಲರ ಹೆಂಡತಿಯ ಮನೆ ಕಜೆಕೋಡಿ. ಅಲ್ಲಿ ಬಾರಬೈಲಿನಷ್ಟು ಚಿಕ್ಕದೂ ಅಲ್ಲದ, ಮಿತ್ತಬೈಲಿನಷ್ಟು ದೊಡ್ಡದೂ ಅಲ್ಲದ ಒಂದು ಸಾಧಾರಣ ಆಸ್ತಿ ಇತ್ತು. ಜೊತೆಗೆ ಗೇಣಿಯ ಬೇಸಾಯವೂ ಇತ್ತು. ಮನೆ ತುಂಬಾ ಹೆಣ್ಣು ಮಕ್ಕಳು ಇದ್ದ ಮನೆ ಅದು. ಹೆಣ್ಣು ಮಕ್ಕಳ ಮದುವೆ ಮುಂದೆ ಮುಂದೆ ಹೋದಾಗ ಮಾಂಕರಾಲರು, ಆ ಮನೆಯ ಒಂದು ಹೆಣ್ಣನ್ನು ಬಾರಬೈಲಿನ ತ್ಯಾಂಪಣ್ಣನಿಗೆ ಮದುವೆ ಮಾಡಿಸಿ ಕೊಟ್ಟರು. ಹಾಗಾಗಿ ತ್ಯಾಂಪಣ್ಣನಿಗೆ ಅತ್ತೆ ಬಹಳ ಹತ್ತಿರವಾದರು. ಮಿತ್ತಬೈಲಿನಲ್ಲಿ ತ್ಯಾಂಪಣ್ಣ ಮಾಂಕರಾಲರ ಬಲಗೈ ಬಂಟನಾದ.

ರಾತ್ರಿ ಚಾವಡಿಯಲ್ಲಿ ಮಲಗಿದ್ದ ಆಚಕ್ಕ, ಹಿಂದಿನ ದಿನಗಳನ್ನೆಲ್ಲ ನೆನಪು ಮಾಡಿಕೊಂಡರು. ನೆನಪಿಸಿದಷ್ಟೂ ಮುಗಿಯದ ನೆನಪುಗಳವು. ಕಷ್ಟದ ದಿನಗಳನ್ನು ನೆನೆಯುವಾಗ ಅವರಿಗೆ ಕಣ್ಣೀರು ಬಂತು.

“ಯಮುನಾ, ನಿನಗೆ ಗೊತ್ತುಂಟಲ್ಲಾ, ಗಂಡನ ಮನೆಯಿಂದ ನನ್ನನ್ನು ಹೊರಗೆ ಹಾಕುವಾಗ ನನ್ನಲ್ಲಿದ್ದದ್ದು ಮಕ್ಕಳು ಮಾತ್ರ. ನನ್ನದು ಎರಡನೇ ಮದುವೆ. ನನಗಿಂತ ಮೂವತ್ತು ವರ್ಷ ಹೆಚ್ಚು ಪ್ರಾಯದವರಿಗೆ ನನ್ನನ್ನು ಮದುವೆ ಮಾಡಿ ಕೊಟ್ಟಿದ್ದರು. ಮಾಂಕರಾಲರ ಹಾಗೂ ನನ್ನ ಹಿಂದಿನ ಕತೆ ಎಲ್ಲರಿಗೂ ತಿಳಿದಿದ್ದು, ನನ್ನ ಕೈ ಹಿಡಿಯುವವರು ಯಾರೂ ಇಲ್ಲದ ಸಮಯದಲ್ಲಿ ನನ್ನನ್ನು ಬಲತ್ಕಾರದಲ್ಲಿ ಕರೆದುಕೊಂಡು ಹೋಗಿ ಮದುವೆ ಮಾಡಿ ಕೊಟ್ಟರು. ನನಗೆ ಇದು ಎರಡನೆ ಮದುವೆಯಾದರೆ, ಉದಾರ ಗುತ್ತಿನ ಯಜಮಾನರಿಗೆ ಅದು ಮೂರನೆಯದೋ ನಾಲ್ಕನೆಯದೋ ಏನೋ. ಮದುವೆಯ ಪ್ರಾಯ ಕಳೆದು, ನಿಂದನೆ ಕೇಳುತ್ತಾ ಮನೆಯಲ್ಲಿದ್ದ ನನ್ನನ್ನು ಉದಾರ ಗುತ್ತಿನ ಗುರಿಕಾರರು ನಾಲ್ಕನೇ ಮದುವೆಯಾದುದು ದೊಡ್ಡ ಔದಾರ್ಯವೇ ಆಯಿತು. ಗುತ್ತಿನ ಗುರಿಕಾರರಿಗೆ ಅದು ನಾಲ್ಕನೇ ಮದುವೆಯಾಗಿರಬಹುದು. ಆದರೆ, ನನಗದು ಎರಡನೇ ಮದುವೆ. ನಾನು ಅಲ್ಲಿಗೆ  ಗುತ್ತಿನ ಮದುಮಗಳಂತೆ ಹೋಗಲಿಲ್ಲ, ಇಟ್ಟುಕೊಂಡವಳಂತೆ ಹೋದೆ. ಆ ಮನೆಯ ಹೆಂಗಸರಿಗೆ, ದಿನಾ ನನ್ನನ್ನು ನೀತಿ ಕೆಟ್ಟವಳು, ಮತಿ ಕೆಟ್ಟವಳೂಂತ ಹೀಯಾಳಿಸ ದಿದ್ದರೆ ಗಂಟಲಲ್ಲಿ ಅನ್ನ ಇಳಿಯುತ್ತಿರಲಿಲ್ಲ. ಆ ಮುದುಕ ಕರೆದುಕೊಂಡು ಹೋದ ಮೇಲೆ ನನಗೆ ಅವಳಿ ಮಕ್ಕಳಾದವು. ಆ ಉಬ್ಬಸದ ಮುದುಕ ಹಾಸಿಗೆಗೆ ಬರುವುದೆಂದರೆ ನನಗೆ ವಾಂತಿ ಬರುತ್ತಿತ್ತು. ಒಂದು ದಿನ ಕಾಲು ಹಿಡಿದು ನನ್ನನ್ನೂ ನನ್ನ ಮಕ್ಕಳನ್ನೂ ಬಾರಬೈಲಿಗೆ ಕಳುಹಿಸುವಂತೆ ಬೇಡಿಕೊಂಡೆ. ಮಕ್ಕಳಿಗೆ ಎರಡು ತುತ್ತಿಗೆ ಗತಿ ಮಾಡಿ, ನಾನು ದುಡಿದು ನನ್ನ ಮನೆಯಲ್ಲಿ ಹೊಟ್ಟೆ ತುಂಬಿಸಿಕೊಳ್ಳುತ್ತೇನೆ ಎಂದು ಹೇಳಿದೆ. ಅದಕ್ಕೆ ಉದಾರ ಗುತ್ತಿನ

ಗುರಿಕಾರರು ಏನು ಹೇಳಿದರು ಗೊತ್ತಾ ಯಮುನಾ?"

"ಆಚು! ಈ ನರಕದಿಂದ ನನ್ನನ್ನೂ ಕರೆದುಕೊಂಡು ಹೋಗು. ನೀನು ತಿಳಿದುಕೊಂಡಂತೆ ಈ ಮನೆಗೆ ನಾನು ಗುರಿಕಾರ ಅಲ್ಲ. ನಾನು ಹೆಸರಿಗೆ ಮಾತ್ರ ಗುರಿಕಾರ. ವಿಧವೆಯರಾಗಿ ಮನೆಯಲ್ಲಿ ಕುಳಿತಿರುವ ನನ್ನ ತಂಗಿಯರು ಇದ್ದಾರಲ್ಲಾ ಅವರು, ಅಲ್ಲದಿದ್ದರೆ ಗಂಡನನ್ನು ಬಿಟ್ಟು ಬಂದ ನನ್ನ ಸೊಸೆಯಂದಿರು ಇದ್ದಾರಲ್ಲಾ ಅವರೇ ಈ ಗುತ್ತಿನ ಯಜಮಾನಿಯರು. ನನಗೆ ಮುಷ್ಟಿ ಅನ್ನ ಬೇಯಿಸಿ ಹಾಕುವವರು ಇಲ್ಲದೆ ಆದಾಗ ನಾನು ನಿನ್ನನ್ನು ತಂದದ್ದು. ನನ್ನ ಹಿಂದಿನ ಹೆಂಡತಿ ತೀರಿಕೊಂಡ ಮೇಲೆ ಇನ್ನು ಮದುವೆ ಬೇಡಾಂತ ನಾಲ್ಕು ವರ್ಷ ಕುಳಿತೆ. ಆದರೆ ಹೊತ್ತು ಹೊತ್ತಿಗೆ ಊಟ ಸಿಗದೆ ಹೋದಾಗ ನನ್ನ ಹೊಟ್ಟೆಯ ಹಸಿವಿಗೆ ಬೇಕಾಗಿ ನಿನ್ನನ್ನು ಮದುವೆಯಾಗಿ ಬಹಳ ದೊಡ್ಡ ಅನ್ಯಾಯ ಮಾಡಿದೆ. ನಾನು ಗುತ್ತಿನವ. ಭೂತದ ಉಯ್ಯಾಲೆಗೆ ಸಂಕ್ರಾಂತಿ ಸಂಕ್ರಾಂತಿಗೆ ಹೂ ಹಾಕಲು ಮಾತ್ರ ನಾನು ಯಜಮಾನ. ನಿಜವಾದ ಯಜಮಾನಿಕೆ ಆ ನನ್ನ ತಂಗಿಯಂದಿರು, ಸೊಸೆಯಂದಿರದ್ದೇ. ನೀನೇ ನೋಡಿರಬಹುದು ಅದನ್ನು".

"ಅವರು ಇಷ್ಟು ಹೇಳುವಾಗ ನನಗೆ ದುಃಖ ತಡೆಯಲಾಗಲಿಲ್ಲ ಯಮುನಾ. ಅವರ ಕಾಲ ಮೇಲೆ ತಲೆಯಿಟ್ಟು ಅತ್ತು ಬಿಟ್ಟೆ. ಈ ತನಕ ಯಾರಲ್ಲಿಯೂ ಈ ಮಾತು ಹೇಳಿರಲಿಲ್ಲ. ನನ್ನನ್ನೂ ನನ್ನ ಮಕ್ಕಳನ್ನೂ ಕೆಲಸದವರಿಗಿಂತಲೂ ನಿಕೃಷ್ಟವಾಗಿ ನೋಡುತ್ತಿದ್ದವರು ಉದಾರ ಗುತ್ತಿನ ಹೆಂಗಸರು! ಅವರಲ್ಲಿ ಒಬ್ಬಳು ಉದಾರ ಗುತ್ತಿನಲ್ಲಿ ಹುಟ್ಟಿದ ಕಜೆಕೋಡಿಯ ಹೆಣ್ಣು, ನಿನ್ನ ಅತ್ತೆ. ಮಾಂಕರಾಲರ ಹೆಂಡತಿ. ಅವಳ ಚುಚ್ಚು ನುಡಿ, ಹೀಯಾಳಿಕೆ, ಬೈಗುಳವನ್ನು ನೆನೆಯುವಾಗ ಈಗಲೂ ನನ್ನ ರಕ್ತ ಕುದಿಯುತ್ತದೆ. ಯಮುನಾ! ನಮ್ಮ ಬಂಟರ ಅಳಿಯ ಸಂತಾನದ ಗುತ್ತಿನ ಮನೆಯ ಕುಟುಂಬದಷ್ಟು ತೆಗೆದು ಹಾಕಿದ ಕುಟುಂಬ ಬೇರೆ ಇಲ್ಲ."

ಹಿಂದಿನದೆಲ್ಲ ನೆನೆದು ಆಚಕ್ಕನ ಕಣ್ಣಲ್ಲಿ ನೀರಾಡಿತು. ಗಂಟಲು ಕಟ್ಟಿತು. ಯಮುನಕ್ಕ ಮೆಲ್ಲ ಅವರ ಬೆನ್ನು ಸವರಿದರು.

"ನಿನ್ನಲ್ಲಿ ಇಂದು ಈ ಮಾತನ್ನೆಲ್ಲ ಯಾಕೆ ಹೇಳುತ್ತಿದ್ದೇನೆಂದರೆ, ನಾನು ಪಟ್ಟ ಕಷ್ಟ ನಿನಗೆ ತಿಳಿಯದಿದ್ದರೆ ಮಾಂಕರಾಲರು ಹಾಗೂ ನನ್ನ ಸಂಬಂಧ ಯಾಕೆ ಆಯಿತು? ಹೇಗೆ ಆಯಿತು? ಎಂಬುದು ನಿನಗೆ ಅರ್ಥ ಆಗಲಿಕ್ಕಿಲ್ಲ. ಆ ಕಷ್ಟದ ದಿನಗಳಲ್ಲಿ ನೆರೆಯಲ್ಲಿ ಮುಳುಗಿದವನಿಗೆ ಮೊಸಳೆ ಸಿಕ್ಕಿದರೂ ಬದುಕಲು ಆಧಾರ ಆಗಬಹುದು ಎನ್ನುವ ಆಸೆಯಂತಿತ್ತು ನನ್ನ ಸ್ಥಿತಿ. ನನಗೆ ಸಿಕ್ಕಿದ್ದು ಮೊಸಳೆಯಲ್ಲ ಹೆಬ್ಬಾವು! ಆ ಹೆಬ್ಬಾವು ನನ್ನನ್ನು ಸುತ್ತು ಹಾಕಿ ಹಿಂಡಲು ಆರಂಭಿಸಿತು. ನಿನ್ನಲ್ಲಿ ಹೇಳಿದೆನಲ್ಲ, ಉಬ್ಬಸದ ದೇಹ ಹಿಡಿದುಕೊಂಡು ಹಾಸಿಗೆಗೆ ಬರುತ್ತಿದ್ದ ಗುತ್ತಿನ ಯಜಮಾನರಿಂದ ನನಗೂ ಸುಖ ಕೊಡಲು ಆಗಲಿಲ್ಲ. ಅವರಿಗೂ ಸುಖ ಸಿಕ್ಕಿರಲಿಕ್ಕಿಲ್ಲ. ನಿನ್ನ ಮಾವ ಮಾಂಕರಾಲರಿಗೂ ನನಗೂ ಮದುವೆಯ ಮೊದಲಿನ ಸಂಬಂಧ ಮದುವೆಯ ನಂತರವೂ ಆ ಕರ್ಮ ನನ್ನನ್ನು ಬಿಡಲಿಲ್ಲ. ಬಾರಬೈಲಿಗೆ ಬಂದರೆ ಮಾಂಕರಾಲರು ಬಂದು ನನ್ನನ್ನು ವಿಚಾರಿಸಿಕೊಂಡು ಹೋಗಲೇ



ಬೇಕು. ಗಂಡ ಸತ್ತು ಉಟ್ಟ ಬಟ್ಟೆಯಲ್ಲೇ ಹಿಂದೆ ಬಂದವಳಿಗೆ ಒಂದು ಹಗೆ ತೀರಿಸಲಿಕ್ಕಿತ್ತು. ಉದಾರ ಗುತ್ತಿನ ಯಜಮಾನರು ಮಾಡಿದ ಅನ್ಯಾಯಕ್ಕೆ ಪ್ರತಿಕಾರ ಅದು. ಈ ಪ್ರತಿಕಾರ ವಲ್ಲದೆ, ನನ್ನ ಅನಾಥ ಮಕ್ಕಳ ಮತ್ತು ನನ್ನ ಹೊಟ್ಟೆಯ ಹಸಿವಿಗೆ ಬೇಕಾಗಿ ಬೇಡಬೇಕಾಗಿ ಬಂದ ಆ ದಿನಗಳಲ್ಲಿ ಬೇರೆ ಏನು ಮಾಡಬೇಕಾಗಿತ್ತು ನಾನು? ನೀನೇ ಹೇಳು!"

ಆಚಕ್ಕ ರಾತ್ರಿಯಿಡೀ ಹೇಳಿದ ಕತೆಯಲ್ಲಿನ ಕೆಲವು ವಿಷಯಗಳನ್ನು ಯಮುನಕ್ಕ ಹಿಂದೆ ಕೇಳಿದ್ದರು. ಆದರೆ ಯಮುನಕ್ಕನಿಗೆ ಇಂದು ಆಚಕ್ಕನ ಮನಸ್ಸಿನ ಒಳಗಿನ ನೋವು ತಿಳಿಯಿತು. ಮಲಗುವಾಗ ರಾತ್ರಿಯ ಮೂರನೇ ಜಾವ ಕಳೆಯಿತು. ನಿದ್ದೆ ಮಾಡುವುದಕ್ಕಿಂತ ಮೊದಲು ಯಮುನಕ್ಕ ಆಚಕ್ಕನಲ್ಲಿ ಕೇಳಿದರು,

"ಆಚತ್ತೆ, ತಪ್ಪು ತಿಳಿಯಬೇಡಿ! ನಿಮ್ಮಲ್ಲಿ ಒಂದು ಮಾತು ಕೇಳುತ್ತೇನೆ. ನಿಮಗೆ ಮನಸ್ಸಿಲ್ಲದಿದ್ದರೆ ಉತ್ತರ ಕೊಡಬೇಡಿ. ಕೇಳಬಹುದಾ ಅತ್ತೆ?"

"ಕೇಳು ಮಗಾ, ಇಂದು ನಾನು ನಿನ್ನಲ್ಲಿ ಹೇಳಿದ ಯಾವ ಮಾತನ್ನೂ ನಾನು ಈ ತನಕ ಬೇರೆ ಯಾರಲ್ಲೂ ಹೇಳಿರಲಿಲ್ಲ. ನಿನ್ನ ಮೇಲೆ ವಿಶ್ವಾಸದಿಂದ ಹೇಳಿದೆ. ಕೇಳು ಮಗಾ, ಕೇಳುವುದಕ್ಕೆ ಅಂಜಬೇಡ."

"ತ್ಯಾಂಪಣ್ಣ, ನನ್ನ ಮಾವ ಮಾಂಕರಾಲರಿಗೆ ಹುಟ್ಟಿದ ಮಗನಾ ಅತ್ತೆ?"

ಆಚಕ್ಕ ಮಾತನಾಡಲಿಲ್ಲ. ಸ್ವಲ್ಪ ಹೊತ್ತು ಹಾಗೇ ಮೌನವಾಗಿ ಕುಳಿತವರು, ಮತ್ತೆ ಕೇಳಿದರು,

"ಅದ್ಯಾಕೆ ಈ ಪ್ರಶ್ನೆ ಕೇಳಿದೆ ಯಮುನಾ? ನಿನಗೆ ಅವನು ಮಾಂಕರಾಲರ ಮಗ ಎನ್ನುವ ಸಂಶಯ ಯಾಕೆ ಬಂತು?"

"ಏನಿಲ್ಲ, ಊರೆಲ್ಲಾ ಕೇಳುವ ಗುಸುಗುಸು, ಕೆಲಸದವರ ಕುಸುಕುಸು ಮಾತು, ಈಗ ನಿಮ್ಮ ಹಾಗೂ ಅವರ ಕತೆ ಕೇಳಿದಾಗ, ತ್ಯಾಂಪಣ್ಣನ ಮುಖಚರ್ಯೆ, ನಡತೆ ನೋಡುವಾಗ ನನಗೆ ಮಾವನ ನೆನಪಾಯಿತು ಅಷ್ಟೆ."

"ಹಾಗಾದರೆ ಈಗ ಮಲಗುವ. ನಾಳೆ ನಿನಗೆ ಬಾಕಿ ವಿಷಯಗಳನ್ನೆಲ್ಲ ಹೇಳುತ್ತೇನೆ. ಆಗಬಹುದಾ? ನಿನ್ನ ಸಂಶಯಕ್ಕೂ ನಾಳೆ ಉತ್ತರ ಹುಡುಕುವಾ ಆಯಿತಾ!"

"ಆಯಿತು ಅತ್ತೆ, ತುಂಬ ರಾತ್ರಿಯಾಯಿತು. ಈಗ ಮಲಗುವಾ"

ಅಷ್ಟು ಹೇಳಿ ಪೆಠಾರಿಯ ಮೇಲೆ ಹೊದಿಕೆ ಹೊದ್ದುಕೊಂಡು ಯಮುನಕ್ಕ ಮಲಗಿದರು. ಕೆಳಗೆ ಚಾವಡಿಯಲ್ಲಿ ಹಾಸಿದ್ದ ಚಾಪೆಯಲ್ಲಿ ಆಚಕ್ಕ ಮಲಗಿದರು.

ಮರುದಿನ ಬೆಳಗ್ಗೆ ತಾಯಿಯನ್ನು ಕರೆದುಕೊಂಡು ಹೋಗಲು ಬಂದ ತ್ಯಾಂಪಣ್ಣ ಅವಸರಪಡಿಸಿದಾಗ ಯಮುನಕ್ಕ ಯೋಚಿಸಿದರು, "ಈ ತ್ಯಾಂಪಣ್ಣ ಅಷ್ಟು ಸುಲಭದಲ್ಲಿ ಇದನ್ನು ಬಿಡುವುದಿಲ್ಲ. ಅವನಿಗೆ ಹಿಂದಿನದ್ದೆಲ್ಲ ಮರೆತು ಒಳ್ಳೆಯದರಲ್ಲಿರಲು ಮನಸ್ಸಿಲ್ಲಾಂತ ಅವನ ನಡತೆಯಿಂದಲೇ ತಿಳಿದು ಬರುತ್ತದೆ."

ತ್ಯಾಂಪಣ್ಣ ತಾಯಿಯನ್ನು ಕರೆದುಕೊಂಡು ಹೊರಡುವಾಗ ಅವರನ್ನೇ ನೋಡುತ್ತಿದ್ದ

ಯಮುನಕ್ಕನ ತಲೆಯಲ್ಲಿ ರಾತ್ರಿ ಅವರೇ ಕೇಳಿದ ಪ್ರಶ್ನೆ ತಿರುಗುತ್ತಿತ್ತು.

"ತ್ಯಾಂಪಣ್ಣಿ ನನ್ನ ಮಾವ ಮಾಂಕರಾಲರ ಮಗನಾ ಅತ್ತೇ?"

ಹತ್ತು ದಿನ ಕಳೆದು, ವಾರ್ಷಿಕ ಜಮಾಬಂದಿ ಲೆಕ್ಕ ಮುಗಿಸಲು ಬಂದ ಸುಬ್ರಾಯ ಕಮ್ತಿ, ಮಿತ್ತಬೈಲಿಗೆ ಬಂದು ತೀರ್ವೆಯ ಲೆಕ್ಕಾಚಾರ ಬರೆದು ರಾಮಣ್ಣನನ್ನು ಕರೆದುಕೊಂಡು ಕಾಸರಗೋಡು ತಹಶೀಲ್ದಾರರ ಕಚೇರಿಗೆ ಹೋಗಿ, ಅಲ್ಲಿಂದ ಹೊರಗೆ ಬರುವಾಗ ತ್ಯಾಂಪಣ್ಣಿ ತಾಯಿಯ ಜೊತೆ ಹೋಗುವುದು ಕಾಣಿಸಿತು. ಕಾಸರಗೋಡು ಪೇಟೆಯಲ್ಲಿ ಆಚಕ್ಕನ್ನು ನೋಡಿ ರಾಮಣ್ಣನಿಗೆ ಆಶ್ಚರ್ಯವಾಯಿತು, ಸಂಶಯವೂ ಉಂಟಾಯಿತು. ತ್ಯಾಂಪಣ್ಣಿ ಸುಮ್ಮನಿರುವವನಲ್ಲ, ಏನೋ ಕಿತಾಪತಿಗೆ ಹೊರಟಿದ್ದಾನೆಂದು ರಾಮಣ್ಣನಿಗೆ ಅನಿಸಿತು. ಮೆಲ್ಲ ಸುಬ್ರಾಯ ಕಮ್ತಿಯ ಉಗ್ರಾಣಿಯನ್ನು ಕರೆದು ಈ ತಾಯಿ-ಮಗನ ಹಿಂದೆ ಒಂದು ಕಣ್ಣಿಡಲು ಹೇಳಿ, ಅವನನ್ನು ಅಲ್ಲೇ ಬಿಟ್ಟು ಅವರು ಹೋದರು.

ಮಂಜೇಶ್ವರದಿಂದ ಮಿತ್ತಬೈಲಿಗೆ ಹೋಗಲು ಕುದುರೆಯ ಜಟಕಾ ಬಂದಿತ್ತು. ಆ ಕಾಲದಲ್ಲಿ ಕೋಳ್ಯೂರು ಸೀಮೆಯಲ್ಲಿ ಕುದುರೆಯ ಬಂಡಿ ಇದ್ದ ಮನೆ ಮಿತ್ತಬೈಲು ಒಂದೇ. ರೈಲಾಫೀಸಿಗೆ ಬಂದ ಜಟಕಾದಲ್ಲಿ ಸುಬ್ರಾಯ ಕಮ್ತಿಯೂ ರಾಮಣ್ಣನೂ ಬಂದರು. ಕಮ್ತಿ ತೇರ ಬೀದಿಯಲ್ಲಿ ಇಳಿದ. ಪಟೇಲರು ಮನೆಗೆ ಹೊರಟರು.

ಈಗ ಹೆಚ್ಚಾಗಿ ರಾಮಣ್ಣ ಪಟೇಲರು ಕುದುರೆಯಲ್ಲೇ ಊರು ತಿರುಗುವುದು. ಪಟೇಲರು ಜಟಕಾದಲ್ಲಿ ಹೋಗುವಾಗ ಮುಂದೆಯೊಬ್ಬ ಹಿಂದೆಯೊಬ್ಬ ಆಳುಗಳು ಇರುತ್ತಿದ್ದರು. ಅದು ತಾಯಿಯ ತಾಕೀತು. ಅವರ ಕಣ್ಣು ತಪ್ಪಿಸಲು ಸಾಧ್ಯವಿಲ್ಲ, ಅದಕ್ಕೆ ಬೇಕಾಗಿಯೇ ರಾಮಣ್ಣ ಕುದುರೆ ಸವಾರಿಯಲ್ಲೇ ಊರು ತಿರುಗುತ್ತಿದ್ದುದು. ಆದರೂ ಯಮುನಕ್ಕನಿಗೆ ತಿಳಿದರೆ ಬಯ್ಯುತ್ತಾರೆಂದು ಉಗ್ರಾಣಿ ಬ್ಯಾರಿ ಕುದುರೆಯ ಹಿಂದೆಯೇ ಓಡುತ್ತಿದ್ದ.

ಮಿತ್ತಬೈಲಿಗೆ ಬಂದ ಮರುದಿನ, ಸುಬ್ರಾಯ ಕಮ್ತಿಯ ಉಗ್ರಾಣಿ ಬಂದು ಸುದ್ದಿ ಮುಟ್ಟಿಸಿದ. "ತ್ಯಾಂಪಣ್ಣಿ ತಾಯಿಯನ್ನು ಕರೆದುಕೊಂಡು ಆರಿಕ್ಕಾಡಿಯ ಪೆಜತ್ತಾಯರ ಮನೆಗೆ ಹೋದ.'' ಆರಿಕ್ಕಾಡಿಯಲ್ಲಿ ಹಿರಿಯ ಪೆಜತ್ತಾಯರು ಮಾಟ-ಮಂತ್ರದಲ್ಲಿ ಹೆಸರುವಾಸಿಯಾದವರು. ಕಿರಿಯ ಪೆಜತ್ತಾಯರು ಕಾಸರಗೋಡಿನ ಹೆಸರಾಂತ ವಕೀಲರು, ಹಾಗಾದರೆ ಈ ತ್ಯಾಂಪಣ್ಣಿ ತಾಯಿಯನ್ನು ಕರೆದುಕೊಂಡು ಯಾರ ಬಳಿ ಹೋಗಿರಬಹುದು? ಏನೇ ಆಗಲಿ, ತ್ಯಾಂಪಣ್ಣಿನ ಮೇಲೊಂದು ಕಣ್ಣು ಇಡಲೇಬೇಕಾಗಿ ಬಂತು!

ರಾಮಣ್ಣ, ತಮ್ಮ ದುಗ್ಗಪ್ಪನನ್ನೂ, ಬಂಟ ದೆಯ್ಯುವನ್ನೂ ಕರೆದು ತ್ಯಾಂಪಣ್ಣಿನ ಮೇಲೊಂದು ಕಣ್ಣಿಟ್ಟಿರಲು ಹೇಳಿದ. ದುಗ್ಗಪ್ಪನಲ್ಲಿ ದುಡುಕಬಾರದೆಂದು ಆಣೆ ಹಾಕಿಸಿ, ತಾಯಿಯ ಬಳಿ ಹೋದ.

ತಾಯಿ ಚಾವಡಿಯಲ್ಲಿ ಕುಳಿತುಕೊಂಡು ಚಿಂತೆಯಲ್ಲಿ ಹೈರಾಣಗಿದ್ದವರಂತೆ ಕಂಡರು. ರಾಮಣ್ಣ ಬಂದು ಕುಳಿತುಕೊಂಡಾಗ ಬಡಾಜೆಯಿಂದ ಉಗ್ರಾಣದ




ಮೊಯ್ಲಿಯೂ ಬಂದು ಮುಟ್ಟಿದ. ಯಮುನಕ್ಕ ಬಡಾಜೆಯ ತಂತ್ರಿಯವರಲ್ಲಿ ಪೂಜೆಗೆ ದಿನ ಕೇಳಲು ಮೊಯ್ಲಿಯನ್ನು ಕಳುಹಿಸಿದ್ದರು. ಅವನು ಬಂದು ತಂತ್ರಿಯವರು ಹತ್ತು ದಿನ ಕಳೆದು ಮೇಷ ಹದಿನೈದರಂದು ದಿನ ಹೇಳಿದರು ಎಂದಾಗ, ಯಮುನಕ್ಕನಿಗೆ ನೆನಪಾಯಿತು.

ಧನು ಮಾಸದ ಹದಿನೈದನೆ ದಿನಕ್ಕೆ ಮಿತ್ತಬೈಲಿನಲ್ಲಿ ಗೃಹಪ್ರವೇಶವಾಗಿ ನೂರು ವರ್ಷ ಕಳೆಯುತ್ತದೆ. ಮಂಜೇಶ್ವರದ ಷಷ್ಠಿ ಕಳೆದು ಹತ್ತು ದಿನಗಳಲ್ಲಿ ಮಿತ್ತಬೈಲಿನ ಗೃಹಪ್ರವೇಶವಾಗಿತ್ತು. ಆ ದಿನವನ್ನು ತಾಮ್ರದ ತಗಡಿನಲ್ಲಿ ಬರೆಯಿಸಿ ಚಾವಡಿಯ ಕಂಬಕ್ಕೆ ಹೊಡೆದಿದ್ದರು.

ಯಮುನಕ್ಕನಿಗೆ, ತನ್ನ ಹಿರಿಯರು ಮಂಜಣಾಳ್ವರ ಕಾಲದಲ್ಲಿ ಪ್ರಾರಂಭವಾದ ಬಾರಬೈಲು ಮತ್ತು ಮಿತ್ತಬೈಲಿನವರ ಕಟ್ಟಾ ಹಗೆತನ ಇಂದಿಗೂ ಕೊನೆಗೊಳ್ಳಲಿಲ್ಲ ಎನ್ನುವುದು ನೆನಪಾಯಿತು. ಅಂದಿನ ತಂತ್ರಿಗಳು ಹೇಳಿದ್ದರಂತೆ, ನೂರು ವರ್ಷಗಳ ನಂತರ ಯಮಗಂಡ ಪೂಜೆ ಮಾಡಿಸಿ ಗಂಡಾಂತರ ಕಳೆಯಲು ತಾಮ್ರದ ತಗಡಿನಲ್ಲಿ ದಿನ ಬರೆದಿದ್ದರಂತೆ. ಆ ಬರಹ ಕಾಲಾನುಕಾಲದಲ್ಲಿ ಅಳಿದು ಮರೆತುಹೋಗಿದೆ.



## ಆ ಕಾಲ...





# ೪

# ಪ್ರಾರಂಭವಾದ ಹಗೆತನ ಮುಗಿಯಲಿಲ್ಲ

ಮಾಯಿಪ್ಪಾಡಿಯಲ್ಲಿ ಹತ್ತನಾವಧಿಯವರೆಗೆ ಸೇನಾ ತರಬೇತಿ ಕೊಟ್ಟು, ಸೈನಿಕರಿಗೆ ಮಳೆಗಾಲದ ಸಂಬಳ ಕೊಟ್ಟು ಅವರವರ ಮನೆಗೆ ಕಳುಹಿಸಿದರು. ಸೇನೆಯ ನಾಯಕರು, ಹೇಳಿಕೆ ಬಂದ ಕೂಡಲೇ ಮಾಯಿಪ್ಪಾಡಿಯ ಮಿತ್ತಪದವಿನಲ್ಲಿ ಒಟ್ಟಾಗುವಂತೆ ಆದೇಶ ನೀಡಿ ಸೈನಿಕರನ್ನು ಕಳುಹಿಸಿದರು. ಮಂಜಣಾಳ್ವ ಹೊರಡುವುದಕ್ಕೆ ಮುಂಚೆ ಮಂಗಳೂರಿನ ಶಾನುಭೋಗರಲ್ಲಿಯೂ, ಇಚ್ಲಂಪಾಡಿಯ ಕೋಚಣ್ಣಾಳ್ವರಲ್ಲಿಯೂ ಅಪ್ಪಣೆ ಪಡೆದು ಮಿತ್ತಬೈಲಿಗೆ ಹೊರಟ. ಈ ಸಲ ಮಾತ್ರ ತನ್ನ ಸಂಬಳದ ಎಲ್ಲಾ ಹಣವನ್ನು ತೆಗೆದುಕೊಂಡು ಮಿತ್ತಬೈಲಿಗೆ ಹೊರಡುವಾಗ ಕೋಚಣ್ಣಾಳ್ವರು ಸುಖದುಃಖ ವಿಚಾರಿಸಿದರು. ಮಂಜಣ್ಣ ತಾನು ಮನೆ ಕಟ್ಟಿಸುವ ಮತ್ತು ಹೊಸ ಜಮೀನು ಮಾಡುವ ಕನಸುಗಳನ್ನೆಲ್ಲ ಅವರಲ್ಲಿ ಹೇಳಿಕೊಂಡ.

ಇಚ್ಲಂಪಾಡಿಯ ಕೋಚಣ್ಣಾಳ್ವರು ಅದಾಗಲೇ ಭಾರೀ ಹೆಸರು ಪಡೆದ ಬಂಟ. ಅವರ ಇಚ್ಲಂಪಾಡಿ ಆಟದ ಮೇಳ ಸೀಮೆಯಲ್ಲೆಲ್ಲಾ ಜನಪ್ರಿಯವಾಗಿತ್ತು. ಅವರಿಗೆ ಯಕ್ಷಗಾನದಷ್ಟು

ದೊಡ್ಡ ಹುಚ್ಚು ಬೇರೆ ಯಾವುದೂ ಇರಲಿಲ್ಲ. ಮಾವ ರಾಮಾಳ್ವರನಂತರ ಗುತ್ತಿನವರಾದ ಕೋಚಣ್ಣಾಳ್ವರು ಮೂರು ಸಾವಿರ ಮುಡಿ ಗೇಣಿ ಬರುವ ಆಸ್ತಿ, ಮನೆಯ ಪೆಠಾರಿಯಲ್ಲಿ ಕೊಳೆಯುತ್ತಿದ್ದ ಸಂಪತ್ತಿಗೆ ಯಜಮಾನ. ಮಹಾನ್ ಸೇನಾಧಿಪತಿ, ಮಹಾರಸಿಕ. ರಾಮಾಳ್ವರು ಕಾರುಬಾರುಗಳನ್ನೆಲ್ಲಾ ಅಳಿಯನಿಗೆ ಬಿಟ್ಟುಕೊಟ್ಟು, ಅವರನ್ನು ಇಚ್ಲಂಪಾಡಿಯ ಯಜಮಾನನ್ನಾಗಿ ಮಾಡುವ ತಯಾರಿ ಮಾಡಿದ್ದರು. ಅಂತಹ ಕೋಚಣ್ಣಾಳ್ವರಿಗೆ ತನ್ನ ಜಾತಿ ಮಗ ಮಂಜಣಾಳ್ವ ಪ್ರೀತಿಯ ದಂಡನಾಯಕ. ಅವನ ಅಭಿವೃದ್ಧಿಗೆ ಬೇಕಾದುದನ್ನೆಲ್ಲಾ ಮಾಡಲು ಅವರು ತಯಾರಿದ್ದರು. ಅವರು ಅವನ ಬೆನ್ನು ತಟ್ಟಿ ಕಳುಹಿಸಿದರು.

ಮಿತ್ತಬೈಲಿಗೆ ಬಂದು ತಲುಪಿದಾಗ ಮನೆ ಕಟ್ಟುವ ಕೆಲಸ ಭರದಿಂದ ನಡೆಯುತ್ತಿತ್ತು. ಬಡಗಿಗಳು ಮಾಡಿಗೆ ಬೇಕಾದ ತಾಳೆಯ ಪಕ್ಕಾಸು, ಮುಚ್ಚಿಗೆಯ ಅಡ್ಡ ಹಲಗೆ, ಬೋದಿಗೆಯ ಹಲಗೆ ಬಾಗಿಲು, ಕಿಟಕಿಗಳನ್ನು ತಯಾರಿಸುತ್ತಿದ್ದರು. ಎರಡು ತಿಂಗಳೊಳಗೆ ಮಾಡು ಆಗಿ, ಮಾಡಿಗೆ ಮುಳಿಹುಲ್ಲು ಹೊದಿಸಿ ಕೊಟ್ಟರಾದರೆ ಒಳಗಿನ ಕೋಣೆಗಳ ಬಾಗಿಲು ಕಿಟಕಿ ಕುಳ್ಳಿರಿಸುವ ಕೆಲಸಗಳನ್ನು ಮಳೆಗಾಲದಲ್ಲಿಯೂ ಮಾಡಬಹುದೆಂದು ಲೆಕ್ಕ ಹಾಕಿ ತಯಾರಿಗೆ ತೊಡಗಿದ್ದರು.

ಮಜಲೋಡಿಯ ಕೊಟ್ಟಿಗೆಯಲ್ಲಿ ಬೋದಿಗೆಯ ಕಂಬಗಳು ಅದರ ಮೇಲೆ ಕೆತ್ತನೆ ಕೆಲಸ ನಡೆಯುತ್ತಿತ್ತು.

ಮಂಜಣ ಭೂಮಿ ಪೂಜೆಗೆ ದಿನ ಕೇಳಲು ಮಾವ ಸುಬ್ಬಾಳ್ವರನ್ನು ಕಾಯುತ್ತಿದ್ದ. ಕಿನ್ಯನ, ರಾಮ-ಲಕ್ಷ್ಮಣರೊಂದಿಗೆ ಬೇಸಾಯಕ್ಕೆ ಸಿದ್ಧತೆ ಮಾಡುತ್ತಿದ್ದ. ಆ ಸಮಯದಲ್ಲೇ ಅವರು ಉಕ್ಕುಡದಿಂದ ಗಾಡಿ ಬರಲು ರಸ್ತೆ ಮಾಡಿದರು.

ಎರಡು ದಿನ ಕಳೆಯಬೇಕಾದರೆ ಸುಬ್ಬಾಳ್ವರೂ, ಮಗ ಕಾಂತಣ್ಣನೂ ಬಂದರು. ಕಾಂತಣ್ಣನೂ ದಂಡಿನಿಂದ ಬಂದು ಎರಡು ದಿನ ಆಗಿತ್ತಷ್ಟೇ.

ಕಾಂತಣ್ಣ ಕುದುರೆಗಳನ್ನು ಸಾಕುವ ಕ್ರಮ, ಸವಾರಿ ಮಾಡುವ ರೀತಿ, ಆ ಪ್ರಾಣಿಗಳಲ್ಲಿ ಅವನಿಗಿರುವ ಪ್ರೀತಿ ನೋಡಿ ಅರಸರು ಅವನನ್ನು ಕುದುರೆಗಳ ಪಾಳಯದ ಸರದಾರನನ್ನಾಗಿ ಮಾಡಿದ್ದರು. ಅವನಿಗೆ ನೂರು ಕುದುರೆಗಳನ್ನೂ, ಆ ಕುದುರೆಗಳನ್ನು ಸಾಕಲು ಹತ್ತು ರಾವುತರನ್ನೂ ಕೊಟ್ಟಿದ್ದರು. ನಾಲ್ಕು ದಿನಗಳ ರಜೆಯಲ್ಲಿ ಬಂದಿದ್ದ ಕಾಂತಣ್ಣನಿಗೆ ಅವನ ಕುದುರೆಗಳದೇ ನೆನಪು. ಅವನು ಕುದುರೆಗಳನ್ನು ತನ್ನ ಪ್ರಾಣದಷ್ಟೇ ಪ್ರೀತಿಸುತ್ತಿದ್ದ.

ಕಿನ್ಯನ, ಲಕ್ಷ್ಮಣರಲ್ಲಿಯೂ ಅವನದು ಕುದುರೆಗಳದೇ ಮಾತು. ಸುಬ್ಬಾಳ್ವರೂ, ಮಂಜಣನೂ ಬೆಳಗ್ಗೆದ್ದು ಬೈಲು ತಿರುಗುತ್ತಾ ಬಡಾಜೆ ತಂತ್ರಿಗಳ ಮನೆ ತಲುಪಿದರು. ಮಂಜಣ ತಾನು ಮನೆ ಕಟ್ಟಿಸುವ ಆಸೆಯನ್ನು ಹೇಳಿಕೊಳ್ಳುತ್ತಾ ಭೂಮಿ ಪೂಜೆಗೊಂದು ದಿನ ನಿಶ್ಚಯಿಸಿ ಅವರೇ ನಿಂತು ಅದನ್ನು ಮಾಡಿಸಿಕೊಡಬೇಕೆಂದು ಕೇಳಿಕೊಂಡ. ತಂತ್ರಿಗಳು ನಗುತ್ತಾ ಹೇಳಿದರು,



''ಮಂಜಣಾಳ್ವ ನೀನು ನನ್ನಲ್ಲಿ ಆ ಮಿತ್ತಬೈಲಿನ ಭಟ್ಟರ ಆಸ್ತಿ ಖರೀದಿಸುವೆನೆಂದು ಹೇಳಿದ ದಿನವೇ ನಾನು ನಿನ್ನ ಹೊಸ ಮನೆಯ ಭೂಮಿ ಪೂಜೆ ಮಾತ್ರವಲ್ಲ ಗೃಹಪ್ರವೇಶದ ದಿನವನ್ನೂ ನಿಶ್ಚಯಿಸಿದ್ದೇನೆ''.

''ಎಲ್ಲ ತಮ್ಮ ಆಶೀರ್ವಾದ'' ಎಂದು ಹೇಳಿದ ಮಂಜಣ ತಂತ್ರಿಗಳ ಕಾಲಿಗೆರಗಿದ. ಸುಬ್ಬಾಳ್ವರೂ ಕೈಮುಗಿದು ಹೇಳಿದರು,

''ತಂತ್ರಿಯವರೇ ಈಗ ನೀವು ನಮಗೆ ಭೂಮಿ ಪೂಜೆಯ ಕಾರ್ಯ ನಡೆಸಿ ಕೊಡಬೇಕು''.

ತಂದಿದ್ದ ವೀಳ್ಯದೆಲೆ, ಅಡಿಕೆ, ಬೆಳ್ತಿಗೆ ಅಕ್ಕಿ, ತೆಂಗಿನ ಕಾಯಿಗಳನ್ನು ಗುಂಡದ ಮುಂದಿಟ್ಟು ತಂತ್ರಿಯವರಲ್ಲಿ, ''ನೆನೆದ ಸಮಯದಲ್ಲಿ ಕೆಲಸ ಆಗುವಂತೆ ಪೂಜೆ ಮಾಡಿ ಅಪ್ಪಣೆ ಕೊಡಿ'' ಎಂದು ಕೇಳಿಕೊಂಡರು.

''ಮಜಲೋಡಿಯ ಯಜಮಾನರೇ, ನಿಮ್ಮ ಅಳಿಯ ನನ್ನ ಬಳಿ ಬಂದು ಮಿತ್ತಬೈಲಿನ ಆಸ್ತಿಯನ್ನು ತನಗೆ ಮಾಡಿಸಿಕೊಡಲು ಹೇಳಿದಂದೇ ದೇವಿಯ ಸಂಕಲ್ಪ ಆಗಿತ್ತು. ಅವನಿಗೆ ಅನ್ನಪೂರ್ಣೇಶ್ವರಿ ಸಂಪೂರ್ಣ ಸಹಾಯದ ಅನುಗ್ರಹ ಮಾಡಿದ್ದಾಳೆ. ಅವನ ಕೈಯಲ್ಲಿ ಎಷ್ಟೋ ದೊಡ್ಡ ಕೆಲಸಗಳಾಗಲಿಕ್ಕಿವೆ. ಅವನು ಮುಟ್ಟಿದ್ದೆಲ್ಲಾ ಚಿನ್ನವಾಗಬಹುದು. ಹಿಡಿದ ಕೆಲಸವೆಲ್ಲಾ ಹೂವೆತ್ತಿದಂತೆ ನಡೆದು ಹೋಗುತ್ತದೆ. ನೀವು ನಿಶ್ಚಿಂತೆಯಿಂದ ಹೋಗಿ. ಇನ್ನು ಹತ್ತು ತಿಂಗಳು ಕಳೆದು ಬಂದಿರಾದರೆ ಇಂದಿನ ಈ ಮಾತನ್ನು ನಾನು ನೆನಪು ಮಾಡಿ ಕೊಡುತ್ತೇನೆ. ನಾಳೆಯೇ ಭೂಮಿ ಪೂಜೆಗೆ ದಿನ ನಿಶ್ಚಯಿಸಿದ್ದೇನೆ. ನೀವು ಭೂಮಿ ಪೂಜೆಗೆ ದಿನ ಕೇಳಲು ಇಂದೇ ಬರುತ್ತೀರೆಂದು ಅಮ್ಮ ಅನ್ನಪೂರ್ಣೇಶ್ವರಿಯ ಅಪ್ಪಣೆ ಆಗಿತ್ತು. ನಾಳೆ ಭೂಮಿ ಪೂಜೆಗೆ ಪ್ರಶಸ್ತವಾದ ದಿನ'' ಎಂದು ತಂತ್ರಿಗಳು ಹೇಳಿ, ಮಾವ-ಅಳಿಯನಿಗೆ ದೇವಿಯ ಗಂಧಪ್ರಸಾದ, ಕಟ್ಟಿಟ್ಟಿದ್ದ ಪಂಚಕಜ್ಜಾಯ ಕೊಟ್ಟು ಕಳುಹಿಸಿದರು.

ಮರುದಿನ ಬಂದ ತಂತ್ರಿಯವರು ದೊಡ್ಡ ಚಾವಡಿಯ ಬೀಡಿಗೆ ಆಯ ಹಾಕಿಸಿ ಭೂಮಿ ಪೂಜೆ ಮಾಡಿಸಿದರು.

ಕಲ್ಲಿನ ಕೆಲಸದ ಮೇಸ್ತ್ರಿ ಪಾಯ ತೆಗೆದು ಪಾಯ ಕಟ್ಟಿಕೊಟ್ಟ ಕೂಡಲೇ ಮಣ್ಣಿನ ಕೆಲಸದ ಮೇಸ್ತ್ರಿ ಪಾಯದಡಿಯಿಂದ ಗೋಡೆಯ ಕೆಲಸ ಪ್ರಾರಂಭಿಸಿದ. ಮಣೇಲಿನ ಅಂತು ಮೂಲ್ಯ, ಬಂಟ್ವಾಳದ ಸೋಮಯ ಮೇಸ್ತ್ರಿ, ದೊಂಬಯ ಆಚಾರಿಯವರು ರಾತ್ರಿ ಹಗಲು ಕೆಲಸ ಮಾಡ ತೊಡಗಿದರು. ಮಳೆಗೆ ಮೊದಲು ಮಾಡು ನಿಲ್ಲಿಸಿ ಬಿಟ್ಟರೆ ಒಳಗಿನ ಕೆಲಸ ಶ್ರಾವಣ ಕಳೆದ ಮೇಲೆ ಪ್ರಾರಂಭಿಸಬಹುದು. ಮಾಡಿಗೆ ಸೋಗೆ ಒಟ್ಟು ಮಾಡಿಸಿ ತಾಯಿ-ಮಕ್ಕಳು ತಟ್ಟಿ ಹೆಣೆಯಲು ತಯಾರಿ ನಡೆಸುತ್ತಿದ್ದರು. ಐವತ್ತರುವತ್ತು ಕೆಲಸಗಾರರ ಊಟ, ತಿಂಡಿಯ ಜವಾಬ್ದಾರಿ ಸೋಮಕ್ಕ ವಹಿಸಿಕೊಂಡರು. ಅವರಿಗೆ ಮನೆಯ ಹೆಣ್ಣು ಮಕ್ಕಳು ಸಹಾಯಕ್ಕೆ ನಿಂತರು.

ಮಿತ್ತಬೈಲಿನ ಅಂಗಳದ ಪಕ್ಕದ ಬೆಟ್ಟುಗದ್ದೆಗಳ ತುಂಬಾ ಕೆಲಸ ನಡೆಯುತ್ತಿತ್ತು. ಕಲ್ಲಿನ

ಹಾಗೂ ಮಣ್ಣಿನ ಕೆಲಸದ ಮೇಸ್ತ್ರಿಗಳು ಕುಂದ ನಿಲ್ಲಿಸಿ ಕೊಟ್ಟ ಕೂಡಲೇ, ಆಚಾರಿ ಚಾವಡಿಯ ಮಾಡು ಮಾಡಿಕೊಟ್ಟು ಮುಳಿಹುಲ್ಲು ಮುಚ್ಚಿಸುವ ಕೆಲಸದಲ್ಲಿ ತೊಡಗಿದ. ಮಾಡು ಆಗಿ, ಮಾಡಿಗೆ ಮುಳಿಹುಲ್ಲು ಹೊದಿಸಿಯಾದ ಕೂಡಲೇ ಆಚಾರಿಯನ್ನು ಬಿಟ್ಟು ಮಿಕ್ಕವರು ಬೇಸಾಯದ ಕೆಲಸಕ್ಕೆ ಹೊರಟರು. ಅಷ್ಟಾಗುವಾಗ ಮಳೆಯೂ ಪ್ರಾರಂಭ ವಾಯಿತು. ಆಷಾಢ ತಿಂಗಳ ಮಳೆ ಬಿದ್ದ ಕೂಡಲೇ ಮಿತ್ತಬೈಲಿನಲ್ಲೂ ಬೇಸಾಯದ ಕೆಲಸ ಪ್ರಾರಂಭವಾಯಿತು.

ಮಜಲೋಡಿಯಲ್ಲಿ ಮಾತ್ರ ದೋಗ್ರಾಚಾರಿಯ ಜನಗಳು ಚಾವಡಿಯ ಕಂಬ, ಬೋದಿಗೆಗಳ ಕೆತ್ತನೆಯ ಕೆಲಸ ಪ್ರಾರಂಭಿಸಿದವರು ನಿಲ್ಲಿಸಲಿಲ್ಲ. ಕಾರ್ಕಳದ ದೋಗ್ರ ಕೆತ್ತನೆಯ ಕೆಲಸದಲ್ಲಿ ಬಹಳ ನಿಪುಣ ಎಂದು ಯಾರೋ ಹೇಳಿದ್ದರು. ಅವನು ಕಾಸರಗೋಡಿನಿಂದ ಆಚೆ ಪೈಯ್ಯನ್ನೂರಿಗೆ ಹೋಗಿ ಕೆತ್ತನೆಯ ಕೆಲಸ ಕಲಿತಿದ್ದನಂತೆ. ಹಾಗಾಗಿಯೇ ಆದಿ ಸೆಟ್ಟಿ ಅವನನ್ನು ಹುಡುಕಿ ಕರೆಸಿದ್ದಾನೆ.

ಮಂಜಣ ಮಧ್ಯೆ ಎರಡು ಮೂರು ಬಾರಿ ಕುಂಬಳೆಗೆ ಹೋಗಿ ಮಾಯಿಪ್ಪಾಡಿಯ ಅರಸರನ್ನೂ, ಕೂಡೇಲಿನ ಶಾನುಭೋಗರನ್ನೂ ಕಂಡು ಮಾತನಾಡಿ ಬಂದಿದ್ದ. ಅರಸರ ಕುದುರೆ ಲಾಯಕ್ಕೆ ಹೋಗಿ ಕಾಂತಣ್ಣನನ್ನೂ ಭೇಟಿ ಮಾಡಿ ಬಂದ. ಕಾಂತಣ್ಣ ಗಾಳಿ, ಮಳೆ ಎನ್ನದೆ ಕುದುರೆಗಳ ಚಾಕರಿಯಲ್ಲಿಯೇ ಮುಳುಗಿದ್ದ.

ಸುಬ್ರಾಯ ಶಾನುಭೋಗರು, ಕಲ್ಯಾಣಪ್ಪ ಮಡಿಕೇರಿಯಲ್ಲಿ ದಂಡು ಕಟ್ಟುತ್ತಿರುವ ಸುದ್ದಿ ತಿಳಿಸಿದರು. ಮಂಗಳೂರಿಗೆ ದಾಳಿ ಮಾಡಿ ಕಂಪೆನಿ ಸರಕಾರದವರನ್ನು ಓಡಿಸಲೇ ಬೇಕೆಂಬ ತಯಾರಿಯಲ್ಲಿದ್ದ ಕಲ್ಯಾಣಪ್ಪ, ಮಂಗಳೂರಿಗೆ ದಾಳಿ ಮಾಡುವ ಮೊದಲು ಕಾಸರಗೋಡು, ಕುಂಬಳೆ, ಮಂಜೇಶ್ವರಗಳಲ್ಲಿ ಊರು ಲೂಟಿ ಮಾಡಿ ಹೋಗುವ ಸಿದ್ಧತೆಯಲ್ಲಿದ್ದಾನೆಂದು ಸುದ್ದಿ ಬರುತ್ತಿತ್ತು. ಕೊಳ್ಳೆ ಹೊಡೆದ ಸಂಪತ್ತನ್ನು ಆತ  ಬಡವರಿಗೆ ಹಂಚುತ್ತಾನಂತೆ ಎಂಬ ಸುದ್ದಿ ಕೇಳಿ, ಯುವಕರೆಲ್ಲಾ ದಂಡು ಸೇರಲು ತಯಾರಾಗಿದ್ದಾರಂತೆ. ಹೀಗೆ ನಾನಾ ಸುದ್ದಿಗಳು ಊರೆಲ್ಲ ಹರಡಿ ಜನರೆಲ್ಲಾ ಕಂಗಲಾಗಿದ್ದರು. ಶಾನುಭೋಗರಿಗೆ ಊರಿನ ಚಿಂತೆ. ಅವರು ಮಂಜಣನಿಗೆ ಸಿದ್ಧತೆಯಲ್ಲಿರುವಂತೆ ಹೇಳಿದರು.

ಮಂಜಣನಿಗೂ ಮಿತ್ತಬೈಲಿನಲ್ಲಿರುವಾಗಲೇ ಅವನ ಬೇಹುಗಾರಿಕೆಯ ಬ್ಯಾರಿಗಳು, ಕುಣಿತದ ದೊಂಬರು ಸುದ್ದಿ ತಲುಪಿಸುತ್ತಿದ್ದರು. ಸುಳ್ಯದಿಂದ ಮಂಗಳೂರಿನವರೆಗೆ ತರತರದ ಸುದ್ದಿಗಳು ಬರುತ್ತಿದ್ದವು. ಅದರಲ್ಲಿ ಒಂದು ಸುದ್ದಿ, ಬಾರಬೈಲಿನ ಬೀರಣ್ಣ ಬಂಟ ಕಲ್ಯಾಣಪ್ಪನ ದಂಡಿಗೆ ಸೇರಿ ಊರು ಕೊಳ್ಳೆ ಹೊಡೆಯಲು ಪ್ರಾರಂಭಿಸಿದ್ದಾನೆ ಎಂಬುದು. ಹತ್ತನಾವಧಿ ಕಳೆದಾಗುವಾಗ ಊರಿನ ದೇವಸ್ಥಾನ, ದೈವಸ್ಥಾನಗಳಲ್ಲಿ ಆಯನ, ಅಂಕ, ನೇಮ ನಡಾವಳಿಗಳು ಮುಗಿದಿರುತ್ತವೆ. ಹಾಗಾಗಿ ಲೂಟಿಗಾರರು ದೇವಸ್ಥಾನ, ಭೂತಸ್ಥಾನಗಳ ಮೇಲೆ ಕಣ್ಣಿಟ್ಟಿದ್ದಾರೆಂಬ ಗಾಳಿಸುದ್ದಿಗಳೂ ಬರುತ್ತಿದ್ದವು.

ಆಷಾಢದ ಮಳೆಗೆ ಬಂದ ನೆರೆ ನಾಲ್ಕು ದಿನ ಕಳೆದರೂ ಇಳಿಯಲಿಲ್ಲ. ದೋಣಿ



ಯಲ್ಲಿ ಹೋಗಲೂ ಹೆದರುತ್ತಿರುವಾಗ ಒಂದು ದಿನ ಆ ಮಳೆಯಲ್ಲಿಯೇ ಬಡಾಜೆಯ ತಂತ್ರಿಯವರ ಆಳು ಬಂದು ಮಂಜಣನಿಗೆ ಬಡಾಜೆಗೆ ಕೂಡಲೇ ಬರುವಂತೆ ಹೇಳಿಕೆ ಕೊಟ್ಟು ಹೋದ. ತಂತ್ರಿಗಳು ಈ ನೆರೆಯ ನಡುವೆ ಧಾರಾಕಾರ ಸುರಿವ ಮಳೆಯಲ್ಲೇ, ಬರಬೇಕು ಎಂದು ಆಳು ಕಳುಹಿಸಬೇಕಾದರೆ ಅಲ್ಲಿ ಏನೋ ವಿಶೇಷ ಇರಬೇಕೆಂದುಕೊಂಡ ಮಂಜಣ, ತನ್ನ ಬಲಕ್ಕೈ ಬಂಟ ಐತನನ್ನು ಕರೆದುಕೊಂಡು, ದೋಣಿಯನ್ನು ನೆರೆಯಲ್ಲಿಯೇ ನಡೆಸಿಕೊಂಡು ಬಡಾಜೆಯ ಬೈಲಿಗೆ ಇಳಿದ. ಮನೆಗೆ ತಲುಪುವಾಗ ತಂತ್ರಿಗಳು ಪೂಜೆ ಯಲ್ಲಿದ್ದರು. ಅವರು ಪೂಜೆ ಮುಗಿಸಿ ಬರುವಾಗ, ಮಳೆ ನಿಂತು, ಕೋಣಗಳ ಬೆನ್ನು ಒಡೆಯುವಂತಹ ಬಿಸಿಲು ಕಾಯಲು ಪ್ರಾರಂಭಿಸಿತ್ತು. ತಂತ್ರಿಯವರು ಮಂಜಣನನ್ನು ಅಂಗಳದ ಕೆಂದಾಳಿ ತೆಂಗಿನಮರದ ಕಟ್ಟೆಗೆ ಕರೆದುಕೊಂಡು ಹೋಗಿ ಕುಳಿತುಕೊಂಡು ಊರಿನ ಸುದ್ದಿ ಹೇಳಿದರು. “ಬಾರಬೈಲಿನ ಬೀರಣ್ಣ ಬಂಟನ ಸುದ್ದಿ ಏನಾದರೂ ಕೇಳಿದ್ದೀಯಾ? ಆತ ಎಲ್ಲಿದ್ದಾನೆ? ಏನು ಮಾಡುತ್ತಿದ್ದಾನೆ?” ಎಂದು ಕೇಳಿದರು. ಮಂಜಣ ತನಗೆ ಗೊತ್ತಿದ್ದುದನ್ನು ಹೇಳಿ, ಕೇಳಿದ,

‘‘ಯಾಕೆ ಸ್ವಾಮಿ, ನೀವು ಬಾರಬೈಲಿನ ಬೀರಣ್ಣನ ಸುದ್ದಿ ಕೇಳಿದಿರಿ? ನಿಮ್ಮ ಕಿವಿಗೆ ಏನಾದರೂ ಸುದ್ದಿ ಬಿತ್ತಾ? ನೀವು ಅದನ್ನು ಹೇಳಲು ನನ್ನನ್ನು ಕರೆಸಿದಿರಾ?’’

‘‘ಹೌದು ಮಂಜಣಾಳ್ವ, ನನ್ನ ಕಿವಿಗೆ ಸ್ವಲ್ಪ ಸುದ್ದಿ ಬಿದ್ದಿದೆ. ಅದನ್ನು ಕೂಡಲೇ ತಿಳಿಸೋಣವೆಂದೇ ನಿನ್ನನ್ನು ಕರೆಸಿದ್ದು. ನಿನಗೆ ಗೊತ್ತುಂಟೋ ಏನೋ, ಪಾವೂರಿನ ಮಿತ್ತಬೈಲಿ ನಲ್ಲಿ ಕಲ್ಲೂರು ಎಂಬ ಜಾಗದಲ್ಲಿ ನಾಲ್ಕೈದು ಬೆಲ್ಚಡರ ಕುಟುಂಬಗಳಿವೆ. ಅವರಲ್ಲಿ ಒಬ್ಬ ಯುವಕ ಮಾಯಿಲ ಬೆಲ್ಚಡಾಂತ. ಅಂಕಗಳ ಕೋಳಿ ಬಿಡುವುದರಲ್ಲಿ ಆತ ಬಹಳ ನಿಪುಣನಂತೆ. ಸ್ವಲ್ಪ ಮದ್ದು ಮಾಟವನ್ನೂ ಮಾಡ್ತಾನಂತೆ. ಆ ಮಾಯಿಲ ಒಂದು ಗುಡಿ ಕಟ್ಟಿ ಶುಕ್ರವಾರದಂದು ಭಗವತಿ ತನ್ನ ಮೈಮೇಲೆ ಬರುತ್ತಾಳೆಂದು ಆವೇಶ ಬಂದು ನಮ್ಮ ಕೆಲಸದ ಮಕ್ಕಳಿಗೆಲ್ಲ ಕುಂಕುಮ ಕೊಡಲು ಪ್ರಾರಂಭಿಸಿದ್ದಾನಂತೆ. ಮೂರು ನಾಲ್ಕು ಜನ ಬರುತ್ತಿದ್ದ ಭಗವತಿ ಗುಡಿಗೆ ಈಗ ನೂರಿನ್ನೂರು ಜನ ಬರುತ್ತಿದ್ದಾರಂತೆ. ಮಾಯಿಲ ಕಳೆದ ಶುಕ್ರವಾರ ದಿಂದ ಭಗವತಿಯ ಆಣೆ ಹಾಕಿಸಿ ಯುವಕರನ್ನು ಕಲ್ಯಾಣಪ್ಪನ ದಂಡಿಗೆ ಸೇರಿಸಲು ಪ್ರಾರಂಭಿಸಿದ್ದಾನಂತೆ. ಇದಕ್ಕೆಲ್ಲ ಸೂತ್ರಧಾರ ಬಾರಬೈಲಿನ ಬೀರಣ್ಣ ಬಂಟ. ನಿನಗೆ ತಿಳಿದಿರಲಿಕ್ಕಿಲ್ಲ. ದಂಡಿಗೆ ಸೇರುವುದಕ್ಕಿಂತ ಮೊದಲು ಬೀರಣ್ಣ ಮಾಯಿಲನೊಂದಿಗೆ ಭಾರೀ ಓಡಾಡುತ್ತಿದ್ದ. ಬೀರಣ್ಣ ಹಿಂದೆ  ಮಾಯಿಲನ ತಂಗಿ ದೇಯಿಯ ಜೊತೆ ಸಲಿಗೆಯಿಂದಿದ್ದ. ಊರಿಡೀ ಈ ವಿಷಯ ಗೊತ್ತಿದ್ದರೂ ಹೆದರಿಕೆಯಿಂದಾಗಿ ಯಾರೂ ಅವರ ಸುದ್ದಿ ಎತ್ತುತ್ತಿರಲಿಲ್ಲ. ಸುದ್ದಿಯ ಪ್ರಕಾರ, ಬೀರಣ್ಣ ಈಗಲೂ ವಾರಕ್ಕೊಮ್ಮೆ ಕಲ್ಲೂರಿಗೆ ಬಂದು ಯುವಕರನ್ನು ದಂಡಿಗೆ ಕರೆದುಕೊಂಡು ಹೋಗುತ್ತಿದ್ದಾನಂತೆ. ಕಳೆದ ರಾತ್ರಿ ಬಂದು ಇಂದು ಬೆಳಗ್ಗೆ ಹತ್ತು ಯುವಕರನ್ನು ಅಮರಸುಳ್ಯಕ್ಕೆ ಕರೆದುಕೊಂಡು ಹೋಗಿದ್ದಾನಂತೆ’’.

‘‘ಹೂಂ, ಇದು ಇಲ್ಲಿಯವರೆಗೆ ತಲುಪಬಹುದೆಂದು ನಾನು ಭಾವಿಸಿರಲಿಲ್ಲ.

ಎಷ್ಟಾದರೂ ಜಾತಿ ಮಗ, ಸ್ವಲ್ಪ ಸಮಯ ನಮಗೆ ಬೇಸಾಯದ ಕೆಲಸದಲ್ಲಿ ಸಹಾಯ ಮಾಡಿದವನೂಂತ ಬಿಟ್ಟಿದ್ದೆ. ನನ್ನ ಕಿವಿಗೆ ಬಿದ್ದ ಗಾಳಿ ಸುದ್ದಿಗಳಿಗೆ ಹೆಚ್ಚು ಮಹತ್ವ ಕೊಟ್ಟಿರಲಿಲ್ಲ ನಾನು. ಹೆದರಬೇಡಿ ನಾನು ಈಗಲೇ ಕುಂಬಳೆಗೆ ಹೋಗಿ ಅರಸರಿಗೂ ಶಾನುಭೋಗರಿಗೂ ಸುದ್ದಿ ಮುಟ್ಟಿಸುವೆ''.

''ನಿಲ್ಲು, ನಿಲ್ಲು, ಈ ವಿಷಯ ಇಲ್ಲಿಗೇ ಮುಗಿಯಲಿಲ್ಲ, ನಿನ್ನೆ ಬಂದ ಬೀರಣ್ಣ ಮಾಯಿಲನಲ್ಲಿ ಕೆಲವು ಗುಟ್ಟಿನ ಯೋಜನೆಗಳನ್ನು ಚರ್ಚಿಸಿ ಹೋಗಿದ್ದಾನೆ. ಎಣೆಲು ಕೊಯ್ಲು ಆದ ಬೆನ್ನಿಗೇ ಕಲ್ಯಾಣಪ್ಪ ದಂಡು ತೆಗೆದುಕೊಂಡು ಬರುತ್ತಾನೆ ಎಂಬ ಗಾಳಿ ಸುದ್ದಿ ಬರುತ್ತಿದೆ. ಅದಕ್ಕೆ ಮೊದಲು ದಂಡು ಇಲ್ಲಿಗೆ ಬರುವುದಿಲ್ಲ, ಆದರೆ ಬೀರಣ್ಣ ಮಾತ್ರ ಬೇರೆಯೇ ಯೋಚನೆ ಮಾಡಿದ್ದಾನೆ. ಕಲ್ಯಾಣಪ್ಪನ ದಂಡು ಊರಿಗೆ ನುಗ್ಗುವುದಕ್ಕೆ ಮುಂಚೆ ವರ್ಕಾಡಿ, ಕೋಳ್ಯೂರು, ಬಡಾಜೆಯ ದೇವಸ್ಥಾನಗಳಿಗೆ ನುಗ್ಗಿ ದೋಚಬೇಕೂಂತಿದ್ದಾನೆ. ಅದೇ ಸಮಯದಲ್ಲಿ ನಿಮ್ಮ ಮನೆ, ತಾಳಿತ್ತಾಯರದು, ಬಡಾಜೆಯ ನಮ್ಮ ಮನೆಗಳನ್ನೆಲ್ಲಾ ಲೂಟಿ ಮಾಡಿ, ಮನೆಯ ಹೆಣ್ಣು ಮಕ್ಕಳನ್ನು ಹೊತ್ತುಕೊಂಡು ಹೋಗಬೇಕು, ಎಲ್ಲಕ್ಕಿಂತ ಮಂಜಣ, ನಿನ್ನ ತಂಗಿಯರನ್ನು ಎಳೆದುಕೊಂಡು ಹೋಗಬೇಕು ಎಂಬ ಹಠದಲ್ಲಿದ್ದಾನೆ ಬೀರಣ್ಣ''.

ಆಶ್ಚರ್ಯದಲ್ಲಿ ಬಿದ್ದ ಮಂಜಣನಿಗೆ ಒಂದನ್ನೂ ನಂಬಲಿಕ್ಕೆ ಸಾಧ್ಯವಾಗಲಿಲ್ಲ.

''ಅಲ್ಲ ಸ್ವಾಮಿ, ಇದೆಲ್ಲ ನಿಮಗೆ...?''

''ನನಗೆ ಹೇಗೆ ತಿಳಿಯಿತೂಂತ ಅಲ್ಲವಾ? ಹೇಳಿದರೆ ನೀನು ನಂಬಲಿಕ್ಕಿಲ್ಲ, ಅದೊಂದು ದೊಡ್ಡ ಕತೆ. ನನ್ನನ್ನು ನಂಬು. ನಾನು ಹೇಳಿದ್ದೆಲ್ಲ ನಿನ್ನೆ ರಾತ್ರಿ ಮಾಯಿಲನ ಮನೆಯಲ್ಲಿ ಬೀರಣ್ಣನೂ ಮಾಯಿಲನೂ ಮಾತಾಡಿಕೊಂಡ ವಿಷಯ''.

''ನಿಮಗೆ ಯಾರು ಹೇಳಿದರು ಸ್ವಾಮೀ?''

''ಹೇಳುತ್ತೇನೆ. ಕತೆಯೊಂದನ್ನು ಹೇಳುತ್ತೇನೆ. ಮತ್ತೆ ನೀನೂ ಕಲ್ಲೂರಿನ ಸುತ್ತಮುತ್ತ ಸ್ವಲ್ಪ ವಿಚಾರಿಸು. ಆಗ ನಾನು ಹೇಳುತ್ತಿರುವುದು ಸತ್ಯ ಹೌದಾ ಅಲ್ಲವಾಂತ ನಿನಗೇ ತಿಳಿಯುತ್ತದೆ''.

''ಈ ನಮ್ಮ ಮಾಯಿಲ ಕಲ್ಲೂರಿಗೆ ಬಂದು ಹತ್ತು ಹದಿನೈದು ವರ್ಷಗಳಾದವಷ್ಟೇ. ಬಂದ ಕೂಡಲೇ ಒಂದೆರಡು ವರ್ಷ ಕಲ್ಲೂರಾಯರ ಮನೆಯಲ್ಲಿ ಕೆಲಸಕ್ಕಿದ್ದ. ಎರಡು ವರ್ಷ ಕಳೆದು ಬೇರೆಯೇ ಒಂದು ಒಕ್ಕಲಾಗಿ, ಕಲ್ಲೂರಾಯರ ಗೇಣಿಯ ಭೂಮಿಯಲ್ಲಿ ದುಡಿಯಲು ಪ್ರಾರಂಭಿಸಿದ. ಅದರ ಬೆನ್ನಿಗೇ ಎರಡು ಮೂರು ಬೇರೆ ಬೆಳ್ಚಡರ ಕುಟುಂಬ ಗಳನ್ನು ಕಲ್ಲೂರಿಗೆ ಕರೆತಂದ. ಈ ಬೆಳ್ಚಡರು ನಮ್ಮ ಊರಿನ ಬಿಲ್ಲವರದೇ ಜಾತಿ. ಅವರು ಚಂದ್ರಗಿರಿ ನದಿಯ ಆ ಕಡೆಗೆ ಇರುವುದರಿಂದ ಮಲೆಯಾಳ ಮಾತನಾಡುತ್ತಾರೆ. ನಮ್ಮಲ್ಲಿ ಇರುವವರು ದೈವಸ್ಥಾನಗಳ ಪೂಜಾರಿಗಳಾಗಿ ಮದ್ದು ಬೇರು ಕೊಡುತ್ತಾ ವೈದ್ಯರ ಕೆಲಸ ಮಾಡಿ ಸಮಾಜದ 'ಬೈದ್ಯರು' ಆದರು. ಚಂದ್ರಗಿರಿಯ ಆ ಕಡೆಯ ಬೆಳ್ಚಡರೂ ಕ್ರಮೇಣ



ಈ ಕಡೆಗೆ ಬಂದು ಅದೇ ಕಸುಬು ಮಾಡುತ್ತಿದ್ದರು. ಈಗಲೂ ಒಳ್ಳೆಯ ಬಿಲ್ಲು, ಬಾಣ, ಕತ್ತಿ, ದೊಣ್ಣೆಯ ಪೆಟ್ಟಿನಲ್ಲಿ ಈ ಬೆಳ್ಚಡರು ಬಹಳ ಗಟ್ಟಿಗರು. ನಿನಗೆ ತಿಳಿದಿದೆಯೋ ಏನೋ, ಈ ಒತ್ತೆಕೋಲ, ವಿಷ್ಣುಮೂರ್ತಿ ದೈವ, ಭಗವತಿ ಆರಾಧನೆ ಎಲ್ಲ ಅವರೊಂದಿಗೆ ನಮ್ಮಲ್ಲಿಗೆ ಬಂದ ಆರಾಧನಾ ಪದ್ಧತಿಗಳು. ಮಾಯಿಲ ಬೆಳ್ಚಡ, ತಾನು ಕರೆತಂದ ಐದಾರು ಕುಟುಂಬಗಳೊಟ್ಟಿಗೆ ಭಗವತಿಯನ್ನೂ ಕರೆತಂದ. ನಿನಗೆ ಗೊತ್ತಂಟಲ್ಲಾ, ಈ ಬೆಳ್ಚಡರು ಬೇರು, ನಾರಿನ ಮದ್ದು ಕೊಡಲು ಗೊತ್ತಿದ್ದವರೂಂತ. ಮಾಯಿಲನೂ ತನಗೆ ಅಲ್ಪಸ್ವಲ್ಪ ತಿಳಿದುದರ ಜೊತೆಗೆ ಕಲ್ಲೂರಾಯರ ಮನೆಯಲ್ಲಿ ಅವರು ಕೊಡುವ ಕಷಾಯ, ಮಾತ್ರೆಗಳನ್ನೂ ಕಲಿತುಕೊಂಡ. ನಮ್ಮ ಹಳ್ಳಿಯ ಮುಗ್ಧರಿಗೆ ಮದ್ದಿನೊಂದಿಗೆ ಮಂತ್ರವಾದ ಇಲ್ಲದಿದ್ದರೆ ಮದ್ದು ಹಿಡಿಯುವುದಿಲ್ಲ, ಹಾಗಾಗಿ ಮಾಯಿಲ ಹುಚ್ಚು ಬಿಡಿಸುವುದು, ದೆವ್ವ ಬಿಡಿಸುವುದು ಇತ್ಯಾದಿ ಮದ್ದು ಮಾಟಗಳಲ್ಲೂ ದೊಡ್ಡ ಮಂತ್ರವಾದಿಯಾದ. ಜೊತೆಗೆ ಕೋಳಿ ಬಿಡುವ, ಸಾರಾಯಿ ಇಳಿಸುವ ವಿದ್ಯೆಯಲ್ಲೂ ಆತ ನಿಪುಣ. ಹಾಗಾಗಿ ಅವನಿಗೆ ಗಿರಾಕಿಗಳಿಗೆ ಬರ ಇರಲಿಲ್ಲ. ಮಾಯಿಲ, ಬರೇ ಮಾಯಿಲ ಹೋಗಿ 'ಮಾಯಿಲ ಬೆಳ್ಚಪ್ಪಾಡರ್' ಆದ. ಇಷ್ಟೆಲ್ಲಾ ಕಾರುಬಾರು ಮಾಡುತ್ತಿದ್ದರೂ ಮಾಯಿಲನಷ್ಟು ತಗ್ಗಿ ಬಗ್ಗಿ ನಡೆಯುವ ಜನ ಸಿಗಲಿಕ್ಕಿಲ್ಲ.

ಮದ್ದು ಮಾಟ ಮಾಡುವ ಮಾಯಿಲನಿಗೆ ತನ್ನ ಮಡದಿಯ ರೋಗದ ಗುಟ್ಟು ತಿಳಿಯಲಿಲ್ಲ, ಅಮ್ಮಣಿಗೆ ಗಂಡನ ಕೃತ್ಯಗಳನ್ನು ನೋಡಿ ಹುಚ್ಚು ಹಿಡಿದಂತೆ ಆಗುತ್ತಿತ್ತು. ಗಂಡನ ಕೃತ್ಯಗಳನ್ನು ವಿರೋಧಿಸಿದಾಗ ಅವನ ಕೈಯ ಪೆಟ್ಟು, ಹಿಂಸೆ ಅವಳಿಂದ ತಡೆಯಲಾಗಲಿಲ್ಲ. ಮಾಯಿಲನ ಮನೆಗೆ ಹುಚ್ಚು ಬಿಡಿಸಲು, ಮಾಟ ತೆಗೆಸಲು ಬರುವ ಹೆಣ್ಣುಗಳು ಅವನ ಅತ್ಯಾಚಾರಕ್ಕೆ ಬಲಿಯಾಗುತ್ತಿರುವಾಗ ಅಮ್ಮಣಿ ಸಂಕಟ ಅನುಭವಿಸುತ್ತಿದ್ದಳು. ಮಾಯಿಲ ಹೆಣ್ಣುಗಳನ್ನು ತನ್ನ ನೆಚ್ಚಿನ ಗೆಳೆಯ ಬೀರಣ್ಣನ ಹಾಸಿಗೆಗೂ ಕಳುಹಿಸುತ್ತಿದ್ದ. ಶೇಂದಿ, ಶರಾಬುಗಳನ್ನು ಕುಡಿದು ಬರುತ್ತಿದ್ದ ಬೀರಣ್ಣನೂ, ಮಾಯಿಲನೂ ಕೂಡಿ ಈ ಹೆಣ್ಣುಗಳ ಮೇಲೆ ಭಗವತಿ ಗುಡಿಯ ಅಂಗಳದಲ್ಲೇ ಅತ್ಯಾಚಾರ ಮಾಡಲು ಪ್ರಾರಂಭವಾಯಿತು. ಇದನ್ನೆಲ್ಲಾ ನೋಡಿದ ಅಮ್ಮಣಿಗೆ ಹುಚ್ಚು ಹಿಡಿದಂತಾಯಿತು. ಅವಳಿಗೆ ಮಾಯಿಲನನ್ನು ನೋಡಿದರೆ ದರ್ಶನ ಬರಲು ಆರಂಭವಾಯಿತು. ಒಂದು ದಿನ ಅಮ್ಮಣಿಯ ತಮ್ಮ ಅವಳನ್ನು ಇಲ್ಲಿಗೆ ಕರೆತಂದ. ಅವಳನ್ನು ದೇವಿಯ ಪೂಜೆಗೆ ಕುಳ್ಳಿರಿಸಿ ನನಗೆ ತಿಳಿದಷ್ಟು ಬೇರು, ನಾರು ಕೊಟ್ಟು ಶಾಂತ ಮಾಡುವಾಗ ಅಮ್ಮಣಿ ಸ್ವಲ್ಪ ಗೆಲುವಾದಳು. ಅವಳ ದರ್ಶನ, ಹುಚ್ಚಿಯಂತೆ ಬಟ್ಟೆ ಬಿಚ್ಚಿ ನರ್ತಿಸುವುದೆಲ್ಲ ನಿಂತಿತು. ಇಲ್ಲಿಗೆ ದಿನಾ ಬೆಳಗ್ಗೆ ಬಂದು ಹೂ ಕಟ್ಟಿ, ಅಂಗಳಕ್ಕೆ ಸೆಗಣಿ ಸಾರಿಸಿ ದೇವಿಯ ಸೇವೆ ಮಾಡಲು ತೊಡಗಿದ ಮೇಲೆ ಅವಳ ಮನಸ್ಸು ಸ್ಥಿಮಿತಕ್ಕೆ ಬಂತು.

''ಮಾಯಿಲನಿಗೆ ಮಾತ್ರ ಅವಳು ಇಲ್ಲಿಗೆ ಬರುವುದು ಇಷ್ಟವಿರಲಿಲ್ಲ, ಅವನಿಗೆ, ತನ್ನ ಕತೆಯನ್ನು ಎಲ್ಲಿಯಾದರೂ ನನಗೆ ಹೇಳಿ ಬಿಡುತ್ತಾಳೋ ಎಂಬ ಭಯ. ಬೀರಣ್ಣಾಳ್ವನೂ

ಸ್ವಲ್ಪ ಗಾಳಿ ಹಾಕುತ್ತಿದ್ದ. ಒಂದು ದಿನ ಅಮ್ಮಣಿ ಗಂಡನಿಗೆ ಎದುರು ನಿಂತಳು. ತಾನು ಮಾಗಣೆಯ ಗುರಿಕಾರರಿಗೂ ಮಾಯಿಪ್ಪಾಡಿಯ ಅರಸರಿಗೂ ದೂರು ಕೊಡುತ್ತೇನೆಂದು ಹೇಳಿದಾಗ ಮಾಯಿಲ ಹೆದರಿದ. ಅಂದು ಅವಳು ಮಾಯಿಲನನ್ನೂ ಅವಳ ತಮ್ಮಂದಿರನ್ನೂ ಇಲ್ಲಿಗೆ ಎಳೆದುಕೊಂಡು ಬಂದು ಆಣೆ ಹಾಕಿಸಿದಳು. ಅವಳಿಗೆ ಏನಾದರೂ ಸಂಭವಿಸಿದರೆ ಬಡಾಜೆಯ ತಂತ್ರಿಯವರೂ ಅವಳ ಕುಟುಂಬದವರೂ ಸೇರಿ ಮಾಯಿಪ್ಪಾಡಿಯ ಅರಸರಿಗೆ ದೂರು ಕೊಡಬೇಕೆಂದೂ ಮಾತು ಪಡೆದುಕೊಂಡಳು.

''ಮಾಯಿಲ ಎಲ್ಲದಕ್ಕೂ ಒಪ್ಪಿ ಹೋದವ ಸ್ವಲ್ಪ ಸಮಯ ತಣ್ಣಗಿದ್ದಂತೆ ಇದ್ದ. ಆದರೆ ನನಗೆ ಒಮ್ಮೊಮ್ಮೆ ಸಂಶಯ ಬರತೊಡಗಿತ್ತು. ಆತ ಸುಮ್ಮನಿರುವ ಜಾತಿಯೇ ಅಲ್ಲ. ಏನೋ ಇರಬೇಕೆಂದು ಯೋಚಿಸುತ್ತಿರುವಾಗ ಇಂದು ಅಮ್ಮಣಿ ಬಂದು ಸುದ್ದಿ ತಿಳಿಸಿದಳು. ಈ ಸುದ್ದಿ ಕೇಳಿ ನಿನ್ನನ್ನು ಕರೆಸಿದ್ದು. ನನಗೆ ಅಮ್ಮಣಿಯ ಮಾತಿನಲ್ಲಿ ನಂಬಿಕೆ ಇದೆ. ಬೀರಣ್ಣನೂ ಮಾಯಿಲನೂ ಏನೋ ದೊಡ್ಡ ಯೋಜನೆ ಹಾಕಿ ಹೊರಟಿದ್ದಾರೆಂಬುದರಲ್ಲಿ ಸಂಶಯವಿಲ್ಲ''.

''ಮಾಯಿಲನೂ ಬೀರಣ್ಣನೂ ರಾತ್ರಿ ಇಡೀ ಊರು ತಿರುಗಿ ಕೋವಿ, ಕತ್ತಿ ಒಟ್ಟು ಮಾಡಿ ಭಗವತಿಯ ಗುಡಿಯಲ್ಲಿ ಬಚ್ಚಿಟ್ಟಿದ್ದಾರಂತೆ. ರಾತ್ರಿಯೆಲ್ಲಾ ಯುವಕರು ಬರುತ್ತಿದ್ದರಂತೆ. ಈಗ ಅವರು ಏನು ಮಾಡಲು ಹೊರಟಿದ್ದಾರೆಂಬುದನ್ನು ಪತ್ತೆ ಹಚ್ಚುವ ಕೆಲಸ ನಿನ್ನದು. ಅಮ್ಮಣಿಯ ಕಿವಿಗೆ ಬಿದ್ದ ಸಂಗತಿಯಂತೆ ಇಂದು-ನಾಳೆಯ ರಾತ್ರಿಯಲ್ಲಿ ಏನಾದರೂ ನಡೆಯಲಿಕ್ಕಿದೆ.''

ತಂತ್ರಿಗಳು ಮಾತಾಡಿ ಮುಗಿಸುವಾಗ ಅವರ ಮುಖದಲ್ಲಿ ಭಯದ ಕಾರ್ಮೋಡ ಕವಿದಿತ್ತು. ಕಣ್ಣಲ್ಲಿ ಆತಂಕ ಎದ್ದು ಕಾಣುತ್ತಿತ್ತು. ಮಂಜಣ್ಣ ಎದ್ದು ನಿಂತ.

''ಸ್ವಾಮೀ, ಮಾಯಿಲನೂ ಬೀರಣ್ಣನೂ ಲೆಕ್ಕಕ್ಕಿಂತ ಹೆಚ್ಚು ಬೆಳೆದು ಬಿಟ್ಟಿದ್ದಾರೆ. ಅವರಿಗೆ ಕೂಡಲೇ ಬುದ್ಧಿ ಕಲಿಸದಿದ್ದರೆ ಬಹಳ ದೊಡ್ಡ ಅನಾಹುತ ಸಂಭವಿಸಬಹುದು. ನಾನು ಈಗಲೇ ಮಾಯಿಪ್ಪಾಡಿಗೆ ಹೋಗಿ ಸುಬ್ರಾಯ ಶಾನುಭೋಗರಲ್ಲಿಯೂ, ಅರಸರಲ್ಲಿಯೂ ವಿಷಯ ತಿಳಿಸಿ ಬೇಕಾದ ಮುಂಜಾಗರೂಕತೆ ತೆಗೆದುಕೊಳ್ಳುವೆ. ನೀವೊಮ್ಮೆ ತಾಳಿತ್ತಾಯರಿಗೂ, ವರ್ಕಾಡಿ, ಕೋಳ್ಯೂರು ದೇವಸ್ಥಾನಗಳಿಗೂ ಆಳು ಕಳುಹಿಸಿ ಜಾಗ್ರತೆ ವಹಿಸುವಂತೆ ಹೇಳಿ. ಸಂಜೆಯೊಳಗೆ ಸೇನೆಯ ತುಕಡಿಗಳನ್ನು ಎಲ್ಲ ದಿಕ್ಕುಗಳಲ್ಲೂ ಕಾವಲಿಗೆ ನೇಮಿಸುವೆ. ನೀವು ಹೆದರಬೇಡಿ. ಮಿತ್ತಬೈಲಿನವರು ಬಡಾಜೆಯ ಕಾವಲಿಗೆ ಬರುವರು''. ಮಂಜಣಾಳ್ವ ತಂತ್ರಿಯವರ ಅಪ್ಪಣೆ ಪಡೆದು ಮಾಯಿಪ್ಪಾಡಿಗೆ ಹೊರಟ.

ಕುಂಬಳೆಯಲ್ಲಿ ಸೇನಾಧಿಕಾರಿಗೂ, ಸುಬ್ರಾಯ ಶಾನುಭೋಗರಿಗೂ ವಿಷಯವೆಲ್ಲ ತಿಳಿಸಿದಾಗ ಅವರು ಅವನೊಂದಿಗೆ ಹೋಗಿ ಅರಸರನ್ನು ಭೇಟಿಯಾಗಿ ವಿಷಯವನ್ನು ವಿವರಿಸಿದಾಗ, ಇನ್ನೂರು ಸೈನಿಕರನ್ನು ಕಾವಲಿಗೆ ಕಳುಹಿಸಿದರು.

ರಾಮಂತರಸರು ಮರುದಿನ ಬೆಳಗ್ಗೆ ವರ್ಕಾಡಿ ದೇವಸ್ಥಾನದ ನ್ಯಾಯ ಮಂಟಪದಲ್ಲಿ



ಸಭೆ ಸೇರುವುದೆಂದು ನಿಶ್ಚಯಿಸಿ ಹೇಳಿಕೆ ಕಳುಹಿಸಿದರು. ಮಾಯಿಲನಿಗೂ, ಕಲ್ಲೂರಿನ ಎಲ್ಲ ಬೆಲ್ಚಡರ ಮನೆಗಳವರಿಗೂ ಹೇಳಿಕೆ ಹೋಯಿತು. ವರ್ಕಾಡಿ ಸೀಮೆಯ ಅಷ್ಟ ಪ್ರಧಾನರಿಗೂ ಸುತ್ತಮುತ್ತಲ ಗುತ್ತಿನ ಯಜಮಾನರಿಗೂ ಗುರಿಕಾರರಿಗೂ ಹೇಳಿ ಕಳುಹಿಸಿದರು. ಬೆಲ್ಚಪ್ಪಾಡರ ಹತ್ತು ತಾಣಗಳ ಗುರಿಕಾರರಿಗೂ ಮಾಯಿಪ್ಪಾಡಿ ಅರಸರ ಸಭೆಯ ಹೇಳಿಕೆ ಹೋಯಿತು.

ಮಂಜಣಾಳ್ವ ಬಂದವನೇ ವರ್ಕಾಡಿ, ಮಿತ್ತಬೈಲು ಬಡಾಜೆಗಳಲ್ಲಿದ್ದ ತನ್ನ ಸೈನಿಕರನ್ನು ಭೇಟಿಯಾಗಿ ಕಾವಲನ್ನು ಬಿಗಿಗೊಳಿಸಿದ. ಕೋಡಿಬೈಲು ಗರಡಿಯ ನೂರು ಯುವಕರನ್ನೂ, ಮಂಜೇಶ್ವರ ಮಾಗಣೆಯ ನೂರು ಬಿಲ್ಲಾಳುಗಳನ್ನೂ ಕರೆಸಿ ಆನೆಕಲ್ಲಿನಿಂದ ಮಂಜೇಶ್ವರ ದವರೆಗೆ ಕಾವಲಿಗೆ ವ್ಯವಸ್ಥೆ ಮಾಡಿದ. ಆನೆಕಲ್ಲಿನಿಂದ ದೋಣಿಯಲ್ಲೇ ಬಂದ ಮಂಜಣನಿಗೆ, ಮಾಗಣೆಯ ಬೆಲ್ಚಪ್ಪಾಡರು ಮಾಯಿಲನ ಮಾತು ಕೇಳಿ ಕಲ್ಯಾಣಪ್ಪನ ದಂಡಿಗೆ ಸೇರಿದರೆ ಕೆಲಸ ಕೆಡಬಹುದೆಂದು ಅನಿಸಿತು.

ಬೆಲ್ಚಪ್ಪಾಡರ ಕೂಟಕ್ಕೆ ವಿಷ್ಣುಮೂರ್ತಿ ಹಾಗೂ ಭಗವತಿ ಆರಾಧ್ಯ ದೈವಗಳು. ಒಂದೊಂದು ಕೂಟಕ್ಕೂ ಒಂದೊಂದು ದೈವಸ್ಥಾನ. ಆ ಕೂಟದಲ್ಲಿ ಆಗುಹೋಗುಗಳಿರುವ ಮನೆಯವರು ದೈವದ ಪಾತ್ರಿ, ಪೂಜಾರಿಗಳು. ಆ ಪಾತ್ರಿಯೇ ಊರಿನ ಕೂಟದ ಯಜಮಾನ. ಆ ಯಜಮಾನನಿಗೆ ಬಂಗಾರದ ಬಳೆ ಹಾಕಿ 'ಅಚ್ಚಮ್ಮಾರ್' ಎಂಬ ಬಿರುದು ಕೊಡುತ್ತಿದ್ದರು. ಆ ಕೂಟದ ಶುಭಾಶುಭ ಕಾರ್ಯ, ಕಟ್ಟುಕಟ್ಟಲೆ ಅಚ್ಚಮ್ಮಾರ್ ಹೇಳಿದಂತೆಯೇ ನಡೆಯಬೇಕು. ಅಚ್ಚಮ್ಮಾರನನ್ನು ಒಮ್ಮೆ ನೇಮಕ ಮಾಡಿ ರಾಮಂತರಸರಿಗೆ ತಿಳಿಸಿದ ಮೇಲೆ, ಅವನನ್ನು ಆ ಸ್ಥಾನದಿಂದ ಉಚ್ಚಾಟಿಸುವ ಹಕ್ಕು ಕೂಟಕ್ಕೆ ಇಲ್ಲ.

ಅಚ್ಚಮ್ಮಾರನನ್ನು ಉಚ್ಚಾಟಿಸುವ, ದಂಡನೆಗೆ ಒಳಪಡಿಸುವ ಹಕ್ಕು ಅರಸರಿಗೆ ಮಾತ್ರವಿತ್ತು.

ಮಾಯಿಲ ಬೆಲ್ಚಡನನ್ನು ಅಚ್ಚಮ್ಮಾರ್ ಮಾಡಿದ ವರ್ಕಾಡಿಯ ಕೂಟಕ್ಕೆ ಅವನ ಬಗ್ಗೆ ಬಹಳಷ್ಟು ದೂರುಗಳು ಬಂದಿದ್ದರೂ ಅವನನ್ನು ಏನೂ ಮಾಡಲು ಸಾಧ್ಯವಾಗದೆ ಅಸಹಾಯಕತೆಯಿಂದಿದ್ದರು. ಈಗ ಹೊತ್ತು ಮುಳುಗಬೇಕಾದರೆ ಅರಸರು ಸಭೆ ಕರೆದ ಸುದ್ದಿ ಊರಿಡೀ ಹರಡಿದಾಗ ಕೂಟದ ಹಿರಿಯರು ಸಮಾಧಾನದ ಉಸಿರು ಬಿಟ್ಟರು.

ಮಂಜಣ ರಾತ್ರಿ ಬಂದ ಸೈನಿಕರನ್ನು ಉಕ್ಕುಡದ ಗಡಿಯಲ್ಲಿ ನಿಲ್ಲಿಸಿ ಕುದುರೆ ಸವಾರರನ್ನು ವರ್ಕಾಡಿ, ಕೋಳ್ಯೂರು, ಬಡಾಜೆಯವರೆಗೆ ರಾತ್ರಿ ಇಡೀ ಗಸ್ತು ತಿರುಗುವಂತೆ ನೇಮಕ ಮಾಡಿ, ಆನೆಕಲ್ಲಿನಲ್ಲಿ ದೋಣಿಯೇರಿ ಮಿತ್ತಬೈಲಿನತ್ತ ಬರುವಾಗ ಬೋಳಂಗಳದ ಪದವಿನಲ್ಲಿ ನಾಲ್ಕು ಪಂಜುಗಳು ಕಂಡವು. ಮಂಜಣನೂ ಅವನ ನಾಲ್ವರು ಸಹಚರರೂ, ದೋಣಿಯನ್ನು ಬದಿಯಲ್ಲಿ ಕಟ್ಟಿ ಅಡಗಿ ಕುಳಿತರು. ಒಂದು ಗಳಿಗೆ ಆಗುವಾಗ ಹೊಳೆ ಬದಿಯ ಭೂತದ ಕಲ್ಲಿನ ಬಳಿ ಹಲವು ದೀವಟಿಗೆಗಳು ಕಂಡವು. ಭೂತದ ಕಲ್ಲಿನ ಬಳಿ ಒಂದು ದೋಣಿ ಇತ್ತು. ಆ ದೋಣಿ ಮಳೆಗಾಲದಲ್ಲಿ ಮಿತ್ತಬೈಲಿನಿಂದ ಬಾರಬೈಲಿಗೆ ದಾಟುವ ದೋಣಿ. ಭೂತದ ಕಲ್ಲಿನ ಬಳಿ ನಿಂತಿದ್ದವರಲ್ಲಿ ಐದಾರು ಜನ ಕೋವಿ, ಕತ್ತಿ

ಹಿಡಿದುಕೊಂಡು ದೋಣಿ ಹತ್ತಿದರು. ನಾಲ್ಕೈದು ಜನ ಅಲ್ಲೇ ದೋಣಿ ಹಿಂದಿರುಗುವುದನ್ನು ಕಾಯುತ್ತಾ ಕುಳಿತರು. ಮೆಲ್ಲ ಕೈಯಲ್ಲೇ ಹುಟ್ಟು ಹಾಕುತ್ತಾ ಬಂದ ದೋಣಿ, ಮಂಜಣನ ದೋಣಿಯ ಹತ್ತಿರ ಬಂದಾಗ ಅವನೊಂದಿಗಿದ್ದ ಇಬ್ಬರು ಗುರಿ ಇಟ್ಟು ಆ ದೋಣಿಗೆ ಗುಂಡು ಹೊಡೆದರು. ಇನ್ನಿಬ್ಬರು ಭೂತದ ಕಲ್ಲಿನಡೆಗೆ ಗುರಿಯಿಟ್ಟರು. ಭೂತದ ಕಲ್ಲಿನ ಬಳಿ ಪಂಜಿನ ಬೆಳಕಿಗೆ ಕಂಡವರಲ್ಲಿ ಇಬ್ಬರ ಗುರುತು ಅವರೆಲ್ಲರಿಗೂ ಸಿಕ್ಕಿತು. ಒಬ್ಬ ಬೀರಣ್ಣಾಳ್ವ, ಇನ್ನೊಬ್ಬ ಮಾಯಿಲ ಬೆಲ್ಚಡ. ಅವರೀಗ ಎಲ್ಲಿಗೆ ಹೊರಟಿದ್ದಾರೆ ಎಂಬುದರಲ್ಲಿ ಯಾರಿಗೂ ಸಂಶಯವಿರಲಿಲ್ಲ. ಭೂತದ ಕಲ್ಲಿನ ಬಳಿ ಇದ್ದವರು ಓಡಿದರು. ದೋಣಿಯಲ್ಲಿದ್ದವರು ಆಕಸ್ಮಿಕವಾಗಿ ಬಿದ್ದ ಗುಂಡಿನ ಪೆಟ್ಟಿಗೆ ದೋಣಿ ಹೊಯ್ದಾಡಿ ಹೊಳೆಗೆ ಬಿದ್ದರು. ಮಂಜಣನ ದೋಣಿಯಲ್ಲಿದ್ದವರು ಹೊಳೆಗೆ ಬಿದ್ದವರನ್ನು ತಲವಾರಿನಿಂದ ಮೀನು ಕಡಿಯುವಂತೆ ಕಡಿಯಲು ಪ್ರಾರಂಭಿಸಿದರು. 'ದಮ್ಮಯ್ಯ ದಮ್ಮಯ್ಯ' ಎನ್ನುತ್ತಾ ಗಾಯಗೊಂಡಿದ್ದ ಅವರು ಹೊಳೆಬದಿಯ ಹೊಯ್ಗೆಯಲ್ಲಿ ಬಿದ್ದುಕೊಂಡರು.

ಹೊಯ್ಗೆಯಲ್ಲಿ ಬಿದ್ದವರಿಗೆ ಮಂಜಣನ ಕಡೆಯವರು ನಾಲ್ಕು ಒದ್ದಾಗ ಬಾಯಿ ಬಿಟ್ಟರು. ಇಂದು ಮಿತ್ತಬೈಲನ್ನು ಲೂಟಿ ಮಾಡಿ, ನಾಳೆ ವರ್ಕಾಡಿ, ಕೋಳ್ಯೂರನ್ನು ಕೊಳ್ಳೆ ಹೊಡೆಯುವುದೆಂದು ನಿಶ್ಚಯಿಸಿ ಸುಳ್ಯದಿಂದ ಬಂದಿದ್ದ ಬೀರಣ್ಣಾಳ್ವನಿಗೆ, ಇಪ್ಪತ್ತೈದು ಸೈನಿಕರೊಂದಿಗೆ ಬಂದ ಮಾಯಿಲ, ಮರುದಿನ ವರ್ಕಾಡಿಯಲ್ಲಿ ಸಭೆ ಸೇರುವ ಹತ್ತು ಸಮಸ್ತರ ಕೂಟದ ಸುದ್ದಿ ಹೇಳಿದ. ಮಂಜಣ ಇಷ್ಟು ಬೇಗ ಸೈನಿಕರನ್ನು ಎಲ್ಲ ದಿಕ್ಕುಗಳಿಗೂ ತರುತ್ತಾನೆಂದು ಬೀರಣ್ಣಾಳ್ವಎಣಿಸಿರಲಿಲ್ಲ. ಆನೆಕಲ್ಲಿನಿಂದ ದೋಣಿಯಲ್ಲೇ ಬರಬೇಕೆಂದು ನಿರ್ಧರಿಸಿದ್ದ ಬೀರಣ್ಣ, ಅಲ್ಲೆಲ್ಲಾ ಸೈನಿಕರಿದ್ದುದನ್ನು ಕಂಡು ತನ್ನ ದಾರಿ ಬದಲಾಯಿಸಬೇಕಾಗಿ ಬಂತು. ಹಾಗಾಗಿ ಬೀರಣ್ಣನೂ ಅವನ ಹತ್ತು ಜನರೂ ಬೋಳಂಗಳದ ಪದವಿನಿಂದಾಗಿ ಬಂದು ದಾರಿಯಲ್ಲಿ ಸಿಕ್ಕಿದ ಮುನ್ನಿಪ್ಪಾಡಿ ಮಸೀದಿಯ ಹರಕೆಯ ಡಬ್ಬಿಯನ್ನು ದೋಚಿದರು. ಅಲ್ಲಿಂದ ಭೂತದ ಕಲ್ಲಿನ ಬಳಿ ಹೊಳೆ ದಾಟಲು ಪ್ರಯತ್ನಿಸುವಾಗ ಮಂಜಣಾಳ್ವನ ಕಣ್ಣಿಗೆ ಬಿದ್ದರು. ಗುಂಡಿನ ಶಬ್ದ ಕೇಳಿ ಮಿತ್ತಬೈಲು ಮನೆಯಿಂದ ಓಡಿ ಬಂದ ಕಿನ್ಯನನವರು ಹೊಳೆ ಬದಿಯಲ್ಲಿ ಬಿದ್ದುಕೊಂಡಿದ್ದ ಸೈನಿಕರನ್ನು ಕಟ್ಟಿ ಹಾಕಿ ಹೊಯ್ಗೆಯಲ್ಲಿ ಉರುಳಿಸಿದರು. ಮಂಜಣ, ಕಿನ್ಯನವರನ್ನು ಕರೆದು ಮನೆಯತ್ತ ಓಡಲು ಹೇಳಿ ಭೂತದ ಕಲ್ಲಿನತ್ತ ದೋಣಿಯನ್ನು ಹುಟ್ಟು ಹಾಕಿಸಿದ.

ಮಂಜಣನ ನಾಲ್ಕು ಜನರೂ ಭೂತದಕಲ್ಲಿನ ಬಳಿ ಬಂದು ಹೊಳೆಯ ಮಧ್ಯೆ ಇದ್ದ ದೊಡ್ಡ ಬಂಡೆಯ ಮೇಲೆ ಹತ್ತಿದರು. ಕಲ್ಲಿನ ಮೇಲೆ ನಿಂತು ಅತ್ತಿತ್ತ ನೋಡುವಾಗ ಎಲ್ಲಿಂದಲೋ ಬಂದ ಬಾಣವೊಂದು ಮಂಜಣನ ತೋಳಿಗೆ ತಾಗಿತು. ಆ ಪೆಟ್ಟಿಗೆ ಹೊಳೆಗೆ ಬಿದ್ದ ಮಂಜಣನನ್ನು ದೋಣಿಗೆ ಎಳೆಯುತ್ತಿರುವಾಗ ಬೋಳಂಗಳದ ಪದವಿನಿಂದ ಗುಂಡಿನ ಶಬ್ದ ಕೇಳಿಸಿತು. ಮಂಜಣನ ಯುವಕರೂ ಗುಂಡಿನ ಶಬ್ದ ಕೇಳಿ ಬಂದತ್ತ ಗುರಿ ಇಟ್ಟು ಬೆನ್ನುಬೆನ್ನಿಗೆ ನಾಲ್ಕು ಗುಂಡು ಹಾರಿಸಿದರು. ಬೈಲಿಡೀ ಗುಂಡಿನ ಶಬ್ದ ಮೊಳಗಿತು.



ಇಷ್ಟಾಗುವಾಗ ಮಿತ್ತಬೈಲಿನ ಮನೆಯ ಮೇಲಿನ ಗುಡ್ಡದಲ್ಲಿ ಪಂಜು ಕಂಡಿತು. ಮಂಜಣ ತೋಳಿನಲ್ಲಿ ನೆಟ್ಟಿದ್ದ ಬಾಣವನ್ನು ಎಳೆದು ತೆಗೆದು ಸೈನಿಕರನ್ನು ಕರೆದುಕೊಂಡು ಮನೆಯತ್ತ ಓಡಿದ. ಮಿತ್ತಬೈಲು ತಲುಪಿದಾಗ ಗುಡ್ಡದಲ್ಲಿ ಕತ್ತಿ, ತಳವಾರಿನ ಯುದ್ಧ ನಡೆಯುತ್ತಿದ್ದುದು ಪಂಜಿನ ಬೆಳಕಲ್ಲಿ ಕಾಣುತ್ತಿತ್ತು. ಗುಂಡು ಹಾರಿಸಿದರೆ ಎಲ್ಲಾದರೂ ತಮ್ಮವರಿಗೇ ತಾಗಿದರೆ? ಎಂದು ಯೋಚಿಸಿದ ಮಂಜಣ ಜೋರಾಗಿ ಬೊಬ್ಬೆ ಹೊಡೆಯತೊಡಗಿದ.

''ಕಿನ್ಯನಾ, ರಾಮಾ ನೀವೆಲ್ಲಾ ಬೆಟ್ಟು ಗದ್ದೆಗೆ ಓಡಿ! ಹಾರಿ!''

ಯಾಕೆಂದು ಅರ್ಥ ಆಗದಿದ್ದರೂ ಮಿತ್ತಬೈಲಿನವರೆಲ್ಲಾ ಬೆಟ್ಟುಗದ್ದೆಗೆ ಹಾರಿದರು. ಅವರು ಹಾರಿದ ಕೂಡಲೇ ಮಂಜಣ ತನ್ನ ಸೈನಿಕರಲ್ಲಿ, ಪಂಜುಗಳನ್ನೆಲ್ಲಾ ಗಲಾಟೆ ನಡೆಯುತ್ತಿರುವಲ್ಲಿಗೆ ಎಸೆಯಲು ಹೇಳಿದ. ಪಂಜಿನ ಬೆಳಕಿನಲ್ಲಿ ಕಾಣಿಸಿದ ಬೀರಣ್ಣನ ಕಡೆಯವರ ಮೇಲೆ ಗುಂಡಿನ ಮಳೆ ಸುರಿಯಿತು. ಬೀರಣ್ಣನ ಪೋಲಿ ಹುಡುಗರ ದಂಡು ಕಕ್ಕಾಬಿಕ್ಕಿಯಾಗಿ ಸಿಕ್ಕಿದಲ್ಲಿಗೆ ಓಡ ತೊಡಗಿತು. ಇದನ್ನು ಕಂಡು ಮಿತ್ತಬೈಲಿನ ಯುವಕರೂ ಪಂಜುಗಳನ್ನು ಗುಡ್ಡದತ್ತ ಎಸೆಯಲು ಪ್ರಾರಂಭಿಸಿದರು. ಕಿನ್ಯನ ತನ್ನಲ್ಲಿದ್ದ ಕೋವಿಯಿಂದ ಗುಂಡು ಹಾರಿಸತೊಡಗಿದ. ಬೀರಣ್ಣನ ದಂಡು 'ಓಡಿ' 'ಓಡಿ' ಎಂದು ಬೊಬ್ಬೆ ಹೊಡೆಯುತ್ತಾ ಗುಡ್ಡ-ಬೈಲಿಡೀ ಓಡತೊಡಗಿತು. ಹಲವರು ಓಡಿ ಗದ್ದೆಗೆ, ಹೊಂಡಕ್ಕೆ ಬಿದ್ದರು. ಆದಾಗಲೇ ಬೆಳಗಾಗತೊಡಗಿತ್ತು.

ನಸು ಬೆಳಗಾಗುವಾಗ ಹತ್ತು ಹದಿನೈದು ಜನ ಗಾಯಗೊಂಡು ಓಡಲಾಗದೆ ಬಿದ್ದುಕೊಂಡಿದ್ದುದು ಕಾಣಿಸಿತು. ಆರು ಹೆಣಗಳು ಬಿದ್ದಿದ್ದವು. ಇಬ್ಬರಿಗೆ ಅಲ್ಪಸ್ವಲ್ಪ ಗಾಯವಾಗಿತ್ತು. ಗಾಯಗೊಂಡವರಿಗೆಲ್ಲಾ ಅರಸಿನ ಅರೆದು ಗಾಯಗಳಿಗೆ ಸವರಿ ಆರೈಕೆ ಮಾಡಿದರು. ಮಂಜಣನ ಕೈ ಆದಾಗಲೇ ಬಾತುಕೊಂಡಿತ್ತು.

ಗಳಿಗೆಯಾಗುವಾಗ ಮಿತ್ತಬೈಲಿನ ಗುಡ್ಡದಲ್ಲಿ 'ಜೈ ದುರ್ಗೆ' ಎಂಬ ಜಯಘೋಷ ಕೇಳಿಸಿತು. ಮಾಯಿಪ್ಪಾಡಿಯ ಒಂದು ದಂಡು ಹಾಗೂ ಸ್ವತಃ ಸುಬ್ರಾಯ ಶಾನುಭೋಗರು ಮಿತ್ತಬೈಲಿನ ಗುಡ್ಡೆ ಇಳಿಯುತ್ತಿದ್ದರು. ರಾತ್ರಿ ತಿರುಗುತ್ತಾ ಗಸ್ತಿನಲ್ಲಿದ್ದವರನ್ನು ನೋಡಲು ಬಂದ ಸುಬ್ರಾಯ ಶಾನುಭೋಗರಿಗೆ ಗುಂಡಿನ ಶಬ್ದ ಕೇಳಿಸಿತ್ತು. ಓಡುತ್ತಿದ್ದ ಬೀರಣ್ಣನ ಪೋಲಿ ಪಡೆಯನ್ನು ಹಿಡಿದು ಕೇಳಿದಾಗ, ಮಿತ್ತಬೈಲಿನ ಗಲಭೆಯ ವರ್ತಮಾನ ಸಿಕ್ಕಿ ಅವರು ಇತ್ತ ಬಂದಿದ್ದರು. ಶಾನುಭೋಗರ ಸೈನಿಕರು ಜೀವಂತವಿದ್ದ ಬೀರಣ್ಣನ ಕಡೆಯ ಯುವಕರನ್ನು ಸೆರೆಹಿಡಿದು, ಪೈವಳಿಕೆಯ ಅರಮನೆಯ ಸೆರೆಮನೆಗೆ ಹಾಕಿದರು. ಕಿನ್ಯನವರು ಹೆಣಗಳನ್ನೆಲ್ಲಾ ರಾಶಿ ಹಾಕಿ ಸುಡಲು ತಯಾರಿ ಮಾಡಿದರು. ಶಾನುಭೋಗರು ಕುಳಿತು ಮಂಜಣನ ತೋಳಿನಲ್ಲಿದ್ದ ಬಾಣದ ತುಂಡನ್ನು ಅವರಲ್ಲಿದ್ದ ಚಾಕುವಿನ ತುದಿಯಿಂದ ತೆಗೆದರು. ಗಾಯಕ್ಕೆ ಲೇಪ ಹಚ್ಚಿ ಕಟ್ಟಿದಾಗ ಮಂಜಣ ಗೆಲುವಾದ. ಅಷ್ಟಾಗುವಾಗ ಬಡಾಜೆಯ ತಂತ್ರಿಗಳ ಒಬ್ಬ ಆಳು, ಮಂಜಣಾಳ್ವರು ಕೂಡಲೇ ಬಡಾಜೆಗೆ ಬರಬೇಕೆಂಬ ಹೇಳಿಕೆ ತಂದ. ಏನೋ ವಿಶೇಷವಿರಬೇಕೆಂದು ಯೋಚಿಸಿ, ಬೇಡವೆಂದರೂ ಕೇಳದೆ, ಸುಬ್ರಾಯ

ಶಾನುಭೋಗರನ್ನೂ ಕರೆದುಕೊಂಡು ಬಡಾಜೆಗೆ ಹೊರಟ. ಹೊಳೆಯಲ್ಲಿ ದೋಣಿ ದಾಟುವಾಗ ದೋಣಿ ನಡೆಸುತ್ತಿದ್ದ ಬ್ಯಾರಿ, ಕಟ್ಟಿ ಹಾಕಿ ಹೊಯ್ಗೆಯಲ್ಲಿ ಮಲಗಿಸಿದ್ದವರನ್ನು ತೋರಿಸಿದ. ಮಂಜಣನಿಗೆ ಕಳೆದ ರಾತ್ರಿಯ ಭೂತದ ಕಲ್ಲಿನ ಬಳಿಯ ಕಾಳಗ ನೆನಪಾಯಿತು. ಅವನು ಸುಬ್ರಾಯ ಶಾನುಭೋಗರಿಗೆ ಘಟನೆ ವಿವರಿಸಿ ಮುಖ ನೋಡಿದ.

''ನಾಲ್ಕು ಜನರ ಕೈಕಾಲುಗಳನ್ನೂ ಗಟ್ಟಿಯಾಗಿ ಕಟ್ಟಿ ಹೊಳೆಗೆಸೆಯಿರಿ. ಈ ಜಾತಿ ಉಳಿಯಬಾರದು. ಈ ಊರಿಂದ ನೆರೆಯಲ್ಲಿ ಕೊಚ್ಚಿ ಹೋಗಲಿ''.

ಸುಬ್ರಾಯ ಶಾನುಭೋಗರು ಅಷ್ಟು ಹೇಳಿದಾಗ ಮಂಜಣ ತಡೆದು ''ಅವರನ್ನು ಮಿತ್ತಬೈಲಿನ ಅಂಗಳದಲ್ಲಿ ಕುಳ್ಳಿರಿಸಿ. ತಂಗಳನ್ನವೋ ಏನಾದರೂ ಕೊಡಲಿ. ಅವರು ಸಾಯಬಾರದು. ನಾನು ಬಂದು ನೋಡಿಕೊಳ್ಳುತ್ತೇನೆ'' ಎಂದ.

''ಯಾಕೆ ಮಂಜಣ? ಅವರನ್ನು ಕಡಿದು ಹೊಳೆಗೆಸೆಯುವುದು ಬಿಟ್ಟು ತಂಗಳನ್ನ ಕೊಡಿಸುತ್ತಿ! ಹಲಾಲ್‌ಕೋರ ಪೋಲಿಗಳು ಅವು''

''ಹೊಟ್ಟೆಗೆ ಗತಿಯಿಲ್ಲದೆ ಕರೆದವರೊಂದಿಗೆ ಹೋದ ಬಾಡಿಗೆ ಬಂಟರ ಮೇಲೆ ಯಾಕೆ ಕೋಪಿಸುತ್ತೀರಿ ಸ್ವಾಮಿ? ಏನಿದ್ದರೂ ಇವರನ್ನು ಈ ಕೆಲಸಕ್ಕಿಳಿಸಿದ ನಾಯಕರನ್ನು ನೋಡಿಕೊಳ್ಳುವಾ''.

ಮಂಜಣ ಇಷ್ಟು ಹೇಳುವಾಗ ಸುಬ್ರಾಯ ಶಾನುಭೋಗರಿಗೆ ಮೆಚ್ಚುಗೆಯಾಯಿತು. ಇಬ್ಬರೂ ಬಡಾಜೆಗೆ ನಡೆಯುವಾಗ ದಾರಿಯಲ್ಲಿದ್ದ ಬೀರಣ್ಣನ ಮನೆ, ಬೇಸಾಯವನ್ನು ಮಂಜಣ ತೋರಿಸಿದ. ಶಾನುಭೋಗರು ಹೇಳಿದರು,

''ಬೀರಣ್ಣನ ಮನೆಯವರನ್ನು ವರ್ಕಾಡಿ ದೇವಸ್ಥಾನದ ನ್ಯಾಯಮಂಟಪಕ್ಕೆ ಬರಲು ಹೇಳಬೇಕು. ನ್ಯಾಯಮಂಟಪದಲ್ಲಿ ಅರಸರು ವಿಚಾರಿಸಿ ನಿರ್ಣಯ ಮಾಡಲಿ. ಇನ್ನು ನೀನು ಈ ವಿದ್ರೋಹಿಗಳಿಗೆ ದಯೆ-ದಾಕ್ಷಿಣ್ಯ ತೋರಿಸುವಂತೆ ಹೇಳಬೇಡ. ಮರೆಯಬೇಡ, ಶಿಕ್ಷೆಯೂ ದಯೆ ಧರ್ಮದಷ್ಟೇ ದೊಡ್ಡ ರಾಜ್ಯ ಶಾಸನದ ಒಂದು ಭಾಗ. ಅದು ಆಡಳಿತಕ್ಕೆ ಅಗತ್ಯ ಎಂಬುದನ್ನು ಮರೆಯಬೇಡ. ರಾಜಾಡಳಿತ ಬಿಗಿಯಾಗಿರಬೇಕಾದರೆ ಶಿಕ್ಷೆ ಕೊಟ್ಟು, ವಿದ್ರೋಹ ಎಸಗಿದರೆ ಏನಾಗುತ್ತದೆ ಎಂಬುದನ್ನು ತೋರಿಸಿಕೊಡಬೇಕು''.

ಇಬ್ಬರೂ ತಂತ್ರಿಗಳ ಅಂಗಳಕ್ಕೆ ತಲುಪುವಾಗ ಭಯಾನಕವಾದ ಸುದ್ದಿಯೊಂದು ಅವರನ್ನು ಕಾಯುತ್ತಿತ್ತು. ಅಮ್ಮಣಿಯನ್ನು ಕಲ್ಲೂರಿನ ಭಗವತಿ ಗುಡಿಯಲ್ಲಿ ತಲೆ ಕಡಿದು ಹಾಕಿದ್ದರು. ಗುಡಿಯ ಒಳಗೆ, ಸುತ್ತಮುತ್ತ ದಾಸವಾಳ, ಕಿಸ್ಕಾರ ಹೂ, ಕುರ್ದಿಯ ನೀರು, ಅರಸಿನ, ಕುಂಕುಮಗಳ ಹುಡಿ ಚೆಲ್ಲಿ ಇಡೀ ಗುಡಿ ಭಯಾನಕವಾಗಿ ಕಾಣುತ್ತಿತ್ತು. ಊರವರೆಲ್ಲ ಗುಡಿಯ ಸುತ್ತ ನೆರೆದಿದ್ದರು. ಸುತ್ತಲಿನ ಬೆಲ್ಚಡರೂ ಸೇರಿದ್ದರು. ಅಮ್ಮಣಿಯ ಸಹೋದರರು ನಡೆದ ಘಟನೆಯನ್ನು ವಿವರಿಸಿದರು,

''ಮಾಯಿಲಚ್ಚಮಾರ್ ರಾತ್ರಿ ಬೀರಣ್ಣ ಬಂಟನೊಂದಿಗೆ ಬೆಲ್ಚಪ್ಪಾಡರನ್ನು ಮತ್ತು ಬಂಟರ ಯುವಕರನ್ನು ಸೇರಿಸಿಕೊಂಡು ಮನೆ, ದೇವಸ್ಥಾನ, ಮಸೀದಿಗಳನ್ನು ಲೂಟಿ



ಮಾಡಲು ಹೋದರು. ಅರ್ಧ ರಾತ್ರಿ ಕಳೆದು ಬೆಳಗಿನ ಜಾವದ ಹೊತ್ತಿಗೆ ಓಡುತ್ತಾ ಗುಡಿಯ ಬಳಿಗೆ ಬಂದರು. ಸ್ವಲ್ಪ ಹೊತ್ತಿನ ಬಳಿಕ ಇನ್ನಷ್ಟು ಜನರು ಓಡುತ್ತ ಬಂದರು. ಗುಡಿಯ ಬಳಿ ಜೋರಾಗಿ ಮಾತು ಕೇಳುತ್ತಿತ್ತು. ಮಾಯಿಲನೂ ಬೀರಣ್ಣನೂ ಕೋಪದಿಂದ ಬೊಬ್ಬೆ ಹೊಡೆಯುತ್ತಿದ್ದರು. ಗಳಿಗೆ ಆಗುವಾಗ ಮಾಯಿಲನ ಮನೆಯಿಂದ ಅಮ್ಮಣಿಯ ಕೂಗು ಕೇಳಿಸಿತು. ಅಷ್ಟಾಗುವಾಗ ಅಮ್ಮಣಿಯ ಕೂದಲು ಹಿಡಿದು ಎಳೆದುಕೊಂಡು ಮಾಯಿಲ ಭಗವತಿ ಗುಡಿಯತ್ತ ಹೋದುದೂ ಕಾಣಿಸಿತು. ಗುಡಿಯಲ್ಲಿ ಗಂಟೆ, ಡೋಲಿನ ಶಬ್ದ ಜೋರಾಗಿ ಕೇಳಿಸಿತು. ಮಾಯಿಲನ ಆರ್ಭಟ, ಅಮ್ಮಣಿಯ ಆರ್ತನಾದ ಕೇಳಿ ಸುತ್ತಲ ಮನೆಯವರು ಹೊರಗೆ ಬರುವಾಗ ಆರ್ಭಟ, ಗಂಟೆ ನಿಂತಿತ್ತು. ಸೇನೆಯ ಯುವಕರು, ಮಾಯಿಲ ಹಾಗೂ ಬೀರಣ್ಣ ಮುಡಿಪಿನ ಪದವಿನ ಕಡೆ ಓಡಿದರು. ಭಗವತಿ ಗುಡಿಯ ಅಂಗಳದಲ್ಲಿ ರಕ್ತದ ಮಡುವಿನಲ್ಲಿ ಅಮ್ಮಣಿಯ ರುಂಡ, ಮುಂಡಗಳು ಬೇರೆ ಬೇರೆಯಾಗಿ ಬಿದ್ದಿದ್ದವು. ದರೋಡೆಕೋರರ ದಂಡು ವಿಟ್ಲಕ್ಕೆ ಹೋದುದನ್ನು ಕಂಡವರು ಬಂದು ಹೇಳಿದರು.

ಕಂಪನಿ ಸರಕಾರ ಜೈಲಿಗೆ ಹಾಕಿದ್ದ ವಿಟ್ಲದ ಅರಸರನ್ನು ಇತ್ತೀಚೆಗೆ ಬಿಡುಗಡೆ ಗೊಳಿಸಿತ್ತು. ಅದಕ್ಕೆ ವಿಟ್ಲದ ಅರಸರು ಟಿಪ್ಪು ಸುಲ್ತಾನರಿಗೆ ಸಹಾಯ ಮಾಡಿದ್ದಾರೆ ಎಂಬ ಕೋಪ. ಅವರನ್ನು ಜೈಲಿಗೆ ಹಾಕಿದಾಗ ವಿಟ್ಲ ಸೀಮೆಯನ್ನು ಕೇಳುವವರೇ ಇಲ್ಲದಂತಾಯಿತು. ಸೀಮೆಯ ಒಂದು ಗ್ರಾಮ ಕುಂಬಳೆಯರಸರ ವಶವಾಯಿತು. ಮತ್ತೆ ಸ್ವಲ್ಪ ಕಲ್ಯಾಣಪ್ಪನ ಬಂಡುಕೋರ ಸೇನೆಯ ವಶವಾಯಿತು. ವಿಟ್ಲದರಸ ಹೆಗ್ಗಡೆಯರು ಈಗ ಕೇಳುವವರಿಲ್ಲದೆ ಅರಮನೆಯಲ್ಲಿಯೇ ಇದ್ದರು. ಹಾಗಾಗಿ ಬೀರಣ್ಣನ ದಂಡು ವಿಟ್ಲ ಸೀಮೆಯ ಮನೆಗಳನ್ನು ಲೂಟಿ ಮಾಡುತ್ತಾ, ಹೆಣ್ಣು ಮಕ್ಕಳನ್ನು ಎಳೆದುಕೊಂಡು, ಹೊತ್ತುಕೊಂಡು ಪುತ್ತೂರು, ಸುಳ್ಯದತ್ತ ಹೋಗುತ್ತಿದೆಯೆಂಬ ಸುದ್ದಿ ಬರುತ್ತಿತ್ತು. ಶಾನುಭೋಗರೂ ಮಂಜಣಾಳ್ವರೂ ಬೆಳ್ಚಪ್ಪಾಡರ ಸಮಾಜಕ್ಕೆ ಅಮ್ಮಣಿಯ ಶವವನ್ನು ಬಿಟ್ಟು ಕೊಟ್ಟು ಶವ ಸಂಸ್ಕಾರ ಮಾಡಲು ಹೇಳಿ ವರ್ಕಾಡಿ ದೇವಸ್ಥಾನದಲ್ಲಿ ಸಭೆಯ ತಯಾರಿ ಮಾಡಲು ಹೊರಟರು.

ವರ್ಕಾಡಿ ದೇವಸ್ಥಾನದ ನ್ಯಾಯ ಮಂಟಪದಲ್ಲಿ ರಾಮಂತರಸರ ಅಷ್ಟ ಪ್ರಧಾನರು, ನಾಲ್ವರು ಸೇನಾಧಿಪತಿಗಳು, ತಾಳಿತ್ತಾಯರು, ಪೆಜತ್ತಾಯರು, ಬಂಟರ ಗುತ್ತುಗಳಾದ ಕೊಡ್ಲಮುಗೇರು, ಮಲಾರ್, ನಾರ್ಯ, ಬಾಕ್ರಬೈಲ್, ಉದ್ಯಾವರ, ಪಾವೂರು, ಕುಂಜತ್ತೂರು, ಬೆಜ್ಜದ ಗುತ್ತುಗಳ ಯಜಮಾನರು, ಒಂಬತ್ತು ಮಂದಿ ಅಚ್ಚಮ್ಮಾರ್‌ಗಳು, ಹೀಗೆ ಗ್ರಾಮದ ಜನರೆಲ್ಲ ಸೇರಿದ್ದರು. ರಾಮಂತರಸರು ಸುಬ್ರಾಯ ಶಾನುಭೋಗರನ್ನೂ, ಮಿತ್ತಬೈಲು ಮಂಜಣಾಳ್ವರನ್ನೂ ಮತ್ತು ಬಡಾಜೆಯ ತಂತ್ರಿಗಳನ್ನೂ ಕಾಯುತ್ತಿದ್ದರು.

ಸುಬ್ರಾಯ ಶಾನುಭೋಗರು ಹಾಗೂ ಮಂಜಣ ಇತ್ತೀಚೆಗೆ ವರ್ಕಾಡಿ, ಕೋಳ್ಯೂರಿನ ಸುತ್ತಮುತ್ತ ನಡೆದ ಕೊಲೆ, ಸುಲಿಗೆ, ಲೂಟಿಗಳನ್ನು ಹಾಗೂ ಹಿಂದಿನ ದಿನ ನಡೆದ ಭಯಾನಕ ಹತ್ಯಾಕಾಂಡವನ್ನು ಸಭೆಗೆ ವಿವರಿಸಿದರು. ರಾತ್ರಿಯ ಪೆಟ್ಟಿನಲ್ಲಿ

ಮಂಜಣಾಳ್ವನ ತೋಳಿಗಾದ ಗಾಯ ನೋಡಿ ಎಲ್ಲರಿಗೂ ಅವನ ಮೇಲೆ ಗೌರವ, ಅಭಿಮಾನ ಉಕ್ಕಿ ಬಂತು. ರಾಮಂತರಸರು ಸಭೆಯ ಸರ್ವರ ಒಪ್ಪಿಗೆ ಪಡೆದು ಮಾಯಿಲನನ್ನು ಅಚ್ಚಮ್ಮಾರ್ ನಾಯಕನ ಸ್ಥಾನದಿಂದ ತೆಗೆದುಹಾಕಿದರು. ಅವನಿಗೆ ಕಂಡಲ್ಲಿ ಗುಂಡು ಹೊಡೆಯುವಂತೆ ಆಜ್ಞೆ ಮಾಡಿದರು. ಅವನನ್ನೂ ಬೀರಣ್ಣ ಬಂಟನನ್ನೂ ಹಿಡಿದು ಕೊಟ್ಟವರಿಗೆ ನೂರು ಪವನು ಬಹುಮಾನ ಘೋಷಿಸಿದರು. ಬೀರಣ್ಣ ಬಂಟನ ಮನೆಯಲ್ಲಿದ್ದ ಚಿನ್ನ, ಒಡವೆ ಹಾಗೂ ಲೂಟಿ ಮಾಡಿದ್ದ ಸಂಪತ್ತನ್ನು ಭಂಡಾರದ ವಶಕ್ಕೆ ತೆಗೆದುಕೊಂಡರು. ಸೀಮೆಯಲ್ಲಿ ಲೂಟಿ ಮಾಡಿದ್ದ ಮಸೀದಿ, ದೇವಸ್ಥಾನಗಳಿಗೆ ನೂರು ಪವನಿನ ತಸ್ತೀಕು ಕೊಡಲು ಅಪ್ಪಣೆ ಮಾಡಿದರು. ಬೀರಣ್ಣನ ಬೇಸಾಯದ ಆಸ್ತಿಗಳನ್ನು ಸಕಾರದ ಭಂಡಾರಕ್ಕೆ ಸೇರಿಸಿ ಕುಟುಂಬದವರಿಗೆ ವಾಸಿಸಲು ಒಂದು ಗುಡಿಸಲನ್ನು ಮಾತ್ರ ಬಿಟ್ಟುಕೊಟ್ಟರು. ಬಾರಬೈಲಿನವರು ಇಂದಿನಿಂದ ಬೀರಣ್ಣ ಬಂಟನಲ್ಲಿ ಯಾವುದೇ ರೀತಿಯ ಸಂಬಂಧ ಇಟ್ಟುಕೊಂಡರೆ ಅವರನ್ನು ಬಂಟರ ಸಮಾಜದಿಂದಲೇ ಬಹಿಷ್ಕಾರ ಹಾಕಲಾಗುವುದೆಂದು ಅಪ್ಪಣೆ ಮಾಡಿದರು.

ತಂತ್ರಿಯವರು, ತಾಳಿತ್ತಾಯರು ಬಂದು ಮಂಜಣಾಳ್ವನ ಬೆನ್ನು ತಟ್ಟಿದರು. ನಾರ್ಯದ ಗುರಿಕಾರ, ಮಲಾರ್ ಗುತ್ತಿನವರು ತಲೆ ಸವರಿದರು. ನಾರ್ಯದ ನಾಞರಾಲರು ಅರಸರಿಗೆ ಹೇಳಿದರು,

''ಖಾವಂದರೇ, ಈ ಯುವಕನ ಮದುವೆ ನಿಶ್ಚಯ ಮಾಡಿದವನು ನಾನು. ಈ ಯುವಕ ನಮ್ಮ ಸಮಾಜದಲ್ಲಿ ಒಬ್ಬ ದೊಡ್ಡ ವ್ಯಕ್ತಿ ಆಗುತ್ತಾನೆಂದು ಎಣಿಸಿದ್ದೆ. ಇಂದು ಈತ ನನ್ನ ಭರವಸೆಯನ್ನು ಉಳಿಸಿ ಕೊಟ್ಟಿದ್ದಾನೆ. ಒಪ್ಪಿಸಿಕೊಳ್ಳಿ ಅವನನ್ನು!'' ಬಳಿಕ ಮಂಜಣನ ಕಡೆ ತಿರುಗಿ, ''ಮಗ ಮಂಜಣ, ಬಂಟರ ಮಾನ, ಮರ್ಯಾದೆಗೆ ಕುಂದು ಬಾರದಂತೆ ನಡೆ. ಬಂಟರು ತಮ್ಮ ನಾಯಕತ್ವದ ಹಳ್ಳಿಗಳಲ್ಲಿ ಜನರನ್ನು ತಂದೆ ತಾಯಿಗಳಂತೆ ನೋಡಿಕೊಳ್ಳು ತ್ತಿದ್ದರು. ಊರಿನ ಬಡವರ ಮಾನ, ಮರ್ಯಾದೆ, ಹೊಟ್ಟೆಯ ಹಸಿವನ್ನು ತಾಯಿಯಂತೆ ನೋಡಿಕೋ'' ಎಂದರು.

ಕಾಲಿಗೆ ಬಿದ್ದ ಮಂಜಣನ ತಲೆ ಸವರಿ ತನ್ನ ಹೆಗಲಲ್ಲಿದ್ದ ವಲ್ಲಿ ಪಟ್ಟೆಯ ಶಾಲನ್ನು ಅವನ ಹೆಗಲಿಗೆ ಹಾಕಿದರು. ರಾಮಂತರಸರು ತನ್ನ ಪಟ್ಟದ ಕತ್ತಿಯನ್ನು ಅವನಿಗೆ ಬಹುಮಾನವಾಗಿ ನೀಡಿದರು. ಸಭೆ ಮುಕ್ತಾಯವಾದಾಗ ಬಡಾಜೆಯ ತಂತ್ರಿಗಳು ಅವನನ್ನು ಮನೆಗೆ ಕರೆದುಕೊಂಡು ಹೋಗಿ ಹೆಂಡತಿ ಅರೆದಿಟ್ಟಿದ್ದ ಲೇಪವನ್ನು ಅವನ ಕೈಯ ಗಾಯಕ್ಕೆ ಹಚ್ಚಿ, ದೇವಿಯ ಪೂಜೆ ಮಾಡಿ, ಪ್ರಸಾದ ಕೊಟ್ಟು ಊಟ ಮಾಡಿಸಿ ಕಳುಹಿಸಿದರು.

ವರ್ಕಾಡಿ ದೇವಳದ ನ್ಯಾಯ ಮಂಟಪದಲ್ಲಿ ಅರಸರು ಮತ್ತು ಸೇರಿದ ನಾಯಕರು ವಿಟ್ಲ, ಪುತ್ತೂರು, ಜಾಲ್ಸೂರಿನ ಗುಡಿಗಳಲ್ಲಿ ನೂರು ಜನ ಕೋವಿಯಾಳುಗಳನ್ನು, ನೂರು ಜನ ಕುದುರೆ ಸವಾರರನ್ನು, ಅವರೊಂದಿಗೆ ಸಾವಿರ ಆಳಿನ ಸೈನ್ಯವನ್ನು ಬಂಟರ ಗುರಿಕಾರರ ಕೈಕೆಳಗೆ ನೇಮಕ ಮಾಡಿದರು. ಮಂಜೇಶ್ವರ, ಕುಂಬಳೆ, ಕಾಸರಗೋಡು ಮಾಗಣೆಗಳಲ್ಲೂ



ಪೇಟೆ, ಹಳ್ಳಿಗಳನ್ನು ಕಾಯಲು ಸೇನೆಗೆ ಅಪ್ಪಣೆ ಮಾಡಿದರು. ಮಂಜೇಶ್ವರ ಪೇಟೆ, ಮಾಗಣೆಗಳ ರಕ್ಷಣೆಗೆ ಮಂಜಣಾಳ್ವರ ನೇತೃತ್ವದಲ್ಲಿ ಸಾವಿರ ಆಳುಗಳು ನೇಮಕವಾದರು.

★★★

ಮಂಜಣಾಳ್ವ ಕೈಯ ನೋವು ಗುಣವಾಗುವವರೆಗೆ ಮಿತ್ತಬೈಲಿನ ಮನೆಯಲ್ಲೇ ಇದ್ದು ಮನೆ ಕಟ್ಟಿಸುವ ಕೆಲಸ ಮುಂದುವರಿಸಿದ.

ಮಳೆ ಕಡಿಮೆಯಾಗುತ್ತಾ ಬಂತು. ಬೆಳೆ ಕೊಯ್ಲಿಗೆ ತಯಾರಾಯಿತು. ಈ ಬಾರಿಯ ಬೆಳೆಯಲ್ಲಿ ವಿಶೇಷವೆಂದರೆ ಬೆಟ್ಟು ಗದ್ದೆಗಳಲ್ಲಿ ಬೆಳೆದ ಮಸ್ಕತ್ ಬೆಳೆ. ಬಹಳ ಸುಂದರವಾದ ಬೆಳೆಯಾಗಿತ್ತು. ಆದಿ ಸೆಟ್ಟಿ ಮಿತ್ತಬೈಲಿಗೆ ಬಂದು ಬೆಳೆಯನ್ನು ನೋಡಿ ಬಹಳ ಖುಷಿಪಟ್ಟು ಹಿಂದಿರುಗಿದ. ಒಂದು ಇನ್ನೂರು ಇನ್ನೂರೈವತ್ತು ಮುಡಿ ಮಸ್ಕತ್ ಅಕ್ಕಿಯಾದರೂ ಭಂಡಸಾಲೆಗೆ ಬರಬಹುದು ಎಂಬ ಭರವಸೆಯ ಲೆಕ್ಕ ಹಾಕುತ್ತಿದ್ದ.

ಮಂಜೇಶ್ವರದ ಪೇಟೆಗೆ ಸೇನೆಯ ಕೆಲಸದ ನಿಮಿತ್ತ ಬರುತ್ತಿದ್ದ ಮಂಜಣನಿಗೆ ಊಟ, ತಿಂಡಿ ಆದಿ ಸೆಟ್ಟಿಯಲ್ಲಿಯೇ. ತಪ್ಪಿದರೆ ಹೊಸದಾಗಿ ಪರಿಚಯವಾದ ದೇವಯ ಭಂಡಾರಿಯ ಮನೆಯಲ್ಲಿ. ಭಂಡಾರಿಯ ಮನೆಯಲ್ಲಿ ಸ್ವತಃ ಅವರ ಹೆಂಡತಿಯೇ ಅಡುಗೆ ಮಾಡಿ ಬಡಿಸಿ ತಿನ್ನಿಸುತ್ತಿದ್ದರು. ಆದಿ ಸೆಟ್ಟಿಯ ಮನೆಗೆ ಬಂದರೆ ಅವರನ್ನು ನೋಡಲು ಕೇರಿಯ ಹೆಣ್ಣು ಮಕ್ಕಳು ಒಂದಲ್ಲ ಒಂದು ನೆಪ ಹೂಡಿಕೊಂಡು ಬಂದು ಹೋಗುತ್ತಿದ್ದರು. ಪೇಟೆಯ ರಥಬೀದಿಯಲ್ಲಿ ತಿರುಗುವ ಕಡಸುಗಳಿಗೆ ಅಂಗಡಿಯ ಬಾಳೆ ಗೊನೆಗೆ ಬಾಯಿ ಹಾಕುವ ಆಸೆ! ಮಂಜಣಾಳ್ವರ ಬದುಕು ಮಾತ್ರ ದಂಡಿನ ಕಸರತ್ತು ಹಾಗೂ ಬೇಸಾಯದ ಕೆಸರಿನ ಮಧ್ಯೆ ಹರಿಯುತ್ತಿರುವ ಹೊಳೆಯಂತೆ ನಡೆಯುತ್ತಿತ್ತು.

ಮಳೆಗಾಲ ಕಳೆದು ಎಣೆಲು ಕೊಯ್ಲು ಆಗಿ ಸುಗ್ಗಿಯ ಬೇಸಾಯ ಮುಗಿಯುತ್ತಾ ಬರುವಾಗ ಮನೆ ಕಟ್ಟುವ ಕೆಲಸವೂ ಮುಗಿಯುತ್ತಾ ಬಂತು. ಮಜಲೋಡಿಯಿಂದ ಬೋದಿಗೆ ಕಂಬಗಳು, ಚಾವಡಿಯ ಹಲಗೆಗಳು, ಬೋದಿಗೆಯ ಕೆತ್ತನೆಯ ಹಲಗೆ, ತೊಲೆಗಳನ್ನು ತರಲು ದಿನ ನಿಶ್ಚಯಿಸಿ ಯುವಕರನ್ನು ಸೇರಿಸಿದ್ದರು. ಮಿಕ್ಕಿದ್ದನ್ನೆಲ್ಲಾ ಜನರು ಸುಲಭದಲ್ಲಿ ತಂದಿದ್ದರಾದರೂ ಚಾವಡಿಯ ಕಂಬಗಳನ್ನು ಮಿಸುಕಾಡಿಸಲೂ ಸಾಧ್ಯವಾಗಲಿಲ್ಲ. ಇಬ್ಬರು ಯುವಕರ ಬಾಹುಗಳಿಗೂ ಸಿಗದಷ್ಟು ದಪ್ಪದ ಹಲಸಿನ ಕಂಬಗಳು ಎರಡಾಳು ಉದ್ದ ಇದ್ದವು. ಕಾರ್ಕಳದ ಆಚಾರಿ ಕೆತ್ತಿಟ್ಟ ಕಂಬಗಳನ್ನು ಚಾವಡಿಯಲ್ಲಿ ನಿಲ್ಲಿಸಿ ನಾಜೂಕಿನ ಕೆಲಸ ಮಾಡಿಸಲು ದೋಗ್ರ ಆಚಾರಿ ತಯಾರಿ ಮಾಡುತ್ತಿದ್ದ.

ಒಂದು ದಿನ ಮುಂಜಾನೆ, ಸೇರಿದ್ದ ಜನರು ಅಂಗಳದಲ್ಲಿ ಕಂಬವನ್ನು ಹುರಿಹಗ್ಗ, ಹುಲ್ಲಿನ ಹಗ್ಗ ಹಾಕಿ ಎಳೆದಾಗಲೂ ಕಂಬ ಮಿಸುಕಾಡಲಿಲ್ಲ. ಎಷ್ಟೆಷ್ಟೋ ಜನ ಹೇಗೇಗೋ ಪ್ರಯತ್ನಿಸಿದರೂ ಮಿಸುಕಾಡದ ಕಂಬವನ್ನು ನೋಡಿ ಸುಬ್ಬಾಳ್ವರು ಮಂಜಣನನ್ನು ಕರೆದು,

ಸಂಕಮಕ್ಕನನ್ನೂ ಕರೆಸಿ ತಾಯಿಯ ಮುಂದೆ ತನ್ನ ಸಂಶಯವನ್ನು ಹೇಳಿದರು. ಮರುದಿನ ಬೆಳಗ್ಗೆದ್ದು ಸುಬ್ಬಾಳ್ವರು ಸ್ನಾನ ಮಾಡಿ ಬಂದು, ಮಜಲೋಡಿ ಮನೆಯ ಭೂತ ಮಲರಾಯನ ಪಾತ್ರಿಯನ್ನು ಕರೆಸಿದರು. ವಾದ್ಯದವರನ್ನೂ, ತಂತ್ರಿಗಳನ್ನೂ ಕರೆಸಿದರು. ಕುಟುಂಬ, ಊರಿನವರ ಮುಂದೆ ಭೂತವನ್ನು ಪಾತ್ರಿಯ ಮೈಮೇಲೆ ಆವಾಹಿಸಿ, ಮಜಲೋಡಿಯ ಮಣ್ಣಿನಿಂದ ಹಲಸಿನ ಕಂಬಗಳನ್ನು ಕೊಂಡೊಯ್ಯಲು ಅಪ್ಪಣೆ ಕೊಡಬೇಕೆಂದು ಪ್ರಾರ್ಥಿಸಿದರು. ಮಲರಾಯ ದೈವ ಮೈಮೇಲೆ ಬಂದು ಹೀಗೆ ಅಪ್ಪಣೆ ಕೊಟ್ಟ

''ಸುಬ್ಬಾಳ್ವರೇ, ಮಜಲೋಡಿಯ ನನ್ನ ಸಂಸಾರ ಬಹಳ ದೊಡ್ಡ ಸಂಸಾರ. ನನ್ನ ಸಂಸಾರದ ಕುಡಿಯೊಂದನ್ನು ಮಿತ್ತಬೈಲಿಗೆ ಕೊಂಡುಹೋಗಿ ಬೆಳೆಸಬೇಕೂಂತ ನಿಮ್ಮ ಆಸೆ ಅಲ್ಲವೇ ಆಳ್ವರೇ? ದೇಶಾಂತರ ಹೋದ ಸಂಸಾರ, ಹೆತ್ತ ತಾಯಿಯಂತಿರುವ ಸತ್ಯ, ನನ್ನನ್ನು ನಂಬಿಕೊಂಡು ಚಿಗುರಿದ ತುಂಬೆಯ ಸಸಿಯೆಂದು ಭಾವಿಸಿದಿರಾದರೂ ಅಶ್ವತ್ಥ ಮರವಾಗಿ ಬೆಳೆಸಿ ಕೊಟ್ಟ ಸತ್ಯ ನಾನು. ಬೀಡು ಕಟ್ಟುತ್ತೇವೆ ಎಂದು ಕೈ ಮುಗಿದು ಕೇಳಿಕೊಂಡಿದ್ದಾರೆ. ಸಂತೋಷದಿಂದ ವೀಳ್ಯ ನೀಡಿ ಅಪ್ಪಣೆ ಕೊಟ್ಟ ದೈವ ನಾನಲ್ಲವೇ ಗುತ್ತಿನಾಯರೇ?''

''ಹೆತ್ತಬ್ಬೆಯಂತಿರುವ ಸತ್ಯ ನೀನು''

''ಈಗ ಏನಾಯಿತು? ಯಾಕೆ ನನ್ನನ್ನು ನೆನಪು ಮಾಡಿಕೊಂಡಿರಿ?''

''ಬಲು ದೊಡ್ಡ ಸತ್ಯ ನೀನು. ನಿನ್ನ ಚಿತ್ತಕ್ಕೆ ತಿಳಿಯದುದು ಯಾವುದೂ ಇಲ್ಲ, ಆದರೂ ಮನುಷ್ಯರಾದ ನಮ್ಮ ಬಾಯಿಯಿಂದಲೇ ಬರಬೇಕೆಂದು ಕೇಳುತ್ತಿದ್ದಿ. ಮಿತ್ತಬೈಲಿನ ಮನೆಗೆ ಎರಡು ಕಂಬಗಳನ್ನು ತರಲು, ನಿನ್ನೆ ನಿನ್ನ ಗುಂಡಕ್ಕೆ ಎಳನೀರು ಕೆತ್ತಿ ಇಟ್ಟು ಗಂಧ ಪ್ರಸಾದ ಕೊಟ್ಟೆ ನಾನು. ಆದರೆ ಕೊಂಡು ಹೋಗಲು ತಯಾರಾದ ಕಂಬಗಳು ಮಜಲೋಡಿಯ ಅಂಗಳದಿಂದ, ನಿನ್ನ ಗುಡಿ ದಾಟಲು ಒಪ್ಪಲಿಲ್ಲ. ದೈವಕ್ಕೆ ಏನೋ ನಮ್ಮ ಮೇಲೆ ಅಸಮಾಧಾನ ಆದ ಹಾಗಿದೆ. ಅದಕ್ಕೆ ನಿನ್ನನ್ನು ದರ್ಶನದಲ್ಲಿ ಕರೆಸಿದ್ದೇವೆ. ನರಮನುಷ್ಯರು ನಾವು. ತಪ್ಪು ಮಾಡುವುದು ಸಹಜ. ಮಕ್ಕಳಲ್ಲಿ ಕೋಪ ಇದ್ದರೆ ಮಡಿಲಲ್ಲಿ ಹಾಕಿಕೊಂಡು ನಾವು ಕೈಹಿಡಿದ ಕೆಲಸವನ್ನು ನಡೆಸಿಕೊಡಬೇಕೆಂದು ಅರಿಕೆ ಮಾಡುತ್ತಿದ್ದೇವೆ''.

''ಗುತ್ತಿನ ಯಜಮಾನರೇ, ತಾಯಿಯಂತಹ ಸತ್ಯ ಅಲ್ಲವೇ ನಾನು. ಬಲು ದೊಡ್ಡ ಕುಟುಂಬ ನೀವು. ಬಲು ದೊಡ್ಡ ಸತ್ಯ ನಾನು. ಮಕ್ಕಳಿಗೆ ಕಷ್ಟ ಬರುವಾಗ ತಾಯಿಯ ನೆನಪಾಯಿತು ಅಲ್ಲವೇ?''

''ಹಾಗಲ್ಲ, ನಿನ್ನನ್ನು ನೆನೆಯದೆ ಯಾವ ಕೆಲಸಕ್ಕೂ ನಾವು ಈ ತನಕ ಇಳಿದಿಲ್ಲ, ನರಮನುಷ್ಯರು ನಾವು. ಏನಾದರೂ ಮರೆತಿದ್ದರೆ ದೈವವಾದ ನೀನು ನಮಗೆ ಕ್ಷಮೆ ಕೊಟ್ಟು ನಮ್ಮ ಕೆಲಸದಲ್ಲಿ ಬೆನ್ನಿಗೆ ನಿಂತು ಸಹಾಯ ಮಾಡಬೇಕೂಂತ ಬೇಡಿಕೊಳ್ಳುತ್ತಿದ್ದೇವೆ''.

''ಯಜಮಾನರೇ, ಗಟ್ಟದ ಮೇಲಿಂದ ಕಾಡು ಇಳಿದು ಕನ್ಯಾನದ ಗುಡ್ಡದಲ್ಲಿ ಬಿಳಿ ಕೋಳಿಯಾಗಿ ಕೂಗಿ ನೋಡುವಾಗ ಬೇಳದ ಗುತ್ತು ಕಂಡಿತು ನನಗೆ. ಅಲ್ಲಿ ನೆಲೆಯಾದ



ನಿಮ್ಮ ಹಿರಿಯರು ಮಜಲೋಡಿಗೆ ಬರುವಾಗ ನನ್ನನ್ನೂ ಕರೆತಂದರು. ಮಜಲೋಡಿಗೆ ಬಂದು ನೆಲೆಯಾದ ಸತ್ಯ ನಾನು. ಗುತ್ತಿನ ಸಂತಾನ ಮಿತ್ತಬೈಲಿನಲ್ಲಿ ಬೀಡು ಕಟ್ಟಿಸಿ, ರಾಜ್ಯವಾಳಿ ಸೀಮೆಗೊಂದು ಗುತ್ತು ನೀಡಿ ಮೆರೆಸಬೇಕೆಂದಿದೆ. ಬೀಡು ಬೇಕು, ಬೀಡಿನ ದೈವ ಬೇಡವಾ ಆಳ್ವರೇ? ಬಿತ್ತಲು ಬೀಜ ಕೊಟ್ಟಿರಿ, ಉಳಲು ಕೋಣ ಕೊಟ್ಟಿರಿ, ನೊಗ-ನೇಗಿಲು ಕೊಟ್ಟಿರಿ. ಕೆಲಸಕ್ಕೆ ಆಳುಗಳನ್ನು ಕೊಟ್ಟಿರಿ. ಸಂಸಾರ ಬೆಳೆಸಲು ಹೆಣ್ಣು ಕೊಡಲು ನಿಶ್ಚಯ ಮಾಡಿಸಿದ ಯಜಮಾನರೇ, ಕಾಯಲು ದೈವ ಕೊಟ್ಟಿರಾ? ನನ್ನ ಸಂಸಾರ, ತನಗಾಗಿ ಬೀಡು ಕಟ್ಟಿಸುವಾಗ ನನಗೊಂದು ಗುಂಡ ಕಟ್ಟಿಸಲು ನೆನಪಾಗಲಿಲ್ಲ ಅಲ್ಲವೇ ಆಳ್ವರೇ?''

ದೈವದ ಈ ಮಾತನ್ನು ಅಳಿಯಂದಿರಲ್ಲೂ ಸಂಕಮ್ಮಕ್ಕನಲ್ಲೂ ಚರ್ಚಿಸಿ ಸುಬ್ಬಾಳ್ವರು ಹೇಳಿದರು,

''ಕುಟುಂಬದ ದೈವ ನೀನಾದರೂ, ಮಿತ್ತಬೈಲಿನಲ್ಲಿ ಗುಂಡ ಕಟ್ಟಿ ನೆಲೆ ಮಾಡಿಸ ಬೇಕಾದರೆ ಈ ಊರಿನ ತಂತ್ರಿಯವರ ಹಾಗೂ ದೈವ, ದೇವರ ಅಪ್ಪಣೆಯಾಗಬೇಕು. ರಾಜ್ಯದ ಅರಸರ ಒಪ್ಪಿಗೆ ಬೇಕಾಗಬಹುದು. ಆದರೆ ನಿನ್ನ ಕುಟುಂಬ ಎಲ್ಲಾ ಒಳ್ಳೆಯ ಕೆಲಸ ಗಳಿಗೂ ನಿನ್ನ ಅಪ್ಪಣೆ ತೆಗೆದುಕೊಂಡು, ನಿನ್ನ ಆಯನ-ಅಂಕಗಳಿಗೆ ಬಂದು ಪ್ರಸಾದ ತೆಗೆದುಕೊಂಡು ಹೋಗುತ್ತಿದೆ. ಅದಕ್ಕಿಂತ ಹೆಚ್ಚು ಏನಿದ್ದರೂ ನೀನು ಮಾಯೆ, ಹೆತ್ತಬ್ಬೆಯಂತಿರುವ ಸತ್ಯ. ನಮಗೆ ನಡೆಸಿಕೊಡಬೇಕು''.

''ಯಜಮಾನರೇ, ಆಗಲಿ ನೋಡೋಣ. ನನ್ನ ಮಾಯದ ಕಣ್ಣಿಗೆ ಗೋಚರವಾದುದು ನಿಮ್ಮ ಚರ್ಮದ ಕಣ್ಣಿಗೆ ಕಾಣಿಸದು. ಕರೆಯಿರಿ, ನನ್ನ ಸಂಸಾರಕ್ಕೆ ಅಪ್ಪಣೆ ಕೊಡುತ್ತೇನೆ''.

ಮಂಜಣ ಮುಂದೆ ಬಂದು ನಿಂತ. ಭೂತ ಮತ್ತೆ ಮೈಮೇಲೆ ಬಂದು, ಕೈಮುಗಿದು ನಿಂತಿದ್ದ ಮಂಜಣನ ಕೈಗೆ ಕಡ್ತಲೆಯ ತುದಿ ಇಟ್ಟು ಅಪ್ಪಣೆ ಕೊಟ್ಟಿತು,

''ಮಜಲೋಡಿಯ ಸಂಸಾರ ನನ್ನ ಬಲು ದೊಡ್ಡ ಸಂಸಾರ. ಎಡವಿ ಬಿದ್ದಾಗಲೂ ಎತ್ತಿ ನಿಲ್ಲಿಸಿ ಸೀಮೆಯಲ್ಲೇ ನನ್ನ ಸಂಸಾರವೆಂದು ಹೆಸರು ಬರಿಸಿದೆ. ಗದ್ದೆ ಅಗೆದು ಬೇಸಾಯ ಮಾಡಿದಿ. ಕತ್ತಿ ಹಿಡಿದು, ಯುದ್ಧ ಮಾಡಿದಿ. ಬೀಡು ಕಟ್ಟಿಸಲು ನಿರ್ಧರಿಸಿ ನನ್ನ ಸಹಾಯ ಕೇಳಿದಿ ಅಲ್ಲವಾ? ಆಗಲಿ ನೋಡೋಣ. ನಂಬಿಕೊಂಡು ಬಂದ ದೈವ, ಹೆತ್ತಬ್ಬೆ ಯಂತಿರುವ ಸತ್ಯ. ನಂಬಿ ನನ್ನನ್ನು. ನೀವು ಕಟ್ಟುವ ಬೀಡಿಗೆ ಯಾವ ಅಡ್ಡಿ, ಆತಂಕ, ಅಡೆತಡೆ ಇದ್ದರೂ ಅದನ್ನು ಬೇರೆ ರಾಜ್ಯಕ್ಕೆ ಹಾಕಿ ನಂಬಿದ ದೈವ ನಡೆಸಿಕೊಟ್ಟಿತೆಂದು ಹೇಳುವಂತೆ ಮಾಡುತ್ತೇನೆ. ನಂಬು ನನ್ನನ್ನು. ಗುತ್ತಿನಾಯರೇ, ಗಂಧ ಪ್ರಸಾದ ಕೊಡುತ್ತೇನೆ. ಕೊಡುವುದ ಕ್ಕಿಂತ ಮೊದಲು ನನ್ನ ಒಂದು ಅಪ್ಪಣೆ ಇದೆ. ಪ್ರಸಾದ ಕೊಡಲೇ ಗುತ್ತಿನಾಯರೇ?''

''ತಾಯಿಯಂತಹ ಸತ್ಯ. ಅಪ್ಪಣೆ ಕೊಡುತ್ತೇನೆಂದು ಹೇಳಿದಿ. ಬೇಡ ಎನ್ನಲು ನಾವು ಯಾರು? ಅಪ್ಪಣೆಯನ್ನು ಕೊಡು. ಅದನ್ನು ನಡೆಸಿಕೊಂಡು ಹೋಗುವ ಶಕ್ತಿಯನ್ನೂ ಕೊಡು''.

''ಮಂಜಣಾಳ್ವರೇ, ಬೀಡು ಕಟ್ಟಿ, ಯುದ್ಧ ಮಾಡಿ, ಎರಡಿದ್ದುದು ನಾಲ್ಕು ಕಾಲಾಗಿ, ಮನೆಯಲ್ಲಿ ಸಂಸಾರ ತುಂಬಿ ರಾಜ್ಯವಾಳುವಂತೆ ಅಪ್ಪಣೆ ಕೊಡುತ್ತೇನೆ. ರಾಜ್ಯ ಆಳುವಾಗ ಹಿರಿಯರ ಮನೆಯಿಂದ ಭಂಡಾರ ಕೊಂಡು ಹೋಗಿ. ಎರಡು ದಿನಗಳ ಧರ್ಮನೇಮ, ನಾಲ್ಕು ದಿನಗಳ ಕೋಳಿ ಅಂಕ, ಅಂಕ-ಆಯನ ನಡೆಸುವಂತೆ ಕೇಳುತ್ತಿದ್ದೇನೆ. ವೀಳ್ಯ ಹಿಡಿಯುತ್ತೀಯಾ ಮಂಜಣಾಳ್ವ?''

''ಸತ್ಯದ ಚಿತ್ತ. ಕೇಳಲೂ, ಕೇಳಿದುದನ್ನು ನಡೆಸಿಕೊಡಲೂ ನೀನಿರುವಾಗ ನಾವು ನಿನ್ನ ಸಂಸಾರಕ್ಕೆ ನಡೆಸಿಕೊಡುವುದಕ್ಕೆ ಅಡ್ಡಿ ಇಲ್ಲ''.

''ಯಜಮಾನರೇ, ಬೀಡು ಕಟ್ಟಿಸುವ ಕೆಲಸವನ್ನು ಕಷ್ಟವಿಲ್ಲದೆ ನಡೆಸಿ ಕೊಡುತ್ತೇನೆಂದು ಗಂಧ ಪ್ರಸಾದ ಕೊಡುತ್ತೇನೆ. ಧರ್ಮನೇಮದ ವೀಳ್ಯವನ್ನೂ ಕೊಡುತ್ತೇನೆ. ತಗೋ, ಕೊಡಿ ಎಲೆಯ ವೀಳ್ಯ.''

ಭೂತ ವೀಳ್ಯ ಕೊಟ್ಟು ಹೇಳಿತು,

''ನನ್ನ ಪ್ರಸಾದದ ಗಂಧವನ್ನು ಮರಕ್ಕೆ ಸವರಿ ಕೋಳ್ಯೂರಿನ ನಾರಾಯಣ ದೇವರನ್ನು ನೆನೆದು ಎಳೆಯಿರಿ''.

ದೈವ ಇಷ್ಟು ಹೇಳಿ ಮರದ ಬಳಿ ಹೋಗಿ ಮರವನ್ನು ಕಡ್ತಲೆಯಿಂದ ಮುಟ್ಟಿತು. ಜನರೆಲ್ಲ ಮರ ಎಳೆಯುವಾಗ ಬಾಳೆಯ ದಿಂಡಿನಂತೆ ಮರ ಸರಸರನೆ ಉರುಳಿತು. ಅಂಗಳದಲ್ಲಿ ದೈವ ಕಟ್ಟುಕಟ್ಟಳೆಯ ದರ್ಶನ ಕೊನೆಗೊಳಿಸಿತು. ಮಂಜಣಾಳ್ವರು ಎಲ್ಲರಿಗೂ ಎಳನೀರು ಕೊಟ್ಟು ಮರ ಸಾಗಿಸುವ ಕೆಲಸ ಮುಂದುವರಿಸಿದರು.

ಮಿತ್ತಬೈಲಿಗೆ ತಂದ ಕಂಬದ ಮರವನ್ನು ಎಲ್ಲರೂ ಸೇರಿ ಮನೆಯ ಜಗಲಿಯಲ್ಲಿ ಹಾಕಿಸಿದ ಮೇಲೆ ಕಾರ್ಕಳದ ಆಚಾರಿ ಕೆಲಸ ಪ್ರಾರಂಭಿಸಿದ. ಮಣ್ಣಿನ ಕೆಲಸದ ಮೇಸ್ತ್ರಿಗಳು ಮಣ್ಣು ಕಲಸಿ ಗೋಡೆ ಕಟ್ಟಿ ಗಾರೆ ಕೆಲಸದಲ್ಲಿ ತೊಡಗಿದರು.

★★★

ಹಬ್ಬ ಕಳೆದು ಸುಗ್ಗಿಯ ಗದ್ದೆಯಲ್ಲಿ ತೆನೆ ಆಯಿತು. ಮಂಜಣಾಳ್ವರು ಮಾಯಿಪ್ಪಾಡಿ, ಕುಂಬಳೆಗೆ ಹಲವು ಸಲ ಹೋಗಿ ಬಂದರು. ಮಾಯಿಪ್ಪಾಡಿಯಲ್ಲಿ ದೈನಂದಿನ ಸುದ್ದಿಯನ್ನು ಅಷ್ಟ ಪ್ರಧಾನರೂ ಸೇನಾ ನಾಯಕರೂ ಚರ್ಚಿಸಿ ಬೇಕು ಬೇಕಾದ ಕ್ರಮ ತೆಗೆದುಕೊಳ್ಳಲು ತಯಾರಿ ನಡೆಯುತ್ತಿತ್ತು.

ಭೂಮಿ ತಂಪೇರಿ, ಹುಲ್ಲು ಪಚ್ಚೆಯಾಗಿ ಸುಗ್ಗಿಯ ಸಂತೋಷ ಊರೆಲ್ಲಾ ಹರಡಿತ್ತಾದರೂ ಬೀಸುವ ಗಾಳಿಗೆ, ಸುಡುವ ಬಿಸಿಲಿಗೆ, ಬೀಳುವ ಹಿಮದ ಮಧ್ಯೆ ವಿದ್ರೋಹದ ಬಿರುಗಾಳಿಯೂ ಬೀಸುತ್ತಿತ್ತು. ಕಲ್ಯಾಣಪ್ಪನ ದಂಡು ಅಮರಸುಳ್ಯದಿಂದ ಪಂಜ, ಬೆಳ್ಳಾರೆ ಬೈಲುಗಳಲ್ಲಿ ಕೊಳ್ಳೆ ಹೊಡೆಯುತ್ತಿರುವ ಸುದ್ದಿ ದಿನಾ ಬರುತ್ತಿತ್ತು. ಕುಂಬಳೆ



ಅರಸೊತ್ತಿಗೆಯ ಸೀಮೆಗಳಲ್ಲಿ ಇಂತಹ ಯಾವುದೇ ಸುದ್ದಿಯಿರಲಿಲ್ಲ. ಆದರೆ ಜನರನ್ನು ಪುಸಲಾಯಿಸಿ, ಆಮಿಷ ತೋರಿಸಿ ದಂಡಿಗೆ ಸೇರಿಸುತ್ತಿದ್ದಾರೆ ಎನ್ನುವ ಸುದ್ದಿ ಬರುತ್ತಿತ್ತು.

ಈ ಮಧ್ಯೆ ಹಾಯಿ ಹಡಗಿನಲ್ಲಿ ವ್ಯಾಪಾರಕ್ಕೆ ಬರುವ ಅರಬಿಗಳಿಗೂ ಕಂಪನಿ ಸರಕಾರದ ಇಂಗ್ಲಿಷ್ ಸೈನಿಕರಿಗೂ ಅಲ್ಲಲ್ಲಿ ಘರ್ಷಣೆ-ಗಲಾಟೆ ನಡೆಯುತ್ತಲೇ ಇತ್ತು. ಕುಂಬಳೆಯಲ್ಲಿ ಕುಂಬಳೆಯ ದೊಡ್ಡ ರಾಯಪ್ಪ ನಾಯಕನ ದಂಡು ಈ ಚಿಕ್ಕಪುಟ್ಟ ಗಲಭೆ, ಗದ್ದಲಗಳನ್ನು ಅಲ್ಲಲ್ಲಿಯೇ ನಂದಿಸುತ್ತಿತ್ತು.

ದೊಡ್ಡ ರಾಯಪ್ಪ ನಾಯಕ, ಸುಲ್ತಾನನ ಕಾಲದಲ್ಲಿ ಭಾರೀ ವೀರನೆನಿಸಿದ್ದ ನರಸಯ ನಾಯಕನ ಮಗ. ನರಸಯ್ಯ ನಾಯಕನ ತಂದೆ ರಂಗಪ್ಪ ನಾಯಕನನ್ನು ಸೂಫಿ ಎಂಬ ಟಿಪ್ಪು ಸುಲ್ತಾನನ ಸುಬೇದಾರ ಅನ್ಯಾಯವಾಗಿ ಜೈಲಿಗೆ ಹಾಕಿದ್ದನಂತೆ. ಕೇಳಿದ ಕೂಡಲೇ ಹಣಕಾಸು ಕೊಟ್ಟು ಕಳುಹಿಸಲಿಲ್ಲ ಎಂಬ ಕೋಪದಲ್ಲಿ ಸೂಫಿ, ನಾಯಕನನ್ನು ಜೈಲಿಗೆ ಹಾಕಿದ್ದ. ರಂಗಪ್ಪ ನಾಯಕನನ್ನು ಬಿಡಿಸಿಕೊಳ್ಳುವುದಕ್ಕಾಗಿ ಮಗ ನರಸಯ ನಾಯಕ ಶ್ರೀರಂಗಪಟ್ಟಣದಲ್ಲಿ ಸುಲ್ತಾನರನ್ನು ಕಾಣಲು ಹಲವು ತಿಂಗಳುಗಳ ಕಾಲ ಪ್ರಯತ್ನಿಸಿದ್ದ. ಆದರೂ ಅವನಿಂದ ಕಾಣಲು ಸಾಧ್ಯವಾಗಲಿಲ್ಲ. ಕೊನೆಗೆ ಒಂದು ದಿನ ಶ್ರೀರಂಗಪಟ್ಟಣದ ಆನೆ ಬಾಗಿಲಿನಲ್ಲಿ ಕುಳಿತು ಬಡವರಿಗೆ ಅಕ್ಕಿ ಹಂಚಿಸುತ್ತಿದ್ದ ನಾಯಕ ಸುಲ್ತಾನರ ಕಣ್ಣಿಗೆ ಬಿದ್ದ. ಅವನ ಅಹವಾಲು ಕೇಳಿದ ಸುಲ್ತಾನರು ಸೂಫಿಯನ್ನು ದಂಡಿನಿಂದಲೇ ಓಡಿಸಿದರಂತೆ.

ರಂಗಪ್ಪ ನಾಯಕ ಕುಂಬಳೆಯ ಬಹು ದೊಡ್ಡ ಸಾಹುಕಾರ. ಹಾಗೆಯೇ ಮಹಾ ಕಲಾರಸಿಕ. ಶ್ರೀರಂಗಪಟ್ಟಣದ ಸೆರೆಮನೆಯಿಂದ ಬಿಡುಗಡೆಯಾದ ನೆನಪಿಗೆ ರಂಗಪ್ಪ ನಾಯಕ ಕುಂಬಳೆಯ ಆಟದ ಮೇಳ ಕಟ್ಟಿದ. ಕುಂಬಳೆಯಲ್ಲೊಂದು ಧರ್ಮ ಛತ್ರ ಕಟ್ಟಿಸಿದ. ಅದರಿಂದಾಗಿಯೇ ಕುಂಬಳೆಯ ಇಡೀ ಪೇಟೆ ಸೂಫಿಗೆ ವಿರುದ್ಧ ನಿಂತಿತ್ತು. ಅಂತಹ ರಂಗಪ್ಪ ನಾಯಕನ ಛಲವಾದಿ ಮಗ ನರಸಯ ನಾಯಕ. ಈ ನರಸಯ ನಾಯಕನ ಮಗನೇ ದೊಡ್ಡ ರಾಯಪ್ಪ ನಾಯಕ. ತಂದೆಯಷ್ಟೇ ಜಾಣ, ಛಲವಾದಿ, ಧರ್ಮಿಷ್ಟ. ಎಲ್ಲಿ ಅನ್ಯಾಯವಾದರೂ ಸಹಿಸದ ಸೇನಾ ನಾಯಕ. ಅರಸರ ಸೇನೆಯ ನಾಯಕನಾದರೂ ದೊಡ್ಡ ರಾಯಪ್ಪ ಕುಂಬಳೆ ಪೇಟೆಯ ಸುತ್ತಮುತ್ತಲಲ್ಲಿ ಬ್ರಿಟಿಷರ ಸಿಪಾಯಿಗಳು ಅನ್ಯಾಯ, ಲೂಟಿ ಮಾಡಿದಾಗ ದಯೆ ದಾಕ್ಷಿಣ್ಯವಿಲ್ಲದೆ ಶಿಕ್ಷೆ ಕೊಡುತ್ತಿದ್ದ. ಹಾಗಾಗಿ ಅವನ ಹೆಸರು ಕೇಳಿದರೆ ಬ್ರಿಟಿಷ್ ಸೈನಿಕರೂ ಹೆದರುತ್ತಿದ್ದರು.

ಈ ಸಮಯದಲ್ಲೊಂದು ಘಟನೆ ನಡೆಯಿತು. ಕಲೆಕ್ಟರ್ ಮುನ್ರೋ ಸಾಹೇಬರು ಅಕ್ಕಿ, ಭತ್ತದ ತೀರ್ವೆಯನ್ನು ನಿಲ್ಲಿಸಿ, ತೀರ್ವೆಯನ್ನು ನಗದಾಗಿ ಪಾವತಿಸಬೇಕೆಂದು ಆದೇಶ ಹೊರಡಿಸಿದರು. ಅಕ್ಕಿ, ಭತ್ತದ ವ್ಯಾಪಾರ ಬ್ರಿಟಿಷರ ಕೈಯಲ್ಲಿತ್ತು. ಬೆಳೆಗೆ ಅವರು ಹೇಳಿದ್ದೇ ಬೆಲೆ. ಖರೀದಿಸುವವರಿಲ್ಲದೆ ಅಕ್ಕಿ, ಭತ್ತ, ತೆಂಗಿನ ಕಾಯಿಗಳ ಬೆಲೆ ಕುಸಿದು ಮಣ್ಣು ಮುಕ್ಕಿತು. ಜನರಿಗೆ ಮುನ್ರೋ ಸಾಹೇಬರ ನಗದು ತೀರ್ವೆ, ಸುಂಕ ಕೊಡಲು ಸಾಧ್ಯವಾಗಲಿಲ್ಲ. ಫರಂಗಿಗಳ ಪೀಡೆ ಹೆಚ್ಚಾಯಿತು. ಜನರ ಅಸಮಾಧಾನ ಬಲಿಯಿತು.

ಅಮರಸುಳ್ಯದಲ್ಲಿ ಊರಿಗೆ ಊರೇ ದಂಗೆ ಏಳಲು ಪ್ರಾರಂಭಿಸಿತು. ಆ ದಂಗೆ ಕಲ್ಯಾಣಪ್ಪನ ಕಾಟುಕಾಯಿಗೆ ಮುಕ್ತಿ ಹಾಡಿತು.

ಮಂಜಣಾಳ್ವ ದಂಡನ್ನು ಮಂಜೇಶ್ವರದಲ್ಲಿ ಕಾವಲಿಗೆ ನಿಲ್ಲಿಸಿ ಬೆಳೆಯ ಕೊಯ್ಲಿಗೆ ಪ್ರಾರಂಭಿಸಿದ. ಅರುವತ್ತು ಮುಡಿ ಉದ್ದು ಹಾಗೂ ಇನ್ನೂರೈವತ್ತು ಮುಡಿ ಮಸ್ಕತ್ ಅಕ್ಕಿ ಆದಿ ಸೆಟ್ಟಿಯ ಭಂಡಸಾಲೆಗೆ ಬಂದು ಬೀಳುವಾಗ ಸುದ್ದಿ ಊರಿಡೀ ಹರಡಿತು. ವಿಷಯ ತಿಳಿದ ಅರಬರು ಮಂಜೇಶ್ವರದ ಬಂದರಿನಿಂದ ಮಸ್ಕತ್ ಅಕ್ಕಿಯನ್ನು ಒಂದು ಕಾಳೂ ಬಿಡದೆ ಕೊಂಡು ಹೋದರು ಎಂಬ ಸುದ್ದಿ ದೊಡ್ಡ ರಾಯಪ್ಪ ನಾಯಕನ ಕಿವಿಗೆ ಬಿತ್ತು. ದಂಡನಾಯಕ ಮಂಜಣಾಳ್ವರನ್ನು ನೋಡಿ ಪರಿಚಯವಿತ್ತಾದರೂ ಅವರು ಇಷ್ಟು ದೊಡ್ಡ ಮಸ್ಕತ್ ಅಕ್ಕಿಯ ಕೃಷಿಕನೆಂದು ತಿಳಿದಿರಲಿಲ್ಲ. ಒಂದು ದಿನ ಮಿತ್ತಬೈಲಿಗೆ ಬಂದ ರಾಯಪ್ಪ ನಾಯಕ ಮಂಜಣಾಳ್ವರಲ್ಲಿ ತಾನೂ ಮಸ್ಕತ್ ಅಕ್ಕಿಯ ದೊಡ್ಡ ವ್ಯಾಪಾರಿಯೆಂದು ತಿಳಿಸಿದ. ಮಂಜಣಾಳ್ವರು ತಾನು ಮಸ್ಕತ್ ಅಕ್ಕಿಯನ್ನು ತನ್ನ ಹಳೆಯ ಗೆಳೆಯ ಆದಿ ಸೆಟ್ಟಿಗಲ್ಲದೆ ಬೇರಾರಿಗೂ ಕೊಡುವುದಿಲ್ಲವೆಂದಾಗ ರಾಯಪ್ಪ ನಾಯಕ, ಬೇರೆ ಎರಡು ವಸ್ತುಗಳ ವ್ಯಾಪಾರವನ್ನು ಸೂಚಿಸಿದ.

ಅರಬರು ಮತ್ತು ಪೋರ್ಚುಗೀಸರು ಈ ಊರಿಗೆ ಬರುವುದು ಸಂಬಾರ ದಿನಸಿನ ವ್ಯಾಪಾರಕ್ಕೆ. ಅವರು ನಮ್ಮ ಊರಿನ ಕಾಡುತ್ಪತ್ತಿಯನ್ನೂ ಖರೀದಿಸುತ್ತಾರೆಂದು ತಿಳಿಸಿದಾಗ ಮಂಜಣನ ತಲೆಗೆ ಬೇರೆ ವ್ಯಾಪಾರದ ವಿಷಯ ಹೊಳೆಯಿತು. ಮಂಜಣ ತಮ್ಮಂದಿರನ್ನು ಕರೆದು ರಾಯಪ್ಪ ನಾಯಕ ಹೇಳುವುದನ್ನು  ಕೇಳುವಂತೆ ತಿಳಿಸಿದ. ಮಿತ್ತಬೈಲಿನ ಸುತ್ತಮುತ್ತಲ ಕಾಡಲ್ಲಿ ಕರಿಮೆಣಸು ಎಷ್ಟೋ ಬೆಳೆಯುತ್ತಿತ್ತು. ಕೆಲಸದವರು ಕೊಯ್ದು, ಸೇರು ಬೀಜವನ್ನು ಕುಡಿಕೆ ಶೇಂದಿಗೆ ಮಾರುವುದನ್ನು ಕಂಡಿದ್ದರು. ರಾಯಪ್ಪ ನಾಯಕ ಅವರೊಡನೆ, ಕಾಡುತ್ಪತ್ತಿಯಾದ ಕರಿಮೆಣಸು,ಏಲಕ್ಕಿ, ಲವಂಗ, ದಾಲಚೀನಿ ಇತ್ಯಾದಿಗಳನ್ನು ತಂದು, ಒಣಗಿಸಿ ತನ್ನ ಬಂಡಸಾಲೆಗೆ ಹಾಕಿದರೆ ಒಳ್ಳೆಯ ಬೆಲೆ ಕೊಡುತ್ತೇನೆ ಎಂದಾಗ ಮಂಜಣಾಳ್ವ ಒಪ್ಪಿಕೊಂಡ. ಅದರ ಜೊತೆಗೆ ರಾಯಪ್ಪ ನಾಯಕ ಕೊಬ್ಬರಿ ವ್ಯಾಪಾರ ಮಾಡುವುದಾಗಿಯೂ ತಿಳಿಸಿದ. ಕಿನ್ಯನವರಿಗೆ ಅಟ್ಟದಲ್ಲಿದ್ದ ಕೊಬ್ಬರಿಗೆ ಗಿರಾಕಿ ಸಿಕ್ಕಿದ್ದು ನೋಡಿ ಸಂತೋಷ ವಾಯಿತು. ಹೀಗೆ ಕುಂಬಳೆಯ ರಾಯಪ್ಪ ನಾಯಕನಲ್ಲಿ ಒಂದು ಹೊಸ ವ್ಯಾಪಾರ ಶುರು ವಾಯಿತು. ಮಂಜಣಾಳ್ವರಿಗೆ  ತನ್ನ ಉತ್ಪತ್ತಿಗಳಿಗೊಂದು ಹೊಸ ದಾರಿ ಆದುದು ನೋಡಿ ಖುಷಿಯಾಯಿತು. ಮಂಜಣಾಳ್ವರು ಮಸ್ಕತ್ ಅಕ್ಕಿಯನ್ನು ಆದಿ ಸೆಟ್ಟಿಗಲ್ಲದೆ ಬೇರೆ ಯಾರಿಗೂ ಕೊಡುವುದಿಲ್ಲವೆಂದು ರಾಯಪ್ಪನಂತಿರುವ ಸಾಹುಕಾರನಿಗೆ ಹೇಳಿದರು ಎಂಬ ಮಾತು ಆದಿ ಸೆಟ್ಟಿಯ ಕಿವಿಗೂ ಬಿತ್ತು. ಆದಿ ಸೆಟ್ಟಿಯ ಮನೆಯಲ್ಲಿ ಆ ಬಗ್ಗೆ ಚರ್ಚೆ ನಡೆದು ಮನೆಯ ಹೆಂಗಸರ ಕಿವಿಗೂ ಬಿತ್ತು. ಅವನ ಮೇಲೆ ಈ ತನಕ ಇದ್ದ ಗೌರವ ಪ್ರೀತಿಗೆ ತಿರುಗಿತು. ಮನೆಯವರಿಗೆಲ್ಲ ಮಂಜಣ ದೊಡ್ಡಣ್ಣನಾದ.

ಹಬ್ಬ ಕಳೆದು ಹತ್ತು ದಿನಗಳಲ್ಲಿ ಬಂದ ಸುಬ್ಬಾಳ್ವರು ಬಡಾಜೆ ತಂತ್ರಿಯವರಲ್ಲಿ ದಿನ



ನಿಶ್ಚಯ ಮಾಡಿದರು. ಗೃಹ ಪ್ರವೇಶ ಗೌಜಿ ಗದ್ದಲ ಇಲ್ಲದೆ ನಡೆಯಬೇಕೆಂದು ತೀರ್ಮಾನ ವಾಯಿತು. ಮುಂದೆ ಎರಡು-ಮೂರು ತಿಂಗಳಲ್ಲಿ ಮದುವೆ ಇರುವುದರಿಂದ ಅದನ್ನೇ ವಿಜೃಂಭಣೆಯಿಂದ ಮಾಡಬೇಕೆಂದು ಸುಬ್ಬಾಳ್ವರು ಅಳಿಯಂದಿರಲ್ಲಿ ಹೇಳಿ, ಮಜಲೋಡಿ ಕುಟುಂಬದವರಿಗೂ ಬೀಗರಾದ ಪಾವೂರು-ಮಲಾರ್‌ನವರಿಗೂ ಆಹ್ವಾನ ಕಳುಹಿಸಿದರು. ಹೊರಗಿನವರಲ್ಲಿ ಭಂಡಾರ ಮಠದ ಭಂಡಾರಿ, ಭಂಡಸಾಲೆಯ ಆದಿ ಸೆಟ್ಟಿ, ಕುಂಬಳೆಯ ಸಾಹುಕಾರ ದೊಡ್ಡ ರಾಯಪ್ಪ ನಾಯಕ ಆಹ್ವಾನ ಇಲ್ಲದಿದ್ದರೂ ಬರುವವರು. ಇಚ್ಲಂಪಾಡಿಯ ಯಜಮಾನ ಕೋಚಣ್ಣಾಳ್ವರನ್ನು, ಪಾಡಿಯ ಸುಬ್ರಾಯ ಶಾನುಭೋಗರನ್ನು ಮಂಜಣ ಆಹ್ವಾನಿಸಿದ್ದ. ಬಡಾಜೆ ತಂತ್ರಿಗಳು ವಿಧಿವಿಧಾನದಂತೆ ಪೂಜೆ ಮಾಡಿ ಆಚಾರಿ ಗಳಿಂದ ಮನೆಯನ್ನು ಬಿಡಿಸಿಕೊಟ್ಟು ಗೃಹ ಪ್ರವೇಶದ ಶಾಸ್ತ್ರ ಮುಗಿಸಿದರು. ಬಂದವರಿಗೆ ಬೀಡು ನೋಡಿ ಆಶ್ಚರ್ಯವಾಯಿತು, ಸಂತೋಷವೂ ಆಯಿತು.

ಹೊಸ ಮನೆ ಬಹಳ ದೊಡ್ಡ ಬೀಡಿನ ಮನೆ. ದೊಡ್ಡ ಚಾವಡಿ, ಚಾವಡಿಯ ಬೋದಿಗೆಯ ಕಂಬ, ಕೆತ್ತನೆ-ಇಷ್ಟು ದೊಡ್ಡ ಮನೆಯನ್ನು ಇತ್ತೀಚೆಗೆ ಯಾರೂ ಕಟ್ಟಿಸಿರಲಿಲ್ಲ. ಕೆತ್ತನೆಯ ಬಾಗಿಲುಗಳು, ಕಿಟಕಿಗಳನ್ನು ಕಾರ್ಕಳದ ದೋಗ್ರ ಆಚಾರಿ ಬಹಳ ಮುತುವರ್ಜಿ ಯಿಂದ ಮಾಡಿದ್ದ. ಮನೆಯ ಚಾವಡಿಯ ಎಡ ಬಲಗಳಲ್ಲಿ ದೊಡ್ಡ ಕೋಣೆಗಳು. ನಾಲ್ಕು ಅಂಕಣಗಳ ಮನೆಯಲ್ಲಿ ಒಂದು ಬದಿಯಲ್ಲಿ ಊಟದ ಚಾವಡಿ, ಎದುರು ಬದಿಯಲ್ಲಿ ಅಡುಗೆ ಕೋಣೆ, ಮತ್ತೊಂದು ಬದಿಯಲ್ಲಿ ಉಗ್ರಾಣದ ಕೋಣೆಗಳು, ಮಲಗುವ ಕೋಣೆಗಳು, ಅಂಗಳ ದಾಟಿ ಮುಂದೆ ಬಂದರೆ ದೊಡ್ಡ ಸುತ್ತು ಮದಿಲು. ಅದರಲ್ಲಿ ನಾಲ್ನೂರು-ಐನೂರು ಜನ ಕುಳಿತುಕೊಳ್ಳುವಷ್ಟು ದೊಡ್ಡ ಚಾವಡಿ. ಅಂಗಳದಲ್ಲಿ ಒಮ್ಮೆಗೆ ಹತ್ತು ಜೋಡಿಯ ಮದುವೆ ತೆಗೆಯಬಹುದು. ಇಪ್ಪತ್ತು ಮುಡಿ ಅಕ್ಕಿ ಒಣಗಿಸಬಹುದು. ಅಷ್ಟು ದೊಡ್ಡ ಅಂಗಳ. ಒಂದು ಬದಿಯ ಹಟ್ಟಿಯಲ್ಲಿ ಇಪ್ಪತ್ತೈದು ಜೋಡಿ ಕೋಣಗಳನ್ನು ಕಟ್ಟಬಹುದು. ಮತ್ತೊಂದು ಬದಿಯಲ್ಲಿ ಅಕ್ಕಿ-ಕಾಯಿ ಹಾಕುವ ಕೋಣೆ. ಕೋಳಿಗಳನ್ನು ಕಟ್ಟುವ ಕೊಟ್ಟಿಗೆ. ದೂರದಲ್ಲೊಂದು ನಾಲ್ಕು ಗುಡಾಣಗಳನ್ನು ಹೂತಿಟ್ಟಿರುವ ಸ್ನಾನದ ಕೋಣೆ. ಬದಿಯಲ್ಲೇ ಸೂತಕದ ಕೊಟ್ಟಿಗೆ.

ಗುಡ್ಡೆಯ ಮೇಲೆ, ಕಾಡಿನ ಬದಿಯಲ್ಲಿ ಬೈಲಿನ ಮಧ್ಯೆ ಇದ್ದ ಬೀಡು ಹೊಳೆಯ ಆ ಬದಿ, ಈ ಬದಿ ಮೈಲುಗಟ್ಟಲೆಯವರೆಗೆ  ಕಾಣುತ್ತಿತ್ತು. ಮಿತ್ತಬೈಲಿನ ಹೊಸ ಮನೆಯ ಅಂಗಳದಲ್ಲಿ ನಿಂತು ಮುಂದಿನ ಬಾಕಿಮಾರು ಗದ್ದೆಯನ್ನು ನೋಡುತ್ತಿದ್ದ ಮಂಜಣನಿಗೆ, ತಾಯಿಗೆ ಕೊಟ್ಟಿದ್ದ ಒಂದು ಮಾತು ತೀರಿತೆಂಬ ತೃಪ್ತಿಯಾಗಿತ್ತು.

ಎರಡು ದಿನ ಕಳೆಯುವಾಗ ಮಾಯಿಪ್ಪಾಡಿಯಿಂದ ಸಭೆ ಸೇರಲು ಹೇಳಿಕೆ ಬಂತು. ಮಾಯಿಪ್ಪಾಡಿಯ ಅಷ್ಟ ಪ್ರಧಾನರು, ನಾಲ್ವರು ದಂಡನಾಯಕರು, ಇಬ್ಬರು ಸೇನಾಪತಿ ಗಳು, ಊರಿನ, ಪೇಟೆಯ ಗೌರವಸ್ಥ ಮನೆತನದವರು, ವ್ಯಾಪಾರದ, ಬೇಸಾಯದ ಗುರಿಕಾರರಿಗೆ ಎಲ್ಲ ಕರೆಯೋಲೆ ಹೋಯಿತು.

೫

# ಸಿಡಿಲ ಮರಿ

ಮಂಜಣಾಳ್ವರಿಗೆ ರಾಜಸಭೆಗೆ ಬರಬೇಕೆಂಬ ಅಪ್ಪಣೆ ಬಂದ ಕಾಲ, ಕುಂಬಳೆ, ಕಾಸರಗೋಡು, ಮಂಜೇಶ್ವರ ಮುಂತಾದ ತುಳು ತೆಂಕಣದ ರಾಜ್ಯದಲ್ಲೊಂದು ಪರ್ವ ಕಾಲ.

ಮೈಸೂರಿನ ಸುಲ್ತಾನರ ದಂಡು ಬಂದು ಮಂಗಳೂರಿನಿಂದ ತಲಚೇರಿವರೆಗೆ ಸಣ್ಣ ಪುಟ್ಟ ರಾಜರ ರಾಜ್ಯಗಳನ್ನು ಸ್ವಾಧೀನಪಡಿಸಿಕೊಂಡು, ಅವರನ್ನು ಓಡಿಸಿ ಊರನ್ನೂ, ಊರಲ್ಲಿದ್ದ ದೇವಸ್ಥಾನಗಳ ಭಂಡಾರ, ಚಿನ್ನವನ್ನು ಲೂಟಿ ಮಾಡಿ, ಕೆಲವು ದೇವಸ್ಥಾನಗಳನ್ನು ಧ್ವಂಸ ಮಾಡುತ್ತಿತ್ತು. ಊರಿಡೀ ಸಿಡಿಲು ಬಡಿದಂತೆ ಭೀತಿಯ ವಾತಾವರಣ ತುಂಬಿ ಹೋಗಿತ್ತು. ಅನಂತರ ಬಂದ ಕಂಪನಿ ಸರಕಾರವೂ ಅವರ ಕೆಂಪು ಮೂತಿಯ ಫರೆಂಗಿಗಳೂ ಪೇಟೆಯನ್ನು ಮತ್ತೊಮ್ಮೆ ಲೂಟಿ ಮಾಡಿದರು. ಜನರಿಗೆ ಊರು, ವ್ಯಾಪಾರ, ಬೇಸಾಯ ಸಾಕಾಗಿದ್ದ ಕಾಲವದು.

ಕುಂಬಳೆಯ ಅರಸು ಕೃಷ್ಣ ವರ್ಮರ ಅಳಿಯಂದಿರನ್ನು ಟಿಪ್ಪು ಸುಲ್ತಾನನು ಮಂಗಳೂರಿನ ಪೇಟೆಯಲ್ಲಿ ಮೆರವಣಿಗೆ ಮಾಡಿಸಿ, ಬಿಕರ್ನಕಟ್ಟೆಯಲ್ಲಿ ಗಲ್ಲಿಗೇರಿಸಿ, ಶವಗಳನ್ನು ಕೆಲವು ದಿನ



ಹದ್ದು-ಕಾಗೆಗಳಿಗೆ ತಿನ್ನಲು ಬಿಟ್ಟು ಊರವರು ಹಾಗೂ ಮಂಗಳೂರು ಪೇಟೆಯವರು ಸುಲ್ತಾನನ ಹೆಸರು ಕೇಳುವಾಗ ಕ್ಯಾಕರಿಸಿ ಉಗುಳುತ್ತಿದ್ದ ಕಾಲ ಕಳೆದು ಐದಾರು ವರ್ಷ ಸಂದಿತ್ತು. ರಾಮಂತರಸರು ತಲಚೇರಿಗೆ ಓಡಿ, ಬ್ರಿಟಿಷರ ಆಶ್ರಯ ಪಡೆದು ಹಿಂದಿರುಗಿದ್ದರು. ಇಂಗ್ಲಿಷರು ಯುದ್ಧದಲ್ಲಿ ಮೈಸೂರಿನ ಹುಲಿ ಟಿಪ್ಪು ಸುಲ್ತಾನನನ್ನು ಶ್ರೀರಂಗಪಟ್ಟಣದಲ್ಲಿ ಕೊಂದು ರಾಜ್ಯದ ಕೆಲವು ಸೀಮೆಗಳನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡಿದ್ದರು. ಕುಂಬಳೆ, ಕಾಸರಗೋಡು, ಮಂಜೇಶ್ವರ ಸೀಮೆಗಳನ್ನು ರಾಮಂತರಸರಿಗೆ ಬಿಟ್ಟು ಕೊಟ್ಟಿದ್ದರು. ಆ ಕಾಲದಲ್ಲಿ ರಾಮಂತರಸರು ಯುವಕರನ್ನು ಸೇರಿಸಿ ದಂಡು ಕಟ್ಟಲು ಪ್ರಯತ್ನಿಸುತ್ತಿದ್ದರು. ಅದರಲ್ಲಿ ಅವರಿಗೆ ಎಲ್ಲರಿಗಿಂತಲೂ ಹೆಚ್ಚು ಸಹಾಯ ಮಾಡಿದವರು ಇಚ್ಲಂಪಾಡಿಯ ಕೋಚಣ್ಣಾಳ್ವರು ಮತ್ತು ಪಾಡಿ ಸುಬ್ರಾಯ ಶಾನುಭೋಗರು. ಇಬ್ಬರೂ ಅವರ ನೆಚ್ಚಿನ ನಾಯಕರು.

ಮುಜಂಗಾವು ಪಾರ್ಥಸಾರಥಿ ದೇವಾಲಯದ ನ್ಯಾಯಮಂಟಪದಲ್ಲಿ ಮಾಯಿಪ್ಪಾಡಿಯ ಅರಸರ ರಾಜಸಭೆ ಸೇರಿತು. ಎಂಟು ಮನೆಗಳ ರಾಯರು, ಬಾರಿಕ್ಕಾಡಿಯ ಕಾಮಡರು, ಕೂಡೇಲಿನ ಕೋಟೆ ಕುಂಜಿತ್ತಾಯರು, ಮೊಗ್ರಾಲ್‌ನ ಇರ್ನಿರಾಯರು, ಅಗಲ್ಪಾಡಿಯ ಕುಣಿಕುಳ್ಳಾಯರು, ಬೇವಿಂಜೆಯ ಕಕ್ಕಿಲ್ಲಾಯರು, ಕುದ್ರೆಪ್ಪಾಡಿಯ ಪೆಜತ್ತಾಯರು ಹೀಗೆ ಎಂಟು ಜನ ಮಂತ್ರಿಗಳ ಸಭೆ ಸೇರಿತು. ಬೇಳ-ಇಚ್ಲಂಪಾಡಿ, ಮುಕ್ಕೂರು, ಕೋಟೆಕುಂಜಿ ಮತ್ತು ಕೋಡಿಂಜಿ-ಮಜಲೋಡಿಗಳೆಂಬ ನಾಲ್ಕು ಮನೆಗಳ ಗುತ್ತಿನ ಬಂಟರ ಸೇನಾಧಿಪತಿಗಳು, ರಾಜ ಪುರೋಹಿತರಾದ ಬಡಾಜೆ ತಂತ್ರಿಗಳು ಕಟ್ಟೆಯಲ್ಲಿ ಕುಳಿತರು. ಇಷ್ಟು ಜನರಲ್ಲದೆ ಬಂಟರ ಗುತ್ತಿನ ಯಜಮಾನರು, ಬಂಬ್ರಾಣ, ಮಂಗಲ್ಪಾಡಿ, ಕೋಡಿಂಗಾರು, ಕೋಡಿಬೈಲು, ಪೇರೂರು, ಪಾವೂರು, ಪಾದೆ, ಮಲಾರು, ಕುಳ, ಕುಂಡಡ್ಕಗಳ ಬಂಟರಿಗೂ ಅರಸರ ಅಪ್ಪಣೆಯಾಗಿತ್ತು.

ಮಂಜೇಶ್ವರದ ಜೈನ ಸೆಟ್ಟಿಗಳು, ಕೊಂಕಣಿ ಸಮಾಜದ ಹಿರಿಯರಾದ ಭಂಡಾರ ಮಠದ ಭಂಡಾರಿ, ಶಾನುಭೋಗರು, ಭಕ್ತರ ಮಠದ ಭಕ್ತರು, ಮಣಿಯಾಣಿ ಸಮಾಜ, ಬೋವಿ ಸಮುದಾಯ, ಪೂಜಾರಿಗಳು, ಬ್ಯಾರಿಗಳ ಮುಕ್ರಿ, ಮೊಯ್ಲಾರುಗಳು, ಮುಸಲ್ಮಾನ ವರ್ತಕ-ಸಂಘದ ನಾಯಕರು, ಬೆಲ್ಚಡರ ಅಚ್ಚಮ್ಮಾರರು ಹೀಗೆ ಎಲ್ಲ ಸಮಾಜ, ಸಮುದಾಯಗಳ ಯಜಮಾನರು, ಬಾಕುಡರು, ಮುಗೇರರ ಹಿರಿಯರು, ನಲಿಕೆಯವರು, ಕೊರಗರು, ದೊಂಬರು, ಪಾಣಾರರು ಎನ್ನುವ ಪರಿಶಿಷ್ಟ ಸಮಾಜಗಳ ಹಿರಿಯರು ಎಲ್ಲರೂ ಮಜಂಗಾವಿನಲ್ಲಿ ಸೇರಿದ್ದರು. ಪಾರ್ಥಸಾರಥಿ ದೇವಸ್ಥಾನದ ಬೆಳಗ್ಗಿನ ಪೂಜೆ ಮಾಡಿಸಿ ಗಂಧ ಪ್ರಸಾದ ತೆಗೆದುಕೊಂಡು ರಾಮಂತರಸರು ಆಸನದಲ್ಲಿ ಕುಳಿತು ಸಭೆ ಪ್ರಾರಂಭಿಸಿದರು.

“ಕುಂಬಳೆ ರಾಜ್ಯದ ಅಷ್ಟ ಪ್ರಧಾನರೇ, ಸೇನೆಯ ಮುಂದಾಳುಗಳೇ, ಗುತ್ತಿನ ಗುರಿಕಾರರೇ, ಎಲ್ಲ ಸಮಾಜಗಳ ಹಿರಿಯರೇ, ಕದಂಬ ವಂಶ ಈ ಕುಂಬಳೆ ರಾಜ್ಯವನ್ನು

ನಿಮ್ಮೆಲ್ಲರ ಸಹಾಯ ಸಹಕಾರದಿಂದ, ಆಶೀರ್ವಾದದಿಂದ ಈ ತನಕ ಆಳುತ್ತಾ ಬಂದಿದೆ. ಭೂಮಿ ನುಂಗುವ ಕಡಲ್ಗಾಳಿಯಾಗಲಿ, ನೆರೆ ಹಾವಳಿಯಾಗಲಿ ಇಲ್ಲದೆ ಕಾಲಕಾಲಕ್ಕೆ ಮಳೆ ಬಂದು, ಊರು ಸುಭಿಕ್ಷೆಯಲ್ಲಿತ್ತು. ಇತ್ತೀಚಿನ ಕೆಲವು ವರ್ಷಗಳಲ್ಲಿ ಮಾತ್ರ ರಾಜ್ಯಕ್ಕೆ ಕೆಲವು ಆಪತ್ತುಗಳು ಬಂದಿವೆ. ಸುಲ್ತಾನನ ದಂಡು, ಇಕ್ಕೇರಿಯವರ ಯುದ್ಧ, ಫರಂಗಿ ಪೋರ್ಚುಗೀಸರ ದಾಳಿ ಮುಂತಾದ ಆಪತ್ತುಗಳೆಲ್ಲ ಕಳೆದು, ನಮ್ಮ ರಾಜ್ಯದಲ್ಲಿ ಕಳೆದ ನಾಲ್ಕೈದು ವರ್ಷಗಳಿಂದ ಕಂಪನಿ ಸರಕಾರದವರ ಸಹಾಯದಿಂದ ಶಾಂತಿ ನೆಲೆ ನಿಂತಿದೆ. ಕುಂಬಳೆ ಸೀಮೆಯಲ್ಲಿ ಅವರು ಹಾಳುಗೈದುದನ್ನೆಲ್ಲ ಸರಿ ಮಾಡಿದ್ದೇವೆ, ಒಡೆದು ಹಾಕಿದ್ದುದನ್ನು ಮತ್ತೆ ಕಟ್ಟಿದ್ದೇವೆ. ದೇವಸ್ಥಾನ, ಭೂತಸ್ಥಾನಗಳಿಗೆ ಕಾಲಕಾಲಕ್ಕೆ ಉಂಬಳಿ ಕೊಟ್ಟು, ಆಯನ, ಅಂಕ, ಹಬ್ಬಗಳು ನಡೆಯುವಂತೆ ನೋಡಿಕೊಂಡೆವು. ಕೆಲವು ವರ್ಷಗಳಿಂದ ದೇವಸ್ಥಾನ, ಭೂತಸ್ಥಾನ, ಮಸೀದಿಗಳಿಗೆ ಯಾವುದೇ ತೊಂದರೆ ಇಲ್ಲದೆ, ಜಾತಿ, ಧರ್ಮಗಳ ಜಗಳ ಇಲ್ಲದೆ, ನಾವು ಆಳುತ್ತಾ ಬಂದಿದ್ದೇವೆ. ಆದರೆ ಈಗ ಮೂಡಣದ ಗಟ್ಟದಿಂದ, ಕೊಡಗು ನಾಡಿನಿಂದ, ತೆಂಕಣದ ತಲಚೇರಿಯಿಂದ, ಬಡಗಿನ ಮಂಗಳೂರಿನಿಂದ ದಿನಕ್ಕೊಂದು ಸುದ್ದಿ ಬರುತ್ತಿದೆ. ಲಿಂಗಾಯತರಲ್ಲಿದ್ದ ಕೊಡಗಿನ ಆಳ್ವಿಕೆಯನ್ನು ಕಂಪನಿ ಸರಕಾರ ವಹಿಸಿಕೊಂಡ ಮೇಲೆ ಅದೇ ಪಂಗಡದ ಕೊಡಗಿನ ಸ್ವಾಮಿಯೊಬ್ಬ ತಾನೇ ಮಡಿಕೇರಿಯ ಅರಸೊತ್ತಿಗೆಗೆ ವಾರಸುದಾರ ಎನ್ನುತ್ತಾ ಸೇನೆಯನ್ನೂ, ಮದ್ದುಗುಂಡುಗಳನ್ನೂ ಒಟ್ಟು ಮಾಡಿ ಮಂಗಳೂರಿಗೆ ಮುತ್ತಿಗೆ ಹಾಕಲು ತಯಾರಿ ನಡೆಸುತ್ತಿದ್ದಾನಂತೆ. ಈ ತನಕ ವಿಟ್ಲ, ಪುತ್ತೂರು, ಸುಳ್ಯ, ಬೆಳ್ಳಾರೆಗಳ ಬಂಟರು, ಗೌಡರ ನಾಯಕರು ಕುಂಬಳೆಯ ಅರಸೊತ್ತಿಗೆಯನ್ನು ಒಪ್ಪಿಕೊಂಡು ನಮ್ಮೊಂದಿಗೆ ಇದ್ದರು. ಈಗ ಅವರು ಕಲ್ಯಾಣ ಸ್ವಾಮಿ ಎನ್ನುವ ಈ ಲಿಂಗಾಯತ ನಾಯಕನೊಂದಿಗೆ ಸೇರಿದ್ದಾರಂತೆ.''

ಅರಸರು ಇಷ್ಟು ಹೇಳುವಾಗ ಬೇವಿಂಜೆಯ ಕಕ್ಕಿಲ್ಲಾಯರು ಎದ್ದು ನಿಂತು,

''ಮಹಾಪ್ರಭು! ಪುಣಿಚತ್ತಬೈಲು, ಬೆಳ್ಳಿಪ್ಪಾಡಿ, ಬೆಳ್ಳಾರೆಗಳ ಬಂಟರು, ಸ್ವರ್ಗ, ಪಡ್ರೆಗಳ ಮೂಲ್ಯರು, ಮುಳಿಯಾರು, ಆದೂರುಗಳ ನಾಯಕರು ಎಲ್ಲರೂ ಇಂದೂ ನಮ್ಮ ಜೊತೆ ಇದ್ದಾರೆ. ಈ ನಮ್ಮ ಸೀಮೆಯವರಿಗೆ ರಕ್ಷಣೆ ಕೊಟ್ಟು, ಮನವರಿಕೆ ಮಾಡಿದರೆ, ಅವರ ಸಹಾಯದಿಂದ ಈ ದರೋಡೆಕೋರರ ದಂಡು ಇನ್ನು ಮೇಲೂ ನಮ್ಮ ಸೀಮೆಗೆ ಬಾರದಂತೆ ನೋಡಿಕೊಳ್ಳಬಹುದು.''

''ಹೌದು ಮಂತ್ರಿಗಳೇ, ಅದಕ್ಕೆ ಬೇಕಾಗಿಯೇ ಇಂದು ಈ ಮಹಾಸಭೆಗೆ ನೀವು ಹಿರಿಯರನ್ನೆಲ್ಲ ಕರೆಸಿರುವುದು. ನಮ್ಮ ತೊಂದರೆ ಇಲ್ಲಿಗೇ ಮುಗಿಯಲಿಲ್ಲ, ಸುಬ್ರಾಯ ಶಾನುಭೋಗರೇ, ಉಳಿದುದನ್ನು ವಿವರಿಸಿ.''

ರಾಮಂತರಸರು ಇಷ್ಟು ಹೇಳಿ ಬಲ ಬದಿಗೆ ನೋಡಿದರು.

ಭಾರೀ ದೇಹದ, ಗಲ್ಲ ಮೀಸೆಯ, ವಿಸ್ತಾರವಾದ ಎದೆಯ ಬ್ರಾಹ್ಮಣರ ಗುರಿಕಾರ ಸುಬ್ರಾಯ ಶಾನುಭೋಗರು ಎದ್ದು ನಿಂತರು. ಉಟ್ಟ ಪಟ್ಟೆ, ಜನಿವಾರ, ತಲೆಯ



ಜುಟ್ಟಿನಲ್ಲಿದ್ದ  ತುಳಸೀದಳ ಬಿಟ್ಟರೆ ಸುಬ್ರಾಯ ಶಾನುಭೋಗರನ್ನು ಬ್ರಾಹ್ಮಣ ಎಂದು ಯಾರೂ ಎಣಿಸಲಾರರು. ಎದ್ದು ನಿಂತು ಸಭೆಯನ್ನು ನೋಡಿದ ಗತ್ತು ನೋಡಿದರೆ ಅವರನ್ನು ಯಾರೋ ಬಂಟರ ಗುರಿಕಾರನೆಂದೇ ಎಣಿಸಬೇಕು. ಅದೇ ದರ್ಪ, ಅದೇ ಗಾಂಭೀರ್ಯ. ಸುಬ್ರಾಯ ಶಾನುಭೋಗರು ದೇವರ ಕೋಣೆಗೆ ಹೋಗದೆ ವರ್ಷ ಎಷ್ಟಾಯಿತೋ ಏನೋ. ಆದರೆ ಇಂದಿಗೂ ಮುಂಜಾನೆ ಎದ್ದು ವ್ಯಾಯಾಮ ಶಾಲೆಗೆ ಹೋಗಿ ಕಸರತ್ತು ಮಾಡಿಯೇ ಹೊರಡುವುದು. ಕುಂಬಳೆ, ಮುಲ್ಕಿ, ಗರಡಿಯವರನ್ನು ತರಿಸಿ ಕತ್ತಿಯ ಯುದ್ಧ, ಫರಂಗಿಯವರಲ್ಲಿ ತುಪಾಕಿಯ ಗುರಿ, ಬೆಳ್ಚಡರಿಂದ ಬಿಲ್ಲುಬಾಣದ ವಿದ್ಯೆ ಕಲಿತವರು ಶಾನುಭೋಗರು. ಅವರ ಮನೆಯಲ್ಲಿಯೇ ತುಪಾಕಿ, ಬರ್ಚಿ, ಕಠಾರಿ ತಯಾರಿಸುವ ಆಚಾರಿಗಳ ಕೊಟ್ಟಿಗೆ, ಅದರಲ್ಲಿ ದುಡಿಯುವ ಹತ್ತೈವತ್ತು ಆಚಾರಿಗಳಿದ್ದರಂತೆ. ಆ ಕಾಲದ ಯಾವುದೇ ದಂಡಿಗೂ ಕಮ್ಮಿಯಿಲ್ಲದಂತಹ ಸಾವಿರ ಆಳಿನ ದಂಡು ಅವರ ನೇತೃತ್ವದಲ್ಲಿತ್ತು. ಗಲ್ಲ ಮೀಸೆಯ ಪಾಡಿ ಸುಬ್ರಾಯ ಶಾನುಭೋಗರು ದೊಡ್ಡ ಜಮೀನ್ದಾರ. ಸಾವಿರ ಮುಡಿ ಗೇಣಿ ಬರುವ ಆಸ್ತಿ ಅವರದು.

ಸುಬ್ರಾಯ ಶಾನುಭೋಗರು ನುರಿತ ಭಾಗವತರು. ಹೆಸರಾಂತ ಪಾರ್ತಿ ಸುಬ್ಬ ಅವರ ಗುರುಗಳು. ಶಾಂತಿಯ ಕಾಲದಲ್ಲಿ ಬಡಗು ಊರಿನ ಸಂಗೀತದವರು ಶಾನುಭೋಗರ ಮನೆಯಲ್ಲಿ ಕಛೇರಿ ಮಾಡಿ ತಿಂಗಳುಗಟ್ಟಲೆ ಇದ್ದು, ಹೋಗುವಾಗ ಕೈ ತುಂಬಾ ಚಿನ್ನದ ಕಡಗ, ಗದ್ಯಾಣಗಳನ್ನು ಕಾಣಿಕೆಯಾಗಿ ಕೊಂಡು ಹೋಗಲೇಬೇಕು. ತಂಜಾವೂರಿನ ಚಿತ್ರ ಕಲೆಗಾರರು ಬಂದು ಅವರ ಮನೆಯ ಗೋಡೆಗಳಲ್ಲಿ ಚಿತ್ರ ಬರೆದು ಬಹುಮಾನ ಪಡೆದುಕೊಂಡು ಹೋಗುತ್ತಿದ್ದರು. ಯುದ್ಧದ ಸಮಯದಲ್ಲಿ ಕತ್ತಿ, ಕೋವಿಯ ಕಾಳಗ, ಕುದುರೆ ಸವಾರಿಯಷ್ಟೇ, ಶಾಂತಿಯ ಕಾಲದಲ್ಲಿ ಸುಬ್ರಾಯ ಶಾನುಭೋಗರು ಆಟ, ಸಂಗೀತ, ಚಿತ್ರಕಲೆಗೆ ಪ್ರೋತ್ಸಾಹ ಕೊಡುತ್ತಿದ್ದರು. ಮಳೆಗಾಲ ಮುಗಿದ ಕೂಡಲೇ ಅವರ ಮನೆಯಲ್ಲಿ ನಿತ್ಯ ಉತ್ಸವ.

ಸುಬ್ರಾಯ ಶಾನುಭೋಗರು ಎದ್ದು ನಿಂತು ಸಭೆಯನ್ನು ನೋಡಿದರು. ಸಭೆ ಗಪ್ ಚುಪ್ ಆಗಿ ಅವರನ್ನೇ ದಿಟ್ಟಿಸಿತು.

''ಕುಂಬಳೆ ರಾಜ್ಯದ ಅರಸರಾದ ರಾಮಂತರಸರೇ, ಹತ್ತು ಮಾಗಣೆಗಳ ರಾಯರೇ, ಬೀಡಿನ ಬಲ್ಲಾಳರೇ, ಗುತ್ತಿನ ಗುರಿಕಾರರೇ, ಸಭೆಯ ಸರ್ವರೇ, ಇಂದು ರಾಮಂತರಸರು ನಿಮ್ಮನ್ನೆಲ್ಲ ಇಲ್ಲಿ ಸೇರಿಸಿ, ರಾಜ್ಯಕ್ಕೆ ಬಂದಿರುವ ಗಂಡಾಂತರಗಳನ್ನು ನಿಮ್ಮಲ್ಲಿ ಚರ್ಚೆ ಮಾಡಿ ನಮ್ಮ ಸೇನೆಯ ಮುಖ್ಯಸ್ಥರು ಹೇಳಿರುವುದನ್ನು ನಿಮ್ಮ ಮುಂದೆ ಇಡಲು ಅಪ್ಪಣೆ ಕೊಟ್ಟಿದ್ದಾರೆ. ಈ ತನಕ ನಮ್ಮ ಬುದ್ಧಿಯಿಂದ, ನಮ್ಮ ಬಂಟರ ಶಕ್ತಿಯಿಂದ ಈ ರಾಜ್ಯವನ್ನು ಚೆನ್ನಾಗಿ ರಕ್ಷಣೆ ಮಾಡಿಕೊಂಡು ಬಂದಿದ್ದೇವೆ. ಎಷ್ಟೋ ಬಾರಿ ಈ ರಾಜ್ಯವನ್ನು ಸ್ವಾಧೀನಪಡಿಸಿಕೊಂಡು ಆಳಲು ಆಗಾಗ ಕೆಲವರು ಪ್ರಯತ್ನಿಸಿದರು. ಆದರೂ ಯಾರಿಗೂ ಒಂದೆರಡು ವರ್ಷ ಗಳಿಗಿಂತ ಹೆಚ್ಚು ಆಳಲು ಸಾಧ್ಯವಾಗಲಿಲ್ಲ.

“ಈ ರಾಜ್ಯದ ಪ್ರಜೆಗಳು ಸ್ವತಂತ್ರವಾಗಿ, ಸುಖವಾಗಿ ಬಾಳಿದವರು. ಹೊರಗಿನವರು ನಮ್ಮ ಮೇಲೆ ದಬ್ಬಾಳಿಕೆ ಮಾಡಿ ಆಳಲು ಪ್ರಯತ್ನಿಸಿದರಾದರೂ ನಾವು ಅದಕ್ಕೆ ವಿರುದ್ಧ ನಿಂತಿದ್ದೇವೆ.”

“ಕಳೆದ ನಾಲ್ಕೈದು ವರ್ಷಗಳಲ್ಲಿ ಸುಲ್ತಾನನ ಸೈನ್ಯದ ಕ್ರೂರ ಆಳ್ವಿಕೆ ಮುಗಿದು ರಾಮಂತರಸರ ರಾಜ್ಯಭಾರದಲ್ಲಿ ನಾವು ಸುಖ, ಶಾಂತಿಯಲ್ಲಿದ್ದೇವೆ. ಫರಂಗಿಯವರು ಅಲ್ಲಲ್ಲಿ ಕಿರುಕುಳ ಕೊಟ್ಟರಾದರೂ ಅದನ್ನೆಲ್ಲಾ ಹದ್ದುಬಸ್ತಿನಲ್ಲಿಟ್ಟು ರಾಜ್ಯದಲ್ಲಿ ಶಾಂತಿ ಕಾಪಾಡಿದ್ದೇವೆ. ವ್ಯಾಪಾರಿಗಳು ವ್ಯಾಪಾರ, ಬೇಸಾಯಗಾರರು ಬೇಸಾಯ ಮಾಡಿಕೊಂಡು, ನಾವೆಲ್ಲ ಈ ತನಕ ಆರಾಮವಾಗಿದ್ದೆವು.”

“ಕಳೆದ ವರ್ಷ, ಚಿಕವೀರರಾಜೇಂದ್ರನ ಆಳ್ವಿಕೆಯ ಕೊಡಗು ರಾಜ್ಯದಲ್ಲಿ ದರೋಡೆ, ಹೆಣ್ಣು ಮಕ್ಕಳ ಅತ್ಯಾಚಾರ ನಡೆಯುತ್ತಿದೆಯೆಂಬ ದೂರು ಕಂಪನಿ ಸರಕಾರಕ್ಕೆ ಹೋಯಿತು. ಹೊಂಚು ಹಾಕುತ್ತಿದ್ದವರಿಗೆ ಕಾರಣ ಸಿಕ್ಕಿತು. ಕಂಪನಿ ಸರಕಾರ ಕೊಡಗು ರಾಜ್ಯವನ್ನು ತನ್ನ ಅಧಿಕಾರದ ವ್ಯಾಪ್ತಿಗೆ ಒಳಪಡಿಸಿತು. ಅರಸರನ್ನು ಗದ್ದುಗೆಯಿಂದ ಇಳಿಸಿ ಕತ್ತಲೆ ಕೋಣೆಗೆ ತಳ್ಳಿತು.”

“ಈಗ ಕೊಡಗಿನ ಕಲ್ಯಾಣಪ್ಪ ಬ್ರಿಟಿಷರ ವಿರುದ್ಧ ಹೋರಾಡಲು ದಂಡು ಕಟ್ಟುತ್ತಿದ್ದಾನಂತೆ. ಅವನ ಜನರು ಊರು ಕೊಳ್ಳೆ ಹೊಡೆಯಲು ಪ್ರಾರಂಭಿಸಿದ್ದಾರಂತೆ. ದಂಗೆ, ಚಾಡಿ, ಹೆಣ್ಣು ಮಕ್ಕಳ ಅಪಹರಣ, ಅತ್ಯಾಚಾರ ನಮ್ಮ ಸೀಮೆಯ ಗಡಿಯ ಆಚೆಗೆ ನಿತ್ಯದ ಗೋಳು.”

“ಇದುವೇ ಸಮಯವೆಂದು ನಮ್ಮ ರಾಜ್ಯದ ಕೆಲವು ಪುಂಡು ಪೋಕರಿಗಳು ತೆಂಕುಂಬಳೆಯಲ್ಲಿ ಗಲಭೆ ಮಾಡುವುದರಲ್ಲಿದ್ದಾರಂತೆ. ಕುಂಬಳೆಯ ಹಮ್ಜದರನ್ನು, ಮಂಜೇಶ್ವರದ ಸೆಟ್ಟಿಗಳನ್ನು , ಭಂಡಸಾಲೆಯ ಕೊಂಕಣಿಗಳನ್ನು ದೋಚಲು ತಯಾರಿ ನಡೆಯುತ್ತಿದೆಯಂತೆ. ತೆಂಕುಂಬಳೆಯ ಗಲಭೆಯನ್ನು ನಿಲ್ಲಿಸಬೇಕು. ಅವರ ಜೊತೆ ಯುವಕರು ಸೇರದಂತೆ ಮಾಡಲು ನಿಮ್ಮ ಸಹಾಯ ಬೇಕು. ನೀವು ಕೇಳಿರಬಹುದು, ಬಾರಬೈಲಿನ ಬೀರಣ್ಣ ಬಂಟ ಹಾಗೂ ಕಲ್ಲೂರಿನ ಮಾಯಿಲ, ಕಲ್ಯಾಣಪ್ಪನ ದಂಡಿಗೆ ಭಾರೀ ಸಂಖ್ಯೆಯಲ್ಲಿ ಜನ ಸೇರಿಸಿದ್ದಾರಂತೆ. ತೆಂಕುಂಬಳೆಯಲ್ಲಿ ಸುಬ್ರಾಯ ಎನ್ನುವ ನನ್ನದೇ ಶಿಷ್ಯ ಜನ ಒಟ್ಟುಗೂಡಿಸುತ್ತಿದ್ದಾನಂತೆ. ನಾವೇನು ಮಾಡಿದ್ದೇವೆಂದು ನೀವು ಈಗ ಕೇಳಬಹುದು. ನಾವು ಇಚ್ಲಂಪಾಡಿಯ ಕೋಚಣ್ಣಾಳ್ವರ ಕೈಕೆಳಗೆ ಐದು ಸಾವಿರ ಆಳಿನ ದಂಡನ್ನು ತೆಂಕು, ಬಡಗು ದಿಕ್ಕುಗಳಲ್ಲಿ ಸೀಮೆಯ ಕಾವಲಿಗೆ ನಿಲ್ಲಿಸಿದ್ದೇವೆ. ಕೋಚಣ್ಣಾಳ್ವರಿಗೆ ಇಬ್ಬರು ದಂಡನಾಯಕರು ಸಹಾಯಕ್ಕಿದ್ದಾರೆ. ಕುಂಬಳೆ ಸೀಮೆಯಲ್ಲಿ ನನ್ನ ಆಧಿಪತ್ಯದಲ್ಲಿ ಕಾಸರಗೋಡಿನವರೆಗೆ ಐದು ಸಾವಿರ ಆಳಿನ ದಂಡು ಕಾವಲಿಗಿದೆ. ಚಂದ್ರಗಿರಿ ನದಿಯಿಂದ ಸೀರೆ ನದಿಯವರೆಗೆ ಸಮುದ್ರದ ಬದಿಯಲ್ಲಿ ನನ್ನ ಪಡೆ, ಕುಂಬಳೆಯ ಪೇಟೆಯಲ್ಲಿ ದೊಡ್ಡ ರಾಯಪ್ಪನ ಪಡೆ ಕಾವಲು ಕಾಯುತ್ತಿವೆ. ಸುಬ್ರಾಯನನ್ನು ಸ್ವತಃ ನಾನೇ



ನೋಡಿಕೊಳ್ಳುತ್ತೇನೆ.”

‘‘ಇಷ್ಟಲ್ಲದೆ ಇಂದು ನಿಮ್ಮ ಮುಂದೆ ಖಾವಂದರ ಒಪ್ಪಿಗೆ ಪಡೆದು ಒಬ್ಬ ಯುವಕನ ಪರಿಚಯ ಮಾಡಿಕೊಡಬೇಕೆಂದಿದ್ದೇನೆ. ರಾಮಂತರಸರ ಸೇನೆಗೆ ಇತ್ತೀಚೆಗೆ ಸೇರಿ, ಕಳೆದ ಕೆಲವು ತಿಂಗಳಲ್ಲಿ ಸೀರೆ ಹೊಳೆಯಿಂದ ಉಳ್ಳಾಲ ಕಡವಿನವರೆಗಿನ ಜನರಿಗೆ, ದೇವಸ್ಥಾನ, ಭೂತಸ್ಥಾನ, ಮಸೀದಿ, ಬಸದಿಗಳಿಗೆ ರಕ್ಷಣೆ ನೀಡುತ್ತಾ, ಗಲಭೆ ಗಲಾಟೆಗಳಿಗೆ ಆಸ್ಪದ ಕೊಡದೆ ಇರುವ ದಂಡನಾಯಕ ಮಜಲೋಡಿ ಸುಬ್ಬಣ್ಣಾಳ್ವರ ಅಳಿಯ ಮಿತ್ತಬೈಲು ಮಂಜಣಾಳ್ವ ಎಂಬ ಯುವಕ ನನ್ನ ಶಿಷ್ಯ’’.

ಪಾಡಿ ಸುಬ್ರಾಯ ಶಾನುಭೋಗರು ಇಷ್ಟು ಹೇಳುವಾಗ ಬಡಾಜೆಯ ತಂತ್ರಿಗಳು ಯುವಕನನ್ನು ಸಭೆಯ ಮುಂದೆ ಕರೆಸಿದರು. ಇನ್ನೂ ಮೂವತ್ತು ದಾಟದ, ಆರಡಿ ಎತ್ತರದ, ಸುಂದರವಾದ ಕಂಬಳದ ಕೋಣನಂತಿರುವ ಯುವಕನನ್ನು ತಂತ್ರಿಗಳು ಸಭೆಯ ಮುಂದೆ ನಿಲ್ಲಿಸಿದಾಗ ಆತ ತಂತ್ರಿಗಳ ಕಾಲು ಮುಟ್ಟಿ, ಸಭೆಗೆ ಕೈಮುಗಿದು ನಿಂತ.

‘‘ಮಂಜಣ ಈ ತನಕ ಸಾವಿರ ಆಳಿನ ದಂಡನಾಯಕ. ಇಂದು ಅವನಿಗೆ, ನೀವೆಲ್ಲ ಒಪ್ಪಿಗೆ ನೀಡಿದರೆ ಐದು ಸಾವಿರ ಆಳಿನ ಸೇನಾ ನಾಯಕನ ಪಟ್ಟ ಕಟ್ಟಿ ಮಂಜೇಶ್ವರ, ವರ್ಕಾಡಿ, ಕನ್ಯಾನ, ಬಾಯಾರು, ಪೈವಳಿಕೆ, ಮಂಗಲ್ಪಾಡಿ ಮಾಗಣೆಗಳ ರಕ್ಷಣೆಯ ಜವಾಬ್ದಾರಿಯನ್ನು ವಹಿಸಬೇಕೆಂದು ಸಭೆಯ ಸರ್ವರಲ್ಲಿಯೂ, ರಾಜ್ಯದ ಅರಸರಲ್ಲಿಯೂ ನನ್ನ ಬಿನ್ನಹ.’’

ಸುಬ್ರಾಯ ಶಾನುಭೋಗರು ತನ್ನ ಮಾತು ಮುಗಿಸಿದಾಗ ರಾಮಂತರಸರು ತನ್ನ ಅಭಿಪ್ರಾಯ, ಸೂಚನೆ ನೀಡಿದರು.

‘‘ರಾಜ್ಯದ ಪ್ರಜೆಗಳೇ, ಬಡಾಜೆ ತಂತ್ರಿಗಳು ಈ ರಾಜ್ಯದ ತಂತ್ರಿಗಳು. ಭೂತ, ಭವಿಷ್ಯವನ್ನು ತಿಳಿದವರೆಂದು ನಮ್ಮ ಜನಸಾಮಾನ್ಯರ ನಂಬಿಕೆ. ಅಂತಹ ತಂತ್ರಿಗಳು ಒಂದು ದಿನ ನಮ್ಮ ಸನ್ನಿಧಾನಕ್ಕೆ ಒಂದು ಕಾಡಾನೆಯನ್ನು ತಂದುಕೊಟ್ಟರು. ಅದನ್ನು ನಾನು ಸುಬ್ರಾಯ ಶಾನುಭೋಗರಿಗೆ ಕೊಟ್ಟು, ತರಬೇತಿ ನೀಡಲು ಹೇಳಿದೆ. ಅವರು ಕೊಟ್ಟ ತರಬೇತಿಯನ್ನು ನಾನು ನೋಡಿದ್ದೇನೆ. ಅದರ ಫಲವೇ ನಮ್ಮ ಸೀಮೆಯ ಬಡಗು ದಿಕ್ಕಿನಲ್ಲಿ ನಡೆಯುತ್ತಿದ್ದ ಅನ್ಯಾಯವನ್ನು ಕೊನೆಗಾಣಿಸಿ, ತನ್ನ ಕೈಯ ಗಾಯವನ್ನೂ ಲೆಕ್ಕಿಸದೆ ಪುಂಡರನ್ನು ಓಡಿಸಿ, ರಾಜ್ಯದ ಪ್ರಜೆಗಳಿಗೆ ರಕ್ಷಣೆ ನೀಡಿ ಮೆರೆದವನು ನಮ್ಮ ಈ ಯುವಕ. ನಿಮ್ಮ ಒಪ್ಪಿಗೆ ಇದ್ದರೆ ರಾಜ್ಯದ ಮೂರನೇ ಸೇನಾಪತಿಯಾಗಿ ನೇಮಕ ಮಾಡಿ, ಐದು ಸಾವಿರ ಆಳಿನ ದಂಡನ್ನು ಇವನ ಕೈಗೆ ಕೊಟ್ಟು ನಾಯಕನ ಪಟ್ಟ ಕಟ್ಟೋಣ. ನಾಲ್ಕು ಮನೆಗಳ ಬಂಟರೂ, ಅಷ್ಟ ಪ್ರಧಾನರೂ ಒಪ್ಪಿಗೆ ಕೊಟ್ಟರೆ ಮಾತ್ರ ಅದು ಸಾಧ್ಯ. ತಕರಾರು ಇದೆ ಎಂದಾದರೆ, ಬೇರೆ ಅಭಿಪ್ರಾಯ ಇದ್ದರೆ ನೀವು ಯಾವುದೇ ಭಯವಿಲ್ಲದೆ ಹೇಳಬಹುದು’’.

ಅರಸರು ಇಷ್ಟು ಹೇಳುವಾಗ ಅಷ್ಟ ಪ್ರಧಾನರ ಸಭೆಯಲ್ಲಿ ಗುಸುಗುಸು ಪ್ರಾರಂಭವಾಯಿತು. ಕೊನೆಗೆ ಅವರಲ್ಲಿ ಹಿರಿಯರಾದ ಕುದ್ರೆಪ್ಪಾಡಿಯ ಪೆಜತ್ತಾಯರು ಎದ್ದು

ನಿಂತರು.

''ಸನ್ನಿಧಾನವೂ, ಸುಬ್ರಾಯ ಶಾನುಭೋಗರೂ ಹೇಳಿದುದಕ್ಕೆ ನಮ್ಮ ಅಡ್ಡಿ ಇಲ್ಲ. ಆದರೆ ನಮಗೊಂದು ಸಂಶಯವಿದೆ. ಖಾವಂದರು ಇಷ್ಟು ದೊಡ್ಡ ಕೆಲಸವನ್ನು, ಐದು ಸಾವಿರ ಆಳುಗಳ ಸೇನೆಯನ್ನು ಮಕ್ಕಳ ಕೈಗೆ ಕೊಟ್ಟಂತಾಗಲಿಕ್ಕಿಲ್ಲವೇ ಎಂಬುದು ನಮ್ಮ ಭಯ. ಆಳ್ವರನ್ನು ನೋಡುವಾಗ ಇನ್ನೂ ಮದುವೆ ಕೂಡಾ ಆಗಲಿಲ್ಲವೆಂದು ಕಾಣುತ್ತದೆ. ಮಕ್ಕಳಾಟಿಗೆ ಆಗಲಿಕ್ಕಿಲ್ಲವೇ ಖಾವಂದರೇ?''

ಪೆಜತ್ತಾಯರು ಇಷ್ಟು ಹೇಳುವಾಗ ಸಭೆಯಲ್ಲಿ ಗುಸುಗುಸು ಪ್ರಾರಂಭವಾಯಿತು. ಮಜಲೋಡಿಯ ಯಜಮಾನ ಸುಬ್ಬಾಳ್ವರು ಎದ್ದು ನಿಂತರು.

''ಖಾವಂದರು ಅಪ್ಪಣೆ ಕೊಟ್ಟರೆ ಎರಡು ಮಾತು ಸಭೆಗೆ ತಿಳಿಸುವೆ. ಅಪ್ಪಣೆ ಕೊಡಬೇಕು''.

''ಹೇಳಿ ಗುತ್ತಿನಾಯರೇ, ನನ್ನ ಅಪ್ಪಣೆ ಉಂಟು''

''ನಾನು ಮಜಲೋಡಿಯ ಯಜಮಾನ ಸುಬ್ಬಣ್ಣಾಳ್ವ. ಮಂಜಣ ನನ್ನ ಖಾಸಾ ಅಳಿಯ. ಚಿಕ್ಕ ಪ್ರಾಯದಲ್ಲೇ ದೊಡ್ಡವರ ಬುದ್ಧಿವಂತಿಕೆ, ತಾಳ್ಮೆ ಇರುವವ. ಹತ್ತಾರು ಆಳು ಮಕ್ಕಳನ್ನು ಇಟ್ಟುಕೊಂಡು ತನ್ನ ಸ್ವಂತ ತೋಳ್ಬಲದಲ್ಲಿ ಗುಡ್ಡ ಅಗೆದು, ಕಾಡು ಕಡಿದು, ಬೇಸಾಯ ಮಾಡಿ ತೋರಿಸಿದಾತ. ಸನ್ನಿಧಾನ ಅವನನ್ನು  ದಂಡಿಗೆ ಕರೆಸದೆ ಇದ್ದಿದ್ದರೆ ಈಗಾಗಲೇ ಮದುವೆ ಆಗಿರುತ್ತಿತ್ತು. ಅವನಲ್ಲಿ ಸ್ವಾಮಿನಿಷ್ಠೆಗೆ ಧರ್ಮನಿಷ್ಠೆಗೆ ಕುಂದು ಬರಲಾರದು. ಬಂತು ಎಂದಾದರೆ ಕುಟುಂಬದವರ ತಲೆಯನ್ನು ಒಪ್ಪಿಸಿಕೊಳ್ಳಬಹುದು. ಈ ಮಾತಿಗೆ ಈ ರಾಜಸಭೆಯೇ ಸಾಕ್ಷಿ''.

ಯಜಮಾನರು ಕುಳಿತುಕೊಳ್ಳುವಾಗ ಮಂಜೇಶ್ವರದ ಆದಿ ಸೆಟ್ಟಿ ಎದ್ದುನಿಂತು ಹೇಳಿದ.

''ಸನ್ನಿಧಾನಕ್ಕೂ, ರಾಜಸಭೆಗೂ ವರ್ತಕ ಸಂಘದ ಜೈನರ ವಂದನೆಗಳು. ಅವರ ಪರವಾಗಿ ಎರಡು ಮಾತು ಹೇಳಲು ಅಧಿಕಾರ ಕೊಟ್ಟಿದ್ದಾರೆ. ಕಳೆದ ಕೆಲವು ವರ್ಷಗಳಿಂದ ಮಂಜಣಾಳ್ವರನ್ನು ನಾನು ಮಾತ್ರವಲ್ಲ, ಮಂಜೇಶ್ವರ ಪೇಟೆಯವರೆಲ್ಲರೂ ನೋಡುತ್ತಿದ್ದಾರೆ. ನಮಗೆ, ವರ್ತಕ ಸಮಾಜಕ್ಕೆ ಅವರ ಮೇಲೆ ಅಪಾರವಾದ ಪ್ರೀತಿ, ಭರವಸೆ ಇದೆ. ಹಾಗಾಗಿ ಖಾವಂದರ ಅಭಿಪ್ರಾಯಕ್ಕೆ ಜೈನ ಸಮಾಜದ ಮತ್ತು ಪೇಟೆಯ ವರ್ತಕ ಸಮಾಜದ ಸಹಮತವಿದೆ.''

ಬ್ಯಾರಿಗಳ ಸಮಾಜದ ಉಸ್ಮಾನ್ ಬ್ಯಾರಿ ಎದ್ದು ನಿಂತು ಸಲಾಂ ಮಾಡಿ ಎರಡು ಮಾತುಗಳನ್ನು ಆಡಲು ಅಪ್ಪಣೆ ಪಡೆದುಕೊಂಡರು. ''ಖಾವಂದರೇ, ಮಂಜೇಶ್ವರದ ವ್ಯಾಪಾರಿಗಳಾದ ಬ್ಯಾರಿಗಳ ಪರವಾಗಿ ನನಗೆ, ತಾವು ನೇಮಕ ಮಾಡುವ ಯಾವನೇ ಸೇನಾಧಿಪತಿಗೂ ಬೇಕಾದ ಸಹಾಯ ಕೊಡುತ್ತೇನೆಂದು ಹೇಳಲು ಹಮ್ಜದರ ಒಪ್ಪಿಗೆ ಇದೆ. ಕುಂಬಳೆ, ಮಂಜೇಶ್ವರಗಳ ಹಮ್ಜದರು ನಮ್ಮ ಮಂಜೇಶ್ವರದ ಸೇನೆಯ ಎರಡು ತಿಂಗಳ



ಖರ್ಚು ಕೊಡುತ್ತೇವೆ. ಖಾವಂದರೇ, ಭಂಡಾರಿಗಳು ನಮಗೆ ಎಲ್ಲಿ ಯಾವಾಗ ಅದನ್ನು ಒಪ್ಪಿಸಬೇಕೆಂದು ಹೇಳಿದರೆ ಆಯಿತು. ನಮಗೆ ಮಂಜಣಾಳ್ವರ ಬಗ್ಗೆ ತಿಳಿದಿದೆ. ಅವರ ಮೇಲೆ ಭರವಸೆಯಿದೆ''.

ಈ ರೀತಿ ಬೇರೆ ಬೇರೆ ಸಮಾಜಗಳ ಯಜಮಾನರು ತಮ್ಮ ತಮ್ಮ ಸಹಾಯದ ಬಗ್ಗೆ ಅರಿಕೆ ಮಾಡುವಾಗ ಕುಂಬಳೆಯ ದೊಡ್ಡ ರಾಯಪ್ಪ ನಾಯಕನೂ, ಕೆಂಗಣ್ಣ ನಾಯಕನೂ ತಮ್ಮ ತಮ್ಮ ಸಹಾಯ ಸಾರಿದರು.

ಸೂಫಿಗೆ ಬುದ್ಧಿ ಕಲಿಸಿದ ದೊಡ್ಡ ರಾಯಪ್ಪ ನಾಯಕನೊಂದಿಗೆ ನಿಂತಿದ್ದ ಮುದುಕ ಕೆಂಗಣ್ಣ ನಾಯಕ ಇಕ್ಕೇರಿಯವರ ಕಾಲದಲ್ಲಿ ಹೆಸರಾಂತ ಕೋತ್ವಾಲ. ಆತ ಕುಂಬಳೆ ಬಂದರಿನ ಸುಂಕ ವಸೂಲಿಯ ಕೋತ್ವಾಲನಾದರೂ ದೊಡ್ಡ ಬೇಸಾಯಗಾರ. ಪಾರ್ತಿ ಸುಬ್ಬನ ಮೇಳದ ಪುಂಡು ವೇಶದವನಾಗಿ ಹೆಸರು ಪಡೆದ ಕೆಂಗಣ್ಣ ನಾಯಕನ ಕತೆಗಳು ಹಲವು.

ಕೆಂಗಣ್ಣ ನಾಯಕ ಇಕ್ಕೇರಿಯವರ, ಬಳಿಕ ಸುಲ್ತಾನನ ಕೋತ್ವಾಲನಾಗಿದ್ದಾಗ ಕೆಲವು ಸೈನಿಕರು ಒಂದು ಹಳ್ಳಿಗೆ ಹೋಗಿ ಅಲ್ಲಿದ್ದ ಕಲ್ಲಂಗಡಿ ಮತ್ತು ಕಬ್ಬಿನ ತೋಟಕ್ಕೆ ನುಗ್ಗಿ ಹೇಳದೆ ಕೇಳದೆ ಸಿಕ್ಕಿದ್ದನ್ನೆಲ್ಲಾ ದೋಚಲು ಪ್ರಾರಂಭಿಸಿದರಂತೆ. ತಡೆಯಲು ಬಂದ ಊರವರನ್ನು ಹೊಡೆದು ಬಡಿದು ಓಡಿಸುತ್ತಿದ್ದರಂತೆ. ಇದನ್ನು ನೋಡಿ ಕೆಂಗಣ್ಣ ನಾಯಕನಿಗೆ ತಡೆಯಲಾಗಲಿಲ್ಲ, ಬೇಲಿಯ ಗೂಟ ಕಿತ್ತು ಸೈನಿಕರಿಗೆ ಮೂಗು ಮುಖ ನೋಡದೆ ಬಾರಿಸಿದನಂತೆ. ನಾಲ್ಕೈದು ಜನ ಸೈನಿಕರು ಒಬ್ಬ ಕೆಂಗಣ್ಣ ನಾಯಕನನ್ನು ಎದುರಿಸಲು ಸಾಧ್ಯವಾಗದೆ ಓಡಿದರಂತೆ. ಊರವರು ಕೆಂಗಣ್ಣ ನಾಯಕನನ್ನು ಸಂತೋಷದಿಂದ ಎತ್ತಿಕೊಂಡು ಕುಣಿದಾಡಿದರಂತೆ. ಸಂಜೆ ಪಾರ್ತಿಸುಬ್ಬನಲ್ಲಿ ಈ ಕತೆಯನ್ನು ಹೇಳಿದಾಗ ಕೆಂಗಣ್ಣ ನಾಯಕನಿಗೆ 'ಸಿಡಿಲ ಮರಿ' ಎಂಬ ಬಿರುದು ಕೊಟ್ಟನಂತೆ. ಅದೇ ಸಿಡಿಲ ಮರಿ, ಪಾರ್ತಿಸುಬ್ಬನ ಯಕ್ಷಗಾನ ಪ್ರಸಂಗದಲ್ಲಿ ಬಂದಿದೆ. ಆ ವೀರನಿಗೆ ಆ ಬಿರುದು ಕೊಟ್ಟ ಜನರು ಕೆಂಗಣ್ಣ ನಾಯಕನ ಹೆಸರನ್ನು ಮರೆಯದಂತೆ ಅಜರಾಮರವಾಗಿಸಿದರು.

ಸೇನೆ ಬಿಟ್ಟು ಮನೆಯಲ್ಲೇ ಇದ್ದ ಕೆಂಗಣ್ಣ ನಾಯಕನಿಗೆ, ತನ್ನ ಜನರಿಗೆ ಎಲ್ಲಿ ಅನ್ಯಾಯವಾದರೂ ಸಹಿಸಲು ಸಾಧ್ಯವಾಗುತ್ತಿರಲಿಲ್ಲ.

ಹಾಗಾಗಿಯೇ ಕುಂಬಳೆ ಪೇಟೆಯಲ್ಲಿ ಕುಡಿದು ಬಂದು ಲೂಟಿ ಮಾಡುತ್ತಿದ್ದ ಫರೆಂಗಿಯ ಸೇನೆಯ ಜೊತೆ ಆತನ ಸಂಘರ್ಷ ಜಾರಿಯಲ್ಲಿತ್ತು. ಪೇಟೆಯಲ್ಲೊಮ್ಮೆ ಒಂದು ಗಾಬರಿಗೊಂಡ ಕುದುರೆ ಸಿಕ್ಕಿದವರಿಗೆಲ್ಲಾ ಒದೆಯುತ್ತಾ ದಾಂಧಲೆ ಮಾಡುತ್ತಿತ್ತು. ಸವಾರ ಕುದುರೆಯನ್ನು ನಿಯಂತ್ರಿಸುವುದು ಬಿಟ್ಟು ತನ್ನ ಕೈಯಲ್ಲಿದ್ದ ಚಾಟಿಯಿಂದ ಜನರಿಗೆಲ್ಲ ಹೊಡೆಯುತ್ತಿದ್ದನಂತೆ. ಇದನ್ನು ನೋಡಿ ತಡೆಯಲಾಗದ ಕೆಂಗಣ್ಣ ನಾಯಕ ಕುದುರೆಯ ಲಗಾಮು ಹಿಡಿದು, ಕುದುರೆಯನ್ನೂ, ಕುದುರೆ ಸವಾರನನ್ನೂ ತಡೆದು ನಿಲ್ಲಿಸಿ ಸವಾರನ ಕೈಯಲ್ಲಿದ್ದ ಚಾಟಿಯನ್ನು ಕಿತ್ತುಕೊಂಡು ಸರಿಯಾಗಿ ಬಿಗಿದು ಓಡಿಸಿದನಂತೆ. ಅವನನ್ನು

ಹುಡುಕಿಕೊಂಡು ಬಂದ ಫರೆಂಗಿ ಸೈನಿಕರನ್ನು ಸಮಾಧಾನಿಸಿ ಕಳುಹಿಸಿದವನು ದೊಡ್ಡ ರಾಯಪ್ಪ ನಾಯಕ. ರಾಮಂತರಸರು ಕೆಂಗಣ್ಣ ನಾಯಕನನ್ನು ನೋಡಿ "ಏನು ನಾಯಕರೇ, ನೀವೇನೂ ಹೇಳಲೇ ಇಲ್ಲಾ!" ಎಂದು ಕೇಳಿದರು. ತಲೆ ಕೆಳಗೆ ಹಾಕಿ ನಿಂತಿದ್ದ ಕೆಂಗಣ್ಣ ನಾಯಕ ನಾಲ್ಕು ಮಾತು ಹೇಳಿದ,

"ಖಾವಂದರೇ! ನೀವು ನನ್ನನ್ನು ಉಪ್ಪು, ಅನ್ನ ನೀಡಿ ಸಾಕಿದ ಮಹಾಸ್ವಾಮಿಗಳು. ನನ್ನ ನಿಷ್ಠೆ ನಿಮಗಲ್ಲದೆ ಬೇರೆ ಯಾರಿಗೂ ಇಲ್ಲ, ಆದರೆ ಪ್ರಭುಗಳು ನನ್ನನ್ನು ಮನ್ನಿಸಬೇಕು. ನಾನು ಈ ಕೆಂಪು ಮುಖದ ಫರಂಗಿಗಳ ಸಹಾಯಕ್ಕೆ ನಿಲ್ಲಲಾರೆ. ಅವರು ನನ್ನ ಊರನ್ನು ಸೂರೆ ಮಾಡಲು ಬಂದ ಪರದೇಶಿಗಳು. ಹಾಗಾಗಿ ನಾನು ಈ ಯುದ್ಧದ ಸಮಯದಲ್ಲಿ ಸ್ವಲ್ಪ ಬೇಸಾಯ ಮಾಡಿ ಕಲ್ಲಂಗಡಿ ಬೆಳೆ ಮಾಡಿಕೊಂಡಿರುತ್ತೇನೆ. ನನಗೆ ತೆಂಕುಂಬಳೆಯ ಸುಬ್ರಾಯ ಹೆಗ್ಡೆಯ ಜನ ಬರುತ್ತಲೇ ಇದೆ. ಆದರೆ ನಾನು ಅವನೊಂದಿಗೆ ಸೇರಲಾರೆ ಎಂದು ಹೇಳಿ ಕಳುಹಿಸಿದ್ದೇನೆ. ನಾನು ರಾಜದ್ರೋಹ, ಜನದ್ರೋಹ ಮಾಡಲಾರೆ. ಮತ್ತೆ ಖಾವಂದರು ಮಂಜೇಶ್ವರ ಮಾಗಣೆಗೆ ಹೊಸ ದಂಡನಾಯಕನನ್ನು, ಐದು ಸಾವಿರ ಆಳಿನ ದಂಡನ್ನು ನೇಮಕ ಮಾಡಬೇಕು. ಕಲ್ಯಾಣಪ್ಪನ ಒಂದು ದಂಡು ಮಂಜೇಶ್ವರಕ್ಕೆ ನುಗ್ಗುವ ಯೋಚನೆ ಮಾಡುತ್ತಿದೆಯೆಂದು ನನಗೆ ತಿಳಿದುಬಂದಿದೆ. ಹಾಗಾಗಿ ಸಮರ್ಥನಾದ ನಾಯಕನ ಅಗತ್ಯವಿದೆ. ಹಿರಿಯರಾದ ಸುಬ್ರಾಯ ಶಾನುಭೋಗರು ಮಂಜಣಾಳ್ವನನ್ನು ನಾಯಕನನ್ನಾಗಿ ಮಾಡಬಹುದೆಂದು ಹೇಳಿದರೆ ಅದರ ಬಗ್ಗೆ ಎರಡು ಯೋಚನೆ ಇಲ್ಲ, ಎರಡು ಮಾತೂ ಇಲ್ಲ".

ಮಂಜಣಾಳ್ವರ ಗೆಳೆಯ ದೇವಯ ಭಂಡಾರಿ, ಕುಂಬಳೆಯ ರಾಯಪ್ಪ ನಾಯಕ, ಕಣಿಲದ ಅಚ್ಚುಮ್ಮಾರ್ ಎಲ್ಲರೂ ಮಂಜಣಾಳ್ವರೇ ತಮ್ಮ ಊರಿನ ಸಮರ್ಥ ನಾಯಕನೆಂದು ಹೇಳಿದಾಗ ಕುಂಬಳೆ ರಾಜ್ಯದ ಒಂದನೇ ಸೇನಾಧಿಪತಿ ಇಚ್ಲಂಪಾಡಿ ಕೋಚಣ್ಣಾಳ್ವರು ಎದ್ದು ನಿಂತರು,

"ಖಾವಂದರೇ, ನಾವು ಪೆಟ್ಟೊಂದು ತುಂಡೆರಡೆಂದು ಹೇಳುವ ಬಂಟರು. ನಮ್ಮಲ್ಲಿ ಒಳಗೊಂದು ಹೊರಗೊಂದು ಇಲ್ಲ, ನಮ್ಮ ಸಮಾಜದ ಯುವಕರನ್ನು ರಾಜ್ಯದ ಜನರ ಸುಖ ಶಾಂತಿಗೆ ಬೇಕಾಗಿ ಒಪ್ಪಿಸಿಕೊಳ್ಳಬೇಕು. ಮಂಜಣನಂತಹ ಹುಲಿ ಮರಿಯೊಂದಿಗೆ ಹೆಗಲಿಗೆ ಹೆಗಲು ಕೊಟ್ಟು ಯುದ್ಧಕ್ಕೆ ಹೊರಡುವುದು ನನ್ನ ಸೌಭಾಗ್ಯ. ಸುಬ್ರಾಯ ಶಾನುಭೋಗರು ಕುಂಬಳೆ, ಕಾಸರಗೋಡು ನೋಡಿಕೊಳ್ಳಲಿ. ರಾಜ್ಯದ ಪೂರ್ವ ಗಡಿ ಜಾಲ್ಸೂರಿನಿಂದ ಬದಿಯಡ್ಕದವರೆಗೆ ನೋಡಿಕೊಳ್ಳುವುದು ನನ್ನ ಕೆಲಸ. ಹಾಗೆಯೇ ಮಂಜೇಶ್ವರದಿಂದ ಉಳ್ಳಾಲ ಗಡಿಯವರೆಗೆ ಮಂಜಣ ನೋಡಿಕೊಳ್ಳಬೇಕು. ಇದಕ್ಕೆ ನಾವು ಮೂರು ಜನವೂ ಒಪ್ಪಿದ್ದೇವೆ. ಖಾವಂದರು ಅಪ್ಪಣೆ ಕೊಡಬೇಕು".

ಇಷ್ಟು ಹೇಳುವಾಗ ಎಲ್ಲ ಗುತ್ತುಗಳ ಯಜಮಾನರ ಮುಖಂಡ ಹಾಗೂ ನಾಯಕರು ಎದ್ದು ನಿಂತು ಹೇಳಿದರು.



"ಖಾವಂದರು ಎಲ್ಲರ ಅಭಿಪ್ರಾಯ ಕೇಳಿದಿರಿ. ಈಗ ಹೆಚ್ಚು ಮಾತು ಬೆಳೆಸದೆ ನಿಮ್ಮ ಅಪ್ಪಣೆ ಆಗಬೇಕು."

ಅರಸರು ಕೆಳಗೆ ಬಂದು ಮಂಜಣಾಳ್ವನ ಕೈ ಹಿಡಿದು ಪಟ್ಟದ ಪೀಠದ ಬದಿಯಲ್ಲಿ ನಿಲ್ಲಿಸಿ ಹೇಳಿದರು,

"ನನ್ನ ಅಷ್ಟಪ್ರಧಾನರೇ, ಸೇನಾಧಿಪತಿಗಳೇ, ಗುರುಗಳಾದ ಬಡಾಜೆಯ ತಂತ್ರಿಯವರೇ, ಸಮಾಜದ ಎಲ್ಲ ಹಿರಿಯರೇ, ನಿಮ್ಮ ಒಮ್ಮತದ ಸಹಕಾರ ಯಾವುದೇ ದಂಗೆ, ದಂಡನ್ನೂ ಎದುರಿಸುವ ಶಕ್ತಿ ನೀಡಿದೆ. ಕಾಸರಗೋಡಿನ ಎಡನೀರಿನಿಂದ ಕುಂಬಳೆಯವರೆಗಿನ ರಕ್ಷಣೆಯನ್ನು ಸುಬ್ರಾಯ ಶಾನುಭೋಗರ ಕೈಗೆ ಕೊಟ್ಟಿದ್ದೇನೆ. ಕುಂಬಳೆಯಿಂದ ಜಾಲ್ಸೂರು ವರೆಗಿನ ರಕ್ಷಣೆಯ ಭಾರ ಹಿರಿಯರಾದ ಕೋಚಣ್ಣಾಳ್ವರಿಗೆ ಒಪ್ಪಿಸೋಣ. ಮಂಜೇಶ್ವರ ಸೀಮೆಯಿಂದ ಕನ್ಯಾನದವರೆಗಿನ ರಕ್ಷಣೆಯ ಜವಾಬ್ದಾರಿ ಮಿತ್ತಬೈಲಿನ ಮಂಜಣಾಳ್ವರ ಕೈಗೆ ಕೊಡುತ್ತಿದ್ದೇನೆ. ಅದಕ್ಕೆ ನಿಮ್ಮೆಲ್ಲರ ಒಪ್ಪಿಗೆ ಇದೆಯೆಂದು ಭಾವಿಸುವೆ. ನಾವೆಲ್ಲರೂ ಮಂಜಣಾಳ್ವರ ಪರಾಕ್ರಮವನ್ನು ಮಾಯಿಲ-ಬೀರಣ್ಣ ಬಂಟರ ಪ್ರಕರಣದಲ್ಲೇ ನೋಡಿದ್ದೇವೆ. ನಿಮ್ಮ ಅಡ್ಡಿ ಅಭ್ಯಂತರವಿಲ್ಲವಾದರೆ ಅವನಿಗೆ ಈ ಮುಜುಂಗಾವಿನ ನ್ಯಾಯ ಮಂಟಪದಲ್ಲಿ ಐದು ಸಾವಿರ ಆಳಿನ ಸೇನಾನಿಯ ಪಟ್ಟ ಕಟ್ಟುತ್ತೇನೆ."

ಇಡೀ ಸಭೆ ಒಪ್ಪಿಗೆ ನೀಡಿ 'ಉಘೇ ಉಘೇ' ಎಂದಿತು. ಕೋಚಣ್ಣಾಳ್ವರೂ, ಸುಬ್ರಾಯ ಶಾನುಭೋಗರೂ ಕೈ ಹಿಡಿದು ಕರೆತಂದ ಮಂಜಣನಿಗೆ ರಾಮಂತರಸರು ಸೇನಾಧಿಪತಿಯ ಮುಂಡಾಸು ತೊಡಿಸಿ, ಸೇನಾಧಿಪತಿಯ ಮುದ್ರೆ ನೀಡಿದರು. ಬಡಾಜೆ ತಂತ್ರಿಗಳು ತೀರ್ಥ ಚಿಮುಕಿಸಿದರು. ಸುಬ್ರಾಯ ಶಾನುಭೋಗರು ಕೈಗೆ ಸೇನಾಧಿಪತಿಯ ಖಡ್ಗ ಕೊಟ್ಟರು. ಕೋಚಣ್ಣಾಳ್ವರು ತುಪಾಕಿ ನೀಡಿದರು. ಸಭೆ 'ಉಘೆ ಉಘೇ' ಎಂದು ಹೇಳುವಾಗ ರಾಮಂತರಸರು, ಮಂಡಿಯೂರಿ ಕುಳಿತಿದ್ದ ಸೇನಾಧಿಪತಿಗೆ, ಮುಂಡಾಸು ತೆಗೆದು ಶಿರಸ್ತ್ರಾಣ ತೊಡಿಸಿದರು. ಸೇನಾಧಿಪತಿ ಮಂಜಣಾಳ್ವರೆಂದು ಕರೆದು ಎಬ್ಬಿಸಿದರು. ಮಂಜಣಾಳ್ವ ಹಿರಿಯರ ಕಾಲು ಮುಟ್ಟಿ, ಎರಡು ಮಾತು ಆಡಲು ಅರಸರ ಒಪ್ಪಿಗೆ ಕೇಳಿದ. ರಾಮಂತರಸರು ಒಪ್ಪಿಗೆ ಕೊಟ್ಟರು. ಸುಬ್ರಾಯ ಶಾನುಭೋಗರು ಕಣ್ಣಲ್ಲೇ ಒಪ್ಪಿಗೆ ಸೂಚಿಸಿದರು.

"ಖಾವಂದರೇ, ಗುರುಗಳೇ, ಹಿರಿಯರೇ, ನಿಮ್ಮ ಮುಂದೆ ನಿಂತು ಮಾತನಾಡುವಷ್ಟು ದೊಡ್ಡವ ನಾನಲ್ಲ, ಆದರೆ, ಮಾತನಾಡದಿದ್ದರೆ ನನ್ನ ಮೇಲೆ ಭರವಸೆ ಇಟ್ಟ ನಿಮಗೆಲ್ಲ ಅನ್ಯಾಯ ಮಾಡಿದಂತಾಗಬಹುದು. ಸೀಮೆಯ ಹಿರಿಯರು, ಗುರುಗಳು, ಶಾನುಭೋಗರು, ಅರಸರು, ತಪ್ಪು ಭಾವಿಸಬಾರದೆಂದು ಕೇಳಿಕೊಂಡು ನನಗೆ ತಿಳಿದಿರುವಷ್ಟನ್ನು ಹೇಳುತ್ತಿದ್ದೇನೆ. ನೀವೆಲ್ಲರೂ ನನ್ನ ಮೇಲಿಟ್ಟ ನಂಬಿಕೆ, ತೋರಿಸಿದ ಭರವಸೆ, ವಿಶ್ವಾಸಗಳಿಗೆ ಆಭಾರಿಯಾಗಿ, ಕೇವಲ ಬಾಯಿ ಮಾತಿನ ಭರವಸೆ ಕೊಡದೆ ಕಾರ್ಯದಲ್ಲಿ ತೋರಿಸುತ್ತೇನೆಂದು ಆಶ್ವಾಸನೆ ಕೊಡುತ್ತೇನೆ. ಈ ಸೀಮೆಗೆ ಎರಡು ಬಗೆದರೆ, ರಣಭೂಮಿ

ಯಿಂದ ಹಿಂದೆ ಸರಿದರೆ, ನಿಮ್ಮ ರಕ್ಷಣೆಗೆ ತಪ್ಪಿದೆನೆಂದಾದರೆ ಮದವೂರು ಮಹಾಗಣಪತಿಗೆ, ಕೋಳ್ಯೂರಿನ ಶಂಕರನಾರಾಯಣ ದೇವರಿಗೆ ಹಾಗೂ ನನ್ನ ಮನೆಯ ದೈವ ಮಲರಾಯನಿಗೆ ತಪ್ಪಿ ನಡೆದಂತೆ. ನನ್ನಿಂದ ಏನಾದರೂ ತಪ್ಪಾದರೆ ಹೊಟ್ಟೆಗೆ ಹಾಕಿಕೊಳ್ಳಿ. ನನ್ನಲ್ಲಿ ಏನಾದರೂ ಕೊರತೆ ಕಂಡುಬಂದರೆ ಕ್ಷಮಿಸಿ. ಆದರೆ ಯುದ್ಧಭೂಮಿಗೆ ಬೆನ್ನು ಹಾಕಿದರೆ, ಸೀಮೆಯ ಅರಸರಿಗಾಗಲಿ, ರಾಜ್ಯಕ್ಕಾಗಲಿ ಎರಡು ಬಗೆದರೆ ನೂರು ಹಸುಗಳನ್ನು ಕೊಂದ ಪಾಪ, ನೂರು ಬಸದಿಗಳ ಒಡೆದ ಪಾಪ, ನೂರು ದೇವಸ್ಥಾನಗಳನ್ನು ಪುಡಿಗೈದ ಪಾಪ ನನಗೆ ಬರಲಿ, ನನ್ನ ಕುಟುಂಬದ ಏಳು ಪೀಳಿಗೆಗಳ ತಲೆಯ ಮೇಲಿರಲಿ. ಅರಸರಾಗಲಿ, ನನ್ನ ಗುರುಗಳಾದ ಶಾನುಭೋಗರಾಗಲಿ, ಹಿರಿಯರಾದ ಕೋಚಣ್ಣಾಳ್ವರಾಗಲಿ ಕಾಲಲ್ಲಿ ತೋರಿಸಿದುದನ್ನು ತಲೆಯಲ್ಲಿ ಹೊತ್ತು ಮಾಡಿಕೊಡುತ್ತೇನೆ. ಮಂಜೇಶ್ವರ ಪೇಟೆಯಿಂದ ಉಕ್ಕುಡದ ಗಡಿಯವರೆಗಿನ ಊರಲ್ಲಿ ಇನ್ನು ಲೂಟಿ, ದಂಗೆ ಆಗಲು ಬಿಡುವುದಿಲ್ಲವೆಂದು ಭರವಸೆ ಕೊಡುತ್ತೇನೆ.''

ಮಂಜಣಾಳ್ವ ಇಷ್ಟು ಹೇಳುವಾಗ ''ಶಹಭಾಸ್ ಮಂಜಣ, ಉಫೇ ಮಂಜಣ ಉಫೇ'' ಎಂದು ಸಭೆ ಎದ್ದು ನಿಂತು ಚಪ್ಪಾಳೆ ತಟ್ಟಿತು.

''ಅಪ್ಪಣೆ ಆದರೆ ನನ್ನ ಇನ್ನೆರಡು ಮಾತುಗಳನ್ನು ಹೇಳಿ ಬಿಡುತ್ತೇನೆ. ಅದನ್ನು ನೀವೆಲ್ಲ ಮನಸ್ಸಿಟ್ಟು ಕೇಳಬೇಕು. ಇದು ಭಾರೀ ಅಗತ್ಯ. ಒಂದನೆಯದೆಂದರೆ ನಮ್ಮ ರಾಜ್ಯಕ್ಕೆ ಹೊರಗಿನ ಶತ್ರುಗಳಿಗಿಂತ ಹೆಚ್ಚು ಒಳಗಿನ ಶತ್ರುಗಳಿಂದ ಅಪಾಯ ಇದೆ. ಈ ವಿಷಯದಲ್ಲಿ ಜಾಗ್ರತೆಯಾಗಿರಬೇಕು.''

ಸಭೆ ನಿಶ್ಶಬ್ದವಾಯಿತು. ಮಂಜಣಾಳ್ವ ಮುಂದುವರಿಸಿ, ''ನಮ್ಮ ನಡುವಿನ ಕೆಲವರು ಸಂಪತ್ತಿಗೆ ಆಸೆಪಟ್ಟು ಹೆತ್ತಬ್ಬೆಗೆ ಎರಡು ಬಗೆಯುತ್ತಾ ಕಲ್ಯಾಣಪ್ಪನ ಹೆಸರು ಹೇಳಿಕೊಂಡು ಊರು ಲೂಟಿ ಮಾಡುತ್ತಿದ್ದಾರೆ. ಬೀರಣ್ಣ ಬಂಟ, ಮಾಯಿಲರಂತೆ ಇರುವವರು ಬಹಳ ಮಂದಿ ಇದ್ದಾರೆ. ನಮ್ಮ ಸೇನೆಯ ಕೆಲವರು ಫರಂಗಿಯವರ ದ್ವೇಷವನ್ನು ಮುಂದೆ ಮಾಡಿ ದಂಗೆ ಏಳುವ ತಯಾರಿಯಲ್ಲಿದ್ದಾರೆ. ಕೆಂಗಣ್ಣ ನಾಯಕರು ಹೇಳಿದುದನ್ನು ನೀವೆಲ್ಲ ಕೇಳಿದ್ದೀರಿ. ರಾಜ್ಯಕ್ಕೆ ಎರಡು ಬಗೆಯದೆ, ಫರಂಗಿಯವರಲ್ಲಿ ದ್ವೇಷವಿದ್ದರೂ ರಾಜ್ಯದ ಹಿತಕ್ಕೆ ಬೇಕಾಗಿ ಅವರಂತೆ ಸುಮ್ಮನಿರುವ ಎಷ್ಟೋ ಸೈನಿಕರಿದ್ದಾರೆ. ಕೆಲವರು ಈ ರಾಜ್ಯವನ್ನು ಫರಂಗಿಗಳ ಕೈಗೆ ಕೊಡುವುದಿಲ್ಲವೆಂದು ಪರದೇಶಿಗಳಿಗೆ ಎದುರು ನಿಲ್ಲಲು ತಯಾರಾಗಿದ್ದಾರೆ. ಆ ಮಾತಿನ ಸರಿ-ತಪ್ಪುಗಳನ್ನು ಇತ್ಯರ್ಥ ಮಾಡಲು ನೀವಿದ್ದೀರಿ. ಆದರೆ ಸ್ವಾತಂತ್ರ್ಯದ ಹೆಸರು ಹೇಳಿಕೊಂಡು ಊರನ್ನು ಕೊಳ್ಳೆ ಹೊಡೆಯುತ್ತಾ, ಹೆಣ್ಣು ಮಕ್ಕಳನ್ನು ಬಲಾತ್ಕಾರ ಮಾಡುವ ಹೀನ ಕಾರ್ಯಕ್ಕೆ ಯಾರಾದರೂ ಇಳಿದರಾದರೆ ಅದಕ್ಕೆ ತಕ್ಕ ಶಿಕ್ಷೆಗೆ ಅವರು ತಯಾರಾಗಿರಬೇಕು. ಅಂಥವರನ್ನು ಸದೆ ಬಡಿಯುವ ಕಾರ್ಯ ಮಾಡಲು ಸೇನೆ ತಯಾರಾಗಿದೆ. ಈ ಕಾರ್ಯಕ್ಕೆ ನಿಮ್ಮ ಸಹಾಯಬೇಕು.''

ಮಂಜಣ ಇಷ್ಟು ಹೇಳುವಾಗ ಸಭೆಯ ಶಬ್ದವೆಲ್ಲ ನಿಂತುಹೋಯಿತು. ಯಾರಿಗೂ



ಏನು ಹೇಳಬೇಕೆಂದೇ ತೋಚಲಿಲ್ಲ. ವರ್ಕಾಡಿಯ ತಾಳಿತ್ತಾಯರು ಹಾಗೂ ಮಂಜೇಶ್ವರದ ಭಂಡಾರ ಮಠದ ದೇವಯ ಭಂಡಾರಿಯೂ ಎದ್ದು ನಿಂತರು.

''ಹೆಸರು ಹೇಳಿ. ಕೂಡಲೇ ಈ ಸೀಮೆಯಿಂದ ಅಂಥವರನ್ನು ಓಡಿಸೋಣ. ಈ ಊರಲ್ಲಿ ಅವರಿಗೆ ಬಹಿಷ್ಕಾರ ಹಾಕೋಣ'' ತಾಳಿತ್ತಾಯರು ಹೇಳಿದರು.

''ಒಬ್ಬೊಬ್ಬರನ್ನೇ ಹಿಡಿದು ಸೆರೆಮನೆಗೆ ದೂಡಿ. ಅವರ ಮನೆ, ಸಂಪತ್ತನ್ನು ಮುಟ್ಟುಗೋಲು ಹಾಕಿ, ಕುಟುಂಬವನ್ನು ಗಡಿಪಾರು ಮಾಡಿ.'' ದೇವಯ ಭಂಡಾರಿ ಹೇಳಿದರು.

''ನಾನು ನನ್ನ ಕಿವಿಗೆ ಬಿದ್ದ ಈ ಸುದ್ದಿಯನ್ನು ನಿಮ್ಮ ಮುಂದೆ ಇಟ್ಟಿದ್ದೇನೆ. ವಿಚಾರಣೆ ಮಾಡಿ ಏನು ಕ್ರಮ ಕೈಗೊಳ್ಳಬೇಕೆಂದು ತೀರ್ಮಾನಿಸಲು ಅರಸರು, ಅಷ್ಟ ಪ್ರಧಾನರು, ಸೇನಾಧಿಪತಿಗಳು ಇದ್ದಾರೆ. ಆದರೆ ಕಿವಿಗೆ ಬಿದ್ದುದನ್ನು ನಿಮಗೂ ತಿಳಿಸಬೇಕೆಂದು ಈ ಸಮಸ್ಯೆಯನ್ನು ಮುಂದಿಟ್ಟಿದ್ದೇನೆ. ನನಗೆ ಅಪ್ಪಣೆ ಕೊಡಬೇಕು. ಎಲ್ಲ ಹಿರಿಯರಿಗೂ ನನ್ನ ಧನ್ಯವಾದಗಳು.''

ಅರಸರು ಎದ್ದು ನಿಂತರು. ಸಭೆ ಮೌನವಾಗಿ ಅರಸರ ಮಾತಿಗೆ ಕಿವಿ ಕೊಟ್ಟಿತು.

''ಕುಂಬಳೆ ರಾಜ್ಯದ ಪ್ರಜೆಗಳೇ, ಇಂದು ನೀವು ಇಲ್ಲಿಗೆ ಬಂದು ನನಗೆ ಮತ್ತು ನನ್ನ ಸೇನೆಗೆ ಕೊಟ್ಟ ಆಶ್ವಾಸನೆಗೆ, ಪ್ರೀತಿಗೆ ಕುಂಬಳೆಯ ಅರಸು ಪಟ್ಟ ಯಾವತ್ತೂ ಋಣಿ ಯಾಗಿದೆ. ಈಗ ಕೆಲವು ಆಜ್ಞೆಗಳನ್ನು ಕೊಡುತ್ತಿದ್ದೇನೆ. ಅದನ್ನು ಅಧಿಕಾರದ ಅಪ್ಪಣೆಯೆಂದು ತಿಳಿಯಬಾರದು. ಅದು ಯುದ್ಧ ಕಾಲದ ಅಗತ್ಯವೆಂದು ತಿಳಿದುಕೊಳ್ಳಬೇಕು.''

''ಅಗತ್ಯವಿದ್ದಷ್ಟು ಯುವಕರು ಸ್ವಯಂ ಇಚ್ಛೆಯಿಂದ ಬಂದು ಸೇನೆಗೆ ಸೇರಬೇಕು.''

''ವ್ಯಾಪಾರಿಗಳು, ಬೇಸಾಯಗಾರರು ಸುಂಕ, ಗೇಣಿಗಳನ್ನು ಕ್ಲಪ್ತ ಸಮಯಕ್ಕೆ ಕೊಡಬೇಕು.''

''ಭಂಡಸಾಲೆಯವರು, ಹಮ್ಜದವರು ಯುದ್ಧದ ತಯಾರಿಗೆ ಬೇಕಾಗಿ ಕಂದಾಯ, ಸುಂಕಗಳನ್ನು ಮೊದಲೇ ಕೊಟ್ಟು ಭಂಡಾರ ತುಂಬಿಸಬೇಕು. ಜಮೀನಿರುವ ಗುತ್ತು-ಬಾರಿಕೆಯವರು ಸೇನೆಗೆ ಬೇಕಾದ ಅಕ್ಕಿ, ತೆಂಗಿನಕಾಯಿ ಸಹಾಯ ಮಾಡಬೇಕು.''

''ನಾನು ರಾಜ್ಯದ ಭಂಡಾರದಲ್ಲಿರುವ ಚಿನ್ನ, ಒಡವೆಗಳನ್ನು ಮಾರಿ ಸೈನ್ಯದ ಭಂಡಾರ ತುಂಬಿಸಲು ಆಜ್ಞೆ ಮಾಡುತ್ತೇನೆ.''

''ಇಂದು ನಮ್ಮ ಸಮಕ್ಷ ನೇಮಕ ಮಾಡಿರುವ ದಂಡಿನ ನಾಯಕರಿಗೆ ಅವರವರ ಗ್ರಾಮಗಳನ್ನು ಉಂಬಳಿ ಬಿಡುತ್ತಿದ್ದೇನೆ. ಈ ಉಂಬಳಿಯನ್ನು ಅವರ ಕುಟುಂಬ ತಲೆ ತಲಾಂತರ ಅನುಭವಿಸಬೇಕು. ಈ ವಿಷಯವನ್ನು ಕಂಪನಿ ಸರಕಾರದ ಅಧಿಕಾರಿಗಳಿಗೆ ತಿಳಿಸಿ ಅವರ ಕಂದಾಯ ಪುಸ್ತಕಗಳಲ್ಲಿ ಸೇರಿಸಲು ತಿಳಿಸುತ್ತೇನೆ.''

''ಈ ದಿನದ ಸಭೆಯ ಸರ್ವರಿಗೂ ಮುಜಂಗಾವಿನ ದೇವಸ್ಥಾನದಲ್ಲಿ ಪೂಜೆಯ ನಂತರ ಭೋಜನ ಇದೆ. ಅದನ್ನು ಎಲ್ಲರೂ ಸ್ವೀಕಾರ ಮಾಡಿ ಹೋಗಬೇಕು.''

ರಾಮಂತರಸರು ಹೇಳಿ ಮುಗಿಸುವಾಗ ಸನ್ನಿಧಾನದ ಕರಣಿಕರು ಉಂಬಳಿಯ ಓಲೆ ಕೊಟ್ಟರು. ಜನ ಊಟಕ್ಕೆದ್ದರು.

ಮಂಜಣಾಳ್ವ ತನ್ನ ಹಿರಿಯರ ಜೊತೆ ನಡೆದ. ಒಂದು ಕಡೆ ಯುವಕರು ಅವನನ್ನು ಕಾಯುತ್ತಿದ್ದರು. ಮತ್ತೊಂದು ಕಡೆ ಸೇನೆಯೂ ಕಾಯುತ್ತಿತ್ತು. ಮೂವತ್ತು ಕುಶಾಲು ತೋಪಿನ ಗೌರವರಕ್ಷೆ ಕೊಟ್ಟು ಕವಾಯತು ಮಾಡಿ ಸೇನೆ ಬೀಳ್ಕೊಡಬೇಕಾದರೆ ಹೊತ್ತು ಬಹಳವಾಗಿತ್ತು. ಬೇಹುಗಾರ ಬ್ಯಾರಿಗಳು, ದೊಂಬರಾಟದ ಮಾಹಿತಿದಾರರು ಅವನನ್ನು ಕಾಯುತ್ತಿದ್ದು, ಅವನಿಗೆ ಅವರು ಅಮರಸುಳ್ಯದಿಂದ ಮಂಗಳೂರುವರೆಗಿನ ತಿಳಿದ ಸುದ್ದಿಯನ್ನು ಮುಟ್ಟಿಸಿದರು. ಸುದ್ದಿ ಕೇಳಿ ಆಶ್ಚರ್ಯಗೊಂಡ ಮಂಜಣ, ಸುಬ್ರಾಯ ಶಾನುಭೋಗರಿಗೆ ಆಳು ಕಳುಹಿಸಿ ಅವರ ಭೇಟಿಯ ಸಮಯ ಕೇಳಿ ತಿಳಿದುಕೊಂಡ.

ಸುಬ್ರಾಯ ಶಾನುಭೋಗರು ಕೂಡೇಲು ದೇವಸ್ಥಾನದ ಅಶ್ವತ್ಥಕಟ್ಟೆಯಲ್ಲಿ ಕುಳಿತು ಮಂಜಣಾಳ್ವರನ್ನು ಕಾದರು. ಈ ಕಟ್ಟೆ ಸುಬ್ರಾಯ ಶಾನುಭೋಗರು ಶಾಂತಿಯ ಕಾಲದಲ್ಲಿ ಯಾವಾಗಲೂ ಬಂದು ಸಂಜೆಯ ಹೊತ್ತು ಕುಳಿತುಕೊಂಡು ಊರಿನ ಸುದ್ದಿ – ಸಮಾಚಾರ ಮಾತನಾಡುವ ಕಟ್ಟೆ. ಅವರ ಯೌವನದ ಕಾಲದಲ್ಲಿ ಪಾರ್ತಿಸುಬ್ಬನ ಪ್ರಸಂಗ ಗಳನ್ನು ಅವನ ಬಾಯಿಯಿಂದಲೇ ಕೇಳುತ್ತಿದ್ದ ಸ್ಥಳವದು. ಅಲ್ಲಿಂದಲೇ ಅವರ ಕೂಡ್ಲು ಗೋಪಾಲಕೃಷ್ಣ ಮೇಳ ಹಬ್ಬದಂದು ಮೊದಲ ಪ್ರದರ್ಶನ ನೀಡಿ ಆಟದ ತಿರುಗಾಟಕ್ಕೆ ಹೊರಡುತ್ತಿದ್ದುದು. ಆ ಕಟ್ಟೆಯಲ್ಲಿ ಹೆಸರಾಂತ ಭಾಗವತರೆಲ್ಲ ಸಂಗೀತ, ಮದ್ದಳೆ ಕಲಿತು ಮಳೆಗಾಲದಲ್ಲಿ ತಾಳಮದ್ದಲೆ ಸೇವೆಯನ್ನು ದೇವಸ್ಥಾನದ ಚಾವಡಿಯಲ್ಲಿ ಮಾಡಿ ತುಳುನಾಡಿನ ತುಂಬಾ ಹೆಸರು ಪಡೆದಿದ್ದರು.

ಶಾನುಭೋಗರು ಕಾಯುತ್ತಿದ್ದಲ್ಲಿಗೆ ಕತ್ತಲಾಗುತ್ತಿರುವ ಹೊತ್ತಿಗೆ ಮಂಜಣ ತನ್ನ ಬೇಹುಗಾರರನ್ನು ಕರೆದುಕೊಂಡು ಬಂದ. ಬೇಹುಗಾರರು ತಂದ ಸುದ್ದಿಯ ಪ್ರಕಾರ, ಅವರ ಸೇನಾನಾಯಕ ತೆಂಕುಂಬಳೆಯ ಸುಬ್ರಾಯ ಹೆಗ್ಡೆಯನ್ನು ಬಾರಬೈಲಿನ ಬೀರಣ್ಣ ಬಂಟ, ಕುಂಬಳೆಯ ಅರಸರು ಮುಜಂಗಾವು ದೇವಸ್ಥಾನದ ನ್ಯಾಯದ ಕಟ್ಟೆಯಲ್ಲಿ ಸಭೆ ನಡೆಸುತ್ತಿರುವಾಗ, ಕುಂಬಳೆ ಕೋಟೆಯ ಬಳಿ ಭೇಟಿಯಾಗಿದ್ದ, ತಾನು ಸಂಜೆ ಸ್ವತಃ ಕಣಿಪುರದ ದೇವಾಲಯದ ಸುತ್ತಮುತ್ತ ಸೇರಿದ್ದ ಯುವಕರನ್ನು ನೋಡಿ ಬಂದ ಸುದ್ದಿಯನ್ನೂ ಸುಬ್ರಾಯ ಶಾನುಭೋಗರಿಗೆ ವಿವರಿಸಿದ.

ಮಂಜಣನೊಟ್ಟಿಗೆ ಬಂದ ದೊಂಬರ ದೋಗ್ರ, ಎಡನಾಡು, ಆದೂರು, ಮುಳಿಯಾರುಗಳಲ್ಲಿ ಕೆಲವು ಯುವಕರು ಕಲ್ಯಾಣಸ್ವಾಮಿಯ ಜೊತೆ ಇದ್ದ ಸುದ್ದಿ ಮತ್ತು ಅವರು ಕಲ್ಯಾಣಪ್ಪನ ದಂಡಿಗೆ ಜನ ಸೇರಿಸುತ್ತಿರುವುದನ್ನು ಹೇಳಿದ. ಸುಬ್ರಾಯ ಶಾನುಭೋಗರ ಮನೆಗೆ ದಾಳಿ ಮಾಡಿ, ಮನೆ ಲೂಟಿ ಮಾಡಿ, ಅವರ ದಂಡನ್ನು ಚೆಲ್ಲಾಪಿಲ್ಲಿ ಮಾಡಿ, ಮಂಗಳೂರು, ಮುಜಂಗಾವು, ಕಣಿಪುರ ದೇವಸ್ಥಾನಗಳನ್ನು ಸೂರೆ ಮಾಡುವ ತಯಾರಿ ನಡೆಯುತ್ತಿದೆಯೆಂಬುದನ್ನು ತಾನು ಅಮರಸುಳ್ಯದಲ್ಲಿ ಕೇಳಿರುವುದಾಗಿ ದೋಗ್ರ



ನವರು ಹೇಳಿದರು. ಸುಬ್ರಾಯ ಶಾನುಭೋಗರು ಎಲ್ಲಾ ಸುದ್ದಿಗಳನ್ನು ಕೇಳಿದ ಮೇಲೆ ಮಂಜಣಾಳ್ವನಿಗೆ ಬೇಹುಗಾರರು ತಂದ ಸುದ್ದಿಯನ್ನು ವಿವರಿಸಿದರು,

“ತಲಚೇರಿಯಿಂದ ಹೈದರ್ ಎನ್ನುವ ಯುವಕ ತಾನು ಟಿಪ್ಪು ಸುಲ್ತಾನನ ಮಗ ಎಂದು ಹೇಳಿಕೊಂಡು ತುರುಕರನ್ನೆಲ್ಲ ದೊಂಬಿಗೆ ಪ್ರಚೋದಿಸುತ್ತಿದ್ದಾನೆ. ಅವನೊಂದಿಗೆ ಪತ್ತ್‌ಮುಡಿಯ ಸುಬ್ರಾಯನೂ, ಬೇಕಲದ ತಿಮ್ಮ ನಾಯಕನೂ ಸೇರಿಕೊಂಡು ಸೈನ್ಯ ಕಟ್ಟುವ ತಯಾರಿಯಲ್ಲಿದ್ದಾರಂತೆ. ಈಗ ಈ ಜನರೆಲ್ಲ ಪರದೇಶೀಯರಾದ ಇಂಗ್ಲಿಷರ ವಿರುದ್ಧ ದಂಗೆ ಏಳುವುದೂಂತ ಹೇಳಿಕೊಂಡು ತಿರುಗುತ್ತಿದ್ದಾರಂತೆ.”

“ಅದಕ್ಕೆ ಸರಿಯಾಗಿ ಇಂದು ಬೆಳಗ್ಗೆ ಈ ಕೆಂಪು ಮೂತಿಯ ಸೈನಿಕರ ಕುದುರೆಗಳು ಕುಂಬಳೆ ಪೇಟೆಯಲ್ಲಿ ಓಡಾಡಿ ಸಿಕ್ಕಿದವರಿಗೆಲ್ಲ ಒದೆಯುತ್ತಿದ್ದವಂತೆ. ಸಿಪಾಯಿಗಳು ಅಡ್ಡ ಬಂದವರಿಗೆಲ್ಲ ಕೈಯಲ್ಲಿದ್ದ ಚಾಟಿಯಿಂದ ಹೊಡೆಯುತ್ತಾ ನಗುತ್ತಿದ್ದರಂತೆ. ಈ ಸಲ ಕೆಂಗಣ್ಣ ನಾಯಕನಂತೆ ಅವರನ್ನು ಎದುರಿಸುವ ಯುವಕರು ಪೇಟೆಯಲ್ಲಿರಲಿಲ್ಲ. ದಾರಿಯಲ್ಲಿ ಮೀನು ಮಾರುವ, ತರಕಾರಿ ಮಾರುವ ಹೆಂಗಸರಿಗೆಲ್ಲ ಚಾಟಿಯ ಪೆಟ್ಟು ಬೀಳುವುದನ್ನು ನೋಡಿದ ಕೊಂಕಣಿಗಳು ಹಾಗೂ ಮೊಗವೀರರ ಯುವಕರು, ಪುಸಲರ ಯುವಕರೊಡನೆ ಸೇರಿಕೊಂಡು ಗುಂಪು ಕಟ್ಟಿಕೊಳ್ಳುತ್ತಿದ್ದಾರೆ. ಅವರು, ಸುಬ್ರಾಯ ಹೆಗ್ಡೆ ಎದ್ದು ನಿಂತ ಕೂಡಲೇ ಅವನ ಜೊತೆ ಸೇರುತ್ತಾರೆ. ಈ ದರೋಡೆಕೋರರ ಕಾಟ ನಿಲ್ಲುವವರೆಗೆ ಆ ಕೆಂಪು ಮೂತಿಯ ಇಂಗ್ಲಿಷ್ ಸೈನಿಕರು ಯಾರೂ ಪೇಟೆಗೆ ಇಳಿಯಬಾರದೆಂದು ಅವರ ನಾಯಕರಲ್ಲಿ ಅರಸರು ಹೇಳಬೇಕು.”

ಮಂಜಣಾಳ್ವ ಹೇಳಿದಾಗ ಸುಬ್ರಾಯ ಶಾನುಭೋಗರು ಭಾರೀ ಯೋಚನೆಯಲ್ಲಿ ಬಿದ್ದರು. ಕೊನೆಗೆ ಮಾಯಿಪ್ಪಾಡಿಗೆ ಇಬ್ಬರೂ ಹೋಗಿ ಅರಸರನ್ನು ಕಂಡು ಪರಿಸ್ಥಿತಿಯನ್ನು ಅವರಿಗೆ ವಿವರಿಸುವುದೆಂದು ತೀರ್ಮಾನಿಸಿದರು.

ಮರುದಿನ ಬೆಳಗ್ಗೆ ಮಂಜಣನನ್ನೂ, ರಾಯಪ್ಪ ನಾಯಕನನ್ನೂ ಸೇರಿಸಿಕೊಂಡು ಅರಮನೆಗೆ ಬಂದ ಶಾನುಭೋಗರು, ಅರಸರಿಗೆ ತಾವು ಕೇಳಿದ ಸುದ್ದಿಯನ್ನು ವಿವರಿಸಿದರು.

ಸಂಜೆಯಾಗುವಾಗ ಅರಸರ ಮೂವರು ಸೇನಾಧಿಪತಿಗಳೂ ಸಭೆ ಸೇರಿದರು. ಇಂಗ್ಲಿಷರ ಪಡೆಯ ನಾಯಕನೂ ಬಂದ. ಇಂಗ್ಲಿಷರ ನಾಯಕ ಅರಸರ ಮಾತಿಗೆ ಒಪ್ಪಿ, ತನ್ನ ಸೈನಿಕರು ಪೇಟೆಗೆ ಇಳಿಯದಂತೆ ಮಾಡುತ್ತೇನೆ ಎಂದ. ಕೋಚಣ್ಣಾಳ್ವರು ಸ್ವತಃ ಜಾಲ್ಸೂರು, ಆದೂರು, ಮುಳಿಯೂರುಗಳ ಜವಾಬ್ದಾರಿ ವಹಿಸಿಕೊಳ್ಳಲು ತೀರ್ಮಾನವಾಯಿತು. ಸುಬ್ರಾಯ ಶಾನುಭೋಗರು ಮದವೂರಿನಿಂದ ಹಿಡಿದು ಕಣಿಯೂರುವರೆಗಿನ ದೇವಸ್ಥಾನ ಗಳಿಗೆ ಸೈನಿಕರನ್ನು ಕಾವಲು ನಿಲ್ಲಿಸಿ, ಕುಂಬಳೆ ಪೇಟೆಯಿಂದ ಕಾಸರಗೋಡುವರೆಗಿನ ಜವಾಬ್ದಾರಿಯನ್ನು ರಾಯಪ್ಪ ನಾಯಕನಿಗೆ ವಹಿಸಿಕೊಡಲು ಒಪ್ಪಿ, ಸುಬ್ರಾಯ ಹೆಗ್ಡೆಯನ್ನು ಸ್ವತಃ ತಾನೇ ಮುಗಿಸುತ್ತೇನೆಂದು ಹೇಳಿದರು. ಮಂಜಣಾಳ್ವ ವಿಟ್ಲದಿಂದ ಮಂಜೇಶ್ವರ ದವರೆಗಿನ ಜವಾಬ್ದಾರಿ ವಹಿಸಿಕೊಂಡ. ಬೀರಣ್ಣ ಬಂಟನನ್ನು ತಾನೇ ಸ್ವತಃ ಬೇಟೆಯಾಡು

ತ್ತೇನೆಂದು ಎಲ್ಲರಿಗೂ ಭರವಸೆ ಕೊಟ್ಟು ಕನ್ಯಾನಕ್ಕೆ ಸವಾರಿ ಹೊರಟ.

ಮಂಜಣ ಮಂಜೇಶ್ವರಕ್ಕೆ ಬಂದು ತನ್ನ ಸೈನಿಕರನ್ನೆಲ್ಲಾ ಕರೆಸಿ, ಪ್ರತಿಯೊಬ್ಬನಿಗೆ ಏನು ಮಾಡಬೇಕು, ಯಾರು ಎಲ್ಲಿರಬೇಕು ಎನ್ನುವುದನ್ನು ವಿವರಿಸಿದ. ಬದಿಯಡ್ಕದವರೆಗೆ ಕೋಚಣ್ಣಾಳ್ವರ ಸೇನೆ ಇತ್ತು. ಅಲ್ಲಿಂದ ಕನ್ಯಾನ, ಉಕ್ಕುಡ, ವಿಟ್ಲದ ಗಡಿಯಿಂದ ಆನೆಕಲ್ಲು, ಬಾಕ್ರಬೈಲು, ವರ್ಕಾಡಿಗಳಲ್ಲಿ ಬಾಕುಡರ ಪಡೆಯನ್ನೂ, ಕುಟ್ಟಿ ಬ್ಯಾರಿಯ ಪಡೆಯನ್ನು ಕುರುಡಪದವು, ಮುಳಿಗದ್ದೆ, ಪೈವಳಿಕೆಯವರೆಗೆ ನಿಲ್ಲಿಸಿ, ಅಟ್ಟೆಗೋಳಿಯಿಂದ ಐಲದಪದವು ವರೆಗೆ ಬೋವಿಗಳ ದಂಡಿಗೆ ಕಾಯಲು ಹೇಳಿದ. ಮಂಜೇಶ್ವರದ ಕಡಲ ಬದಿಯ ಬೆಂಗರೆ ಯಿಂದ ಉಳ್ಳಾಲದವರೆಗೆ ಉಸ್ಮಾನನ ಪುಸಲರ ದಂಡು ಕಾವಲು ನಿಂತಿತು. ಮಂಜೇಶ್ವರ, ಬಂಗ್ರ ಮಂಜೇಶ್ವರ ಪೇಟೆಗೆ ಮೊಗವೀರರ, ಬೋವಿಗಳ ದಂಡನ್ನು ಕಾವಲು ಹಾಕಿ, ಬಡಾಜೆಯಿಂದ ಕೋಳ್ಯೂರುವರೆಗೆ ಐದು ತಾಣಗಳಲ್ಲಿ ಬೆಳ್ಚಪ್ಪಾಡರ ದಂಡು ಕಾವಲಿಗೆ ಸಜ್ಜಾಯಿತು. ಇಷ್ಟೆಲ್ಲಾ ವ್ಯವಸ್ಥೆ ಮುಗಿಯುವಾಗ ಶ್ರೀಮದನಂತೇಶ್ವರ ದೇವಸ್ಥಾನದಲ್ಲಿ ಭಂಡಾರ ಮಠದ ದೇವಯ ಭಂಡಾರಿ, ಭಕ್ತರ ಮಠದ ಭಕ್ತರು, ಶಾನುಭೋಗರ ಮನೆಯ ನರಸಯ್ಯ ಶಾನುಭೋಗರು ಸಂಜೆಯ ಪೂಜೆಗೆ ಬರುವಂತೆ ಆತನಿಗೆ ಹೇಳಿಕೆ ಕಳುಹಿಸಿದರು.

ಅನಂತೇಶ್ವರನಿಗೆ ಮಂಜಣಾಳ್ವರ ಹೆಸರಿನಲ್ಲಿ ವಿಶೇಷ ಪೂಜೆ ಮಾಡಿಸಿ ಗಂಧ ಪ್ರಸಾದ ಹಿಡಿದುಕೊಂಡು ಕಾಯುತ್ತಿದ್ದ ಕೊಂಕಣಿ ಸಮಾಜದ ಹಿರಿಯರು ತಮ್ಮ ಭಯವನ್ನು ಮಂಜಣನ ಮುಂದಿಟ್ಟರು. ಹಿಂದೊಮ್ಮೆ ವಿಟ್ಲದ ದೊಂಬ ಹೆಗ್ಡೆಯ ಸೇನೆ ಮಂಜೇಶ್ವರ ದೇವಸ್ಥಾನದ ಸಂಪತ್ತನ್ನೆಲ್ಲಾ ಲೂಟಿ ಮಾಡಿದ್ದುದನ್ನು ನೆನಪು ಮಾಡಿದರು.

ಮಂಜಣ, ಐನೂರು ಮಂದಿ ಪುಸಲರ ದಂಡನ್ನು ಮಂಜೇಶ್ವರದ ಕಾವಲಿಗಾಗಿ ದಾರಿಯಲ್ಲೇ ನಿಲ್ಲಿಸಿದುದನ್ನು ಹೇಳಿದ. ಬೋವಿಗಳ ಸೇನೆಯನ್ನು, ದೇವಸ್ಥಾನವನ್ನೂ ಅದರ ಮುಂದಿನ ರಥಬೀದಿಯನ್ನೂ ಕಾಯಲು ನಿಲ್ಲಿಸಿರುವುದಾಗಿ ತಿಳಿಸಿದ. ಇದಲ್ಲದೆ ತಾನು ಸ್ವತಃ ಮುನ್ನೂರು ಸೈನಿಕರ ತುಪಾಕಿಯ ದಂಡಿನ ಜೊತೆ ಮಂಜೇಶ್ವರದಲ್ಲಿ ಬೀಡು ಬಿಟ್ಟಿರುವುದಾಗಿ ಹೇಳಿದಾಗ ಎಲ್ಲರಿಗೂ ಸಮಾಧಾನವಾಯಿತು. ಭಂಡಾರ ಮಠದ ಭಂಡಾರಿ, ದೇವಳದಿಂದ ಮಂಜಣನನ್ನು ಭಂಡಾರ ಮಠಕ್ಕೆ ಕರೆತಂದರು.

ಮನೆಗೆ ಬಂದ ಮಂಜಣಾಳ್ವನ ಪಾದದಡಿಗೆ ತನ್ನ ಕುಟುಂಬವನ್ನೆಲ್ಲಾ ಹಾಕಿ, ಅವರ ರಕ್ಷಣೆಯ ಜವಾಬ್ದಾರಿಯನ್ನು ಅವನಿಗೆ ಒಪ್ಪಿಸಿದರು ದೇವಯ ಭಂಡಾರಿ. ಕಾಲಿಗೆ ಬಿದ್ದ ಭಂಡಾರಿಯ ಹೆಂಡತಿ ದುರ್ಗಮ್ಮ ಕಾಲು ಬಿಡದಿದ್ದಾಗ, ಅವರ ತೋಳು ಹಿಡಿದು ಎತ್ತಿ ನಿಲ್ಲಿಸಿ, ಸಮಾಧಾನ ಮಾಡಿ, ಅವರ ಕಣ್ಣೀರು ಒರೆಸುವಾಗ, ಅವರ ಕಣ್ಣುಗಳು ಸಂಧಿ ಸಿದವು. ಆ ನೋಟಕ್ಕೆ ಮಂಜಣನ ಮನಸ್ಸಿನಲ್ಲಿ ಅಳುಕುಂಟಾಯಿತು. ದೇವಯ ಭಂಡಾರಿಯೂ, ದುರ್ಗಮ್ಮನೂ ತಮ್ಮ ಮಕ್ಕಳನ್ನು ಮಿತ್ತಬೈಲಿನ ಮನೆಯಲ್ಲಿ ಅಡಗಿಸಿಡುವಂತೆ ಕೇಳಿಕೊಂಡರು. ಮಂಜಣ ಒಪ್ಪಿ ಅವರನ್ನು ತಮ್ಮಂದಿರ ಜೊತೆ ಮಿತ್ತಬೈಲಿಗೆ ಕಳುಹಿಸುವ ವ್ಯವಸ್ಥೆ ಮಾಡಿದ. ಭಂಡಾರಿ ಮತ್ತು ಅವರ ಹೆಂಡತಿ ಭಯದಿಂದ ಕಂಪಿಸುತ್ತಿರುವುದನ್ನು



ಕಂಡು ಮಂಜಣಾಳ್ವ ಅವರನ್ನು ಸಮಾಧಾನ ಮಾಡಿ ಧೈರ್ಯದಲ್ಲಿರುವಂತೆ ಹೇಳಿದಾಗ, ದುರ್ಗಮ್ಮ ಕೆಲವು ವರ್ಷಗಳ ಹಿಂದೆ ಟಿಪ್ಪು ಸುಲ್ತಾನನ ಸೈನಿಕರು ಮಾಡಿದ ಅನ್ಯಾಯವನ್ನು ವಿವರಿಸಿ ತಮ್ಮ ಭಯಕ್ಕೆ ಕಾರಣ ಹೇಳಿದರು.

ಸುಲ್ತಾನನ ಸೈನ್ಯ ಮಂಜೇಶ್ವರದ ರಥಬೀದಿಯಲ್ಲಿ ಮತ್ತು ಸುತ್ತಮುತ್ತ ಮಾಡಿದ ಅನ್ಯಾಯಕ್ಕೆ ಲೆಕ್ಕವಿಲ್ಲ. ಈ ಅನ್ಯಾಯದ ಸುದ್ದಿ ಶ್ರೀರಂಗಪಟ್ಟಣದಲ್ಲಿದ್ದ ಟಿಪ್ಪುವಿಗೆ ತಲುಪುವ ಮುನ್ನವೇ ದೌರ್ಜನ್ಯದ ತಾಂಡವ ನಡೆದುಹೋಯಿತು. ಮಂಜೇಶ್ವರದ ಸುಬೇದಾರ, ಮೊಗವೀರರ ನೂರಕ್ಕೂ ಹೆಚ್ಚು ಕುಟುಂಬಗಳನ್ನು ಬಲಾತ್ಕಾರದಿಂದ ಇಸ್ಲಾಂ ಧರ್ಮಕ್ಕೆ ಸೇರಿಸಿದ. ಅವರಿಗೆ ಹಣ, ದೋಣಿ, ಮೀನು ಹಿಡಿಯುವ ಹಕ್ಕಿನ ಆಸೆ ತೋರಿಸಿ, ಪುಸಲಾಯಿಸಿ ಇಸ್ಲಾಮಿಗೆ ಸೇರಿಸಿ ಪುಸಲರೆಂಬ ಬೇರೆಯೇ ಒಂದು ಪಂಗಡ ಸೃಷ್ಟಿ ಮಾಡಿಬಿಟ್ಟ. ಬ್ರಾಹ್ಮಣರ ಜನಿವಾರ ಕಿತ್ತು ಹಾಕಿ, ಅವರ ಬಾಯಿಗೆ ಬಲವಂತದಿಂದ ದನದ ಮಾಂಸ ತುರುಕಿ ಜಾತಿ ಕೆಡಿಸಿದ! ದೇವಸ್ಥಾನದ ಸುತ್ತಮುತ್ತಲ ಮನೆಗಳಿಂದ ಹರೆಯದ ಹೆಣ್ಣುಮಕ್ಕಳನ್ನು ಶ್ರೀರಂಗಪಟ್ಟಣದ ಜನಾನಾಕ್ಕೆ ಸೇರಿಸಲು ಕಳುಹಿಸಿದನಂತೆ! ಆ ಭಯ ಇಡೀ ಮಂಜೇಶ್ವರದ ಕೊಂಕಣಿ ಸಮಾಜವನ್ನು ಪಿಶಾಚಿಯಂತೆ ಕಾಡುತ್ತಿತ್ತು.

ಕತೆ ಕೇಳಿದ ಮಂಜಣ ತಮ್ಮಂದಿರನ್ನೂ, ತನ್ನ ನಂಬಿಕೆಯ ಕೆಲಸದವರನ್ನೂ ತರಿಸಿ ಭಂಡಾರಿಯ ಮಕ್ಕಳನ್ನೂ, ಚಿನ್ನಾಭರಣಗಳ ಪೆಟ್ಟಿಗೆಗಳನ್ನೂ ಮಿತ್ತಬೈಲಿಗೆ ಸಾಗಿಸಿದ. ದುರ್ಗಮ್ಮ ಹಾಗೂ ಭಂಡಾರಿ ಎಷ್ಟು ಒತ್ತಾಯಿಸಿದರೂ ಮನೆ ಬಿಟ್ಟು ಹೋಗಲು ಒಪ್ಪಲಿಲ್ಲ. ಅವರ ಹಿತ್ತಲಲ್ಲೇ ಮಂಜಣಾಳ್ವರ ದಂಡು ಬೀಡು ಬಿಟ್ಟಿತು. ದುರ್ಗಮ್ಮನೂ, ದೇವಯ ಭಂಡಾರಿಯೂ ಸೇನೆಯ ಊಟ ತಿಂಡಿಯ ಜವಾಬ್ದಾರಿ ವಹಿಸಿಕೊಂಡರು. ಎರಡು ದಿನ ಪೇಟೆಯಿಂದ ಆನೆಕಲ್ಲುವರೆಗೆ ಮಂಜಣನ ಸೈನ್ಯ ಕಾವಲು ನಡೆಸಿತು. ಮಾರನೆಯ ದಿನ ಸುಬ್ರಾಯ ಶಾನುಭೋಗರ ಆಳು ಬಂದು ಅವನನ್ನು ಮಾಯಿಪ್ಪಾಡಿಯ ಅರಮನೆಗೆ ಬರಲು ಹೇಳಿದ.

ಮಂಜಣ ಮಾಯಿಪ್ಪಾಡಿಯ ಅರಮನೆಗೆ ಬಂದಾಗ ಸುಬ್ರಾಯ ಶಾನುಭೋಗರು ಹಾಗೂ ಕೋಚಣ್ಣಾಳ್ವರು ಕುಳಿತು ಅವನ ದಾರಿ ಕಾಯುತ್ತಿದ್ದರು. ಹಿರಿಯರಿಬ್ಬರ ಕಾಲಿಗೆ ನಮಸ್ಕಾರ ಮಾಡಿ ಕುಳಿತುಕೊಳ್ಳುವಾಗ ಅರಸರು ಬಂದವರೇ ಶಾನುಭೋಗರತ್ತ ನೋಡಿ ಕೇಳಿದರು,

‘‘ಏನು ಶಾನುಭೋಗರೇ, ಬಹಳ ತುರ್ತು ಸಭೆ ಕರೆದಿದ್ದೀರಿ? ಏನು ವಿಶೇಷ?’’

‘‘ಸನ್ನಿಧಾನಕ್ಕೆ ಕರಣಿಕರಿಂದ ದಿನ ದಿನದ ಸುದ್ದಿ ಕಳುಹಿಸುತ್ತಿದ್ದೆ. ಆದರೆ ಇಂದಿನ ಸುದ್ದಿಯನ್ನು ಎಲ್ಲ ಸೇನಾಧಿಪತಿಗಳೂ ತಿಳಿಯಬೇಕೆಂದು ಸಭೆ ಕರೆಯಲು ಹೇಳಿದೆ. ಇಂದು ತಪ್ಪಿದರೆ ನಾಳೆ ರಾತ್ರಿ ಸುಬ್ರಾಯ ಹೆಗ್ಡೆ ಕುಂಬಳೆ ಪೇಟೆಯಲ್ಲಿ ಗಲಭೆ ಎಬ್ಬಿಸಿ ಇಂಗ್ಲಿಷ್ ಸೇನೆಯ ವಿರುದ್ಧ ಬಂಡಾಯದ ಯುದ್ಧ ಪ್ರಾರಂಭಿಸಲಿದ್ದಾನೆ ಎಂಬ ಸುದ್ದಿ ನನಗೆ ಬಂದಿದೆ. ಕಲ್ಯಾಣಸ್ವಾಮಿ ಕೆಲವು ದಿನ ಕಳೆದು ಕುಂಬಳೆ ಪೇಟೆಗೆ ದಾಳಿ ಮಾಡುವ ಯೋಚನೆ

ಯಲ್ಲಿದ್ದ. ಆದರೆ ಬೀರಣ್ಣ ಬಂಟ ಅವಸರಿಸಿದ ಕಾರಣ ಸುಬ್ರಾಯ ಹೆಗ್ಡೆ ಇಂದು ಅಥವಾ ನಾಳೆ ದಂಗೆ ಏಳಲು ನಿಶ್ಚಯಿಸಿದ್ದಾನೆ. ಬೀರಣ್ಣ ಅವನ ಜೊತೆ ಸೇರಿಕೊಂಡು ಭಾರೀ ಗಲಭೆ ಎಬ್ಬಿಸಿ, ಕಲ್ಯಾಣಸ್ವಾಮಿಯನ್ನು ಸಮಯ ನೋಡಿ ಮಂಗಳೂರಿಗೆ ಉಳ್ಳಾಲ ಕಡವಿನ ಮೂಲಕ ನುಗ್ಗಿಸಲು ತೀರ್ಮಾನಿಸಿದ್ದಾನಂತೆ''.

ಶಾನುಭೋಗರು ಸುದ್ದಿ ತಿಳಿಸಿದಾಗ ಕೋಚಣ್ಣಾಳ್ವರು ತಲೆಯಾಡಿಸಿ ಅವರಿಗೆ ಸಿಕ್ಕಿದ ಸುದ್ದಿಯನ್ನು ಹೇಳಿದರು,

''ಕುಂಬಳೆಯಲ್ಲಿ ಗಲಭೆ ನಡೆದರೆ ಕಲ್ಯಾಣಪ್ಪ ಅಮರಸುಳ್ಯದ ಜಾಲ್ಸೂರಿನಿಂದ ಬಂದು ಮುಳಿಯಾರು, ಬದಿಯಡ್ಕಗಳಿಂದ ಕಪ್ಪ ತೆಗೆದುಕೊಂಡು ಎಡನಾಡಿಗೆ ದಾಳಿಯಿಟ್ಟು ಇಚ್ಲಂಪಾಡಿಯನ್ನು ಲೂಟಿ ಮಾಡಲಿದ್ದಾನಂತೆ''.

ತನ್ನ ಕೊರಗರು, ದೊಂಬರು ತಂದ ಸುದ್ದಿಯ ಪ್ರಕಾರ, ಕಲ್ಯಾಣಪ್ಪ ಕುಂಬಳೆಯಾಗಿ ಕಾಸರಗೋಡಿಗೆ ಬಂದು ಸುಬ್ರಾಯ ಹೆಗ್ಡೆ ಹಾಗೂ ಬೀರಣ್ಣ ಬಂಟರನ್ನು ಸೇರಿಕೊಂಡು ಮಂಗಳೂರಿಗೆ ಪ್ರಯಾಣ ಮಾಡಲು ಯೋಚನೆ ಮಾಡಿದ್ದಾನೆ ಎಂಬುದನ್ನು ಮಂಜಣ ತಿಳಿಸಿದ. ಅದು ಸಾಧ್ಯವಾಗದಿದ್ದರೆ ನಂದಾವರಕ್ಕೆ ನುಗ್ಗಿ ಲಕ್ಷ್ಮಪ್ಪ ಬಂಗರಸನೊಂದಿಗೆ ಮಂಗಳೂರಿಗೆ ಅರ್ಕುಳದ ಮೂಲಕ ದಾಳಿ ಮಾಡುವಾಗ, ಬೀರಣ್ಣ ಬಂಟ ಹಾಗೂ ಸುಬ್ರಾಯ ಹೆಗ್ಡೆ ಉಳ್ಳಾಲದ ಕಡವಿನಿಂದ ದಾಳಿ ಮಾಡಬೇಕೆಂದು ಸೇನೆಗೆ ತಿಳಿಸಿದ್ದಾನಂತೆ ಎಂದು ಮಾಹಿತಿ ನೀಡಿದ.

ಮೂರು ಜನ ದಂಡನಾಯಕರೂ ಅವರವರು ಸಂಗ್ರಹಿಸಿದ್ದ ಸುದ್ದಿ ಕೊಟ್ಟಾಗ ಅರಸರು ಕೇಳಿದರು,

''ಈಗ ನಮ್ಮ ಸೇನೆ ಎಷ್ಟು ತಯಾರಿಯಲ್ಲಿದೆ ಹೇಳಿ. ಯುದ್ಧದ ತಂತ್ರಗಳನ್ನು ಸಿದ್ಧ ಮಾಡಿರಬೇಕಲ್ಲಾ, ಅದನ್ನು ವಿವರಿಸಿ ಶಾನುಭೋಗರೇ''

''ಅಮರಸುಳ್ಯದಿಂದ ಬರುವ ದಂಡು ಕಾಸರಗೋಡಿಗೆ ಬರದ ಹಾಗೆ ಕೋಚಣ್ಣಾಳ್ವರ ದಂಡು ನೋಡಿಕೊಳ್ಳಬೇಕು. ಅವರ ಸ್ವಲ್ಪ ಸೇನೆ ಅಂಬಿಲಡ್ಕದಲ್ಲೇ ಇಚ್ಲಂಪಾಡಿಯತ್ತ ನುಗ್ಗುವ ಸೇನೆಯನ್ನು ಎದುರಿಸುತ್ತದೆ. ಮುಜಂಗಾವು ಹಾಗೂ ಅಂಬಿಲಡ್ಕ ಪದವಿನಲ್ಲಿ ಸ್ವತಃ ಕೋಚಣ್ಣಾಳ್ವರೇ ನಿಲ್ಲುವರು. ಸುಬ್ರಾಯ ಹೆಗ್ಡೆಯನ್ನು ನಾನು ನೋಡಿಕೊಳ್ಳುತ್ತೇನೆ. ಮಂಜಣಾಳ್ವನ ಸೇನೆ ಉಕ್ಕುಡ, ಆನೆಕಲ್ಲುಗಳ ಬಳಿಯೇ ಬೀರಣ್ಣ ಬಂಟನ ಪುಂಡರನ್ನು ತಡೆದು ನಿಲ್ಲಿಸುತ್ತದೆ. ಅವರು ಮಂಜೇಶ್ವರ ಪೇಟೆಗೆ ಬರದ ಹಾಗೆ ನೋಡಿಕೊಳ್ಳುತ್ತದೆ''.

ಸುಬ್ರಾಯ ಶಾನುಭೋಗರು ಹೀಗೆ ಮೂವರು ದಂಡನಾಯಕರೂ ಮಾಡಿಕೊಂಡ ಯೋಜನೆಗಳನ್ನು ಅರಸರ ಮುಂದಿಟ್ಟರು.

''ನನಗೆ ಇಂದು ಬೆಳಗ್ಗೆ ಬಂದ ಸುದ್ದಿಯ ಪ್ರಕಾರ ಬೆಂಗರೆ ಲಕ್ಷ್ಮಪ್ಪರಸು ಕಲ್ಯಾಣಪ್ಪ ನೊಂದಿಗೆ ಸೇರುತ್ತಾನಂತೆ. ಉಳ್ಳಾಲದಿಂದ ನಂದಾವರದವರೆಗೆ ಅವನ ರಾಜ್ಯ. ಅಲ್ಲಿ



ಲೂಟಿ, ದಂಗೆ, ಡಕಾಯಿತಿ ಮಾಡಲಾರರು. ಕಲ್ಯಾಣಪ್ಪನ ದಂಡು ಬೀರಣ್ಣ ಬಂಟ ಹಾಗೂ ಸುಬ್ರಾಯ ಹೆಗ್ಡೆಯ ಜೊತೆ ಸೇರಿ ಮಂಗಳೂರಿನಲ್ಲಿ ಸರಕಾರದ ಖಜಾನೆ ದೋಚಲಿದೆ ಯಂತೆ. ಆಮೇಲೆ ಅದನ್ನು ಸೇನೆಯ ಎಲ್ಲರಿಗೂ ಹಂಚುವುದೆಂದು ಪ್ರಚಾರ ಮಾಡುತ್ತಾ ದಂಡಿಗೆ ಜನ ಸೇರಿಸುತ್ತಿದ್ದಾರಂತೆ. ಪರದೇಶಿಗಳು ನಮ್ಮ ರಾಜ್ಯವನ್ನು ಆಳಬಾರದು. ಹಾಗಾಗಿ ಎಲ್ಲರೂ ಈ ಸ್ವಾತಂತ್ರ್ಯ ಯುದ್ಧಕ್ಕೆ ಸೇರಬೇಕು, ಸಹಾಯ ಮಾಡಬೇಕೆಂದು ಬಂಗರಸ ಜನರನ್ನು ಒಟ್ಟುಗೂಡಿಸುತ್ತಿದ್ದಾನಂತೆ''.

ರಾಮಂತರಸರಿಗೆ ಇತ್ತೀಚೆಗಿನ ಕೆಲವು ವರ್ಷಗಳಿಂದ, ಹೊರಗಿನಿಂದ ಬಂದು ರಾಜ್ಯದ ಸೊತ್ತುಗಳನ್ನು ಸ್ವಾಧೀನಪಡಿಸಿಕೊಳ್ಳುವವರ ವಿರುದ್ಧ ಜಗಳ ಕಾದು ಕಾದು ಸಾಕಾಗಿದೆ. ಟಿಪ್ಪುವಿನ ಸೇನೆಯ ಅನಾಚಾರ ತಡೆಯಲಾಗದೆ ಅವರು ಇಂಗ್ಲಿಷರ ಸಹಾಯ ಪಡೆಯಬೇಕಾಗಿ ಬಂತು. ಆದರೆ ತನ್ನ ರಾಜ್ಯದಲ್ಲಿ ಅವರು ಆಡಳಿತ ನಡೆಸುವ ಮತ್ತು ಅವರ ಸೇನೆ ರಾಜ್ಯದಲ್ಲಿ ಸುಂಕ ವಸೂಲಿ ಮಾಡುತ್ತಿರುವ ಬಗ್ಗೆ ಅಸಮಾಧಾನವಿತ್ತು. ಅವರು ಪರಿಸ್ಥಿತಿಯ ಕೈಗೆ ಸಿಲುಕಿ ಇಂಗ್ಲಿಷರ ಸಹಾಯ ಪಡೆದು ಸಿಕ್ಕಿಬಿದ್ದಂತಾಗಿದ್ದರು. ಅರಸರು ತನ್ನ ಮಾತು ಮುಂದುವರಿಸಿದರು,

''ಈ ಪರದೇಶಿಗಳು ವ್ಯಾಪಾರ ಮಾಡಿಕೊಂಡಿದ್ದರೆ ಸಾಕಿತ್ತು. ಸೇನೆ ಕಟ್ಟಿ ರಾಜ್ಯವಾಳುವುದು ಬೇಡವಿತ್ತು. ಆ ಮುನ್ರೋ ಸಾಹೇಬ ಅಕ್ಕಿ, ಭತ್ತ, ತೆಂಗಿನಕಾಯಿ, ಅಡಿಕೆಗಳ ಸುಂಕ ಬಿಟ್ಟು, ಹಣದ ಕಂದಾಯ ವಸೂಲಿಗೆ ಪ್ರಾರಂಭಿಸಿ ನಮ್ಮ ಬೇಸಾಯಗಾರರ ದ್ವೇಷವನ್ನು ಬೆನ್ನಿಗೆ ಕಟ್ಟಿಕೊಂಡಿದ್ದಾನೆ. ನಮಗೂ ನಮ್ಮ ಪ್ರಜೆಗಳ ಜೊತೆ ಮಾತನಾಡದಂತಾಗಿದೆ. ಆದರೆ ಈ ಕಲ್ಯಾಣಪ್ಪ, ಬೀರಣ್ಣ ಬಂಟನಂತಹ ಪುಂಡರನ್ನು ದರೋಡೆಗೆ ಬಿಟ್ಟು ದೊಡ್ಡ ಅನ್ಯಾಯ ಮಾಡಿದ. ಅವನ ಗೌಂಡರ ಪಡೆ ಡಕಾಯಿತಿ, ಹೆಂಗಸರ ಮೇಲೆ ಅತ್ಯಾಚಾರ ಇತ್ಯಾದಿಗಳನ್ನು ಮಾಡಿ ನಮ್ಮ ರಾಜ್ಯದ ಶಾಂತಿಯನ್ನು ಕದಡಿದೆ. ಕಳೆದ ಕೆಲವು ವರ್ಷಗಳಲ್ಲಿ ಈ ಇಕ್ಕೇರಿಯವರು, ಹೈದರಾಲಿ ಮತ್ತು ಅವನ ಮಗ ಟಿಪ್ಪುವಿನ ಜೊತೆಯ ಯುದ್ಧಗಳ ವೇಳೆ ಈ ಕೆಂಪು ಮೂತಿಯ ಪರದೇಶಿಗಳು ನಮ್ಮ ಎಲ್ಲ ಊರು, ಕೇರಿಗಳನ್ನು ದೋಚಲಿಲ್ಲವೇ. ನಮಗೆ ಈ ಲೂಟಿ, ದರೋಡೆ, ದಂಗೆ, ಚಾಡಿ ಬೇಡ, ನೆಮ್ಮದಿಯ ಬದುಕು ಬೇಕೆಂದು ನಾವೆಲ್ಲ ಕುಳಿತು ಇಂಗ್ಲಿಷರ ಕಡೆ ಸೇರುವುದೆಂದು ನಿರ್ಣಯ ಮಾಡಿದ್ದೇವೆ. ಈಗ ನಮ್ಮ ರಾಜ್ಯದಿಂದ ಈ ದಂಗೆಯ ಮಾರಿ ಯನ್ನು ಹೇಗೆ ಹೊರಗೆ ಸಾಗಿಸುವುದು, ಜನರನ್ನು ಹೇಗೆ ಸುಖ, ಶಾಂತಿಯಿಂದ ಬದುಕುವಂತೆ ಮಾಡುವುದೆಂದು ಯೋಚಿಸಿ.''

ರಾಮಂತರಸರು ಭಾರೀ ಕಳಕಳಿಯಿಂದ ತನ್ನ ಸೇನಾಧಿಪತಿಗಳಲ್ಲಿ ಮನಸ್ಸನ್ನು ಬಿಡಿಸಿಟ್ಟರು.

''ಖಾವಂದರೇ, ನಿಮ್ಮೊಂದಿಗಿದ್ದು ಈ ಸುಖ-ದುಃಖಗಳನ್ನೆಲ್ಲ ನೋಡಿದವನು ನಾನು. ಹೇಗೋ ಮಾನ-ಮರ್ಯಾದೆಗೆ ಕುಂದು ಬರದಂತೆ ಈ ತನಕ ಬಾಳಿದೆವು. ನಮ್ಮ

ರಾಜ್ಯಕ್ಕೆ ಈಗ ಶಾಂತಿ ಬೇಕು. ಇಂದಿನ ಪರಿಸ್ಥಿತಿಯಲ್ಲಿ ನಾವು ನಮ್ಮ ಜನರನ್ನು ಎದುರು ಹಾಕಿಕೊಳ್ಳಬಾರದು. ಈ ಕೆಂಪು ಮೂತಿಯ ಸೈನಿಕರ ಅನ್ಯಾಯ ಮಿತಿ ಮೀರಿದೆ. ಹಾಗಾಗಿ ನಮ್ಮ ಯುವಕರಿಗೆ ಈ ಪರದೇಶಿಗಳು ನಮ್ಮ ರಾಜ್ಯದಲ್ಲಿ ಅಧಿಕಾರ ನಡೆಸಬಾರದೆಂಬ ಸ್ವಾಭಿಮಾನ ಮೂಡಿದೆ. ಅವರು ನಮ್ಮ ಹೆಣ್ಣುಮಕ್ಕಳನ್ನು ಎಳೆದೊಯ್ಯುವಾಗ ಯುವಕರಿಗೆ ತಡೆಯಲಾಗುತ್ತಿಲ್ಲ, ಅವರು ಸ್ವಾಭಿಮಾನದಿಂದ ಈ ಕೆಂಪುಮೂತಿಯವರನ್ನು ಎದುರಿಸಲು ಹೊರಡುವಾಗ ನಮಗೆ ಅದನ್ನು ವಿರೋಧಿಸಲು ಮನಸ್ಸಾಗುವುದಿಲ್ಲ, ಈ ಪರದೇಶಿಗಳು ನಮ್ಮ ರಾಜ್ಯವನ್ನು ಬಿಟ್ಟು ಹೋಗಬೇಕು. ಆಗ ನಮ್ಮ ರಾಜ್ಯವನ್ನು ನಾವೇ ಆಳಿಕೊಂಡು ಸುಖ, ಶಾಂತಿ, ನೆಮ್ಮದಿಯಲ್ಲಿ ಇರಬಹುದಿತ್ತು''.

''ಆದರೆ ಏನು ಮಾಡುವುದು, ಈ ಕಲ್ಯಾಣಸ್ವಾಮಿಯ ಪುಂಡರ ಬಂಡಾಯ ಸ್ವಾತಂತ್ರ್ಯ ಹೋರಾಟ ಅಲ್ಲ, ಇದು ಬರೀ ಲೂಟಿ, ಅತ್ಯಾಚಾರ, ಅನಾಚಾರಕ್ಕೆಂದೇ ಹೊರಟ ಗುಂಪು. ಹಳ್ಳಿಗಳಿಗೆ ನುಗ್ಗಿ ನಮ್ಮ ಜನರ ಮನೆಗಳಿಗೆ ಬೆಂಕಿ ಕೊಡುವುದು ಯಾವ ಸ್ವಾತಂತ್ರ್ಯ ಯುದ್ಧ? ಈ ದಂಗೆಕೋರರು ಲೂಟಿ, ಕೊಳ್ಳಿಯಿಡುವುದು ಮಾಡುತ್ತಿರಲಿಲ್ಲ ವಾದರೆ, ಸೇನೆ ಕಟ್ಟಿಕೊಂಡು ಮಂಗಳೂರಿಗೆ ಹೋಗುತ್ತಾರಾದರೆ ನಾವು ಸುಮ್ಮನಿರ ಬಹುದಿತ್ತು. ಮಂಗಳೂರಿಗೆ ಹೋಗಿ ಇಂಗ್ಲಿಷರ ಖಜಾನೆ ದೋಚುವುದಕ್ಕೆ ನಮ್ಮ ಅಡ್ಡಿ ಇಲ್ಲ, ಅವರಿಗೆ ದಾರಿ ಬಿಟ್ಟು ಕೊಡಬಹುದಿತ್ತು''.

''ಅದು ಹೌದು ಶಾನುಭೋಗರೇ, ಆದರೆ ಆ ದೊಂಬಿಯವರ ಜೊತೆ ನಮ್ಮ ಜನ ಸೇರಿಕೊಳ್ಳುತ್ತಿದ್ದಾರಲ್ಲ, ನಮ್ಮ ಹಳ್ಳಿಯವರು ಈ ಹಣದ ಕಂದಾಯ ತಪ್ಪುತ್ತದೆ, ಈ ಕೆಂಪು ಮೂತಿಯವರ ದೌರ್ಜನ್ಯ ಕೊನೆಗೊಳ್ಳುತ್ತದೆ ಎನ್ನುವ ಯೋಚನೆಯಲ್ಲಿ ನಮ್ಮತ್ತ ಉದಾಸೀನ ತೋರಿ ಅವರ ಜೊತೆ ಸೇರುತ್ತಿದ್ದಾರಲ್ಲ, ಅದಕ್ಕೇನು ಮಾಡುವುದು?''

ಕೋಚಣ್ಣಾಳ್ವರು ಕೇಳಿದರು,

''ಸನ್ನಿಧಾನ ಒಪ್ಪಿದರೆ ಇದಕ್ಕೆ ನನ್ನಲ್ಲಿ ಒಂದು ಉಪಾಯ ಇದೆ. ಒಂದು ತಂತ್ರ ಇದೆ. ಅದನ್ನು ಜಾಗರೂಕತೆಯಿಂದ ನಡೆಸಿದರೆ ನಾಳೆಯಿಂದ ನಮ್ಮ ಜನ ನಮ್ಮ ಜೊತೆಯೇ ಇರುತ್ತಾರೆ''.

ಶಾನುಭೋಗರು ಮೆಲ್ಲ ತನ್ನ ತಂತ್ರದ ಆಟವನ್ನು ವಿವರಿಸಿದರು,

''ರಾತ್ರಿಯಲ್ಲಿ ಪೇಟೆಯೆಲ್ಲ ಮಲಗಿರುವಾಗ ನಮ್ಮ ಸೈನ್ಯದ ಕಾವಲನ್ನು ಹಿಂದೆಗೆದು ಕೊಳ್ಳೋಣ. ಸೈನಿಕರಿಗೆ ಮಲಗುವಂತೆ ಹೇಳೋಣ. ಕೆಲವು ನಮ್ಮವರೇ ಯುವಕರನ್ನು ಕಳ್ಳು ಕುಡಿಸಿ ಪೇಟೆ ಲೂಟಿ ಮಾಡಲು ಬಿಡೋಣ. ಮತ್ತೆ ಕೆಲವು ಯುವಕರಲ್ಲಿ 'ಹರಹರ ಮಹಾದೇವ' ಎಂದು ಬೊಬ್ಬೆ ಹೊಡೆಯಲು ಹೇಳೋಣ. ಕೆಲವು ಸೈನಿಕರನ್ನೂ 'ಹರಹರ ಮಹಾದೇವ'ಎನ್ನುತ್ತ ಹಳ್ಳಿಗಳನ್ನು ಲೂಟಿ ಮಾಡಲು ಕಳುಹಿಸೋಣ. ನಾಳೆ ಬೆಳಗ್ಗೆ ಪೇಟೆಗೆ ಪೇಟೆಯೇ ಖಾವಂದರ ಬಳಿ ಬರುತ್ತದೆ. ಖಾವಂದರು ಎಲ್ಲರಿಗೂ ಭರವಸೆ ಕೊಟ್ಟು, ಮರುದಿನ ಬೆಳಗ್ಗೆ ನಮ್ಮ ಸೈನ್ಯವನ್ನು ಇಡೀ ಪೇಟೆ, ಹಳ್ಳಿಗಳ ಕಾವಲಿಗೆ ನೇಮಿಸೋಣ. ಅದೇ



ಹೊತ್ತಿಗೆ ಸುಬ್ರಾಯ ಹೆಗ್ಡೆಯನ್ನು ಸೆರೆ ಹಿಡಿದು ಜೈಲಿಗೆ ಹಾಕುವ ಕೆಲಸ ನಾನು ಮಾಡುತ್ತೇನೆ''.

ಶಾನುಭೋಗರ ಬುದ್ಧಿವಂತಿಕೆಗೆ ಎಲ್ಲರೂ ತಲೆದೂಗಿದರು. ಅವರ ಉಪಾಯಕ್ಕೆ ಒಪ್ಪಿ ಎಲ್ಲರೂ ಹೊರಟರು. ಶಾನುಭೋಗರು ತನ್ನ ಉಪಾಯವನ್ನು ಕಾರ್ಯರೂಪಕ್ಕೆ ತರುವುದರಲ್ಲಿ ನಿರತರಾದರು.

ಕೋಚಣ್ಣಾಳ್ವರು ಅಳಿಯ ರಾಮಾಳ್ವನನ್ನು ಬೇಡಡ್ಕ, ಕಾರಡ್ಕಗಳತ್ತ ಕಳುಹಿಸಿ, ತಾನು ಸ್ವತಃ ಅಂಬಲಪಾಡಿಯ ಪದವಿನಲ್ಲಿ ಬೀಡು ಬಿಟ್ಟರು.

ಮಂಜಣನಿಗೆ ಬೀರಣ್ಣನ ಭಯ. ಆ ವಿಷಸರ್ಪ ಮಿತ್ತಬೈಲಿಗೆ ನುಗ್ಗಿದರೆ ತನ್ನ ಮಿತ್ತಬೈಲಿನ ಮನೆ ಲೂಟಿ, ತನ್ನ ತಂಗಿಯರ ಅತ್ಯಾಚಾರ ಮಾಡದೆ ಬಿಡಲಿಕ್ಕಿಲ್ಲ, ಅವನಿಗೆ ಮಿತ್ತಬೈಲಿನಿಂದ ತನ್ನ ಕುಟುಂಬವನ್ನು ಓಡಿಸಬೇಕೆಂಬ ಹಟ ಇದೆ. ಅದಕ್ಕೆ ಬೇಕಾಗಿಯೇ ಅವನು ಕಲ್ಯಾಣಪ್ಪನ ದಂಡಿಗೆ ಸೇರಿರುವುದು. ಬೀರಣ್ಣ ಬಂಟ ಊರೆಲ್ಲ ಲೂಟಿ ಮಾಡಿ ತಂದ ಸೊತ್ತನ್ನು ಬಾರಬೈಲಿನ ಪೆರಾರಿಯಲ್ಲಿಟ್ಟಿದ್ದ. ಬೀರಣ್ಣನಿಗೆ ಕಳೆದೊಂದು ವರ್ಷದಿಂದ ಡಕಾಯಿತಿ, ಲೂಟಿ, ಹೆಣ್ಣುಮಕ್ಕಳ ಅತ್ಯಾಚಾರ ಸಾಮಾನ್ಯ ಸಂಗತಿಯಾಗಿತ್ತು. ಅವನ ಜೊತೆ ಇದ್ದ ಕೆಲವು ಬಾಕುಡರು, ಬೆಳ್ಚಡರು ಹಾಗೂ ಗೌಡರ ಮಕ್ಕಳಿಗೂ ಇದುವೇ ಕಸುಬಾಗಿತ್ತು. ಸ್ವಾತಂತ್ರ್ಯ ಎಂದರೆ ಏನೆಂದೇ ಅವರಿಗೆ ಗೊತ್ತಿರಲಿಲ್ಲ, ದೋಚುವುದು, ಗಲಭೆ ಎಬ್ಬಿಸುವುದು, ಹೆಣ್ಣುಮಕ್ಕಳ ಅತ್ಯಾಚಾರ ಮಾಡುವುದೇ ಅವರ ಸ್ವಾತಂತ್ರ್ಯ ಸಮರ. ಹೀಗಾಗಿ ಮೂಡಣ ಸೀಮೆಯಲ್ಲಿ ಬೀರಣ್ಣ ಬಂಟನ ದಂಡು ಬರುತ್ತದೆಂಬ ಸುದ್ದಿ ಸಿಕ್ಕಿದರೆ ಊರಿಗೆ ಊರೇ ಖಾಲಿಯಾಗುತ್ತಿತ್ತು.

ಮಂಜಣನ ಬೇಹುಗಾರರು ಎರಡು ದಿನಗಳಿಗೊಮ್ಮೆ ಮೂಡಣ ಸೀಮೆಯ ಸುದ್ದಿ ಮುಟ್ಟಿಸುತ್ತಿದ್ದರು. ಅವರ ಸುದ್ದಿಯ ಪ್ರಕಾರ ಕಲ್ಯಾಣಪ್ಪ ದಂಡು ಹಿಡಿದುಕೊಂಡು ಬದಿಯಡ್ಕದಿಂದ ಕುಂಬಳೆಗೆ ಬರುತ್ತಾನೆಂದೂ ಆಗ ದಾರಿಯಲ್ಲಿ ಸಿಗುವ ಎಡನಾಡು, ಇಚ್ಲಂಪಾಡಿಗಳ ಮನೆಗಳನ್ನು ದೋಚುವ ತಯಾರಿ ಮಾಡಿದ್ದಾನೆಂದೂ ಸುದ್ದಿ ಬಂತು. ಬೀರಣ್ಣನ ದಂಡು ಆನೆಕಲ್ಲಿನ ಮೂಲಕವೇ ವರ್ಕಾಡಿಗೆ ನುಗ್ಗಿ, ಮಂಜೇಶ್ವರಕ್ಕೆ ಬಂದು ದೇವಸ್ಥಾನ, ಮಸೀದಿ, ಬಸದಿಗಳನ್ನು ಕೊಳ್ಳೆ ಹೊಡೆಯಲು ತಯಾರಿ ಮಾಡುತ್ತಿತ್ತು. ಅವನು ದೇವಸ್ಥಾನ, ಮಸೀದಿ, ಬಸದಿಗಳಲ್ಲಿ ಲೂಟಿ ಮಾಡಿದ ಸೊತ್ತುಗಳನ್ನು ಕಲ್ಯಾಣಪ್ಪನಿಗೆ ಒಪ್ಪಿಸಬೇಕು. ಮನೆ, ಜನಗಳಿಂದ ದೋಚಿದ ಸಂಪತ್ತನ್ನು ಅವನೂ, ಅವನ ದಂಡಿನವರೂ ಹಂಚಿಕೊಳ್ಳಬೇಕು ಎಂಬುದು ಕಲ್ಯಾಣಪ್ಪನ ಅಪ್ಪಣೆ. ಆದುದರಿಂದ ಕಲ್ಯಾಣಪ್ಪನಿಗೂ ಬೀರಣ್ಣನಿಗೂ ಊರು ಸೂರೆ ಮಾಡುವುದರಲ್ಲೇ ಹೆಚ್ಚು ಆಸಕ್ತಿ.

ಹಾಗಾಗಿ ಮಂಜಣಾಳ್ವನಿಗೆ ಊರು ಸೂರೆಗೈಯಲು ಹೊರಟಿರುವ ಬೀರಣ್ಣ ಮಿತ್ತಬೈಲಿಗೆ ನುಗ್ಗಿ ತನ್ನ ತಂಗಿಯರನ್ನು – ಮನೆಯಲ್ಲಿದ್ದ ಕೊಂಕಣಿಗರ ಹೆಣ್ಣುಮಕ್ಕಳನ್ನು ಅತ್ಯಾಚಾರ ಮಾಡಿ, ಮನೆಯಲ್ಲಿದ್ದ ಭಂಡಾರಿಗಳ ಸೊತ್ತನ್ನು ದೋಚಲು ತಯಾರಿ

ಮಾಡುತ್ತಿರಬಹುದೆಂಬ ಭಯ. ಬೀರಣ್ಣ ಎಲ್ಲಿಯಾದರೂ ಮಿತ್ತಬೈಲಿಗೆ ದಾಳಿ ಇಟ್ಟರೆ ಅಲ್ಲಿಯೂ ದೊಡ್ಡ ಯುದ್ಧ ಆಗಬಹುದು. ಮಂಜಣಾಳ್ವನಿಗೆ ಇದು ಗೌರವದ ಪ್ರಶ್ನೆ. ಅನಂತರ ದೇವಯ ಭಂಡಾರಿ, ದುರ್ಗಮ್ಮನವರಿಗೆ ಮಾತ್ರವಲ್ಲ, ಇಡೀ ಮಂಜೇಶ್ವರ ಪೇಟೆಗೇ ಮುಖ ತೋರಿಸಲು ಸಾಧ್ಯವಿಲ್ಲ. ಅವರೆಲ್ಲ ಅವನ ಮೇಲೆ ಭರವಸೆ ಇಟ್ಟವರು. ಬೇರೆ ಯಾವುದಲ್ಲದಿದ್ದರೂ ಈ ಸಾವು, ನೋವು, ಅತ್ಯಾಚಾರಗಳನ್ನು ನಿಲ್ಲಿಸಲೇಬೇಕು.

ಮಂಜಣಾಳ್ವ ಕುಂಬಳೆಯಿಂದ ನೇರ ಕನ್ಯಾನವಾಗಿ ಆನೆಕಲ್ಲು ತಲುಪಿದಾಗ ಹೊಳೆ ಬದಿಯ ಹಾದಿಯಲ್ಲಿ ಹೆಣಗಳು, ಅರೆಜೀವದಲ್ಲಿ ಹೊರಳಾಡುತ್ತಿದ್ದವರು, ಕಲ್ಯಾಣಪ್ಪನ ದಂಡಿನ ರಕ್ತದ ದಾಹ, ಸಂಪತ್ತಿನ ಮೋಹವನ್ನು ಸಾರಿ ಹೇಳುತ್ತಿತ್ತು. ದಾರಿಯ ಒಂದು ಮನೆಯಲ್ಲಿಯೂ ಮನುಷ್ಯರ ಸುಳಿವಿರಲಿಲ್ಲ. ಹೆಚ್ಚಿನವರು ಓಡಿಹೋಗಿದ್ದರು. ಉಳಿದವರು ಸತ್ತು ಬಿದ್ದಿದ್ದರು. ಅರೆಜೀವದಲ್ಲಿದ್ದ ಅವನ ಸೈನ್ಯದ ಒಬ್ಬ ಸೈನಿಕ ಸುದ್ದಿಯನ್ನು ತಿಳಿಸಿದ,

‘‘ನೂರಾಳು ಸೈನ್ಯದ ದಂಡೊಂದು ಬಂದು ಮನೆಗಳನ್ನು ಲೂಟಿ ಮಾಡುತ್ತಾ, ಕೊಳ್ಳಿ ಇಡುತ್ತಾ, ಓಡಲು ಸಾಧ್ಯವಾಗದವರನ್ನು, ಮಕ್ಕಳನ್ನು ಬಾಳೆದಂಡು ಕೊಚ್ಚಿದಂತೆ ಕೊಚ್ಚಿ ಹಾಕಿದರು. ಹೆಣ್ಣುಮಕ್ಕಳನ್ನು ಅತ್ಯಾಚಾರ ಮಾಡಿ ಮಾನ ಮುಚ್ಚಲು ಬಟ್ಟೆ ಕೂಡಾ ಕೊಡದೆ ಅಲ್ಲೇ ಎಸೆದುಹೋದರು.’’ ಅರೆಜೀವದಲ್ಲಿದ್ದ ಕುಂಬಳೆ ದಂಡಿನ ಆಳು ಆ ಭೀಕರ ಹತ್ಯಾಕಾಂಡವನ್ನು ವಿವರಿಸಿದ. ಆ ನೂರಾಳು ಸೈನ್ಯದಲ್ಲಿ ಒಬ್ಬ ಬಾಕುಡನೂ, ಇಬ್ಬರು ಬೆಳ್ಚಡರೂ ಇದ್ದರು. ಮಿಕ್ಕವರು ಕನ್ನಡ ಮಾತನಾಡುವ ಗೌಡರು. ಕೆಲವರು ಮಲಯಾಳ ಮಾತನಾಡುವವರೂ ಇದ್ದರು. ಸೈನಿಕನಿಗೆ ಗುರುತು ಸಿಕ್ಕಿದ್ದು ನಾಯಕ ಬೀರಣ್ಣ ಬಂಟ ಹಾಗೂ ಅಚ್ಚಮ್ಮಾರ್ ಮಾಯಿಲ ಬೆಳ್ಚಡರದ್ದು ಮಾತ್ರ. ಅವರು ಹೊಳೆಗೆ ಇಳಿದು ಹೋದರು ಎಂದಾಗ ಮಂಜಣನಿಗೆ ಅರ್ಥವಾಯಿತು. ಅವರು ಹೋದುದು ತಮ್ಮ ಮಿತ್ತಬೈಲು  ಲೂಟಿ ಮಾಡಲು ಎಂಬುದು ಅವನಿಗೆ ತಿಳಿದುಹೋಯಿತು. ಮಂಜಣನ ಸೇನೆ ಮಂಜೇಶ್ವರದಲ್ಲಿರಬೇಕು ಎಂಬುದು ಬೀರಣ್ಣ ಬಂಟನ ಲೆಕ್ಕಾಚಾರ. ಹಾಗಾಗಿಯೇ ಮಿತ್ತಬೈಲು ಮನೆ ದೋಚುವ ಯೋಜನೆ ಹಾಕಿದ್ದನು.

ಮಂಜಣನ ಭಯ ನಿಜವಾಯಿತು. ಅವನು ನೂರು ಸೈನಿಕರನ್ನು ಹೊಳೆಗೆ ಇಳಿಸಿ, ನೇರ ಮಿತ್ತಬೈಲಿಗೆ ಧಾವಿಸುವಂತೆ ಹೇಳಿದ. ಅವನ ಲೆಕ್ಕದಲ್ಲಿ ಬೀರಣ್ಣ ದಾರಿಯಲ್ಲಿರುವ ಮನೆಗಳನ್ನು, ಮುನ್ನಿಪ್ಪಾಡಿಯ ಮಸೀದಿಯನ್ನು ದೋಚುತ್ತಿರಬೇಕು.

ಮಿತ್ತಬೈಲಿಗೆ ತಲುಪುವುದಕ್ಕೆ ಮೊದಲೇ ಅವರನ್ನು ಎದುರಿಸಬೇಕೆಂದ ಆತ ತನ್ನ ತುಪಾಕಿ ಹಿಡಿದು, ತನ್ನ ಐವತ್ತು ಜನ ಕುದುರೆ ಸವಾರರನ್ನು ಮೇಲಿನ ಗುಡ್ಡಕ್ಕೆ ಓಡಿಸಿದ. ಅಲ್ಲಿಗೆ ತಲುಪುವಾಗ ‘ಅಯ್ಯೋ ಅಯ್ಯೋ’ ಎಂಬ ಕಿರುಚಾಟ ಕೇಳುತ್ತಿತ್ತು. ಗುಡ್ಡೆಯಿಂದ ಅಂಗಳಕ್ಕೆ ಪಂಜು ಹಿಡಿದುಕೊಂಡು, ತುಪಾಕಿಯ ಶಬ್ದದ ಜೊತೆ ನುಗ್ಗುವ ಮಾಯಿಪ್ಪಾಡಿಯ ಸೇನೆಯನ್ನು ನೋಡಿ ಬೀರಣ್ಣನ ಪುಂಡರ ಪಡೆ ಓಡಲು ಪ್ರಾರಂಭಿಸಿತ್ತು. ಅಷ್ಟರಲ್ಲಿ ಬೆಟ್ಟುಗದ್ದೆಯಲ್ಲಿ ಒಂದೆರಡು ಹೆಣಗಳು ಬಿದ್ದಿದ್ದವು.



‘‘ಜೈ ದುರ್ಗೆ, ಹಿಡಿಯಿರಿ, ಒಬ್ಬನನ್ನೂ ಓಡಲು ಬಿಡಬೇಡಿ’’ ಎಂದು ಬೊಬ್ಬಿರಿಯುತ್ತಿದ್ದ ಮಂಜಣನ ಸ್ವರ ಕೇಳಿದಾಗ ಅಂಗಳದ ಬದಿಯಲ್ಲಿ ಕಿನ್ಯನನ ಜೊತೆ ಕತ್ತಿ ಯುದ್ಧ ನಡೆಸುತ್ತಿದ್ದ ಬೀರಣ್ಣ ಬಂಟ ‘ಹರ ಹರ ಮಹಾದೇವ, ಓಡಿ’ ಎನ್ನುತ್ತಾ ಎದುರಿನ ಬಾಕಿಮಾರು ಗದ್ದೆಗೆ ಹಾರಿ ಫಸಲಿನ ನಡುವೆ ಓಡಿದ. ಬೈಲಿನತ್ತ ನೋಡುವಾಗ ಮಂಜಣಾಳ್ವನ ನೂರಾಳಿನ ಸೈನ್ಯ ಪಂಜು ಹಿಡಿದುಕೊಂಡು ಐತನ ನಾಯತ್ವದಲ್ಲಿ ಮನೆಯತ್ತ ಬರುತ್ತಿತ್ತು. ಬೀರಣ್ಣನ ದಂಡು ಅಕಡಕತ್ತರಿಯಲ್ಲಿ ಸಿಲುಕಿತು. ಚಲ್ಲಾಪಿಲ್ಲಿಯಾಗಿ ಓಡಹತ್ತಿದ ದರೋಡೆಕೋರರ ಗುಂಪನ್ನು ಎದುರಿಗೆ ಸಿಕ್ಕಿದ ಐತನ ಸೇನೆ ಕೊಚ್ಚಿಹಾಕಲು ಪ್ರಾರಂಭಿಸಿದಾಗ, ಗದ್ದೆಯ ಕೆಸರಿನಲ್ಲಿ ಬಿದ್ದು ಓಡಲು ಸಾಧ್ಯವಾಗದೆ ‘ದಮ್ಮಯ್ಯ ಕೊಲ್ಲಬೇಡಿ’ ಎನ್ನುವ ಸ್ವರವೇ ದೊಡ್ಡದಾಗಿ ಕೇಳಿಬಂತು. ಬೀರಣ್ಣ ಬಂಟ ಮಾತ್ರ ಹೇಗೋ ತಪ್ಪಿಸಿಕೊಂಡು ಓಡಿಬಿಟ್ಟ. ಅವನು ಹಗಲಲ್ಲಿ ನೋಡಿದ ಹಾದಿಯಲ್ಲವೇ ಮಿತ್ತಬೈಲು!

ಬೈಲುಗದ್ದೆಯಲ್ಲಿ ಬಿದ್ದಿದ್ದ ದರೋಡೆಕೋರರರನ್ನು ಬೆಟ್ಟುಗದ್ದೆಗೆ ಎಳೆದು ತಂದ ಮಂಜಣ ಒಬ್ಬೊಬ್ಬನ ಮುಖವನ್ನೇ ಪಂಜಿನ ಬೆಳಕಿನಲ್ಲಿ ನೋಡಿದ. ಬೀರಣ್ಣ ಓಡಿದ್ದಾನೆ ಎಂಬುದು ಸ್ಪಷ್ಟವಾಯಿತು.

‘‘ನಿಮ್ಮ ಮಧ್ಯದಲ್ಲಿ ಮಾಯಿಲ ಬೆಳ್ಚಡ ಇದ್ದಾನೆಯೇ’’? ಎಂದು ಕೇಳಿದಾಗ ಯಾರೂ ಉತ್ತರಿಸಲಿಲ್ಲ. ಕೊನೆಗೂ ಕತ್ತಿ ತೋರಿಸಿ, ಜುಟ್ಟು ಹಿಡಿದು ಎತ್ತಿ ಗದರಿಸಿದಾಗ ‘‘ನಾನಲ್ಲ ಒಡೆಯಾ ಅವನು’’ ಎಂದು ಆತ ಬೊಬ್ಬೆ ಹಾಕಿದ. ಅಷ್ಟು ಹೇಳುವಾಗ ಕಂಬಳಿ ಹೊದ್ದು ಕುಳಿತಿದ್ದ ಮಾಯಿಲ, ಗಾಯಗೊಂಡ ಹುಲಿಯಂತೆ ಸೊಂಟದಲ್ಲಿದ್ದ ಕತ್ತಿಯನ್ನು ತೆಗೆದು ಮಂಜಣನ ಮೇಲೆ ಎರಗಲು ಯತ್ನಿಸಿದ. ಮಂಜಣನ ಕತ್ತಿ ಅವನ ಕತ್ತನ್ನು ತುಂಡರಿಸಿ ರುಂಡ-ಮುಂಡಗಳನ್ನು ಬೇರೆ ಮಾಡಿತು. ಕಾಲಡಿಗೆ ಬಿದ್ದ ರುಂಡವನ್ನು ‘ಜೈ ದುರ್ಗೆ’ ಎನ್ನುತ್ತಾ ಚೆಂಡಿನಂತೆ ಒದ್ದಾಗ ಹತ್ತಿರದ ತೆಂಗಿನ ಬುಡ್ಡೆಗೆ ತಾಗಿ ಕೆಳಗಿನ ಗದ್ದೆಗೆ ಬಿತ್ತು. ಮಂಜಣನಿಗೆ ಬೀರಣ್ಣ ತಪ್ಪಿಸಿಕೊಂಡದ್ದು ನಿರಾಶೆ ತಂದಿತ್ತು. ಎಲ್ಲರನ್ನೂ ಕಟ್ಟಿಹಾಕಿ ಪೈವಳಿಕೆಯ ಸೆರೆಮನೆಗೆ ಹಾಕುವಂತೆ ತಮ್ಮಂದಿರಲ್ಲಿ ಹೇಳಿ ಪದವಿಗೆ ಕುದುರೆಯನ್ನು ಓಡಿಸಿದ. ಮನೆಯಂಗಳದಲ್ಲಿ ಕುಳಿತು ನೀರು ಕುಡಿಯುವಷ್ಟೂ ಸಮಯವಿಲ್ಲ. ಓಡಿಹೋದ ಬೀರಣ್ಣನನ್ನು ಹಿಡಿಯದಿದ್ದರೆ ಅವನು ಗಾಯಗೊಂಡ ಹುಲಿಯಂತೆ ಸಿಕ್ಕಿದಲ್ಲೆಲ್ಲಾ ಬಾಯಿ ಹಾಕಬಹುದು. ಕೋಳ್ಯೂರು, ವರ್ಕಾಡಿ ದೇವಸ್ಥಾನಗಳನ್ನು ಕೊಳ್ಳೆ ಹೊಡೆಯಲೂ ಬಹುದೆಂದು ಮಂಜಣ ತನ್ನ ದಂಡನ್ನು ವರ್ಕಾಡಿಯತ್ತ ಓಡಿಸಿದ.

ಮಿತ್ತಬೈಲಿನಿಂದ ಓಡಿದ ಬೀರಣ್ಣ, ಕನ್ಯಾನಕ್ಕೆ ಬಂದು ದಂಡನ್ನು ಮಂಗಳೂರಿನ ಕಡೆಗೆ ತಿರುಗಿಸಿದ. ಮುನ್ನೂರು ಸೈನಿಕರು ಮಂಗಳೂರಿಗೆ ಹೊರಟರು.

ಬೀರಣ್ಣ ಬಂಟ ಕಲ್ಯಾಣಪ್ಪನಿಗೆ ಸುಬ್ರಾಯ ಶಾನುಭೋಗರನ್ನು ಹಿಡಿದುಕೊಡುತ್ತೇನೆ ಎಂದು ಹೇಳಿ ಹೊರಟವ, ಅದನ್ನು ಬಿಟ್ಟು ಮಿತ್ತಬೈಲಿಗೆ ಹೋಗಿ ಕೆಲವು ಸೈನಿಕರನ್ನು ಕಳೆದುಕೊಂಡ. ಅದಕ್ಕಿಂತಲೂ, ಹೇಡಿಯಂತೆ ಓಡಿಬಂದದ್ದು ಅವಮಾನವಾಗಿತ್ತು. ಅವನಿಗೆ

ಕಲ್ಯಾಣಪ್ಪನ ಭಯವೂ ಪ್ರಾರಂಭವಾಯಿತು. ಅವನ ಅಪ್ಪಣೆಗೆ ತಪ್ಪಿದರೆ ತಲೆ ತೆಗೆಯುವ ಜಾತಿ ಅವನು.

ಬೀರಣ್ಣನ ಸೈನಿಕರು ಕನ್ಯಾನದಿಂದ ಉಳಿಯತ್ತಡ್ಕ ತಲುಪಿ ಒಟ್ಟಾದರು. ಅವರು ಸುಬ್ರಾಯ ಶಾನುಭೋಗರ ಮನೆಗೆ ದಾಳಿ ಮಾಡಲು ತಯಾರಿ ಮಾಡುತ್ತಿರುವುದನ್ನು ಶಾನುಭೋಗರ ಬೇಹುಗಾರರು ಬಂದು ತಿಳಿಸಿದರು. ಸೈನ್ಯವನ್ನು ಕುಂಬಳೆಯಲ್ಲಿ ಬಿಟ್ಟು ಬಂದ ಶಾನುಭೋಗರು, ಬೆಳ್ಚಡರ ಬಿಲ್ಲಾಳುಗಳ ದಂಡಿಗೆ ಜನ ಕಳುಹಿಸಿದರು. ಜೊತೆಗಿದ್ದ ಹತ್ತು ಮಂದಿ ಸೈನಿಕರನ್ನೂ, ಹತ್ತು ಮಂದಿ ಒಕ್ಕಲಿನ ಯುವಕರನ್ನೂ ಸೇರಿಸಿಕೊಂಡು ಉಳಿಯತ್ತಡ್ಕ ಪದವಿನಲ್ಲಿ ಬೀರಣ್ಣನ ಸೇನೆಯನ್ನು ಎದುರಿಸಲು ತಯಾರಾದರು.

ಇಡೀ ಪದವಿನಲ್ಲಿ ಹುಲ್ಲಿನ ಮತ್ತು ಮುಳಿಹುಲ್ಲಿನ ಕಟ್ಟುಗಳನ್ನು ರಾಶಿ ಹಾಕಿ, ಮಧ್ಯೆ ಸಿಡಿಮದ್ದು ಇಟ್ಟು ಬೆಂಕಿ ಕೊಡಲು ತಯಾರಿ ನಡೆಸಿದರು. ಬೀರಣ್ಣ ಬಂಟನ ಸೇನೆ ಉಳಿಯತ್ತಡ್ಕ ಪದವಿನ ಕೊನೆಯಿಂದ ಶಾನುಭೋಗರ ಮುಳಿಹುಲ್ಲಿನ ಗುಡ್ಡೆಗೆ ತಲುಪುವಾಗ ಒಕ್ಕಲಿನ ಯುವಕರು ಮುಳಿಹುಲ್ಲಿನ ರಾಶಿಗೆ ಬೆಂಕಿ ಕೊಟ್ಟರು. ಬೀರಣ್ಣನ ಸೇನೆ ಮುಳಿಹುಲ್ಲಿನ ರಾಶಿಯಲ್ಲಿದ್ದ ಸಿಡಿಮದ್ದಿನ ಶಬ್ದಕ್ಕೆ ಚಲ್ಲಾಪಿಲ್ಲಿಯಾಯಿತು. ಉಳಿಯತ್ತಡ್ಕ ಪದವು ಇಡೀ ಹೊತ್ತಿಕೊಂಡು, ಪುಂಡರ ಸೇನೆ ಓಡುತ್ತಿರುವಾಗ ಒಕ್ಕಲಿನವರು ಹಾಗೂ ದಂಡಿನವರು ಕಾಯಿಸಿಟ್ಟ ಕೊಬ್ಬರಿ ಎಣ್ಣೆಯನ್ನು ಪುಂಡರ ಮೇಲೆ ಎರಚಿದರು. ಬೀರಣ್ಣ ಬಂಟನ ಪುಂಡು ಸೇನೆಗೆ ಏನಾಗುತ್ತಿದೆ ಎಂದು ತಿಳಿಯುವ ಮೊದಲೇ ಸುಬ್ರಾಯ ಶಾನುಭೋಗರ ಕುದುರೆ ಪದವು ಇಡೀ ತಿರುಗಲು ಪ್ರಾರಂಭಿಸಿತ್ತು. ಅವರ ಖಡ್ಗ ಮೃತ್ಯುವಿನ ನಾಲಗೆಯಂತೆ ಎದುರು ಸಿಕ್ಕವರನ್ನೆಲ್ಲಾ ಬಲಿ ತೆಗೆದುಕೊಂಡಿತು. ಅಷ್ಟಾಗುವಾಗ ಕುಂಬಳೆಯ ಗರಡಿಯ ಬಿಲ್ಲುಗಾರರ ಸೇನೆ ಬಂದು ತಲುಪಿತು.

ಸುಬ್ರಾಯ ಶಾನುಭೋಗರ ಅಂದು ರಾತ್ರಿಯ ಯುದ್ಧ ದಂತಕತೆಯಾಗಿ ಹೋಯಿತು. ಅವರ ಕತ್ತಿ ಇಪ್ಪತ್ತು, ಮೂವತ್ತು ಜನರನ್ನು ಬಲಿ ತೆಗೆದುಕೊಂಡಿರಬಹುದು. ಮುನ್ನೂರಾಳು ಸೈನ್ಯ ಬಿಟ್ಟು ಓಡಿದವರು ಬದುಕುಳಿದರು. ಮಿಕ್ಕವರು ಶಾನುಭೋಗರ ಕತ್ತಿಗೂ, ಗರಡಿಯ ಯುವಕರ ಬಾಣಗಳಿಗೂ ಬಲಿಯಾದರು. ಯುದ್ಧ ಮುಗಿಯುವಾಗ ಬೀರಣ್ಣ ಬಂಟ ಓಡಿಹೋಗಿದ್ದಾನೆಂದು ತಿಳಿಯಿತು. ಬೆಳಗ್ಗೆ ಬಂದ ಬೇಹುಗಾರರು ಬೀರಣ್ಣ ಮಂಜೇಶ್ವರ ಕಡವಿನ ಬಳಿ ಕಾಣಸಿಕ್ಕಿದುದನ್ನು ತಿಳಿಸಿದರು. ಮಧ್ಯಾಹ್ನವಾಗುವಾಗ ಬಂದ ಬೇಹುಗಾರರು ಆತ ಮಂಜೇಶ್ವರದ ಕಡಲ ಬದಿಯಲ್ಲಿ ಬೊಬ್ಬರ್ಯ ಕಲ್ಲಿನ ಬಳಿ ಅಡಗಿ ಕುಳಿತ ಸುದ್ದಿ ಕೊಟ್ಟರು. ಬೀರಣ್ಣ ಕುಂಬಳೆಗೆ ಹೋಗಿ ಸುಬ್ರಾಯ ಹೆಗ್ಡೆಯನ್ನು ಹುಡುಕಿ ಅವನೊಂದಿಗೆ ಸೇರಲು ಪ್ರಯತ್ನಿಸಬಹುದೆಂದು ನೆನೆದು ಶಾನುಭೋಗರಿಗೆ ನಿರಾಶೆ ಯಾಯಿತು. ಇಬ್ಬರನ್ನೂ ಒಂದೇ ದಿಕ್ಕಿನಲ್ಲಿ ಹಿಡಿಯಬೇಕೆಂದು ತಯಾರಿ ಮಾಡಿದವರು ಸುದ್ದಿಯನ್ನು ಮಂಜಣಾಳ್ವನಿಗೆ ತಲುಪಿಸಿದರು.

ಅಲ್ಲಿ ಸುಬ್ರಾಯ ಹೆಗ್ಡೆಯ ಕತೆ ಬೇರೆಯೇ ಇತ್ತು.



# ೬

# ಗುಲ್ಲು

ಸುಬ್ರಾಯ ಹೆಗ್ಡೆಯ ಕಥೆ ದೇಶಪ್ರೇಮದ ಕಥೆ. ಗಲಭೆ ಎಬ್ಬಿಸಿದರೂ ಅದು ದೇಶಕ್ಕೆ ಬೇಕಾಗಿ. ಆತ ಘಟಿಂಗನಲ್ಲ. ಅವನಿಗೆ ಫರಂಗಿಯವರ ಸೇನೆಯನ್ನು ಕಂಡರೆ ಆಗುವುದಿಲ್ಲ. ಆ ಕೆಂಪು ಮೂತಿಯವರು ಎಲ್ಲಿಂದಲೋ ಬಂದು ತನ್ನ ದೇಶವನ್ನು ಆಳುವುದನ್ನು ನೋಡುವಾಗ ಆತನ ಮೈ ಉರಿಯುತ್ತಿತ್ತು. ಕಲ್ಯಾಣಪ್ಪನ ದಂಡಿಗೆ ಸೇರಲು ಸೈನಿಕರನ್ನು ಒಟ್ಟು ಮಾಡಿದರೂ ಲೂಟಿ, ಅತ್ಯಾಚಾರ ಮಾಡುವುದು, ಮನೆ, ಗದ್ದೆಗಳಿಗೆ ಬೆಂಕಿ ಕೊಡುವುದಕ್ಕೆ ಆತ ವಿರೋಧಿ.

ತೆಂಕುಬಳೆಯಲ್ಲಿ ಸುಬ್ರಾಯ ಶಾನುಭೋಗರ ತಂತ್ರ ಫಲಿಸಿತು. ಸುಬ್ರಾಯ ಶಾನುಭೋಗರ ಸೈನ್ಯದ ನಾಲ್ಕು ಜನ ಪ್ರಾರಂಭಿಸಿದ್ದ ಕೆಲಸವನ್ನು ಹೆಗ್ಡೆಯ ಪುಂಡರ ದಂಡು ಮುಂದುವರಿಸಿತು. ಹೆಗ್ಡೆಯ ಸೇನೆಯವರು ಕುಂಬಳೆ ಪೇಟೆಯಲ್ಲಿ ಲೂಟಿ ಆರಂಭಿಸಿದರು. ಕುಂಬಳೆಯಲ್ಲಿ ಕೊಂಕಣಿಗರ ಮನೆಗೆ ನುಗ್ಗಿ ಹೆಣ್ಣುಮಕ್ಕಳ ಮೇಲೆರಗಿದಾಗ ದೊಡ್ಡ ರಾಯಪ್ಪನ ದಂಡು ಬಂದುದು ನೋಡಿ ಓಡಿದರು. ಮಾಯಿಪ್ಪಾಡಿಗೆ ಬಂದ ತನ್ನ

ಸೈನಿಕರನ್ನು ಸುಬ್ರಾಯ ಶಾನುಭೋಗರು ಹತ್ತು ದಿನಗಳ ಮಟ್ಟಿಗೆ ತಲಚೇರಿಗೆ ಕಳುಹಿಸಿದರು. ಅವರಿಗೆ ಜನರು ತನ್ನ ಸೈನ್ಯದಲ್ಲಿದ್ದವರನ್ನು ಗುರುತು ಹಿಡಿಯಬಾರದಿತ್ತು. ಅಂದಿನ ರಾತ್ರಿಯಲ್ಲಿ ನಡೆದ ಗಲಾಟೆಯ ಸತ್ಯ ಸಂಗತಿಯನ್ನು ಹೇಳಲು ಒಬ್ಬ ಸೈನಿಕನೂ ಊರಲ್ಲಿರಲಿಲ್ಲ.

ಮರುದಿನ ಬೆಳಗ್ಗೆ ತೆಂಕುಂಬಳೆಯ ಜನ ಒಟ್ಟಾಗಿ ರಾಮಂತರಸರ ಸನ್ನಿಧಾನಕ್ಕೆ ಬಂದು ಚಾವಡಿಯಲ್ಲಿ, ತಮ್ಮನ್ನು ಉಳಿಸಬೇಕೆಂದು ಬೇಡಿಕೊಂಡರು. ಅವರ ಮುಂದಾಳ್ತನವನ್ನು ಕೆಂಗಣ್ಣ ನಾಯಕನೂ, ದೊಡ್ಡ ರಾಯಪ್ಪ ನಾಯಕನೂ ವಹಿಸಿದ್ದರು. ದೂರು ಹೇಳುವಾಗ ಪಕ್ಕದಲ್ಲಿದ್ದ ಸುಬ್ರಾಯ ಶಾನುಭೋಗರು ಕೇಳಿದರು,

''ಸುಬ್ರಾಯ ಹೆಗ್ಡೆಯ ಸೈನಿಕರು ನಮ್ಮ ರಾಜ್ಯದ ಸ್ವಾತಂತ್ರ್ಯಕ್ಕೆ ಬೇಕಾಗಿ ಹೋರಾಟ ಮಾಡಲು ಹೊರಟವರು. ಅವರ ವಿರುದ್ಧ ಹೋರಾಟ ಮಾಡಬಾರದೆಂದು ಅರಸರ ಸೇನೆ ನಿಶ್ಚಯ ಮಾಡಿದೆ. ಅವರ ಜೊತೆ ನಾವು ಯಾಕೆ ಯುದ್ಧ ಮಾಡುವುದು? ಮಾಡುವುದು ಸರಿಯೇ? ನೀವೇ ಹೇಳಿ''.

''ಅಯ್ಯೋ ಸ್ವಾಮಿ, ಅವರೆಂತಹ ಸ್ವಾತಂತ್ರ್ಯ ಹೋರಾಟ ಮಾಡುವುದು. ನಮ್ಮ ಮನೆ, ಪೇಟೆಯನ್ನು ಲೂಟಿ ಮಾಡಿದವರು ಅವರೆಂತಹ ಸ್ವಾತಂತ್ರ್ಯ ಯೋಧರು ಸ್ವಾಮೀ? ನಿನ್ನೆ ಮನೆಗಳಿಗೆ ನುಗ್ಗಿ ಹೆಣ್ಣುಮಕ್ಕಳನ್ನು ಅತ್ಯಾಚಾರ ಮಾಡುವಾಗ ಮಾಯಿಪ್ಪಾಡಿಯ ಸೇನೆ ಇಲ್ಲದಿರುತ್ತಿದ್ದರೆ ಪೇಟೆ ಇಡೀ ಹೊತ್ತಿ ಉರಿಯುತ್ತಿತ್ತು ಸ್ವಾಮೀ. ಅವರನ್ನು ಸದೆಬಡಿಯ ದಿದ್ದರೆ ಪೇಟೆ ಉಳಿಯುವುದಿಲ್ಲ, ಹೆಣ್ಣು ಹೆಂಗಸರ ಮಾನ ಮರ್ಯಾದೆ ಉಳಿಯಲಿಕ್ಕಿಲ್ಲ ಸ್ವಾಮೀ. ನೀವೇ ನಮ್ಮನ್ನು ಕಾಪಾಡಬೇಕು ಸ್ವಾಮೀ''.

ಜನ ಮಂಡಿಯೂರಿ ಅರಸನಲ್ಲಿ ಬೇಡಿಕೊಂಡಾಗ ಅರಸರು ಶಾನುಭೋಗರ ಮುಖ ನೋಡಿ ಹೇಳಿದರು,

''ಆಗಲಿ, ಶಾನುಭೋಗರ ನಾಯಕತ್ವದಲ್ಲಿ ಸೇನೆ ಕಳುಹಿಸಿ ಈ ಗಲಭೆಯನ್ನು ನಿಲ್ಲಿಸುತ್ತೇನೆ. ಆದರೆ ನಮಗೆ ಪೇಟೆಯವರಾದ ನಿಮ್ಮ ಸಹಾಯಬೇಕು. ಸುಂಕ ವಸೂಲಿಗೆ ಬಂದವರನ್ನು ಪೇಟೆಯವರು ಓಡಿಸುತ್ತಿದ್ದೀರಂತೆ. ನಮ್ಮ ಭಂಡಾರವೂ ಖಾಲಿಯಾಗಿದೆ. ನೀವು ವ್ಯಾಪಾರಿಗಳು, ಸುಂಕವೇನಿದ್ದರೂ ಅದು ಕಲ್ಯಾಣಪ್ಪನ ದಂಡಿಗೆ, ಫರಂಗಿ ಸೇನೆಯ ಅಡಿಯಾಳಾದ ಕುಂಬಳೆಯರಸರಿಗಲ್ಲವೆಂದು ಹೇಳಿ ಸುಂಕದವರನ್ನು ಓಡಿಸಿದ್ದೀರಂತೆ. ರಾಯಪ್ಪ ನಾಯಕರೇ, ಸುಂಕ ಸ್ವಲ್ಪ ಮೊದಲೇ ಕೊಡಿಸಿ. ಯುದ್ಧಕ್ಕಾಗಿ ಸ್ವಲ್ಪ ಹಣ ಒಟ್ಟು ಮಾಡಿ ಕಳುಹಿಸಿ. ದಂಡಿಗೆ ಖರ್ಚು ಉಂಟಲ್ಲ''.

''ಖಾವಂದರೇ, ಈ ವಿಷಯವನ್ನು ನಮಗೆ ಬಿಡಿ. ಸಂಜೆಯೊಳಗೆ ಇಡೀ ಪೇಟೆ ಒಂದು ವರ್ಷದ ಕಂದಾಯ, ಸುಂಕವನ್ನು ಭಂಡಾರಕ್ಕೆ ತಲುಪಿಸುತ್ತದೆ. ಅದಲ್ಲದೆ ಪೇಟೆ ಕಾಯುವ ಸೈನಿಕರ ಸಂಬಳದ ಖರ್ಚನ್ನು ಪೇಟೆಯವರೇ ನೋಡಿಕೊಳ್ಳುತ್ತೇವೆ''.

ದೊಡ್ಡ ರಾಯಪ್ಪ ನಾಯಕ ಪೇಟೆಯವರ ಪರವಾಗಿ ಹೇಳಿದಾಗ ರಾಮಂತರಸರು



ಸುಬ್ರಾಯ ಶಾನುಭೋಗರ ಮುಖ ನೋಡಿ ಕೇಳಿದರು,

''ಶಾನುಭೋಗರೇ, ಪೇಟೆಯ ಕಾವಲಿಗೆ ಐನೂರಾಳಿನ ದಂಡನ್ನು ಕಳುಹಿಸಲಾಗದೇ?''

''ಖಾವಂದರು ಅಪ್ಪಣೆ ಮಾಡಿದಿರಾದರೆ ದಂಡನ್ನು ಈಗಲೇ ಪೇಟೆಗೆ ಕಳುಹಿಸುತ್ತೇನೆ. ದಂಗೆ, ಲೂಟಿ ಆಗದ ಹಾಗೆ ನೋಡಿಕೊಳ್ಳುತ್ತೇನೆ. ಪೇಟೆಯವರೊಂದು ಉಪಕಾರ ಮಾಡಬೇಕು. ಅವರು ಈ ಗಲಭೆಯಲ್ಲಿ ಅರಸರ ಜೊತೆಗಿದ್ದಾರೆಂದು ಎಲ್ಲರಿಗೂ ಹೇಳಬೇಕು. ಯುವಕರನ್ನು ವಿರೋಧಿ ಗುಂಪಿನ ಜೊತೆ ಸೇರಲು ಬಿಡಬಾರದು. ಅವರು ಸುಬ್ರಾಯ ಹೆಗ್ಡೆಯ ಜೊತೆ ಸೇರಿ ಹಾಳಾಗದಂತೆ ನೋಡಿಕೊಳ್ಳಬೇಕು''.

ಸುಬ್ರಾಯ ಶಾನುಭೋಗರ ಐನೂರಾಳಿನ ದಂಡು ಪೇಟೆಯ ಕಾವಲಿಗೆ ಹೊರಟಿತು. ಐನೂರಾಳು ಕಣಿಪುರದ ಸುತ್ತಮುತ್ತ ಸೇರಿಕೊಂಡು ಕಡವಿನ ಬಳಿ ಕಾಯ ತೊಡಗಿತು. ಶಾನುಭೋಗರು ಕಾಂತಪ್ಪನ ಕುದುರೆಗಳ ದಂಡಿನೊಂದಿಗೆ ಸುಬ್ರಾಯ ಹೆಗ್ಡೆಯ ದಂಡನ್ನು ಸುತ್ತುವರಿದರು. ಕಾಂತಪ್ಪನ ಧೈರ್ಯ - ಪರಾಕ್ರಮವನ್ನು ಶಾನುಭೋಗರು ಮೆಚ್ಚಿಕೊಂಡರು. ಸುಬ್ರಾಯ ಹೆಗ್ಡೆಯ ಪುಂಡರ ಸೇನೆಯೂ, ಕೆಲವು ಕುಂಬಳೆ ಸೈನಿಕರೂ ಕಡವಿನ ಬಳಿಯ ತೆಂಗಿನ ತೋಟದಲ್ಲಿ ಎದುರಾದರು. ಕೆಲವು ಪುಂಡರು ಓಡಿದರು. ಸುಬ್ರಾಯ ಹೆಗ್ಡೆ ಕತ್ತಿಕಾಳಗದಲ್ಲಿ ತನ್ನನ್ನು ಮೀರಿಸುವವರಿಲ್ಲವೆಂಬುದನ್ನು ತೋರಿಸಿಕೊಟ್ಟ. ಅವನ ಸುತ್ತಮುತ್ತ ಹಗಲಿಗೆ ಹಗಲು ಕೊಟ್ಟು ಹತ್ತಿಪ್ಪತ್ತು ಸೈನಿಕರು ಮಾತ್ರ ಇದ್ದರು. ಶಾನುಭೋಗರು ಕಣಿಪುರ ಗೋಪಾಲಕೃಷ್ಣ ದೇವಸ್ಥಾನದ ಕಟ್ಟೆಯಲ್ಲಿ ಕುಳಿತುಕೊಂಡು ಯುದ್ಧ ನೋಡುತ್ತಿದ್ದವರು ಕಾಳಗದ ಕಣಕ್ಕೆ ಬಂದರು. ಸುಬ್ರಾಯ ಹೆಗ್ಡೆಯಲ್ಲಿ ಕತ್ತಿ ಕೆಳಗೆ ಹಾಕಿ ಯುದ್ಧ ನಿಲ್ಲಿಸುವಂತೆ ಹೇಳಿದರು.

ಯುದ್ಧ ನಿಂತಿತು. ಶಾನುಭೋಗರು ಆಲದ ಮರದ ಕಟ್ಟೆಯಲ್ಲಿ ಕುಳಿತುಕೊಂಡು ಸುಬ್ರಾಯ ಹೆಗ್ಡೆಯನ್ನು ಕರೆಸಿ ವಿಚಾರಣೆ ನಡೆಸಿದರು.

ಹೆಗ್ಡೆ ಬಂದು ತನ್ನ ಗುರುಗಳೂ, ದಂಡನಾಯಕರೂ ಆಗಿದ್ದ ಸುಬ್ರಾಯ ಶಾನುಭೋಗರ ಮುಂದೆ ತಲೆ ತಗ್ಗಿಸಿ ನಿಂತ. ಹತ್ತಿರ ಬಂದಾಗ ಕಾಲಿಗೆ ಬಿದ್ದ ಸುಬ್ರಾಯ ಹೆಗ್ಡೆಯನ್ನು ಶಾನುಭೋಗರು ಎತ್ತಿ ನಿಲ್ಲಿಸಿ ತಲೆ ಸವರಿದರು. ಸುಬ್ರಾಯ ಹೆಗ್ಡೆ ಶಾನುಭೋಗ ರಿಗೆ ಮಗನಂತಿರುವ ಶಿಷ್ಯ. ಪರಾಕ್ರಮಿ, ಧೈರ್ಯಶಾಲಿ. ಶಾನುಭೋಗರಿಗೆ ಕತ್ತಿ ಯುದ್ಧ ದಲ್ಲಾಗಲೀ, ತುಪಾಕಿಯ ಗುರಿಯಲ್ಲಾಗಲೀ ಹೆಗ್ಡೆಯನ್ನು ಸರಿಗಟ್ಟುವ ವೀರ ಸಿಕ್ಕಿರಲಿಲ್ಲ. ಮಂಜಣಾಳ್ವ ಬಂದ ಮೇಲೆಯೇ ಸುಬ್ರಾಯ ಹೆಗ್ಡೆಗೆ ಸರಿಗಟ್ಟುವ ವೀರನೊಬ್ಬ ಅವರಿಗೆ ಕಾಣಲು ಸಿಕ್ಕಿದುದು. ಅವರ ಪ್ರೀತಿಯಲ್ಲಿ ಪಾಲಾದಾಗಲೇ ಸುಬ್ರಾಯ ಹೆಗ್ಡೆಯ ಅಸಮಾಧಾನ ಬಲಗೊಂಡಿತ್ತು. ಶಾನುಭೋಗರ ಅಭಿಪ್ರಾಯದಲ್ಲಿ ಅವನು ಸಾರಾಯಿ ಕುಡಿಯಲು ಪ್ರಾರಂಭಿಸಿದ ನಂತರವೇ ಹಾಳಾದುದು. ಯುದ್ಧಭೂಮಿಯಲ್ಲಲ್ಲದೆ ಬೇರೆ ದಿನನಿತ್ಯದ ವ್ಯವಹಾರಗಳಲ್ಲಿ ಒಂದು ಚಿಕ್ಕ ಮಗುವನ್ನು ಕೂಡಾ ಎದುರಿಸುವ ಧೈರ್ಯ

ವಿಲ್ಲದವ ಸುಬ್ರಾಯ ಹೆಗ್ಡೆ. ಅವನಷ್ಟು ಮೃದು ಸ್ವಭಾವದ ಸೈನಿಕನೇ ಇರಲಿಲ್ಲ. ಸೈನಿಕರ ಲೂಟಿ, ದಂಗೆ ಅವನ ಬಳಿ ಸುಳಿಯದು. ಹೆಣ್ಣು ಮಕ್ಕಳ ಅತ್ಯಾಚಾರ ಮಾಡುವುದು ಬಿಡಿ, ಮೆಚ್ಚಿ ಬಂದವರನ್ನು ಕೂಡಾ ತಲೆ ಎತ್ತಿ ನೋಡಿದವನಲ್ಲ ಅವನು. ಹಾಗಾಗಿಯೇ ಶಾನುಭೋಗರು, ಗಲಭೆ ಎಬ್ಬಿಸಿ ಬಂದು ಎದುರು ನಿಂತಿದ್ದರೂ ಪ್ರೀತಿಯಿಂದ ಅವನ ತಲೆ ಸವರಿದುದು.

"ಏನು ಸುಬ್ರಾಯ, ಯಾವ ಭೂತ ನಿನ್ನ ತಲೆಗೆ ಹೊಕ್ಕಿದೆ. ನೀನು ನನಗೂ, ಕುಂಬಳೆಯರಸರಿಗೂ ಎರಡು ಬಗೆದು ಎದುರು ನಿಲ್ಲಲು ಕಾರಣ ಏನೆಂದು ಹೇಳುತ್ತಿಯಾ? ಈ ಲೂಟಿ, ದಂಗೆ, ಅತ್ಯಾಚಾರ ಮಾಡುವುದನ್ನೇ ನಾನು ನಿನಗೆ ಕಲಿಸಿದುದು?"

"ಅಯ್ಯೋ ಸ್ವಾಮಿ! ನಿಮಗೆ ನನ್ನ ಬಗ್ಗೆ ಗೊತ್ತಿದೆ. ಈ ಸೈನಿಕರ ದರೋಡೆಯನ್ನು ನಾನೆಷ್ಟು ವಿರೋಧಿಸುತ್ತೇನೆಂದು ನಿಮಗೇ ತಿಳಿದಿದೆ. ಲೂಟಿ, ಅತ್ಯಾಚಾರಗಳನ್ನು ಯಾರೋ ನನ್ನ ಹೆಸರಲ್ಲಿ ಮಾಡಿ ಓಡಿದ್ದಾರೆ. ಈ ಸುಬ್ರಾಯ ಹೆಗ್ಡೆ ಕತ್ತಿಯನ್ನು ಯುದ್ಧಭೂಮಿಯಲ್ಲಲ್ಲದೆ ಬೇರೆಲ್ಲಿಯೂ ಉಪಯೋಗ ಮಾಡಿದವನಲ್ಲವೆಂದು ನಿಮಗೇ ತಿಳಿದಿದೆ. ದಂಡು ಕಟ್ಟಿ ದಂಗೆ ಎಬ್ಬಿಸಿದವರಲ್ಲಿ ನಾನಿದ್ದೇನೆಂದು ಒಪ್ಪುತ್ತೇನೆ. ನಿಮಗೆ ಗೊತ್ತಿದೆ, ಈ ಅಧರ್ಮೀಯ ಇಂಗ್ಲಿಷರು ನಮ್ಮ ಜನರನ್ನು ಗುಲಾಮರನ್ನಾಗಿ ಮಾಡಿಕೊಂಡು ನಮ್ಮ ರಾಜ್ಯವನ್ನು ಯಾಕೆ ಆಳಬೇಕು? ಅವರಿಗೆ ಯಾಕೆ ಕೊಡಬೇಕು ನಮ್ಮ ರಾಜ್ಯವನ್ನು?"

ಸುಬ್ರಾಯ ಹೆಗ್ಡೆ ಇಷ್ಟು ಹೇಳುವಾಗ ಶಾನುಭೋಗರು ಕೇಳಿದರು, "ಮತ್ತೆ ಬೀರಣ್ಣ ಬಂಟನೊಂದಿಗೆ ಮಸಲತ್ತು ಮಾಡಿ, ಲೂಟಿ ಮಾಡುವಂತೆ ಹೇಳಿ, ಅವನ ಸೈನಿಕರ ಜತೆ ಸೇರಿ ಹೆಣ್ಣು ಮಕ್ಕಳನ್ನು ಅತ್ಯಾಚಾರ ಮಾಡಿ ಹೊತ್ತುಕೊಂಡು ಹೋಗಿದ್ದೀರೆಂದು ಬಹಳಷ್ಟು ದೂರುಗಳು ಬರುತ್ತಿವೆಯಲ್ಲಾ ಹೆಗ್ಡೇ".

"ಇಲ್ಲ ಸ್ವಾಮಿ! ಈ ಕಣಿಪುರದ ದೇವರು ಗೋಪಾಲಕೃಷ್ಣನ ಮೇಲೆ ಆಣೆ, ಬಸದಿಯ ತೀರ್ಥಂಕರನ ಮೇಲೆ ಆಣೆ, ನನ್ನನ್ನು ಹೆತ್ತ ಪದ್ಮಮ್ಮನ ಮೇಲಾಣೆ, ನಾನು ಈ ಲೂಟಿ, ದಂಗೆ, ಅತ್ಯಾಚಾರಗಳಿಗೆ ಅವಕಾಶ ನೀಡಿಲ್ಲ. ಇದು ಆ ದುಷ್ಟ ಬೀರಣ್ಣ ಬಂಟನ ಕೆಲಸವಾಗಿರಬೇಕು. ನನ್ನ ಸೈನ್ಯದ ಒಬ್ಬೊಬ್ಬ ಸೈನಿಕನನ್ನೂ ಕರೆದು ಕೇಳಿ, ವಿಚಾರಿಸಿ. ಅವರು ಯಾರಾದರೂ ಇದನ್ನು ಮಾಡಿರುವವರಾದರೆ ನನ್ನ ತಲೆ ತೆಗೆಯಿರಿ."

"ಆಗಲಿ ಈಗ ನಿನ್ನನ್ನು ಏನು ಮಾಡುವುದು ಹೇಳು?"

"ಅಯ್ಯಾ, ನೀವು ಕೊಡುವ ಯಾವುದೇ ಶಿಕ್ಷೆಗೂ ನಾನು ತಲೆ ಕೊಡಲು ಸಿದ್ಧ. ಆದರೆ ನಾನು ಮಾಡದ ತಪ್ಪಿಗೆ ನನ್ನ ತಲೆ ಕೇಳಬೇಡಿ."

ಸುಬ್ರಾಯ ಶಾನುಭೋಗರು ಬಹಳ ಹೊತ್ತು ಯೋಚಿಸಿ ಕಾಂತಪ್ಪನನ್ನು ಕರೆದು ಗಾಯಗೊಳ್ಳದೆ ಇದ್ದ ಹೆಗ್ಡೆಯ ಐವತ್ತು ಸೈನಿಕರನ್ನೂ, ಅವನನ್ನೂ ಸೀರೆ ಹೊಳೆ ಬದಿಯಲ್ಲಿದ್ದ ಒಕ್ಕಲಿನವರ ಮನೆಗಳಲ್ಲೂ, ತೆಂಗಿನಕಾಯಿ ಕೊಟ್ಟಿಗೆಯಲ್ಲೂ ಕೂಡಿ ಹಾಕಿ ಕಾವಲಿಗೆ ಜನ ನಿಲ್ಲಿಸುವಂತೆ ಹೇಳಿದರು. ಅಲ್ಲಿಗೆ ತೆಂಕುಂಬಳೆಯ ಗಲಭೆ ಮುಗಿಯಿತು.



ಬೇಹು ಚಾವಡಿಗೆ ಸೇನೆಯ ಬೇರೆ ಬೇರೆ ಕಡೆಯಿಂದ ಸುದ್ದಿ ಬಂತು. ಮಂಜೇಶ್ವರ, ಮಿತ್ತಬೈಲಿನ ಘರ್ಷಣೆ, ಆನೆಕಲ್ಲಿನ ಕೊಲೆ, ಲೂಟಿ, ಅಲ್ಲಿಂದ ಓಡಿದ ಬೀರಣ್ಣ ಕನ್ಯಾನಕ್ಕೆ ಬಂದ ಸುದ್ದಿ, ಉಳಿಯತ್ತಡ್ಕದ ಯುದ್ಧದಲ್ಲೂ ಬೀರಣ್ಣ ಬಂಟನೇ ನಾಯಕ, ಅಲ್ಲಿಂದ ಓಡಿದ ಬೀರಣ್ಣ ಮಂಜೇಶ್ವರ ಕಡವಿನ ಬಳಿ ಕಾಣಲು ಸಿಕ್ಕಿದ ಸುದ್ದಿ ಎಲ್ಲಾ ಬಂದು ತಲುಪಿದವು.

ಮೂಡುದಿಕ್ಕಿನಿಂದ ಹೆಚ್ಚಿನ ಸುದ್ದಿ ಇನ್ನೂ ಬಂದಿರಲಿಲ್ಲ. ಆದೂರಿನ ಗಡಿಯಲ್ಲಿ ಜಾಲ್ಸೂರಿನಿಂದ ಬಂದ ಕಲ್ಯಾಣಪ್ಪನ ದಂಡು ಬೀಡು ಬಿಟ್ಟಿದ್ದು , ಇನ್ನೂ ಅಲ್ಲೇ ಇತ್ತು. ಕೋಚಣ್ಣಾಳ್ವರು ಆದೂರಿಗೆ ಹೋಗಿ ಕಲ್ಯಾಣಪ್ಪನ ದಂಡಿನ ಮೇಲೆ ಬೇಕಾದ ಕ್ರಮ ತೆಗೆದುಕೊಳ್ಳಲು ಅಪ್ಪಣೆಗಾಗಿ ಅರಸರನ್ನು ಕಾಯುತ್ತಿದ್ದರು. ಸುಬ್ರಾಯ ಶಾನುಭೋಗರು, ಕಲ್ಯಾಣಪ್ಪ ತಮ್ಮ ರಾಜ್ಯಕ್ಕೆ ನುಗ್ಗಿ ಲೂಟಿ ಪ್ರಾರಂಭಿಸಿದರೆ ಮಾತ್ರ ಅವನ ವಿರುದ್ಧ ಯುದ್ಧ ಮಾಡೋಣ, ಇಲ್ಲದಿದ್ದರೆ ಬೇಡವೆಂದು ಸುದ್ದಿ ಕಳುಹಿಸಿದ್ದರು.

ರಾಮಂತರಸರ ಚಾವಡಿಯಲ್ಲಿ ಕರ್ನಲ್ ಜಾಕ್ಸನ್, ಶಾನುಭೋಗರನ್ನು ಕಾಯುತ್ತಿದ್ದ. ಕರ್ನಲ್ ಜಾಕ್ಸನ್, ಅರಸರಲ್ಲಿ ಸುಬ್ರಾಯ ಹೆಗ್ಡೆಯನ್ನು ತಮ್ಮ ವಶಕ್ಕೆ ಕೊಟ್ಟು ತಲಚೇರಿಗೆ ಅಲ್ಲದಿದ್ದರೆ ಮಂಗಳೂರಿಗೆ ಕೊಂಡು ಹೋಗಿ ಇಂಗ್ಲಿಷ್ ಸೇನೆಯಿಂದ ವಿಚಾರಣೆಗೆ ಒಳಪಡಿಸಬೇಕೆಂದು ಕೇಳಿಕೊಂಡಾಗ ಸುಬ್ರಾಯ ಶಾನುಭೋಗರು ಒಪ್ಪಲಿಲ್ಲ. ಈಗ ಸುಬ್ರಾಯ ಹೆಗ್ಡೆಯನ್ನು ಇಂಗ್ಲಿಷರ ಕೈಗೆ ಕೊಟ್ಟರೆ ಇಡೀ ಕುಂಬಳೆ ಪೇಟೆಯಲ್ಲಿ ಗಲಾಟೆಯಾಗಬಹುದು. ಅಪರಾಧ ಏನಿದ್ದರೂ ರಾಮಂತರಸರೇ ನ್ಯಾಯದ ಚಾವಡಿಯಲ್ಲಿ ವಿಚಾರಣೆ ನಡೆಸಬೇಕೆಂದು ಶಾನುಭೋಗರು ಹಟ ಹಿಡಿದರು. ಬಹಳ ಹೊತ್ತಿನ ಚರ್ಚೆ ನಡೆದು ಕಲ್ಯಾಣಪ್ಪನ ದಂಡು ಸೀಮೆಯಿಂದ ಹೋಗುವ ತನಕ ವಿಚಾರಣೆ ಬೇಡ. ಅವನನ್ನು ಕೈದಿಯಾಗಿಯೇ ಇಟ್ಟುಕೊಳ್ಳಬೇಕು. ಕಾವಲಿಗೆ ಇಂಗ್ಲಿಷ್ ಸೈನಿಕರೇ ನಿಲ್ಲುವುದೆಂದು ತೀರ್ಮಾನವಾಯಿತು.

ಕರ್ನಲ್ ಜಾಕ್ಸನ್, ಜಾಲ್ಸೂರಿಗೆ ಸೇನೆ ಕಳುಹಿಸಿ ಕಲ್ಯಾಣಪ್ಪನನ್ನು ಎದುರಿಸಿ ಸೆರೆ ಹಿಡಿಯಬೇಕೆಂದು ಹೇಳಿದಾಗ ಶಾನುಭೋಗರು ಒಪ್ಪಲಿಲ್ಲ. ಕೊನೆಗೆ ಜಾಕ್ಸನ್‌ನ ನಾಯಕತ್ವದಲ್ಲಿ ಅರುವತ್ತು ಇಂಗ್ಲಿಷರ ಹಾಗೂ ನೂರೈವತ್ತು ತಲಚೇರಿಯ ಕಂಪನಿ ಸೈನಿಕರನ್ನೂ ತೆಗೆದುಕೊಂಡು ಸ್ವತಃ ಕಲ್ಯಾಣಪ್ಪನ ದಂಡಿನ ಮೇಲೆ ಬೀಳುವುದೆಂದು ತೀರ್ಮಾನ ಮಾಡಿದರು. ಕಾಸರಗೋಡು, ಮಂಗಳೂರು, ಕುಂಬಳೆಯ ಪೇಟೆಗಳನ್ನು ಸುಬ್ರಾಯ ಶಾನುಭೋಗರ ಸೇನೆ ಕಾವಲು ಕಾಯುತ್ತಾ ಬೇಕಲದ ತಿಮ್ಮ ನಾಯಕ ಮತ್ತು ಹೈದರಾಲಿಯ ಮೊಮ್ಮಗ ಹೈದರ್‌ರ ದಂಗೆಯನ್ನು ಎದುರಿಸಬೇಕೆಂದು ತೀರ್ಮಾನವಾಯಿತು.

ಮನೆಗೆ ಹೋದ ಸುಬ್ರಾಯ ಶಾನುಭೋಗರಿಗೆ ಹೆಗ್ಡೆಯ ವಿಷಯದಲ್ಲಿ ಚಿಂತೆಯಾಯಿತು. ಇಂಗ್ಲಿಷರು ಹೆಗ್ಡೆಯನ್ನು ಒಂದೋ ಇಲ್ಲೇ ಕೊಲ್ಲಬಹುದು, ತಪ್ಪಿದರೆ

ಅವನನ್ನು ಮಂಗಳೂರಿಗೆ ಕೊಂಡು ಹೋಗಿ ಗಲ್ಲಿಗೇರಿಸಬಹುದು ಎಂಬ ವಿಷಯ ಅವರ ಮನಸ್ಸಿಗೆ ಖಾತ್ರಿಯಾಯಿತು. ಸ್ವಲ್ಪ ಹೊತ್ತು ಯೋಚಿಸಿ ಬಲಗೈ ಬಂಟ ಸೂರಪ್ಪನನ್ನು ಕರೆದು ಸೀರೆ ನದಿಯ ಕಡವಿನ ಗುಡಿಸಲಲ್ಲಿ ಹತ್ತಿಪ್ಪತ್ತು ಕೋವಿ, ಕೆಲವು ಕತ್ತಿಗಳನ್ನು ಇಟ್ಟು ಬರಲು ಹೇಳಿದರು. ರಾತ್ರಿಯಲ್ಲೇ ಬಂದು ಸುಬ್ರಾಯ ಹೆಗ್ಡೆಯನ್ನು ಕಂಡು ಮಾತನಾಡಿಸಿ, ತನ್ನ ಸೈನಿಕರಿಗೆ ಇಂಗ್ಲಿಷರ ಕಾವಲುಗಾರರು ಬಂದ ಕೂಡಲೇ ಕುಂಬಳೆಯ ಪೇಟೆಯ ಕಾವಲಿಗೆ ಹೋಗುವಂತೆ ಹೇಳಿದರು.

ಸೂರಪ್ಪನನ್ನು ಕಳುಹಿಸಿ ಕೆಂಗಣ್ಣ ನಾಯಕನನ್ನು ಬರಿಸಿ ಅವನಿಗೆ ಪರಿಸ್ಥಿತಿಯನ್ನು ವಿವರಿಸಿದರು. ಕೆಂಗಣ್ಣ ನಾಯಕನಲ್ಲಿ ಸುಬ್ರಾಯ ಹೆಗ್ಡೆಯ ಸೈನಿಕರನ್ನು ಒಟ್ಟು ಮಾಡಿ ಮರುದಿನ ರಾತ್ರಿ ಕರ್ನಲ್ ಜಾಕ್ಸನ್‌ನ ದಂಡು ಜಾಲ್ಸೂರು ಗಡಿಗೆ ಹೊರಟ ಕೂಡಲೇ ಹೆಗ್ಡೆಯನ್ನು ಬಿಡಿಸಿ ಕಾವಲಿನ ಇಂಗ್ಲಿಷ್ ಸೈನಿಕರನ್ನು ಗುಟ್ಟಾಗಿ ಒಬ್ಬನೂ ಉಳಿಯದಂತೆ ಮುಗಿಸಲು ಹೇಳಿದರು. ಅಂದು ರಾತ್ರಿ ಅಷ್ಟು ಮಾಡಿದ ಶಾನುಭೋಗರು ಮಂಜಣಾಳ್ವನಿಗೆ ಆಳು ಕಳುಹಿಸಿ ಮಲಗಿದರು. ಅವರಿಗೆ ತನ್ನ ಶಿಷ್ಯ ತನ್ನ ರಾಜ್ಯದಲ್ಲಿ ಸಾಯುವುದು ಇಷ್ಟವಿರಲಿಲ್ಲ.

ಮರುದಿನ ಬೆಳಗ್ಗೆ ಬಂದ ಮಂಜಣಾಳ್ವನಲ್ಲಿ ಸುಬ್ರಾಯ ಹೆಗ್ಡೆಗೆ ಉಳ್ಳಾಲ ದಾಟಲು ಅವಕಾಶ ಮಾಡಿ ಕೊಡುವಂತೆ ಹೇಳಿದಾಗ ಅವನಿಗೆ ಆಶ್ಚರ್ಯವಾಯಿತು.

"ಸುಬ್ರಾಯ ಹೆಗ್ಡೆ ನಮ್ಮ ಜನರ ತಂಟೆಗೆ ಬರಲಾರ. ಬಂದರೆ ಜೀವಂತ ಬಿಡುವುದಿಲ್ಲವೆಂದು ಅವನಿಗೆ ತಿಳಿಸಿದ್ದೇನೆ. ಅವನು ನಮ್ಮ ಜನಗಳ ಕೈಯಲ್ಲಿ ಸಾಯುವುದು ಬೇಡ. ಎಷ್ಟಾದರೂ ನಮ್ಮ ಗರಡಿಯಲ್ಲಿ ಕಲಿತವ ಆತ."

"ಆದರೆ ಆತನೂ, ಆತನ ಸೇನೆಯೂ ಕುಂಬಳೆ ಪೇಟೆಯಲ್ಲಿ ಮಾಡಿದ ಡಕಾಯತಿ, ಅನ್ಯಾಯ, ಅತ್ಯಾಚಾರಗಳನ್ನು ಮರೆಯಬಹುದಾ ನಾವು"

ಶಾನುಭೋಗರು ಗುಟ್ಟಲ್ಲಿ ಮಂಜಣಾಳ್ವನಿಗೆ ಅಂದು ರಾತ್ರಿಯ ಡಕಾಯಿತಿ, ದಂಗೆಗಳ ಬಗ್ಗೆ ವಿವರಿಸಿದರು. ಮಂಜಣನಿಗೆ ಮತ್ತಷ್ಟು ಆಶ್ಚರ್ಯವಾಯಿತು.

"ಅದು ಯಾಕೆ ಹಾಗೆ ನಮ್ಮ ಜನರಿಂದಲೇ ಲೂಟಿ ಮಾಡಿಸಿ ಅವನ ತಲೆಯ ಮೇಲೆ ಹಾಕಿದಿರಿ ಸ್ವಾಮಿ?"

"ಆ ಡಕಾಯಿತಿ, ಅತ್ಯಾಚಾರಗಳು ಆಗದಿರುತ್ತಿದ್ದರೆ ಕುಂಬಳೆ ಪೇಟೆಯಿಂದ ಅವನ ಜೊತೆ ಸ್ವಾತಂತ್ರ್ಯ ಹೋರಾಟಕ್ಕೆ ಹೊರಡಲು ಬಹಳಷ್ಟು ಜನರು ಸಜ್ಜಾಗಿದ್ದರು. ಅವನಿಗೆ ಹಣಕಾಸು, ಕೋವಿ, ಕತ್ತಿ ಕೊಡಿಸಲು ನಮ್ಮ ಪೇಟೆಯವರು ತಯಾರಿದ್ದರು. ಅವನ ದಂಡಿನವರು ತಮ್ಮ ಅಂಗಡಿ, ಬದುಕು ಲೂಟಿ ಮಾಡಿದ್ದಾರೆಂದು ಹೇಳಿದಾಗಲೇ ವ್ಯಾಪಾರಿಗಳು ಸುಬ್ರಾಯ ಹೆಗ್ಡೆಗೆ ತಿರುಗಿ ಬಿದ್ದದ್ದು. ಈ ವ್ಯಾಪಾರಿ ಸೆಟ್ಟಿಗಳಿಗೆ ಮತ್ತು ಕೊಂಕಣಿಗಳಿಗೆ ಅವರ ಅಂಗಡಿ ಲೂಟಿಯಾದಾಗ ಆಗುವಷ್ಟು ನೋವು ಅವರ ಮನೆಯ ಹೆಣ್ಣು ಮಕ್ಕಳ ಮಾನ ಲೂಟಿಯಾದಾಗಲೂ ಆಗುವುದಿಲ್ಲ. ಹಾಗಾಗಿಯೇ ಇಂದು ಬೆಳಗ್ಗೆ



ಪೇಟೆಯವರು ಬಂದು ಖಾವಂದರ ಕಾಲಿಗೆ ಬಿದ್ದು ಧನ ಸಹಾಯ ನೀಡಲು ಒಪ್ಪಿಕೊಂಡರು. ಸೈನಿಕರ ಊಟ ತಿಂಡಿಯ ಖರ್ಚೂ ಅವರದೇ. ಮಂಜೇಶ್ವರದಲ್ಲೂ ನಿನ್ನ ಸೇನೆಗೆ ಬೇಕಾದ ಎಲ್ಲಾ ಖರ್ಚುಗಳನ್ನು ತಾವೇ ನೋಡಿಕೊಳ್ಳುವುದಾಗಿ ಭರವಸೆ ನೀಡಿದ್ದಾರೆ. ಇಂದು ರಾತ್ರಿ ಸುಬ್ರಾಯ ಹೆಗ್ಡೆಯ ದಂಡು ಹೊಳೆ ದಾಟಿ ಮಂಜೇಶ್ವರದ ಮೂಲಕ ಉಳ್ಳಾಲಕ್ಕೆ ಹೋಗಲಿ. ಸುಬ್ರಾಯ ಹೆಗ್ಡೆ ಒಳ್ಳೆಯವ. ಗಲಾಟೆ ಮಾಡಲು ಬಿಡಲಾರ. ಪುಂಡು ಹುಡುಗರು ಗಲಾಟೆ ಮಾಡದ ಹಾಗೆ ನಮ್ಮ ಸೇನೆ ನೋಡಿಕೊಳ್ಳಬೇಕು."

"ಶಾನುಭೋಗರೇ, ಅವರಲ್ಲಿ ಒಬ್ಬನನ್ನು ನಾನು ಹೆಗ್ಡೆಯೊಂದಿಗೆ ಸೇರಲು ಬಿಡುವುದಿಲ್ಲ. ಸೇರಲು ಪ್ರಯತ್ನಿಸಿದರೆ ಹೆಗ್ಡೆಯ ದಂಡಿಗೂ ನಮ್ಮ ಸೈನಿಕರಿಗೂ ಘರ್ಷಣೆ ಆಗುವುದು ಖಂಡಿತ."

"ಯಾರದು?"

"ಬೀರಣ್ಣ ಬಂಟ ಸ್ವಾಮೀ"

"ಸುಬ್ರಾಯ ಹೆಗ್ಡೆಯಲ್ಲಿ ಬೀರಣ್ಣ ಬಂಟನ ವಿಷಯವನ್ನು ನಾನೂ ಹೇಳಿದ್ದೇನೆ. ಅವನಿಗೂ ಬೀರಣ್ಣ ಕೆಟ್ಟವನೆಂದು ತಿಳಿದಿದೆ. ನಿನಗೆ ಗೊತ್ತಿದೆಯಾ? ನಿನ್ನೆ ನಿಮ್ಮಲ್ಲಿಂದ ಬಂದವನು ಉಳಿಯತಡ್ಕದಲ್ಲೇ ನಮ್ಮ ಮನೆಗಳಿಗೆ ದಾಳಿಯಿಟ್ಟು ದೋಚಲು ಬಂದಿದ್ದ. ಬೇಹುಗಾರರ ಸುದ್ದಿಯ ಪ್ರಕಾರ ಅವನು ಕೂಡ್ಲು ಸುಬ್ರಾಯ ಶಾನುಭೋಗರ ಹೆಣವನ್ನು ಕಲ್ಯಾಣಪ್ಪನಿಗೆ ಕಪ್ಪವಾಗಿ ಕೊಡುತ್ತೇನೆಂದು ಮಾತು ಕೊಟ್ಟಿದ್ದಾನಂತೆ. ನಿನ್ನೆ ಉಳಿಯತಡ್ಕದಲ್ಲಿ ಅವನ ಹೆಣ ಉರುಳಿಸಬೇಕಾಗಿತ್ತು. ಆದರೆ ಏನು ಮಾಡುವುದು. ಅವನು ಅಲ್ಲಿಂದಲೂ ತಪ್ಪಿಸಿಕೊಂಡ. ಸುದ್ದಿಯ ಪ್ರಕಾರ ಆತ ನಿನ್ನೆ ಬೆಂಗರೆಯಲ್ಲಿ ಬೊಬ್ಬರ್ಯ ಕಲ್ಲಿನ ಬಳಿ ಅವಿತುಕೊಂಡಿದ್ದನಂತೆ. ನಿನಗೆ ಗೊತ್ತಿದೆಯಾ?

"ಇನ್ನೂ ಸರಿಯಾದ ವರ್ತಮಾನ ಬಂದಿಲ್ಲ. ಆದರೆ ಬೊಬ್ಬರ್ಯ ಕಲ್ಲಿನ ಬಳಿ ಗುಡಿಯಲ್ಲಿ ನಲ್ವತ್ತರಿಂದ ಐವತ್ತರಷ್ಟು ಜನ ಕಣ್ವತೀರ್ಥಕ್ಕೆ ಹೋಗುವ ತಯಾರಿಯಲ್ಲಿದ್ದಾರೆಂದು ಸುದ್ದಿ ಸಿಕ್ಕಿದೆ."

"ಹೋಗು, ಹುಡುಕವನನ್ನು. ಆತ ನಿನ್ನ ಬೇಟೆ. ಇಲ್ಲಿ ಈಗ ಇನ್ನೊಂದು ರಾಜಕೀಯ ನಡೆಯುತ್ತಿದೆ. ಆ ಇಂಗ್ಲಿಷ್ ನಾಯಿಗಳು ಬಹಳ ಬೊಗಳುತ್ತಿವೆ. ಅವರಿಗೆ ಕಲ್ಯಾಣಪ್ಪನನ್ನು ಬೇಟೆಯಾಡಬೇಕೆಂಬ ಆಸೆ. ಅದಕ್ಕೆ ಅವರು ಅಮರಸುಳ್ಯದ ಗಡಿಗೆ ಇಂದು ರಾತ್ರಿಯೊಳಗೆ ಹೋಗಿ ಅವನ ದಂಡಿನ ವಿರುದ್ಧ ಯುದ್ಧಕ್ಕೆ ತಯಾರಿ ಮಾಡುತ್ತಿದ್ದಾರೆ. ನಿನ್ನ ನಲಿಕೆಯವರು ಅಥವಾ ದೊಂಬರ ಮೂಲಕ ಕಲ್ಯಾಣಪ್ಪನಿಗೆ ಗುಟ್ಟಲ್ಲಿ ವಿಷಯ ತಲುಪಿಸಬೇಕು. ಆತನೂ ಯುದ್ಧಕ್ಕೆ ಸಿದ್ಧನಾಗಿರಲಿ."

ಯಾಕೋ ಇಂದು ಶಾನುಭೋಗರ ಮಾತುಗಳೆಲ್ಲಾ ಅವನಿಗೆ ಒಗಟಿನಂತೆ ತೋರಿದವು.

"ಅದು ಯಾಕೆಂದು ಅರ್ಥ ಆಗಲಿಲ್ಲ ಸ್ವಾಮಿ"

"ನೀನು ಚಿಕ್ಕ ವಯಸ್ಸಿನವನು. ನಿನಗೆ ಅದೆಲ್ಲಾ ಸುಲಭದಲ್ಲಿ ಅರ್ಥ ಆಗಲಿಕ್ಕಿಲ್ಲ, ಮಂಜಣಾ, ಈ ಕೆಂಪು ಮೂತಿಯವರು ನಮ್ಮ ರಾಜ್ಯದಲ್ಲಿ ಅಗತ್ಯಕ್ಕಿಂತ ಹೆಚ್ಚು ಬೆಳೆದು ಬಿಟ್ಟಿದ್ದಾರೆ. ಅವರ ತಲೆಯಲ್ಲಿ ಅವರ ತುಪಾಕಿ, ಇಡೀ ರಾಜ್ಯವನ್ನೇ ಅವರ ವಶ ಮಾಡುತ್ತದೆ, ಯುದ್ಧದಲ್ಲಿ ಅವರಷ್ಟು ಗಟ್ಟಿಗರೇ ಇಲ್ಲ ಎಂಬ ಅಹಂಕಾರ ತುಂಬಿಹೋಗಿದೆ. ಎಲ್ಲ ಒಮ್ಮೆ ಪರೀಕ್ಷೆಯಾಗಲಿ. ಅಲ್ಲದೆ ಇನ್ನೂ ಒಂದು ವಿಷಯ ಯೋಚನೆ ಮಾಡು. ಎಲ್ಲಿಯಾದರೂ ಕಲ್ಯಾಣ ಸ್ವಾಮಿಯ ದಂಡು ಗೆದ್ದು ಈ ಕಂಪನಿ ಸರಕಾರ ಮಂಗಳೂರಿನಿಂದ ಓಡಿದರೆ ನಮ್ಮ ರಾಜ್ಯದ ಸ್ಥಿತಿ ಏನಾಗಬಹುದು ಹೇಳು. ಅದಕ್ಕೇ ಸುಬ್ರಾಯ ಹೆಗ್ಡೆ ಹಾಗೂ ಕಲ್ಯಾಣಪ್ಪನ ತಲೆಗೊಂದೊಂದು ಉಪಕಾರದ ಹೊರೆಯನ್ನು ಹೊರಿಸಿ ಬಿಡೋಣ. ನಮಗೆ ನಮ್ಮ ರಾಜ್ಯದಿಂದ ಯುದ್ಧ, ಲೂಟಿ ಇಲ್ಲದೆ ಅವರು ಹೋಗಬೇಕಲ್ಲಾ? ಇಂಗ್ಲಿಷ್ ಸರಕಾರದವರಿಗೆ ಈ ಗಲಭೆಯನ್ನು ನಿಲ್ಲಿಸಿದವರು ನಾವೆಂದು ಹೇಳೋಣ. ವಿಚಾರ ತಲೆಗೆ ಹೋಗಬೇಕು. ಹಾವು ಸಾಯಬಾರದು ಕೋಲು ಮುರಿಯಬಾರದು."

ಶಾನುಭೋಗರ ಹೆಂಡತಿ ಅವಲಕ್ಕಿಗೆ ಮೊಸರು ಹಾಕಿ ತಂದು ಕೊಟ್ಟರು. ಮಂಜಣ ತಿಂದು ಮಂಜೇಶ್ವರಕ್ಕೆ ಹೊರಟ. ಸುಬ್ರಾಯ ಶಾನುಭೋಗರು ಬೆಳಗಿನ ಪೂಜೆಗೆ ಎದ್ದರು.





## ೭

# ಗಲಭೆ! ದರೋಡೆ! ಸ್ವಾತಂತ್ರ್ಯ ಸಮರ!

ಸಿರಿಯದ ಹೊಳೆ ದಾಟಿ ಐಲದ ಪದವಿಗೆ ಬಂದು ದುರ್ಗಾಪರಮೇಶ್ವರಿ ದೇವಳದ ಕಟ್ಟೆಯಲ್ಲಿ ಕುಳಿತುಕೊಂಡು ವಿಚಾರಿಸಿದಾಗ ಬೀರಣ್ಣನ ದಂಡು ಅಲ್ಲೇ ಬಂದು ಉಪ್ಪಳ ಹೊಳೆದಾಟಿ ಮಂಜೇಶ್ವರದ ಕಡವಿಗೆ ಹೋದ ಸುದ್ದಿ ಬಂತು. ಮಂಜಣ ಕುದುರೆಯೇರಿ ಬಡಾಜೆಗೆ ಬಂದ. ಬರುವಾಗ ದೇವಿಯ ಪೂಜೆ ನಡೆಯುತ್ತಿತ್ತು. ಪೂಜೆ ಮುಗಿದು ತಂತ್ರಿಯವರ ಒತ್ತಾಯಕ್ಕೆ ಅಲ್ಲೇ ಊಟಕ್ಕೆ ನಿಂತ ಮಂಜಣ ಊಟ ಮುಗಿಸಿ ಕೈ ತೊಳೆದಾಗುವಾಗ ಬೇಹುಗಾರರು ಹುಡುಕಿಕೊಂಡು ಬಂದರು.

ದೊಂಬರ ಪಡೆಯನ್ನು ಅಮರಸುಳ್ಯಕ್ಕೆ ಕಳುಹಿಸಿ, ಮಂಜೇಶ್ವರದ ನಲಿಕೆಯವರು ತಂದ ಸುದ್ದಿಯನ್ನು ಕೇಳಿದ ಮಂಜಣಾಳ್ವ ತಂತ್ರಿಯವರ ಅಪ್ಪಣೆ ಪಡೆದುಕೊಂಡು ಮಂಜೇಶ್ವರಕ್ಕೆ ಕುದುರೆ ಓಡಿಸಿದ. ಸುಬ್ರಾಯ ಶಾನುಭೋಗರಲ್ಲಿ ಐಲದ ಬೋವಿಗಳು ಹೇಳಿದ ಸುದ್ದಿ ನಿಜವಾಗಿತ್ತು. ಬೀರಣ್ಣ

ಬಂಟನ ಸೈನಿಕರು ಬೊಬ್ಬರ್ಯ ಕಲ್ಲಿನ ಬಳಿ ಗುಡಿಯಲ್ಲಿ ಬೀಡು ಬಿಟ್ಟು ಪುಸಲರನ್ನೂ, ಬೋವಿಗಳನ್ನೂ ದಂಡಿಗೆ ಸೇರುವಂತೆ ಪುಸಲಾಯಿಸುತ್ತಿದ್ದರು. ಪುಸಲರ ಹುಡುಗರಿಗೆ ಪೇಟೆಯ ಸಾಹುಕಾರರನ್ನೂ, ದೇವಸ್ಥಾನಗಳನ್ನೂ ದೋಚಲು ಹೇಳಿ, ಬೀರಣ್ಣ ರಾತ್ರಿ ಮಂಜೇಶ್ವರ ಪೇಟೆಯಲ್ಲಿ ಗಲಭೆ ಎಬ್ಬಿಸುತ್ತಾನೆ ಎನ್ನುವುದು ಖಾತ್ರಿಯಿತ್ತು. ಮಂಜಣ ಬಡಾಜೆಯಿಂದ ಬಂಗ್ರ ಮಂಜೇಶ್ವರದ ಕಾವಲುಗಾರರನ್ನು ಎಚ್ಚರಿಸಿ ಪೇಟೆಗೆ ಹೋದ. ದೇವಯ ಭಂಡಾರಿಯ ಭಂಡಾರ ಮಠದ ಹಿತ್ತಲಿನಲ್ಲಿದ್ದ ಸೇನೆಯನ್ನು ದೇವಸ್ಥಾನದ ಬೀದಿಗೆ ಕಳುಹಿಸಿ, ಮಂಜೇಶ್ವರದಿಂದ ತಲಪಾಡಿಯವರೆಗೆ ತುಪಾಕಿಯವರನ್ನು, ಕುದುರೆ ಸವಾರರನ್ನು ಕರೆದುಕೊಂಡು ಗಸ್ತು ತಿರುಗುವಾಗ ಪೇಟೆಯ ಸೆಟ್ಟಿಗಳು, ಭಂಡಸಾಲೆಯ ಕೊಂಕಣಿಗಳು, ಬಂಗ್ರ ಮಂಜೇಶ್ವರದ ಅರಬರು, ಬ್ಯಾರಿಗಳೆಲ್ಲ "ಜೈ ದುರ್ಗೆ, ಜೈ ಭವಾನಿ, ಜೈ ಮಂಜಣಾಳ್ವ" ಎನ್ನುತ್ತಾ ಜಯಕಾರ ಹಾಕಿದರು.

ಉದ್ಯಾವರದ ಅರಸು ದೈವಗಳಿಗೂ, ಕೀರ್ತೇಶ್ವರ ದೇವರಿಗೂ ಕೈಮುಗಿದು ಬಂದ ಮಂಜಣಾಳ್ವ ರಥಬೀದಿಯಲ್ಲಿ ಕುದುರೆಯಿಂದಿಳಿದು ಶ್ರೀಮದನಂತೇಶ್ವರ ದೇವಸ್ಥಾನಕ್ಕೆ ಬಂದು ಪಶ್ಚಿಮ ಗೋಪುರದಲ್ಲೇ ಅಂಗಣಕ್ಕಿಳಿದ. ಮಂಜಣಾಳ್ವನನ್ನು ಪೂಜೆಯವರೂ ಕೊಂಕಣಿಗಳ ಹಿರಿಯರೂ ಸ್ವಾಗತಿಸಿದರು.

ಹತ್ತು ಮೆಟ್ಟಲಿಳಿದರೆ ಕೆಳಗೆ ಶ್ರೀಮದನಂತೇಶ್ವರ ದೇವಸ್ಥಾನ. ಎದುರಿಗೆ ದೊಡ್ಡ ದೀಪ ಸ್ತಂಭ. ಎರಡು ಬದಿಗಳ ಓಣಿಗಳಲ್ಲಿ ಕೊಂಕಣಿಗರ ಮನೆಗಳು. ಬಲಬದಿಯ ಮೂಲೆಯಲ್ಲಿ ತೀರ್ಥದ ಕೆರೆ. ತೀರ್ಥದ ಕೆರೆಯಲ್ಲಿ ಮುಳುಗಿ ಎದ್ದರೆ ಎಲ್ಲ ಪಾಪಗಳೂ ಪರಿಹಾರವಾಗುತ್ತವೆ, ಎಲ್ಲ ರೋಗಗಳೂ ವಾಸಿಯಾಗುತ್ತವೆ ಎನ್ನುವ ನಂಬಿಕೆ. ದೇವಸ್ಥಾನದ ಹೊರಗಿನ ಅಂಗಣದ ಸುತ್ತ ಜಾತ್ರೆ, ಬಲಿ ನೋಡಲು ದಂಡೆಗಳು. ಒಳಗಿನ ಅಂಗಣದಲ್ಲಿ ಪಲ್ಲಕ್ಕಿ ಉತ್ಸವ, ದೇವರನ್ನು ತಲೆಯಲ್ಲಿ ಹೊತ್ತುಕೊಂಡು ಬಲಿ, ಹೊರಗಿನ ಅಂಗಣದಲ್ಲಿ ಚಿಕ್ಕ ರಥೋತ್ಸವ ನಡೆಯುತ್ತಿತ್ತು. ಒಳಗಿನ ಅಂಗಣದಲ್ಲಿ ಶ್ರೀಮದನಂತೇಶ್ವರನ ಗುಡಿ, ನರಸಿಂಹ ದೇವರ ಗುಡಿ, ಸುಬ್ರಹ್ಮಣ್ಯ ದೇವರ ಗುಡಿಗಳು. ವರ್ಷಕ್ಕೊಮ್ಮೆ ನಡೆಯುವ ಷಷ್ಠಿಯ ಜಾತ್ರೆಗೆ ಕೊಚ್ಚಿಯಿಂದ ಗೋವಾದವರೆಗಿನ ಗೌಡಸಾರಸ್ವತ ಸಮುದಾಯದವರು ಬಂದು ಕೈಮುಗಿಯುತ್ತಿದ್ದರು. ಸುತ್ತಮುತ್ತಲಿನ ಸಹಸ್ರಾರು ಮಂದಿ ಉತ್ಸವಕ್ಕೆ ಸೇರುತ್ತಿದ್ದರು.

ಒಂದು ಕಾಲದಲ್ಲಿ ಪಾಳು ಬಿದ್ದು ಕಾಡು ಬೆಳೆದಿದ್ದ ಶ್ರೀಮದನಂತೇಶ್ವರ ದೇವಸ್ಥಾನವನ್ನು ಗೋವಾದಿಂದ ಪೋರ್ಚುಗೀಸರ ಕಿರುಕುಳ ತಡೆಯಲು ಸಾಧ್ಯವಾಗದೆ ಓಡಿ ಬಂದ ಕೊಂಕಣಿಗರು ಮಂಜೇಶ್ವರದಲ್ಲಿ ಮನೆ, ಬದುಕು, ವ್ಯಾಪಾರ ಮಾಡಿಕೊಂಡು ಮಂಜೇಶ್ವರ ಮಾಗಣೆಯ ಬಲ್ಲಾಳರಿಂದ ಅನಂತೇಶ್ವರ ದೇವಸ್ಥಾನದ ಆಡಳಿತವನ್ನು ವಹಿಸಿಕೊಂಡು ಜೀರ್ಣೋದ್ಧಾರ ಮಾಡಿದ್ದರು. ದೇವಸ್ಥಾನದ ಆಸ್ತಿಯನ್ನು ಮಾತ್ರ ವಿಟ್ಲದ ಡೊಂಬ ಹೆಗ್ಡೆ ವಶಕ್ಕೆ ತೆಗೆದುಕೊಂಡರು. ಈ ದೇವಸ್ಥಾನಕ್ಕೆ ಹಲವು ಮಂದಿ ಹಲವು ಸಲ ದಾಳಿ ಮಾಡಿ ಅದರ ಸಂಪತ್ತನ್ನು ಲೂಟಿ ಮಾಡಿದ್ದಾರೆ. ವಿಟ್ಲದ ಡೊಂಬ ಹೆಗ್ಡೆ, ಟಿಪ್ಪುವಿನ



ಸುಬೇದಾರ ಹೀಗೆ ಎಲ್ಲರೂ ಈ ದೇವಸ್ಥಾನವನ್ನು ಲೂಟಿ ಮಾಡಿದವರೇ. ಕೊಂಕಣಿಗರು ಮಾತ್ರ ಇಡೀ ಕರಾವಳಿಯಲ್ಲಿ ತಮಗೆ ಎಲ್ಲಕ್ಕಿಂತಲೂ ಹೆಚ್ಚು ಪವಿತ್ರವಾಗಿದ್ದ ಈ ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡುತ್ತಲೇ ಇದ್ದರು.

ಈಗ ಅವರಿಗೆ ಕಲ್ಯಾಣಪ್ಪನ ದರೋಡೆಯ ಭಯ. ಕೊಂಕಣಿಗರ ಸಮಾಜದ ಹತ್ತು ಸಮಸ್ತರು ಒಟ್ಟಾಗಿ ಚಿನ್ನಾಭರಣ, ಸಂಪತ್ತನ್ನು ದೇವಸ್ಥಾನದಿಂದ ಸಾಗಿಸಿ ಕಾಡಲ್ಲಿ ಹುಗಿದಿಟ್ಟಿದ್ದಾರಂತೆ. ಚಿನ್ನದ ಮೂರ್ತಿಯನ್ನು ಕೆರೆಯಲ್ಲಿ ಮುಳುಗಿಸಿಟ್ಟು, ಕಂಚಿನ ಉತ್ಸವ ಮೂರ್ತಿಯನ್ನು ಪೂಜೆಗೆ ಇಟ್ಟರು.

ಮಂಜಣಾಳ್ವ ಬಂದವ ಒಳಗಿನ ಅಂಗಣದಲ್ಲಿ ಸೇರಿದ್ದ ಕೊಂಕಣಿಗಳ ಸಮಾಜದ ಹತ್ತು ಸಮಸ್ತರಿಗೆ ಭರವಸೆ ಕೊಟ್ಟ.

"ಈ ಸಲ ಮಂಜೇಶ್ವರದ ದೇವಸ್ಥಾನವನ್ನು ನಾನು ಜೀವಂತವಿದ್ದರೆ ದೋಚಲು ಬಿಡಲಾರೆ. ಅದಕ್ಕಾಗಿ ಎಷ್ಟು ಸೈನಿಕರನ್ನು ಬಲಿ ಕೊಡಬೇಕಾಗಿ ಬಂದರೂ ಸರಿ. ನೀವೆಲ್ಲ ಧೈರ್ಯದಿಂದಿರಿ."

ಮಂಜಣಾಳ್ವ ಸಮಾಜದವರ ಮುಂದೆ ತನ್ನ ಬೇಡಿಕೆಯನ್ನು ಮುಂದಿಟ್ಟ. ಅವರು ಸುಂಕದ, ಕಂದಾಯದ ಹಣವನ್ನು ತನಗೆ ಕೊಟ್ಟರೆ ಸೈನಿಕರ ಸಂಬಳ ಕೊಟ್ಟು ಅವರ ಉತ್ಸಾಹ ಇಮ್ಮಡಿಗೊಳಿಸಬಹುದು ಎಂದು ಹೇಳಿದ. ಇಡೀ ಸಮುದಾಯ ಮರುದಿನ ಬೆಳಗ್ಗೆ ಸುಂಕದ ಹಣ ತಲುಪಿಸುವ ಭರವಸೆ ಕೊಟ್ಟಿತು. ದೇವಸ್ಥಾನಕ್ಕೆ ಭಂಡಾರ ಮಠದ ದೇವಯ ಭಂಡಾರಿಗಳು ಆ ಸಾಲಿನ ಮೊಕ್ತೇಸರ. ಭಂಡಾರದ ಬೀಗದ ಕೈ ಅವರ ಕೈಯಲ್ಲಿತ್ತು.

ಕೆಲವು ವರ್ಷಗಳ ಹಿಂದೆ ದೇವಯ ಭಂಡಾರಿಗಳ ಅಜ್ಜ ನರಸಯ್ಯ ಭಂಡಾರಿಗಳು ಮೊಕ್ತೇಸರರಾಗಿದ್ದಾಗ, ವಿಟ್ಲದ ಡೊಂಬ ಹೆಗ್ಡೆ ದೇವಸ್ಥಾನವನ್ನು ಲೂಟಿ ಮಾಡಿ ಹಣ, ಚಿನ್ನ ಸಿಗಲಿಲ್ಲವೆಂದು ಭಂಡಾರಿಗಳನ್ನು ವಿಟ್ಲದ ಅರಮನೆಯ ನೆಲಮಾಳಿಗೆಯಲ್ಲಿಟ್ಟು ಚಿತ್ರಹಿಂಸೆ ಕೊಟ್ಟಿದ್ದನಂತೆ. ನರಸಯ ಭಂಡಾರಿ ಆ ನೆಲಮಾಳಿಗೆಯಲ್ಲೇ ಹುಚ್ಚು ಹಿಡಿದು ಸತ್ತರಂತೆ. ಆದರೂ ಸಂಪತ್ತಿನ ಗುಟ್ಟನ್ನು ಯಾರಿಗೂ ಬಿಟ್ಟು ಕೊಡಲಿಲ್ಲವಂತೆ.

ವರ್ಷ ಕಳೆದು ದೇವಸ್ಥಾನಕ್ಕೆ ಕಂಚು ಹೊದಿಸುವಾಗ ಗರ್ಭಗುಡಿಯ ಗೋಡೆ ತುಂಬಾ ದಪ್ಪವಿದೆಯೆಂದು ಕೆಡವಿದಾಗ ಗೋಡೆಯಲ್ಲಿ ಹುದುಗಿಸಿಟ್ಟಿದ್ದ ಹತ್ತು ಕೊಡಗಳು ಸಿಕ್ಕಿದುವಂತೆ. ಆ ಕೊಡಗಳ ತುಂಬಾ ವಿಜಯನಗರ ಅರಸರ ಕಾಲದ ಚಿನ್ನದ ನಾಣ್ಯಗಳು ತುಂಬಿದ್ದವು. ಅದರಲ್ಲಿ ದೇವಸ್ಥಾನದ ಇಡೀ ಗರ್ಭಗುಡಿಗೆ ಕಂಚಿನ ಪಟ್ಟಿ, ಧರ್ಮಶಾಲೆ, ವೇದಶಾಲೆ, ಭೋಜನ ಶಾಲೆಗಳಿಗೆ ಕಂಚು ಹೊದಿಸಿದರಂತೆ.

ಸಂಪತ್ತು ಸಿಗಲಿಲ್ಲ ಎಂಬ ಕೋಪದಲ್ಲಿ ಆರು ಗಾಲಿಗಳ ಬಹುದೊಡ್ಡ ಬ್ರಹ್ಮ ರಥವನ್ನು ಡೊಂಬ ಹೆಗ್ಡೆ ಪುಡಿಪುಡಿ ಮಾಡಿ ಹಾಕಿದ್ದ. ಕೊಡದಲ್ಲಿದ್ದ ಚಿನ್ನದಿಂದ ಹೊಸ ರಥ ಮಾಡಿಸಿ, ನಾಲ್ಕು ವರ್ಷಗಳ ಕೆಳಗೆ ಭಾರೀ ಸಡಗರದಲ್ಲಿ ಬ್ರಹ್ಮಕಲಶ ಮಾಡಿ ಸುಬ್ರಹ್ಮಣ್ಯ

ಷಷ್ಠಿಯಂದು ರಥಬೀದಿಯಲ್ಲಿ ಎಳೆದರಂತೆ.

ನರಸಯ ಭಂಡಾರಿಗಳ ನೆನಪಿನಂತೆ ಆಗ ನರಸಿಂಹ ದೇವರ ಮೂರ್ತಿ ಮಂಜೇಶ್ವರ ದೇವಸ್ಥಾನದಲ್ಲಿ ಸ್ಥಾಪನೆಯಾದುದಂತೆ. ನರಸಿಂಹನೇ ತುಳುವರ ನರಸಯ ಅಲ್ಲವಾ. ಈ ಮೂವತ್ತು ವರ್ಷಗಳ ಹಿಂದಿನ ಘಟನೆಗಳನ್ನೆಲ್ಲಾ ಚಿಕ್ಕ ಹುಡುಗ ದೇವಯ ಭಂಡಾರಿ ನೋಡಿದ್ದರು. ಹಾಗಾಗಿ ಆ ಭಯದಲ್ಲಿಯೇ ಅವರಿಗೆ ನಿದ್ರೆ ಬರಲಿಲ್ಲ.

ದೇವಯ ಭಂಡಾರಿ ಭಂಡಾರ ಮಠದ ಮನೆ, ಹಿತ್ತಲನ್ನು ಮಂಜಣಾಳ್ವರ ದಂಡಿಗೆ ಉಳಿಯಲು ಕೊಡುವಾಗ ಎಲ್ಲಕ್ಕಿಂತ ಹೆಚ್ಚು ಯೋಚಿಸಿದ್ದು ತನ್ನ ರಕ್ಷಣೆಯ ಬಗ್ಗೆ. ಹೊಳೆ ಬದಿಯ ಮನೆಗೆ ಯಾರಿಗೂ ನುಗ್ಗಿ ಲೂಟಿ ಮಾಡಲು ಸುಲಭ. ಹಾಗೆಯೇ ದಂಡಿಗೂ ಹೊಳೆ ಬದಿಯ ನಾಲ್ಕು ದಿಕ್ಕಿಗೂ ಕಣ್ಣಿಡಲು ಒಳ್ಳೆಯ ಜಾಗವೇ ಸಿಕ್ಕಿತು. ಸೈನ್ಯಕ್ಕೆ ಭಂಡಾರಿಗಳ ಜನರೇ ಊಟ ತಿಂಡಿಯ ವ್ಯವಸ್ಥೆ ಮಾಡಿದ್ದರು. ಮಂಜಣಾಳ್ವ ಭಂಡಾರಿಗಳ ಚಾವಡಿಯಲ್ಲೇ ಮಲಗಿಕೊಂಡು ಅವರ ಮನೆಯಲ್ಲೇ ಊಟ ಮಾಡುತ್ತಿದ್ದ. ಅವನಿಗೆ ಒಂದೇ ಸಮಸ್ಯೆ. ರಾತ್ರಿಯ ಅವನ ಊಟಕ್ಕೆ ನಿರ್ದಿಷ್ಟ ಸಮಯವೆಂಬುದಿರಲಿಲ್ಲ. ಅವನು ಬಂದುದೇ ಸಮಯ. ಯಾವ ಹೊತ್ತಿಗೆ ಬಂದರೂ ಅವನನ್ನು ಕಾದು ಕುಳಿತು ಊಟ ಬಡಿಸುವವರು ದುರ್ಗಮ್ಮನೇ. ಹಾಸಿಗೆ ಹಾಸಿಕೊಟ್ಟು ಆತ ಮಲಗಿದ ಮೇಲೆ ದೀಪ ಆರಿಸಿ ಹೋಗುವವರೂ ದುರ್ಗಮ್ಮನೇ.

ದುರ್ಗಮ್ಮ ಎರಡು ಮಕ್ಕಳ ತಾಯಿಯಾದರೂ ಹೆಚ್ಚು ಕಮ್ಮಿ ಮಂಜಣಾಳ್ವರದ್ದೇ ಪ್ರಾಯ. ಈಗಲೂ ಮದುಮಗಳಂತೆ ಸುಂದರಿಯಾಗಿದ್ದ ದುರ್ಗಮ್ಮನ ಬಿಸಿಲು ಕಾಣದ ಬಿಳಿ ಬಿಳಿಯಾದ ದೇಹ ಬೆಣ್ಣೆಯಂತೆ ಕಾಣುತ್ತಿತ್ತು. ಅವರು ಎಷ್ಟೊಂದು ಆಕರ್ಷಕವಾಗಿದ್ದರೆಂದರೆ ಒಮ್ಮೆ ನೋಡಿದರೆ ಮತ್ತೊಮ್ಮೆ ತಿರುಗಿ ನೋಡಬೇಕು ಎಂಬಂತಹ ಲಕ್ಷಣದ ರೂಪ. ನಗು ತುಂಬಿದ ಮುಖ.

ದೇವಸ್ಥಾನದಿಂದ ಭಂಡಾರಿಗಳ ಜೊತೆ ಬಂದ ಮಂಜಣಾಳ್ವರಿಗೆ ಅಂದು ಪಾಯಸದ ಊಟ. ನಾಲ್ಕು ಸೌಟು ಪಾಯಸ ಬಡಿಸುವಾಗ ಅಡ್ಡ ಹಿಡಿದ ಮಂಜಣ್ಣನ ಕೈಯನ್ನು ತನ್ನ ಕೈಯಿಂದ ಮೆಲ್ಲ ದೂಡಿ ಬಡಿಸಿದ ದುರ್ಗಮ್ಮನ ಮುಖ ನೋಡಿದಾಗ, ಮಂಜಣಾಳ್ವರ ಕಣ್ಣಿಗೆ ಕಣ್ಣಿಟ್ಟು ನೋಡಿದ ದುರ್ಗಮ್ಮ ಮುಗುಳು ನಕ್ಕು, ಎರಡು ಸೌಟು ಪಾಯಸ ಹೆಚ್ಚು ಬಡಿಸಿದರು. ದುರ್ಗಮ್ಮ ಆದಿ ಸೆಟ್ಟಿಯ ತಂಗಿಯರಲ್ಲಿ ಮಂಜಣಾಳ್ವನಿಗೆ ಇಷ್ಟವಾದ ಊಟ, ತಿಂಡಿಯ ವಿಷಯವನ್ನು ಕೇಳಿ ತಿಳಿದುಕೊಂಡಿದ್ದರು. ಯಾವಾಗಲೂ ಶಾಂತ ಸಮುದ್ರದಂತಿರುವ ಮಂಜಣಾಳ್ವನ ಮನಸ್ಸು ಈಗ ಮಳೆಗಾಲದಲ್ಲಿ ಬೊಬ್ಬರ್ಯ ಕಲ್ಲಿನ ಬಳಿ ಕಲ್ಲಿಗೆ ಅಪ್ಪಳಿಸುವ ಕಡಲಿನ ಅಲೆಗಳಂತಾಯಿತು. ಕೈ ತೊಳೆದು ಬರುವಾಗ ಸುಬ್ರಾಯ ಶಾನುಭೋಗರ ಬಲಗೈ ಬಂಟ ಸೂರಪ್ಪ ಬಂದು ಶಾನುಭೋಗರು ಕಣ್ವತೀರ್ಥ ದಲ್ಲಿ ಕಾಯುತ್ತಿದ್ದಾರೆ ಎಂಬ ವರ್ತಮಾನ ಕೊಟ್ಟು ಹೋದ.

ಅವಸರದಲ್ಲಿ ಹೊರಟು ಕಣ್ವತೀರ್ಥಕ್ಕೆ ಬರುವಾಗ ಸುಬ್ರಾಯ ಶಾನುಭೋಗರು



ಒಬ್ಬರೇ ಆಲದ ಮರದ ಕಟ್ಟೆಯಲ್ಲಿ ಕುಳಿತಿದ್ದರು. ಮಂಜಣನಿಗೆ ಅವರು ಈ ಹೊತ್ತಿನಲ್ಲಿ ಅಲ್ಲಿರುವುದು ಕಂಡು ಆಶ್ಚರ್ಯವಾಯಿತು.

"ಮಂಜಣಾ, ಕಲ್ಯಾಣಪ್ಪನ ದಂಡಿನಲ್ಲಿ ಭಾರೀ ಬದಲಾವಣೆಯಾದಂತಿದೆ. ಆ ಸುದ್ದಿಯನ್ನು ನಿನಗೆ ತಿಳಿಸಿ ನಾಳೆಯ ವ್ಯವಸ್ಥೆಯನ್ನು ಮಾತನಾಡಲು ನಾನು ಬಂದಿದ್ದೇನೆ."

ಒಂದನೇ ವಿಷಯ, ಕಲ್ಯಾಣಪ್ಪ ಕರ್ನಲ್ ಜಾಕ್ಸನ್‌ನ ಹತ್ತು ಇಂಗ್ಲಿಷ್ ಸೈನಿಕರನ್ನು ಕೊಂದು, ಅರುವತ್ತು ಸೈನಿಕರನ್ನು ಕೈಕಾಲು ಕಟ್ಟಿ ಹಾಕಿದ್ದಾನಂತೆ. ಈಶ್ವರಮಂಗಲದಿಂದ ಇಂಗ್ಲಿಷರ ದಂಡು ಎಲ್ಲಿಗೆ ಓಡಿದೆಯೆಂದು ಯಾರಿಗೂ ಗೊತ್ತಿಲ್ಲ. ಇಲ್ಲಿಯ ತನಕ ಬಂದ ಸುದ್ದಿಯಂತೆ ಸೇನೆಯೊಂದಿಗೆ ಹೋದ ಇಬ್ಬರು ಇಂಗ್ಲಿಷ್ ಸೈನಿಕರು ಕಡಬದ ಮೂಲಕ ಪುತ್ತೂರಿಗೆ ಓಡಿ ದೇವಪ್ಪ ಕರಣಿಕನ ಸಹಾಯದಿಂದ ಮಂಗಳೂರಿಗೆ ತಲುಪಿದ್ದಾರಂತೆ. ಅವರಲ್ಲಿ ಒಬ್ಬ ಕರ್ನಲ್ ಜಾಕ್ಸನ್ ಆಗಿರಬೇಕೆಂದು ಬೇಹುಗಾರರ ಸುದ್ದಿ. ಕಲ್ಯಾಣಪ್ಪ ಮಂಗ. ಆ ಇಂಗ್ಲಿಷರನ್ನು ಕೊಂದು ಬಹಳ ದೊಡ್ಡ ತಪ್ಪು ಮಾಡಿದ. ಅವನು ಅವರನ್ನು ಕೊಲ್ಲದೆ, ತನ್ನ ಸೇನೆಯ ಜೊತೆಗೆ ಹಿಡಿದುಕೊಂಡು ಹೋಗಬೇಕಿತ್ತು. ಆ ಸೈನಿಕರನ್ನು ಪಗಡೆಯ ಕಾಯಿಯಂತೆ ಉಪಯೋಗಿಸಬೇಕಿತ್ತು. ಈಶ್ವರಮಂಗಲದಿಂದ ಕಲ್ಯಾಣಪ್ಪನ ದಂಡು ಮುಳಿಯಾರು, ಬದಿಯಡ್ಕಗಳಲ್ಲಿ ಕೆಲವು ಕರ್ಹಾಡ ಬ್ರಾಹ್ಮಣರ, ಕೆಲವು ಕೊಂಕಣಿಗಳ ಭಂಡಸಾಲೆಗಳನ್ನು ಲೂಟಿ ಮಾಡಿ ಎಡನಾಡಿಗೆ ಇಳಿದಿದೆಯಂತೆ.

★★★

ಎಡನಾಡಿನಲ್ಲೊಂದು ವಿಶೇಷ ನಡೆದು ಹೋಯಿತು. ಎಡನಾಡು ಸುಬ್ರಹ್ಮಣ್ಯ ಭಟ್ಟರ ಮನೆ ಲೂಟಿ ಮಾಡಿ ಇಚ್ಲಂಪಾಡಿಯ ಮನೆ ದೋಚಲೆಂದು ಹೊರಟ ಕಲ್ಯಾಣಪ್ಪನ ದಂಡಿನ ಕತೆಯೇ ಬದಲಾಯಿತು.

ಸುಬ್ರಹ್ಮಣ್ಯ ಭಟ್ಟರ ಮನೆ ತಲುಪುವಾಗ ಅಂದು ಅವರ ಮನೆಯಲ್ಲಿ ವರ್ಷಂಪ್ರತಿ ನಡೆಯುವ ರಾಮನವಮಿ ಪೂಜೆ, ಊಟಕ್ಕೆ ತಯಾರಿ ನಡೆಯುತ್ತಿತ್ತು. ಆ ಮನೆಯಲ್ಲಿ ರಾಮನವಮಿಯ ಪೂಜೆ ಯಾವಾಗಲೂ ಭಾರೀ ಸಡಗರ ಸಂಭ್ರಮದಿಂದ ನಡೆಯುತ್ತದೆ. ಕಲ್ಯಾಣಪ್ಪನ ದಂಡು ಬೈಲು ಇಳಿದು ಅಂಗಳಕ್ಕೆ ತಲುಪುವಾಗ ಪಾನಕ, ಕೋಸಂಬರಿ ತಯಾರಾಗಿತ್ತು. ಒಳಗೆ ಸುಮಾರು ಇನ್ನೂರು ಜನರಿಗೆ ಪಾಯಸದೂಟ ಸಿದ್ಧವಾಗಿತ್ತು. ನೆಂಟರಿಷ್ಟರು ಚಪ್ಪರದಲ್ಲಿದ್ದರು. ಮಂಗಳಾರತಿಗೆ ಕಾಯುತ್ತಿದ್ದರು. ಬೈಲಿನಿಂದಲೇ ಅಂಗಳಕ್ಕೆ ನುಗ್ಗಿದ ಸೈನಿಕರನ್ನು ನೋಡಿದ ನೆಂಟರೆಲ್ಲಾ ಗುಡ್ಡೆಗೆ ಓಡಿದರು. ಚಪ್ಪರ ಖಾಲಿಯಾಯಿತು. ಮನೆಯಲ್ಲಿ ಸುಬ್ರಹ್ಮಣ್ಯ ಭಟ್ಟರೂ ಎರಡು ಮೂರು ಹೆಂಗಸರು ಮಾತ್ರ ಉಳಿದರು. ಬೆಲ್ಲ, ಏಲಕ್ಕಿ, ಶುಂಠಿ, ಕರಿಮೆಣಸು, ಹಾಕಿ ತಯಾರಿಸಿದ ಪಾನಕವೂ, ಹತ್ತಿರವೇ ಇಟ್ಟಿದ್ದ ಸೌತೆಕಾಯಿ, ಬೇಳೆ, ತೆಂಗಿನಕಾಯಿ ಹಾಕಿ ಕಲಸಿದ್ದ ಕೋಸಂಬರಿಯೂ ದೊಡ್ಡ ಪಾತ್ರೆ

ಯಲ್ಲಿತ್ತು. ಪೂಜೆಗೆ ಕುಳಿತ್ತಿದ್ದ ಸುಬ್ರಹ್ಮಣ್ಯ ಭಟ್ಟರು ಏಳಲಿಲ್ಲ. ಹೇಗೂ ಸಾಯುವವ ಯಾಕೆ ರಾಮನ ಪೂಜೆ ಮಾಡುತ್ತಲೇ ಸಾಯಬಾರದೆಂದು ಕಣ್ಣು ಮುಚ್ಚಿಕೊಂಡು ರಾಮ ಮಂತ್ರ ಹೇಳಲು ಪ್ರಾರಂಭಿಸಿದರು. ತನ್ನ ಸರ್ವಸ್ವವನ್ನೂ ಜೀವಮಾನ ಇಡೀ ನಂಬಿದ ಆರಾಧ್ಯ ದೈವ ರಾಮನ ಕೈಗೆ ಕೊಟ್ಟರು. ಹೆಂಡತಿ ರುಕ್ಮಿಣಿಯಮ್ಮನಿಗೆ ಗೊತ್ತಿತ್ತು. ತನ್ನ ಗಂಡ ಪ್ರಾಣ ಹೋದರೂ ಏಳುವುದಿಲ್ಲವೆಂದು.

ರುಕ್ಮಿಣಿಯಮ್ಮ ಚಪ್ಪರದಡಿಯಲ್ಲಿ ಚಾಪೆ ಹಾಕಿ "ಕುಳಿತು ಕೊಳ್ಳಿ ಮಗಾ, ಕುಳಿತುಕೊಳ್ಳಿ" ಎಂದು ಸ್ವಾಗತಿಸಿದಾಗ, ಕಲ್ಯಾಣಪ್ಪನ ದಂಡಿನವರು ಈ ಮುದುಕಿಯನ್ನು ಏನು ಮಾಡುವುದೆಂದು ತಿಳಿಯದೆ, ನಿಂತು ಪೂಜೆ ನೋಡಲು ಪ್ರಾರಂಭಿಸಿದರು. ಕಲ್ಯಾಣಪ್ಪನೂ ತಲೆಯ ಮುಂಡಾಸು, ಕೈಲ್ಲಿದ್ದ ತುಪಾಕಿ, ಕತ್ತಿಗಳನ್ನು ಸೈನಿಕನೊಬ್ಬನ ಕೈಗೆ ಕೊಟ್ಟು ದೇವರ ಕೋಣೆಯ ಎದುರು ಅಂಗಳದಲ್ಲಿ ಕಣ್ಣು ಮುಚ್ಚಿ ನಿಂತುಕೊಂಡ.

ಸುಬ್ರಹ್ಮಣ್ಯ ಭಟ್ಟರು ಮಂಗಳಾರತಿ ತಟ್ಟೆ ತೆಗೆದುಕೊಂಡರು. ಶಂಖ ಊದಲು, ಜಾಗಟೆ ಬಾರಿಸಲು ಜನವಿರಲಿಲ್ಲ. 'ರುಕ್ಕೋ' ಎಂದು ಹೆಂಡತಿಯನ್ನು ಕರೆದರು. ಶಂಖ, ಜಾಗಟೆ ಅವರ ಕೈಗೆ ಕೊಟ್ಟರು. ರುಕ್ಮಿಣಿಯಮ್ಮ ಆಚೀಚೆ ನೋಡಿ ಕಣ್ಣು ಮುಚ್ಚಿ ನಿಂತಿದ್ದ ಕಲ್ಯಾಣಪ್ಪನನ್ನು 'ಮಗಾ'ಎಂದು ಕರೆದು ಜಾಗಟೆ ಅವನ ಕೈಗೆ ಕೊಟ್ಟು, ಶಂಖ ಊದಲು ಪ್ರಾರಂಭಿಸಿದರು. ಕಲ್ಯಾಣಪ್ಪ ಜಾಗಟೆ ಬಾರಿಸಿದ. ಒಂಬತ್ತು ಬಗೆಯ ದೀಪಾರಾಧನೆ ಆಗಿ ಮಂಗಳಾರತಿ ತಟ್ಟೆ ಹಿಡಿದುಕೊಂಡು ಸುಬ್ರಹ್ಮಣ್ಯ ಭಟ್ಟರು ಹೊರಗೆ ಬರುವಾಗ ಕಲ್ಯಾಣಪ್ಪ ಜಾಗಟೆ ಬಾರಿಸುತ್ತಲೇ ಇದ್ದ. ಭಟ್ಟರು 'ಸ್ವಾಮಿ' ಎಂದು ಆರತಿ ತೋರಿಸಿದರು. ಆರತಿ ತೆಗೆದುಕೊಂಡು ಚಪ್ಪರಕ್ಕೆ ಬಂದ ಭಟ್ಟರು ಎಲ್ಲರಿಗೂ ಆರತಿ ತೋರಿಸಿದರು.

ಒಳಗಿಂದ ರುಕ್ಮಿಣಿಯಮ್ಮ ಕಂಚಿನ ಲೋಟ, ಬಾಳೆ ಎಲೆ ಹಿಡಿದುಕೊಂಡು ಹೊರಗೆ ಬಂದು ರಾಮನವಮಿಯ ಪಾನಕ, ಕೋಸಂಬರಿ ಕೊಟ್ಟಾಗ ಸೈನಿಕರು ಸುಮ್ಮನೆ ನಿಂತುಕೊಂಡರು. ಒಬ್ಬರೂ ಪಾನಕವನ್ನಾಗಲೀ, ಕೋಸಂಬರಿಯನ್ನಾಗಲೀ ಮುಟ್ಟಲಿಲ್ಲ. ರುಕ್ಮಿಣಿಯಮ್ಮ ಒಂದು ಲೋಟ ಪಾನಕವನ್ನು ಗಂಡನಿಗೆ ಕೊಟ್ಟು, ತಾನೂ ಕುಡಿದು ಕೋಸಂಬರಿ ತಿಂದು ಕೇಳಿದರು,

"ಇನ್ನು ತಿನ್ನಬಹುದಾ ಮಗಾ?"

"ಅದ್ಯಾಕೆ ಹಾಗೆ ಕೇಳಿದಿರಿ?"

ಕಲ್ಯಾಣಪ್ಪ ಕೇಳಿದ.

"ಏನಿಲ್ಲ, ನಾವು ಪಾನಕಕ್ಕಾಗಲೀ, ಕೋಸಂಬರಿಗಾಗಲೀ ವಿಷ ಹಾಕಲಿಲ್ಲ, ಮದ್ದು ಹಾಕಲಿಲ್ಲವೆಂದು ನಿಮಗೆ ತೋರಿಸಲು ಹಾಗೆ ಮಾಡಿದೆ ಮಗಾ."

"ಓಹೋ, ಹಾಗೆಯೋ" ಕಲ್ಯಾಣಪ್ಪ ಜೋರಾಗಿ ನಕ್ಕು ಹೇಳಿದ,

"ನೀವು ತಾಯಿ, ಅಂತಹದೇನೂ ಮಾಡಲಿಕ್ಕಿಲ್ಲವೆಂದು ನಮಗೆ ಗೊತ್ತಿದೆ."

"ಅದ್ಹೇಗೆ ಮಗಾ?"



"ಮಗಾ ಎಂದು ಕರೆದ ತಾಯಿ ಮಕ್ಕಳಿಗೆ ಮದ್ದು ಹಾಕುವುದಿಲ್ಲವೆಂದು ನನಗೆ ಗೊತ್ತಿದೆ. ನಮ್ಮ ಸಮಸ್ಯೆ ಅದಲ್ಲ."

"ಮತ್ತೇನು?"

"ಪಾನಕ ಕುಡಿದು, ಕೋಸಂಬರಿ ತಿಂದಾದ ಮೇಲೆ ಈ ಮನೆಯನ್ನು ಹೇಗೆ ದೋಚುವುದು? ಚಿನ್ನ, ಹಣ ಹೇಗೆ ಕೊಂಡು ಹೋಗುವುದು? ಎಂಬುದೇ ನಮ್ಮ ಸಮಸ್ಯೆ."

"ಅಯ್ಯೋ! ಅಷ್ಟೇನಾ ಮಗಾ, ನಮ್ಮ ಮನೆಯಲ್ಲಿದ್ದ ಚಿನ್ನ, ಹಣ ಎಲ್ಲವನ್ನೂ ನಮ್ಮ ಕೈಯಾರೆ ನಿಮಗೆ ಕೊಡುತ್ತೇವೆ. ಪಾನಕ ಕುಡಿದು ಕೋಸಂಬರಿ ತಿನ್ನಿ. ಶ್ರೀರಾಮನ ಆಶೀರ್ವಾದ ಅದು, ಸುಸ್ತಾಗಿ ಹಸಿವಿನಿಂದ ಬಂದಿದ್ದೀರಿ, ಬನ್ನಿ ತಿನ್ನಿ"

ರುಕ್ಮಿಣಿಯಮ್ಮ ಪಾನಕವನ್ನೂ ಕೋಸಂಬರಿಯನ್ನೂ ಕಲ್ಯಾಣಪ್ಪನ ಕೈಗೆ ಕೊಟ್ಟಾಗ ಆತ ಅದನ್ನು ಕುಡಿದು, ತಿಂದ. ಸುಬ್ರಹ್ಮಣ್ಯ ಭಟ್ಟರು ಸೈನಿಕರಿಗೆಲ್ಲ ಹಂಚಿದರು. ಸೈನಿಕರೆಲ್ಲ ಪಾನಕ ಕುಡಿದು ಕೋಸಂಬರಿ ತಿಂದರು.

ರುಕ್ಮಿಣಿಯಮ್ಮ ಗಂಡನನ್ನು ಕರೆದು ಬೀಗದ ಕೈಗೊಂಚಲನ್ನು ಕೊಟ್ಟರು. ಭಟ್ಟರು ಹಣದ ಪೆಟ್ಟಿಗೆಯನ್ನು ಪೆಠಾರಿಯಿಂದ ತೆಗೆದು ಚಾವಡಿಯಲ್ಲಿಡುವಾಗ, ರುಕ್ಮಿಣಿಯಮ್ಮ ಚಿನ್ನಾಭರಣಗಳ ಪೆಟ್ಟಿಗೆಯನ್ನು ತಂದಿಟ್ಟವರೇ ಒಂದು ಮಾತು ಹೇಳಿದರು.

"ಮಗಾ, ಈ ಚಿನ್ನ, ಹಣ, ಒಡವೆಯ ಪೆಟ್ಟಿಗೆ ತೆಗೆದುಕೊಳ್ಳುವುದಕ್ಕಿಂತ ಮೊದಲು ನನ್ನ ಒಂದು ಕೇಳಿಕೆಯಿದೆ. ಬೇಡವೆಂದು ಹೇಳಬಾರದು. ಕೇಳಬಹುದಾ ನಾನು?"

"ಕೇಳಿ, ಏನು ಕೇಳಿತ್ತೀರಿ?"

"ನಾನು ಕೇಳಿದ ಮೇಲೆ ಇಲ್ಲವೆಂದು ಹೇಳಬಾರದು. ನೀವು ಸುಸ್ತಾಗಿ ಬಂದಿದ್ದೀರಿ. ನನ್ನ ಎಣಿಕೆಯಂತೆ ನೀವು ಸರಿಯಾಗಿ ಊಟ ಮಾಡದೆ ಕೆಲವು ದಿನಗಳಾದರೂ ಆಗಿರಬಹುದು. ರಾಮನವಮಿಯ ಊಟ ತಯಾರಾಗಿದೆ. ನೀವೆಲ್ಲರೂ ಊಟ ಮಾಡಿ ಹೋಗಬೇಕು. ಯಾರಿಗಾಗಿ ಅಡುಗೆ ಮಾಡಿದ್ದೋ ಅವರ ಹಣೆಯಲ್ಲಿ ಅದು ಬರೆಯಲಿಲ್ಲ. ನೀವಾದರೂ ಉಂಡು ಹೋದಿರಾದರೆ ಆ ಸೀತಾರಾಮರಿಗೆ ತೃಪ್ತಿಯಾಗಬಹುದು. ನಮಗೆ ಪುಣ್ಯ ಸಿಗಬಹುದು. ಏನು ಹೇಳ್ತಿ?"

"ಅಮ್ಮನ ಅಪ್ಪಣೆಯಾದರೆ ಬೇಡವೆಂದು ಹೇಳುವ ಮಗ ಯಾರಿದ್ದಾನೆ? ಬನ್ನಿ ತಾಯಿ, ನಾನು ಎಲೆ ಹಾಕಬೇಕು. ನೀವು ಬಡಿಸಬೇಕು. ನಾವು ಅದನ್ನು ಉಣ್ಣಬೇಕು. ಅದುವೇ ದೇವರ ಪ್ರಸಾದ ನನಗೆ."

ಗಳಿಗೆ ಕಳೆದಾಗ ಸುಸ್ತಾಗಿ ಹಸಿದು ಬಂದ ಸೈನಿಕರು ಪಾಯಸದ ಊಟ ಮಾಡಿ "ಹರಹರ ಮಹಾದೇವ" ಎಂದು ಹೇಳಿ ಎದ್ದರು. ಹೊರಡುವಾಗ ಚಾವಡಿಯಲ್ಲಿ ನಿಂತಿದ್ದ ರುಕ್ಮಿಣಿಯಮ್ಮನ ಕಾಲಿಗೆ ಬಿದ್ದ ಕಲ್ಯಾಣಪ್ಪನಿಗೆ ಭಟ್ಟರು ಹೇಳಿದರು.

"ಚಿನ್ನ, ಹಣ ತೆಗೆದುಕೊಂಡು ಹೋಗಿ"

"ಭಟ್ರೆ, ಉಂಡ ಮನೆಗೆ ಕನ್ನ ಹಾಕಿ ದೋಚುವ ಘಟಿಂಗರಲ್ಲ ನಾವು. ನಾವು

ಪರದೇಶದಿಂದ, ತುಳುವಮ್ಮನನ್ನು ದೋಚಲು ಬಂದ ಕೆಂಪು ಮೂತಿಯವರನ್ನು ಓಡಿಸಲು ಬಂದ ಸ್ವಾತಂತ್ರ್ಯ ಹೋರಾಟಗಾರರು.''

ಕಾಲಿಗೆ ಬಿದ್ದವನ ತಲೆ ಸವರಿದ ರುಕ್ಮಿಣಿಯಮ್ಮನ ಕಣ್ಣಲ್ಲಿ ನೀರಾಡಿತು. ತಲೆ ಸವರಿ ನಿಂತಿದ್ದ ಅನ್ನಪೂರ್ಣೇಶ್ವರಿಯ ಮುಖ ನೋಡಿದ ಕಲ್ಯಾಣಪ್ಪನ ಕಣ್ಣಲ್ಲೂ ನೀರು ತುಂಬಿತು. ರುಕ್ಮಿಣಿಯಮ್ಮ ಕೇಳಿದರು,

''ನನಗೊಂದು ಭಿಕ್ಷೆ ಕೊಡಲಾರೆಯಾ ಮಗಾ?''

''ಬೇಡುತ್ತಾ, ದೋಚುತ್ತಾ ಹೋಗುವ ಸೈನಿಕನಲ್ಲಿ ಏನು ಕೇಳುತ್ತೀರಮ್ಮಾ? ಕೇಳಿ. ನನ್ನಿಂದ ಸಾಧ್ಯವಾದರೆ ಕೊಡುತ್ತೇನೆ. ಆದರೆ ಇನ್ನೊಂದು ಊಟಕ್ಕೆ ನಿಲ್ಲಲು ಹೇಳಬೇಡಿ. ಸಮಯವಿಲ್ಲ ನನಗೆ.''

''ಮಗಾ, ಈ ಮಾಗಣೆ ಬಡವರ, ದುಡಿಯುವವರ ಊರು. ಇಲ್ಲಿ ಮನೆಗಳನ್ನು ದೋಚಿ, ಹೆಣ್ಣು ಮಕ್ಕಳನ್ನು ಅತ್ಯಾಚಾರ ಮಾಡುವುದನ್ನೆಲ್ಲಾ ಬಿಟ್ಟು ನೇರ ಮಂಗಳೂರಿಗೆ ಹೋಗಿ ಆ ಕೆಂಪು ಮೂತಿಯವರ ಭಂಡಾರ ಲೂಟಿ ಮಾಡು. ಬಡವರನ್ನು ದೋಚಿದೆ ಎಂದಾದರೆ ಅವರು ಕೊಡುವ ಶಾಪವಲ್ಲದೆ ಬೇರೇನು ಸಿಗುತ್ತದೆ ಹೇಳು ನಿನಗೆ?''

ಕಲ್ಯಾಣಪ್ಪ ಹಾಗೂ ದಂಡಿನವರು ಮುದುಕಿಯ ಮಾತನ್ನು ಕೇಳಿದರು. ಒಂದು ನಿಮಿಷ ಯಾರೂ ಏನೂ ಮಾತನಾಡಲಿಲ್ಲ, ಒಬ್ಬರ ಮುಖವನ್ನೊಬ್ಬರು ನೋಡುತ್ತಿದ್ದರು. ಎಲ್ಲರೂ ಕಲ್ಯಾಣಪ್ಪನ ಮುಖ ನೋಡಿದಾಗ ಕಲ್ಯಾಣಪ್ಪ ಹೇಳಿದ,

''ಹರಹರ ಮಹಾದೇವಾ! ಬನ್ನಿ, ನಾವು ನಮ್ಮ ಈ ತಾಯಿ ಹೇಳಿದ ಮಾತಿಗೆ ಬೆಲೆ ಕೊಟ್ಟು, ಅವರ ಇಂಗಿತವನ್ನು ನಡೆಸಿಕೊಡುತ್ತೇವೆಂದು ಮಾತು ಕೊಡೋಣ. ಈ ಅನ್ನಪೂರ್ಣೇಶ್ವರಿ ಅಮ್ಮನ ಅನ್ನದ ಋಣವನ್ನು ತೀರಿಸಿಕೊಳ್ಳೋಣ. ಬನ್ನಿ, ನಾವು ಉಕ್ಕುಡ ದಿಂದಲೇ ಕನ್ಯಾನ, ವಿಟ್ಲಕ್ಕೆ ಹೋಗಿ ವಿಟ್ಲದ ಕಂಪನಿ ಸರಕಾರದ ಖಜಾನೆಯನ್ನು ಎತ್ತಿಕೊಂಡು ಮಂಜೇಶ್ವರಕ್ಕೆ ಹೋಗೋಣ. ಇನ್ನು ಮಂಗಳೂರಿನ ಪೇಟೆಗೆ ಮುಟ್ಟುವವರೆಗೆ ಮನೆ ದೋಚುವ ಅಥವಾ ಕೊಳ್ಳಿಯಿಡುವ ಸುದ್ದಿ ನನ್ನ ಕಿವಿಗೆ ಬೀಳಬಾರದು. ಯಾರಾದರೂ ಹೆಣ್ಣು ಮಕ್ಕಳನ್ನು ಅತ್ಯಾಚಾರ ಮಾಡಿದ ಸುದ್ದಿ ನನ್ನ ಕಿವಿಗೆ ಬಿದ್ದರೆ ಸ್ವತಃ ನಾನೇ ಶಿಕ್ಷೆ ಕೊಡುತ್ತೇನೆ. ನೆನಪಿರಲಿ''

ತಿರುಗಿ ನೋಡದೆ ಕಲ್ಯಾಣಸ್ವಾಮಿ 'ಉಂಡ ಮನೆಯ' ಅಂಗಳದಿಂದ ಮರಳಿದನಂತೆ.

★★★

ಸುಬ್ರಾಯ ಶಾನುಭೋಗರು ಈ ಕತೆ ಹೇಳುವಾಗ ಮಂಜಣಾಳ್ವನಿಗೆ ಒಂದು ಪವಾಡವೇ ನಡೆದಂತಾಯಿತು.



''ಇನ್ನು......?''

''ಅವರು ಈಗ ಮಂಜೇಶ್ವರಕ್ಕೆ ಬಂದು ಮಂಗಳೂರಿಗೆ ಹೋಗುವುದೆಂದು ತೀರ್ಮಾನವಾಗಿದೆ. ಮಂಜೇಶ್ವರದಲ್ಲಿ ಸುಬ್ರಾಯ ಹೆಗ್ಡೆಯ ದಂಡು ಅವರನ್ನು ಸೇರಿಕೊಂಡು ಅಲ್ಲಿಂದ ಎಲ್ಲಿಗೆ-ಏನು ಎಂದು ಯೋಚಿಸುತ್ತಾರಂತೆ. ಕಲ್ಯಾಣ ಸ್ವಾಮಿಯ ದಂಡು ಸುಮಾರು ಎರಡು ಸಾವಿರ ಇರಬಹುದು. ನಾವು ನಮ್ಮ ಜಾಗ್ರತೆಯಲ್ಲಿರಬೇಕು.''

''ದೋಚಲೆಂದೇ ಬಂದು ಕಲ್ಯಾಣಪ್ಪನ ದಂಡಿನಲ್ಲಿರುವ ಯುವಕರು ದೋಚದೆ ಇರಲು ಸಾಧ್ಯವೇ ಶಾನುಭೋಗರೇ?''

''ಕಲ್ಯಾಣಪ್ಪನ ಭಯದಿಂದ ಹಾಗೂ ನಮ್ಮ ದಂಡಿನ ತಯಾರಿಯನ್ನು ನೋಡಿ ದರೋಡೆಕೋರರು ಹೆಚ್ಚಿನ ಗಲಾಟೆ ಮಾಡದೆ ಮಂಗಳೂರಿಗೆ ಹೋಗಲೂಬಹುದು. ನಾಳೆ ಇಚ್ಲಂಪಾಡಿಯ ಸೇನೆಯೂ ನಮ್ಮ ಪಾಡಿ ಕುಂಬಳೆಯ ಸೇನೆಯೂ ನಿನ್ನೊಂದಿಗೆ ಸೇರಿದರೆ ಮಂಜೇಶ್ವರ ಮಾಗಣೆಯಲ್ಲಿ ಯಾವುದೇ ಗಡಿಬಿಡಿ ಇಲ್ಲದೆ ಹೋಗಲೂಬಹುದು. ನಾನು ಈಗ ಬಂದುದು ಅದನ್ನು ಹೇಳಲು ಅಲ್ಲ. ನಾಳೆ ಸುಬ್ರಾಯ ಹೆಗ್ಡೆ ಹಾಗೂ ಕಲ್ಯಾಣಪ್ಪನ ಸೇನೆ ಮಂಜೇಶ್ವರದಲ್ಲಿ ಒಟ್ಟಾಗುವಾಗ ಅವರಿಗೊಂದು ಊಟ ಹಾಕುವ ವ್ಯವಸ್ಥೆ ಮಾಡಬೇಕು. ಮಂಜೇಶ್ವರದ ವ್ಯಾಪಾರಿಗಳು ಸ್ವಲ್ಪ ಹಣ, ಚಿನ್ನ ಒಟ್ಟು ಮಾಡಿ ಕಲ್ಯಾಣಪ್ಪನಿಗೆ ಕೊಟ್ಟರಾದರೆ ಕಲ್ಯಾಣಪ್ಪ ದಾಂಧಲೆ ಮಾಡದೆ ಊರು ಬಿಡಲೂಬಹುದು.''

''ಅಲ್ಲ ಸ್ವಾಮಿ, ಕಲ್ಯಾಣಪ್ಪನ ಸೇನೆಯ ವಿರುದ್ಧ ನಾವು ಹೋರಾಡಿ ಅವರ ಡಕಾಯಿತಿಯನ್ನು ಅಲ್ಲೇ ಮುಗಿಸುವುದು ಒಳ್ಳೆಯದಲ್ಲವೇ ಸ್ವಾಮಿ?''

''ಮಂಜಣಾಳ್ವ, ನೀನು ಯುವಕ. ನಿನ್ನ ಬಿಸಿ ರಕ್ತಕ್ಕೆ ಯುದ್ಧವೇ ಇಷ್ಟವೆಂದು ನನಗೆ ಗೊತ್ತು. ಆದರೆ ಯೋಚನೆ ಮಾಡು. ಸೋಲು-ಗೆಲುವು ಯಾರದೇ ಆಗಿರಲಿ, ಕಡಿಮೆ ಯೆಂದರೂ ಎರಡು ಮೂರು ಸಾವಿರ ಸೈನಿಕರು ಸಾಯಬಹುದು. ಎಷ್ಟೋ ಜನ ಕೈಕಾಲು ಕಳೆದುಕೊಳ್ಳಬಹುದು. ಯುದ್ಧದ ಪರಿಣಾಮ ಒಂದು ದಿನ ಅಲ್ಲ , ಎಷ್ಟೋ ವರ್ಷ ಅನುಭವಿಸಬೇಕಾದೀತು. ಎಷ್ಟೋ ಕುಟುಂಬಗಳು, ಎಷ್ಟೋ ಮನೆಗಳು ಈ ಯುದ್ಧದಿಂದಾಗಿ ಹಾಳಾಗುತ್ತವೆ ಗೊತ್ತಾ? ಬೇಸಾಯ ಮಾಡಿಕೊಂಡು ಸುಖದಿಂದ ಗಂಜಿಯೋ, ಅಂಬಲಿಯೋ ಕುಡಿಯುತ್ತಿರುವ ರೈತ, ಲೋಕಕ್ಕೆ ಒಳ್ಳೆಯದಾಗಲೆಂದು ಪೂಜೆ ಮಾಡಿ ಕೊಂಡು ದೇವರಲ್ಲಿ ಬೇಡುತ್ತಿರುವ ಭಟ್ಟರು, ವ್ಯಾಪಾರ ಮಾಡುತ್ತಿರುವ ಸೆಟ್ಟಿ, ಬ್ಯಾರಿ, ಕೊಂಕಣಿ, ಬಂಟ ಬಾರಗೆಯವರು ಎಷ್ಟು ವರ್ಷಗಳವರೆಗೆ ಈ ಯುದ್ಧದ ನೋವನ್ನು ಅನುಭವಿಸಬೇಕಾಗುತ್ತದೆ ಗೊತ್ತಾ?''

''ನಮ್ಮ ರಾಜ್ಯದಲ್ಲಿ ಇಕ್ಕೇರಿಯ ನಾಯಕರು, ಅಬ್ಬಕ್ಕ, ಪೋರ್ಚುಗೀಸರ ಯುದ್ಧ, ಮೈಸೂರು ಸುಲ್ತಾನರ ಕಾಳಗದ ಪರಿಣಾಮ ಈಗಲೂ ನಾವು ಅನುಭವಿಸುತ್ತಿದ್ದೇವೆ. ಆ ಪುಸಲರನ್ನು ನೋಡು. ಮೈಸೂರು ಸುಲ್ತಾನನ ಸುಬೇದಾರನ ಅಹಂಕಾರದ ಮತಾಂಧತೆಯ ಫಲ ಅವರು. ಹಾಳಾಗಿ ಬಿದ್ದಿರುವ ನಮ್ಮ ಬಸದಿಗಳನ್ನು, ದೈವ, ದೇವರ ಗುಡಿಗಳನ್ನು

ನೋಡು. ಅದೆಲ್ಲಾ ಯುದ್ಧದ ಫಲ. ಈ ದಂಡು ಹಿಡಿದುಕೊಂಡು ಬಂದವರು ನಮ್ಮ ದೇವಸ್ಥಾನ, ದೈವಸ್ಥಾನಗಳ ಭಂಡಾರಗಳನ್ನು ದೋಚಿ, ಮೂರ್ತಿಗಳನ್ನು ಪುಡಿಗೈದು ಹೋದರು. ಅಂತಹ ಯುದ್ಧ ನಮ್ಮ ಊರಿಗೆ ಬೇಕೇ ಮಂಜಣಾ? ದಾರಿಯಲ್ಲಿ ಹೋಗುವ ಮಾರಿ ದಾರಿಯಲ್ಲೇ ಹೋಗುವುದು ಒಳಿತಲ್ಲವೇ? ಅದನ್ನು ಮನೆಗೆ ಕರೆಯಬೇಕಾ? ಊರಿಗೆ ಹೋಗಿ ಇನ್ನು ನಾಲ್ಕು ಬೆಟ್ಟು ಗದ್ದೆ ಅಗೆದು ತೆಂಗು, ಬಾಳೆ ನೆಟ್ಟು ಬೆಳೆಸುವುದು ಒಳ್ಳೆಯದಲ್ಲವಾ? ಗುಡ್ಡ ಅಗೆದು ಹೊಳೆಯ ನೀರು, ನೆರೆ, ಮಳೆಗಳ ಜೊತೆ ಹೋರಾಟ ಮಾಡುವುದು ಈ ಕತ್ತಿ, ತುಪಾಕಿಗಳ ಜೊತೆ ಹೋರಾಟ ಮಾಡುವುದಕ್ಕಿಂತ ಎಷ್ಟೋ ಸುಖ. ಅಲ್ಲವೇ ಹೇಳು?''

ಕೇಳುತ್ತಿದ್ದ ಮಂಜಣನಿಗೆ ತಾನು ಅಗೆದು ಮಾಡಿದ ಗದ್ದೆ, ತೋಟಗಳು, ಬಾವಿ, ಕೋಳ, ಏತಗಳೆಲ್ಲಾ ತನ್ನ ಕಣ್ಣೆದುರು ತೇಲಿ ಬಂದವು.

''ಹೌದು ಸ್ವಾಮಿ, ಮಲಗುವಾಗ ಅದನ್ನೇ ನೆನೆದು ನಿದ್ದೆ ಬರುವುದಿಲ್ಲ. ನಮ್ಮ ಮನೆಯಲ್ಲಿ ಮದುವೆಗೆ ತಯಾರಾಗಿ ಕುಳಿತ ತಂಗಿಯರ ನೆನಪಾಗುತ್ತದೆ. ಕಂಬಳದ ಗದ್ದೆಯನ್ನು ಯಾವಾಗ ಹದಗೊಳಿಸಲಿಲ್ಲವೆಂದಾಗುತ್ತದೆ. ಬಿಟ್ಟರೆ ಈಗಲೇ ಬೈಲಿಗೆ ಓಡಿ, ಹೊಳೆಗೆ ಹಾರಿ ಆ ಬದಿ ಈ ಬದಿ ಈಜೋಣವೆನಿಸುತ್ತಿದೆ.''

''ಏಳು, ಪೇಟೆಗೆ ಹೋಗಿ ಕೊಂಕಣಿಗರ ಸಮಾಜವನ್ನು, ವ್ಯಾಪಾರದ ಬ್ಯಾರಿಗಳನ್ನು, ಭಂಡಸಾಲೆಯ ಸೆಟ್ಟಿಗಳನ್ನು ಒಟ್ಟು ಮಾಡಿ ನಾಳೆಯ ದಿನವನ್ನು ಹೇಗೆ ಸುಧಾರಿಸುವುದೆಂದು ಯೋಚಿಸೋಣ.''

ಶಾನುಭೋಗರೂ, ಮಂಜಣಾಳ್ವರೂ ಎಲ್ಲರಿಗೂ ಆಳು ಕಳುಹಿಸಿ, ರಥಬೀದಿಯ ಭಕ್ತರ ಮಠದಲ್ಲಿ  ಸೇರಿಸಿ ತಮ್ಮ ಯೋಜನೆಯನ್ನು ಅವರ ಮುಂದಿಟ್ಟರು. ಮಾತುಕತೆ ಮುಗಿದಾಗುವಾಗ ಕಲ್ಯಾಣಪ್ಪನ ದಂಡಿಗೆ ದೇವಸ್ಥಾನದಲ್ಲೂ, ಸುಬ್ರಾಯ ಹೆಗ್ಡೆಯ ಸೇನೆಗೆ ಬಸದಿಯಲ್ಲೂ ಊಟದ ವ್ಯವಸ್ಥೆಯ ಏರ್ಪಾಡಾಯಿತು. ಕುಂಬಳೆ ಸೇನೆಯವರಿಗೆ ಬಡಾಜೆ ತಂತ್ರಿಗಳ ದೇವಸ್ಥಾನದಲ್ಲಿ ಊಟದ ಏರ್ಪಾಡಾಯಿತು. ಕೋಚಣ್ಣಾಳ್ವರ ಸೇನೆಗೆ ತಲಪಾಡಿ ಗುತ್ತಿನಲ್ಲೂ, ಮಂಜಣಾಳ್ವರ ದಂಡಿಗೆ ಭಂಡಾರಿ ಮಠದ ಭಂಡಾರಿಗಳ ಮನೆಯಲ್ಲೂ ಊಟದ ವ್ಯವಸ್ಥೆ ಮಾಡುವುದೆಂದು ತೀರ್ಮಾನವಾಗುವಾಗ ಮಧ್ಯರಾತ್ರಿ ಕಳೆಯಿತು. ಮಂಜಣಾಳ್ವರ ಭಾವ ಕಾಂತಣ್ಣನನ್ನು ಮಿತ್ತಬೈಲು, ಕೋಳ್ಯೂರು, ಸುಂಕದಕಟ್ಟೆಗಳ ಕಾವಲಿಗೆ ಕಳುಹಿಸಿ, ಶಾನುಭೋಗರನ್ನು ಬಡಾಜೆಗೆ ಕಳುಹಿಸಿ ಹೊರಡುವಾಗ ಬೊಬ್ಬರ್ಯ ಕಲ್ಲಿನ ಬಳಿಯಿಂದ ಬೊಬ್ಬೆ ಕೇಳಿಸಿತು. ಹೊಳೆಬದಿಯಲ್ಲಿದ್ದ ಸೇನೆಯವರಲ್ಲಿ ಬೋವಿಗಳ ಮತ್ತು ಪುಸಲರ ಜನ ಬಂದು ದೂರು ಕೊಟ್ಟು ಬೊಬ್ಬೆ ಹೊಡೆಯುತ್ತಿದ್ದರು.

ವಿಚಾರಿಸುವಾಗ ಬೆಂಗ್ರೆಯಲ್ಲಿ ಎರಡು ಮನೆಗಳಿಗೆ ನುಗ್ಗಿದ ಪುಂಡರು ಇಬ್ಬರು ಹರೆಯದ ಯುವತಿಯರನ್ನು ಎತ್ತಿಕೊಂಡು ಹೋಗಿದ್ದಾರೆಂದು ತಿಳಿದುಬಂತು. ವಿಚಾರಣೆಯಲ್ಲಿ ಮಂಜಣಾಳ್ವರ ಬೇಹುಗಾರರು ಅದು ಬೀರಣ್ಣ ಬಂಟನ ಸೇನೆಯವರು ಮಾಡಿದ



ಕೃತ್ಯ ಎಂಬ ಸುದ್ದಿಯನ್ನು ತಿಳಿಸಿದರು. ಮಂಜಣ, ಶಾನುಭೋಗರನ್ನು ಬಡಾಜೆಗೆ ಕಳುಹಿಸಿ ಐವತ್ತು ಜನ ಕುದುರೆ ಸವಾರ ಸೈನಿಕರನ್ನು ಕೂಡಿಸಿಕೊಂಡು ಬೊಬ್ಬರ್ಯ ಕಲ್ಲಿನ ಬಳಿ ಹೋದ. ಊರಿನ ಪುಸಲರನ್ನೂ, ಬೋವಿಗಳನ್ನೂ ಒಟ್ಟು ಸೇರಿಸಿ, ಪಂಜು, ದೀವಟಿಗೆ ಹಿಡಿದು, ಕಡಲ ತೀರದ ಕೇರಿಗಳಲ್ಲಿ ಬೀರಣ್ಣ ಬಂಟನ ಸೈನಿಕರನ್ನು ಹುಡುಕಲು ಹೇಳಿದ.

ಅಷ್ಟಾಗುವಾಗ ಮಂಜೇಶ್ವರದ ಹೊಳೆ ಬದಿಯಿಂದ ದೇವಯ ಭಂಡಾರಿಗಳ ಹಿತ್ತಲಲ್ಲಿ ಬೊಬ್ಬೆ ಕೇಳಿ ಬಂತು. ಮಂಜಣ ಕೆಲವೇ ಸೈನಿಕರನ್ನು ಕರೆದುಕೊಂಡು ಕುದುರೆಯನ್ನು ಭಂಡಾರ ಮಠದ ಹಿತ್ತಲಿಗೆ ಓಡಿಸಿದ. ಭಂಡಾರಿಗಳ ಹಿತ್ತಲಲ್ಲಿ ಮಲಗಿಕೊಂಡಿದ್ದ ಕುಂಬಳೆ ಸೇನೆಯನ್ನು ಬೀರಣ್ಣನ ಪುಂಡರು ಕೊಚ್ಚಿ ಹಾಕಲು ಪ್ರಾರಂಭಿಸಿದ್ದರು. ಕೈ ಕೈ ಕತ್ತಿಯ ಕಾಳಗ ಭಾರೀ ಜೋರಾಗಿ ನಡೆಯುತ್ತಿತ್ತು. ಮಂಜಣನ ಕುದುರೆ ಅಂಗಳಕ್ಕೆ ನುಗ್ಗಿ 'ಜೈ ದುರ್ಗೆ' ಎಂದು ಎರಗಿದಾಗ ಪುಸಲರ ಪುಂಡ ಹುಡುಗರು ಓಡಲು ಪ್ರಾರಂಭಿಸಿದರು. ಮಂಜಣನ 'ಜೈ ದುರ್ಗೆ' ಜಯಕಾರ ಅವನ ಸೇನೆಗೆ ಆನೆಯ ಬಲ ಕೊಟ್ಟಿತು. ಬೀರಣ್ಣನ ಸೇನೆ ಓಡಲೂ ಸಾಧ್ಯವಿಲ್ಲ ನಿಲ್ಲಲೂ ಸಾಧ್ಯವಿಲ್ಲ ಎಂಬ ಪರಿಸ್ಥಿತಿಯಲ್ಲಿ ಬಿತ್ತು. ಮಂಜಣಾಳ್ವನ ಕತ್ತಿ ಮೂರ್‍ನಾಲ್ಕು ಮಂದಿಯನ್ನು ಬಲಿ ತೆಗೆದುಕೊಂಡಿತು. ಆ ಹೊತ್ತಿಗೆ ಭಂಡಾರ ಮಠದ ಚಾವಡಿಯಿಂದ ''ಕಾಪಾಡೀ, ಕಾಪಾಡೀ ಆಳ್ವರೇ'' ಎಂಬ ದುರ್ಗಮ್ಮನ ಆಕ್ರಂದನ ಕೇಳಿ ಕುದುರೆಯಿಂದ ಹಾರಿ ಚಾವಡಿ ಹತ್ತುವಾಗ ಬೀರಣ್ಣನ ಸೈನಿಕರು ಮಂಜಣಾಳ್ವರ ಕತ್ತಿಯ ಪೆಟ್ಟಿಗೆ ಸಿಕ್ಕಿದರು. ಒಳಗಿಂದ ದುರ್ಗಮ್ಮನ ಸಿರಿಮುಡಿ ಹಿಡಿದು ಎಳೆದುಕೊಂಡು ಬರುತ್ತಿದ್ದ ಬೀರಣ್ಣನನ್ನು ನೋಡಿದ ಮಂಜಣ ಕೈಯಲ್ಲಿದ್ದ ತಲವಾರಿನಿಂದ ಅವನ ಕೈಗೆ ಕಡಿದ. ದುರ್ಗಮ್ಮನ ಕೂದಲು ಬಿಟ್ಟು ತಿರುಗಿದ ಬೀರಣ್ಣ ಇನ್ನೊಂದು ಕೈಯಿಂದ ಬೆತ್ತ ಬೀಸಿದಾಗ ಮಂಜಣ ಆ ಕೈಯನ್ನೂ ಕಡಿದಾಗ ಬೆತ್ತ, ಕೈ ಎರಡೂ ಉದುರಿದವು. ಬೀರಣ್ಣ ಅಲ್ಲೇ ಚಾವಡಿಯಲ್ಲಿ ಉರುಳಿದ. ಮಂಜಣನ 'ಜೈ ದುರ್ಗೆ' ಎಂಬ ಆರ್ಭಟವೂ, ಬೀರಣ್ಣನ 'ಅಯ್ಯೋ ಅಪ್ಪಾ' ಎಂಬ ಕೂಗೂ ಒಂದಾದವು. ಚಾವಡಿಯಿಂದ ಬೀರಣ್ಣನನ್ನು ಒದ್ದು ಅಂಗಳಕ್ಕೆ ಹಾಕಿದಾಗ, ರಥಬೀದಿಯಿಂದ ಓಡುತ್ತಾ ಬಂದ ಸೇನೆಯವರು ಬೀರಣ್ಣನ ಸೈನಿಕರನ್ನು ಹಾಗೂ ಕೆಲವು ಓಡದೆ ಇದ್ದ ಪುಸಲರ ಹುಡುಗರನ್ನು ಹಿಡಿದರು. 'ಹರಹರ ಮಹಾದೇವ' ಎನ್ನುತ್ತಾ ಓಡಲು ನೋಡಿದ ಬೀರಣ್ಣ ಬಂಟನನ್ನು ಸೈನಿಕರು ಹಿಡಿದು ಕಟ್ಟಿ ಕೊಟ್ಟಿಗೆಗೆ ಹಾಕಿದರು. ಹೆಣಗಳನ್ನು ಚಾವಡಿಯಿಂದ ತೆಗೆಸುವಾಗ ಸೈನಿಕರು ಕಡಲ ಬದಿಯ ಸುದ್ದಿ ತಂದರು. ಅಪಹರಿಸಿದ ಬೋವಿಗಳ ಹೆಣ್ಣುಗಳನ್ನು ಬೊಬ್ಬರ್ಯ ಕಲ್ಲಿನ ಬಳಿ ಹಾಕಿದ್ದರಂತೆ. ಪುಸಲರ ಹೆಣ್ಣೊಂದು ಹೊಯ್ಗೆಯಲ್ಲಿ ಅರೆ ಜೀವದಿಂದ ಬಿದಿತ್ತು. ಸುದ್ದಿ ಕೇಳಿ ಚಾವಡಿಗೆ ಬಂದ ಮಂಜಣಾಳ್ವನಿಗೆ ದುರ್ಗಮ್ಮನ ನೆನಪಾಯಿತು.

ಹೆದರಿ ಎಚ್ಚರ ತಪ್ಪಿ ಬಿದ್ದಿದ್ದ ದುರ್ಗಮ್ಮನ ಮುಖಕ್ಕೆ ನೀರು ಚಿಮುಕಿಸಿ ಎಬ್ಬಿಸಿದಾಗ ಕಣ್ಣು ಬಿಟ್ಟ ದುರ್ಗಮ್ಮ ಮಂಜಣಾಳ್ವನನ್ನು ಅಪ್ಪಿ ಹಿಡಿದು ಬಿಕ್ಕಿ ಬಿಕ್ಕಿ ಅಳತೊಡಗಿದರು.

ಅವರ ದೇಹ ಬಿರುಗಾಳಿಗೆ ಸಿಕ್ಕಿದ ತರಗೆಲೆಯಂತೆ ನಡುಗುತ್ತಿತ್ತು. ಮಂಜಣಾಳ್ವ ದುರ್ಗಮ್ಮನನ್ನು ಸಮಾಧಾನಿಸಿ ಒಳಗಿನ ಕೋಣೆಗೆ ಎತ್ತಿಕೊಂಡು ಹೋದಾಗ ಅಳು ನಿಲ್ಲಿಸಿದ ದುರ್ಗಮ್ಮ ಅಪ್ಪಿ ಹಿಡಿದ ಕೈಯನ್ನು ಸಡಿಲಿಸಲಿಲ್ಲ.

ದುರ್ಗಮ್ಮನ ತಲೆ ಸವರಿದ ಮಂಜಣ ಅವರನ್ನು ಬರಸೆಳೆದು ಗಟ್ಟಿಯಾಗಿ ಹಿಡಿದುಕೊಂಡನು. ಒಬ್ಬರನ್ನೊಬ್ಬರು ಅಪ್ಪಿ ಹಿಡಿದುಕೊಂಡು ಎಷ್ಟು ಹೊತ್ತು ಹಾಗೇ ನಿಂತಿದ್ದರೋ ಅವರಿಗೇ ತಿಳಿದಿರಲಿಲ್ಲ, ಹೊರಗಿಂದ ಸೈನಿಕರು ಕರೆದಾಗಲೇ ಎಚ್ಚರಿಕೆಯಾದುದು. ಮಂಜಣ ಅವರ ಹಣೆಯನ್ನೊಮ್ಮೆ ಚುಂಬಿಸಿ ಮುಖವನ್ನು ಎತ್ತಿ ಹಿಡಿದಾಗ ದುರ್ಗಮ್ಮ ಮಂಜಣನ ಕೆನ್ನೆ, ಹಣೆಗೆ ಮುತ್ತಿನ ಮಳೆಗರೆದು ಕೈ ಸಡಿಲಿಸಿದರು. ''ಆಳ್ವರೇ, ಊಟಕ್ಕೆ ಬನ್ನಿ. ಕಾಯುತ್ತೇನೆ ನಿಮ್ಮನ್ನು'' ಎಂದು ಹೇಳಿದ ದುರ್ಗಮ್ಮನ ಬೆನ್ನು ಸವರಿದ ಮಂಜಣಾಳ್ವ ಅಂಗಳಕ್ಕಿಳಿದು ಸೈನಿಕರೊಂದಿಗೆ ರಥಬೀದಿಗೆ ಬಂದನು. ಬಡಾಜೆಯವರೆಗೆ ಕುದುರೆ ಓಡಿಸಿ ಸುಬ್ರಾಯ ಶಾನುಭೋಗರನ್ನು ಎಬ್ಬಿಸಿ ಎಲ್ಲಾ ಸುದ್ದಿಯನ್ನು ವಿವರಿಸಿದ.

ದೀವಟಿಗೆಯ ಬೆಳಕಲ್ಲಿ, ನೆತ್ತರಲ್ಲಿ ಮಿಂದಂತಿದ್ದ ಮಂಜಣನನ್ನು ನೋಡಿ ಬಡಾಜೆ ತಂತ್ರಿಯವರಿಗೆ ತಲೆ ತಿರುಗಿದಂತಾಯಿತು.

"ಸ್ನಾನ ಮಾಡಿ ಊಟ ಮಾಡ್ತಿಯಾ ಮಂಜಣ?" ಎಂದು ಕೇಳಿದ ತಂತ್ರಿಗಳಿಗೆ "ಬೇಡ ಅಯ್ಯ; ನಾನೊಮ್ಮೆ ಬೆಂಗ್ರೆಗೆ ಹೋಗಿ, ಸತ್ತ ಹೆಣ್ಣು ಮಕ್ಕಳ ತಂದೆ ತಾಯಿಯರನ್ನು ನೋಡಿ ಮತ್ತೆ ವಿಶ್ರಾಂತಿ ಪಡೆಯುತ್ತೇನೆ" ಎಂದು ಹೇಳಿ ಸುಬ್ರಾಯ ಶಾನುಭೋಗರ ಅಪ್ಪಣೆ ಪಡೆದು ಹೊರಟ.

ಬೆಂಗರೆಗೆ ಬಂದವನು ಎರಡು ಮನೆಯವರಿಗೂ ನಾಲ್ಕು ಸಾಂತ್ವನದ ಮಾತು ಹೇಳಿ ಭಂಡಾರ ಮಠದ ಮನೆಗೆ ಬರುವಾಗ ಮೊದಲ ಜಾವದ ಕೋಳಿ ಕೂಗಿತ್ತು. ಹಿತ್ತಲಲ್ಲಿ ಕಾವಲಿದ್ದ ಸೈನಿಕರಿಗೆ ಎಚ್ಚರಿಕೆ ಹೇಳಿ ಚಾವಡಿಗೆ ತಲುಪುವಾಗ ಚಾವಡಿಯಲ್ಲಿ ಕಾಲುದೀಪ ಉರಿಯುತ್ತಿತ್ತು.

ಭಂಡಾರಿಗಳ ಮಡದಿ ದುರ್ಗಮ್ಮ ಅಡುಗೆಮನೆಯ ಹೊಸ್ತಿಲಲ್ಲಿ ಕಾಯುತ್ತ ಕುಳಿತಿದ್ದರು. ನಿದ್ದೆಯಿಂದ ತೂಗುತ್ತಿದ್ದವರನ್ನು 'ದುರ್ಗಮ್ಮಾ' ಎಂದು ಎಬ್ಬಿಸಿದ ಮಂಜಣಾಳ್ವ ಸ್ನಾನದ ಕೊಟ್ಟಿಗೆಗೆ ಹೋಗಿ ಸ್ನಾನ ಮಾಡಿ ಬಂದನು. ಕೊಟ್ಟಿಗೆಯ ಬಾಗಿಲಲ್ಲೇ ಬೈರಾಸು ಹಿಡಿದು ನಿಂತಿದ್ದ ದುರ್ಗಮ್ಮ ಬೈರಾಸಿನಿಂದ ಅವನ ತಲೆ ಒರೆಸಿದರು. ಬೆನ್ನಿನ ನೀರು ಒರಸಿ ಊಟಕ್ಕೆ ಕರೆತಂದರು.

ಮಣೆಯಿಟ್ಟು ಎಲೆಯಲ್ಲಿ ಬಡಿಸಿಟ್ಟ ಊಟ ಮಾಡುವಾಗ ಮುಂದೆ ಕುಳಿತಿದ್ದ ದುರ್ಗಮ್ಮನ ಮುಖ ನೋಡಿದ ಮಂಜಣನಿಗೆ ಮಧ್ಯರಾತ್ರಿ ತನ್ನನ್ನು ಅಪ್ಪಿ ಹಿಡಿದು ನಡುಗುತ್ತಿದ್ದ ಅವರ ಮುಖ ಕಣ್ಣೆದುರು ಬಂತು. ಮನಸ್ಸು ಮಂಗ ಚೇಷ್ಟೆ ಮಾಡಲು ಪ್ರಾರಂಭಿಸಿತು. ಕೈಯಲ್ಲಿ ಅನ್ನ ಹಿಡಿದು ದುರ್ಗಮ್ಮನ ಮುಖ ನೋಡುತ್ತಿದ್ದ ಮಂಜಣನನ್ನು ದುರ್ಗಮ್ಮ,



"ಆಳ್ವರೇ, ಊಟ ಮಾಡಿ. ಹಸಿದಿರಬೇಕು. ಊಟ ಮಾಡಿದ ಮೇಲೆ ನೋಡಿಕೊಳ್ಳುವಾ" ಎಂದರು.

"ಹಾಂ. ಹಾಂ" ಎನ್ನುತ್ತಾ ಎಲ್ಲೆಲ್ಲೋ ಇದ್ದ ಮನಸ್ಸನ್ನು ಎಲೆಯಲ್ಲಿ ನೆಟ್ಟು ಊಟದ ಶಾಸ್ತ್ರ ಮಾಡಿ ಮಂಜಣಾಳ್ವ ಎದ್ದಾಗ, "ಏನು, ಊಟ ಚೆನ್ನಾಗಿಲ್ವಾ? ಬಿಡಿ ಅದನ್ನು" ಎಂದರು ದುರ್ಗಮ್ಮ.

ಚಾವಡಿಯಲ್ಲಿ ಹಾಸಿದ್ದ ಹಾಸಿಗೆಯಲ್ಲಿ ಬಿದ್ದುಕೊಂಡ ಮಂಜಣಾಳ್ವನಿಗೆ ದೀಪ ಆರಿಸಲು ಬಂದ ದುರ್ಗಮ್ಮನನ್ನು ನೋಡಿ ನಕ್ಷತ್ರವೊಂದು ಬಾನಿನಿಂದ ಬಿದ್ದಂತಾಯಿತು. ತಕ್ಷಣ ಮುಖ ತಿರುಗಿಸಿ ಎಡಗಡೆ ತಿರುಗಿಕೊಂಡನು. ಹಾಗೆ ಮಲಗಿದವನ ಬೆನ್ನನ್ನು ಹೂವಿನಂತಿರುವ ಎರಡು ಕೈಗಳು ಸವರಲು ಆರಂಭಿಸಿದಾಗ ಮಂಜಣ ಕಣ್ಣು ಮುಚ್ಚಿದಲ್ಲಿಗೇ ಕೈಗೆ ಸಿಕ್ಕ ದೇಹವನ್ನು ಎಳೆದು ಅಪ್ಪಿಕೊಂಡ.

ಎರಡನೆಯ ಕೋಳಿ ಕೂಗಿ ಮೂಡಣದಿಂದ ಮಸುಕು ಬೆಳಕು ಹರಡಿದಾಗಲೂ ಇಬ್ಬರೂ ಮಲಗಿಯೇ ಇದ್ದರು. ಬೆಳಗ್ಗೆ ಅಪ್ಪಿ ಹಿಡಿದಿದ್ದ ಕೈಗಳನ್ನು ಬಿಡಿಸಿಕೊಂಡು ಚುಂಬಿಸಿ, ದುರ್ಗಮ್ಮ ಎದ್ದು ಹೋದ ಮೇಲೆಯೇ ಮಂಜಣನಿಗೆ ನಿದ್ದೆ ಹತ್ತಿದುದು.

ಹಕ್ಕಿಗಳ ಕಲರವ ಪ್ರಾರಂಭವಾಯಿತು. ಯಾವಾಗಲೂ ಹಕ್ಕಿಗಳು ಚಿಲಿಪಿಲಿ ಗುಟ್ಟುವುದಕ್ಕೆ ಮೊದಲೇ ಏಳುವ ಮಂಜಣ ಅಂದು ಏಳುವಾಗ ಹೊತ್ತು ಏರಿತ್ತು. ಎಚ್ಚರಗೊಂಡವನು ಗಡಿಬಿಡಿಯಿಂದ ಏಳುವಾಗ ಅಂಗಳದಲ್ಲಿ ಕಾಯುತ್ತಿದ್ದ ನಾಯಕ ಕೆಮ್ಮಿದ.

"ಏನು? ಏನಾದರೂ ಸುದ್ದಿ ಇದೆಯೇ?" ಮಂಜಣ ಕೇಳಿದಾಗ ಸೇನಾನಾಯಕ ಹೇಳಿದ,

"ಶಾನುಭೋಗರು ಬಂದು, ಮಲಗಿದ್ದ ನಿಮ್ಮನ್ನು ಎಬ್ಬಿಸಬೇಡಿ ಎಂದು ಹೇಳಿ ದೇವಸ್ಥಾನಕ್ಕೆ ಹೋದರು. ತಮಗೆ ಎಚ್ಚರವಾದ ಕೂಡಲೇ ಕರೆದುಕೊಂಡು ಬರಲು ಅಪ್ಪಣೆಯಾಗಿದೆ."

"ದೇವಸ್ಥಾನದಲ್ಲಿ ಊಟದ ತಯಾರಿ ನಡೆಯುತ್ತಿದೆ. ಸುಮಾರು ಐದಾರು ಸಾವಿರ ಜನರಿಗೆ ಪಾಯಸದೂಟ ತಯಾರಾಗುತ್ತಿದೆ" ಎಂದು ಭಂಡಾರಿಗಳು ಹೇಳಿದರು.

"ಮಂಜಣಾಳ್ವರೇ, ಮುಖ ತೊಳೆದು ಬನ್ನಿ. ಗಂಜಿ ಊಟ ಮಾಡಿ ಹೋಗಿ, ಊಟ ತಯಾರಾಗಿದೆ" ಎಂದು ದುರ್ಗಮ್ಮ ಕರೆದರು.

ಮಂಜಣಾಳ್ವ ಮುಖ ತೊಳೆದು ಬಂದು ಗಂಜಿ ಊಟ ಮಾಡಿ ಹೊರಟನು. ಕುದುರೆಯನ್ನು ರಥಬೀದಿಯಲ್ಲಿ ನಿಲ್ಲಿಸಿ ದೇವಳದ ಭಂಡಾರ ಶಾಲೆಗೆ ಬಂದಾಗ ಸುಬ್ರಾಯ ಶಾನುಭೋಗರು ಹಾಗೂ ಕೋಚಣ್ಣಾಳ್ವರು ಕಾಯುತ್ತಿದ್ದರು. ಇಬ್ಬರೂ ಕುಳಿತಲ್ಲಿಂದ ಬಂದು ಮಂಜಣಾಳ್ವನನ್ನು ಅಪ್ಪಿಕೊಂಡು ಬೆನ್ನು ತಟ್ಟಿದರು.

"ಮಂಜಣ, ಶಾನುಭೋಗರು ಯಾಕೆ ಬೆನ್ನು ತಟ್ಟಿದರೋ ಗೊತ್ತಿಲ್ಲ? ನಾನು ಬೆನ್ನು

ತಟ್ಟಿದುದು ರಾತ್ರಿಯಿಡೀ ರಕ್ತದ ಓಕುಳಿಯಲ್ಲಿ ಮುಳುಗಿದ್ದ ನೀನು ಆ ಇಬ್ಬರು ಹೆಣ್ಣು ಮಕ್ಕಳ ಗುಡಿಸಲಿಗೆ ಹೋಗಿ ಆ ಬಡಪಾಯಿ ತಂದೆ ತಾಯಿಗಳಿಗೆ ಸಾಂತ್ವನದ ನಾಲ್ಕು ಮಾತು ಹೇಳಿ ಬಂದೆ ನೋಡು, ಆ ಸುದ್ದಿ ಕೇಳಿ ನನ್ನ ಹೊಟ್ಟೆ ತುಂಬಿತು. ಅದಕ್ಕೆ ನಿನ್ನ ಬೆನ್ನು ತಟ್ಟಿದೆ. ಬಂಟ ಸಮಾಜದ ಹಿರಿಯರು ಇಲ್ಲಿಯ ತನಕ ಮಾಡಿದ ಕೆಲಸ ಎಂದರೆ ಊರವರ ಕಷ್ಟ ಸುಖ ವಿಚಾರಿಸಿ ಅವರ ಕಣ್ಣೀರು ಒರೆಸುವುದು. ಈ ಚಿಕ್ಕ ಪ್ರಾಯದಲ್ಲೇ ನಿನಗೆ ನಮ್ಮ ದೈವ, ದೇವರುಗಳು ಆ ಬುದ್ಧಿ ಕೊಟ್ಟಿದ್ದಾರೆಂದರೆ ಅದುವೇ ಬಹುದೊಡ್ಡ ಭಾಗ್ಯ. ನಿನ್ನ ಪರಾಕ್ರಮದ ಜೊತೆ ತಾಯಿಯಂತಹ ಈ ಮನಸ್ಸು ನಿನ್ನಲ್ಲಿ ಯಾವತ್ತೂ ಉಳಿದು ಬರಲಿ."

ಕೋಚಣ್ಣಾಳ್ವರು ಹೇಳಿದಾಗ ಮಂಜಣಾಳ್ವ ಬಗ್ಗಿ ಅವರ ಕಾಲು ಮುಟ್ಟಿದ. ಕೋಚಣ್ಣಾಳ್ವರು ತಲೆ ಸವರಿ ತನ್ನ ಕೈಯಲ್ಲಿದ್ದ ಚಿನ್ನದ ಕಡಗವನ್ನು ತೆಗೆದು ಅವನ ಕೈಗೆ ತೊಡಿಸಿದರು. ಸುಬ್ರಾಯ ಶಾನುಭೋಗರು ಊರು, ಮಾಗಣೆಯ ಪರವಾಗಿ ಕೋಚಣ್ಣಾಳ್ವರಿಗೆ ಕೈ ಮುಗಿದರು. ಶಾನುಭೋಗರು ಮಂಜಣಾಳ್ವರಿಗೆ ಒಂದು ಕೆಟ್ಟ ಸುದ್ದಿಯನ್ನು ತಿಳಿಸಿ, ಆ ಸಮಸ್ಯೆಯನ್ನು ಹೇಗೆ ಬಗೆಹರಿಸುವುದೆಂದು ಕೇಳಲು ಕೋಚಣ್ಣಾಳ್ವರ ಜೊತೆ ಅವನಿಗಾಗಿ ಕಾಯುತ್ತಿದ್ದರು.

ರಾತ್ರಿ ಬೀರಣ್ಣ ಬಂಟನ ಪುಂಡ ಹುಡುಗರು ಅತ್ಯಾಚಾರ ಮಾಡಿ ಗಾಯಗೊಳಿಸಿದ್ದ ಬೋವಿಗಳ ಹೆಣ್ಣು ಮುಂಜಾನೆ ಸಮುದ್ರಕ್ಕೆ ಹಾರಿ ಆತ್ಮಹತ್ಯೆ ಮಾಡಿಕೊಂಡಿತ್ತು. ಬೋವಿಗಳೆಲ್ಲಾ ಒಟ್ಟಾಗಿ ಕಲ್ಯಾಣಪ್ಪನ ದಂಡನ್ನು ಎದುರಿಸಿ ಕಾದಾಡಲು ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ. ಅವರ ಜೊತೆ ಬೆಂಗರೆಯ ಪುಸಲರೂ ಸೇರಿಕೊಂಡಿದ್ದಾರಂತೆ. ಅವರು ಯುದ್ಧ ಪ್ರಾರಂಭಿಸಿದರೆಂದಾದರೆ ಅನರ್ಥವಾಗಬಹುದು. ನಿನ್ನೆಯಿಂದ ಮಾಡಿದ ಎಲ್ಲಾ ಕೆಲಸಗಳೂ ವ್ಯರ್ಥವಾಗಬಹುದು. ಈ ಬೋವಿಗಳೂ, ಪುಸಲರೂ ಯಾರ ಮಾತನ್ನೂ ಕೇಳುವವರಲ್ಲ. ಕೇಳಿದರೆ ಮಂಜಣಾಳ್ವ ಒಬ್ಬನದೇ. ಅದನ್ನು ಹೇಳಲು ಶಾನುಭೋಗರು ಮಂಜಣಾಳ್ವನನ್ನು ಕಾಯುತ್ತಿದ್ದುದು.

ಶಾನುಭೋಗರಲ್ಲಿ ಮಾತನಾಡಿ ಬೋವಿಗಳು ಹಾಗೂ ಪುಸಲರೊಂದಿಗೆ ಬೆಂಗರೆಗೆ ಬಂದ ಮಂಜಣ, ಅವರ ಮನೆಗೆ ಹೋದಾಗ ಬೋವಿಗಳ ಗುಂಪೇ ಅಲ್ಲಿ ನೆರೆಯಿತು. ಮಂಜಣಾಳ್ವ ಹೆಣ್ಣಿನ ಶವದ ಮುಂದೆ ಮಂಡಿಯೂರಿ ಕೈಮುಗಿದು ಎದ್ದು, ವೃದ್ಧ ತಂದೆ –ತಾಯಿಗಳ ಕಾಲಿಗೆ ಬೀಳಲು ಬಗ್ಗುವಾಗ ನೆರೆದಿದ್ದ ಪುಸಲರ ಯುವಕರು ಹಾಗೂ ಬೋವಿಗಳು "ಜೈ ದುರ್ಗೆ" "ಜೈ ಮಂಜಣಾಳ್ವ" ಎಂದು ಜಯಕಾರ ಹಾಕಿದರು. ಮಂಜಣಾಳ್ವ ಬೋವಿಗಳ ಮತ್ತು ಪುಸಲರ ಹಿರಿಯರನ್ನು ಕರೆದು ಸಮಾಧಾನ ಹೇಳಿ, ಬೀರಣ್ಣ ಬಂಟನನ್ನೂ, ಅವನ ಸೈನಿಕರನ್ನೂ ಅವರ ಕೈಗಳಿಂದಲೇ ಗಲ್ಲಿಗೇರಿಸಿಸುವುದಾಗಿ ಮಾತು ಕೊಟ್ಟು, ಇಬ್ಬರು ಹೆಣ್ಣು ಮಕ್ಕಳ ಶವಗಳನ್ನೂ ಮಂಜೇಶ್ವರ ಗುಡ್ಡಕ್ಕೆ ಒಯ್ದು ಸಂಸ್ಕಾರ ಮಾಡುವಂತೆ ಒಪ್ಪಿಸಿದ. ಶಾಂತಿಯಿಂದ ಈ ಕೆಲಸವನ್ನು ಮಾಡುವುದಾಗಿ ಎರಡೂ ಸಮಾಜಗಳ ಹಿರಿಯರು ಮಾತು ಕೊಟ್ಟರು. ಯುವಕರೇನಾದರೂ ಗಲಾಟೆ ಮಾಡಿದರೆ



ತನ್ನದೇ ಸೇನೆ ದಂಗೆಯನ್ನು ನಿಲ್ಲಿಸಬೇಕಾದೀತು ಎಂದು ಭಯ ಹುಟ್ಟಿಸಿ ಮಂಜಣಾಳ್ವ ಪೇಟೆಗೆ ಬಂದ.

ಬಂಗ್ರ ಮಂಜೇಶ್ವರಕ್ಕೆ ತಲುಪಿದಾಗ ಎಲ್ಲಾ ದಿಕ್ಕುಗಳಿಂದಲೂ ಸುದ್ದಿ ಬಂತು. ಕಲ್ಯಾಣಪ್ಪನ ದಂಡು ಕಡಂಬಾರಿನಿಂದ ಬರುತ್ತಿದೆ. ಸುಬ್ರಾಯ ಹೆಗ್ಡೆಯ ದಂಡು ಐಲದ ಪದವಿಗೆ ತಲುಪಿದೆಯೆಂದು ಸುದ್ದಿ ಬಂದು ಮುಟ್ಟಿತು. ಊರಿನ ಯುವಕರು, ಪುಸಲರು, ಬೋವಿಗಳು ಸುಬ್ರಾಯ ಹೆಗ್ಡೆಯ ದಂಡಿಗೆ ಸೇರುತ್ತಾರೆ ಎನ್ನುವ ಭಯ ಕಡಿಮೆಯಾಗಿತ್ತು. ರಾತ್ರಿ ಇಬ್ಬರು ಹೆಣ್ಣು ಮಕ್ಕಳನ್ನು ಬೀರಣ್ಣ ಬಂಟನ ಸೈನಿಕರು ಅತ್ಯಾಚಾರ ಮಾಡಿದ್ದಾರೆ ಎಂಬ ಸುದ್ದಿ ಬೆಂಕಿಯಂತೆ ಹರಡಿತ್ತು. ಹಾಗಾಗಿ ದಂಡಿಗೆ ಸೇರಲು ತಯಾರಾಗಿದ್ದ ಯುವಕರ ಸಂಖ್ಯೆ ಕಡಿಮೆಯಾಗಿತ್ತು.

ನಡುಮಧ್ಯಾಹ್ನ ಕಳೆದು ಗಳಿಗೆಯಾಗುವಾಗ ಕಲ್ಯಾಣಪ್ಪನ ದಂಡು ಮಂಜೇಶ್ವರ ಪೇಟೆಯ ಬಳಿಗೆ ಬಂದು ತಲುಪಿತು. ಕಾಡಿನ ಬಳಿಯ ಪದವಿನಲ್ಲಿ ಕೊಂಕಣಿಗಳ ಸಮಾಜದ ಹತ್ತು ಸಮಸ್ತರು, ಸೆಟ್ಟಿಗಳು ಹಾಗೂ ವ್ಯಾಪಾರದ ಬ್ಯಾರಿಗಳ ಹಮ್ಮಜದರು ಸೇನೆಯನ್ನು ಎದುರುಗೊಂಡು ಪಾನಕ, ಎಳನೀರು ಕೊಟ್ಟರು. ದಂಡಿಗೆಯಿಂದ ಇಳಿದ ಕಲ್ಯಾಣಸ್ವಾಮಿ ಕುದುರೆಯೇರಿ ಹತ್ತು ಸಮಸ್ತರನ್ನು ಭೇಟಿಯಾದ. ಅವರು ಮಧ್ಯಾಹ್ನದ ಊಟಕ್ಕೆ ಒತ್ತಾಯಿಸಿದಾಗ ಕಲ್ಯಾಣಪ್ಪ ನಕ್ಕ,

"ನೀವು ಊಟ ಕೊಡಬೇಕೆಂದಿಲ್ಲ. ನಾವು ಊರು ಸೂರೆ ಮಾಡುವುದನ್ನು ನಿಲ್ಲಿಸಿದ್ದೇವೆ. ಅನ್ನಪೂರ್ಣೇಶ್ವರಿ ದೇವಿಯಂತಿರುವ ರುಕ್ಮಿಣಿಯಮ್ಮನಿಗೆ ಊರು ದೋಚುವುದಿಲ್ಲವೆಂದು ಮಾತು ಕೊಟ್ಟಿದ್ದೇವೆ. ನಿಮಗೆ ಸಾಧ್ಯವಾದರೆ ನಮಗೆ ಸ್ವಲ್ಪ ಹಣ ಕಾಸು ಒಟ್ಟು ಮಾಡಿಕೊಡಿ."

ಹತ್ತು ಸಮಸ್ತರು ಊಟವಾದ ನಂತರ ತಮ್ಮಿಂದಾದಷ್ಟು ಸಹಾಯವನ್ನು ಒಟ್ಟು ಮಾಡಿಕೊಡುತ್ತೇವೆಂದು ಒಪ್ಪಿಕೊಂಡರು. ಅಷ್ಟಾಗುವಾಗ ಸುಬ್ರಾಯ ಹೆಗ್ಡೆಯ ಸೇನೆಯೂ ಬಂಗ್ರ ಮಂಜೇಶ್ವರಕ್ಕೆ ಬಂದು ಸೇರಿತು. ಹೆಗ್ಡೆ, ಕಲ್ಯಾಣಸ್ವಾಮಿಯನ್ನು ಸೇರಿಕೊಂಡು ಎಲ್ಲ ವಿಷಯ ತಿಳಿಸಿದ. ಇಬ್ಬರೂ ಮಂಜೇಶ್ವರದ ಹತ್ತು ಸಮಸ್ತರ ಸತ್ಕಾರಕ್ಕೆ ಒಪ್ಪಿ, ಸುಬ್ರಾಯ ಹೆಗ್ಡೆಯ ಸೇನೆಯವರು ಬಂಗ್ರ ಮಂಜೇಶ್ವರದ ಬಸದಿಗೂ, ಕಲ್ಯಾಣಪ್ಪನ ಸೇನೆಯವರು ಶ್ರೀಮದನಂತೇಶ್ವರ ದೇವಸ್ಥಾನದ ಅಂಗಣಕ್ಕೂ ಊಟಕ್ಕೆ ಹೊರಟರು. ಬ್ಯಾರಿಗಳ ಹಾಗೂ ಬಾಕುಡರ ಸೇನೆಗೆ ಉದ್ಯಾವರ ಮಾಡದ ಮೈದಾನದಲ್ಲಿ ಊಟದ ಏರ್ಪಾಡಾಯಿತು.

ಊಟ ಮುಗಿಸಿ ಎಲ್ಲ ಸೈನಿಕರೂ ರಥಬೀದಿಯಲ್ಲಿ ಸೇರುವಾಗ ಸಂಜೆಯಾಯಿತು. ದೇವಯ ಭಂಡಾರಿಗಳ ಜನ, ಆದಿ ಸೆಟ್ಟಿಯ ಕೆಲಸದವರು, ಕುಂಞಾಲಿ ಬ್ಯಾರಿಯ ಹಮ್ಮಜದವರು ದೇವಸ್ಥಾನದ ಕಟ್ಟೆಗೆ ಹತ್ತು–ಹದಿನೈದು ಬೆತ್ತದ ಪೆಟ್ಟಿಗೆಗಳಲ್ಲಿ ಇಕ್ಕೇರಿಯ ಪಗೋಡ, ಸುಲ್ತಾನನ ರೂಪಾಯಿ, ವಿಜಯನಗರ ಕಾಲದ ರಾಮಟಂಕೆಗಳನ್ನು ತಂದು ಕಾಣಿಕೆ ಕೊಟ್ಟರು. ಕಲ್ಯಾಣಪ್ಪ ಸೇನೆಯ ಬೋವಿಯನ್ನು ಕರೆದು ಒಬ್ಬೊಬ್ಬ ಸೈನಿಕನಿಗೆ ಹತ್ತತ್ತು

ಬೆಳ್ಳಿಯ ರೂಪಾಯಿ, ಚಿನ್ನದ ರಾಮಟಂಕೆಗಳನ್ನು ಕೊಡಲು ಹೇಳಿದನು. ಈ ಗೌಜಿ ಯಲ್ಲಿರುವಾಗ ಬೆಂಗರೆಯ ಹಾದಿಯಿಂದ "ಅಲ್ಲಾಹು ಅಕ್ಬರ್", "ಜೈ ಭವಾನಿ" ಎಂದು ಜಯಕಾರ ಹಾಕಿಕೊಂಡು ಶವಯಾತ್ರೆಯೊಂದು ಕುಂಬಳೆಯ ಸೇನೆಯ ಉಸ್ತುವಾರಿಯಲ್ಲಿ ರಥಬೀದಿಯಲ್ಲೇ ಬಂದು ದೇವಸ್ಥಾನದ ಹಿಂದಿನ ಗುಡ್ಡೆಕೇರಿಗೆ ಹೋಗುತ್ತಿತ್ತು.

ಕಲ್ಯಾಣಪ್ಪ ವಿಚಾರಿಸಿದಾಗ, ಹಿಂದಿನ ರಾತ್ರಿ ನಡೆದ ಅತ್ಯಾಚಾರದ ವಿಷಯ ತಿಳಿಯಿತು. ತಲೆ ತಗ್ಗಿಸಿದ ಕಲ್ಯಾಣಪ್ಪನಿಗೆ ತಾನು ಮಾಡದ ಇಂತಹ ಅದೆಷ್ಟೋ ಕೃತ್ಯಗಳಿಗೆ ತಾನು ಹೊಣೆಗಾರನಾಗಬೇಕಾಯಿತಲ್ಲಾ ಎಂದು ದುಃಖವಾಯಿತು. ಎದ್ದು ಬಂದವನು ಶವಗಳ ಬಳಿ ಬಂದನು. ಒಂದಕ್ಕೆ ತಾನು ಹೊದ್ದುಕೊಂಡಿದ್ದ ಶಾಲು, ಮತ್ತೊಂದಕ್ಕೆ ತನ್ನ ಮುಂಡಾಸು ಬಟ್ಟೆಯನ್ನು ಹೊದೆಸಿ ಕೈ ಮುಗಿದನು. ಶವಗಳ ಮುಂದಿದ್ದ ಸರದಾರನನ್ನು ಕರೆಯಿಸಿ ವಿವರ ಕೇಳಿದಾಗ, ಅಲ್ಲೇ ಇದ್ದ ಸುಬ್ರಾಯ ಹೆಗ್ಡೆ ಆ ಯುವಕನ ಪರಿಚಯ ಮಾಡಿಕೊಟ್ಟ. ಮಿತ್ತಬೈಲು ಮಂಜಣಾಳ್ವನನ್ನು ನೋಡಿ ಕಲ್ಯಾಣಪ್ಪನಿಗೆ ಖುಷಿಯಾಯಿತು.

"ಮಂಜಣಾಳ್ವರೇ, ಬಹಳ ಕೇಳಿದ್ದೇನೆ ನಿಮ್ಮ ಬಗ್ಗೆ. ಭೇಟಿಯಾಗಿ ಬಹಳ ಸಂತೋಷ ವಾಯಿತು. ನಿಮ್ಮಂತಹವರು ನಮ್ಮ ಜೊತೆ ಇರಬೇಕಾಗಿತ್ತು. ಆ ಸುದ್ದಿ ಬಿಡಿ, ಈಗ ಈ ಹೆಣ್ಣು ಮಕ್ಕಳ ಸಾವಿಗೆ ಕಾರಣರಾದ ಸೈನಿಕರನ್ನು ಹಿಡಿಯಲು ಆಗಲಿಲ್ಲವೇ ಆಳ್ವರೇ?"

"ಹಿಡಿಯಲು ಆಗದೆ ಏನು ಸ್ವಾಮಿಗಳೇ. ಹಿಡಿದು ಕಟ್ಟಿ ಹಾಕಿದ್ದೇನೆ. ಇಂದಿನ ಕಾರ್ಯ ಶಾಂತಿಯಲ್ಲಿ ನಡೆಯಲಿ. ನಾಳೆ ಸೇನೆಯ ನ್ಯಾಯದಂತೆ ವಿಚಾರಣೆ ನಡೆಸಿ ಶಿಕ್ಷೆ ಕೊಡಿಸಬೇಕೆಂದಿದ್ದೇನೆ."

"ಏನು? ಅವರ ತಪ್ಪಿನಲ್ಲಿ ಸಂಶಯ ಇದೆಯೇ ಆಳ್ವರೇ? ಪಾಪಿಗಳು ಭೂಮಿಯ ಮೇಲೆ ಇರುವಷ್ಟು ಹೊತ್ತು ಈ ಭೂ ತಾಯಿಗೆ ಭಾರ ಹೆಚ್ಚು. ಅನ್ಯಾಯದ ನೋವೂ ಹೆಚ್ಚು. ತಡ ಮಾಡಬೇಡಿ. ಯಾರವರು ಹೇಳಿ, ನನ್ನ ಸೇನೆಯವರಾದರೆ ನಾನೇ ನಿಂತು ಶಿಕ್ಷೆ ಕೊಡಿಸುವೆ."

"ನಿಮ್ಮ ಜನರೇ ಸ್ವಾಮಿ! ನೋಡುತ್ತೀರಾ?"

ಮಂಜಣಾಳ್ವರು ಬೀರಣ್ಣ ಬಂಟನನ್ನೂ, ಬದುಕುಳಿದ ಅವನ ಸೈನಿಕರನ್ನೂ ದೇವಳದ ಭಂಡಾರಿಗಳ ಹಿತ್ತಲಿನಿಂದ ತರಿಸಿ ಕಲ್ಯಾಣಸ್ವಾಮಿಯ ಮುಂದೆ ನಿಲ್ಲಿಸಿದಾಗ ಕಲ್ಯಾಣಸ್ವಾಮಿಗೆ ಆಶ್ಚರ್ಯವಾಯಿತು.

"ಬೀರಣ್ಣ ಬಂಟ! ನಿನ್ನ ಬಗ್ಗೆ ಕೆಲವು ದೂರುಗಳು ಬಂದಿದ್ದವು. ನಂಬಲಿಲ್ಲ ನಾನು. ಪಾಡಿ ಸುಬ್ರಾಯ ಶಾನುಭೋಗರ ತಲೆ ತಂದು ಕೊಡುತ್ತೇನೆ ಎಂದು ಹೊರಟವ ಇದನ್ನಾ ಮಾಡಿದ್ದು. ಇವನಿಗೆ, ಈ ನೀಚ ಕೆಲಸ ಮಾಡಲು ಹೇಗೆ ಕೈ ಬಂತು ಆಳ್ವರೇ? ಥೂ ನಾಯಿ, ಇನ್ನೂ ನೀನು ಬದುಕುಳಿದಿದ್ದಿಯಲ್ಲಾ!"

"ಈ ನಾಯಿ ಒಂದು ಮರ್ಯಾದಸ್ಥ ಮನೆಯ ಹೆಣ್ಣಿನ ಸಿರಿಮುಡಿಗೆ ಕೈ ಹಾಕಿದಾಗ ಕೈಯನ್ನೇ ಕಡಿದು ಬಲಿ ಕೊಟ್ಟಿದ್ದೇನೆ ಸ್ವಾಮಿ. ಈ ಎರಡು ಪಾಪದ ಹೆಣ್ಣು



ಮಕ್ಕಳ ಮಾನ ಲೂಟಿ ಮಾಡಿ ಅವರನ್ನು ತನ್ನ ನಾಯಿಗಳಿಗೆ ಹಾಕಿದವನು ಇದೇ ಪಾಪಿ."

"ಅವನ ತಲೆ ತೆಗೆಯದೆ ಯಾಕೆ ಬಿಟ್ಟಿದ್ದೀರಿ ಆಳ್ವರೇ?"

"ತಲೆ ತೆಗೆಯುವುದು ಬಹಳ ಸುಲಭ ಸ್ವಾಮಿ. ಈ ಪಾಪಿ ತಾನು ಮಾಡಿದ ಪಾಪ ವನ್ನು ನೆನೆಯುತ್ತಾ, ಆ ಹೆಣ್ಣು ಮಕ್ಕಳು ನರಳಿ ಆತ್ಮಹತ್ಯೆ ಮಾಡಿಕೊಂಡಂತೆ ನರಳಿ ಸಾಯ ಬೇಕು ಸ್ವಾಮಿ."

"ಆಳ್ವರೇ, ಬೀರಣ್ಣ ನನ್ನ ಹೆಸರು ಹೇಳಿಕೊಂಡು ಇಂತಹ ಎಷ್ಟು ಪಾಪ ಕೃತ್ಯಗಳನ್ನು ಮಾಡುತ್ತಾ ಬಂದಿದ್ದಾನೋ? ನಾನೇ ಇವನಿಗೆ ಶಿಕ್ಷೆ ಕೊಡುವುದು ನ್ಯಾಯ ಅಲ್ಲವೇ ಆಳ್ವರೇ? ಏನು ಹೇಳುತ್ತೀರಿ ನೀವು ಇದಕ್ಕೆ?"

ಶಿಕ್ಷೆ ಕೊಡಬೇಕಾದವರು ನಮ್ಮ ಅರಸರು. ಆದರೆ ನಿಮ್ಮಂತಹ ಧರ್ಮಾತ್ಮರ ಹೆಸರಿಗೆ ಮಸಿ ಬಳಿಯುವ ಕೃತ್ಯವನ್ನು ಇವರು ಮಾಡುತ್ತಾ ಬಂದಿದ್ದಾರೆ. ನೀವೇ ಶಿಕ್ಷೆ ಕೊಡಿ. ಎಲ್ಲ ಸೈನಿಕರಿಗೂ ಇದೊಂದು ಪಾಠವಾಗಲಿ. ನಾನು ನನ್ನ ಜನರಿಗೆ ಮಾತು ಕೊಟ್ಟಿದ್ದೇನೆ. ಅದು ನಿಮ್ಮ ಬಾಯಿಯಿಂದಲೇ ಬರಲಿ."

ಕಲ್ಯಾಣಪ್ಪ ಆರು ಸೈನಿಕರಿಗೂ ಬೀರಣ್ಣ ಬಂಟನಿಗೂ ಗಲ್ಲು ಶಿಕ್ಷೆ ವಿಧಿಸಿದ. ಗುಡ್ಡದ ಮೇಲಿನ ಆಲದ ಮರದಲ್ಲಿ ಊರಿಗೆ ಕಾಣುವಂತೆ ಮೂರು ದಿನ ಹೆಣಗಳನ್ನು ನೇತಾಡಿಸು ವಂತೆ ಹೇಳಿದ.

"ಕಲ್ಯಾಣಪ್ಪನ ರಾಜ್ಯದಲ್ಲಿ ಅನ್ಯಾಯಕ್ಕೆ ದಾರಿಯಿಲ್ಲ, ರಾಜ್ಯದಲ್ಲಿ ಹೆಣ್ಣು ಮಕ್ಕಳ ಅತ್ಯಾಚಾರ ಮಾಡಿದವರಿಗೆ ಇದುವೇ ಶಿಕ್ಷೆ. ಅದಕ್ಕೆ ಈ ಹೆಣಗಳು ಉದಾಹರಣೆಯಾಗಲಿ."

ಬೀರಣ್ಣ ಬಂಟ ಮತ್ತು ಆರು ಸೈನಿಕರ ಹೆಣಗಳು ಆಲದ ಮರದಲ್ಲಿ ನೇತಾಡಿದವು.

"ಆಳ್ವರೇ, ನಿಮ್ಮಂತಹ ವೀರ ಇಂದಲ್ಲ ನಾಳೆ ನನ್ನ ಜೊತೆಗೆ ಬರಬೇಕು. ನಾನು ಈ ಪರದೇಶಿಗಳನ್ನು ಓಡಿಸಿ ಜನ ಕಳುಹಿಸುವೆ. ಆಗ ಈ ರಾಜ್ಯವನ್ನು ಸುಭಿಕ್ಷೆಯಲ್ಲಿ ಆಳಲು ನನಗೆ ನಿಮ್ಮಂತಹ ಯುವಕರ ಸಹಾಯ ಬೇಕು. ಆಗ ಇಲ್ಲ ಎನ್ನಬೇಡಿ. ಸುಬ್ರಾಯ ಶಾನುಭೋಗರಿಗೂ, ಕೋಚಣ್ಣಾಳ್ವರಿಗೂ ನನ್ನ ನಮಸ್ಕಾರ ಹೇಳಿ. ಕಲ್ಯಾಣಪ್ಪ ಪರದೇಶಿಗಳನ್ನು ಈ ರಾಜ್ಯದಿಂದ ಓಡಿಸಲು ತನ್ನ ಜೀವ ಒತ್ತೆಯಿಟ್ಟು ಹೋರಾಡುತ್ತಾನೆ. ಸತ್ತರೂ ಸರಿ, ಸ್ವಾತಂತ್ರ್ಯ ನನ್ನ ಜನ್ಮ ಸಿದ್ಧ ಹಕ್ಕು. ಪರದೇಶಿಗಳು ಇಲ್ಲಿಂದ ತೊಲಗಬೇಕು. ಆ ಇಬ್ಬರು ಹಿರಿಯರನ್ನು ಶಾಂತಿಯ ಕಾಲದಲ್ಲಿ ಭೇಟಿಯಾಗುತ್ತೇನೆಂದು ಹೇಳಿ. ನನಗೆ ಗೊತ್ತಿದೆ, ಅವರಿಬ್ಬರೂ ಎಲ್ಲೋ ನಿಂತು ನನ್ನನ್ನು ನೋಡುತ್ತಿದ್ದಾರೆಂದು. ಹರಹರ ಮಹಾದೇವಾ!"

ಕಲ್ಯಾಣಸ್ವಾಮಿ 'ಹರಹರ ಮಹಾದೇವ' ಎಂದು ಹೇಳಿಕೊಂಡು ತನ್ನ ಸೈನ್ಯವನ್ನು ಬಂದ ದಾರಿಯಲ್ಲಿಯೇ ಪಾಣೆಮಂಗಳೂರಿಗೆ ಕಳುಹಿಸಿದ. ಸುಬ್ರಾಯ ಹೆಗ್ಡೆಯ ಸೇನೆ ಯನ್ನು ಉದ್ಯಾವರ – ತಲಪಾಡಿಯಾಗಿ ಉಳ್ಳಾಲದ ಕಡವಿಗೆ ಕಳುಹಿಸಿದ. ಪೇಟೆಯಲ್ಲಿ ನಿಂತಿದ್ದ ಜನ 'ಜೈ ದುರ್ಗೆ, ಜೈ ಮಂಜಣಾಳ್ವ, ಹರಹರ ಮಹಾದೇವ, ಜೈ ಕಲ್ಯಾಣ ಸ್ವಾಮಿ' ಎನ್ನುತ್ತಾ ಜಯಕಾರ ಹಾಕಿತು.

ಸುಬ್ರಾಯ ಹೆಗ್ಡೆಯ ದಂಡು ಉಳ್ಳಾಲ ಕಡವಿಗೆ ತಲುಪಿದಾಗ ಕಲ್ಯಾಣಪ್ಪನ ದಂಡು ಪಾಣೆಮಂಗಳೂರಿಗೆ ಬಂದು ನಂದಾವರದ ಲಕ್ಷ್ಮಪ್ಪ ಬಂಗರಸನನ್ನು ಸೇರಿಕೊಂಡಿತು. ಕಲ್ಯಾಣಪ್ಪನ ದಂಡು ನಂದಾವರ ಅರಮನೆಯ ಎದುರು ಬೀಡು ಬಿಟ್ಟು, ಲಕ್ಷ್ಮಪ್ಪ ಬಂಗರಸನಲ್ಲಿ ಊಟ – ತಿಂಡಿ ಮುಗಿಸಿ ಮರುದಿನ ಬೆಳಗ್ಗೆ ಬಂಟ್ವಾಳಕ್ಕೆ ಬಂದು ತಾಲೂಕು ಕಚೇರಿಯನ್ನು ಲೂಟಿ ಮಾಡಿ, ಲಕ್ಷ್ಮಪ್ಪ ಬಂಗರಸನ ಜೊತೆ ಮಂಗಳೂರಿನ ಪೇಟೆಗೆ ನಡೆಯಿತು. ಕಲ್ಯಾಣಪ್ಪ ಎಷ್ಟು ಪ್ರಯತ್ನಿಸಿದರೂ ಅವನಿಗೆ ಊರು ಲೂಟಿ ಮಾಡುವುದನ್ನು ನಿಲ್ಲಿಸಲು ಸಾಧ್ಯವಾಗಲಿಲ್ಲ. ಒಂದೇ ಒಂದು ವಿಷಯ ಎಂದರೆ, ಹೆಣ್ಣು ಮಕ್ಕಳ ತಂಟೆಗೆ ಹೋಗಲು ಸೈನಿಕರು ಹೆದರುತ್ತಿದ್ದರು. ಬೀರಣ್ಣ ಬಂಟನನ್ನು ಗಲ್ಲಿಗೇರಿಸಿದ ಸುದ್ದಿ ಅವರಿಗೆ ತಿಳಿದಿತ್ತು.

ಮಂಜೇಶ್ವರದಿಂದ ಸುಬ್ರಾಯ ಶಾನುಭೋಗರೂ, ಕೋಚಣ್ಣಾಳ್ವರೂ ಸೇನೆ ತೆಗೆದುಕೊಂಡು ಕುಂಬಳೆಗೆ ಹೋದರು. ಮಂಜಣಾಳ್ವ ಅಂದು ರಾತ್ರಿ ದೇವಯ ಭಂಡಾರಿಗಳ ಮನೆಯಲ್ಲಿ ಉಳಿದು ಮರುದಿನ ಬೆಳಗ್ಗೆ ಹೊರಡಲು ನಿಶ್ಚಯಿಸಿದ.

ಮನೆಗೆ ಬಂದು ಚಾವಡಿಯಲ್ಲಿ ದೇವಯ ಭಂಡಾರಿಗಳ ಜೊತೆ ಕುಳಿತು ಊಟ ಮಾಡುತ್ತಿದ್ದಾಗ ಬಡಿಸುತ್ತಿದ್ದ ದುರ್ಗಮ್ಮನ ಮುಖ ನೋಡಿ ಕಳೆದ ರಾತ್ರಿಯ ನೆನಪಾಯಿತು. ಒಂದೊಂದೇ ದೃಶ್ಯ ಕಣ್ಣ ಮುಂದೆ ಬಂದು ಹೋಯಿತು. ಸುಖದ ಆ ರಾತ್ರಿಯನ್ನು ನೆನೆದು ನಂಬಲಸಾಧ್ಯವಾಯಿತು. ಕೈಯಲ್ಲೇ ಇದ್ದ ತುತ್ತನ್ನು ನೋಡಿ ದುರ್ಗಮ್ಮ ಕೇಳಿದರು,

"ಏನು ಆಳ್ವರೇ, ಅನ್ನ ಕೈಯಲ್ಲಿ ಹಿಡಿದುಕೊಂಡು ಏನು ಯೋಚಿಸುತ್ತಿದ್ದೀರಿ?"

"ನಿನ್ನೆಯ ರಾತ್ರಿಯನ್ನು ನೆನೆದು ಅನ್ನ ಬಾಯಿಗೆ ಹೋಗಲಿಲ್ಲ" ಎಂದ ಮಂಜಣಾಳ್ವ.

"ಮಂಜಣಾಳ್ವರೇ, ನಿನ್ನೆ ರಾತ್ರಿ ನೀವಿಲ್ಲದಿರುತ್ತಿದ್ದರೆ ಈ ಭಂಡಾರ ಮಠದ ಮನೆ ನಿರ್ನಾಮವಾಗುತ್ತಿತ್ತು. ನಿಮ್ಮ ಮನೆಯಲ್ಲಿ ನಮ್ಮ ಮನೆಯ ಮಕ್ಕಳಿಗೆ ರಕ್ಷಣೆ ಕೊಟ್ಟು ನಿಮ್ಮ ಕುಟುಂಬಕ್ಕೆ ಶ್ರಮ ಕೊಟ್ಟಿದ್ದೀರಿ. ನಿಮ್ಮ ಸೇನೆಯಲ್ಲದಿರುತ್ತಿದ್ದರೆ ಇಂದು ಭಂಡಾರ ಮಠ ಆಸ್ತಿಪಾಸ್ತಿ ಕಳೆದುಕೊಂಡಿರುತ್ತಿತ್ತು. ನಿಮ್ಮಿಂದಾಗಿ ನಾವು ಗಂಡ-ಹೆಂಡತಿ ಬದುಕುಳಿಯುವಂತಾಯಿತು. ನಿಮಗೆ ಎಷ್ಟು ಋಣಿಯಾಗಿದ್ದೇನೆಂದು ಹೇಳಲು ನನ್ನಲ್ಲಿ ಶಬ್ದಗಳೇ ಇಲ್ಲ. ನೀವು ನನಗೆ ಪ್ರಾಯದಲ್ಲಿ ಚಿಕ್ಕವರಾದರೂ ನನ್ನ ಅಣ್ಣನಂತೆ."

ಭಂಡಾರಿಗಳ ಕಣ್ಣಲ್ಲಿ ನೀರಿಳಿಯಲು ಪ್ರಾರಂಭವಾಯಿತು.

"ಈ ಹೇಡಿಯ ಮಾನ ಉಳಿಸಿ ನನ್ನ ತಲೆತಲಾಂತರದ ವಂಶವನ್ನು ನಿಮಗೆ ಋಣಿಯಾಗುವಂತೆ ಮಾಡಿದಿರಿ ಆಳ್ವರೇ. ನಮ್ಮ ವಂಶ ಯಾವತ್ತೂ ಇದನ್ನು ಮರೆಯಲಾರದು. ನಿಮಗಾಗಲೀ, ನಿಮ್ಮ ವಂಶಕ್ಕಾಗಲೀ, ಈ ಋಣ ಸಂದಾಯವನ್ನು ಕೇಳುವ ಹಕ್ಕು ಇದೆಯೆಂದು ತಾಮ್ರ ಶಾಸನದಲ್ಲಿ ಬರೆದಿಡುತ್ತೇನೆ. ನಿನ್ನೆ ರಾತ್ರಿಯಿಂದ ದುರ್ಗನ ಮುಖ ನೋಡಲು ನನಗೆ ಸಾಧ್ಯವಾಗಲಿಲ್ಲ. ನೀವೇ ಹೇಳಿ ಮಂಜಣಾಳ್ವರೇ, ನನ್ನಿಂದ ಏನು



ಮಾಡಲು ಸಾಧ್ಯವಿತ್ತು? ಸಹೋದರನೆಂದು ಭಾವಿಸಿ ನೀವು ನನ್ನ ವರ್ತನೆಯನ್ನು ಕ್ಷಮಿಸಿದ್ದೇನೆಂದು ಹೇಳಬೇಕು. ನಿಮಗೆ ಗೊತ್ತಿದೆಯೊ ಏನೋ, ನನ್ನ ಅಜ್ಜ ನರಸಯ ಭಂಡಾರಿಗಳು ವಿಟ್ಲದ ನೆಲಮಾಳಿಗೆಯಲ್ಲಿ ಹುಚ್ಚು ಹಿಡಿದು ಸತ್ತರು. ನನಗೆ ಇಂದೂ ಆ ಭಯ ಹೋಗಿಲ್ಲ. ನೀವೇ ಹೇಳಿ, ನಾನು ಏನು ಮಾಡಬೇಕಾಗಿತ್ತು? ಸ್ಮೃತಿ ತಪ್ಪಿ ಬಿದ್ದವನನ್ನು ಯಾರು ಯಾವಾಗ ಎತ್ತಿ ಹಾಕಿದ್ದಾರೆಂದು ಇಂದು ಬೆಳಗಿನ ತನಕ ನನಗೆ ಗೊತ್ತಿರಲಿಲ್ಲ."

ದೇವಯ ಭಂಡಾರಿಗಳು ಕೈಯಲ್ಲಿ ಅನ್ನ ಹಿಡಿದು ಕಣ್ಣೀರು ಹಾಕಿದಾಗ ಮಂಜಣ ಏನು ಮಾಡಬೇಕೆಂಬುದೇ ತೋಚದೆ ದುರ್ಗಮ್ಮನ ಮುಖ ನೋಡಿದ. ಆ ಮುಖದಲ್ಲಿ ಏನೂ ಗೋಚರವಾಗಲಿಲ್ಲ. ಉಪ್ಪು, ಮೆಣಸು, ಹುಳಿ, ಖಾರ ಏನೂ ಕಾಣಲಿಲ್ಲ. ದುರ್ಗಮ್ಮ ಮಂಜಣ್ಣನ ಕಣ್ಣಿಗೆ ಕಣ್ಣಿಟ್ಟು ನೋಡಿದಾಗ ಆ ನೋಟದಲ್ಲಿ ಬೇರೆಯೇ ಆಸೆ ಕುಣಿಯುತ್ತಿತ್ತು,

"ನನಗೆ ಯಾರಲ್ಲೂ ಕೋಪ ಇಲ್ಲ ಆಳ್ವರೇ. ಆ ರಾಕ್ಷಸ ನನ್ನ ಮುಡಿಗೆ ಕೈ ಹಾಕಿ ಎಳೆದಾಗ ಹುಟ್ಟಿದ ಭಯ ಈಗಲೂ ನನ್ನ ಗರ್ಭದಿಂದ ಹೋಗಿಲ್ಲ. ನೀವು ಸಮಯಕ್ಕೆ ಬಂದು ಆ ಪಾಪಿಯ ಕೈ ಕಡಿದು ನನ್ನ ಮುಡಿ ಬಿಡಿಸದಿರುತ್ತಿದ್ದರೆ ನಾನೂ ಬೆಂಗರೆಯ ಮರಳಲ್ಲಿ ಬಿದ್ದಿರುತ್ತಿದ್ದೆನಲ್ಲವೇ? ಪ್ರಾಣ ಇರುವವರೆಗೆ ಈ ದುರ್ಗೆ ನಿಮ್ಮ ಉಪಕಾರವನ್ನು ಮರೆಯಲಾರಳು. ನಾನು ಏನು ಕೊಟ್ಟರೂ ನಿಮ್ಮ ಋಣ ಸಂದಾಯ ಮಾಡಲು ಸಾಧ್ಯವಿಲ್ಲ ಆಳ್ವರೇ. ಅದಿರಲಿ, ಈಗ ಇಬ್ಬರೂ ಊಟ ಮಾಡಿ. ಕಳೆದ ಎರಡು ರಾತ್ರಿಗಳಲ್ಲೂ ನಿದ್ದೆ ಇಲ್ಲದೆ ಆಳ್ವರಿಗೆ ಈಗ ನಿದ್ದೆ ಬರುತ್ತಿರಬೇಕು."

ಮಂಜಣಾಳ್ವನ ಮುಖ ನೋಡಿ ಕಣ್ಣಿಗೆ ಕಣ್ಣಿಟ್ಟು ದುರ್ಗಮ್ಮ ಎದ್ದರು.

"ದುರ್ಗಮ್ಮ, ದೇವಯ ಭಂಡಾರಿಗಳೇ, ಹೆಚ್ಚು ಹೊಗಳಿ ನನ್ನನ್ನು ಹಾಳು ಮಾಡಬೇಡಿ. ನನ್ನನ್ನು ನಿಮ್ಮ ಕುಟುಂಬದ ಒಬ್ಬ ಸದಸ್ಯನನ್ನಾಗಿ ಮಾಡಿಕೊಂಡು ನನಗೆ ನೀವು ಸಲ್ಲಿಸಿದ ಸೇವೆ, ನಾನು ಯಾವತ್ತೂ ಮರೆಯಲಾರೆ. ಭಂಡಾರಿಗಳೇ ಏಳಿ. ಈ ಕಲ್ಯಾಣಪ್ಪನ ವಿರುದ್ಧ ಯುದ್ಧದಲ್ಲಿ ನಿಮ್ಮಿಂದ ಆಗುವ ಕೆಲಸವನ್ನು ಜಾಣತನದಿಂದ ನೀವು ಮಾಡಿದ್ದೀರಿ. ನನ್ನಿಂದ ಸಾಧ್ಯವಿದ್ದುದನ್ನು ನಾನು ಮಾಡಿದ್ದೇನೆ. ದುರ್ಗಮ್ಮಾ, ನಿಮ್ಮಂತೆಯೇ ನಾನೂ ನನ್ನ ಜೀವಮಾನದಲ್ಲಿ ನಿನ್ನೆಯ ರಾತ್ರಿಯನ್ನು ಮರೆಯಲಾರೆ."

ಮಂಜಣಾಳ್ವ ಹೇಳಿದಾಗ ದುರ್ಗಮ್ಮನ ಮುಖ ಕೆಂಪಾಯಿತು.

"ಏಳಿ, ಬನ್ನಿ, ಅನುಭವಗಳನ್ನು ಮರೆತು ನಿದ್ರಿಸೋಣ. ದುರ್ಗಾ, ಮಂಜಣಾಳ್ವರು ಮೇಲೆ ಉಪ್ಪರಿಗೆಯಲ್ಲಿ ನಮ್ಮ ಕೋಣೆಯಲ್ಲೇ ಮಲಗಲಿ. ನಮ್ಮ ಕುಟುಂಬದವರು ಕುಟುಂಬದ ಕೋಣೆಯಲ್ಲಿಯೇ ಮಲಗಬೇಕು."

ದೇವಯ ಭಂಡಾರಿಗಳು ಹೇಳಿ ಎದ್ದು ಕೈ ತೊಳೆಯಲು ಹೋದರು.

"ದೇವಯನವರಿಗೆ ಮರೆಯಲು ಸುಲಭವಾದರೂ ನನಗೆ ನಿನ್ನೆ ರಾತ್ರಿಯ ಅನುಭವವನ್ನು ಮರೆಯಲು ಸಾಧ್ಯವಿಲ್ಲ ಮಂಜಣಾಳ್ವರೇ" ದುರ್ಗಮ್ಮ ಯಾವ ಅನುಭವದ

ವಿಷಯ ಮಾತನಾಡುತ್ತಿದ್ದಾರೆಂದು ಮಂಜಣನಿಗೆ ಅರ್ಥವಾಯಿತು.

"ನಾನೂ ಮರೆಯಲಾರೆ ದುರ್ಗಮ್ಮಾ." ಮಂಜಣ ಮೆಲ್ಲ ಹೇಳಿ ಕೈ ತೊಳೆಯಲು ಎದ್ದ.

ದೇವಯ ಭಂಡಾರಿಗಳ ಹಟಕ್ಕೆ ಒಪ್ಪಿದ ಮಂಜಣಾಳ್ವ ಅವರು ಮಲಗುವ ಕೋಣೆಯಲ್ಲೇ ಹಾಸಿಗೆಯ ಮೇಲೆ ಬಿದ್ದುಕೊಂಡ. ಮಂಜಣನಿಗೆ ನಿದ್ದೆ ಹತ್ತಲಿಲ್ಲ. ಈ ತನಕ ಒಂದೆರಡು ಅನುಭವ ಹೆಂಗಸರ ಜೊತೆ ಆಗಿದ್ದರೂ ಈ ತರಹದ ಸಂಪೂರ್ಣ ಅನುಭವ ಇದೇ ಮೊದಲು ಅವನಿಗೆ. ಹಾಲು, ತುಪ್ಪ ಕುಡಿದು ಬೆಣ್ಣೆಯಂತಿದ್ದ ದೇಹವನ್ನು ಅಪ್ಪಿ ಹಿಡಿದಾಗ, ಎಲ್ಲವನ್ನೂ ಮರೆತು ಸುಖದ ರಸದೌತಣವನ್ನು ಬಡಿಸಿ ತಿನ್ನಿಸಿದ ಅನುಭವ ಇದೇ ಮೊದಲು ಅವನಿಗೆ. ಉಪಕಾರ ಸಂದಾಯ ಮಾಡಲೆಂದು ಋಣಭಾವದಲ್ಲಿ ಅರ್ಪಿಸಿದ ದೇಹವನ್ನು ಹಸಿವು, ದಾಹದಿಂದ ಕಂಗೆಟ್ಟವ ಮುಕ್ಕಿ ಮುಕ್ಕಿ ತಿಂದಂತಾಗಿತ್ತು. ಆಯಾಸ, ನಿದ್ದೆಯನ್ನು ಗಣನೆಗೆ ತೆಗೆದುಕೊಳ್ಳದೆ, ಅನ್ನ ನೀರು ಕೊಡಲು, ಸುಖ ಕೊಟ್ಟು ಪಡೆಯಲು ತಯಾರಾಗಿದ್ದ ದುರ್ಗಮ್ಮನ ದೇಹವೂ ಅಂದು ರಾತ್ರಿಯಿಡೀ ನಿದ್ದೆಯಿಲ್ಲದೆ ಹೊರಳಾಡುತ್ತಲೇ ಇತ್ತು. ಬೆಳಗ್ಗೆ ನಿದ್ದೆ ಹತ್ತಿದ ಮಂಜಣನನ್ನು ಎಬ್ಬಿಸಿದವರು ದುರ್ಗಮ್ಮ.

ಹಕ್ಕಿ ಕೂಗುವ ಹೊತ್ತಿಗೆ ದಿನಾ ದೇವಸ್ಥಾನದ ಬೆಳಗ್ಗಿನ ಪೂಜೆಗೆ ಹೋಗುವುದು ದೇವಯ ಭಂಡಾರಿಗಳ ಕ್ರಮ. ದೇವಸ್ಥಾನದ ಬಾಗಿಲು ತೆರೆದು ಅರ್ಚಕರನ್ನು ಒಳಗೆ ಬಿಟ್ಟು, ಅಂಗಣದಲ್ಲಿ ಹನ್ನೆರಡು ಸುತ್ತು ಬರುವಾಗ ದೇವರ ಮೂರ್ತಿ ಪೂಜೆಗೆ ತಯಾರಾಗಿರುತ್ತಿತ್ತು. ಅಂದು ಬೆಳಗ್ಗೆಯೂ ದೇವಯ ಭಂಡಾರಿಗಳು ದೇವಸ್ಥಾನಕ್ಕೆ ಹೋದ ಮೇಲೆ ದುರ್ಗಮ್ಮ, ಮಂಜಣನ ಹಾಸಿಗೆಯಲ್ಲಿ ಅವನನ್ನು ಅಪ್ಪಿಕೊಂಡರು. ಆ ಮುಂಜಾನೆಯೂ ಕಳೆದ ಮುಂಜಾನೆ ಪಡೆದ ಸುಖಾನುಭವವನ್ನು ಇಬ್ಬರೂ ಹಂಚಿಕೊಂಡರು.

"ಮಿತ್ತಬೈಲಿಗೆ ಹೋದ ಮೇಲೆ ನನ್ನನ್ನು ಮರೆಯಬೇಡ ಮಂಜಣ" ದುರ್ಗಮ್ಮ ಹೇಳಿದಾಗ ಅಪ್ಪಿ ಹಿಡಿದ ದೇಹವನ್ನು ಮತ್ತಷ್ಟು ಗಟ್ಟಿಯಾಗಿ ಹಿಡಿದುಕೊಂಡು "ದುರ್ಗಮ್ಮಾ" ಎಂದು ಕರೆದ. "ದುರ್ಗಮ್ಮ ಅಲ್ಲ ದುರ್ಗಾ ಎಂದು ಕರೆ ಮಂಜಣ"

"ಆಯಿತು ದುರ್ಗಾ, ನಿನ್ನನ್ನು ಹೇಗೆ ಮರೆಯಲಿ ದುರ್ಗಾ, ನೀನಿಲ್ಲದೆ ನನ್ನಿಂದ ಬದುಕಲು ಸಾಧ್ಯವಿದೆಯೇ ದುರ್ಗಾ?"

"ಹಸಿವಾದಾಗ ಯಾವತ್ತೂ ಉಪ್ಪರಿಗೆಯ ಮೆಟ್ಟಲನ್ನು ಸಂಕೋಚವಿಲ್ಲದೆ, ಅಂಜಿಕೆಯಿಲ್ಲದೆ ಹತ್ತಿ ಬನ್ನಿ ಮಂಜಣಾಳ್ವರೇ"

"ದೇವಯ ಭಂಡಾರಿ, ಮನೆಯವರು...?"

"ಅದನ್ನು ನನಗೆ ಬಿಡಿ. ನಿಮಗೆ ಬೇಕಾದಾಗ, ಈ ದುರ್ಗೆಯ ನೆನಪಾದ ಕೂಡಲೇ ಬನ್ನಿ. ಮಿಕ್ಕಿದುದನ್ನು ನಾನು ನೋಡಿಕೊಳ್ಳುತ್ತೇನೆ."

ದುರ್ಗಮ್ಮ ಮಾಳಿಗೆ ಇಳಿದು ಸ್ನಾನಕ್ಕೆ ಹೋದರು. ಮಂಜಣ ಮತ್ತೂ ಸ್ವಲ್ಪ ಹೊತ್ತು



ಮಲಗಿ ಬಾಯಿ ಚಪ್ಪರಿಸಿಕೊಂಡ.

ಸೇನೆಯನ್ನು ಭಂಡಾರ ಮಠ, ಬಸದಿಗಳಿಂದ ಕರೆದುಕೊಂಡು ಹೊರಡಲು ತಯಾರಿ ಮಾಡಿದರು. ಮಂಜಣಾಳ್ವ ಅರಸರ ಸನ್ನಿಧಾನಕ್ಕೆ ಹೋದ. ದೇವಯ ಭಂಡಾರಿಯೂ, ದುರ್ಗಮ್ಮನೂ ಮಿತ್ತಬೈಲಿಗೆ ಹೋಗಿ ಸಂಜೆಯ ತನಕ ಅಲ್ಲಿ ಉಳಿದು ಸಂಕಮ್ಮಕ್ಕನಿಗೆ ಅವರ ಮಗನ ಪರಾಕ್ರಮವನ್ನು ಬಣ್ಣಿಸಿ, ಮಕ್ಕಳನ್ನು ಕರೆದುಕೊಂಡು ಮಂಜೇಶ್ವರಕ್ಕೆ ಹೊರಟರು. ಕಾಲಿಗೆ ಅಡ್ಡಬಿದ್ದ ದುರ್ಗಮ್ಮನಿಗೂ ಮಕ್ಕಳಿಗೂ ಒಂದು ಹೊರೆ ತೆಂಗಿನಕಾಯಿ, ಒಂದು ಹೊರೆ ಅಕ್ಕಿ ಕೊಟ್ಟು ಕಳುಹಿಸುವಾಗ ಅವರೆಲ್ಲರಿಗೂ ತವರಿಗೆ ಬಂದು ಹೋಗುವ ಮಗಳಂತಾಯಿತು. ಅಂದಿನಿಂದ ಭಂಡಾರ ಮಠ, ಮಿತ್ತಬೈಲು ಗುತ್ತಿನವರು ಒಂದೇ ಕುಟುಂಬದವರಂತಾದರು. ಒಳ್ಳೆಯದು-ಕೆಟ್ಟದು, ಸಾವು-ನೋವು, ಮದುವೆ-ಸಮಾರಂಭಗಳನ್ನು ಎರಡು ಮನೆಯವರೂ ಕುಟುಂಬದವರಂತೆ ಕೂಡಿ ನಡೆಸುತ್ತಿದ್ದರು.

★★★

ಬೆಳಗ್ಗೆ ಪೇಟೆ ಇಡೀ ಜನರಿಂದ ತುಂಬಿತ್ತು. ಕ್ಷಣಕ್ಷಣಕ್ಕೊಂದು ಸುದ್ದಿ ಬರುತ್ತಲಿತ್ತು.

ಸುಬ್ರಾಯ ಹೆಗ್ಡೆಯ ದಂಡು ಉಳ್ಳಾಲ ಕಡವಿನ ಬಳಿ ಮಂಗಳೂರು ಪೇಟೆಗೆ ದಾಳಿ ಮಾಡಲು ತಯಾರಾಗಿತ್ತು.

ಕಲ್ಯಾಣಪ್ಪನ ದಂಡು ಪಾಣೆಮಂಗಳೂರಿನ ಸುಂಕದ ಕಟ್ಟೆಯಲ್ಲಿ ಲಕ್ಷ್ಮಪ್ಪ ಬಂಗರಸನ ಸೇನೆಯನ್ನು ಸೇರಿಸಿಕೊಂಡು ಬಂಟ್ವಾಳಕ್ಕೆ ಬಂದು ದೇವಪ್ಪ ಶೇಣವ ಎಂಬ ಶಾನುಭೋಗರನ್ನು ಕರೆದುಕೊಂಡು ಮಂಗಳೂರಿನ ಕಡೆ ತಿರುಗಿತು. ದೇವಪ್ಪ ಶೇಣವ ಮಾತ್ರ ಯಾವ ಬೆದರಿಕೆಗೂ ಬಗ್ಗಲಿಲ್ಲ. ದಂಡಿನವರು ಬಂಟ್ವಾಳದಲ್ಲಿ ಲೂಟಿ ಮಾಡಿ ಅರ್ಕುಳ, ಫರಂಗಿಪೇಟೆ ಸುಂಕದ ಚಾವಡಿಗಳನ್ನು ಲೂಟಿ ಮಾಡಿ ಮಂಗಳೂರಿಗೆ ಬಂದರು.

ನೇತ್ರಾವತಿ ಹೊಳೆಯ ಕಡವಿನ ಬಳಿ ಕಲ್ಯಾಣಪ್ಪನನ್ನು ಕಾಯುತ್ತಿದ್ದ ಇಂಗ್ಲಿಷರಿಗೆ, ಕಲ್ಯಾಣಪ್ಪ ನಂದಾವರಕ್ಕೆ ಹೋಗಿ ಚಳ್ಳೆ ಹಣ್ಣು ತಿನ್ನಿಸಿದ. ಸುಬ್ರಾಯ ಹೆಗ್ಡೆಯ ದಂಡು ಬೋಳಾರದ ಬಳಿ ಕಡವು ದಾಟುವಾಗ ಫರಂಗಿಗಳ ತೋಪಿನ ಗುಂಡು ದೋಣಿಗಳನ್ನು ಮುಳುಗಿಸಿತು. ಹೊಳೆಗೆ ಹಾರಿದ ಸುಬ್ರಾಯ ಹೆಗ್ಡೆ ತಲವಾರನ್ನು ಬಾಯಿಯಲ್ಲಿ ಕಚ್ಚಿ ಹಿಡಿದುಕೊಂಡೇ ಹೊಳೆ ಈಜಿದನಂತೆ. ಬೋಳಾರದ ಹೊಳೆ ಬದಿಯಲ್ಲಿ ತಲವಾರು ಹಿಡಿದು ಕಾಯುತ್ತಿದ್ದ ಹೆಗ್ಡೆಯನ್ನು ಇಂಗ್ಲಿಷ್ ಸೈನಿಕನೊಬ್ಬ ಗುಂಡು ಹಾರಿಸಿ ಕೊಂದನಂತೆ.

ಮಂಗಳೂರಿಗೆ ಬಂದ ಕಲ್ಯಾಣಪ್ಪ ಇಂಗ್ಲಿಷ್ ಸೈನಿಕರನ್ನು ಹುಡುಕಿ ಹುಡುಕಿ ಕೊಚ್ಚಿ ಹಾಕಿದನಂತೆ. ಲಕ್ಷ್ಮಪ್ಪ ಬಂಗರಸರು ಬತ್ತೇರಿಯಲ್ಲಿದ್ದ ಖಜಾನೆಯನ್ನು ಲೂಟಿ ಮಾಡಿ ಹಂಚಿಕೊಂಡರು. ದಂಗೆಕೋರರು ಇಂಗ್ಲಿಷ್ ಸೇನೆಯ ಕೆಂಪು ಮೂತಿಯವರನ್ನು ಹುಡುಕಿ

ಹುಡುಕಿ ಒಬ್ಬರೂ ಉಳಿಯದಂತೆ ಕೊಂದು ಹಾಕಿ ಮಂಗಳೂರು ಪೇಟೆಯನ್ನು ವಶಕ್ಕೆ ತೆಗೆದುಕೊಂಡರು.

ಹದಿಮೂರು ದಿನ ಕಲ್ಯಾಣಪ್ಪ ರಾಜ್ಯಭಾರ ಮಾಡಿದ. ಸಿಪಾಯಿ ದಂಗೆಗೆ ಹಿಂದಿನ ಈ ಸ್ವಾತಂತ್ರ್ಯ ಸಮರ ಹದಿಮೂರು ದಿನವೇ ಉಳಿದುದು. ಖಜಾನೆ, ಸುಂಕದ ಚಾವಡಿ ಲೂಟಿ ಮಾಡಿ ಹಂಚಿಕೊಂಡ ಸೈನಿಕರು ತಲಚೇರಿಯಿಂದ ಹಡಗಿನಲ್ಲಿ ಇಂಗ್ಲಿಷ್ ಸೈನ್ಯ ಬರುತ್ತಿರುವ ಸುದ್ದಿ ಕೇಳಿದ ಕೂಡಲೇ ಓಡಿಹೋದರು. ಆ ಕಾಟುಕಾಯಿ ಸೈನಿಕರು ಸ್ವಾತಂತ್ರ್ಯದ ಹೋರಾಟಕ್ಕೆ ಬಂದವರಲ್ಲ, ಊರು, ಭಂಡಾರ ಲೂಟಿ ಮಾಡಲು ಬೇಕಾಗಿ ಕಲ್ಯಾಣಪ್ಪನ ಜೊತೆ ಸೇರಿದವರು.

ಹದಿನಾಲ್ಕನೇ ದಿನ ತಲಚೇರಿಯಿಂದ ಇಂಗ್ಲಿಷ್ ಸೇನೆ ತುಪಾಕಿ, ಗುಂಡು ಹಿಡಿದುಕೊಂಡು ಹಡಗಿನಿಂದ ಇಳಿಯಿತು. ಮಂಗಳೂರಿನ ಬತ್ತೇರಿಯನ್ನು ವಶಕ್ಕೆ ತೆಗೆದುಕೊಂಡು ಕಲ್ಯಾಣಪ್ಪನ ಕಾಟುಕಾಯಿ ಸೇನೆಯನ್ನು ಬೇಟೆಯಾಡಿತು. ಮೊದಲೇ ಶಿಸ್ತು ತಿಳಿಯದ ಸೇನೆಯ ಸಿಪಾಯಿಗಳು ಇಂಗ್ಲಿಷ್ ಸೇನೆಯ ತುಪಾಕಿಯ ಗುಂಡಿನ ಪೆಟ್ಟಿಗೆ ಓಡಿದರು. ಇಂಗ್ಲಿಷರ ಕೈಗೆ ಸಿಕ್ಕಿದ ಹತ್ತಿಪ್ಪತ್ತು ಸೈನಿಕರಿಗೆ ಬಿಕರ್ನಕಟ್ಟೆಯಲ್ಲಿ ಮರಣದಂಡನೆ ವಿಧಿಸಿ, ತೋಪಿನ ಬಾಯಿಗೆ ಕೊಟ್ಟರು.

ಕಲ್ಯಾಣಪ್ಪನನ್ನೂ ಲಕ್ಷ್ಮಪ್ಪ ಬಂಗರಸನನ್ನೂ ಹಿಡಿದು ಬಿಕರ್ನಕಟ್ಟೆಯಲ್ಲಿ ಗಲ್ಲಿಗೆ ಹಾಕಿದರು. ಎರಡು ದಿನ ಅವರ ಶವಗಳು ನೇತಾಡುತ್ತಿದ್ದವಂತೆ.

ಅಲ್ಲಿಗೆ ಹಿಂದೂಸ್ಥಾನದ ಮೊದಲ ಸ್ವಾತಂತ್ರ್ಯ ಸಮರ, ಇಂಗ್ಲಿಷರು ಹೇಳಿದಂತೆ ಕಲ್ಯಾಣಪ್ಪನ ಕಾಟುಕಾಯಿ, ಸುಬ್ರಾಯ ಹೆಗ್ಡೆಯ ಹೋರಾಟ ಮುಗಿಯಿತು.

ಮಂಜೇಶ್ವರ ಮಾಗಣೆಯಿಂದ ಹಿಡಿದು ಕುಂಬಳೆ, ಕಾಸರಗೋಡು, ಅಮರಸುಳ್ಯ, ಕೊಡಗಿನವರೆಗಿನ ಚರಿತ್ರೆಯ ಒಂದು ಅಧ್ಯಾಯ ಮುಕ್ತಾಯಗೊಂಡಿತು.

★★★

ಮಂಜಣಾಳ್ವನ ಜೀವನದಲ್ಲೂ ಒಂದು ಕಾಲಘಟ್ಟದ ಮುಕ್ತಾಯವಾಯಿತು.

ಯುದ್ಧ ಮುಗಿದಾಗುವಾಗ ಕಂಪನಿ ಸರಕಾರ ರಾಮಂತರಸರಿಗೆ ಮಾಸಾಶನ ಕೊಟ್ಟು ರಾಜ್ಯವನ್ನು ತನ್ನ ಆಡಳಿತಕ್ಕೆ ತೆಗೆದುಕೊಂಡಿತು. ಅವರಿಗೂ ಅವರ ಕುಟುಂಬಕ್ಕೂ ಬೇರೆ ಬೇರೆ ಗ್ರಾಮಗಳಲ್ಲಿದ್ದ ಸ್ವಂತದ ಆಸ್ತಿಗಳನ್ನು ಬಿಟ್ಟುಕೊಟ್ಟಿತು.

ಸುಬ್ರಾಯ ಶಾನುಭೋಗರಿಗೆ, ಯುದ್ಧ ಮುಗಿದಾಗ ಎರಡು ಸೇರಿನ ಚಿನ್ನದ ಬಳೆ ಹಾಕಿ ಗ್ರಾಮವೊಂದನ್ನು ಬಹುಮಾನ ಕೊಟ್ಟರು.

ಮಂಜಣಾಳ್ವನಿಗೆ ಗ್ರಾಮದ ಆಸ್ತಿ ಉಂಬಳಿ ಬಿಟ್ಟು ಮಿತ್ತಬೈಲು ಗ್ರಾಮದ ಯಜಮಾನಿಕೆ ಮತ್ತು ಪಟೇಲಗಿರಿಯನ್ನು ಕೊಟ್ಟರು.



ಮೂವರು ಸೇನಾಪತಿಗಳಿಗೆ ಗ್ರಾಮದ ಅಧಿಕಾರ, ಉಂಬಳಿಯ ಹಕ್ಕಲ್ಲದೆ ಕಾಲಿಗೆ ಚಿನ್ನದ ತೋಡ ಹಾಕಿ ಇಂಗ್ಲೆಂಡಿನಿಂದ ತಂದ ಮೂರು ಪಿಸ್ತೂಲುಗಳನ್ನು ಬಹುಮಾನವಾಗಿ ಕೊಟ್ಟರು.

ಕಂಪನಿ ಸರಕಾರ ಬಾರಬೈಲಿನ ಆಸ್ತಿಯನ್ನು ಕುಂಬಳೆಯ ಅರಸರು ಮುಟ್ಟುಗೋಲು ಹಾಕಿದ ಫರಮಾನನ್ನು ಖಾಯಂಗೊಳಿಸಿ, ಮನೆಯನ್ನು ಧ್ವಂಸ ಮಾಡಿ ಕುಟುಂಬದವರನ್ನು ಮನೆಯಿಂದ ಹೊರಗೆ ಹಾಕಿತು. ಬೀರಣ್ಣನ ತಾಯಿ ಜಾಕಕ್ಕ ನಾಲ್ಕು ಮಕ್ಕಳನ್ನು ಕಟ್ಟಿಕೊಂಡು ಮಿತ್ತಬೈಲಿಗೆ ಬಂದು ಮಂಜಣನ ತಾಯಿ ಸಂಕಮಕ್ಕನ ಕಾಲ ಬುಡದಲ್ಲಿಟ್ಟು, ಹಿಡಿದ ಕಾಲನ್ನು ಬಿಡಲಿಲ್ಲ. ಮಂಜಣಾಳ್ವರು ಅವರಿಗೆ ಆಶ್ರಯ ಕೊಡಲು ಒಪ್ಪದೆ ತಾಯಿಯಲ್ಲಿ ಅವರನ್ನು ಹೊರಗೆ ಕಳುಹಿಸುವಂತೆ ಹೇಳಿದರು. ಎಷ್ಟು ಹೇಳಿದರೂ ಕೇಳದ ಸಂಕಮಕ್ಕ, ಬೀರಣ್ಣ ಮಾಡಿದ ತಪ್ಪಿಗೆ ಜಾಕಕ್ಕ ಮತ್ತು ಪಾಪದ ಮಕ್ಕಳಿಗೆ ಏಕೆ ಶಿಕ್ಷೆ ಕೊಡುವುದೆಂದು ಬಾರಬೈಲಿನ ಹತ್ತಿರ ಒಂದು ಚಿಕ್ಕ ಗುಡಿಸಲಲ್ಲಿ ಕುಳ್ಳಿರಿಸಿ ಅವರಿಗೆ ಬೇಕಾದ ಅಕ್ಕಿ, ತೆಂಗಿನಕಾಯಿ ಕೊಟ್ಟು ಕಳುಹಿಸಿದರು. ಕಿನ್ಯನನನ್ನು ಕರೆದು ಮಕ್ಕಳಿಗೆ ಬೇಸಾಯದ ಕೂಲಿ ಕೆಲಸ ಕೊಡಲು ಹೇಳಿದರು. ತಾಯಿ ಈ ಬಾರಬೈಲಿನ ಮಕ್ಕಳಿಗೆ ಆಶ್ರಯ ಕೊಟ್ಟು ಮಡಿಲಲ್ಲಿ ವಿಷಸರ್ಪದ ಮರಿಗಳನ್ನು ಸಾಕುತ್ತಿದ್ದಾರೆ ಎಂದು ತಿಳಿದರೂ ತಾಯಿಯ ಮಾತನ್ನು ಮಕ್ಕಳು ಮೀರಲಿಲ್ಲ.

ಮಂಜಣಾಳ್ವ ಊರ ಯಜಮಾನಿಕೆ, ಪಟೇಲಗಿರಿಯ ಅಧಿಕಾರ ವಹಿಸಿದ ಹದಿನೈದು ದಿನಗಳಲ್ಲಿ ವಿಷು ಹಬ್ಬ ಬಂತು. ವಿಷುವಿನ ಬೆನ್ನಿಗೆ ಮದುವೆಯ ಚಪ್ಪರ ಎದ್ದಿತು.



## ೮

# ಕೈ ತುಂಬ ಕೈ ಧಾರೆ
# ಮೈ ತುಂಬ ಅಕ್ಷತೆ

ಊರಿಗೆ ಬಂದ ಮಿತ್ತಬೈಲಿನ ಮುಖಂಡ, ಗ್ರಾಮದ ಪಟೇಲ, ಮಿತ್ತಬೈಲು ಗುತ್ತಿನ ಯಜಮಾನ ಮಂಜಣಾಳ್ವ, ಗ್ರಾಮದ ಆಡಳಿತ ವಹಿಸಿಕೊಂಡರು. ಗ್ರಾಮದ ಆಡಳಿತ ನಡೆಸಲು ಮಾಗಣೆಗೊಬ್ಬರಂತೆ ಶಾನುಭೋಗರು ಬಂದರು. ಈ ಶಾನುಭೋಗರು ತೀರ್ವೆ, ಸುಂಕದ ವಸೂಲಿಯ ಲೆಕ್ಕಾಚಾರ ಇಟ್ಟುಕೊಳ್ಳುವವರು. ವರ್ಕಾಡಿ, ಮಂಜೇಶ್ವರ ಮಾಗಣೆಗಳಿಗೆ ಮಂಜಣಾಳ್ವನ ಆದೇಶದಂತೆ ಕಂಪನಿ ಸರಕಾರ ದೇವಯ ಭಂಡಾರಿಯನ್ನು ಮಾಗಣೆಯ ಶಾನುಭೋಗರಾಗಿ ನೇಮಿಸಿತು.

ಮಂಜಣ, ಮಂಜಣಾಳ್ವರಾಗಿ, ಪಟೇಲರಾಗಿ ಅಧಿಕಾರ ವಹಿಸಿಕೊಂಡಾಗ ಮನೆಯ ಕಾರುಬಾರು, ಭೂಮಿಯ ಸಾಗುವಳಿ ಗಳನ್ನು ತಮ್ಮಂದಿರು ವಹಿಸಿಕೊಂಡರು. ಪಟೇಲಗಿರಿ, ಊರಿನ ನಾಯಕತ್ವದ ಆಡಳಿತಕ್ಕೆ ಬೇಕಾಗಿ ಮನೆಯ ಮುಂದೆ ಒಂದು ದೊಡ್ಡ ಚಾವಡಿ ಕಟ್ಟಿಸಲು ಕೆಲಸದವರನ್ನು ಕರೆಸಿ ಕೆಲಸ ಪ್ರಾರಂಭಿಸಿದರು.



ಮಿತ್ತಬೈಲಿನಲ್ಲಿ ಮನೆ ಕಟ್ಟಿಸಿ ಗೃಹಪ್ರವೇಶವಾದಾಗ ಉಳಿದಿದ್ದ ಕೆಲಸಗಳೆಲ್ಲ ಮುಗಿದವು. ಸ್ನಾನದ ಕೊಟ್ಟಿಗೆ, ದನಕರುಗಳ ಹಟ್ಟಿ, ಕೋಳಿಗಳ ಕೊಟ್ಟಿಗೆ, ಓಟದ ಕೋಣಗಳ ಹಟ್ಟಿ, ಅಕ್ಕಿ, ತೆಂಗಿನಕಾಯಿ ಉಗ್ರಾಣ ಎಲ್ಲಾ ತಯಾರಾಗಿ ಚಾವಡಿಯ ಕೆಲಸ ಪ್ರಾರಂಭಿಸುವಾಗ ಮಾವನೂ, ಅಜ್ಜಿಯೂ, ಮಿತ್ತಬೈಲಿನ ಹಿರಿಯರು, ಕಿರಿಯರು ಮಿತ್ತಬೈಲಿಗೆ ಪಟೇಲರ ಸಂಭ್ರಮದಲ್ಲಿ ಪಾಲ್ಗೊಳ್ಳಲು ಬಂದರು.

ಬಂದ ಹಿರಿಯರು ನಾಲ್ಕು ದಿನ ಉಳಿದು ಮದುವೆಗೆ ದಿನ ನಿಶ್ಚಯಿಸಿದರು. ಮದುವೆ ಸಮಾರಂಭವನ್ನು ಮಜಲೋಡಿಯ ಬದಲು ಮಿತ್ತಬೈಲಿನಲ್ಲಿ ಮಾಡಬೇಕೆಂದು ಕೇಳಿಕೊಂಡ ಮಂಜಣನ ಮಾತಿಗೆ, ಮಂಜಣಾಳ್ವರ ಪಟೇಲಗಿರಿ, ಊರಿನ ಯಜಮಾನಿಕೆಗಳನ್ನು ಪರಿಗಣಿಸಿ ಹಿರಿಯರು ಒಪ್ಪಿಗೆ ಕೊಟ್ಟರು.

ಮಜಲೋಡಿಯ ಯುವಕರು ಮಿತ್ತಬೈಲಿಗೆ ಬಂದು ಮದುವೆಯ ತಯಾರಿ ಪ್ರಾರಂಭಿಸಿದರು. ರಾಮ, ಲಕ್ಷ್ಮಣ, ಕಿನ್ಯನ, ಕಾಂತಪ್ಪ ಒಬ್ಬೊಬ್ಬರು ಒಂದೊಂದು ಜವಾಬ್ದಾರಿ ವಹಿಸಿಕೊಂಡರು.

ಶುಭ ದಿನ ನೋಡಿ ಬಡಾಜೆಯ ತಂತ್ರಿಗಳು ಬಂದು ಮದುವೆಯ ಚಪ್ಪರಕ್ಕೆ ಪೂಜೆ ಮಾಡಿದರು.

ಕಾಡಿನಿಂದ ಕಂಬ ಕಡಿದು, ಬಿದಿರು, ಸಲಾಕೆ ತಂದು ಸೋಗೆಯ ಚಪ್ಪರ ತಿಂಗಳಾಗುವುದರೊಳಗೆ ತಯಾರಾಯಿತು. ಮುಂದಿನ ಬಾಕಿಮಾರು ಗದ್ದೆಯಲ್ಲಿ ಊಟದ ಚಪ್ಪರ, ಅಡುಗೆಯ ಚಪ್ಪರಗಳು ಸಿದ್ಧವಾದವು. ಅಡುಗೆಗೆ ಬೇಕಾದ ಕೊಪ್ಪರಿಗೆ, ಕವಂಗಗಳು ಕೋಳ್ಯೂರು ದೇವಸ್ಥಾನದಿಂದ, ಬಡಾಜೆ ತಂತ್ರಿಗಳ ಮನೆಯಿಂದ ಬಂದು ಬಿದ್ದವು. ನೀರಿನ ಮರಿಗೆ, ಮಣ್ಣಿನ ಪಾತ್ರೆ, ತಾಮ್ರದ ಹಂಡೆಗಳನ್ನು ಗದ್ದೆ ಇಡೀ ಹೂತರು.

ಬಡಾಜೆ ತಂತ್ರಿಗಳು ಸ್ವತಃ ಬಂದು ವರ್ಕಾಡಿಯ ತೋಡಿನ್ನಾಯರನ್ನು ಅಡುಗೆ ಕೆಲಸಕ್ಕೆ ನೇಮಕ ಮಾಡಿದರು. ಅಡುಗೆಯ ಸಾಮಗ್ರಿಗಳ ಜವಾಬ್ದಾರಿಯನ್ನು ಆದಿ ಸೆಟ್ಟರು ವಹಿಸಿಕೊಂಡರು.

ದೇವಯ ಭಂಡಾರಿಗಳು ವಧು-ವರರ ಮನೆಯವರಿಗೆ, ಕೆಲಸದವರಿಗೆ ಬೇಕಾಗುವ ಮದುವೆಯ ಜವಳಿ, ವಸ್ತ್ರ ಪಟ್ಟೆ ಸೀರೆ, ಕಚ್ಚೆ ಶಾಲು, ಬೈರಾಸು, ಅಂಗಿಗಳ ಜವಾಬ್ದಾರಿ ಯನ್ನು ವಹಿಸಿಕೊಂಡು ಪಟ್ಟಿ ಮಾಡಿಕೊಂಡು ಹೋದರು. ದೇವಯ ಭಂಡಾರಿಗಳು ಕಣ್ಣಾನೂರು, ಕಾಸರಗೋಡುಗಳಿಂದ ನೇಕಾರರನ್ನು ತರಿಸಿ ಮದುವೆಯ ಬಟ್ಟೆಗಳನ್ನು ನೇಯಿಸಿದರು.

ವಧುಗಳಿಗೆ ಚಿನ್ನ, ಒಡವೆಗಳನ್ನು ವಿಟ್ಲ ಹಾಗೂ ಕಾರ್ಕಳದ ಆಚಾರಿಗಳನ್ನು ಕರೆಸಿ ಮನೆಯಲ್ಲೇ ಕುಳ್ಳಿರಿಸಿ ಮಾಡಿಸುವ ಜವಾಬ್ದಾರಿಯನ್ನು ಭಂಡಾರಿಗಳ ಪತ್ನಿ ದುರ್ಗಮ್ಮನೂ, ಆದಿ ಸೆಟ್ಟಿಯ ತಂಗಿ ಮಾಚಬ್ಬೆಯೂ ವಹಿಸಿಕೊಂಡರು. ಮಜಲೋಡಿ ಗುತ್ತಿನ ಯಜಮಾನರ ಹೆಂಡತಿ ಮತ್ತು ಮಿತ್ತಬೈಲಿನಿಂದ ಸಂಕಮಕ್ಕ, ಚೋಮಕ್ಕನವರನ್ನೂ ಭಂಡಾರ

ಮಠಕ್ಕೆ ಕರೆದುಕೊಂಡು ಹೋಗಿ ದುರ್ಗಮ್ಮ ಅವರ ಎದುರೇ ಆಚಾರಿಗಳನ್ನು ತರಿಸಿ, ಒಡ್ಯಾಣ, ವಂಕಿ, ಬೆಂಡೋಲೆ, ನತ್ತು, ಮಾವಿನಮಿಡಿ ಸರ, ಅವಲಕ್ಕಿ ಸರ, ಚಕ್ರ ಸರ, ಸೊಂಟದ ಪಟ್ಟಿ, ತೋಳಬಂಧಿ, ಉಡುದಾರ, ಕೈ ಬಳೆ, ಕಾಲಗೆಜ್ಜೆ ಇತ್ಯಾದಿ ತರತರದ ಒಡವೆಗಳನ್ನು ಮಾಡಿಸಲು ಹಾಕಿದರು.

ತೋಡಿನ್ನಾಯರ ತಂಡದವರು ಹತ್ತು ದಿನ ಮೊದಲೇ ಬಂದು ಲಾಡು, ಹೋಳಿಗೆ ತಯಾರಿಸಿದರು. ಅಡುಗೆ ಚಪ್ಪರದ ಬದಿಯಲ್ಲಿ ಊರು, ಪರವೂರುಗಳಿಂದ ಬಂದ ಹೊರೆ ಕಾಣಿಕೆ ರಾಶಿ ಬೀಳತೊಡಗಿತು. ತುಪ್ಪ, ಎಣ್ಣೆಯ ಕೊಡಗಳು ಬಂದವು.

ಮದುವೆಯ ದಿನದಂದು ಬೆಳಗ್ಗೆ ಮಜಲೋಡಿಯಿಂದ ಬಂದ ಸುಬ್ಬಾಳ್ವರು ಮುಹೂರ್ತದ ಕಂಬ ನೆಡಿಸಿದರು. ಹಾಲು ಹೊಯ್ದು ಚಿನ್ನದ ಚೂರು ಹಾಕಿ ಹಾಲೆಯ ಮರದ ಕಂಬ ನಿಲ್ಲಿಸುವಾಗ ಕೊಂಬು ವಾದ್ಯಗಳು ಮೊಳಗಿದವು. ಮಡಿವಾಳ ಮುಹೂರ್ತದ ಕಂಬಕ್ಕೆ ಬಟ್ಟೆ ಸುತ್ತಿ ನೆಟ್ಟು ಆಗುವಾಗ ಮದುವೆಯ ದಿಬ್ಬಣ ಬರುತ್ತಿರುವ ಸುದ್ದಿ ತಲುಪಿತು. ಮೂರು - ನಾಲ್ಕು ಸೇರಿಗಾರರ ತಂಡಗಳು ವಾದ್ಯ ನುಡಿಸುತ್ತಿರುವಾಗ ಮಂಗಳೂರಿನಿಂದ ಬ್ಯಾಂಡ್ ತಂಡ ಬಂತು. ಬ್ಯಾಂಡ್ ಆಗ ಊರಿಗೇ ಹೊಸತು. ಜನ ಅದನ್ನು ನೋಡುವುದಕ್ಕಾಗಿಯೇ ಎಲ್ಲೆಲ್ಲಿಂದಲೋ ಬಂದರು. ಕೆಳಗಿನ ಗದ್ದೆಯಲ್ಲಿ ಕೊರಗರು ಡೋಲು, ಪರಿಶಿಷ್ಟರು ದುಡಿ, ಕೊಳಲಿನ ಜೊತೆ ಹೆಜ್ಜೆ ಹಾಕಿ ಕುಣಿಯಲು ಪ್ರಾರಂಭಿಸಿದರು.

ಮದುವೆಯ ದಿಬ್ಬಣಕ್ಕೆ ಪದವಿನಲ್ಲಿ ಬೆಳಗ್ಗಿನ ಗಂಜಿ, ಕಡುಬಿನ ಸತ್ಕಾರ ನಡೆಯಿತು. ಕೆಲವರಿಗೆ ಅವಲಕ್ಕಿ, ಬಾಳೆಹಣ್ಣು, ಬೆಲ್ಲದ ಪಾನಕ, ಎಳನೀರಿನ ಸತ್ಕಾರವಾಯಿತು.

ಬ್ಯಾಂಡ್, ವಾದ್ಯದಲ್ಲಿ ಬಂದ ದಿಬ್ಬಣವನ್ನು ಎದುರುಗೊಂಡು ಚಪ್ಪರಕ್ಕೆ ಕರೆತಂದು ಹಾಸಿದ್ದ ಚಾಪೆಗಳಲ್ಲಿ ಕುಳ್ಳಿರಿಸುವಷ್ಟರಲ್ಲಿ ಪಲ್ಲಕ್ಕಿಯಲ್ಲಿ ಬಂದ ಮದುಮಗ - ಮದುಮಗಳಂದಿರನ್ನು ಒಕ್ಕಲಿಗರ ಗುತ್ತಿನ ಯಜಮಾನರು ಎದುರುಗೊಂಡರು.

ಬ್ರಾಹ್ಮಣರ ಸಭೆಯಲ್ಲಿ ಮಾಯಿಪ್ಪಾಡಿಯ ಅರಸರ ಅಷ್ಟ ಪ್ರಧಾನರು, ವರ್ಕಾಡಿಯ ಅಷ್ಟ ಪ್ರಧಾನರು, ಪಾಡಿ ಸುಬ್ರಾಯ ಶಾನುಭೋಗರು, ಉಂಡೆಮನೆ ಸುಬ್ರಹ್ಮಣ್ಯ ಭಟ್ಟರು, ಬಡಾಜೆ ತಂತ್ರಿಗಳು ಬಂದು ಕುಳಿತುಕೊಂಡರು. ಎಳನೀರು, ಅವಲಕ್ಕಿ, ಬಾಳೆಹಣ್ಣಿನ ಫಲಹಾರ ನಡೆಯಿತು.

ಮತ್ತೊಂದು ಕಡೆಯಲ್ಲಿ ದೇವಯ ಭಂಡಾರಿಯ ಮಂಜೇಶ್ವರದ ಕೊಂಕಣಿಗರ ಸಮಾಜ, ಆದಿ ಸೆಟ್ಟಿಯ ನಾಯಕತ್ವದಲ್ಲಿ ಜೈನರ ಸಮಾಜದ ಹಿರಿಯರು, ಕುಂಬಳೆಯ ದೊಡ್ಡ ರಾಯಪ್ಪ, ಮುದುಕ ಕೆಂಗಣ್ಣ ನಾಯಕರು ಬಂದು ಕುಳಿತರು. ಯಥಾಪ್ರಕಾರ ಅವರಿಗೂ ಅವಲಕ್ಕಿ, ಬಾಳೆಹಣ್ಣು, ಎಳನೀರಿನ ಸತ್ಕಾರ ನಡೆಯಿತು.

ಬಂಟರ ಸಭೆಯಲ್ಲಿ, ಇಚ್ಲಂಪಾಡಿಯ ಕೋಚಣ್ಣಾಳ್ವರ ನಾಯಕತ್ವದಲ್ಲಿ ನಾಞಿರಾಲರಿಗೆ ಕಡುಬು, ಪದಾರ್ಥಗಳ ಸೇವೆ ನಡೆಯಿತು.

ಬೆಳ್ಚಡರ ನಾಯಕರು, ಅಚ್ಚಮ್ಮಾರರು ಬಂದು ಚಪ್ಪರದಲ್ಲಿ ಕುಳಿತುಕೊಳ್ಳು



ತ್ತಿದ್ದಂತೆಯೇ ಕೆಳಗಿನ ಗದ್ದೆಯಲ್ಲಿ ಯುವಕರ ತಾಲೀಮು ಪ್ರದರ್ಶನ ಪ್ರಾರಂಭವಾಯಿತು.

ಮದುವೆಯ ಚಪ್ಪರಕ್ಕೆ ಕುಂಬಳೆಯ ಅರಸರು ಹಾಗೂ ಕಾಸರಗೋಡಿನ ತಹಶೀಲ್ದಾರರು ಬಂದು ತಲುಪುವಾಗ ಕುಳಿತಿದ್ದ ಎಲ್ಲರೂ ಎದ್ದು ನಿಂತು ಜಯಕಾರ ಹಾಕಿದರು. ಅರಸರು ಕುಟುಂಬ ಸಮೇತ ಬಂದಿದ್ದರು. ಅವರು ಬಂದ ಕೂಡಲೇ ಮದುಮಗ - ಮದುಮಗಳಂದಿರನ್ನು ಮಾಗಣೆಯ ಹಿರಿಯರು ಚಪ್ಪರಕ್ಕೆ ಕರೆತಂದು ಮಡಿವಾಳ ಹಾಸಿದ ಮಡಿಬಟ್ಟೆಯ ಮೇಲೆ ನಿಲ್ಲಿಸಿದರು. ಮಜಲೋಡಿಯ ಯಜಮಾನರು ಸಭೆಗೆ ಕೈ ಮುಗಿದು ದೈವ ದೇವರನ್ನು ನೆನೆಸಿಕೊಂಡು ಧಾರೆ ಎರೆಯಲು ಅಪ್ಪಣೆ ಕೇಳಿಕೊಂಡರು. ಮಾವಂದಿರು ಧಾರೆ ಎರೆದು ಕೊಟ್ಟರು.

ಊರಿನ ಮುಖಂಡರಲ್ಲಿ ಹಿರಿಯರಾದ ನಾಞಿರಾಲರು ಉಡುಗೊರೆ ಹಾಕುವ ಕಂಚಿನ ಹರಿವಾಣ ಇಡಲು ಸಭೆಯ ಅಪ್ಪಣೆ ಪಡೆದುಕೊಂಡು ಹರಿವಾಣ ಇಟ್ಟರು. ಈಗಲೂ ದೊಡ್ಡ ಸಭೆಗಳಲ್ಲಿ ಹರಿವಾಣಕ್ಕೆ ಉಡುಗೊರೆಯಾಗಿ ಹಾಕಿದವರ ಹೆಸರನ್ನು ಕರೆದು ಹೇಳುವುದು ನಾಞಿರಾಲರೇ.

ವಧೂ-ವರರನ್ನು ಮಣೆಗಳ ಮೇಲೆ ಕುಳ್ಳಿರಿಸಿ ಸಭೆ ಅಕ್ಷತೆ ಹಾಕಿತು. ಅಕ್ಷತೆ ಹಾಕಿ ಬಂದ ಅರಸರನ್ನು ಮತ್ತು ಬ್ರಹ್ಮ ಸಭೆಯನ್ನು ಊಟಕ್ಕೆ ಎಬ್ಬಿಸಿದರು. ಅವರ ಊಟದ ನಂತರ ಬಂಟರು ಮತ್ತು ಉಳಿದ ಜಾತಿಯವರ ಊಟ ಮುಗಿಯಿತು.

ಮಿತ್ತಬೈಲಿನ ಮಂಜಣಾಳ್ವರ ಮದುವೆಯ ಊಟ ಇತ್ತೀಚೆಗೆ ನಡೆದ ಯಾವ ಸಮಾರಂಭಗಳಲ್ಲೂ ಕಾಣದಷ್ಟು ಭರ್ಜರಿಯಾಗಿತ್ತು. ಅನ್ನ, ಸಾರು, ಭಕ್ಷ್ಯಗಳೆಂದು ಜನರು ಪರಸ್ಪರ ಹೊಗಳಿಕೊಂಡರು. ಐದಾರು ಬಗೆಯ ಪಲ್ಯ, ಪದಾರ್ಥ, ಸಾರು, ಗಸಿ, ಹುಳಿ ಸಾಂಬಾರು, ಚಟ್ನಿ, ಉಪ್ಪಿನಕಾಯಿ, ಹಪ್ಪಳ, ಮಜ್ಜಿಗೆ, ಎರಡು ಬಗೆಯ ಪಾಯಸ, ನಾಲ್ಕು ಬಗೆಯ ಭಕ್ಷ್ಯಗಳು, ತೋಡಿನ್ನಾಯರ ಅಡುಗೆಗೆ ಸ್ವತಃ ಅರಸರೇ ಶಹಬಾಸ್ ಹೇಳಿದರು.

ಊಟ ಮುಗಿಯುವ ಹೊತ್ತಿಗೆ ಮದುಮಕ್ಕಳನ್ನು ಚಪ್ಪರದಿಂದ ಇಳಿಸಿಕೊಟ್ಟರು. ನಾಲ್ಕು ಜೋಡಿಗಳೂ ಬಂದು ಹಿರಿಯರ ಕಾಲಿಗೆ ಬಿದ್ದವು. ಅರಸರ ಕಾಲಿಗೆ ಬಿದ್ದಾಗ ತನ್ನ ಇಬ್ಬರು ನಾಯಕರಿಗೂ ಅರಸರು ಮುತ್ತಿನ ಹಾರ ಹಾಕಿದರು. ಅರಸರನ್ನು ಕಳುಹಿಸಿ ಹೆಣ್ಣೊಪ್ಪಿಸಿಕೊಡುವಾಗ ಸೂರ್ಯ ಮುಳುಗುವ ಹೊತ್ತಾಯಿತು.

ಬಂದ ನೆಂಟರೆಲ್ಲ ಹೋಗಿ ಮದುವೆಯ ಕಾರ್ಯಗಳೆಲ್ಲ ಮುಗಿದಾಗ ಏಳು ದಿನಗಳಾದವು. ಮದುವೆಗೆ ಬಂದ ಬಂಟರ ಸಮಾಜದ ಹಿರಿಯರು ಕಿನ್ಯನ, ರಾಮ, ಲಕ್ಷ್ಮಣರಿಗೂ ಮದುವೆ ಸಂಬಂಧದ ಬಗ್ಗೆ ಮಾತು ತೆಗೆದರು. ಮೋಕೆಯನ್ನು ಸಂಕಮಕ್ಕನ ಇಷ್ಟದಂತೆ ಪಾವೂರು ಗುತ್ತಿನ ಅವರ ಗಂಡನ ಅಳಿಯನಿಗೆ ಕೊಡುವುದೆಂದು ನಿಶ್ಚಯಿಸಿದರು. ಅವರ ಅಭಿಪ್ರಾಯದಲ್ಲಿ ಅಳಿಯ ವೆಂಕಪ್ಪನೇ ಮೋಕೆಗೆ ತಕ್ಕ ಗಂಡು. ವೆಂಕಪ್ಪನ ತಾಯಿಯೂ ಪಾವೂರಿನ ಹಿರಿಯರೂ ಈ ಸಂಬಂಧಕ್ಕೆ ಒಪ್ಪಿಗೆ ಕೊಟ್ಟಾಗ ಸಂಕಮಕ್ಕನಿಗೆ ಬಹಳ ಸಂತೋಷವಾಯಿತು.

ಹತ್ತನಾವಧಿಯ ಮರುದಿನ ನಿಶ್ಚಯವಾದ ಸಂಬಂಧ, ಮುಂದಿನ ವರ್ಷ 'ಕೆಡ್ಡಸ' ಕಳೆದು ನಾಲ್ಕು ದಿನಗಳಲ್ಲಿ ಮದುವೆಯೆಂದು  ತೀರ್ಮಾನವಾಯಿತು.

ಈ ಮದುವೆ ನಿಶ್ಚಯವಾದಾಗ ಎಲ್ಲರಿಗಿಂತಲೂ ಹೆಚ್ಚು ಖುಷಿಗೊಂಡವರೆಂದರೆ ರಾಮ, ಲಕ್ಷ್ಮಣರ ತಾಯಿ ಚೋಮಕ್ಕ. ಚೋಮಕ್ಕ ಒಂದು ದಿನ ಮಂಜಣನಲ್ಲಿ ಉಳ್ಳಾಲದ ಬ್ಯಾರಿಯಲ್ಲಿರುವ ತಮ್ಮ ಹಣವನ್ನು ಲೆಕ್ಕಮಾಡಿ ತೆಗೆದುಕೊಳ್ಳಬೇಕೆಂದಾಗ ಮಂಜಣ, ಮದುವೆಗೆ ಬಂದಿದ್ದ  ಬ್ಯಾರಿ ಸಿಡಿಮದ್ದಿನ ವಿಲೇವಾರಿ ಮಾಡಿ ಮದುವೆ ಮುಗಿದ ಕೂಡಲೇ ಹಣದ ಲೆಕ್ಕ ಮಾಡಿಕೊಂಡು ಬರುವುದಾಗಿ ತಿಳಿಸಿದ್ದುದನ್ನು ಹೇಳಿದನು.

★★★

ಹೇಳಿದ ಮಾತಿನಂತೆ ಒಂದು ದಿನ ಬ್ಯಾರಿ ಖರ್ಜೂರ, ಹಸಿ ಮೀನು, ಒಣ ತಾಟೆ ಮೀನು ಹಿಡಿದುಕೊಂಡು ಬಂದ. ಚೋಮಕ್ಕನನ್ನೂ, ಮಂಜಣನನ್ನೂ ಕುಳ್ಳಿರಿಸಿ ಬ್ಯಾರಿ ಲೆಕ್ಕ ಕೊಟ್ಟ. ಆತನಲ್ಲಿ ಹದಿನೈದು ಸಾವಿರ ರೂಪಾಯಿ ಒಟ್ಟಾಗಿತ್ತು. ಒಮ್ಮೆಲೇ ಅಷ್ಟೊಂದು ದುಡ್ಡು ಕೊಡಲು ಕಷ್ಟವಾಗುವುದಾಗಿಯೂ, ನಾಲ್ಕು ತಿಂಗಳ ಒಳಗೆ ಕೊಡುವುದಾಗಿ ಬ್ಯಾರಿ ಹೇಳಿದಾಗ ಅವರು ಒಪ್ಪಿಕೊಂಡರು. ಚೋಮಕ್ಕ ಆ ದುಡ್ಡಲ್ಲಿ ಒಂದು ಸಾವಿರ ರೂಪಾಯಿಯ ಚಿನ್ನ ತಂದು ಕೊಡಲು ಹೇಳಿದರು. ಏಳು ದಿನಗಳಲ್ಲಿ ತಂದುಕೊಡುತ್ತೇನೆ ಎಂದು ಒಪ್ಪಿದ್ದ ಬ್ಯಾರಿ ವಾರ ಬಿಟ್ಟು ಬರುವಾಗ ತನ್ನ ಮಕ್ಕಳನ್ನು ಕರೆತಂದು ಎಲ್ಲರ ಮುಂದೆ ಲೆಕ್ಕ ಹೇಳಿ ತಾನು ಮಕ್ಕಾಕ್ಕೆ ಹಜ್ಜ್‌ಗೆ ಹೋಗುವುದಾಗಿ ತಿಳಿಸಿದ. ಚೋಮಕ್ಕ ತಾನು ತರಿಸಿದ ಚಿನ್ನವನ್ನು ಎಲ್ಲ ಹೆಣ್ಣು ಮಕ್ಕಳಿಗೆ ಹಂಚಿ ಕೊಟ್ಟರು. ಮಂಜಣ ಉಳಿದ ಹಣದಲ್ಲಿ ಒಂದು ದೊಡ್ಡ ಆಸ್ತಿ ಖರೀದಿಸಿ ರಾಮ, ಲಕ್ಷ್ಮಣರನ್ನು ಅಲ್ಲಿ ಕುಳ್ಳಿರಿಸುವ ಯೋಚನೆ ಮಾಡಿದ. ತನ್ನ ತಾಯಿಯಲ್ಲಿಯೂ, ಚೋಮಕ್ಕನಲ್ಲಿಯೂ ತನ್ನ ಯೋಜನೆಯನ್ನು ತಿಳಿಸಿ, ಆಸ್ತಿ ಹುಡುಕಿದಾಗ ಅವನಿಗೆ ಸಮೀಪದ ಜೈನರ ಆಸ್ತಿ ಕಣ್ಣಿಗೆ ಬಿತ್ತು.

ಒಂದೇ ಬೈಲಲ್ಲಿ ಐನೂರು ಮುಡಿ ಅಕ್ಕಿ ಗೇಣಿಯ ಆಸ್ತಿ ಒಕ್ಕಲಿನವರ ಬಳಿ ಇತ್ತು. ಇನ್ನೂರು ಮುಡಿ ಅಕ್ಕಿಯ ಆಸ್ತಿ ಬೇಸಾಯವಿಲ್ಲದೆ ಪಾಳು ಬಿದ್ದಿತ್ತು. ಜೈನರ ಕುಟುಂಬ ದವರೆಲ್ಲ ಅಳಿದು ಇಬ್ಬರು ಮುದುಕರೂ, ಒಂದು ಹೆಣ್ಣು  ಮಾತ್ರ ಉಳಿದಿದ್ದರು. ವಾರಸುದಾರರೇ ಇಲ್ಲದ ಪಾಳು ಬಿದ್ದ ಆಸ್ತಿಯನ್ನು ನೋಡಿ ಬಂದ ಮಂಜಣಾಳ್ವ ಬಡಾಜೆ ತಂತ್ರಿಗಳಲ್ಲಿ ಆಸ್ತಿಯನ್ನು ಖರೀದಿಸಬಹುದೇ ಎಂದು ಕೇಳಿದ. ಮಂಜಣಾಳ್ವ ತಂತ್ರಿಗಳಲ್ಲಿ ಕೇಳದೆ ಯಾವ ಕೆಲಸವನ್ನೂ ಮಾಡುವುದಿಲ್ಲ, ತಂತ್ರಿಗಳು ಗುಣಿಸಿ ಹೇಳಿದರೆಂದಾದರೆ ಅದು ವೇದವಾಕ್ಯ. ತಂತ್ರಿಯವರು ಸ್ವಲ್ಪ ಅಡೆತಡೆಯಿದ್ದರೂ ಅಜಲಮಾರಿನ ಆಸ್ತಿ ಮಿತ್ತಬೈಲಿ ನವರಿಗೇ ಆಗುತ್ತದೆ. ಆಸ್ತಿ ಖರೀದಿಸಿದ ಮೇಲೆ ಅದರಲ್ಲಿ ಪಾಳು ಬಿದ್ದಿರುವ ದೈವ - ದೇವರ ಗುಡಿಗಳನ್ನು ಜೀರ್ಣೋದ್ಧಾರ ಮಾಡಬೇಕು ಎಂದು ಹೇಳಿದರು.

ಮಂಜಣಾಳ್ವ ಒಂದು ದಿನ ಸಂಕಮಕ್ಕನಲ್ಲಿಯೂ, ಚೋಮಕ್ಕನಲ್ಲಿಯೂ



ಅಜಿಲಮಾರಿನ ಆಸ್ತಿಯ ಬಗ್ಗೆ ತಿಳಿಸಿ ತಮ್ಮಂದಿರನ್ನು ಆಸ್ತಿ ನೋಡಿ ಬರಲು ಕಳುಹಿಸಿದನು. ಎಲ್ಲರಿಗೂ ಆಸ್ತಿ ಇಷ್ಟವಾಯಿತು. ಆಸ್ತಿ ಆಗಬಹುದೆಂದಾದ ಮೇಲೆ ವ್ಯವಹಾರ ಕುದುರಿಸಲು ಆದಿ ಸೆಟ್ಟಿಯನ್ನೂ, ದೇವಯ ಭಂಡಾರಿಯವರನ್ನೂ ಬಿಟ್ಟರು. ಅವರಿಬ್ಬರೂ ಅಜಲಮಾರಿನ ಆಸ್ತಿಗೆ ಇಪ್ಪತ್ತೈದು ಸಾವಿರ ರೂಪಾಯಿಯ ಬೆಲೆ ನಿಶ್ಚಯಿಸಿ ನಾಲ್ಕು ತಿಂಗಳ ಅವಧಿ ಪಡೆದುಕೊಂಡರು. ಐದು ಸಾವಿರ ರೂಪಾಯಿ ಮುಂಗಡ ಕೊಡುವುದೆಂದು ತೀರ್ಮಾನ ವಾದ ಮೇಲೆ ಮಜಲೋಡಿಗೆ ಹೋಗಿ ಮಾವನಿಗೆ ತಿಳಿಸಿ ಅವರನ್ನು ಭೂಮಿಯನ್ನು ತೋರಿಸಲು ಕರೆತಂದರು. ಚೋಮಕ್ಕನಿಗೂ, ಸಂಕಮಕ್ಕನಿಗೂ ಇಷ್ಟೊಂದು ಹಣ ಎಲ್ಲಿಂದ ಕೊಡುವುದೆಂಬ ಚಿಂತೆ. ಮಂಜಣಾಳ್ವ ಚೋಮಕ್ಕನಲ್ಲಿ ನಾಲ್ಕು ತಿಂಗಳಲ್ಲಿ ದುಡ್ಡು ಕೊಡುತ್ತೇನೆಂದು ಹೇಳಿದ್ದ ಬ್ಯಾರಿಯನ್ನು ತರಿಸಿ ದುಡ್ಡು ತೆಗೆದುಕೊಂಡು ವ್ಯವಹಾರ ಮುಗಿಸೋಣವೆಂದು ಹೇಳಿದ. ಆದರೆ ಬ್ಯಾರಿ ಮಕ್ಕಾಕ್ಕೆ ಹೋದವನು ಸಮಯಕ್ಕೆ ಸರಿಯಾಗಿ ಬಾರದಿದ್ದರೆ ತೊಂದರೆಯಾಗಬಹುದೆಂದು ಮಂಜಣ ದೇವಯ ಭಂಡಾರಿಗಳ ಜೊತೆ ಮಾತನಾಡಲು ಹೋದ.

ದೇವಯ ಭಂಡಾರಿಯಲ್ಲಿ ತನ್ನ ಸಮಸ್ಯೆಯನ್ನು ಹೇಳಿದಾಗ ಭಂಡಾರಿ ಕೇಳಿದ,

"ನಿಮಗೆ ಈಗ ಎಷ್ಟು ಹಣ ಒಟ್ಟು ಮಾಡಬಹುದು ಯಜಮಾನರೇ?"

"ಅಲ್ಲಿ  ಇಲ್ಲಿ ಎಂದು ಒಂದು ಹತ್ತು ಸಾವಿರ ಮಾಡಬಹುದು. ಆದರೆ ಮಿಕ್ಕಿದ್ದಕ್ಕೆ ಏನು ಮಾಡುವುದು? ಬ್ಯಾರಿ ಯಾವಾಗ ಬರುತ್ತಾನೆಂದು ಗೊತ್ತಿಲ್ಲ, ಅವನನ್ನು ನಂಬಿ ಗುಂಡಿಗೆ ಬಿದ್ದ ಹಾಗೆ ಆಗಲಿಕ್ಕಿಲ್ಲವಲ್ಲ?"

"ಏನೂ ಹೆದರಬೇಡಿ. ನಾಲ್ಕು ದಿನ ಕಳೆದು ಬನ್ನಿ. ನಾನು ಆದಿ ಸೆಟ್ಟಿಯನ್ನು ಕರೆಸಿ ಮಾತನಾಡುತ್ತೇನೆ. ನೀವು ಚಿಂತೆ ಮಾಡಬೇಡಿ. ಶ್ರೀಮದನಂತೇಶ್ವರ ದಾರಿ ತೋರಿಸುತ್ತಾನೆ."

ದೇವಯ ಭಂಡಾರಿಗಳು ಮಂಜಣಾಳ್ವರಿಗೆ ಭರವಸೆ ಕೊಟ್ಟು ಊಟಕ್ಕೆ ಎಬ್ಬಿಸಿದರು. ಮಂಜಣಾಳ್ವ ದರೋಡೆ ಘಟನೆಯ ಬಳಿಕ ಭಂಡಾರ ಮಠಕ್ಕೆ ಬಂದಿರಲೇ ಇಲ್ಲ, ಆತ ಬಂದ ಸಂತೋಷದಲ್ಲಿ ದುರ್ಗಮ್ಮ ಪಾಯಸ, ಪತ್ರೋಡೆಯ ಅಡಿಗೆ ಮಾಡಿದ್ದರು. ದುರ್ಗಮ್ಮ ಬಡಿಸುವಾಗ ಕೇಳಿದರು,

"ಹೊಸ ಸಂಸಾರ ಹೇಗಿದೆ ಆಳ್ವರೇ?"

"ಪತ್ನಿ ಮಜಲೋಡಿಗೆ ಹೋದವಳು ಕೆಲವು ಸಮಯದಿಂದ ಅಲ್ಲೇ ತವರು ಮನೆಯಲ್ಲಿದ್ದಾಳೆ."

"ಏನು, ಏನಾದರೂ ವಿಶೇಷವುಂಟಾ ಆಳ್ವರೇ?"

ದುರ್ಗಮ್ಮ ನಕ್ಕು ಕೇಳಿದಾಗ ದೇವಯ ಭಂಡಾರಿಗಳು ಮಧ್ಯೆ ಬಾಯಿ ಹಾಕಿದರು,

"ಏನದು, ಮಡದಿ ತವರುಮನೆಗೆ ಹೋದರೆ ಅದರಲ್ಲೇನು ವಿಶೇಷ? ನೀನೆಷ್ಟು ಸಲ ತವರುಮನೆಗೆ ಹೋಗಿಲ್ಲ?"

"ನೀವೊಮ್ಮೆ ಸುಮ್ಮನೆ ಕುಳಿತುಕೊಳ್ಳಿ, ನಿಮಗೇನು ಗೊತ್ತು. ಮದುವೆಯಾಗಿ ನಾಲ್ಕು

ತಿಂಗಳಲ್ಲಿ ತವರುಮನೆಗೆ ಹೋಗಿ ವಾರಗಟ್ಟಲೆ ಯಾವ ಹೆಣ್ಣೂ ಉಳಿಯುವುದಿಲ್ಲ. ಏನು... ಏನು ಆಳ್ವರೇ ಮಡದಿ ಗರ್ಭಿಣಿಯಾ?''

''ಹೌದು ದುರ್ಗಮ್ಮಾ, ಎರಡು ತಿಂಗಳಾಯಿತೆಂದು ಕಾಣುತ್ತದೆ''

''ಓ! ಹೇಳಲಿಲ್ಲವೇ ನಾನು ವಿಶೇಷ ಇರಬೇಕೆಂದು. ಹಾಗಾದರೆ ನಮಗೆ ಇನ್ನೊಂದು ಗೌಜಿ ಇದೆ. ಬಯಕೆ ಯಾವಾಗ ಆಳ್ವರೇ?''

ದುರ್ಗಮ್ಮ ಕೇಳಿದಾಗ ದೇವಯ ಭಂಡಾರಿ ಬೆನ್ನು ತಟ್ಟಿ ಹೇಳಿದರು,

''ಬಹಳ ಸಂತೋಷದ ಸುದ್ದಿ ಆಳ್ವರೇ. ಅದಕ್ಕೇ ಕಾಣುತ್ತದೆ, ಮಗ ಬರುವಷ್ಟರೊಳಗೆ ಅಜಲಮಾರಿನ ಆಸ್ತಿ ಖರೀದಿಸಿ, ಮಗನಿಗೆ ಆಸ್ತಿ ಮಾಡಿಟ್ಟು ಅವನನ್ನು ಸ್ವಾಗತಿಸುವ ಆಸೆಯಾ?''

''ಅದೇನು ಅಜಿಲಮಾರು?''

ದುರ್ಗಮ್ಮ ಕೇಳಿದಾಗ, ಭಂಡಾರಿಗಳು ಆಸ್ತಿ ಖರೀದಿಸಲು ಮುಂಗಡ ಕೊಟ್ಟದ್ದನ್ನು ಹೇಳಿದರು. ಮಂಜಣಾಳ್ವ ತನ್ನ ಸಮಸ್ಯೆಯನ್ನು ಹೇಳಿ, ಬ್ಯಾರಿ ಮಕ್ಕಾಕ್ಕೆ ಹೋದವನು ಬರುವ ತನಕ ಹೇಗೆ ಸುಧಾರಿಸುವುದೆಂಬ ತನ್ನ ಚಿಂತೆಯನ್ನು ಹೇಳಿದನು.

''ಅಷ್ಟೇ ತಾನೇ ಆಳ್ವರೇ, ನೀವು ಈ ಚಿಂತೆಯಲ್ಲಿಯೇ ಅನ್ನವನ್ನು ಕೈಯಲ್ಲಿ ಹಿಡಿದುಕೊಂಡು ಊಟ ಮಾಡದೆ ಯೋಚನೆಯಲ್ಲಿ ಬಿದ್ದಿರುವುದು? ಊಟ ಮಾಡಿ. ಏನೂ ಹೆದರಬೇಡಿ. ಭಂಡಾರ ಮಠದಲ್ಲಿ ಆ ಆಸ್ತಿಯನ್ನು ಖರೀದಿಸುವಷ್ಟು ದುಡ್ಡು ಇರಬಹುದು. ನಾನು ನನ್ನ ತಂದೆಯ ಮನೆಗೆ ಹೋಗಿ ನಿಮಗೆ ಬೇಕಾದ ಹಣ ಕೊಡಿಸುತ್ತೇನೆ. ನೀವು ಚಿಂತೆ ಬಿಟ್ಟು ಊಟ ಮಾಡಿ. ಮಜಲೋಡಿಗೆ ಹೋಗಿ ಹೆಂಡತಿಯನ್ನು ನೋಡಿ ಬನ್ನಿ.''

ದುರ್ಗಮ್ಮನ ತಂದೆ ಕೊಚ್ಚಿಯಲ್ಲಿ ಗೇರುಬೀಜ, ಕೊಬ್ಬರಿಗಳ ಭಾರೀ ದೊಡ್ಡ ವ್ಯಾಪಾರಿ. ಅವರಿಗೆ ಸಾಹುಕಾರ ಬಾಬಣ್ಣನೆಂದೇ ಹೆಸರು. ಅಷ್ಟು ದೊಡ್ಡ ಸಾಹುಕಾರ ಅವರು. ಇಡೀ ತಿರುವಾಂಕೂರಿನ ಕೊಬ್ಬರಿ ವ್ಯಾಪಾರ ಅವರ ಕೈಯಲ್ಲಿತ್ತು. ದುರ್ಗಮ್ಮ ಹೇಳಿದಾಗ ದೇವಯ ಭಂಡಾರಿಗಳು ನಕ್ಕು ಹೇಳಿದರು,

''ನೋಡಿದಿರಾ ಆಳ್ವರೇ, ಈ ತನಕ ನನ್ನ ಕಷ್ಟಕ್ಕೆ ನಾಲ್ಕು ಕಾಸು ಬೇಕಾದಾಗ ತನ್ನ ತಂದೆಯಲ್ಲಿ ಕೇಳಿ ತಂದುಕೊಟ್ಟ ಮಗಳಲ್ಲ ಈ ದುರ್ಗಾ. ನಿಮಗೆ ಬೇಕಾಗುವಾಗ ತಂದೆಯಲ್ಲಿ ಸಾಲ ತರಲೂ ಸಿದ್ಧಳಿದ್ದಾಳೆ.''

''ಹೌದು, ನಾನು ಮಂಜಣಾಳ್ವರ ಉಪಕಾರವನ್ನು ಮರೆತಿಲ್ಲ'' ದುರ್ಗಮ್ಮ ಹೇಳಿ ಒಳಗೆ ಹೋದರು.

''ಕೋಪಿಸಿಕೊಳ್ಳಬೇಡ ಮಹಾರಾಯಿತಿ. ನಾನು ತಮಾಷೆಗೆ ಹೇಳಿದ್ದು. ದೇವಯ ಭಂಡಾರಿ ಇರುವಾಗ ಮಂಜಣಾಳ್ವರಿಗೆ ನಿನ್ನ ತಂದೆಯ ಹಣಕಾಸಿನ ಅಗತ್ಯ ಇಲ್ಲ ಏನು!''

ಗಂಡ-ಹೆಂಡತಿಯ ಪ್ರೀತಿ, ವಿಶ್ವಾಸದ ಜಗಳ ನೋಡಿ ಮಂಜಣಾಳ್ವರ ಕಣ್ಣುಗಳು



ಮಂಜಾದವು. ಊಟ ಮುಗಿಸಿದ ಆಳ್ವರು ಮಿತ್ತಬೈಲಿಗೆ ಹೊರಡುವಾಗ ದುರ್ಗಮ್ಮನನ್ನು ಕಾಣಲು ಮಾಳಿಗೆಗೆ ಹೋದರು. ದೇವಯ ಭಂಡಾರಿ ಅಂಗಳ ಇಳಿದರು. ಮಾಳಿಗೆಯಲ್ಲಿ 'ಬರುತ್ತೇನೆ' ಎಂದಾಗ ದುರ್ಗಮ್ಮ,

''ಬರುತ್ತೇನೆಂದು ಬರೇ ಬಾಯಲ್ಲಿ ಮಾತ್ರ. ದರೋಡೆಯ ಘಟನೆಯ ನಂತರ ಗುತ್ತಿನ ಯಜಮಾನರಿಗೆ ಭಂಡಾರ ಮಠದ ದಾರಿಯೇ ಮರೆತು ಹೋಗಿದೆ. ಕೋಪವೇ ಆಳ್ವರೇ?''

''ಇಲ್ಲ, ದುರ್ಗಮ್ಮ. ಅದು ಹೇಗೆ ನಿಮ್ಮನ್ನು ಮರೆಯಲಿ? ಪಟೇಲಗಿರಿ, ಯಜಮಾನಿಕೆ, ಮದುವೆ ಎಂದು ಒಂದರ ಮೇಲೊಂದಾಗಿ ಸಮಯವೇ ಸಿಗಲಿಲ್ಲ. ಇನ್ನು ಪೇಟೆಗೆ ಬಂದವನು ಊಟಕ್ಕೆ ಇಲ್ಲಿಗೇ ಬರುತ್ತೇನೆ. ಮಂಜೇಶ್ವರಕ್ಕೆ ಬಂದರೆ ನಿಮ್ಮನ್ನು ನೋಡದೆ ಹೋಗಲಾರೆ.

ಮಂಜಣಾಳ್ವರ ಬಾಯಿಯಿಂದ ಬಂದ ಮಾತಿಗಿಂತಲೂ ಕಣ್ಣಿನ ಭಾಷೆ ನೋಡಿ ದುರ್ಗಮ್ಮನಿಗೆ ಖುಷಿಯಾಯಿತು.

ಮಂಜೇಶ್ವರದಲ್ಲಿ ತಲೆಯ ಅರ್ಧ ಭಾರವನ್ನು ಇಳಿಸಿಕೊಂಡು ಮಂಜಣಾಳ್ವರು ನೇರ ಮಜಲೋಡಿಗೆ ಹೊರಟರು. ಹೆಂಡತಿಯನ್ನು ಕಂಡು, ಮಾವನಲ್ಲಿ ಅಜಿಲಮಾರಿನ ಆಸ್ತಿಯ ವಿಷಯವನ್ನೂ ಮಾತನಾಡಲೆಂದು ಆಳ್ವರು ಮಜಲೋಡಿಗೆ ಬಂದರು. ಆಸ್ತಿ ಖರೀದಿಸಲು ದೇವಯ ಭಂಡಾರಿಯ ಸಾಲ, ತಮ್ಮಂದಿರ ಮದುವೆಯ ವಿಷಯ ಮಾವನಲ್ಲಿ ಮಾತನಾಡಿ ಮಲಗಲು ಹೋಗುವಾಗ ಹೆಂಡತಿ ಚಿಮಿಣಿ ದೀಪ ಇಟ್ಟು ಕುಳಿತಿದ್ದಳು. ಅವಳಿಗೆ ಗಂಡ ಇಷ್ಟೊಂದು ಕೆಲಸವಿದ್ದರೂ ತನ್ನನ್ನು ನೋಡಲು ಬಂದರಲ್ಲಾ ಎಂಬ ಸಂತೋಷ. ಬೆಳಗ್ಗೆದ್ದು ಹೆಂಡತಿಗೆ ಆರೋಗ್ಯದ ಬಗ್ಗೆ ಎಚ್ಚರಿಕೆ ಹೇಳಿ ಮಿತ್ತಬೈಲಿಗೆ ಹೊರಡುವಾಗ, ಅತ್ತೆಯೂ ಅವರ ಜೊತೆ ಬಯಕೆಯ ದಿನ ನಿಶ್ಚಯಿಸಲು ಹೊರಟರು. ದಾರಿಯಲ್ಲಿ ಬರುವಾಗ ಅತ್ತೆ, ಮಂಜಣಾಳ್ವರಿಗೆ ತಂಗಿ ಗರ್ಭಿಣಿ ಎಂಬ ಸುದ್ದಿಯನ್ನು ತಿಳಿಸಿದರು.

★★★

ಕಲ್ಯಾಣಸ್ವಾಮಿಯ ದಂಗೆ ಮುಗಿದು ತುಳುನಾಡಿನಲ್ಲಿ ಕಂಪನಿ ಸರಕಾರದ ಆಡಳಿತ ಗಟ್ಟಿಯಾಗಿ, ಮುನ್ರೊ ಸಾಹೇಬರ ಕಂದಾಯ ವಸೂಲಿಯ ಕ್ರಮ ನಡೆಯುತ್ತಿತ್ತು. ಕಂಪನಿ ಸರಕಾರದ ಕಲೆಕ್ಟರರು ಬಂದು ಆಡಳಿತ ಮಾಡುತ್ತಿದ್ದರು. ಕನ್ನಡ ಜಿಲ್ಲೆಗಳನ್ನು ಎರಡು ಭಾಗ ಮಾಡಿ ಉತ್ತರಕನ್ನಡವನ್ನು ಬೊಂಬಾಯಿ ಸರಕಾರಕ್ಕೆ ಸೇರಿಸಿದರು. ದಕ್ಷಿಣಕನ್ನಡ ಹೊನ್ನಾವರ ದಿಂದ ಚಂದ್ರಗಿರಿ ಹೊಳೆಯವರೆಗೆ ಮದ್ರಾಸ್ ರಾಜ್ಯದ ಆಡಳಿತಕ್ಕೆ ಸೇರಿತು. ಕಾಸರಗೋಡು ತಾಲೂಕು ಎಲ್ಲಕ್ಕಿಂತ ದೊಡ್ಡ ತಾಲೂಕಾಯಿತು.

ಕಲೆಕ್ಟರ್ ಬಂದು ತುಳುನಾಡಿನ ಭಾಷೆ ಕಲಿತು, ತುಳುನಾಡ ಸಂಸ್ಕೃತಿಯನ್ನು ಅಭ್ಯಸಿಸಲು ಪ್ರಾರಂಭಿಸಿದರಂತೆ. ಇಲ್ಲಿಯ ಆಯನ, ಅಂಕ, ಪಾಡ್ದನಗಳನ್ನು ಒಟ್ಟು ಮಾಡಿ ವಿವರವಾಗಿ ಸಂಗ್ರಹಿಸಿದರಂತೆ.

ಉತ್ತರ ದೇಶದ ದಂಗೆಯ ಸುದ್ದಿಗಳು ಜೋಗಿ ಮಠಗಳಿಗೆ ಬರುವ ಸನ್ಯಾಸಿಗಳ ಮೂಲಕ ಹಾಗೂ ವ್ಯಾಪಾರಕ್ಕೆ ಬರುವ ಅರಬಿಗಳ ಮೂಲಕ ಬರುತ್ತಿದ್ದವು. ಕುಂಬಳೆ ರಾಜ್ಯದಲ್ಲಿ ಅರಸರು ಹೆಸರಿಗೆ ಮಾತ್ರ ಇದ್ದರು. ಕೊಡಗಿನ ಅಮರ ಸುಳ್ಯ, ಬೆಳ್ಳಾರೆ, ಕಬಕ ಮಾಗಣೆಗಳನ್ನು ಪುತ್ತೂರು ತಾಲೂಕಿಗೆ ಸೇರಿಸಿ ಆಡಳಿತವನ್ನು ಮಂಗಳೂರಿನ ಕಲೆಕ್ಟರರಿಗೆ ಕೊಟ್ಟರು. ರಾಜ್ಯದ ಆಡಳಿತ ಪಟೇಲರು, ಶಾನುಭೋಗರು, ಅಮಲ್ದಾರರು, ತಹಶೀಲ್ದಾರರು, ಶಿರಸ್ತೆದಾರರ ಅಧಿಕಾರದಲ್ಲಿ ಚೆನ್ನಾಗಿ ನಡೆಯಿತು.

ಮಂಜಣ್ಣಾರ ಪಟೇಲತನದಲ್ಲಿ, ದೇವಯ ಭಂಡಾರಿಗಳ ಶಾನುಭೋಗಿಕೆಯಲ್ಲಿ ಮಂಜೇಶ್ವರ ಮಾಗಣೆಯು ಶಾಂತಿಯಿಂದಿತ್ತು. ಮಂಜಣಾಳ್ವರು ಮನೆಯಲ್ಲಿದ್ದ ದುಡ್ಡನ್ನೆಲ್ಲಾ ದೇವಯ ಭಂಡಾರಿಗಳಲ್ಲಿ ಕೊಟ್ಟು ಅಜಿಲಮಾರಿನ ವ್ಯವಹಾರ ಮುಗಿಸಿದರು. ಭಂಡಾರಿ ಹತ್ತು ಸಾವಿರ ಕೈಯಿಂದ ಹಾಕಿ ಭೂಮಿ ಸ್ವಾಧೀನ ಮಾಡಿಸಿಕೊಟ್ಟರು. ಮಿತ್ತಬೈಲಿನಿಂದ ಚೋಮಕ್ಕ, ಕಿನ್ಯನ ಹಾಗೂ ಲಕ್ಷ್ಮಣ ಅಜಿಲಮಾರಿನಲ್ಲಿ ನೆಲೆಸಲು ಹೋದರು. ಜೈನರ ಮನೆ ದುರಸ್ತಿ ಆಗಿ ಮುಗಿಯುವಾಗ ಮಳೆ ಪ್ರಾರಂಭವಾಯಿತು. ಬೇಸಾಯದ ಕೆಲಸ ಭರದಿಂದ ಸಾಗಿತು.

ತಂಗಿ ಮೋಕೆ ಮಿತ್ತಬೈಲಿಗೆ ಹೆರಿಗೆಗಾಗಿ ಬಂದಳು. ಬಯಕೆಯಾಗಿ ಹೋದ ಇಬ್ಬರು ಸೊಸೆಯಂದಿರನ್ನು ನೋಡಿಕೊಂಡು ಬರಲು ಹೋಗಿದ್ದ ಸಂಕಮಕ್ಕನಿಗೆ ದೊಡ್ಡ ಸೊಸೆ ಸ್ವಲ್ಪ ನಿತ್ರಾಣ ಆಗಿದ್ದಂತೆ ಕಂಡರೂ ತಾಯಿ ಮನೆಯಲ್ಲಿ ಆರೈಕೆ ಮಾಡಬಹುದೆಂದು ಭಾವಿಸಿ ಹಿಂದಿರುಗಿದರು. ಆದರೂ ಅವರ ಮನಸ್ಸಿಗೆ ಸಮಾಧಾನವಾಗದೆ ಬಡಾಜೆಯಲ್ಲಿ ತಂತ್ರಿಯವರಿಂದ ಮಕ್ಕಳ ಸುಖ ಶಾಂತಿಗಾಗಿ ಪೂಜೆ ಮಾಡಿಸಿ ಹತ್ತು ಮಂದಿ ಬ್ರಾಹ್ಮಣ ದಂಪತಿಗಳಿಗೆ ಊಟ, ಬಟ್ಟೆ ದಕ್ಷಿಣೆ ಕೊಟ್ಟು ಬರುವಾಗ ತಂತ್ರಿಯವರೊಂದು ಮಾತು ಹೇಳಿದರು,

"ಸಂಕಮ್ಮ, ಯಾಕೋ ನಿಮ್ಮ ದೈವಗಳು ಸ್ವಲ್ಪ ಅಸಮಾಧಾನದಲ್ಲಿದ್ದಂತಿವೆ. ಮಜಲೋಡಿಯ ದೈವಗಳಿಗೆ ನಾಲ್ಕು ಎಳನೀರು ಕೆತ್ತಿಸಿ ಇಟ್ಟು ತಂಬಿಲದ ಹರಕೆ ಹೇಳಿಕೊಂಡರೆ ಒಳ್ಳೆಯದು".

ಸಂಕಮಕ್ಕ ಅಣ್ಣನಿಗೆ ಹೇಳಿ ಮಜಲೋಡಿಯಲ್ಲಿ ಎಳನೀರು ಕೆತ್ತಿಸಿ ಇಟ್ಟು ತಂಬಿಲದ ಹರಕೆ ಹೇಳಿಕೊಂಡರು.

ಎರಡು ತಿಂಗಳಲ್ಲಿ ಇಬ್ಬರೂ ಹೆಣ್ಣು ಮಕ್ಕಳ ಹೆರಿಗೆ ಸುಖವಾಗಿ ನಡೆಯಿತು. ಮಂಜಣಾಳ್ವರಿಗೆ ಗಂಡು, ಕಿನ್ಯನಿಗೆ ಹೆಣ್ಣು ಮಗು ಹುಟ್ಟಿದ ಸುದ್ದಿ ತಿಳಿದು ಸಂಕಮ್ಮಕ್ಕ ಎಲ್ಲರನ್ನೂ ಕರೆದುಕೊಂಡು ಮಜಲೋಡಿಗೆ ಬಂದರು. ದೊಡ್ಡ ಸೊಸೆ ಸ್ವಲ್ಪ ನಿತ್ರಾಣದಲ್ಲಿದ್ದಂತೆ ಕಂಡರೂ ಸಂತೋಷದ ಭರದಲ್ಲಿದ್ದ ಮನೆಯವರಿಗೆ ಅದೊಂದು ವಿಶೇಷವಾಗಿ



ಕಾಣಲಿಲ್ಲ.

ಸಂಕಮಕ್ಕನವರ ಬೆನ್ನಿಗೇ ಮಂಜಣಾಳ್ವರಿಂದ, ಬಾಣಂತಿಯ ಆರೈಕೆಗೆ ಬೇಕಾದ ಕಟ್ಟು ಬೆಲ್ಲ, ಅಚ್ಚು ಬೆಲ್ಲ, ಓಲೆ ಬೆಲ್ಲ, ಬೆಳ್ತಿಗೆ, ಕುಚ್ಚಲಕ್ಕಿ ಗಾಡಿ ತುಂಬ ಬಂತು. ಕೈ ಬುಟ್ಟಿ ತುಂಬಾ ಮೊಟ್ಟೆ, ಭರಣಿ ತುಂಬಾ ತುಪ್ಪ, ಜೇನುತುಪ್ಪ ಬಂತು. ಕಷಾಯಕ್ಕೆ ಓಮ, ಕೊತ್ತಂಬರಿ, ಜೀರಿಗೆ, ಶುಂಠಿ, ಮೆಂತೆ ಗೋಣಿ, ಗೋಣಿಗಳಲ್ಲಿ ಬಂತು. ಮನೆಯವರಿಗೆ ಗಾಡಿ ತುಂಬಾ ಲಾಡು, ಗೆರಸೆ ತುಂಬಾ ಹೋಳಿಗೆ ಬಂತು. ಮಜಲೋಡಿಯಲ್ಲಿ ಗೌಜಿಯೋ ಗೌಜಿ. ಒಕ್ಕಲಿನವರಿಗೆ, ಇತರರಿಗೆ ಲಾಡು, ಹೋಳಿಗೆಗಳ ಸಮಾರಾಧನೆ ಯಾಯಿತು.

ಮಜಲೋಡಿಯಿಂದ ಮಂಜೇಶ್ವರದ ಪೇಟೆಗೆ ಹೋದ ಮಂಜಣಾಳ್ವರು ಬಸದಿ, ದೇವಸ್ಥಾನಗಳಲ್ಲಿ ಪೂಜೆ ಮಾಡಿಸಲು ಹೇಳಿದರು. ಮಸೀದಿಗಳಲ್ಲಿ ಪ್ರಾರ್ಥನೆ ಮಾಡಿಸಿದರು. ಪೇಟೆಯಿಡೀ ಕಲ್ಲು ಸಕ್ಕರೆ, ಬಾಳೆ ಹಣ್ಣು ಹಂಚಿದರು. ದುರ್ಗಮ್ಮನಿಗೆ, ಮಾಚಬ್ಬೆಗೆ ಸುದ್ದಿ ತಿಳಿಸಿ, ಅಂದು ರಾತ್ರಿ ಭಂಡಾರಿಗಳ ಮನೆಯಲ್ಲೇ ಕಳೆದು ಮಿತ್ತಬೈಲಿಗೆ ಬಂದವರಿಗೆ ತಲೆಯ ಮೇಲೆ ಕೈ ಹೊತ್ತು ಅಳುತ್ತಾ ಕುಳಿತಿದ್ದ ತಾಯಿ, ಚಿಕ್ಕಮ್ಮ, ತಂಗಿಯರನ್ನು ಕಂಡು ಏನೋ ಅನಾಹುತ ಆಗಿದೆಯೆಂದು ತಿಳಿಯಿತು. ಓಡುತ್ತಾ ಬಂದ ತಾಯಿ ಸುದ್ದಿ ತಿಳಿಸಿದರು. ಲಚ್ಚಿಮಿಗೆ ಅಮೆ ಹೊಡೆದಿದೆ (ದೈವ ಮೆಟ್ಟಿದೆ) ಎಂದು.

ಮಂಜಣಾಳ್ವರಿಗೆ ಸಿಡಿಲು ಬಡಿದಂತಾಯಿತು. ಹೆಂಡತಿ ಅಲ್ಲಿ ಸಾಯುತ್ತಿರುವಾಗ ತಾನು ಮಂಜೇಶ್ವರ ಪೇಟೆಯಲ್ಲಿ ಕಲ್ಲು ಸಕ್ಕರೆ, ಬಾಳೆಹಣ್ಣು ಹಂಚುತ್ತಿದ್ದೆನಲ್ಲಾ ಎಂದು ಪಶ್ಚಾತ್ತಾಪವಾಯಿತು.

ಕ್ಷಣ ಕಳೆಯುವಷ್ಟರಲ್ಲಿ ಜೋರಾಗಿ ಉಸಿರೆಳೆಯುತ್ತಾ ಅಳುತ್ತಿದ್ದ ತಂಗಿ ಮೋಕೆಗೆ ಹೆರಿಗೆ ನೋವು ಪ್ರಾರಂಭವಾಯಿತು. ಮನೆಯ ಯುವಕರೆಲ್ಲಾ ಮಜಲೋಡಿಗೆ ಹೋಗಿದ್ದರು. ಹೆರಿಗೆ ಮಾಡಿಸಲು ಜನ ಹುಡುಕುವಾಗ ನೆನಪಾದವರು ಬಾರಬೈಲಿನ ಜಾಕಕ್ಕ. ಬಾರಬೈಲಿಗೆ ಹೋಗಿ ಜಾಕಕ್ಕನನ್ನು ಕರೆದುಕೊಂಡು ಬಂದ ಮಂಜಣ, ಜಗಲಿಯಲ್ಲಿ ಕುಳಿತು ಕಾಯುತ್ತಿದ್ದಾಗ ಜಾಕಕ್ಕ ಸುಖವಾಗಿ ಹೆರಿಗೆ ಮಾಡಿಸಿ, ಹೆಣ್ಣು ಮಗುವೆಂದು ಎಲ್ಲರಿಗೂ ಕೂಗಿ ಹೇಳಿ, ಅಂಗಳಕ್ಕೆ ತೆಂಗಿನಕಾಯಿ ಎಸೆದರು. ಸಂಕಮ್ಮಕ್ಕ ಜಗಲಿಗೆ ಬಂದು ಮಂಜಣನ ಬೆನ್ನು ಸವರಿ ಹೇಳಿದರು,

"ಮಂಜಣ, ಲಚ್ಚಿ ಸಾಯಲಿಲ್ಲ, ಅವಳು ಮಿತ್ತಬೈಲಿಗೆ ಬಂದಿದ್ದಾಳೆ. ಮೋಕೆಯ ಹೊಟ್ಟೆಯಲ್ಲಿ ಹುಟ್ಟಿದ್ದಾಳೆ. ಹೋಗು, ಹೋಗು, ಮಜಲೋಡಿಗೆ ಹೋಗಿ ಹೆಂಡತಿಯ ದೇಹದ ಅಂತ್ಯ ಸಂಸ್ಕಾರ ಮಾಡಿ ಬಾ."

ಮಂಜಣಾಳ್ವರು ತಾಯಿಯ ಒತ್ತಾಯಕ್ಕೆ ಮಜಲೋಡಿಗೆ ಹೋಗಿ, ಹೆಂಡತಿಯ ಬಾಯಿಗೆ ನೀರು ಬಿಟ್ಟು, ಚಿತೆಗೆ ಬೆಂಕಿ ಇಟ್ಟು ಮಂಜೇಶ್ವರ ಪೇಟೆಗೆ ನಡೆದರು. ಆದಿ ಸೆಟ್ಟಿಯ ಮನೆಗೆ ಹೊರಟ ಆಳ್ವರು ದಾರಿಯಲ್ಲಿ ಸಿಕ್ಕಿದ ಬಸದಿಯಲ್ಲಿ ಮಲಗಿಕೊಂಡರು.

ಮರುದಿನ ಬೆಳಗ್ಗೆ ಪೂಜೆಗೆ ಬಂದ ಇಂದ್ರರು ಬಸದಿಯಲ್ಲಿ ಮಲಗಿದ್ದ ಮಂಜಣಾಳ್ವರನ್ನು ನೋಡಿ ಆದಿ ಸೆಟ್ಟಿಗೆ ಕರೆ ಕಳುಹಿಸಿ ಮಂಜಣಾಳ್ವರನ್ನು ತೋರಿಸಿದಾಗ ಆದಿಸೆಟ್ಟಿಗೆ ಪ್ರಜ್ಞೆ ತಪ್ಪಿದಂತಾಯಿತು. ಎಷ್ಟು ಹೇಳಿದರೂ ಕೇಳದ ಆಳ್ವರು ಬಸದಿಯಲ್ಲಿ ಅನ್ನ, ನೀರು ಸೇವಿಸದೆ ಕುಳಿತುಕೊಂಡರು. ಆದಿ ಸೆಟ್ಟಿ ದೇವಯ ಭಂಡಾರಿಗೆ ಜನ ಕಳುಹಿಸಿದರು. ದೇವಯ ಭಂಡಾರಿ ಬಂದವರು ಮಂಜಣಾಳ್ವರನ್ನು ನೋಡಿ ಏನು ಮಾಡುವುದೆಂದು ತಿಳಿಯದೆ ಬಡಾಜೆ ತಂತ್ರಿಗಳನ್ನು ಕರೆತಂದರು. ತಂತ್ರಿಗಳು ಬಂದು ಮಂಜಣಾಳ್ವರ ತಲೆಯ ಮೇಲೆ ಕೈ ಇಟ್ಟಾಗ ಒಂದು ದಿನ ಇಡೀ ಮೌನವಾಗಿ ಮಲಗಿದ್ದ ಮಂಜಣಾಳ್ವರು ಅವರ ಕಾಲಿಗೆ ಬಿದ್ದು ಬಿಕ್ಕಿ ಬಿಕ್ಕಿ ಅತ್ತರು. ತಂತ್ರಿಯವರು ಮಂಜಣಾಳ್ವರನ್ನು ದೇವಯ ಭಂಡಾರಿಯ ಮನೆಗೆ ಕರೆದುಕೊಂಡು ಹೋಗಿ ಭಂಡಾರ ಮಠಕ್ಕೆ ಒಪ್ಪಿಸಿ, ದುರ್ಗಮ್ಮನನ್ನು ಕರೆದು ಹೇಳಿದರು,

"ದುರ್ಗಮ್ಮಾ, ಮಂಜಣಾಳ್ವ ಅವನ ಜೀವನದ ಬಹುದೊಡ್ಡ ಪರೀಕ್ಷೆಯ ಕಾಲದಲ್ಲಿದ್ದಾನೆ. ನಿಮ್ಮ ಕೈಯಲ್ಲಿ ಅವನನ್ನು ಕೊಡುತ್ತಿದ್ದೇನೆ. ಸಮಯ ಬಂದಾಗ ನಾನೇ ಬಂದು ಅವನನ್ನು ಕರೆದೊಯ್ಯುತ್ತೇನೆ. ಅಲ್ಲಿಯ ತನಕ ಅವನ ಆರೈಕೆಯ ಕೆಲಸ ನಿಮ್ಮದು."

ಆದಿ ಸೆಟ್ಟಿಯಲ್ಲೂ, ದೇವಯ ಭಂಡಾರಿಯಲ್ಲೂ ಮಂಜಣಾಳ್ವರು ಎಲ್ಲಿದ್ದಾರೆ ಎಂಬ ಸುದ್ದಿ ಯಾರಿಗೂ ಹೇಳುವುದು ಬೇಡವೆಂದು ಹೇಳಿ ತಂತ್ರಿಗಳು ಹೋದರು.

ಬಡಾಜೆಗೆ ಹೋಗಿ ಪೂಜೆ ಮಾಡಿ ಮಿತ್ತಬೈಲಿಗೆ ಬಂದು ಸಂಕಮಕ್ಕನಿಗೂ ಅವರ ಕುಟುಂಬಕ್ಕೂ, ಮಂಜಣಾಳ್ವ ಕ್ಷೇಮದಲ್ಲಿದ್ದಾನೆ, ಆತ ತನ್ನ ಸುಪರ್ದಿಯಲ್ಲಿದ್ದಾನೆ. ಅವನ ಮನಸ್ಸಿನ ಗಾಯ ಮಾಸುವವರೆಗೆ ಯಾರೂ ಅವನನ್ನು ನೋಡುವುದು ಬೇಡ. ಕಾಲ ಕೂಡಿ ಬಂದಾಗ ತಾನೇ ಅವನನ್ನು ಕರೆದುಕೊಂಡು ಬರುತ್ತೇನೆ ಎಂದು ಹೇಳಿದರು. ಗಾಬರಿಯಲ್ಲಿದ್ದ ಮನೆಯವರಿಗೆ ತಂತ್ರಿಯವರ ಮಾತು ಕೇಳಿ ಸಮಾಧಾನವಾಯಿತು.

ದೇವಯ ಭಂಡಾರಿಗಳ ಮನೆಯಲ್ಲಿದ್ದ ಮಂಜಣಾಳ್ವರು ಹತ್ತು ದಿನ ಕಳೆದರೂ ಭಂಡಾರ ಮಠದ ಮಾಳಿಗೆಯಿಂದ ಕೆಳಗಿಳಿಯಲಿಲ್ಲ, ಭಂಡಾರಿಗಳ ಮತ್ತು ಆದಿ ಸೆಟ್ಟಿಯ ಸೇವೆಯಲ್ಲಿ ಮಂಜಣಾಳ್ವರು ಲೋಕವನ್ನೇ ಮರೆತಿದ್ದರು. ಯಾರಿಗೂ ಸಿಗದೆ, ಯಾರಲ್ಲೂ ಮಾತನಾಡದೆ, ಮನೆಯೊಳಗಿದ್ದ ಮಂಜಣಾಳ್ವರನ್ನು ಕೊನೆಗೆ ಒಂದು ದಿನ ಬಡಾಜೆ ತಂತ್ರಿಗಳೇ ಬಂದು ಕರೆದರು. ಗಡ್ಡ ಬೆಳೆದು ಬಿಳಿ ಬಿಳಿಯಾಗಿದ್ದವರನ್ನು ನೋಡಿ ತಂತ್ರಿಗಳು ನಕ್ಕರು. ಅವರಿಗೆ ಮಂಜಣಾಳ್ವರು ಒಬ್ಬ ಋಷಿಯಂತೆ ಕಾಣುತ್ತಿದ್ದರು. "ಈ ವೇಶ ನಿನಗಲ್ಲ ಮಂಜಣಾ" ಎಂದು ಹೇಳಿ ಭಂಡಾರಿಗಳು ಕರೆಸಿದ ಕ್ಷೌರಿಕನಲ್ಲಿ ಕ್ಷೌರ ಮಾಡಿಸಿ, ಸ್ನಾನ ಮಾಡಿಸಿ, ತಂತ್ರಿಗಳು ಅವರನ್ನು ಬಡಾಜೆಗೆ ಕರೆತಂದರು.



೯

# ಗಡಿ ಹಿಡಿದ ಗಂಧದ ಕೊರಡು

ಬಡಾಜೆಗೆ ಬಂದು ಅನ್ನಪೂರ್ಣೇಶ್ವರಿಯ ಪೂಜೆ ಮಾಡಿ ಗಂಧ, ಪ್ರಸಾದ, ತೀರ್ಥ ಕೊಟ್ಟು ಗುಡಿಯ ಮುಂದೆ ಕುಳಿತು ಕೊಂಡು ತಂತ್ರಿಯವರು ಮಂಜಣಾಳ್ವರಿಗೆ ಅವರ ಊರಿನ, ಮನೆಯ ನೆನಪು ಮಾಡಿಕೊಟ್ಟು ಆ ಊರಿಗೆ, ಆ ಕುಟುಂಬಕ್ಕೆ ಅವರ ಅಗತ್ಯ ಎಷ್ಟಿದೆ, ಅವರ ಕರ್ತವ್ಯವೆಷ್ಟಿದೆ ಎಂಬುದನ್ನು ಮನವರಿಕೆ ಮಾಡಿಕೊಟ್ಟಾಗ ಎಲ್ಲ ಮಾತುಗಳನ್ನೂ ಆಲಿಸಿದ ಮಂಜಣಾಳ್ವರು ತಲೆಯ ಮೇಲೆ ಕೈ ಹೊತ್ತು ಮುಖ ಕೆಳಗೆ ಹಾಕಿ ಕುಳಿತರು.

"ಮಂಜಣ, ನೀನು ಹುಟ್ಟಿದಾಗಲೇ ದೇವರು ನಿನ್ನನ್ನು ಈ ಊರಿಗೊಬ್ಬ ಕಾರಣಪುರುಷನನ್ನಾಗಿ ಕಳುಹಿಸಿದರು. ನಿನ್ನನ್ನು ಮಿತ್ತಬೈಲಿಗೆ ತಂದ ದೈವ, ದೇವರುಗಳು, ಕುಂಬಳೆಯ ದಂಡ ನಾಯಕನನ್ನಾಗಿ ಮಾಡಿದವರು ಅದೇ ದೈವಗಳು. ಅವರು ನಿನ್ನ ಬದುಕು ನಿನ್ನೊಬ್ಬನಿಗಾಗಿ ಇರಬಾರದೆಂದು ನಿನ್ನ ಸ್ವಾರ್ಥವನ್ನು, ನಿನ್ನ ಸ್ವಂತವನ್ನು ಲಕ್ಷ್ಮಿಯ ರೂಪದಲ್ಲಿ ಕೊಂಡುಹೋಗಿದ್ದಾರೆ. ನೀನು ಕುಟುಂಬಕ್ಕಾಗಿ, ಊರಿಗಾಗಿ, ಮಾಗಣೆಗಾಗಿ, ಬದುಕ

ಬೇಕೆಂಬುದು ತಾಯಿ ಅನ್ನಪೂರ್ಣೇಶ್ವರಿಯ ಇಚ್ಛೆ. ನಿನ್ನದು ಗಂಧದ ಕೊರಡಿನಂತಹ ಬದುಕು. ತೇದು ತೇದು ಊರಿಗೆಲ್ಲಾ ಸುವಾಸನೆ ಬೀರಿ ಬದುಕುವ ಬಾಳ್ವೆ ನಿನ್ನದಾಗಬೇಕು. ಬಂಗ್ರಮಂಜೇಶ್ವರ ಬಸದಿಯಲ್ಲಿ ಮಲಗಿದ್ದ ನಿನ್ನನ್ನು ಕರೆದುಕೊಂಡು ಹೋಗಿ ದೇವಯ ಭಂಡಾರಿಗಳ ಮನೆಯಲ್ಲಿ ಬಿಡುವಾಗ ನೀನು ಆ ಉಪ್ಪರಿಗೆಯ ಕೋಣೆಯಲ್ಲೇ ಜೀವಮಾನ ವಿಡೀ ಕಳೆಯಬೇಕೆಂದು  ಬಿಟ್ಟು ಬಂದವನಲ್ಲ ನಾನು. ನಿನ್ನ ಮನಸ್ಸಿನ ನೋವು ಮಾಸಲೆಂದು ಬಿಟ್ಟು ಬಂದೆ."

ತಂತ್ರಿಗಳ ಚಾವಡಿಯಲ್ಲಿ ಅನ್ನಪೂರ್ಣೇಶ್ವರಿಯ ಮುಂದೆ ಈ ಮಾತನ್ನು ಆಲಿಸಿದಾಗ ಮನಸ್ಸಿನೊಳಗಿನ ಮುಚ್ಚಿದ್ದ ಕಣ್ಣು ತೆರೆಯಿತು. ಬುದ್ಧಿ ಅರಳಿತು. ಮಂಜಣಾಳ್ವ ತಂತ್ರಿಗಳ ಕಾಲಿಗೆ ಬಿದ್ದು ಹೇಳಿದ–

"ಇನ್ನು ನೀವು ನನ್ನನ್ನು ಕರೆದು ಬೈಯಲು ಅವಕಾಶ ಕೊಡಲಾರೆ ತಂತ್ರಿಯವರೇ, ಅವಕಾಶ ಕೊಡಲಾರೆ."

ಅಂಗಳ ಇಳಿದು ಹೊರಟವನ ತಲೆಗೆ ಕೈಯಿಟ್ಟು ತಂತ್ರಿಯವರು ಹೇಳಿದರು,

"ಮಂಜೇಶ್ವರ ಸೀಮೆಯ ದಂಡನಾಯಕನಾದ ನಿನ್ನ ಬೆನ್ನ ಹಿಂದೆ  ದೈವ – ದೇವರುಗಳಿದ್ದಾರೆ. ಮನೆತನದ ಗೌರವಕ್ಕೆ ತಕ್ಕಂತೆ ಬಾಳು" ಹೊರಟವನನ್ನು ತಡೆದು ಊಟ ಮಾಡಿಸಿದರು.

"ಮಂಜಣ, ಮಿತ್ತಬೈಲಿನಲ್ಲಿ ಇನ್ನೂ ಒಂದು ಕೆಲಸ ಬಾಕಿ ಇದೆ. ನೀವು ಮರೆತಿರುವ ಆ ಕೆಲಸ ಬೇಗ ಆಗಬೇಕು."

"ಏನದು ಸ್ವಾಮಿ ಅಂತಹ ಕೆಲಸ?"

"ನೀವು ನಿಮ್ಮ ಮನೆ ದೈವ ಮಲರಾಯನನ್ನು ಮರೆತಂತಿದೆ"

"ಮಜಲೋಡಿಯ ಮಲರಾಯ ನಮ್ಮ ಮನೆಯ ದೈವ. ನಾವು ಯಾವ ಕೆಲಸದಲ್ಲೂ ಅವನನ್ನು ನೆನೆಯದೆ ಮುಂದೆ ಹೋಗುವುದಿಲ್ಲ ಸ್ವಾಮಿ."

"ಮಂಜಣ, ನಾಳೆ ಮಜಲೋಡಿಯ ಯಜಮಾನರನ್ನು ಬರಲು ಹೇಳು. ನಾನು ಮಿತ್ತಬೈಲಿನ ಮನೆಯಲ್ಲಿಯೇ ಕುಳಿತು ಪ್ರಶ್ನೆ ಇಡುತ್ತೇನೆ. ಪ್ರಶ್ನೆಯಲ್ಲಿ ಏನು ಕಾಣುತ್ತದೆಂದು ನೋಡೋಣ"

"ಈ ಪ್ರಶ್ನೆ ಇಡುವಂತಹ ಪ್ರಮೇಯ ಯಾಕೆ ಬಂತು ಸ್ವಾಮಿ?"

"ಮಂಜಣ, ಮಿತ್ತಬೈಲಿನ ಆಸ್ತಿ ಖರೀದಿಸಲು ಈ ಮನೆಗೆ ಬಂದ ದಿನವನ್ನು ಒಮ್ಮೆ ನೆನಪಿಸಿಕೋ. ಅಂದಿನಿಂದ ಇಂದಿನವರೆಗೆ ನಿನ್ನ ವಿಷಯದಲ್ಲಿ ಪ್ರಶ್ನೆ ಇಡದೆ, ತಾಯಿ ಅನ್ನಪೂರ್ಣೇಶ್ವರಿಯ ಅಪ್ಪಣೆ ಪಡೆಯದೆ ನಿನ್ನನ್ನು ಮುಂದೆ ಹೋಗಲು ಬಿಡಲಿಲ್ಲ ನಾನು. ನೀನು ಮನೋ ವೇದನೆಯಿಂದ ಬಸದಿಯಲ್ಲಿ ಬಿದ್ದಿದ್ದಾಗ ಎಚ್ಚರಿಸಿ ನಿನ್ನ ಬಳಿ ನನ್ನನ್ನು ಕಳುಹಿಸಿದವಳು ಆ ದೇವಿಯೇ. ಅಂತಹ ಸಮಯದಲ್ಲಿ ಪ್ರಶ್ನೆ ಇಟ್ಟ ನನಗೆ ಇಟ್ಟ ರಾಶಿಯಲ್ಲಿ ಮಲರಾಯನ ವಕ್ರದೃಷ್ಟಿ ಕಂಡಿದೆ. ಅದಕ್ಕೆ ಪರಿಹಾರ  ಮಾಡಿದರೆ ಈ ನಿನ್ನ



ಮಿತ್ತಬೈಲು ಬಹುದೊಡ್ಡ ಕೀರ್ತಿಯ ಗುತ್ತು ಆಗುತ್ತದೆ."

ಮಂಜಣ ದೇವಿಗೆ ಸಾಷ್ಟಾಂಗವೆರಗಿ, ತನ್ನ ಜೀವನವನ್ನು ಕಾಯುತ್ತಾ ನಡೆಸಿ ಕೊಡುತ್ತಿದ್ದ ತಾಯಿಯನ್ನು ನೆನೆಯುತ್ತಾ ಎದ್ದು ಕಣ್ಣು ಬಿಡುವಾಗ ಮಂದಿರದ ಬಾಗಿಲಲ್ಲಿ ದೀಪದ ಬೆಳಕಿನಲ್ಲಿ ನಿಂತು ಸ್ವತಃ ಅನ್ನಪೂರ್ಣೇಶ್ವರಿ ನಕ್ಕಂತಾಯಿತು. ಆಶ್ಚರ್ಯದಿಂದ ಕಣ್ಣುಜ್ಜಿಕೊಳ್ಳುತ್ತಾ ನೋಡಿದಾಗ ತಂತ್ರಿಯವರ ಪತ್ನಿ ಗುಡಿಯ ಮುಂದೆ ನಿಂತುಕೊಂಡು ಆಶೀರ್ವಾದ ಮಾಡುತ್ತಿದ್ದರು. ಮಂಜಣಾಳ್ವ ಎದ್ದು ಬಂದು ಅವರ ಕಾಲಿಗೆ ಬಿದ್ದು ಹೇಳಿದ.

"ನಿಮಗಿಂತ ದೊಡ್ಡ ಅನ್ನಪೂರ್ಣೇಶ್ವರಿ ಯಾರು ತಾಯಿ? ನೀವೇ ನನ್ನ ತಪ್ಪುಗಳನ್ನು ಕ್ಷಮಿಸಿದಿರಿ ಎಂದಾದರೆ, ನಿಮ್ಮ ಆಶೀರ್ವಾದಕ್ಕಿಂತ ದೊಡ್ಡ ಆಶೀರ್ವಾದ ಇಲ್ಲ."

ಮರುದಿನ ಮಿತ್ತಬೈಲಿನಲ್ಲಿ ಎಲ್ಲರೂ ಸೇರಿದರು. ಸುಬ್ಬಾಳ್ವರು, ಸಂಕಮಕ್ಕ, ಚೋಮಕ್ಕ, ತಮ್ಮಂದಿರು ಎಲ್ಲರ ಎದುರಿನಲ್ಲಿ ಚಾವಡಿಯಲ್ಲಿ ಪ್ರಶ್ನೆ ಇಟ್ಟ ತಂತ್ರಿಗಳು ಸುಬ್ಬಾಳ್ವರಲ್ಲಿ ಕೇಳಿದರು,

"ಯಜಮಾನರೇ, ನಮಗೆ ಆಸ್ತಿಕರಿಗೆ ನಂಬಿಕೆಯೇ ಎಲ್ಲಕ್ಕಿಂತ ದೊಡ್ಡದು. ನಾವು ನಂಬಿದ ದೈವ, ದೇವರನ್ನು ನಾವು ಸತ್ಯವೆಂದು ಹೇಳುವಾಗ ಆ ಮಾತು, ನಮ್ಮ ಜನರ ನಂಬಿಕೆ, ಜೀವನ ಕ್ರಮದ ಭಾಗವಾಗಿ ಅವರು ಇರುವುದಕ್ಕೆ ಸಾಕ್ಷಿ. ಹಾಗಾಗಿ ನಾವು ಅವರೊಂದಿಗೆ ಬೇಡಿಕೊಳ್ಳೋಣ. ನಂಬಿಕೆಯ ಮೇಲೆ ವಿಶ್ವಾಸವಿಟ್ಟು ಅವರನ್ನು ನಮ್ಮ ಬದುಕಿನ ನಂಬಿಕೆ ಮಾಡಿಕೊಂಡು ಹರಕೆ, ಮಾತು ಕೊಟ್ಟು  ನಂಬೋಣ. ಈ ತರಹದ ವಿಶ್ವಾಸ, ನಂಬಿಕೆಯಿಂದಲೇ ಲೋಕ ನಡೆಯುತ್ತಿದೆ. ದೈವ ದೇವರುಗಳು ಇದ್ದಾರೋ, ಇಲ್ಲವೋ. ಆದರೆ ನಮ್ಮ ಗ್ರಾಮ, ಕುಟುಂಬ ಒಂದಾಗಿ ಕೇಳಿಕೊಳ್ಳುತ್ತಿರುವ ಬೇಡಿಕೆಗಳು, ನಾವು ಹೇಳಿಕೊಳ್ಳುತ್ತಿರುವ ಹರಕೆಗಳು ಶಕ್ತಿಯಾಗಿ ನಮ್ಮ ಜೀವನದ ಮೇಲೆ ಪರಿಣಾಮ ಬೀರುತ್ತವೆ. ನೀವು ಕುಟುಂಬದವರು ಒಂದಾಗಿ ಹೇಳಿಕೊಂಡ, ಅಪ್ಪಣೆ ಮಾಡಿಕೊಂಡ, ಅರಿಕೆ ಮಾಡಿಕೊಂಡ ಹರಕೆ ಏನಾದರೂ ಬಾಕಿ ಇದೆಯೇ ಎಂದು ನೆನಪು ಮಾಡಿಕೊಳ್ಳಿ. ಮಂಜಣಾಳ್ವರ ಗ್ರಹ ಗತಿಯಲ್ಲಿ, ಇಟ್ಟ ರಾಶಿಯಲ್ಲಿ ಈ ನಿಮ್ಮ ಮನೆ ದೈವ ಕಾಣುತ್ತಿದ್ದಾನೆ."

ಸುಬ್ಬಾಳ್ವರು ಬಹಳ ಆಲೋಚನೆ ಮಾಡಿ ಮಂಜಣ, ಕಿನ್ಯನರ ಮುಖ ನೋಡಿದಾಗ ನೆನಪಾದ ಮಾತನ್ನು ಹೇಳಿದರು,

"ಮಂಜಣಾ, ಬೋದಿಗೆಯ ಕಂಬ ತರುವಾಗ ಅದು ಕದಲದುದನ್ನು ನೋಡಿ ಮಲರಾಯನ ದರ್ಶನ ಬರಿಸಿ, ನಾವು ಅವನಲ್ಲಿ ಅಪ್ಪಣೆ ಪಡೆದುಕೊಳ್ಳುವಾಗ ಗುಡಿ ಕಟ್ಟಿಸಿ, ಧರ್ಮ ನೇಮ ಕೊಡುವ ಹರಕೆ ಹೇಳಿಕೊಂಡಿಲ್ಲವೇ? ಹೌದು ತಂತ್ರಿಯವರೇ, ಮಜಲೋಡಿಯ ಮಲರಾಯನಿಗೆ ಆ ಹರಕೆ ಮನೆಯ ಅಂಗಳದಲ್ಲಿಯೇ ಹೇಳಿ ಕೊಂಡಿದ್ದೇವೆ. ಅದಾ ನೋಡಿ"

ಸುಬ್ಬಾಳ್ವರು ಹೇಳುವಾಗ ಎಲ್ಲರೂ ಹೌದೆಂದು ಹೇಳಿದರು. ತಂತ್ರಿಯವರು ರಾಶಿಯಿಟ್ಟು ಹೇಳಿದರು,

"ಮಂಜಣಾಳ್ವ, ಇನ್ನು ಏನೂ ಹೇಳುವುದು ಬೇಡ. ಒಳ್ಳೆಯ ದಿನ ನೋಡಿ ಭಂಡಾರದ ಗುಡಿಯನ್ನು ಅಂಗಳದಲ್ಲೇ ಕಟ್ಟಿಸು. ಬಾಕಿಮಾರು ಗದ್ದೆಯಲ್ಲಿ ನೇಮ ಕೊಡಿಸು. ಕೊಡಿಸು ಏನು ಬಂತು, ನಿನ್ನ ಕೈಯಿಂದ ಆತನೇ ತೆಗೆದುಕೊಳ್ಳುತ್ತಾನೆ. ಏನೂ ಹೆದರಬೇಡ. ನಿನ್ನ ಕೈಯಲ್ಲಿ ಈ ಕೆಲಸಗಳೆಲ್ಲಾ ಧಾರಾಳವಾಗಿ ಕ್ರಮದಂತೆ ನಡೆಯುತ್ತವೆ. ಅನ್ನಪೂರ್ಣೇಶ್ವರಿಯೂ, ಮಲರಾಯನೂ ನಿನ್ನ ಬೆನ್ನಿಗಿದ್ದು ಎಲ್ಲ ಕೆಲಸ ಕಾರ್ಯಗಳನ್ನು ಮಾಡಿಸುತ್ತಾರೆ."

ತಂತ್ರಿಯವರು ಗುಡಿಯ ಕೆಲಸ ಪ್ರಾರಂಭಿಸಿದರು. ದಿನ ನಿಶ್ಚಯಿಸಿ ಕೆಲಸಕ್ಕೆ ಮನೆ ಕಟ್ಟಿಸಿ ಕೊಟ್ಟ ಆಚಾರಿಗಳನ್ನೇ ತರಿಸುವಂತೆ ಹೇಳಿದರು. ಎಲ್ಲರಿಗೂ ಎದೆಯ ಭಾರವೊಂದು ಕಳಗಿಳಿದಂತಾಯಿತು.

ಗುಡಿಯ ಕೆಲಸ ನಡೆಯುವಷ್ಟರೊಳಗೆ ಉಡುಪಿಯ ಆಚಾರಿಗಳು ಕಂಚಿನ ಮುಖವಾಡ, ಕಡ್ತಲೆ ಮಾಡಿ ತಂದು ಮನೆಯ ಮುಂದಿನ ಹಲಸಿನ ಮರದಡಿಯಲ್ಲಿ ಇಟ್ಟರು. ತಂತ್ರಿಗಳು ಬಂದು ಗುಡಿಯ ಬ್ರಹ್ಮಕಲಶಕ್ಕೆ ದಿನ ನಿಶ್ಚಯಿಸಿ, ಅಂದೇ ಅಂಗಳದಲ್ಲಿ ಧರ್ಮ ನೇಮ ನಡೆಸುವುದೆಂದು ತೀರ್ಮಾನಿಸಿದರು.

ತಂತ್ರಿಯವರು ದಿನ ನಿಶ್ಚಯಿಸಿ ಹೋದ ಮೇಲೆ, ಉಳ್ಳಾಲದ ಬ್ಯಾರಿ ಮಕ್ಕಾಕ್ಕೆ ಹೋದವ ಹಿಂದಿರುಗಿದ. ಅವನು ಕೊಡಬೇಕಾಗಿದ್ದ ಎಲ್ಲ ಹಣವನ್ನೂ ತಂದುಕೊಟ್ಟ, ಮಂಜಣಾಳ್ವರ ಚಿಂತೆ ದೂರವಾಯಿತು. ಮಧ್ಯಾಹ್ನ ಉಂಡು ಮಲಗಿದವರಿಗೆ ಯಾರೋ ಕರೆದು ಹೇಳಿದಂತಾಯಿತು,

"ಆಳ್ವರೇ, ನೀವು ನನ್ನನ್ನು ಮರೆತರೂ ನಾನು ನಿಮ್ಮನ್ನು ಮರೆಯಲಿಲ್ಲ ಅಲ್ಲವೇ?"

ಒಮ್ಮೆಲೇ ಎಚ್ಚರಗೊಂಡ ಆಳ್ವರು ಎದ್ದು ಯಾರು ಈ ಮಾತನ್ನು ಹೇಳಿದುದೆಂದು ಅತ್ತಿತ್ತ ನೋಡಿದಾಗ ಎದುರಿನ ಹಲಸಿನ ಮರದಡಿಯಲ್ಲಿ ಬ್ರಹ್ಮಕಲಶಕ್ಕೆ ತಯಾರು ಮಾಡಿಟ್ಟಿದ್ದ ಮುಖವಾಡ ಕಾಣಿಸಿತು.

★★★

ಮಿತ್ತಬೈಲಿನಲ್ಲಿ ಮಲರಾಯನ ಗುಡಿ ತಯಾರಾಯಿತು. ತಂತ್ರಿಗಳು ಬಂದು ಬ್ರಹ್ಮಕಲಶಕ್ಕೆ ಪ್ರಾರಂಭಿಸಿದರು. ಮಜಲೋಡಿಯಿಂದ ಸುಬ್ಬಣಾಳ್ವರ ನಾಯಕತ್ವದಲ್ಲಿ ಕುಟುಂಬದ ಸರ್ವರೂ ಗ್ರಾಮದವರನ್ನು ಸೇರಿಸಿಕೊಂಡು ಭಂಡಾರ ತೆಗೆದುಕೊಂಡು ಬಂದರು.

ಎರಡು ದಿನಗಳ ನೇಮ, ಗುಂಡಕ್ಕೆ ಬ್ರಹ್ಮಕಲಶ ಮಿತ್ತಬೈಲಿನ ಅಂಗಳದಲ್ಲಾಯಿತು. ಊರಿನ ಹತ್ತು ಸಮಸ್ತರು ಸೇರಿ ಮೂರು ದಿನಗಳ ಕೋಳಿ ಅಂಕ ನಡೆಯಿತು. ನೇಮ ಕಳೆದ ಮೇಲೆ ಎರಡು ದಿನಗಳ ಹಿತ್ತಲಿನ ಕೋಳಿ ಅಂಕ ಬೆಳಗ್ಗೆ ನಡೆಯಿತು.



ತಂತ್ರಿಯವರೂ ಐದು ಮಂದಿ ಬ್ರಾಹ್ಮಣರೂ ಬ್ರಹ್ಮಕಲಶ ನಡೆಸಿಕೊಟ್ಟರು. ಸಂಜೆ ಬಂದು ತಲುಪಿದ ಭಂಡಾರವನ್ನು ಅಂಗಳದಲ್ಲಿ ರಚಿಸಿದ್ದ ಪವಿತ್ರ ಪೀಠದ ಮೇಲೆ ಇಟ್ಟರು. ಮಿತ್ತಬೈಲಿನಲ್ಲಿ ಕಟ್ಟಿಸಿದ ಗುಂಡದಲ್ಲಿ ಭಂಡಾರ ಇಟ್ಟು, ಬ್ರಹ್ಮಕಲಶ ನಡೆದು ಸಂಜೆ ನಡೆದ ಅಂಗಳದ ಗಗ್ಗರದೆಚ್ಚಿ ನೇಮ ಮುಗಿದು, ಅಲಂಕಾರದೆಚ್ಚಿ ನೇಮ ನಡೆದು, ಮಲರಾಯ ದೈವ ಊರಿನವರಿಗೆ, ಪರವೂರಿನವರಿಗೆ ವೀಳ್ಯ ಕೊಟ್ಟು, ಕೊಡಿ ಎಲೆಯಲ್ಲಿ ವೀಳ್ಯ ಹಿಡಿದುಕೊಂಡು ಮಿತ್ತಬೈಲಿನ ಮನೆಯವರಿಗೆ ಕೊಡಲು ಕರೆಯಿತು. ಸುಬ್ಬಣಾಳ್ವರನ್ನು ಕರೆದು ಮಿತ್ತಬೈಲಿನಲ್ಲಿ ಭೂತದ ಗಡಿ ಹಿಡಿಯಲು ಜನ ತೋರಿಸುವಂತೆ ಹೇಳಿತು.

ಮಿತ್ತಬೈಲಿನ ಊರಿಗೆ ಪಟೇಲರಾದರು. ಮಿತ್ತಬೈಲು ಗುತ್ತು ಆಯಿತು. ಗುತ್ತಿಗೆ ಯಜಮಾನರಾದರು. ಗುತ್ತಿನ ಮನೆಗೆ ದೈವ ಆಯಿತು. ಆದರೆ ದೈವಕ್ಕೆ ಹೂ, ನೀರು ಇಡುವ ಯಜಮಾನನನ್ನು ದೈವ ಕೇಳಿತು.

ಕುಟುಂಬದವರೆಲ್ಲ ಸೇರಿ ಮಿತ್ತಬೈಲಿನ ಮಲರಾಯ ದೈವಕ್ಕೆ ಮಂಜಣಾಳ್ವರೇ ಗಡಿ ಹಿಡಿಯಬೇಕೆಂದು ಕೇಳಿಕೊಂಡರು. ಮಿತ್ತಬೈಲಿನಲ್ಲಿ ಈಗ ಹಿರಿಯರೆಂದರೆ ಮಂಜಣಾಳ್ವರು ಎಂದು ಹೇಳಿ ದೈವವೂ ಮಂಜಣಾಳ್ವರಿಗೇ ಗಡಿ ಹಿಡಿಯಲು ಅಪ್ಪಣೆ ಕೊಟ್ಟಿತು.

ಮಂಜಣ ಹೋಗಿ ತಂತ್ರಿಯವರಲ್ಲಿ ಕೇಳಿದ "ನಿಮ್ಮದೂ ಇದೇ ಅಪ್ಪಣೆಯೇ ತಂತ್ರಿಯವರೇ?" ತಂತ್ರಿಯವರು ಗುಣಿಸುತ್ತಿದ್ದವರು ಗಂಧ ಪ್ರಸಾದ ಅವನ ಕೈಗೆ ಕೊಟ್ಟು "ನನ್ನದು ಮಾತ್ರವಲ್ಲ ತಾಯಿ ಅನ್ನಪೂರ್ಣೇಶ್ವರಿಯದೂ ಇದುವೇ ಅಪ್ಪಣೆ" ಎಂದು ಹೇಳಿದರು.

ದೈವ, ತಂತ್ರಿಯವರಲ್ಲಿ ಮಂಜಣನಿಗೆ ಮಂಗಳ ಸ್ನಾನ ಮಾಡಿಸಲು ಕೇಳಿಕೊಂಡಿತು. ತಂತ್ರಿಯವರು ಕಣ್ವತೀರ್ಥದಿಂದ ಜಲ ತರಿಸಿ ಮಂಜಣನಿಗೆ ತೀರ್ಥಸ್ನಾನ ಮಾಡಿಸಿ ಸಂಜೆಯ ಧರ್ಮ ನೇಮದಲ್ಲಿ ಗಡಿ ಹಿಡಿಯಲು ಸಿದ್ಧಗೊಳಿಸಿದರು. ಮಂಜಣ ಸಂಜೆ ಬಾವಿಯ ಕಲ್ಲಿನ ಮೇಲೆ ಕೊಡ ನೀರನ್ನು ತಲೆಗೆ ಹೊಯ್ದುಕೊಂಡು, ತಂತ್ರಿಯವರು ಕೊಟ್ಟ ಕಣ್ವತೀರ್ಥದ ನೀರನ್ನು ಚಿಮುಕಿಸಿಕೊಂಡು, ಒದ್ದೆ ಬಟ್ಟೆಯಲ್ಲಿ ಅಂಗಳದಲ್ಲಿದ್ದ ನೇಮದ ಚಪ್ಪರಕ್ಕೆ ಬಂದು ಎಲ್ಲ ಹಿರಿಯರ ಕಾಲಿಗೆ ಬಿದ್ದ, ಮಾವಂದಿರ ಅಪ್ಪಣೆ ಪಡೆದುಕೊಂಡು ಕೊನೆಯ ಬಾರಿ ತಾಯಿಯ ಹಾಗೂ ಚಿಕ್ಕಮ್ಮನ ಕಾಲಿಗೆ ನಮಸ್ಕಾರ ಮಾಡಿದ. ಸಂಕಮಕ್ಕನೂ, ಚೋಮಕ್ಕನೂ ಕಣ್ಣೀರು ಹಾಕಿದರು. ಮಂಜಣಾಳ್ವರಿಗೆ ತಾಯಿಯ ಸಂಬಂಧ ಅಂದಿಗೆ ಕಡಿಯಿತು. ಅವರಿಗೆ ಇನ್ನು ಸೂತಕವೂ ಇಲ್ಲ, ಸಂಬಂಧವೂ ಇಲ್ಲ, ತಾಯಿ ಸತ್ತರೆ ಅವಳ ಹೆಣವನ್ನು ಕೂಡಾ ಮುಟ್ಟಬಾರದು. ಬೊಜ್ಜದ ಊಟ ಮಾಡಬಾರದು. ಶುದ್ಧಾಶುದ್ಧಗಳ ಕಟ್ಟು ಅವರನ್ನು ಮನೆಯಿಂದ ಹೊರಗೆ ಇಟ್ಟಿತು.

ಮಂಜಣಾಳ್ವರು ಗಡಿ ಹಿಡಿಯುವ ಬಗ್ಗೆ ಭೂತವು ಎಲ್ಲ ಹಿರಿಯರು, ಊರವರು, ಚಾಕರಿಯವರು, ಬಂಧುಗಳು, ಬೀಗರು ಮುಂತಾದವರಿಂದ ಅಪ್ಪಣೆ ಕೇಳಿತು. ತಾನೂ ಅನುಮತಿ ನೀಡಿತು. ಭಂಡಾರದ ಎದುರು ಮಣೆಯ ಮೇಲೆ ಅಂಗಿ ತೆಗೆದು ಕುಳಿತ


ಮಂಜಣಾಳ್ವರ ಮೇಲೆ ಭೂತದ ಗಿಂಡಿಯ ನೀರು, ತಂತ್ರಿಯವರು ತಂದ ತೀರ್ಥದ ನೀರು ಚಿಮುಕಿಸಿ, ಗಡಿ ಹಿಡಿಯುವ ಗುರಿಕಾರನನ್ನು ಶುದ್ಧಿ ಮಾಡಿದರು.

ಮಲರಾಯ, ಸಭೆಯ ಸರ್ವರ ಅಪ್ಪಣೆ ಪಡೆದುಕೊಂಡು ಗಂಧ ಪ್ರಸಾದದ ವೀಳ್ಯವನ್ನು ಮಂಜಣನ ಕೈಗೆ ಕೊಟ್ಟು ಅವನ ಕೈ ಹಿಡಿದುಕೊಂಡು ಗುಂಡಕ್ಕೆ ಮೂರು ಸುತ್ತು ಬಂದ. ಬಂದು ನಿಂತವನ ಕೈಯಲ್ಲಿದ್ದ ಗಂಧ ಪ್ರಸಾದದ ವೀಳ್ಯಕ್ಕೆ ಕಡ್ತಲೆ ಮುಟ್ಟಿಸಿದ. ಮಂಜಣಾಳ್ವರನ್ನು ಕರೆದು, ಮಿತ್ತಬೈಲಿನ ಗಡಿ ಹಿಡಿದವನನ್ನು ಇನ್ನು ಮುಂದೆ ಎಲ್ಲರೂ ಮಂಜಣಾಳ್ವ ಎಂದೇ ಕರೆಯಬೇಕೆಂದು ಅಪ್ಪಣೆ ಕೊಟ್ಟು, ತಾನೇ ಮೂರು ಸಲ ಕರೆದು, ಬಿರುದು ಕರೆಯುವ ಕ್ರಮ ನಡೆಸಿದ. ಮಿತ್ತಬೈಲಿನಲ್ಲಿ ಅಂದಿನಿಂದ ಯಾರೇ ಭೂತದ ಗಡಿ ಹಿಡಿದರೂ ಅವನಿಗೆ ಮಂಜಣಾಳ್ವನೆಂದೇ ಬಿರುದಿಟ್ಟು ಕರೆಯುವ ಪದ್ಧತಿ ಜಾರಿ ಮಾಡಿದ.

ಈ ಯಜಮಾನಿಕೆಯೊಂದಿಗೆ ಮಂಜಣಾಳ್ವರ ಜೀವನದಲ್ಲೂ ಕೆಲವು ನಿಯಮಗಳು ಬಂದವು. ನಿತ್ಯ ಬೆಳಗ್ಗೆ ಸ್ನಾನ ಮಾಡದೆ ಅನ್ನಾಹಾರ ಸೇವಿಸಬಾರದು. ಅವರ ಸುತ್ತಮುತ್ತ ಮುಟ್ಟಾದ ಹೆಂಗಸರು, ಕೆಳಜಾತಿಯವರ ನೆರಳು ಸುಳಿಯಬಾರದು. ಸೂತಕದ ಮನೆಗೆ ಹೋಗಬಾರದು. ತಾಯಿ ಸತ್ತರೂ ಅವಳ ಶವ ಮುಟ್ಟಬಾರದು, ಬೊಜ್ಜದ ಊಟ ಮಾಡಬಾರದು, ಅಂಗಿ ಹಾಕಬಾರದು, ವಲ್ಲಿ ಶಾಲು ಹೊದ್ದುಕೊಂಡು ಮುಂಡಾಸು ಕಟ್ಟಿಕೊಂಡು ಕೈಗೊಂದು ಅಧಿಕಾರ ಕಂಕಣ ಹಾಕಿಕೊಂಡು ಭೂತದ ಮುಂದೆ ನಿಲ್ಲಬೇಕು. ಕುಟುಂಬದವರಿಗೆ ಗಂಧ ಪ್ರಸಾದ ಅವನೇ ತೆಗೆದು ಕೊಡಬೇಕು. ತಂತ್ರಿಯವರು ಇಲ್ಲದಿದ್ದಾಗ ದೈವಕ್ಕೆ ಹೂ ಹಾಕಿ ಧೂಪ ಕೊಡುವ ಕಾರ್ಯ ಅವನೇ ಮಾಡಬೇಕು.

ಹೀಗೆ ಧರ್ಮ ನೇಮ ಕೊಟ್ಟು ಯಾಜಮಾನ್ಯ ವಹಿಸಿಕೊಂಡ 'ಮಂಜಣಾಳ್ವ' ಮಂಜಣಾಳ್ವರು ಆದ. ಹಿರಿಯ, ಕಿರಿಯ, ಬ್ರಾಹ್ಮಣ, ಬ್ಯಾರಿ, ಅಷ್ಟೇ ಏಕೆ ತಾಯಿ, ಮಕ್ಕಳು, ಅಕ್ಕ ತಂಗಿ ಎಂಬ ಭೇದವಿಲ್ಲದೆ ಆತನನ್ನು ಒಂದೋ ಗಡಿ ಹಿಡಿದವರು ಅಥವಾ ಮಂಜಣಾಳ್ವರು ಎಂದೇ ಕರೆಯುವಂತಾಯಿತು.

ಗಡಿ ಹಿಡಿದ ಗುರಿಕಾರ ಮಂಜಣಾಳ್ವರು ಎಪ್ಪತ್ತು ವರ್ಷ ಬದುಕಿ ಮಿತ್ತಬೈಲನ್ನು ವೃದ್ಧಿಯಿಂದ ಅಭಿವೃದ್ಧಿಗೆ, ಅಭಿವೃದ್ಧಿಯಿಂದ ಸಮೃದ್ಧಿಗೆ ತಂದು ಕುಟುಂಬಕ್ಕೆ ಬೇಕಾಗಿ ತನ್ನನ್ನು ತಾನು ಗಂಧದ ಕೊರಡಿನಂತೆ ತೇದು ಮಾಗಣೆಗೆ ಸುವಾಸನೆ ಬೀರಿದರು.







# ಈ ಕಾಲ...





## ೧೦

## ಚೆಂಗಿಡುಗ

ಕಾಲ ಸರಿಯಿತು. ಈಗ ನಾಲ್ಕು ತಲೆಮಾರು ಕಳೆದ ಬಳಿಕ ಮಲರಾಯನಿಗೆ ಗಡಿ ಹಿಡಿಯಲು  ಜನ ಬೇಕು. ಹೊಸ ಮಂಜಣಾಳ್ವನೊಬ್ಬ ಬೇಕು.

ಯಮುನಕ್ಕ ಕಾಯುತ್ತಿದ್ದರು. ತಮ್ಮ ಸುಬ್ಬಯನಿಗೆ ಯಜಮಾನಿಕೆ ನೀಡಿ ಮಿತ್ತಬೈಲಿನ ಭೂಮಿಯಲ್ಲೇ ಕುಳ್ಳಿರಿಸ ಬೇಕೆಂದು ಕಾಯುತ್ತಿದ್ದರು. ಆ ಮಾತನ್ನು ಮನೆಯಂಗಳದಲ್ಲಿ ನಡೆದ ನೇಮದ ಬಳಿಕ ಎಷ್ಟೋ ಸಲ ಕುಟುಂಬದವರ ಮುಂದಿಟ್ಟಾಗ ಪ್ರತಿಯೊಬ್ಬರು ಸುಬ್ಬಯಣ್ಣನೇ ಗಡಿ ಹಿಡಿಯ ಬೇಕೆಂದು ಅಭಿಪ್ರಾಯ ಹೇಳಿದರು. ಕೆಲವರು ಮಾತ್ರ ಹಿಂದಿನಿಂದ ಸ್ವಲ್ಪ ಕಿರಿಕಿರಿ ಮಾಡಿದರು. ಚಿಕ್ಕ ಮಾವ ಮೈಂದರಾಲರ ಮಕ್ಕಳಿಗೆ ತಮ್ಮ ತಂದೆ ಗಡಿ ಹಿಡಿದರೆ ಆಗಬಹುದೆಂದಿತ್ತು. ತೀರಿಹೋಗಿದ್ದ ಮಾಂಕರಾಲರ ಮಕ್ಕಳು ಮತ್ತು ಬಾರಬೈಲಿನ ತ್ಯಾಂಪಣ್ಣ ಊರೆಲ್ಲ ಗುರುಗುರು ಮಾಡಿಕೊಂಡು ತಿರುಗುತ್ತಿದ್ದರು.

ಮಾಂಕರಾಲರ ತಮ್ಮ ಮೈಂದರಾಲರು ಕುಟುಂಬದಲ್ಲಿ ಬದುಕಿರುವವರಲ್ಲಿ ಈಗ ಹಿರಿಯರು. ಆದರೆ ಅವರ ಒಂದು

ಕಾಲು ಸ್ವಲ್ಪ ಗಿಡ್ಡ. ಅಂಗ ಊನ ಇದ್ದವ ಗಡಿ ಹಿಡಿಯಬಾರದು ಎಂಬ ನಿಯಮವನ್ನು ತಂತ್ರಿಯವರು ಹೇಳಿದಾಗ ಮೈಂದರಾಲರ ಮಕ್ಕಳ ಉಸಿರು ಅಡಗಿತು.

ತಂತ್ರಿಯವರು ಪ್ರಶ್ನೆ ಇಟ್ಟು ಸುಬ್ಬಯ ಭಂಡಾರಿಗಳೇ ಯಜಮಾನ ಆಗಬಹುದೆಂದು ಹೇಳಿದ್ದರು. ಸುಬ್ಬಯ ಭಂಡಾರಿಗಳು ಯಜಮಾನರಾದರೂ ಮನೆಯ ಆಧಿಪತ್ಯ ಅವರ ಅಕ್ಕ ಯಮುನಕ್ಕನದೇ ಎಂದು ಎಲ್ಲರಿಗೂ ತಿಳಿದಿತ್ತು. ಅದಕ್ಕೆ ಕುಟುಂಬದವರ ಅಡ್ಡಿಯೂ ಇರಲಿಲ್ಲ. ಸುಬ್ಬಯಣ್ಣನಿಗೂ ಏನಿದ್ದರೂ ಅದು ಯಮುನಕ್ಕನಿಗಾಗಿ ಅಲ್ಲದೆ ಸ್ವಂತದ ಆಸೆ ಏನೂ ಇರಲಿಲ್ಲ.

ಅವರಿಗೆ ಗಾಂಧಿ ಆಶ್ರಮ, ದಲಿತರ ಶಾಲೆ, ದಲಿತರ ಉದ್ಧಾರ, ಪಾನ ನಿಷೇಧ, ಜಾಗೃತಿ ಇಂತಹ ಹತ್ತೂರ ಕೆಲಸಗಳಿರುವಾಗ ಮನೆಯ ವ್ಯವಹಾರಕ್ಕೆ ಗಮನ ಕೊಟ್ಟು ಕೆಲಸ ಮಾಡಲು ಅಥವಾ ಮಾಡಿಸಲು ಸಮಯವೆಲ್ಲಿದೆ? ಊರಲ್ಲೇ ಹೆಸರುವಾಸಿಯಾದ ಗಾಂಧಿ ಸುಬ್ಬಯಣ್ಣ ಮನೆಯ ಯಜಮಾನನಾಗಿ ಗಡಿ ಹಿಡಿದರೆ ಮಿತ್ತಬೈಲಿನಲ್ಲಿ ಸುಖ-ಶಾಂತಿ ನೆಲೆಸಬಹುದೆಂಬುದು ಕುಟುಂಬದವರೆಲ್ಲರ ಆಸೆ.

ಒಮ್ಮೆ ಮಿತ್ತಬೈಲಿನ ಯುವಕರ ಒತ್ತಾಯಕ್ಕೆ ಬಂದು ಗುತ್ತಿನಲ್ಲಿ ಉಳಿದ ಸುಬ್ಬಯಣ್ಣ ಆ ಸಮಯದಲ್ಲೂ ಅಯ್ಯನ ಶಾಲೆ, ತಾಳಮದ್ದಲೆ, ಬಯಲಾಟವೆಂದು ಊರೂರು ತಿರುಗುತ್ತಿದ್ದರು. ಮಾಂಕರಾಲರು ಯಜಮಾನರಾಗಿದ್ದಾಗ ಮನೆಯ ವ್ಯವಹಾರದಲ್ಲಿ ಅವರು ತಲೆಹಾಕಲಿಲ್ಲ.

ಈಗ ಸುಬ್ಬಯಣ್ಣನ ಮೇಲಿರುವ ಒಂದು ಆರೋಪವೆಂದರೆ ಮಾಂಕರಾಲರನ್ನು ಸುಬ್ಬಯಣ್ಣನೇ ಕೊಂದುದು ಅಥವಾ ಕೊಲ್ಲಿಸಿದುದು ಎಂದು. ಮಾಂಕರಾಲ ಊರವರು ಹೇಳುವಂತೆ ಎದೆಯೊಡೆದು ಸತ್ತುದಲ್ಲವೆಂದು ಹೇಳಿಕೊಂಡು ಕೆಲವರು ತಿರುಗುತ್ತಿದ್ದರು. ಮಾಂಕರಾಲರ ಸಾವು ಕೊಲೆ ಎಂದೇ ಊರಲ್ಲಿ ಕೆಲವರ ಅಭಿಪ್ರಾಯ. ಈ ಕೊಲೆ ನಡೆಯುವ ಸಂಗತಿ ಸುಬ್ಬಯಣ್ಣನಿಗೆ ತಿಳಿದಿತ್ತೆಂಬುದು ಅವರ ಆರೋಪ. ಕೆಲವರ ಅಭಿಪ್ರಾಯ ದಂತೆ ಅದರಲ್ಲಿ ಯಮುನಕ್ಕನ ಕೈವಾಡವೂ ಇತ್ತು. ಆದರೆ ಕುಟುಂಬದೊಳಗೆ ಮಾಂಕರಾಲರ ಸಾವಿನಿಂದ ಯಾರಿಗೂ ಬೇಸರವಾಗಿರಲಿಲ್ಲ. ಬಾರಬೈಲು ತ್ಯಾಂಪಣ್ಣ ಒಬ್ಬನೇ ಊರೆಲ್ಲ ಹೇಳಿಕೊಂಡು ತಿರುಗುತ್ತಿದ್ದುದು. ಮಾಂಕರಾಲರ ಮಕ್ಕಳೂ, ತ್ಯಾಂಪಣ್ಣನೂ ಪೊಲೀಸರಿಗೆ ಒಂದು ಸಾವಿರ ರೂಪಾಯಿ ಕೊಟ್ಟು, ಸುಬ್ಬಯಣ್ಣನ ಮೇಲೆ ದಾವೆ ಹೂಡಲು ಪ್ರಯತ್ನಿಸುತ್ತಿದ್ದರು. ಆದರೆ ಗಾಂಧಿ ಸುಬ್ಬಯಣ್ಣನ ಮೇಲೆ ದಾವೆ ಹೂಡುವ ಧೈರ್ಯ ಪೊಲೀಸರಿಗೂ ಇರಲಿಲ್ಲ. ಮಾಂಕರಾಲರ ಸಾವು ಅಲ್ಲಿಗೇ ಮುಚ್ಚಿ ಹೋಯಿತು.

★★★

ಮಾಂಕರಾಲನೆಂಬ ರಾಕ್ಷಸನ ಕತೆಯೇ ಬೇರೆ ಇತ್ತು. ಅವರು ಮಾಡಿದ ಅನ್ಯಾಯ



ಗಳಿಗೆ ಲೆಕ್ಕವಿರಲಿಲ್ಲ. ಕುಟುಂಬಕ್ಕೆ ಅವರ ಯಜಮಾನಿಕೆ ಬೇಡವಾಗಿತ್ತು. ಊರಿಗೆ ಅವರ ಪಟೇಲಗಿರಿ ಸಾಕಾಗಿತ್ತು.

ನಾಲ್ಕೈದು ಸಾವಿರ ಮುಡಿ ಅಕ್ಕಿಯ ಸಾಗುವಳಿ ಇದ್ದ ಮನೆಯಲ್ಲಿ ಅನ್ನ, ಬಟ್ಟೆಗೆ ಕಷ್ಟವಾಗುತ್ತಿತ್ತು. ಮನೆಯವರಿಗೆ ದಿನಕ್ಕೆರಡು ಊಟ, ವರ್ಷದಲ್ಲಿ ಎರಡು ಜೊತೆ ಬಟ್ಟೆಯಲ್ಲದೆ ಬೇರೇನೂ ಇರಲಿಲ್ಲ. ಖರ್ಚಿಗೆ ಒಂದು ಮುಕ್ಕಾಲೂ ಸಿಗುತ್ತಿರಲಿಲ್ಲ. ಖರ್ಚಿಗೆಂದು ಮಾಂಕರಾಲರಲ್ಲಿ ನಾಲ್ಕು ಕಾಸು ಕೇಳಿದರೆ ಎಷ್ಟು ಬಡವರಾದರೂ ಅವರನ್ನು ಗದರಿಸಿ ಕಳುಹಿಸುತ್ತಿದ್ದರು. ಅದಕ್ಕಿಂತ ಹೆಚ್ಚು ಯಾರಾದರೂ ಮಾತನಾಡಿದರೆ ನಾಗರ ಬೆತ್ತದಿಂದ ಮುಖ ಮೂತಿ ನೋಡದೆ ಹೊಡೆಯುತ್ತಿದ್ದರು.

ಸುಬ್ಬಯಣ್ಣ ಬೆಳೆದು ದೊಡ್ಡವನಾದಾಗ ಆ ಮನೆಯಲ್ಲಿ ಈ ಕ್ರಮ ಇದ್ದಿರಲಿಲ್ಲ. ಸುಬ್ಬಯಣ್ಣನ ತಂದೆ ಸಂಕಯ ಭಂಡಾರಿಗಳ ಕಾರುಬಾರಿನಲ್ಲಿ ಕುಟುಂಬದ ಯುವಕರಾಗಲಿ, ಮನೆಯ ಮಕ್ಕಳಾಗಲಿ ಎಲ್ಲರೂ ಒಂದೇ. ಅವರೆಲ್ಲರೂ ಪರಾಕ್ರಮಿಗಳಾಗಿಯೇ ಬೆಳೆದವರು. ಪಟ್ಟದ ಗುತ್ತಿನಲ್ಲಿ ಮೆರೆದ ಯುವಕರಲ್ಲಿ ಸಂಕಯ ಭಂಡಾರಿಗಳ ಅಳಿಯ ಚಿಕ್ಕಪ್ಪ ರೈಗಳು ಆ ಕಾಲದಲ್ಲಿ ಹೆಸರು ಪಡೆದ ಯುವಕ. ಸುಬ್ಬಯಣ್ಣನೂ ಅವರ ಜೊತೆ ಬೆಳೆದ ಯುವಕ. ಚಿಕ್ಕಪ್ಪ ರೈಗಳು ಮಾವನ ಮಗಳು ಯಮುನಕ್ಕನನ್ನು ಮದುವೆಯಾಗಿ, ಯಮುನಕ್ಕ ಪಟ್ಟದ ಗುತ್ತಿನಲ್ಲಿಯೇ ಉಳಿದಾಗ ಸುಬ್ಬಯಣ್ಣನಿಗೂ ಪಟ್ಟದ ಗುತ್ತಿನಲ್ಲಿಯೇ ಉಳಿದು ಬಾಳುವ ಆಸೆ. ಚಿಕ್ಕಪ್ಪ ರೈಗಳು ಊರಿಗೆ, ಕುಟುಂಬಕ್ಕೆ ಮೆಚ್ಚುಗೆಯಾದ ಯಜಮಾನ. ಮಡದಿ ಯಮುನಕ್ಕ ಇಡೀ ಕುಟುಂಬಕ್ಕೆ ಪ್ರೀತಿಯ ಅತ್ತೆ. ಪಟ್ಟದ ಗುತ್ತಿನವರಿಗೆ ಅವರು ಬೇರೆ ಕುಟುಂಬದವರೆಂದು ಯಾವತ್ತೂ ಕಾಣಲಿಲ್ಲ. ತಂದೆ ಸಂಕಯ ಭಂಡಾರಿಗಳು ತೀರಿಕೊಂಡಾಗ ಬಂಟರ ಕುಟುಂಬದ ಕಟ್ಟಳೆಯಂತೆ ಮನೆ ಇಳಿದು ತಾಯಿಯ ಜೊತೆ ಮಿತ್ತಬೈಲಿಗೆ ಬಂದ ಸುಬ್ಬಯಣ್ಣನಿಗೆ ಮಿತ್ತಬೈಲು ಹಿಡಿಸಲಿಲ್ಲ. ಮಾಂಕರಾಲರ ಸರ್ವಾಧಿಕಾರದ ಆಡಳಿತ ಸಹಿಸಲು ಸಾಧ್ಯವಾಗಲಿಲ್ಲ. ಪಟ್ಟದ ಗುತ್ತಿನಲ್ಲಿ ಕೂಡಿ ಬಾಳುವ ಕ್ರಮಕ್ಕೂ, ಮಿತ್ತಬೈಲಿನ ಜಗಳಗಂಟ ಬದುಕಿಗೂ ಅಜಗಜಾಂತರ.

ಪಟ್ಟದ ಗುತ್ತಿನಲ್ಲಿ ಯಜಮಾನ ಸಂಕಯ ಭಂಡಾರಿಗಳು ಅಳಿಯಂದಿರನ್ನೂ, ಮಕ್ಕಳನ್ನೂ ಸಮಾನವಾಗಿ ನೋಡಿಕೊಳ್ಳುತ್ತಿದ್ದರು. ಯಜಮಾನರು ಎಂದರೆ, ಅವರು ಆ ಮನೆಯ ತಾಯಿ, ತಂದೆ, ಮಾವ ಎಲ್ಲಾ ಆಗಿದ್ದರು. ಅಳಿಯಂದಿರಿಗೆ ಬೇಕಾದ ಸೌಕರ್ಯ, ಖರ್ಚಿಗೆ ಬೇಕಾದಷ್ಟು ಹಣ ಕೊಟ್ಟು, ದುಡಿಯುವುದರಲ್ಲಿ, ತಿನ್ನುವುದರಲ್ಲಿ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟಿದ್ದರು. ಹೆಣ್ಣು-ಗಂಡು ಮಕ್ಕಳಿಗೆ ಶಾಲೆಯ ಅಯ್ಯನವರನ್ನು ಕರೆಸಿ ಮನೆಯಲ್ಲಿಯೇ ಬೇಕಾದ ವಿದ್ಯೆ ಕೊಡಿಸಿದ್ದರು. ಸಂಕಯ ಭಂಡಾರಿಗಳ ಪಟ್ಟದ ಗುತ್ತಿನಲ್ಲಿ ಎಲ್ಲ ಮಕ್ಕಳೂ ಕಡ್ಡಾಯವಾಗಿ ವಿದ್ಯೆ ಕಲಿಯಲೇಬೇಕಾಗಿತ್ತು. ಸುಬ್ಬಯಣ್ಣನೂ ಐದನೇ ತರಗತಿಯವರೆಗೆ ಶಾಲೆಗೆ ಹೋಗಿದ್ದರು. ಆ ಕಾಲದಲ್ಲೇ ಅವರಿಗೆ ಶಾಲೆಯ ಅಯ್ಯ ಬಂದು ಅಲ್ಪ ಸ್ವಲ್ಪ ಇಂಗ್ಲಿಷನ್ನೂ ಕಲಿಸಿ ಹೋಗುತ್ತಿದ್ದರು. ಯಮುನಕ್ಕನೂ ಮೂರನೇ ತರಗತಿಯವರೆಗೆ

ಶಾಲೆಗೆ ಹೋಗಿದ್ದರು. ಸ್ವಲ್ಪ ಓದು ಬರಹ ಇದ್ದುದರಿಂದ ಸುಬ್ಬಯ್ಯಣ್ಣ ಊರಿನ ಪಂಚಾಯತಿಕೆ ಕೂಟದ ಕಳಗಳಲ್ಲಿ ಕಾಣಿಸಿಕೊಳ್ಳುತ್ತಿದ್ದರು. ತಾಳಮದ್ದಲೆಯ ಅರ್ಥ ಹೇಳುವ ಹುಚ್ಚು, ನಾಟಕ ನೋಡುವ ಹುಚ್ಚು ಇದ್ದ ಅವರಿಗೆ ಕೋಳಿ ಅಂಕದ ಹುಚ್ಚು ಇರಲಿಲ್ಲವಾದರೂ ಕೋಳಿ ಸಾಕುವ ಹವ್ಯಾಸ ಇತ್ತು.

ಸಂಕಯ ಭಂಡಾರಿಗಳು ತೀರಿಕೊಂಡಾಗ ಸುಬ್ಬಯ್ಯಣ್ಣನಿಗಾಗಲಿ, ಯಮುನಕ್ಕನಿಗಾಗಲಿ ಬಾಕಿ ಬಂಟರಂತೆ ಸಂಬಂಧ ಕಡಿದು ಮನೆ ಬಿಡಬೇಕಾಗಿ ಬರಲಿಲ್ಲ. ಯಮುನಕ್ಕ ಹೇಗೂ ಸಂಕಯ ಭಂಡಾರಿಗಳ ಅಳಿಯ ಚಿಕ್ಕಪ್ಪ ರೈಗಳನ್ನು ಮದುವೆಯಾಗಿ ಪಟ್ಟದ ಗುತ್ತಿಗೇ ಬಂದವರು. ಸುಬ್ಬಯ್ಯಣ್ಣನಿಗೆ ಮಾತ್ರ ನಿಯಮದಂತೆ ತಾಯಿಯ ಜೊತೆ ಮಿತ್ತಬೈಲಿಗೆ ಬಂದು ವಾಸ ಮಾಡಬೇಕಾಗಿ ಬಂತು.

ಮಿತ್ತಬೈಲಿನಲ್ಲಿ ಮಾಂಕರಾಲರು ಯಜಮಾನನಾದರೂ ಅವರು ಮಂಜಣಾಳ್ವರ ಕವಲಿನ ಸಂತಾನ ಅಲ್ಲ. ಅವರು ಅಜಿಲಮಾರಿನ ಸಂತಾನ. ಹಾಗಾಗಿ ಯಜಮಾನತ್ವ ಅವರ ಕವಲಿನವರಿಗಾದರೂ ಪಟೇಲಗಿರಿ ಮಂಜಣಾಳ್ವರ ಕುಟುಂಬದವರಿಗೇ ಬರಬೇಕಾಗಿತ್ತು. ಆದರೆ ಆಗ ಆ ಸಂತಾನದಲ್ಲಿ ಬೆಳೆದ ಗಂಡು ಮಕ್ಕಳಿಲ್ಲದ ಕಾರಣ ಪಟೇಲಗಿರಿಯನ್ನು ಮಾಂಕರಾಲರೇ ನೋಡಿಕೊಳ್ಳಬೇಕಾಗಿ ಬಂತು. ಸುಬ್ಬಯ್ಯಣ್ಣ ಪ್ರಾಯಕ್ಕೆ ಬಂದ ನಂತರವೂ ಮಾಂಕರಾಲರು ಪಟೇಲಗಿರಿ ಬಿಟ್ಟುಕೊಡದೆ ಖಾಯಂ ಮಾಡಿಕೊಂಡರು. ಸಂಕಯ ಭಂಡಾರಿಗಳು ಬದುಕಿದ್ದಾಗ ಹಲವು ಬಾರಿ ಈ ಬಗ್ಗೆ ನೆನಪು ಮಾಡಿಕೊಟ್ಟಿದ್ದರು.

"ಸುಬ್ಬಯ ಯಾವಾಗ ಬಂದು ಅವನ ಜವಾಬ್ದಾರಿಯನ್ನು ವಹಿಸಿಕೊಳ್ಳಲು ಸಿದ್ಧನಾಗುತ್ತಾನೋ ಅಂದೇ ನಾನು ಸಂತೋಷದಿಂದ ಈ ಪಟೇಲಗಿರಿಯನ್ನು ಅವನಿಗೆ ಬಿಟ್ಟುಕೊಡುತ್ತೇನೆ ಭಾವಾ".

ಎಂದು ಸಂಕಯ ಭಂಡಾರಿಗಳಿಗೆ ಕೊಟ್ಟ ಮಾತು ಮಾಂಕರಾಲರಿಗೆ ಮರೆತು ಹೋಯಿತು. ಸುಬ್ಬಯ್ಯಣ್ಣನ ತಾಯಿ ಮಿತ್ತಬೈಲಿನಲ್ಲಿ ಕುಳಿತ ಮೇಲೆ ಒಮ್ಮೆ ಕೇಳಿದುದಕ್ಕೆ, ಪಟೇಲಗಿರಿ ತನ್ನ ನಂತರ ಮಾತ್ರ ಮಂಜಣಾಳ್ವರ ಕವಲಿಗೆ ಬರುತ್ತದಲ್ಲದೆ ತಾನು ಜೀವಂತವಿರುವಾಗ ಬಾರದು ಎಂದು ಹೇಳಿದ್ದರು. ಸುಬ್ಬಯ್ಯಣ್ಣ ಕೇಳಿದುದಕ್ಕೆ :

"ಹೋಗೋ, ಹೋಗಿ ಬೇಸಾಯ ಮಾಡಿಸಲು ಕಲಿ. ಪಟೇಲಗಿರಿ ಎಂದರೆ ಏನು ತಾಳಮದ್ದಲೆಯ ಭಾಗವತಿಕೆ ಎಂದು ತಿಳಿದೆಯಾ?" ಎಂದು ಗದರಿಸಿ ಕಳುಹಿಸಿದ್ದರು.

ಪಟ್ಟದ ಗುತ್ತಿನಲ್ಲಿ ತಂದೆ ಸಂಕಯ ಭಂಡಾರಿಗಳು ಹುಡುಗರನ್ನು ನೋಡಿಕೊಳ್ಳುತ್ತಿದ್ದ ರೀತಿಯೇ ಬೇರೆ. ಮಿತ್ತಬೈಲಿನಲ್ಲಿ ಮಾಂಕರಾಲರು ನೋಡಿಕೊಳ್ಳುತ್ತಿದ್ದ ರೀತಿಯೇ ಬೇರೆ. ಕುಟುಂಬದ ಯುವಕರನ್ನು ಮಾಂಕರಾಲರು ಆಳುಗಳಿಗಿಂತಲೂ ಕಡೆಯಾಗಿ ನೋಡುತ್ತಿದ್ದರು. ಅವರಿಗೆ ಆ ಮನೆಯಲ್ಲಿ, ಮಾಂಕರಾಲರ ಹಿಂದೆ ತಿರುಗುತ್ತಿದ್ದ ಅಮ್ಮಣ್ಣನಿಗಿರುವ ಬೆಲೆ ಕೂಡಾ ಇಲ್ಲವಾಗಿತ್ತು. ಕೂಟ, ಕಳಗಳಲ್ಲಿ ಅವರು ಬಾರಬೈಲಿನ ತ್ಯಾಂಪಣ್ಣನನ್ನೇ ಬೆಂಬಲಿಸುತ್ತಿದ್ದರು. ಸುಬ್ಬಯ್ಯಣ್ಣ ಇದನ್ನೆಲ್ಲಾ ಗಮನಿಸುತ್ತಿದ್ದರು.



ಇಂತಹ ಪರಿಸ್ಥಿತಿಯಲ್ಲಿ ಮಿತ್ತಬೈಲಿನ ಯುವಕರು ಸುಬ್ಬಯ್ಯಣ್ಣನ ಸುತ್ತ ಸೇರಿಕೊಂಡರು. ಅವರಲ್ಲಿ ತಮ್ಮ ಕಷ್ಟ, ಸುಖಗಳನ್ನು ಹೇಳಿಕೊಂಡರು. ಸುಬ್ಬಯ್ಯಣ್ಣ ಒಂದೊಂದಾಗಿ ಮಿತ್ತಬೈಲಿನ ಪರಿಸ್ಥಿತಿಯನ್ನು ಅಕ್ಕನಿಗೂ ಭಾವನಿಗೂ ವಿವರಿಸಿದರು. ತಂದೆ ತೀರಿಕೊಂಡ ಮೇಲೆ, ತಾಯಿಯ ಜೊತೆ ಎರಡು ತಿಂಗಳು ಮಿತ್ತಬೈಲಿನಲ್ಲಿ ಕಳೆದಿದ್ದ ಯಮುನಕ್ಕನಿಗೂ ಮಿತ್ತಬೈಲು ಮನೆಗೆ ಎಂತಹ ಗತಿ ಬಂದು ಬಿಟ್ಟಿದೆ ಎಂದು ತಿಳಿದಿತ್ತು.

ಮಾಂಕರಾಲರ ಕುದುರೆ ಸಾಕುವ ಜಟಕಾ ಸಾಯ್ಬನ ಅಹಂಕಾರ, ಅವರು ಇಟ್ಟುಕೊಂಡಿದ್ದ ಪೂವಮ್ಮನ ಕಾರುಬಾರು, ಅವರ ಚೇಲಾ ಅಮ್ಮಣ್ಣನ ಹಾರಾಟ, ಬಾರಬೈಲಿನ ತ್ಯಾಂಪಣ್ಣ, ಅವನ ತಾಯಿ ಆಚಕ್ಕ ಕಳೆದ ಮೂವತ್ತು - ನಲ್ವತ್ತು ವರ್ಷಗಳಿಂದ ಮಿತ್ತಬೈಲಿಗೆ ಬರುತ್ತಿದ್ದುದು, ಎಲ್ಲವನ್ನೂ ಯಮುನಕ್ಕ ಗಮನಿಸುತ್ತಿದ್ದರು. ಏನು ಮಾಡುವುದು! ಮಾಂಕರಾಲ ಮನೆಯ ಯಜಮಾನ. ಊರಿನ ಮುಖಂಡ. ಮಿತ್ತಬೈಲು ಗ್ರಾಮದ ಪಟೇಲ. ಕುಟುಂಬದ ಆಸ್ತಿ, ಸಂಪತ್ತನ್ನು ನೀರಿನಂತೆ ಖರ್ಚು ಮಾಡಿಕೊಂಡು ಪೊಲೀಸ್, ಶಾನುಭೋಗರು, ತಹಶೀಲ್ದಾರರನ್ನು ಕೈಯೊಳಗಿಟ್ಟುಕೊಂಡಿದ್ದರು.

ಯಮುನಕ್ಕ ಹುಡುಗರಿಗೆ ತಾಳ್ಮೆಯಿಂದಿರುವಂತೆ ಹೇಳಿದರು. ಗಲಾಟೆ ಮಾಡದಿರಿ ಎಂದು ಬುದ್ಧಿ ಹೇಳಿ, ಪಟ್ಟದ ಗುತ್ತಿಗೆ ಮರಳಿ ಬಂದ ಯಮುನಕ್ಕನಿಗೆ ಮಿತ್ತಬೈಲಿನದೇ ಚಿಂತೆ. ಮಿತ್ತಬೈಲಿಗೆ ವಾರಸುದಾರರೆಂದರೆ ಅವರ ತಮ್ಮ ಸುಬ್ಬಯ್ಯಣ್ಣ ಮತ್ತು ಅವರ ಮಕ್ಕಳು ರಾಮಣ್ಣ ಹಾಗೂ ದುಗ್ಗಪ್ಪ. ಅವರು ಮಿತ್ತಬೈಲಿಗೆ ಬರುವಾಗ ಖಜಾನೆ ಖಾಲಿ ಆಗಬಹುದೆಂದು ತೋರಿತು. ಎಲ್ಲ ಬಿಟ್ಟು ಸುಬ್ಬಯ್ಯಣ್ಣನ ಖರ್ಚಿಗೆ ಕೂಡಾ ಯಮುನಕ್ಕನೇ ಕೊಡಬೇಕಾದ ಪರಿಸ್ಥಿತಿ ಒಂದು ಮುಟ್ಟಿತು.

★★★

ಈ ಸಂದರ್ಭದಲ್ಲಿ ಸುಬ್ಬಯ ಭಂಡಾರಿಗಳು ಮೆಲ್ಲಮೆಲ್ಲನೆ ಬದಲಾಗುತ್ತಿರುವ ರಾಜಕೀಯದತ್ತ ಗಮನ ಹರಿಸಿದರು. ಗಾಂಧೀಜಿಯವರ ಸ್ವಾತಂತ್ರ್ಯ ಹೋರಾಟ, ಕಾರ್ನಾಡು ಸದಾಶಿವ ರಾಯರ ನಾಯಕತ್ವದಲ್ಲಿ ದಕ್ಷಿಣಕನ್ನಡದಲ್ಲಿಡೀ ಹರಡಿತು. ಕಾಸರಗೋಡು - ಕುಂಬಳೆಯಲ್ಲಿ ಉಮೇಶರಾಯರು, ದೇವಪ್ಪಾಳ್ವರ ಮುಂದಾಳ್ತನದಲ್ಲಿ ದೊಡ್ಡ ರೀತಿಯಲ್ಲಿ ಆಂದೋಲನ ಊರಿಂದ ಊರಿಗೆ ಹರಡತೊಡಗಿತು. ಆ ಕಡೆಯಿಂದ ಪೊಳಲಿ ಶೀನಪ್ಪ ಹೆಗ್ಡೆಯವರು, ಅತ್ತಾವರದ ಶೆಟ್ಟರು ಊರೂರು, ಮನೆ ಮನೆ ತಿರುಗಿ ಸ್ವಾತಂತ್ರ್ಯದ ಸಂದೇಶ ಬಿತ್ತ ತೊಡಗಿದರು. ಹಾಗೆ ತಿರುಗುತ್ತಿದ್ದವರು ಪಟ್ಟದ ಗುತ್ತಿನಲ್ಲಿ ಚಿಕ್ಕಪ್ಪ ರೈಗಳಿಗೆ, ಯಮುನಕ್ಕ, ಸುಬ್ಬಯ್ಯಣ್ಣನಿಗೆಲ್ಲಾ ಗಾಂಧೀಜಿಯ ಸ್ವಾತಂತ್ರ್ಯ ಸಂಗ್ರಾಮದ ಉಪದೇಶ ನೀಡಿ ಅವರನ್ನು ಕಾಂಗ್ರೆಸ್‌ಗೆ ಸೇರಿಸಿದರು. ಈ ಆಂದೋಲನ ಸುಬ್ಬಯ್ಯಣ್ಣನನ್ನೂ, ಪಟ್ಟದ ಗುತ್ತಿನ ಸುತ್ತಮುತ್ತಲಿನ ಯುವಕರನ್ನೂ ಸ್ವಾತಂತ್ರ್ಯ ಹೋರಾಟಕ್ಕೆ ಸೆಳೆಯಿತು.

ಸುಬ್ಬಯ್ಯಣ್ಣ, ದೇವಪ್ಪ ಆಳ್ವರ ಜೊತೆ ಬೇರೆ ಬೇರೆ ಸಭೆ, ಚಳವಳಿಗಳಲೆಲ್ಲಾ ಸೇರಿಕೊಂಡರು. ಗಾಂಧೀಜಿಯ ಉಪದೇಶದ ಪುಸ್ತಕಗಳನ್ನು ಓದತೊಡಗಿದರು. ಸುಬ್ಬಯ್ಯಣ್ಣ ದೇವಪ್ಪಾಳ್ವರ ಶಿಷ್ಯರಾದರು. ಪಟ್ಟದ ಗುತ್ತು, ಮಿತ್ತಬೈಲಿನ ರಾಜಕೀಯ ಬಿಟ್ಟು ಅವರು ಸ್ವಾತಂತ್ರ್ಯ ಸಮರಕ್ಕೆ ತನ್ನೆಲ್ಲಾ ವೇಳೆಯನ್ನು ವಿನಿಯೋಗಿಸ ತೊಡಗಿದರು. ಅವರು ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿಸಿಕೊಂಡಾಗ ಯಮುನಕ್ಕ ಅಥವಾ ಚಿಕ್ಕಪ್ಪ ರೈಗಳು ಅಡ್ಡಿಪಡಿಸಲಿಲ್ಲ. ಮಾಂಕರಾಲರು ಮಾರಿ ತೊಲಗಿತೆಂಬ ಖುಷಿಯಲ್ಲಿದ್ದರು. ಒಂದು ದಿನ ಅಕ್ಕನಲ್ಲಿ ತಾಯಿಯನ್ನು ನೋಡಿಕೊಳ್ಳುವಂತೆ ಹೇಳಿದ ಸುಬ್ಬಯ್ಯಣ್ಣ ಗಾಂಧೀಜಿಯ ಆಶ್ರಮಕ್ಕೆ ಹೊರಟರು.

ಆಶ್ರಮಕ್ಕೆ ಬಂದ ಸುಬ್ಬಯ್ಯಣ್ಣ ಅಲ್ಲಿದ್ದ ಕೆಲವು ಶಿಷ್ಯರೊಂದಿಗೆ ನಿತ್ಯದ ಕೆಲಸದಲ್ಲಿ ತೊಡಗಿಸಿಕೊಂಡರು. ಒಂದು ದಿನ ಗಾಂಧೀಜಿ ಅವರನ್ನು ಕರೆದು ದಲಿತರ ಕೇರಿ ಸ್ವಚ್ಛ ಮಾಡುವಂತೆ ತಿಳಿಸಿದರು. ಅಲ್ಲಿ ದಲಿತರ ಕೇರಿಯ ಪಾಯಿಖಾನೆಗಳನ್ನು ಸ್ವಚ್ಛ ಮಾಡುವುದು ಮಧ್ಯಾಹ್ನದವರೆಗಿನ ಕೆಲಸ. ಸಂಜೆ ಆಶ್ರಮದ ಸುತ್ತಮುತ್ತ ತರಕಾರಿ ಬಿತ್ತಿ ಬೆಳೆಸುವ ಕೆಲಸ ಅವರ ಪಾಲಿಗೆ ಬಿತ್ತು. ಮೊದಮೊದಲು ಕಣ್ಣೀರು ಬರುತ್ತಿದ್ದ ಸುಬ್ಬಯ್ಯಣ್ಣನಿಗೆ ತಿರುಗಿ ಊರಿಗೆ ಹೋಗೋಣವೆನಿಸುತ್ತಿತ್ತು. ಆದರೂ ಹಟದಿಂದ ನಿಂತರು.

"ಈ ಪಾಯಿಖಾನೆ ತೊಳೆಯುವ ಕೆಲಸ ತಾನು ದೊಡ್ಡ ಮನೆತನದವನೆಂಬ ಅಹಂಕಾರದಿಂದ ಬಿಡುಗಡೆಗೊಳಿಸಿ, ಮಾನವರೆಲ್ಲರೂ ಒಂದೇ ಎಂಬ ಸಮಾನತೆಯನ್ನು ಕಲಿಸಿ ಕೊಡುತ್ತದೆ" ಎಂದು ಬಾಪು ಅನ್ನುತ್ತಿದ್ದರು.

ಗಾಂಧೀಜಿಯ ಜೊತೆ ಅಸಹಕಾರ ಚಳವಳಿಯಲ್ಲಿ ಜೈಲು ಸೇರಿದವರಲ್ಲಿ ಸುಬ್ಬಯ್ಯಣ್ಣನೂ ಇದ್ದರು. ಒಂದು ದಿನ ಈ ಚಳವಳಿಯ ಸಮಯದಲ್ಲಿ ಪೊಲೀಸನೊಬ್ಬ ಗಾಂಧೀಜಿಗೆ ಬೀಸಿದ ಲಾಠಿಯ ಪೆಟ್ಟಿಗೆ ಸುಬ್ಬಯ್ಯಣ್ಣ ತನ್ನ ಬೆನ್ನು ತೋರಿಸಿದರು. ಪೊಲೀಸ್ ಪೇದೆಯ ಬೆತ್ತ ಎಳೆದು ಎರಡು ತುಂಡು ಮಾಡಿದರು. ಪೊಲೀಸರು ಅವರನ್ನು ಹೊಡೆದು ಬಡಿದು ಸೂರತ್‌ನ ರಸ್ತೆಯಲ್ಲಿ ಜುಟ್ಟು ಹಿಡಿದು ಎಳೆದುಕೊಂಡು ಹೋಗುವಾಗ ಎಲ್ಲ ಸ್ವಯಂಸೇವಕರು ನಿಂತು ನೋಡುತ್ತಿದ್ದರು. ಎದ್ದು ನಿಂತ ಸುಬ್ಬಯ್ಯಣ್ಣ "ಭಾರತ ಮಾತಾ ಕೀ ಜೈ, ಮಹಾತ್ಮಾ ಗಾಂಧಿ ಕೀ ಜೈ" ಎಂದು ಜಯಕಾರ ಹಾಕಿದಾಗ, ಎಲ್ಲ ಸತ್ಯಾಗ್ರಹಿಗಳಿಗೂ ಅವರ ದೈಹಿಕ ಹಾಗೂ ಮಾನಸಿಕ ಶಕ್ತಿಯ ಪರಿಚಯವಾಯಿತು. ಜೈಲಲ್ಲಿರುವಾಗ ನಾಯಕರ ಬಟ್ಟೆ ಒಗೆದು, ಸ್ನಾನಕ್ಕೆ ನೀರು ತಂದು ಕೊಟ್ಟು, ಸಂಜೆ ಚರಕದಿಂದ ನೂಲು ತೆಗೆಯುತ್ತಿದ್ದ ಯುವಕ ಸುಬ್ಬಯ್ಯಣ್ಣ ಎಲ್ಲರಿಗೂ ಅಚ್ಚುಮೆಚ್ಚಿನ ಗಾಂಧೀ ಶಿಷ್ಯರಾದರು. ಆಗಾಗ ಜೈಲಿಗೆ ಹೋಗಿ ಬರುತ್ತಿದ್ದ ಸುಬ್ಬಯ್ಯಣ್ಣನಿಗೆ ಜೈಲೂ ಒಂದು ಗುತ್ತಿನ ಮನೆಯಂತಾಯಿತು.

ಆಶ್ರಮದಲ್ಲಿದ್ದ ಸುಬ್ಬಯ್ಯಣ್ಣನಿಗೆ ಒಂದು ದಿನ ಮಂಜೇಶ್ವರದ ಕೊಂಕಣಿಗನೊಬ್ಬನ ಪರಿಚಯವಾಯಿತು. ಗಿಡ್ಡ ದೇಹದ, ದಪ್ಪ ಮೀಸೆಯ, ಮುಳ್ಳು ಹಂದಿಯ ಕೂದಲಿ ನಂತಿರುವ ತಲೆಗೂದಲಿನ ಆ ಯುವಕನ ಹೆಸರು ಗೋವಿಂದ.



ಸಬರಮತಿ ಹೊಳೆಯ ದಂಡೆಯಲ್ಲಿ ಒಬ್ಬನೇ ಕುಳಿತು ಊರು, ಬದುಕು, ಮಿತ್ತಬೈಲು, ಪಟ್ಟದ ಗುತ್ತುಗಳನ್ನು ನೆನೆಯುತ್ತಿದ್ದ ಸುಬ್ಬಯ್ಯಣ್ಣನ ಬಾಯಿಯಿಂದ ಸೂರ್ಯ ಮುಳುಗುತ್ತಿರುವ ಆ ಹೊತ್ತಿನಲ್ಲಿ ಯಕ್ಷಗಾನ ತಾಳಮದ್ದಲೆಯ ಒಂದು ಹಾಡು ಹೊರಬಿತ್ತು.

"ನೋಡಿ ನಿರ್ಮಲ ಜಲ ಸಮೀಪದಿ" ಎಂದು ಗಾಂಧೀಜಿಯ ಆಶ್ರಮದತ್ತ ಮುಖ ತಿರುಗಿಸಿ ಹೇಳಿದಾಗ ಸ್ವಲ್ಪ ದೂರದಲ್ಲಿ ಅವರಂತೆಯೇ ಕುಳಿತಿದ್ದ ಒಬ್ಬ ಯುವಕ,

"ಮಾಡಿಕೊಂಡರು ಪರ್ಣ ಶಾಲೆಯ" ಎಂದು ದನಿಗೂಡಿಸಿದ. ಸುಬ್ಬಯ್ಯಣ್ಣ ಆಶ್ಚರ್ಯದಿಂದ "ಯಾರು ಸ್ವಾಮಿ ನೀವು? ಎಲ್ಲಿಯಾಯಿತು ತಮಗೆ?" ಎಂದು ವಿಚಾರಿಸಿದರು.

"ನನ್ನದೂ ನಿಮ್ಮದೇ ಊರು" ಸುಬ್ಬಯ್ಯಣ್ಣನ ಬಗ್ಗೆ ಎಲ್ಲವನ್ನೂ ತಿಳಿದುಕೊಂಡಿದ್ದ ಗೋವಿಂದರು, ಮಂಜೇಶ್ವರದ ತನ್ನ ಮನೆಯ ಪರಿಚಯ ಹೇಳಿದರು. ಈ ಕೊಂಕಣಿಯನ್ನು ದೂರದಿಂದ ನೋಡಿದ ಸುಬ್ಬಯ್ಯಣ್ಣನಿಗೆ ಸಬರಮತಿಯಲ್ಲಿ ಮಂಜೇಶ್ವರದ ಶ್ರೀಮದನಂತೇಶ್ವರ ದೇವರನ್ನು ನೋಡಿದಂತಾಯಿತು. ಅಂದಿನಿಂದ ಇಬ್ಬರೂ ಆತ್ಮೀಯ ಗೆಳೆಯರಾದರು. ಸುಬ್ಬಯ್ಯಣ್ಣ, ಗೋವಿಂದರ ಜೊತೆ ಕೂಡಿಕೊಂಡರು.

ಗೋವಿಂದರು ವಿದ್ವತ್ತಿನಲ್ಲಿ, ತಿಳುವಳಿಕೆಯಲ್ಲಿ ಎಷ್ಟೋ ದೊಡ್ಡವರಾದರೂ, ಪ್ರಾಯದಲ್ಲಿ ಸುಬ್ಬಯ್ಯಣ್ಣ ಅವರಿಗಿಂತ ಹಿರಿಯರು. ಆದರೂ ಇಬ್ಬರಲ್ಲೂ ಸಮ ಪ್ರಾಯದ, ಸಮಾನತೆಯ ಗೆಳೆತನ ಬೆಳೆಯಿತು. ಗೋವಿಂದರು ತನಗೆ ತಿಳಿದಿದ್ದುದನ್ನೆಲ್ಲಾ ಸುಬ್ಬಯ್ಯಣ್ಣನಿಗೆ ಹೇಳಿ ಕೊಟ್ಟರು. ತಕಲಿ ಬಿಟ್ಟು ಚರಕದಲ್ಲಿ ನೂಲುವ, ನೂತದ್ದನ್ನು ನೇಯುವ ರೀತಿಯನ್ನು ಕಲಿಸಿಕೊಟ್ಟರು. ತುಳುನಾಡಿನ ಇತಿಹಾಸ, ಸಂಸ್ಕೃತಿಗಳ ಬಗ್ಗೆ ದಿನಾ ಚರ್ಚಿಸಿದರು. ಮಾತ್ರವಲ್ಲ, ಸುಬ್ಬಯ್ಯಣ್ಣನಿಗೆ ಅವರ ಹಿರಿಯ ಮಂಜಣಾಳ್ವರ ಪರಾಕ್ರಮ, ದೇವಯ ಭಂಡಾರಿಗಳ ಗೆಳೆತನದ ನೂರು ವರ್ಷಗಳ ಹಿಂದಿನ ಚರಿತ್ರೆಯನ್ನೆಲ್ಲಾ ಹೇಳಿದಾಗ ಅವರ ಜ್ಞಾನ ಕಂಡು ಸುಬ್ಬಯ್ಯಣ್ಣನಿಗೆ ಆಶ್ಚರ್ಯವಾಯಿತು. ಬೀರಣ್ಣ ಬಂಟನ ಕತೆ ಕೇಳುವಾಗ ಬಾರಬೈಲಿನ ತ್ಯಾಂಪಣ್ಣನ ನೆನಪಾಯಿತು. ರಕ್ತಗುಣ ವಂಶಪಾರಂಪರ್ಯವಾಗಿ ಹರಿದು ಬರುತ್ತದೆ ಎನ್ನುವ ಹಿರಿಯರ ಮಾತು ನೆನಪಾಯಿತು.

ಗೋವಿಂದರ ಹಿರಿಯರಿಗೂ ಮಿತ್ತಬೈಲಿನವರೆಗೆ ಆಸ್ತಿ ಇತ್ತೆಂಬುದು ಸುಬ್ಬಯ್ಯಣ್ಣನಿಗೆ ತಿಳಿದಿತ್ತು. ಆದರೆ ಅವರು ಮಂಜೇಶ್ವರದ ನರಸಯ ಶಾನುಭೋಗರ ಮನೆಯವರು ಹಾಗೂ ಅವರ ತಾಯಿ ನರಸಯ ಶಾನುಭೋಗರ ತಂಗಿಯೆಂಬುದು ತಿಳಿದಿರಲಿಲ್ಲ. ಅವರಿಗೆ ನರಸಯ ಶಾನುಭೋಗರೂ, ದೇವಯ ಭಂಡಾರಿಗಳೂ ಬಂಧುಗಳೆಂದು ಈಗಲೇ ತಿಳಿದುದು. ಪ್ಲೇಗ್ ಊರೆಲ್ಲಾ ಹರಡಿದ್ದಾಗ ಶಾನುಭೋಗರ ಮನೆಯ ಲಕ್ಷ್ಮಣ ಶಾನುಭೋಗರು ತನ್ನ ಅಕ್ಕನ ಮಕ್ಕಳನ್ನು ಮಂಗಳೂರಿನಿಂದ ಕರೆತಂದು ಮಂಜೇಶ್ವರದಲ್ಲಿ ಇರಿಸಿದ್ದುದು ನೆನಪಾಯಿತು. ಗೋವಿಂದರ ತಮ್ಮ ಸುಬ್ರಾಯ ಎಂಬವರು ಮಂಜೇಶ್ವರದಲ್ಲಿ ಆಸ್ತಿ ನೋಡಿಕೊಳ್ಳುತ್ತಿದ್ದರು. ಸುಬ್ಬಯ್ಯಣ್ಣ ಗೋವಿಂದರ ಹೆಸರು ಕೇಳಿದ್ದರೇ ಹೊರತು

ನೋಡಿದ್ದು ಇದೇ ಮೊದಲು.

ಗೋವಿಂದರಿಗೆ ಕಾಲೇಲ್ಕರ್ ಸಾಹೇಬರು ಬಹಳ ಆತ್ಮೀಯರು. ಕಾಕಾ ಕಾಲೇಲ್ಕರ್ ಸಾಹೇಬರು ದೊಡ್ಡ ವಿದ್ವಾಂಸರು. ಗೋವಿಂದರು ಇತಿಹಾಸದ ಅಧ್ಯಯನ, ಚರ್ಚೆ ನಡೆಸುವಾಗ ಸುಬ್ಬಯಣ್ಣ ಕುಳಿತು ಖಾದಿ ನೂಲುತ್ತಿದ್ದರು. ಅವರಿಗೆ ಈ ಇತಿಹಾಸ, ಸಂಶೋಧನೆಗಳ ಬಗ್ಗೆ ಅಷ್ಟೊಂದು ಆಸಕ್ತಿ ಇರಲಿಲ್ಲ.

"ನಿಜವಾದ ಸ್ವಾತಂತ್ರ್ಯ ಎಂದರೆ ಗ್ರಾಮ ಸ್ವರಾಜ್ಯ" ಎಂಬ ಉಪದೇಶ ಸುಬ್ಬಯಣ್ಣನ ಮನಸ್ಸಿಗೆ ನಾಟಿತ್ತು. ತನ್ನ ಹಳ್ಳಿಗಳಲ್ಲಿ ಶಾಲೆಗಳನ್ನು ತೆರೆಯಬೇಕು, ಹೆಣ್ಣು ಮಕ್ಕಳು ವಿದ್ಯೆ ಕಲಿಯಬೇಕು ಎನ್ನುವ ನಿರ್ಧಾರ ಅವರ ತಲೆಯಲ್ಲಿ ಗಟ್ಟಿಯಾಗಿ ಉಳಿಯಿತು. ಸಂಜೆ ಹೊಳೆ ಬದಿಯಲ್ಲಿ ಕುಳಿತುಕೊಂಡು ತನ್ನ ಹಳ್ಳಿಯ ದಲಿತರಿಗೂ ಹೇಗೆ ವಿದ್ಯೆ ಕಲಿಸಬಹುದು? ಅವರ ಮದ್ಯಪಾನದ ಅಭ್ಯಾಸವನ್ನು ಹೇಗೆ ಬಿಡಿಸಬಹುದು? ಅವರಿಗೆಲ್ಲಾ ಹೇಗೆ ದೇವಸ್ಥಾನಕ್ಕೆ ಪ್ರವೇಶ ಕಲ್ಪಿಸುವುದು? ಊರಿನ ನೇಮ, ಅಂಕ, ಆಯನಗಳಲ್ಲಿ ಅವರು ಹೇಗೆ ಇತರರೊಂದಿಗೆ ಬೆರೆತು ಒಂದಾಗಬಹುದು? ಇತ್ಯಾದಿ ವಿಷಯಗಳನ್ನು ಗೋವಿಂದರಲ್ಲಿ ಚರ್ಚಿಸಿ ಒಂದು ನಿರ್ಧಾರಕ್ಕೆ ಬಂದರು. ಅವುಗಳಲ್ಲಿ ಎರಡು ವಿಷಯಗಳು ಮುಖ್ಯವಾದವುಗಳು.

ಒಂದು, ತಮ್ಮ ಊರಿನ ಸುತ್ತಮುತ್ತಲಿನ ದೇವಸ್ಥಾನ, ದೈವಸ್ಥಾನಗಳಿಗೆ ಪ್ರವೇಶ ಮಾಡುವ ಹಕ್ಕು ಎಲ್ಲರಿಗೂ ಇರಬೇಕು. ಅದರಲ್ಲಿ ಬ್ರಾಹ್ಮಣ, ಬಾಕುಡ, ಬಂಟ, ಪೂಜಾರಿ ಎಂಬ ಭೇದ ಇರಬಾರದು.

ಎರಡನೆಯದಾಗಿ, ತಮ್ಮ ಸುತ್ತಮುತ್ತಲ ಊರುಗಳಲ್ಲಿ ಎಲ್ಲ ಜಾತಿಗಳ ಮಕ್ಕಳಿಗೆ ವಿದ್ಯಾಭ್ಯಾಸ ನೀಡುವ ಶಾಲೆಗಳನ್ನು ಸ್ಥಾಪಿಸಬೇಕು.

ಇಂತಹ ಚರ್ಚೆ, ಭಾಷಣ, ಉಪದೇಶಗಳ ದಿನಗಳಲ್ಲಿ ಒಂದು ದಿನ ಸುಬ್ಬಯಣ್ಣನಿಗೆ ಅವರ ತಾಯಿ ನಿಧನರಾದ ತಂತಿ ಸಂದೇಶ ಬಂತು. ಸುಬ್ಬಯಣ್ಣ ಹಿರಿಯ, ಒಬ್ಬನೇ ಮಗ. ತಾಯಿಯ ಚಿತೆಗೆ ಅವರೇ ಬೆಂಕಿ ಕೊಡಬೇಕಾಗಿತ್ತು. ಆ ಭಾಗ್ಯ ತನಗೆ ಸಿಗಲಿಲ್ಲವಲ್ಲಾ ಎಂದು ಕಣ್ಣೀರು ಹಾಕುತ್ತಿದ್ದವರನ್ನು ಗೋವಿಂದರು ಗಾಂಧೀಜಿಯ ಬಳಿಗೆ ಕರೆದೊಯ್ದರು. ಗಾಂಧೀಜಿಯವರಲ್ಲಿ ಸುಬ್ಬಯಣ್ಣನ ತಾಯಿ ತೀರಿಕೊಂಡ ಸುದ್ದಿ ತಿಳಿಸಿ ತಾಯಿಯ ಅಂತ್ಯ ಸಂಸ್ಕಾರಕ್ಕೆ ಅವರನ್ನು ಕಳುಹಿಸಿಕೊಡಲು ಅಪ್ಪಣೆ ಕೇಳಿದರು. ಗಾಂಧೀಜಿ ಇಬ್ಬರಿಗೂ ಊರಿಗೆ ಹೋಗುವಂತೆ ತಿಳಿಸಿದರು. ಎಲ್ಲರಿಗೂ ಆಶ್ಚರ್ಯ. ಗೋವಿಂದರನ್ನೂ ಯಾಕೆ ಊರಿಗೆ ಹೋಗಲು ಹೇಳಿದರೆಂದು ಕಾಲೇಲ್ಕರ್ ಸಾಹೇಬರು ಕೇಳಿಯೂ ಬಿಟ್ಟರು,

"ಯಾಕೆ ಗೋವಿಂದರನ್ನೂ ಕಳುಹಿಸುತ್ತಿದ್ದೀರಿ ಬಾಪೂ? ಸುಬ್ಬಯ ಒಬ್ಬನೇ ಹೋಗಲಾರನೇ?"

"ಕಾಕಾ, ಈ ಗೋವಿಂದನ ಹೆಂಡತಿ ಹಲವು ದಿನಗಳಿಂದ ಅನಾರೋಗ್ಯದಿಂದ ನರಳುತ್ತಿದ್ದಾರೆ. ಈ ಇತಿಹಾಸ ಸಂಶೋಧಕ, ನಿಮ್ಮ ಕಾನಡಿ ಸೂರದಾಸ, ಹೆಂಡತಿ ಕೃಷ್ಣಾ



ಬಾಯಿಯನ್ನು ಅಲ್ಲಿ ಬಿಟ್ಟು ಇಲ್ಲಿ ಕುಳಿತಿದ್ದಾನೆ. ಇತಿಹಾಸದ ಕಲ್ಲುಗಳಲ್ಲಿ ಜೀವ ಹುಡುಕುತ್ತಿದ್ದಾನೆ. ಬದುಕಿದ್ದವರ ನೋವು ಕಾಣುವುದಿಲ್ಲ ಇವನಿಗೆ. ಗೋವಿಂದ ಜಾವೋ. ಹೆಂಡತಿಯ ಆರೋಗ್ಯ ಸುಧಾರಿಸಿದ ಬಳಿಕ ಅವಳನ್ನೂ ಇಲ್ಲಿಗೆ ಕರೆದುಕೊಂಡು ಬಾ. ನನ್ನ ಬೇಟಿ ನನಗೆ ಕಾಗದ ಬರೆದಿದ್ದಾಳೆ. ಗಂಡನ ಮುಖ ನೋಡಬೇಕೆಂಬ ಆಸೆ ಅವಳಿಗೆ. ಮಲಗಿದಲ್ಲಿಂದಲೇ ಬರೆದಿದ್ದಾಳೆ. ಜಾವೋ ಜಾವೋ ದೋನೋ ಜಾವೋ".

ಗಾಂಧೀಜಿ ಅಷ್ಟು ಹೇಳಿದಾಗ, ಚರಕದಲ್ಲಿ ನೂಲುತ್ತಾ, ಆಶ್ರಮದಲ್ಲಿ ಓದುತ್ತಾ, ಬರೆಯುತ್ತಾ, ಆಶ್ರಮವನ್ನು ಗುಡಿಸಿ ಸ್ವಚ್ಛ ಮಾಡುತ್ತಿರುವ ಕಾಲೇಲ್ಕರ್ ಸಾಹೇಬರ ಶಿಷ್ಯ ಗೋವಿಂದ ಎಷ್ಟು ಗಟ್ಟಿ ಮನಸ್ಸಿನವನೆಂದು ಎಲ್ಲರಿಗೂ ಮನದಟ್ಟಾಯಿತು. ತನ್ನಲ್ಲಿ ದಿನಾ ಇತಿಹಾಸದ ಬಗ್ಗೆ ಚರ್ಚೆ ನಡೆಸುತ್ತಿದ್ದ ಈ ಯುವಕ ಯಾವತ್ತೂ ತನ್ನ ಸಂಸಾರದ ಕಷ್ಟ, ದುಃಖವನ್ನು ಹೇಳಿಕೊಳ್ಳಲಿಲ್ಲ, ತನ್ನ ಮನಸ್ಸಿನ ನೋವನ್ನು ತೋರಿಸಿಕೊಳ್ಳಲಿಲ್ಲ ಎಂಬುದನ್ನು ನೆನೆದಾಗ ಕಾಲೇಲ್ಕರರಿಗೂ ಅವನ ಮೇಲೆ ಅಭಿಮಾನ ಉಕ್ಕಿ ಬಂತು. ಅವನ ಮನಸ್ಸಿನ ನಿರ್ವಿಕಾರ ಶಕ್ತಿ ನೋಡಿ ಆಶ್ಚರ್ಯವಾಯಿತು.

ಆಶ್ರಮ ಬಿಟ್ಟು ರೈಲು ಹತ್ತಿದ ಸುಬ್ಬಯಣ್ಣ ಹಾಗೂ ಗೋವಿಂದ ಎರಡು ದಿನಗಳ ಪ್ರಯಾಣದ ಬಳಿಕ ಮಂಜೇಶ್ವರದಲ್ಲಿ ರೈಲು ಇಳಿದಾಗ ಹೊತ್ತು ಮುಳುಗಿತ್ತು. ಇಬ್ಬರೂ ಆಶ್ರಮದ ಗಂಟುಮೂಟೆಯನ್ನು ಬೆನ್ನಿಗೇರಿಸಿಕೊಂಡು ಗೋವಿಂದರ ಮನೆಗೆ ಬಂದು ತಲುಪಿದಾಗ ಸುಬ್ರಾಯರೇ ಇಬ್ಬರನ್ನೂ ಮಾಳಿಗೆಯ ಕೋಣೆಗೆ ಕಳುಹಿಸಿದರು.

ಅಲ್ಲಿ ಮಂಚದಲ್ಲಿ ಮಲಗಿದ್ದ ಕೃಷ್ಣಾಬಾಯಿಯನ್ನು ನೋಡಿ ಸುಬ್ಬಯಣ್ಣನಿಗೆ ಹೃದಯ ಹಿಂಡಿದಂತಾಯಿತು. ಗಂಡ - ಹೆಂಡತಿಯನ್ನು ಅಲ್ಲೇ ಬಿಟ್ಟು ಕೆಳಗಿಳಿದು ಬಂದು ಕುಳಿತ ಸುಬ್ಬಯಣ್ಣ ಹೊರಗೆ ಬಂದ ಗೋವಿಂದರಲ್ಲಿ ಕೇಳಿದರು,

"ಈ ಅಮ್ಮನ ಆರೋಗ್ಯ ಇಷ್ಟೊಂದು ಹದಗೆಟ್ಟಿರುವುದು ತಿಳಿದೂ ನೀವು ಯಾಕೆ ಊರಿಗೆ ಬರಲಿಲ್ಲ?"

"ಸುಬ್ಬಯಣ್ಣ, ನಾನು ಒಂದು ದಿನ ಈ ವಿಷಯ ಬಾಪು ಜೊತೆ ಹೇಳಿದಾಗ ಅವರು ಏನು ಹೇಳಿದರು ಗೊತ್ತಾ?"

"ಏನು ಹೇಳಿದರು?"

"ಅಚ್ಛಾ ಥಂಡಾಸ್ ಸಾಫ್ ಕಿಯಾ ಆಜ್? (ಪಾಯಿಖಾನೆ ಸ್ವಚ್ಛ ಮಾಡಿದಿಯಾ ಇಂದು) ಥಕ್‌ಗಯಾ ಕ್ಯಾ? (ಆಯಾಸವಾಗಿದೆಯೇ?)" ಆ ಮಾತು ಕೇಳಿ ನಾನು ಹೇಗೆ ಹೊರಟು ಬರಲಿ ಹೇಳು?

ಗೋವಿಂದರು ಹೇಳಿದಾಗ ಸುಬ್ಬಯಣ್ಣನ ಕಣ್ಣಲ್ಲಿ ನೀರಾಡಿತು. ಅವರನ್ನು ಅಪ್ಪಿ ಹಿಡಿದು ಹೇಳಿದರು,

"ನೀವು ಅಸಾಮಾನ್ಯ ಮನುಷ್ಯ. ನಿಮ್ಮ ಜೊತೆ ನಾಲ್ಕು ದಿನ ಕಳೆದ ನಾನು ಧನ್ಯ."

ಸುಬ್ಬಯಣ್ಣ ಗೋವಿಂದರನ್ನು ಬಿಟ್ಟು ಮಿತ್ತಬೈಲಿಗೆ ಹೊರಟರು.

“ನಾನು ಮಿತ್ತಬೈಲಿನ ತನಕ ನಿಮ್ಮ ಜೊತೆ ಬರಲಾ?”

“ಯಾಕೆ? ನೀವಿನ್ನು ಕೃಷ್ಣಮ್ಮ ಗುಣವಾಗಿ ಹೊರಗೆ ಬರುವವರೆಗೆ ಮನೆ ಬಿಟ್ಟು ಹೊರಟಿರಾದರೆ ನನ್ನ ಆಣೆ ಇದೆ. ನೀವು ಅವರ ಬಳಿಯಿಂದ ಕದಲಬಾರದು.”

ಗೋವಿಂದರು ಮನೆಯಿಂದ ಹೊರಗೆ ಕಾಲಿಡಲಿಲ್ಲ. ಸುಬ್ಬಯಣ್ಣನೂ ತಾಯಿಯ ಉತ್ತರಕ್ರಿಯೆ ಮುಗಿಯುವವರೆಗೂ ಮಿತ್ತಬೈಲು ಬಿಡಲಿಲ್ಲ. ಅಲ್ಲಿಗೆ ಗಾಂಧಿ ಆಶ್ರಮದ ಇಬ್ಬರ ಬದುಕೂ ಮುಗಿಯಿತು. ಇಬ್ಬರೂ ಗಾಂಧಿ ತತ್ವವನ್ನು ಚಾಚೂ ತಪ್ಪದೆ ಪಾಲಿಸಲು ಪ್ರಾರಂಭಿಸಿದರು. ಉಡುಗೆ, ತೊಡುಗೆಗಳೆಲ್ಲ  ಚರಕದಿಂದ ಸ್ವತಃ ತೆಗೆದ ನೂಲಿನ-ಖಾದಿಯವೇ. ಮೀನು, ಮಾಂಸವಿಲ್ಲದ ಸಾತ್ವಿಕ ಆಹಾರ. ಆಶ್ರಮದ ಅಭ್ಯಾಸದಂತೆ ಚಾಪೆಯಲ್ಲಿ ನಿದ್ದೆ. ಮುಂಜಾನೆ ಎದ್ದು ಯೋಗಾಭ್ಯಾಸ.

ಸುಬ್ಬಯಣ್ಣ ಹಿರಿಯರು ಕಟ್ಟಿಸಿದ್ದ ಛತ್ರದಲ್ಲಿ ಕಾಲ ಕಳೆಯಲು ಪ್ರಾರಂಭಿಸಿದರು. ತನ್ನ ಕೆಲಸವನ್ನೆಲ್ಲಾ ತಾನೇ ಮಾಡುತ್ತಾ ಅಪ್ಪಟ ಗಾಂಧೀವಾದಿಯಾದರು. ಛತ್ರದಲ್ಲಿ ದಲಿತರ ಮಕ್ಕಳಿಗೆ ವಿದ್ಯೆ ಕಲಿಸತೊಡಗಿದರು. ಅವರಿಗೆ ತಕ್ಕಲಿ ಹಾಗೂ ಚರಕದಲ್ಲಿ ನೂಲುವುದನ್ನು ಕಲಿಸಿದರು. ಬಡ ದಲಿತರ ಮನೆಗಳಿಗೆ ಹೋಗಿ ಮದ್ಯಪಾನದ ವಿರುದ್ಧ ಉಪದೇಶ ಮಾಡ ತೊಡಗಿದರು. ಮಿತ್ತಬೈಲಿನ ಪರಿಶಿಷ್ಟರ ಕೇರಿಯಲ್ಲಿ  ಗಾಂಧಿ ತತ್ವದಂತೆ ಹರಿಜನೋದ್ಧಾರ ಕಾರ್ಯಕ್ರಮಗಳನ್ನು ತರಲು ಪ್ರಯತ್ನಿಸತೊಡಗಿದರು. ಮುಂದಿನಿಂದ ಏನೂ ಹೇಳದಿದ್ದರೂ ಮಾಂಕರಾಲರು ಹಿಂದಿನಿಂದ ಇದನ್ನು ವಿರೋಧಿಸತೊಡಗಿದರು. ಸುತ್ತಮುತ್ತಲಿನ ಮೇಲು ಜಾತಿಯವರ ವಿರೋಧ ಮಾತ್ರವಲ್ಲ ಒಕ್ಕಲಿನ ಪರಿಶಿಷ್ಟರಿಂದಲೂ ವಿರೋಧ ಪ್ರಾರಂಭ ವಾಯಿತು. ಅವರ ದೈವ, ದೇವರ ಭಯ, ಬ್ರಾಹ್ಮಣರ ಶಾಪದ ಭಯ, ದನಿಗಳಾದ ಬಾರಗರ ಭಯ ಸುಬ್ಬಯಣ್ಣನಿಗೆ ಎದುರು ನಿಂತಿತು. ಅಲ್ಲದೆ ಶೇಂದಿ, ಸಾರಾಯಿ ಕುಡಿಯುವುದನ್ನು ಬಿಡಬೇಕೆಂಬುದು ಅವರಿಗೆ ಬಹಳ ಕಷ್ಟದ ಕೆಲಸವಾಯಿತು. ಮಾಂಕರಾಲರು ಮೇಲ್ಜಾತಿಯವರನ್ನು ಸುಬ್ಬಯಣ್ಣನ ವಿರುದ್ಧ ಎತ್ತಿ ಕಟ್ಟಿದರು. ಸರಕಾರವೂ ಈ ಗಾಂಧೀವಾದಿಗಳ ಮೇಲೆ ಕಣ್ಣಿಡಲು ಎಲ್ಲ ಪಟೇಲರು, ಶಾನುಭೋರಿಗೆ ಆದೇಶ ನೀಡಿತ್ತು. ಒಂದೇ ಒಂದು ಸಮಾಧಾನದ ವಿಷಯವೆಂದರೆ ಭಾವ ಚಿಕ್ಕಪ್ಪ ರೈಗಳು ಹಾಗೂ ಅಕ್ಕ ಯಮುನಕ್ಕ ಅವರನ್ನು ಬೆಂಬಲಿಸಿ ಅವರ ಬೆನ್ನಿಗೆ ನಿಂತುದು.

ಒಂದು ದಿನ ಗೋವಿಂದರ ಮನೆಗೆ ಹೋದ ಸುಬ್ಬಯಣ್ಣನಿಗೊಂದು ವಿಶೇಷ ಸುದ್ದಿ ಸಿಕ್ಕಿತು. ಗಾಂಧೀಜಿ ಮಂಗಳೂರಿಗೆ ಬರುತ್ತಾರಂತೆ!

ಸುಬ್ಬಯಣ್ಣನಿಗೆ ಸ್ವರ್ಗಕ್ಕೆ ಮೂರೇ ಗೇಣು. ಗೋವಿಂದರ ಜೊತೆ ವಿವರವಾಗಿ ಚರ್ಚಿಸಿದ ಸುಬ್ಬಯಣ್ಣ ಉಮೇಶ ರಾಯರ ಜೊತೆ ಮಾತನಾಡಲು ಕಾಸರಗೋಡಿಗೆ ಹೋದರು. ಮರುದಿನ ಕಾಸರಗೋಡಿಗೆ ಬರುತ್ತೇನೆಂದು ಹೇಳಿದ್ದ ಗೋವಿಂದರು ಬರಲಿಲ್ಲ. ಸುಬ್ಬಯಣ್ಣ ಗೋವಿಂದರನ್ನು ಒತ್ತಾಯ ಮಾಡಲಿಲ್ಲ. ಅದಕ್ಕೆ ಒಂದನೇ ಕಾರಣ ಕೃಷ್ಣಾ ಬಾಯಿಯ ಅನಾರೋಗ್ಯ, ಎರಡನೆಯದು ಮನೆಯವರ ಅಸಮಾಧಾನ.ಅವರ ಮನೆ



ಯವರಿಗೆ, ಸುಬ್ಬಯಣ್ಣನೂ, ಗೋವಿಂದರೂ ಜನಿವಾರ ಹಾಕದ ಜಾತಿಗಳನ್ನು ದೇವಸ್ಥಾನದೊಳಗೆ ಪ್ರವೇಶ ಮಾಡಿಸುತ್ತಿರುವ ಬಗ್ಗೆ ಅಸಮಾಧಾನವಿತ್ತು. ಅವರಿಗೆ ದೇವಸ್ಥಾನದ ಮುಂದೆ ಧರಣಿ ಕುಳಿತುಕೊಳ್ಳುವುದು ಸರಿಯಾಗಿ ಕಾಣಲಿಲ್ಲ. ಅದಕ್ಕೂ ಅವರ ವಿರೋಧವಿತ್ತು. ಆದರೆ ಗೋವಿಂದರು ಎಲ್ಲರಿಗಿಂತಲೂ ಹಿರಿಯರಾದುದರಿಂದ ಎಲ್ಲರೂ ಸುಮ್ಮನಿದ್ದರು. ಅದನ್ನು ಕೆಲವು ಸಲ ಸುಬ್ಬಯಣ್ಣನಲ್ಲೂ ಹೇಳಿಕೊಂಡಿದ್ದರು. ಹಾಗಾಗಿ ಸುಬ್ಬಯಣ್ಣ, ಗೋವಿಂದರನ್ನು ಕಾಸರಗೋಡಿನ ಸಭೆಗೆ ಬರಲು ಒತ್ತಾಯ ಮಾಡಲಿಲ್ಲ.

ಕಾಸರಗೋಡಿಗೆ ಗಾಂಧೀಜಿ ಬರುವ ಕಾರ್ಯಕ್ರಮಕ್ಕೆ ಪ್ರತಿ ರೈಲು ನಿಲ್ದಾಣದಲ್ಲೂ ಸ್ವಾಗತ ಕೋರಲು ಸಿದ್ಧತೆಗಳು ನಡೆಯತೊಡಗಿದವು. ಉಮೇಶ ರಾಯರು, ದೇವಪ್ಪಾಳ್ವರು ಮತ್ತು ರಾಘವ ನಂಬಿಯಾರರ ನಾಯಕತ್ವದಲ್ಲಿ ಕಾಸರಗೋಡು, ಮಂಜೇಶ್ವರ, ಕುಂಬಳೆಯವರು ಕುಂಬಳೆಯಲ್ಲಿ ಗಾಂಧೀಜಿಯನ್ನು ಸ್ವಾಗತಿಸುವ ಕಾರ್ಯಕ್ರಮಕ್ಕೆ ಭರದ ಸಿದ್ಧತೆ ನಡೆಸಿದರು. ಕುಂಬಳೆಯ ಕಾರ್ಯಕ್ರಮಕ್ಕೆ  ಸುಬ್ಬಯಣ್ಣನೇ ನಾಯಕ. ಈ ಐತಿಹಾಸಿಕ ಸಂದರ್ಭದಲ್ಲಿ ಕುಂಬಳೆಯಲ್ಲಿ ನಿಂತ ರೈಲಿನಿಂದ ಇಳಿದ ಗಾಂಧೀಜಿಯನ್ನು ಖಾದಿ ಅಂಗಿ, ಖಾದಿ ಟೋಪಿ ಧರಿಸಿದ್ದ ಸುಮಾರು ಐನೂರು ಸ್ವಯಂಸೇವಕರು ಸ್ವಾಗತಿಸಿದರು. ಇಡೀ ರೈಲಿನ ಪ್ರಯಾಣಿಕರಿಗೆ ಎಳನೀರಿನ ಪಾನಕ, ಅವಲಕ್ಕಿ, ಉಪ್ಪಿಟ್ಟಿನ ಫಲಾಹಾರ ನಡೆಯಿತು. ಯುವಕರು ಗಾಂಧೀಜಿಗೆ ಖಾದಿ ನೂಲಿನ ಹಾರ ಹಾಕಿದರು. ಗಾಂಧೀಜಿ ರೈಲು ನಿಲ್ದಾಣದಲ್ಲೇ ನಿಂತು ಸೈಮನ್ ಕಮಿಶನ್ ವಿರುದ್ಧ ಸತ್ಯಾಗ್ರಹ ಕೈಗೊಳ್ಳಲು ಕರೆ ಕೊಟ್ಟರು.

ಗಾಂಧೀಜಿ ತನ್ನ ಕೊರಳಲ್ಲಿದ್ದ ಖಾದಿ ನೂಲಿನ ಮಾಲೆಯನ್ನು ತೆಗೆದು ಸುಬ್ಬಯಣ್ಣ ನಿಗೆ ಹಾಕಿದಾಗ ಇಡೀ ಸಭೆ ಜಯಕಾರ ಹಾಕಿತು. ಸುಬ್ಬಯಣ್ಣನನ್ನು  ತನ್ನ ಬೋಗಿಗೆ ಹತ್ತಿಸಿ ಕೊಂಡ ಗಾಂಧೀಜಿ ಮಂಗಳೂರಿನ ಹಾದಿಯುದ್ದಕ್ಕೂ ಸುಖ - ದುಃಖ ವಿಚಾರಿಸಿದರು. ಮಹಾದೇವ ದೇಸಾಯಿಯವರು, ಅವರು ಮಾಡುತ್ತಿರುವ ಕೆಲಸಗಳನ್ನೆಲ್ಲಾ ತನಗೆ ವಿವರಿಸಿದ್ದಾರೆ ಎಂದು ಬಾಪು ಹೇಳಿದಾಗ, ಸುಬ್ಬಯಣ್ಣನಿಗೆ ಗಾಂಧೀಜಿ ತನ್ನನ್ನು ಮರೆತಿಲ್ಲ ಎಂದು ಖುಷಿಯಾಯಿತು. ರೈಲಲ್ಲಿದ್ದ ಎಲ್ಲ ಸ್ವಯಂಸೇವಕರಿಗೂ ‘ಮೇರಾ ಸುಪಾರಿ ಪಟೇಲ್’ ಎಂದು ಸುಬ್ಬಯಣ್ಣನ ಪರಿಚಯ ಮಾಡಿಕೊಟ್ಟರು.

ಈ ‘ಸುಪಾರಿ ಪಟೇಲ’ರ ಹಿಂದೆ ಒಂದು ಕತೆಯೇ ಇದೆ. ಬಾರ್ದೋಲಿಯ ಆಶ್ರಮದಲ್ಲಿ ಒಂದು ದಿನ, ಅವರು ತಿನ್ನುವ ಸುಪಾರಿ ತನ್ನ ಊರಿನದು, ತನ್ನ ಮನೆ ಯಲ್ಲಿಯೂ ಸುಪಾರಿ ಬೆಳೆಸುತ್ತೇವೆ ಎನ್ನುವಾಗ, ಸ್ವಯಂ ಸೇವಕರು ಅವರನ್ನು ‘ಸುಪಾರಿವಾಲಾ’ ಎಂದು ಕರೆಯಲು ಪ್ರಾರಂಭಿಸಿದರು. ಒಂದು ದಿನ ನವಸಾರಿಯ ಆಶ್ರಮಕ್ಕೆ ಬಂದ ಗುಜರಾತಿ ಸೇಟೊಬ್ಬ ಸುಬ್ಬಯಣ್ಣನನ್ನು ಗುರುತು ಹಿಡಿದ. ಆತ ಮಂಗಳೂರಿನ ಬಂದರಿನಲ್ಲಿ ಅಡಿಕೆ ವ್ಯಾಪಾರದ ಸೇಟ್. ಆತ ಅಡಿಕೆ ಖರೀದಿಸಲು

ಮಿತ್ತಬೈಲು, ಪಟ್ಟದ ಗುತ್ತುಗಳಿಗೆ ಬರುತ್ತಿದ್ದ. ಸೇಟ್ ಆಶ್ರಮದ ಸ್ವಯಂಸೇವಕರಿಗೆ ಸುಬ್ಬಯಣ್ಣ ಎಷ್ಟು ದೊಡ್ಡ ಮನೆತನದವರು, ಅವರ ಮಾವನನಂತರ ಆ ಊರಿಗೆ ಸುಬ್ಬಯಣ್ಣನೇ ಪಟೇಲರಾಗುವವರೆಂದು ಹೇಳಿದಾಗ, ಈ ಪಾಯಿಖಾನೆ ತೊಳೆಯುವ ಯುವಕ ಎಷ್ಟು ದೊಡ್ಡ ವ್ಯಕ್ತಿಯೆಂದು ಎಲ್ಲರಿಗೂ ಆಶ್ಚರ್ಯವಾಯಿತು. ಅಂದಿನಿಂದ 'ಸುಪಾರಿವಾಲಾ' 'ಸುಪಾರಿ ಪಟೇಲ'ನಾದ. ಈ ಮಾತನ್ನು ಯಾರೋ ಬಾಪುವಿನ ಕಿವಿಗೂ ಹಾಕಿದರು. ಅವರೂ ಸುಬ್ಬಯಣ್ಣನನ್ನು 'ಸುಪಾರಿ ಪಟೇಲ'ರೆಂದೇ ಕರೆಯತೊಡಗಿದರು. ಗುಜರಾತ್‌ನಲ್ಲಿ ಈ ಪಟೇಲರೆಲ್ಲಾ ದೊಡ್ಡ ಜಮೀನ್ದಾರರು. ಹಾಗಾಗಿ ಸುಬ್ಬಯಣ್ಣನಿಗೆ 'ಸುಪಾರಿ ಪಟೇಲ್' ಒಂದು ಬಿರುದೇ ಆಯಿತು.

ರೈಲಲ್ಲಿ ಗಾಂಧೀಜಿಯ ಕಾಲಡಿಯಲ್ಲಿ ಕುಳಿತ್ತಿದ್ದ ಸುಬ್ಬಯಣ್ಣ ತಾನು ಮಾಡುತ್ತಿರುವ ಕೆಲಸಗಳನ್ನು ವಿವರಿಸಿದಾಗ ಬಾಪು ಕೇಳಿದರು.

"ವೋ ಅಪ್‌ನಾ ಗೋವಿಂದ ಕೈಸಾ ಹೈ, ಕ್ಯೋಂ ನಹೀ ಆಯಾ?"

ಸುಬ್ಬಯಣ್ಣ ಅವರ ಪತ್ನಿಯ ಅನಾರೋಗ್ಯವನ್ನು ವಿವರಿಸಿ, ಅವರು ಕವಿಯಾಗಿ, ಸಂಶೋಧಕರಾಗಿ ಬಹಳ ಜನಪ್ರಿಯರಾಗುತ್ತಿದ್ದಾರೆ ಎಂದಾಗ ಯಾರೋ ಕೇಳಿದರು,

"ಯೇ ಗೋವಿಂದ ಕೌನ್ ಹೈ ಬಾಪು?"

"ವೋ ಅಪ್‌ನಾ ಕನ್ನಡ್ ಕಾ ಸೂರದಾಸ್ ಹೈ. ಕಾಕಾ ಕಾಲೇಲ್ಕರ್ ಕಾ ಶಾಗಿರ್ದ್ ಹೈ. ಅರೇ ಸುಪಾರಿ ಪಟೇಲ್, ನಾನು ಕಾಕಾ ಸಾಹೇಬರನ್ನು ಈ ಸೂರದಾಸ್‌ರನ್ನು ನೋಡಲು ಕಳುಹಿಸುತ್ತೇನೆ ಆಗದೆ?"

"ಒಳ್ಳೆಯದು, ಆಗಬಹುದು ಬಾಪು"

"ಸುಪಾರಿ ಪಟೇಲ್, ನೀನು ಹೇಳುತ್ತಿದ್ದೆಯಲ್ಲ, ನಿನ್ನ ಊರಲ್ಲಿ ಸುಂದರವಾದ ಬೆತ್ತ ಸಿಗುತ್ತದೆ, ಅದನ್ನು ತುಂಡರಿಸಲು ಸಾಧ್ಯವೇ ಇಲ್ಲವೆಂದು."

"ಹೌದು ಬಾಪೂಜಿ", ಪೊಲೀಸಿನವ ಬೀಸಿದ ಬೆತ್ತವನ್ನು ಎಳೆದು ಎರಡು ತುಂಡು ಮಾಡಿ ಎಸೆದಾಗ ಗೋವಿಂದಣ್ಣ ಹೇಳಿ ನಕ್ಕಿದ್ದ,

"ಬಾಪು, ಈ ಸುಪಾರಿ ಪಟೇಲನ ಮನೆಯ ಬಳಿ ಇರುವ ಕಾಡಲ್ಲಿ ಸಿಗುವ ಬೆತ್ತವನ್ನು ತುಂಡು ಮಾಡಲು ಯಾರಿಂದಲೂ ಸಾಧ್ಯವಿಲ್ಲ" ಎಂದು.

"ನನಗೊಂದು ಅಂತಹ ಬೆತ್ತ ಕಳುಹಿಸು ಪಟೇಲ್. ಈ ಫರಂಗಿಗಳ, ಪೊಲೀಸರ ಪೆಟ್ಟು ತಿಂದು ಮುದುಕನಾಗುತ್ತಿದ್ದೇನೆ. ಅದಕ್ಕಾಗಿ ನನಗೊಂದು ಊರುಗೋಲು ಬೇಕು."

"ನಹೀ ಬಾಪು, ನೀವು ಇಷ್ಟು ಬೇಗ ಮುದುಕ ಆದರೆ ನಮ್ಮೆಲ್ಲರ ರಾಮ ರಾಜ್ಯದ ಕನಸು ಕನಸಾಗಿಯೇ ಉಳಿದೀತು" ಎಂದು ಯಾರೋ ಹೇಳಿದರು.

"ಈ ಕೇರಳ, ಮದ್ರಾಸ್, ಮಂಗಳೂರುಗಳಲ್ಲಾದರೂ ರಾಮರಾಜ್ಯ ಬರಬಹುದು. ಆದರೆ ನೌಕಾಲಿಯಂತಿರುವ ಊರಲ್ಲಿ ಯಾವಾಗ ರಾಮರಾಜ್ಯ ಬರುತ್ತದೋ? ಅದನ್ನು ನೋಡಲು ನಾನು ಬದುಕಿರುತ್ತೇನೋ ಇಲ್ಲವೋ"



ಮಂಗಳೂರು ನಿಲ್ದಾಣ ಬಂತು. ಅಲ್ಲಿ ಗಾಂಧೀಜಿಯನ್ನು ಸ್ವಾಗತಿಸಲು ಕೊಂಬು, ವಾದ್ಯ, ಬ್ಯಾಂಡ್‌ಗಳೊಂದಿಗೆ ಜನಸಾಗರವೇ ನೆರೆದಿತ್ತು. ಗಾಂಧೀಜಿಯ ಮಂಗಳೂರಿನ ಸಭೆ, ಅವರ ಭಾಷಣ ಇಡೀ ಜಿಲ್ಲೆಗೆ ಸ್ವಾತಂತ್ರ್ಯದ ಗಾಳಿ ಹರಡಿಸಿತು. ಅವರ ಉಪದೇಶ ದಿಂದ ಇಡೀ ಜಿಲ್ಲೆಯಲ್ಲಿ ಸೈಮನ್ ಕಮಿಶನ್‌ನ ವಿರುದ್ಧ ಸಭೆ, ಸತ್ಯಾಗ್ರಹಗಳು ನಡೆಯ ತೊಡಗಿದವು. ಕಾರ್ನಾಡು ಸದಾಶಿವರಾಯರ ನಾಯಕತ್ವದಲ್ಲಿ ಗಾಂಧೀಜಿಯ ಸಂದೇಶ ಹಳ್ಳಿ ಹಳ್ಳಿಗೆ ತಲುಪಿತು. ಸರಕಾರ ಕಾರಂತರನ್ನು, ಉಮೇಶ ರಾಯರನ್ನು ಹಾಗೂ ದೇವಪ್ಪಾಳ್ವರನ್ನು ಜೈಲಿಗೆ ಹಾಕಿತು.

ಸುಬ್ಬಯಣ್ಣ ಮಂಜೇಶ್ವರದಿಂದ ನೀಲೇಶ್ವರದ ತನಕ ಚಳವಳಿಯಲ್ಲಿ ಮುಂದಾಳಾಗಿ ದುಡಿದರು. ಗಾಂಧಿ ಕಾರ್ಯಕ್ರಮ, ಸತ್ಯಾಗ್ರಹವೆಂದು ಊರೂರು ತಿರುಗುತ್ತಿದ್ದರು. ಖಾದಿಯ ಪ್ರಚಾರ, ತಿಲಕ ವಿದ್ಯಾಲಯ, ಪಾನ ನಿಷೇಧವೆಂದು ಹಲವು ಕಾರ್ಯಕ್ರಮ ಗಳನ್ನು ಹಮ್ಮಿಕೊಂಡು ಹಳ್ಳಿ ಹಳ್ಳಿಗಳಲ್ಲಿ ತಿರುಗಲು ಪ್ರಾರಂಭಿಸಿದರು. ಮನೆಗೆ ಬರದೆ ತಿಂಗಳುಗಳೇ ಕಳೆದವು.

ಒಂದು ದಿನ ನೀಲೇಶ್ವರದಲ್ಲಿ ಸತ್ಯಾಗ್ರಹ ಕುಳಿತಿದ್ದ ಸ್ಥಳಕ್ಕೆ ಮಂಜೇಶ್ವರದ ಗೋವಿಂದರ ಆಳು ಬಂದು ಸುಬ್ರಾಯರು ಕಳುಹಿಸಿದ್ದ ಒಂದು ಪತ್ರ ಕೊಟ್ಟು ಹೋದ. ಸುಬ್ರಾಯರು ಪತ್ರದಲ್ಲಿ ಸುಬ್ಬಯಣ್ಣನನ್ನು ತುರ್ತಾಗಿ ಮಂಜೇಶ್ವರದ ಅವರ ಮನೆಗೆ ಬರಲು ಕೇಳಿಕೊಂಡಿದ್ದರು. ಸುಬ್ರಾಯನಿಗೂ ಸುಬ್ಬಯಣ್ಣನಿಗೂ ಹೇಳಿಕೊಳ್ಳುವಂತಹ ಗೆಳೆತನವೇನೂ ಇರಲಿಲ್ಲ. ಸುಬ್ರಾಯರಿಗೆ ಸುಬ್ಬಯಣ್ಣನನ್ನು ಕಂಡರಾಗುತ್ತಿರಲಿಲ್ಲ. ಅವರು ಇವರ ಸತ್ಯಾಗ್ರಹ, ಗಾಂಧಿ ಕಾರ್ಯಕ್ರಮಗಳ ವಿರೋಧಿ. ಹಾಗಾಗಿ ಅವರು ಸುಬ್ಬಯಣ್ಣ ನಲ್ಲಿ ಹೆಚ್ಚಾಗಿ ಮಾತನಾಡಿದವರಲ್ಲ. ಅಂತಹ ಸುಬ್ರಾಯರು ಪತ್ರ ಕಳುಹಿಸಿ ಕೊಡಬೇಕಾದರೆ ಏನೋ ವಿಶೇಷ ಇರಲೇಬೇಕು. ನೀಲೇಶ್ವರದಿಂದ ತಕ್ಷಣ ಹೊರಟವರು ಗೋವಿಂದರ ಮನೆಗೆ ತಲುಪಿದಾಗ ಸಂಜೆಯಾಗಿತ್ತು.

ಗೋವಿಂದರ ಮನೆಯ ಚಾವಡಿಯ ಒಳಗಿನ ಕೋಣೆಗೆ ಹೋಗಿ ಮಾಳಿಗೆ ಹತ್ತಿದರೆ ಅಲ್ಲೇ ಗೋವಿಂದರ ಕೋಣೆ. ಆ ಕೋಣೆ ಇಡೀ ಕಾಲು ಊರಲು ಜಾಗವಿಲ್ಲ. ಎಲ್ಲಿ ನೋಡಿದರೂ ಪುಸ್ತಕಗಳ ರಾಶಿಯೇ ತುಂಬಿತ್ತು. ಕೋಣೆಯಲ್ಲಿ ಒಂದು ಮಂಚ, ಒಂದು ಈಸಿಚೇಯರ್. ಅವುಗಳ ಮೇಲೆಯೂ ಪುಸ್ತಕಗಳು ಬಿದ್ದಿದ್ದವು. ಸುಬ್ಬಯಣ್ಣ ಯಾವಾಗಲೂ ಹಾಸ್ಯ ಮಾಡುತ್ತಿದ್ದರು, "ಒಂದು ದಿನ ಈ ಪುಸ್ತಕದ ಕ್ರಿಮಿಗಳು ಮತ್ತು ಗೆದ್ದಲು ಪುಸ್ತಕದ ಜೊತೆ ನಿಮ್ಮನ್ನೂ ತಿನ್ನುತ್ತವೆ ನೋಡಿ" ಎಂದು.

ಮನೆಗೆ ಬಂದ ಸುಬ್ಬಯಣ್ಣ ಕೋಣೆಯ ಬಳಿ ಬಂದಾಗ ಅಲ್ಲೇ ಕುಳಿತಿದ್ದ ಸುಬ್ರಾಯರು ಕರೆದರು,

"ಸುಬ್ಬಯಣ್ಣ, ನಿಮಗೆ ತಿಳಿದಿಲ್ಲವೆಂದು ಕಾಣುತ್ತದೆ. ಕೃಷ್ಣಾ ಇನ್ನಿಲ್ಲ."

"ಏನು ಹೇಳುತ್ತಿದ್ದೀರಿ??"

"ಹೌದು, ಇಂದಿಗೆ ಹತ್ತು ದಿನಗಳಾದವು. ನಿನ್ನ ಗಾಂಧಿಯವರು ಬಂದು ಹೋದ ಮರುದಿನವೇ ಅವಳು ಹೊರಟುಹೋದಳು. ಅಂದಿನಿಂದ ಕೋಣೆಯ ಒಳಗೆ ಕುಳಿತಿರುವ ಈ ನಿನ್ನ ದೋಸ್ತಿ ಈ ತನಕ ಹೊರಗೆ ಬರಲಿಲ್ಲ, ಈಸಿ ಚೇಯರ್‌ನಲ್ಲಿ ಮಲಗಿದವನು ಏಳಲಿಲ್ಲ, ಅನ್ನ ನೀರಿಲ್ಲದೆ ಅಟ್ಟ ನೋಡುತ್ತಾ ಕುಳಿತಿದ್ದಾನೆ. ಅವಳು ಸತ್ತನಂತರ ಈ ತನಕ ಒಂದು ಮಾತೂ ಆಡಿಲ್ಲ, ಒಂದು ತೊಟ್ಟು ಕಣ್ಣೀರೂ ಕೂಡಾ ಹಾಕಲಿಲ್ಲ, ನೋಡಿ, ಏನಾದರೂ ಮಾಡಿ; ಅವನು ಮಾತನಾಡಲಿ."

"ಏನಾಯಿತು ಸುಬ್ರಾಯರೇ?"

"ನಿಮಗೆ ಗೊತ್ತಿದೆಯಲ್ಲ, ಹಾಸಿಗೆ ಹಿಡಿದ ಕೃಷ್ಣಾ ಒಂದು ದಿನವೂ ಏಳಲಿಲ್ಲ, ಗೋವಿಂದನ ಅಹರ್ನಿಶಿ ಆರೈಕೆ ಅವಳನ್ನು ಬದುಕಿಸಲು ಸಫಲವಾಗಲಿಲ್ಲ, ಹೋಗಲು ಮನಸ್ಸಿಲ್ಲದ ಕೃಷ್ಣಾ ಹಾಗೂ ಹೋಗಲು ಬಿಡಲಾರೆ ಎಂದು ಒದ್ದಾಡುತ್ತಾ ಪಶ್ಚಾತ್ತಾಪ ಪಡುತ್ತಿದ್ದ ಗೋವಿಂದ, ಇಬ್ಬರೂ ಬಹಳ ನೋವನ್ನುಂಡರು."

"ಓ ದೇವರೇ, ನಾನೆಂತಹ ಪಾಪಿ. ಬಾಪು ಮಂಗಳೂರಿಗೆ ಬಂದಿದ್ದಾಗ ಎಷ್ಟೋ ಸಲ ಗೋವಿಂದಣ್ಣ ಬರಲಿಲ್ಲವಲ್ಲ ಎಂದು ನೆನೆಯುತ್ತಿದ್ದೆ. ಈ ಗೋವಿಂದಣ್ಣ ಒಮ್ಮೊಮ್ಮೆ ಗಾಂಧೀಜಿಯ ವಿಷಯದಲ್ಲಿ ಸನ್ಯಾಸಿಯಂತೆ ಮಾತನಾಡುತ್ತಿದ್ದ. ಎಲ್ಲ ಹಳ್ಳಿಗಳಿಗೆ ನಿಜವಾದ ಸ್ವಾತಂತ್ರ್ಯ ಬರದಿದ್ದರೆ ಗಾಂಧೀಜಿಯ ಈ ಸ್ವಾತಂತ್ರ್ಯ ಚಳವಳಿ ನಿರರ್ಥಕ. ಅಸಮಾನತೆ, ಭೇದಭಾವ, ಅಂಧಶ್ರದ್ಧೆ, ಬಡತನ ತೊಲಗದೆ ಈ ದೇಶಕ್ಕೆ ಸ್ವಾತಂತ್ರ್ಯ ಬಂದರೆ ಅದು ನಾಲ್ಕು ಮಂದಿಯ ಸೊತ್ತಾಗಬಹುದೆಂದು ನಿರಾಶೆ ವ್ಯಕ್ತಪಡಿಸುತ್ತಿದ್ದ. ಅದಕ್ಕಾಗಿಯೇ ಅವನು ಬಾಪುವನ್ನು ನೋಡಲು ಬರಲಿಲ್ಲ ಎಂದು ಭಾವಿಸಿದ್ದೆ."

"ಸುಬ್ಬಯಣ್ಣ , ಹೇಗಾದರೂ ಅವನನ್ನು ಹೊರಗೆ ಕರೆತಂದು ಮಾತನಾಡುವಂತೆ ಮಾಡಿ. ಕುಟುಂಬದ ಯಾರಿಂದಲೂ ಇದುವರೆಗೂ ಅದು ಸಾಧ್ಯವಾಗಲಿಲ್ಲ, ಹಾಗಾಗಿ ಅವನಿಗೆ ಸಾಂತ್ವನ ಹೇಳಿ ಸಮಾಧಾನಿಸುವ ವ್ಯಕ್ತಿ ಇದ್ದರೆ ಅದು ನೀವೊಬ್ಬರೇ ಎಂದು ನಿಮಗೆ ಕರೆ ಕಳುಹಿಸಿದೆ. ನನ್ನ ಸಹೋದರನನ್ನು ಉಳಿಸಿಕೊಡಿ ಸುಬ್ಬಯಣ್ಣ."

ಸುಬ್ರಾಯರು ಅವರ ಕೈಹಿಡಿದು, ಕೈ ಮುಗಿದು ಹೇಳಿದಾಗ ಸುಬ್ಬಯಣ್ಣನಿಗೆ ಹೊಟ್ಟೆಗೆ ಚಾಕುವಿನಿಂದ ತಿವಿದಂತಾಯಿತು. ನಡು ಚಾವಡಿಯಲ್ಲಿ ಕೃಷ್ಣಾ ಬಾಯಿಯ ನೆನಪಿಗಾಗಿ ಇಟ್ಟಿದ್ದ ದೀಪಕ್ಕೆ ಅಡ್ಡಬಿದ್ದು ಮಾಳಿಗೆಗೆ ಬಂದಾಗ ಅಲ್ಲಿ ಸೂರು ದಿಟ್ಟಿಸುತ್ತಾ ಈಸಿ ಚೇಯರ್‌ನಲ್ಲಿ ಮಲಗಿದ್ದ ಗೋವಿಂದರು ಚೇಯರ್‌ನಿಂದ ಎದ್ದು ಬಂದು ಸುಬ್ಬಯಣ್ಣನನ್ನು ಆಲಿಂಗಿಸಿಕೊಂಡರು.

"ಸುಬ್ಬಯಣ್ಣ ನೀವು ನನಗೆ ಇಲ್ಲಿಂದ ಎದ್ದು ಹೋಗಬಾರದೆಂದು ಆಣೆ ಹಾಕಿ ಹೋದಿರಿ. ನಾನು ಏಳಲಿಲ್ಲ, ನೀವು ಕೃಷ್ಣಾಳಿಗೆ ಆಣೆ ಹಾಕಲಿಲ್ಲ, ಅವಳು ಎದ್ದು ಹೋಗಿಬಿಟ್ಟಳು."

ಸುಬ್ಬಯಣ್ಣ ಬಿಕ್ಕಿ ಬಿಕ್ಕಿ ಅಳತೊಡಗಿದರು.



"ಬೇಡ ಸುಬ್ಬಯಣ್ಣ, ನಾನು ಅವಳಿಗಾಗಿ ಒಂದು ಹನಿ ಕಣ್ಣೀರು ಸುರಿಸಲಿಲ್ಲ, ಅವಳು ನನ್ನ ನಂದಾದೀಪ. ನನ್ನ ಹೃದಯದಲ್ಲಿ ಅವಳು ಸದಾ ಬೆಳಗುತ್ತಿರುವ ಜ್ಯೋತಿ. ಅದಕ್ಕಾಗಿಯೇ ಅವಳಿಗಾಗಿ ಕಣ್ಣೀರು ಹಾಕದೆ ಕುಳಿತ್ತಿದ್ದೇನೆ' ಎಂದು ಸುಬ್ಬಯಣ್ಣನ ಬೆನ್ನು ಸವರಿದರು.

"ಗೋವಿಂದಣ್ಣ, ನನಗೆ ಅವರನ್ನು ದಹನ ಮಾಡಿದಲ್ಲಿಗೆ ಹೋಗಬೇಕು, ಹೋಗೋಣವೇ?"

ಸ್ವಲ್ಪ ಹೊತ್ತು ಯೋಚಿಸಿ ಸುಬ್ಬಯಣ್ಣನ ಮುಖ ನೋಡಿದ ಗೋವಿಂದರು ಕೇಳಿದರು, "ಸುಬ್ರಾಯರು ನನ್ನನ್ನು ಹೊರಗೆ ಕರೆದೊಯ್ಯಲು ಹೇಳಿದರೇ?"

"ಇಲ್ಲ, ನನಗೆ ಆ ಪುಣ್ಯಭೂಮಿಗೆ ಹೋಗಿ ಕೈ ಮುಗಿದು ಬರಬೇಕು. ಆಮೇಲೆ ನಿಮ್ಮಲ್ಲಿ ಗಾಂಧೀಜಿ ಹೇಳಿದುದನ್ನೆಲ್ಲ ಹೇಳಬೇಕು. ಸಮುದ್ರ ತೀರಕ್ಕೆ ಹೋಗಿ ನೀವೂ, ಕೃಷ್ಣಮ್ಮನೂ ಕುಳಿತು ತೆರೆಗಳನ್ನು ಎಣಿಸುತ್ತಿದ್ದ ಕಲ್ಲಿನ ಮೇಲೆ ಕುಳಿತು ಮಾತನಾಡೋಣ."

"ಹೌದು. ಅದೂ ಸರಿಯೇ. ಕಣ್ವತೀರ್ಥದ ಬದಿಯ ಕಲ್ಲಿನಲ್ಲಿ ಕುಳಿತು ತೆರೆಗಳನ್ನು ಎಣಿಸೋಣ."

ಗೋವಿಂದರು ಎದ್ದು ಖಾದಿ ಲುಂಗಿ, ಅರ್ಧ ತೋಳಿನ ಖಾದಿ ಅಂಗಿ ಧರಿಸಿ, ಖಾದಿ ಶಾಲು ಹೊದ್ದುಕೊಂಡರು. ಸುಬ್ಬಯಣ್ಣನ  ಜೊತೆ ಕೃಷ್ಣಾ ಬಾಯಿಯನ್ನು ದಹನ ಮಾಡಿದ ಸ್ಥಳಕ್ಕೆ ಬಂದು ಕೈ ಮುಗಿದು ಕಡಲ ತೀರಕ್ಕೆ ಹೋದರು.

ಕಡಲ ತೀರದಲ್ಲಿ ಕುಳಿತು ತೆರೆಗಳನ್ನೇ ದಿಟ್ಟಿಸುತ್ತಿದ್ದ ಗೋವಿಂದರಿಗೆ ಗಾಂಧೀಜಿ ಕುಂಬಳೆಯಲ್ಲಿ ನೀಡಿದ ದೀಕ್ಷೆ, ಮಂಗಳೂರಿನಲ್ಲಿ ನಡೆದ ಸಭೆಗಳು, ಸೈಮನ್ ಕಮಿಶನ್‌ನ ವಿರುದ್ಧ ನಡೆದ ಚಳವಳಿ ಇತ್ಯಾದಿ ಎಲ್ಲವನ್ನೂ ವಿವರಿಸಿದ ಸುಬ್ಬಯಣ್ಣ, ಗಾಂಧೀಜಿ ಹೇಗೆ ಗೋವಿಂದಣ್ಣನನ್ನು 'ಅಪ್ನಾ ಕನ್ನಡ್‌ಕಾ ಸೂರದಾಸ್' ಎಂದು ಹೇಳಿದರು ಎಂಬ ಮಾತನ್ನು ಹೇಳಿದಾಗ ಗೋವಿಂದರಿಗೂ ನಗು ಬಂತು. ಕಾಕಾ ಕಾಲೇಲ್ಕರ್ ಸಾಹೇಬರ ಜೊತೆ ನವಸಾರಿ ಆಶ್ರಮದಲ್ಲಿ ಇತಿಹಾಸದ ಸಂಶೋಧನೆಯಲ್ಲಿರುವಾಗಲೇ, ಗೋವಿಂದರು ಕವಿತೆ ಬರೆಯುತ್ತಿರುವ ವಿಷಯ ಬಾಪುವಿನ ಕಿವಿಗೆ ಬಿದ್ದಿತ್ತು. ಆದರೆ ಅವರಿಗೆ  ತನ್ನಂತಿರುವ ಸಾಮಾನ್ಯ ಸೇವಕನ ನೆನಪೂ ಇದೆ ಎನ್ನುವಾಗ ಆಶ್ಚರ್ಯವಾಯಿತು. ಅವರಿಗೆ ಸ್ವಯಂ ಸೇವಕರ ಮೇಲೆ ಇರುವ ಪ್ರೀತಿ ನೆನೆದು ಕಣ್ಣು ತುಂಬಿ ಬಂತು.

ಮಂಜೇಶ್ವರ ಸಮುದ್ರ ತೀರದ ಸೂರ್ಯಾಸ್ತಮಾನವನ್ನು ಗೋವಿಂದರೂ ಸುಬ್ಬಯಣ್ಣನೂ ಹಲವು ಬಾರಿ ನೋಡಿದವರು. ಆದರೆ ಇಂದು ಆ ಕೆಂಪು ತುಂಬಿದ ಪಶ್ಚಿಮದ ಬಾನು, ಬಾನಿನ ಅಂಚಿಗೆ ತಾಗಿ ಹರಡಿರುವ ನೀಲಿ ಸಮುದ್ರ ತನ್ನ ಬಣ್ಣವನ್ನು ಕಳೆದುಕೊಂಡು ಪ್ರಕೃತಿ ತುಂಬಾ ರಕ್ತದ ಮಳೆಯಾದಂತೆ ಕಂಗೊಳಿಸುತ್ತಿತ್ತು. ತಡಿಗೆ ನೊರೆ ನೊರೆಯಾಗಿ ಉಕ್ಕಿ ಬಂದು ಅಪ್ಪಳಿಸುವ ತೆರೆಗಳು ಮರಳನ್ನು ದೂಡುವಾಗ ಕಡಲ ಕಾಗೆಗಳು ಚಿಕ್ಕಪುಟ್ಟ ಮೀನುಗಳ ಮೇಲೆ ಬಿದ್ದು ಅವುಗಳನ್ನು ಹಿಡಿದುಕೊಂಡು ಹಾರುವ ಆ

ದೃಶ್ಯವನ್ನು ನೋಡುತ್ತಾ ಕುಳಿತವರಿಗೆ, ಕಡಲಿಗೆ ಜೀವ ಬಂದಂತೆ ದೂರದಲ್ಲಿ ಬರುವ ದೋಣಿಗಳ ಲಾಟೀನುಗಳೆಲ್ಲ ಉರಿಯುತ್ತಿರುವುದು ಕಾಣಿಸಿತು. ಆಗಸದ ನಕ್ಷತ್ರಗಳೆಲ್ಲ ಸಮುದ್ರ ಸ್ನಾನಕ್ಕೆ ಇಳಿದು ಬಂದಂತಾಗಿ ಇಬ್ಬರೂ ಎದ್ದು ನಿಂತರು.

ನಾಲ್ಕು ದಿನ ಗೋವಿಂದರ ಜೊತೆಯಲ್ಲಿಯೇ ಇದ್ದ ಸುಬ್ಬಯಣ್ಣ, ಕಾಕಾ ಸಾಹೇಬರ ಪತ್ರ ಬಂದ ಕೂಡಲೇ ಮಿತ್ತಬೈಲಿಗೆ ಹೊರಟರು. ಕಾಕಾ ಸಾಹೇಬರು ಗೋವಿಂದರನ್ನು ನೋಡಲು ಮಂಜೇಶ್ವರಕ್ಕೆ ಬರುತ್ತೇನೆಂದು ಬರೆದಿದ್ದರು. ಇಬ್ಬರೂ ಹಾಗೆ ಬರುವ ಕಾಕಾ ಸಾಹೇಬರಲ್ಲಿ ಗಾಂಧೀಜಿಗೊಂದು ಬೆತ್ತ ಕಳುಹಿಸಿಕೊಡಬೇಕೆಂದು ಮಾತಾಡಿಕೊಂಡರು.

ಸುಬ್ಬಯಣ್ಣ ಕಾಡು ಇಡೀ ಹುಡುಕಿದರು. ಆದರೆ ಅವರಿಗೆ ಇಷ್ಟವಾದ ಒಳ್ಳೆಯ ಬೆತ್ತ ಸಿಗಲಿಲ್ಲ. ಒಂದು ದಿನ ಮಿತ್ತಬೈಲಿನ ಅಟ್ಟದಿಂದ ಯುವಕನೊಬ್ಬ ಹಳೆ ಬೆತ್ತವೊಂದನ್ನು ತಂದು ತೋರಿಸಿದ. ನಾಗರಬೆತ್ತದ ಕಾಂಡವನ್ನು ಹೆರೆದು ಬುರುಡೆಯಂತೆ ಮಾಡಿ ಅದಕ್ಕೊಂದು ಕಂಚಿನ ಹಿಡಿ ಕಟ್ಟಿದ್ದ ಆ ಬೆತ್ತವನ್ನು ತೊಳೆದು, ಎಣ್ಣೆ ಕೊಟ್ಟು, ಒಣಗಿಸಿ ಕಂಚಿನ ಹಿಡಿಯನ್ನು ಫಳಫಳ ಹೊಳೆಯುವಂತೆ ಮಾಡಿಸಿದಾಗ ಬಹಳ ಸುಂದರವಾದ ಬೆತ್ತವಾಯಿತು. ಆ ಬೆತ್ತ ಅಟ್ಟಕ್ಕೆ ಹೇಗೆ ಬಂತು? ವಿಚಾರಿಸಿದಾಗ ಅದರ ಕಥೆ ತಿಳಿಯಿತು.

ಮಂಜೇಶ್ವರ ಸೀಮೆಯಲ್ಲಿ ಕಲ್ಯಾಣಪ್ಪನ ಕಾಟುಕಾಯಿಯ ಸಮಯದಲ್ಲಿ ಮಂಜಣಾಳ್ವರು ಬೀರಣ್ಣಾಳ್ವರ ಕೈ ಕಡಿದ ವೇಳೆ ಅವನ ಕೈಯಲ್ಲಿದ್ದ ಬೆತ್ತ ಅದು. ಮಂಜಣಾಳ್ವರೇ ಎಷ್ಟೋ ಸಮಯ ಅವರ ಯುದ್ಧ ದ ಜಯದ ಸಂಕೇತ ಎಂದು ಅದನ್ನು ಹಿಡಿದುಕೊಂಡಿದ್ದರಂತೆ. ಆ ಬೆತ್ತ ಬಾರಬೈಲು ಹಾಗೂ ಮಿತ್ತಬೈಲುಗಳ ನಡುವೆ ಇದ್ದ ಹಗೆತನದ ಗುರುತಾಗಿಯೂ ಉಳಿದುಕೊಂಡು ಬಂದಿತ್ತು. ಮಾಂಕರಾಲರ ಕಾಲದಲ್ಲಿ ಆ ಬೆತ್ತ ಅಟ್ಟಕ್ಕೆ ಬಿತ್ತು. ಸುಬ್ಬಯಣ್ಣ ಬೆತ್ತವನ್ನು ಕೊಂಡು ಹೋಗಿ ಗೋವಿಂದರಿಗೆ ಕೊಟ್ಟರು. ಅದರ ಅಂದ ಕಂಡು ಗೋವಿಂದರು ಕೇಳಿದರು,

"ಇಷ್ಟೊಂದು ಸುಂದರವಾದ ಬೆತ್ತ ಎಲ್ಲಿಂದ ತಂದಿರಿ?"

"ಗೋವಿಂದಣ್ಣಾ, ಈ ಬೆತ್ತಕ್ಕೆ ಬೆತ್ತಕ್ಕಿಂತಲೂ ದೊಡ್ಡ ಇತಿಹಾಸ ಇದೆ. ನಿಮ್ಮ ಸಂಶೋಧನೆಗೆ ಹೇಳಿದ ಬೆತ್ತ ಇದು."

ಸುಬ್ಬಯಣ್ಣ ನಗುತ್ತಾ ಅವರಿಗೆ ತಿಳಿದಿದ್ದ ಕತೆಯನ್ನೆಲ್ಲ ಹೇಳಿದರು. ತನ್ನ ಹಿರಿಯರು ಹೇಗೆ ಇದನ್ನು ಗೌರವದ ಸಂಕೇತವಾಗಿ ಹಿಡಿದುಕೊಂಡು ತಿರುಗುತ್ತಿದ್ದರು ಎಂಬುದನ್ನೂ ವಿವರಿಸಿದರು.

"ಇದು ಕಟ್ಟುಕತೆ ಅಲ್ಲ ಸುಬ್ಬಯಣ್ಣ. ದೇವಯ ಭಂಡಾರಿಗಳ ಮನೆಯಲ್ಲಿ ಬೀರಣ್ಣಾಳ್ವ, ದುರ್ಗಮ್ಮನೆನ್ನುವ ಹೆಂಗಸಿನ ಸಿರಿಮುಡಿಗೆ ಕೈ ಹಾಕಿ ಎಳೆದಾಗ, ಮಂಜಣಾಳ್ವರು ಆ ಕೈಯನ್ನು ಕಡಿದಾಗ ಆ ಕೈಯಲ್ಲಿದ್ದ ಬೆತ್ತ ಇದು. ಈ ಬೆತ್ತದಿಂದ ಬೀರಣ್ಣಾಳ್ವ ಕೆಲವು ಫರಂಗಿಗಳ ಬೆನ್ನು ಪುಡಿ ಮಾಡಿದ್ದಾನಂತೆ. ಹಾಗಿದ್ದ ಸೀಮೆಯ



ಇತಿಹಾಸ ಕಂಡ ಬೆತ್ತ ಇದು. ಸಾಮಾನ್ಯ ಬೆತ್ತ ಅಲ್ಲ ಇದು ಸುಬ್ಬಯಣ್ಣಾ."

ಗೋವಿಂದರು ಬೆತ್ತದ ಇತಿಹಾಸ ಹೇಳಿದಾಗ ಸುಬ್ಬಯಣ್ಣ ನಕ್ಕರು.

"ಅಲ್ಲ ಗೋವಿಂದಣ್ಣ, ನೀವು ಹೇಳುವ ಈ ಬೆತ್ತದ ಇತಿಹಾಸ ಸತ್ಯ ಎಂದಾದರೆ ಇದು ಎರಡು ಮನೆಗಳ ಹಗೆತನದ ಇತಿಹಾಸವನ್ನೂ ಹೇಳುವುದಿಲ್ಲವೇ? ಅದಕ್ಕೆ ಈ ಬೆತ್ತ ಬಾಪೂಜಿಯ ಕೈಯಲ್ಲಿ ಶಾಂತಿಯ ಮಂತ್ರದಂಡವಾಗಿರಲಿ. ಬಾರಬೈಲು ಮತ್ತು ಮಿತ್ತಬೈಲುಗಳ ಹಗೆತನ ಬಾಪುವಿನ ಕೈಯಲ್ಲಿ ಕೊನೆಗೊಳ್ಳಲಿ. ಈ ಬೆತ್ತ ಅಹಿಂಸಾ ಮೂರ್ತಿ ಬಾಪುವಿನ ಊರುಗೋಲಾಗಲಿ."

"ಒಳ್ಳೆಯ ಮಾತು ಹೇಳಿದಿರಿ. ಕಾಕಾ ಸಾಹೇಬರಲ್ಲಿ ಇದನ್ನೇ ಕಳುಹಿಸಿಕೊಡೋಣ. ಅಂದು ಬಾರಬೈಲಿನ ಹಿರಿಯ ಬೀರಣ್ಣ ಬಂಟನ ಕೈಯಲ್ಲಿ ಸ್ವಾತಂತ್ರ್ಯ ಹೋರಾಟದ ಅಸ್ತ್ರವಾಗಿ ಇಂಗ್ಲಿಷರ ಬೆನ್ನು ಪುಡಿ ಮಾಡಿದ ಈ ಬೆತ್ತ, ಇಂದು ಇಂಗ್ಲಿಷರ ವಿರುದ್ಧದ ಸತ್ಯಾಗ್ರಹ ಹೋರಾಟಕ್ಕೆ ಊರುಗೋಲಾಗಲಿ. ಅಂದು ಬಾರಬೈಲಿನ ಹಿರಿಯ, ಕಂಪನಿ ಸರಕಾರದ ವಿರುದ್ಧ ಹೋರಾಟಕ್ಕೆ ಈ ಬೆತ್ತವನ್ನು ಕತ್ತಿಯಂತೆ ಹಿಂಸೆಯ ಸಂಗ್ರಾಮಕ್ಕೆ ಉಪಯೋಗಿಸಿದ. ಇಂದು ಮಿತ್ತಬೈಲಿನ ಹಿರಿಯ ಅದೇ ಬೆತ್ತವನ್ನು ಅಹಿಂಸೆಯ ಸಮರಕ್ಕೆ ಕಳುಹಿಸುತ್ತಿದ್ದಾನೆ. ಎಷ್ಟೊಂದು ವಿಚಿತ್ರ ನೋಡು."

"ಗೋವಿಂದಣ್ಣ ನೀವು ಹೇಳುವ ಪ್ರಕಾರ ಇಂಗ್ಲಿಷರ ವಿರುದ್ಧ ಸ್ವಾತಂತ್ರ್ಯ ಸಂಗ್ರಾಮ ನಮ್ಮದಲ್ಲ, ಈ ಬೆತ್ತದ್ದು ಅಲ್ಲವೇ? ಮಹಾಭಾರತ ಯುದ್ಧದಲ್ಲಿ ತಿರುಗುತ್ತಿದ್ದ ಶ್ರೀಕೃಷ್ಣನ ಚಕ್ರದಂತೆ ಅಲ್ಲವೇ?"

ಗೋವಿಂದರು ನಕ್ಕರು.

ಕಾಲೇಲ್ಕರ್ ಸಾಹೇಬರು ಬರುವ ವೇಳೆ ಬರುತ್ತೇನೆಂದು ಹೇಳಿಹೋಗಿದ್ದ ಸುಬ್ಬಯಣ್ಣನಿಗೆ ಹೋಗಲು ಸಾಧ್ಯವಾಗಿರಲಿಲ್ಲ. ಆದರೆ ಬೆತ್ತ ಮಾತ್ರ ಕಾಕಾ ಕಾಲೇಲ್ಕರ್ ಸಾಹೇಬರ ಜೊತೆ ಗಾಂಧಿ ಆಶ್ರಮಕ್ಕೆ ಹೋಯಿತು.

ಈ ಬೆತ್ತವೇ ಗಾಂಧೀಜಿ ದಂಡಿಯಾತ್ರೆಗೆ ಹಿಡಿದುಕೊಂಡು ಹೋಗಿ, ಉಪ್ಪಿನ ಸತ್ಯಾಗ್ರಹ ಕಂಡ ಬೆತ್ತ. ಅಷ್ಟು ಹೊತ್ತಿಗೆ ಅದರ ಕಂಚಿನ ಕಟ್ಟ ಹೋಗಿ ಅದು ಊರುಗೋಲಾಗಿತ್ತು.

ಗಾಂಧೀಜಿಯ ಉಪ್ಪಿನ ಸತ್ಯಾಗ್ರಹ, ಇಡೀ ದೇಶವೇ ಇಂಗ್ಲಿಷರ ವಿರುದ್ಧ ಜಾಗೃತಿಗೊಳ್ಳುವಂತೆ ಮಾಡಿತು. ಇಂಗ್ಲಿಷ್ ಸರಕಾರ ಸಮುದ್ರದ ನೀರಿನಿಂದ ತಯಾರಿಸುವ ಉಪ್ಪಿಗೆ ತೆರಿಗೆ ವಿಧಿಸಿದಾಗ ಬಾಪು ಅದನ್ನು ವಿರೋಧಿಸಿ ಸತ್ಯಾಗ್ರಹ ಕೈಗೊಂಡು ಇತಿಹಾಸ ಪ್ರಸಿದ್ಧ ದಂಡಿಯಾತ್ರೆ ನಡೆಸಿದ್ದರು.

ಉಪ್ಪಿನ ಸತ್ಯಾಗ್ರಹ ತುಳುನಾಡು, ಕರಾವಳಿ ಕನ್ನಡ ದೇಶದಾದ್ಯಂತ ನಡೆಯಿತು. ಸುಬ್ಬಯಣ್ಣನನ್ನು ಅಂಕೋಲಾದಲ್ಲಿ ಹಿಡಿದು ಜೈಲಿಗೆ ಹಾಕಿದರು. ಸಾವಿರಾರು ಜನ ಈ ಉಪ್ಪಿನ ಸತ್ಯಾಗ್ರಹದಲ್ಲಿ ಹೋರಾಟ ನಡೆಸಿದರು.

ಉಪ್ಪಿನ ಸತ್ಯಾಗ್ರಹದ ಸಂದರ್ಭದಲ್ಲಿ ಸುಬ್ಬಯಣ್ಣ, ದೇವಪ್ಪಾಳ್ವರ ಜೊತೆ ಸೇರಿದರು. ಅವರೊಂದಿಗೆ ದೇಶ ಸುತ್ತಿದರು. ಸುಬ್ಬಯಣ್ಣ ಹಲವಾರು ವರ್ಷ ಉತ್ತರ ಭಾರತದಲ್ಲಿ ತಿರುಗುತ್ತಿದ್ದಂತೆಯೇ, ಕಾಲ ಬದಲಾಯಿತು. ಮತ್ತೆ ಕೆಲವು ವರ್ಷಗಳ ಬಳಿಕ ಸುಬ್ಬಯಣ್ಣ ರಂಗೂನ್‌ಗೆ ಹೊರಟರು. ಅವರಿಗೆ ಸುಭಾಷ್ಚಂದ್ರ ಬೋಸರನ್ನು ಕಾಣಬೇಕೆಂಬ ಆಸೆ. ರಂಗೂನ್‌ಗೆ ಹೋದ ದೇವಪ್ಪಾಳ್ವರು ಕೆಲವೇ ತಿಂಗಳಲ್ಲಿ ಒಬ್ಬರೇ ಹಿಂದಿರುಗಿದರು. ಸುಬ್ಬಯಣ್ಣ ರಂಗೂನ್‌ನಲ್ಲೇ ದೇವಪ್ಪಾಳ್ವರ ಹೊಟೇಲ್ ನಡೆಸುತ್ತಾ ಉಳಿದು ಬಿಟ್ಟರು. ಅವರಿಗೆ ಅಲ್ಲಿ ಆಝಾದ್ ಹಿಂದ್ ಫೌಝ್‌ನೊಂದಿಗೆ ಸುಭಾಷ್ಚಂದ್ರ ಬೋಸರನ್ನು ಕಂಡು ಮಾತನಾಡಿಸುವ ಸಂದರ್ಭ ಒದಗಿ ಬಂತು. ಹಾಗೆಯೇ ರಂಗೂನ್‌ಗೆ ಬರುವ ದೊಡ್ಡ ದೊಡ್ಡ ಕಾಂಗ್ರೆಸ್ ನಾಯಕರಿಗೂ ದೇವಪ್ಪಾಳ್ವರ ಹೊಟೇಲ್ ಒಟ್ಟು ಸೇರುವ ಸ್ಥಳ ವಾಯಿತು. ಸುಬ್ಬಯಣ್ಣನಿಗೆ ದೊಡ್ಡ ದೊಡ್ಡ ನಾಯಕರಲ್ಲದೆ ಮಂಗಳೂರಿನ ವೈದ್ಯರಾದ ಭಟ್ಟರು ಹಾಗೂ ಕೇರಳದ ಕ್ಯಾಪ್ಟನ್ ನಾಯರ್‌ರಂತಹವರ ಗೆಳೆತನವಾಯಿತು. ಸುಬ್ಬಯಣ್ಣ ಗಾಂಧೀಜಿಯ ಆಶ್ರಮದಲ್ಲಿ ಇದ್ದು ಬಂದ ಶಿಷ್ಯನೆಂದು ತಿಳಿದ ಮೇಲೆ ಭಾರತೀಯರು ಅವರ ಹೊಟೇಲನ್ನು ಸ್ವಾತಂತ್ರ್ಯ ಹೋರಾಟದ ಒಂದು ಕೇಂದ್ರವಾಗಿ ಮಾಡಿಕೊಂಡರು. ಹೊಟೇಲ್ ಹೋರಾಟದ ಕೇಂದ್ರವಾಯಿತು.

ಒಂದು ದಿನ ಬ್ರಿಟಿಷ್ ಸರಕಾರ ಸುಬ್ಬಯಣ್ಣನ ಹೊಟೇಲನ್ನು ಧ್ವಂಸ ಮಾಡಿ ಅವರನ್ನು ಜೈಲಿಗೆ ಹಾಕಿತು. ಒಂದು ವರ್ಷ ಜೈಲಲ್ಲಿದ್ದ ಸುಬ್ಬಯಣ್ಣನ ಆರೋಗ್ಯ ಕೆಟ್ಟಿತು. ಕೊನೆಗೆ ವೈದ್ಯ ಭಟ್ಟರ ಪ್ರಯತ್ನದಿಂದ ಅವರನ್ನು ವೈದ್ಯಕೀಯ ಶುಶ್ರೂಷೆಗೆಂದು ಜೈಲಿನಿಂದ ಬಿಡುಗಡೆಗೊಳಿಸಲಾಯಿತು. ಭಟ್ಟರು ಅಂದೇ ಅವರನ್ನು ರಂಗೂನ್‌ನಿಂದ ಮದ್ರಾಸಿಗೆ ಹೊರಡುವ ಹಡಗಿನಲ್ಲಿ ಕಳುಹಿಸಿಕೊಟ್ಟರು.

ಮದ್ರಾಸಿನಲ್ಲಿ ವಿಷಯ ತಿಳಿದ ದಕ್ಷಿಣಕನ್ನಡದ ಸ್ವಾತಂತ್ರ್ಯಯೋಧರು ಅವರನ್ನು ಸ್ವಾಗತಿಸಿ, ಆಸ್ಪತ್ರೆಗೆ ಸೇರಿಸಿ, ಬೇಕಾದ ಚಿಕಿತ್ಸೆ ಕೊಡಿಸಿ ಆರೈಕೆ ಮಾಡಿ ಮಂಗಳೂರಿಗೆ ಕರೆತಂದರು. ಮಂಗಳೂರಿನಲ್ಲಿ ಸುಬ್ಬಯಣ್ಣನಿಗೆ ಭಾರೀ ಸಂಭ್ರಮದ ಸ್ವಾಗತ ದೊರೆಯಿತು. ಮಂಗಳೂರಿಗೆ ಅವರನ್ನು ಸ್ವಾಗತಿಸಲು ಬಂದವರಲ್ಲಿ ಭಾವ ಚಿಕ್ಕಪ್ಪ ರೈಗಳು, ಅಕ್ಕ ಯಮುನಕ್ಕ, ಮಿತ್ತಬೈಲಿನ ಯುವಕರೆಲ್ಲ ಇದ್ದರು. ಯಮುನಕ್ಕ ಅವರನ್ನು ಪಟ್ಟದ ಗುತ್ತಿಗೆ ಕರೆದುಕೊಂಡು ಹೋಗಲು ತಯಾರಿ ಮಾಡಿದ್ದರು. ಮಿತ್ತಬೈಲಿನ ಯುವಕರಿಗೆ ಅವರನ್ನು ತಮ್ಮ ಬೈಲಿಗೆ ಕರೆದುಕೊಂಡು ಹೋಗಬೇಕೆಂದಿತ್ತು. ಯುವಕರು ಯಮುನಕ್ಕನಲ್ಲಿ ಕೇಳಿಕೊಂಡರು,

"ಅಕ್ಕಾ, ಸುಬ್ಬಯಣ್ಣನನ್ನು ನಾಲ್ಕು ದಿನಗಳಲ್ಲೇ ಮಿತ್ತಬೈಲಿಗೆ ಕಳುಹಿಸಿಕೊಡಿ ಅಕ್ಕಾ".

"ಯಾಕೆ? ಮಾವನ ಬೈಗಳು, ಚುಚ್ಚು ಮಾತುಗಳನ್ನು ಕೇಳಲು ಆ ಗುಂಡಿಗೆ ಯಾಕೆ ಹಾಕಬೇಕು ಅವನನ್ನು? ಆ ಮಾಂಕು ಮಾವ ಜೀವಂತ ಇರುವವರೆಗೆ ಆತ ಅಲ್ಲಿಗೆ ಬರುವುದು ಬೇಡ."



"ಯಾಕೆ ಅಕ್ಕಾ? ಮಿತ್ತಬೈಲು ಮಾಂಕು ಮಾವ ಒಬ್ಬನದೇ? ನಿನ್ನದೂ ಅಲ್ಲವೇ? ಸುಬ್ಬಯಣ್ಣನ ಮನೆಯಲ್ಲವೇ ಅದು? ನಮಗೂ ಅಲ್ಲಿ ಹಕ್ಕು ಇಲ್ಲವೇ?"

ಯುವಕರು ವಾದಕ್ಕೆ ನಿಂತಾಗ ಚಿಕ್ಕಪ್ಪ ರೈಗಳು ಅವರ ಬೆನ್ನು ತಟ್ಟಿ ಹೇಳಿದರು,

"ನಾಲ್ಕು ದಿನ ಕಳೆದು ಎಲ್ಲರೂ ಪಟ್ಟದ ಗುತ್ತಿಗೆ ಬನ್ನಿ. ಏನು ಮಾಡಬೇಕು ಎನ್ನುವುದನ್ನು ನೀವು, ಯಮುನಾ, ಸುಬ್ಬಯಣ್ಣನ ಉಪಸ್ಥಿತಿಯಲ್ಲಿ ಸಮಾಧಾನದಿಂದ ಕುಳಿತು ಯೋಚನೆ ಮಾಡಿ ತೀರ್ಮಾನಕ್ಕೆ ಬನ್ನಿ. ಈಗ ಇಲ್ಲಿ ದಾರಿಯಲ್ಲಿ ನಿಂತು ಮಾತನಾಡುವುದು ಚೆನ್ನಾಗಿರುವುದಿಲ್ಲ, ಬನ್ನಿ, ಈಗ ಎಲ್ಲರೂ ಪಟ್ಟದ ಗುತ್ತಿಗೆ ಹೋಗೋಣ."

ಯುವಕರು, ಮಂಜೇಶ್ವರ ಗಾಂಧೀ ವೇದಿಕೆಯವರು, ಅಲ್ಲದೆ ಮಂಜೇಶ್ವರದಿಂದ ನೀಲೇಶ್ವರದವರೆಗಿನ ಗಾಂಧೀ ಸೇವಾದಳವರು ಮಂಜೇಶ್ವರದಲ್ಲಿ ಸಭೆ ಸೇರಿ ಸುಬ್ಬಯಣ್ಣ ನನ್ನು ಸ್ವಾಗತಿಸಿದರು. ಪೇಟೆಯಲ್ಲಿ ನಡೆದ ಸಭೆಯಲ್ಲಿ ಜನಸಾಗರವೇ ತುಂಬಿತ್ತು. ಸ್ವಾಗತಿಸಲು ಬಂದವರಲ್ಲಿ ಗೋವಿಂದರೂ ಇದ್ದರು. ಗೋವಿಂದರು ಗೆಳೆಯನನ್ನು ಅಪ್ಪಿಕೊಂಡು,

"ನಮ್ಮಲ್ಲಿ ಹೇಳದೆ ಕೇಳದೆ ಹೇಗೆ ಹೋದೆ ಸುಬ್ಬಯಣ್ಣ? ಹೇಗೆ ಇಷ್ಟು ದಿನ ನಮ್ಮನ್ನು ಬಿಟ್ಟಿರಲು ನಿನಗೆ ಮನಸ್ಸಾಯಿತು?" ಎಂದಾಗ ಸುಬ್ಬಯಣ್ಣನ ಕಣ್ಣಲ್ಲಿ ನೀರು ತುಂಬಿಕೊಂಡಿತು.

"ಇನ್ನು ನಮ್ಮಲ್ಲಿ ಹೇಳದೆ ಕೇಳದೆ ಹೋದರೆ ನಮ್ಮ ಆಣೆ ಇದೆ ನಿನಗೆ".

ದೇವಸ್ಥಾನಕ್ಕೆ ಕರೆದೊಯ್ದು ಪೂಜೆ ಮಾಡಿಸಿ, ಪ್ರಸಾದ ಕೊಡಿಸಿ ಗೋವಿಂದರು ಸುಬ್ಬಯಣ್ಣನನ್ನು ಪಟ್ಟದ ಗುತ್ತಿಗೆ ಕಳುಹಿಸಿ ಕೊಟ್ಟರು.

★★★

ಪಟ್ಟದ ಗುತ್ತಿನಲ್ಲಿ ಅಕ್ಕನ ಆರೈಕೆಯಲ್ಲಿ ಚೇತರಿಸಿಕೊಳ್ಳುತ್ತಿದ್ದಂತೆಯೇ ಸುಬ್ಬಯಣ್ಣ ನನ್ನು ನೋಡಲು ಬರುವ ಜನರನ್ನು ಸುಧಾರಿಸುವುದೇ ಒಂದು ಕೆಲಸವಾಯಿತು. ಉಮೇಶ ರಾಯರು, ರಾಘವ ನಂಬಿಯಾರ್, ಮಣಿಯಾಣಿ, ದೇವಪ್ಪಾಳ್ವರು, ಹೀಗೆ ಕಾಸರಗೋಡಿ ನಿಂದ ಬಂದ ಗಾಂಧೀಜಿಯ ಸ್ವಾತಂತ್ರ್ಯ ಹೋರಾಟಗಾರರು ಅವರಿಗೆ ತಾಲೂಕಿನಲ್ಲಿ ನಡೆದ ಸುಧಾರಣೆಗಳನ್ನು ವಿವರಿಸುತ್ತಿದ್ದರು. ಹರಿಜನೋದ್ಧಾರ ಸಂಘ, ವಿಧವಾ ವಿವಾಹ ಸಂಘ, ಖಾದಿ ಭಂಡಾರಗಳಿಂದ ಬಹಳಷ್ಟು ಅಭಿವೃದ್ಧಿ ಕೆಲಸಗಳು ನಡೆಯುತ್ತಿದ್ದವು. ತಿಲಕ್ ವಿದ್ಯಾಲಯದ ರಾತ್ರಿ ಶಾಲೆಯ ಕೆಲಸವನ್ನು ದೇವಪ್ಪಾಳ್ವರು ಸುಬ್ಬಯಣ್ಣನಿಗೆ ತಿಳಿಸಿದರು. ಸುಬ್ಬಯಣ್ಣ ರಂಗೂನಿನ ಅನುಭವಗಳನ್ನು, ಅಲ್ಲಿ ಅವರಿಗೆ ಊರಿನ ಜನರಿಂದ ತಿಳಿದು ಬರುತ್ತಿದ್ದ ಸುದ್ದಿಗಳನ್ನೆಲ್ಲ ವಿವರಿಸಿದರು. ತಮ್ಮ ಹೊಟೇಲನ್ನು ಇಂಗ್ಲಿಷ್ ಸೈನಿಕರು

ಧ್ವಂಸಗೊಳಿಸಿದುದನ್ನು ಹೇಳಿದಾಗ ದೇವಪ್ಪಾಳ್ವರು,

"ಸುಬ್ಬಯ್ಯ, ರಂಗೂನಿನ ಹೊಟೇಲು ಲಾಭದ ದೃಷ್ಟಿಯಿಂದ ಮಾಡಿದ ಹೊಟೇಲಲ್ಲ, ಸ್ವಾತಂತ್ರ್ಯ ಸಮರದ ಸ್ವಯಂಸೇವಕರಿಗೆ ಒಂದು ಕಡೆ ಸೇರಿ ಮಾತನಾಡಲು, ಚರ್ಚಿಸಲು ಬೇಕಾಗಿ ಮಾಡಿದ ಕಟ್ಟೆ ಅದು. ಅಲ್ಲಿ ಇರುವವರೆಗೂ ಆ ಕೆಲಸ ನಡೆಯಿತು. ನೀನು ಮಾಡಿದ ಕೆಲಸ ಕಾರ್ಯಗಳನ್ನು ನಮ್ಮ ಹಿಂದ್ ಫೌರ್ಝ್‌ನವರು ನನಗೆ ತಿಳಿಸಿದ್ದಾರೆ" ಎಂದರು.

ದೇವಪ್ಪಾಳ್ವರು ತಾನು ರಂಗೂನ್‌ನಿಂದ ಬಂದು ಸತ್ಯಾಗ್ರಹ ಮಾಡಿದಾಗ ತನ್ನನ್ನು ತಿರುಚಿನಾಪಳ್ಳಿಯ ಜೈಲಿಗೆ ಹಾಕಿದ್ದುದ್ದನ್ನು ಹೇಳಿದರು. ದೇವಪ್ಪಾಳ್ವರು ಎರಡು ದಿನ ಪಟ್ಟದ ಗುತ್ತಿನಲ್ಲಿ ಇದ್ದು ಹೋದರು.

ಒಂದು ದಿನ ಮಾಂಕರಾಲರು ಅಳಿಯನನ್ನು ನೋಡಲು ಬಂದರು. "ಈ ಕಾಂಗ್ರೆಸ್, ಸ್ವಾತಂತ್ರ್ಯ ಹೋರಾಟ ಎಲ್ಲ ಬಿಟ್ಟು ಮಿತ್ತಬೈಲಿನಲ್ಲಿ ಸುಖವಾಗಿ ಬದುಕು" ಎಂದು ಸುಬ್ಬಯಣ್ಣನಿಗೆ ಉಪದೇಶ ಮಾಡಿದರು.

"ಮಿತ್ತಬೈಲಿಗೆ ಬಂದು ಏನು ಮಾಡಲಿ ಮಾವ?"

"ಯಾಕೆ? ಅಷ್ಟು ದೊಡ್ಡ ಕುಟುಂಬದ ಆಸ್ತಿಯನ್ನು ನೋಡಿಕೊಂಡಿರಲು ಆಗುವುದಿಲ್ಲವೇ? ಇಂದಲ್ಲದಿದ್ದರೆ ನಾಳೆ ಮಿತ್ತಬೈಲಿನ ಆಸ್ತಿಯನ್ನು ನೋಡಿಕೊಳ್ಳ ಬೇಕಾದವನು ನೀನೇ ತಾನೇ? ಈಗಲೇ ಬಂದು ನೋಡಿಕೊಳ್ಳುವುದು ಒಳ್ಳೆಯದಲ್ಲವೇ?"

"ಮಿತ್ತಬೈಲಿನಲ್ಲಿ ಎಷ್ಟೋ ಯುವಕರಿದ್ದಾರೆ. ಅವರಿಗೆಲ್ಲ ಒಂದು ಕೆಲಸ ಕೊಟ್ಟು, ಜವಾಬ್ದಾರಿ ಕೊಟ್ಟು ಸರಿ ದಾರಿಗೆ ತನ್ನಿ ಮಾವಾ. ಕಾಲ ಬದಲಾಗುತ್ತಿದೆ. ಈಗ ಅವರನ್ನು ಸರಿಯಾಗಿ ನೋಡಿಕೊಳ್ಳದಿದ್ದರೆ ನಾಳೆ ನಿಮಗೇ ತೊಂದರೆಯಾಗಬಹುದು. ನನ್ನ ವಿಷಯ ಬಿಡಿ. ಸಮಯ ಬರುವಾಗ ನಾನೇ ಬರುತ್ತೇನೆ. ನೆನಪಿಟ್ಟುಕೊಳ್ಳಿ, ನಾನು ಬಂದರೆ ನಿಮಗೆ ತೊಂದರೆಯಲ್ಲದೆ ಉಪಕಾರ ಆಗಲಿಕ್ಕಿಲ್ಲ, ನೀವು ನನ್ನನ್ನು ಓಡಿಸಬಹುದು. ನಾನು ಗಾಂಧಿವಾದಿ. ನಿಮ್ಮ ಸರಕಾರದ ವಿರೋಧಿ ನಾನು. ಆದುದರಿಂದ ನಾವು ಹೀಗೆಯೇ ಇರೋಣ. ಮಾವ, ನನ್ನ ಮಿತ್ತಬೈಲಿನ ಛತ್ರದ ಶಾಲೆಗೆ ಸ್ವಲ್ಪ ಸಹಾಯ ಮಾಡಿ. ನಾನು ನಿಮಗೆ ಅಲ್ಲಿ ಆಗಾಗ ಸಿಗುತ್ತಿರುತ್ತೇನೆ. ಸಮಯ ಕೂಡಿ ಬಂದಾಗ ನಾನು ಬರುತ್ತೇನೆ."

ಮಾಂಕರಾಲರಿಗೂ ಅದೇ ಬೇಕಾಗಿದ್ದುದು. ಒಳಗೆ ಖುಷಿಯಾದರೂ ಎದುರಿಗೆ ನರಿಯಂತೆ ಬಹಳ ಬೇಸರ ನಟಿಸಿ 'ಈ ಮಾರಿ ಸದ್ಯಕ್ಕೆ ಮಿತ್ತಬೈಲಿನತ್ತ ಬರಲಾರದು' ಎಂದೆಣಿಸಿಕೊಂಡು ಹೊರಟರು.

ಆದರೆ ಮಿತ್ತಬೈಲಿನ ಯುವಕರು ಮಾತ್ರ ಅಷ್ಟು ಸುಲಭದಲ್ಲಿ ಸುಬ್ಬಯಣ್ಣನನ್ನು ಬಿಡಲಿಲ್ಲ, ಯಮುನಕ್ಕನೂ ಯುವಕರ ಜೊತೆ ಸೇರಿಕೊಂಡರು. ಅವರಿಗೆ ಮಾಂಕರಾಲರ ಬಗ್ಗೆ ದೂರು ಹೇಳಿದಷ್ಟೂ ಮುಗಿಯದು. ಅವರ ಕತೆಗಳಿಗೆ ಅಂತ್ಯವೇ ಇರಲಿಲ್ಲ. ಕೊನೆಗೆ ಸುಬ್ಬಯಣ್ಣ ತಾನು ಒಮ್ಮೆ ಸಬರಮತಿ ಆಶ್ರಮಕ್ಕೆ ಹೋಗಿ ಬಾಪೂಜಿಯನ್ನು ಕಂಡು, ಅವರ



ಆಶೀರ್ವಾದ ಪಡೆದು ಬಂದು ಆಮೇಲೆ ಮಿತ್ತಬೈಲಿನಲ್ಲೇ ಇರುವುದಾಗಿ ಒಪ್ಪಿಕೊಂಡರು.

★★★

ಆರೋಗ್ಯ ಸುಧಾರಿಸುತ್ತಿರುವಂತೆಯೇ ಸುಬ್ಬಯಣ್ಣ ಸಬರಮತಿಗೆ ಹೊರಟರು. ಅವರು ಗೆಳೆಯ ಗೋವಿಂದರನ್ನು ಕಂಡು ತಾನು ಗಾಂಧಿ ಆಶ್ರಮದಿಂದ ಮರಳಿದ ಬಳಿಕ ಮಿತ್ತಬೈಲಿನಲ್ಲೇ ಇರಬೇಕೆಂದು ಯೋಚಿಸಿರುವುದನ್ನು ಹೇಳಿದರು. ಗೋವಿಂದರಿಗೂ ತನ್ನ ಗೆಳೆಯ ಊರಲ್ಲೇ ಇದ್ದು ಮಂಜೇಶ್ವರದ ಸುತ್ತಮುತ್ತಲ ಹಳ್ಳಿಗಳಲ್ಲಿ ಅಭಿವೃದ್ಧಿಯ ಕೆಲಸ ಮಾಡಿಕೊಂಡಿರಬೇಕೆಂಬ ಭಾರೀ ಆಸೆ ಇತ್ತು. ಆದರೆ ಸುಬ್ಬಯಣ್ಣನದು ಅಲೆಮಾರಿ ಜೀವನ. ಅವರನ್ನು ಹಿಡಿದು ನಿಲ್ಲಿಸುವುದು ಗರುಡನ ಕಾಲಿಗೆ ಹಗ್ಗ ಹಾಕಿ ಕಟ್ಟಿ ಹಾಕಿದಂತೆ. ಈಗ ಅವರಾಗಿಯೇ ಒಪ್ಪಿದ್ದಾರೆಂದ ಮೇಲೆ ಮತ್ತೆ ಆಸೆ ಚಿಗುರಿತು.

ಸುಬ್ಬಯಣ್ಣ ಎರಡು ತಿಂಗಳ ಒಳಗೆ ಹಿಂದಿರುಗುತ್ತೇನೆ ಎಂದು ಯುವಕರಲ್ಲಿ ಹೇಳಿ ಹೋದವರು ಸ್ವಾತಂತ್ರ್ಯದ ಚಂಡಮಾರುತದ ಸುಳಿಗೆ ಸಿಲುಕಿಕೊಂಡರು. ಜೈಲು, ಸತ್ಯಾಗ್ರಹ, ಜೈಲು... ಇದುವೇ ಅವರ ಜೀವನವಾಯಿತು. ಕೊನೆಯ ಹೋರಾಟ 'ಮಾಡು ಇಲ್ಲವೇ ಮಡಿ' ಎಂದು ಗಾಂಧೀಜಿ ಕರೆಕೊಟ್ಟಾಗ, ಆ ಕರೆಗೆ ಇಡೀ ದೇಶವೇ ಓಗೊಟ್ಟು ಸ್ವಾತಂತ್ರ್ಯ ಹೋರಾಟದಲ್ಲಿ ಮುಳುಗಿತು.

ಸುಬ್ಬಯಣ್ಣನನ್ನು ಅಹಮದಾಬಾದ್‌ನಲ್ಲಿ ಬಂಧಿಸಿ ಪೂನಾದ ಯರವಾಡ ಜೈಲಿಗೆ ಹಾಕಿದರು. ಅಲ್ಲಿ ಜೈಲಿನಲ್ಲೂ ಸತ್ಯಾಗ್ರಹ ಮಾಡಿದುದಕ್ಕಾಗಿ ಅವರನ್ನು ಬೆಳಗಾವಿಯ ಜೈಲಿಗೆ ಕಳುಹಿಸಲಾಯಿತು. ದಾರಿಯ ಮಧ್ಯೆ ತಪ್ಪಿಸಿಕೊಂಡ ಸುಬ್ಬಯಣ್ಣ ಭೂಗತರಾದರು. ಅವರನ್ನು ಹುಡುಕಿಕೊಂಡು ಬಂದ ಪೊಲೀಸರು, ಸರಕಾರಿ ಖಜಾನೆ ಲೂಟಿಯಲ್ಲಿ ಅವರ ಕೈವಾಡ ಇದೆಯೆಂದು ಆರೋಪಿಸಿ ಅವರ ಊರಿನಲ್ಲೇ ತಳವೂರಿ ಕಾಯತೊಡಗಿದರು. ಸರಕಾರದ ಮಾಹಿತಿಯಂತೆ, ಯಶವಂತ ರಾವ್ ಚವಾಣರ ಗುಂಪು ಖಜಾನೆ ಲೂಟಿ ಮಾಡಿದಾಗ ಅವರ ಜೊತೆ ಮಂಗಳೂರಿನ ಪ್ರಮುಖ ಯುವಕನೊಬ್ಬ ಇದ್ದ. ಮುಂಬಯಿಯ ಪೊಲೀಸರು ಮಿತ್ತಬೈಲಿನಲ್ಲಿ ಕಾಯುತ್ತಿದ್ದಾಗಲೇ, ಬಳ್ಳಾರಿಯಿಂದ ಮದ್ರಾಸಿನ ಪೊಲೀಸರೂ ಮಿತ್ತಬೈಲಿಗೆ ಬಂದರು. ಬಳ್ಳಾರಿಯ ಜೈಲು ಧ್ವಂಸಗೊಳಿಸಿ ಕೈದಿಗಳನ್ನು ಬಿಡಿಸಿಕೊಂಡು ಹೋದ ಗುಂಪಿನ ನಾಯಕತ್ವವನ್ನು ಮಂಗಳೂರಿನ ಯುವಕನೊಬ್ಬ ವಹಿಸಿದ್ದ. ಬಳ್ಳಾರಿ ರಸ್ತೆಯ ಕೆಲವು ಸೇತುವೆಗಳನ್ನು ಸ್ಫೋಟಿಸಿದ ಗುಂಪಿನಲ್ಲಿಯೂ ಈ ಮಂಗಳೂರಿನ ಯುವಕನ ಕೈವಾಡ ಇತ್ತು. ಈ ಯುವಕ ಅಲ್ಲಿಂದ ಈಗ ಮಂಗಳೂರಿನತ್ತ ಹೊರಟಿದ್ದಾನೆ ಎಂದು ಸರಕಾರಕ್ಕೆ ಮಾಹಿತಿ ದೊರಕಿತ್ತು.

ಒಂದು ದಿನ ಮಂಗಳೂರಿನ ಮೂಡಬಿದ್ರೆಯ ಬಳಿ ಒಂದು ಸೇತುವೆಯನ್ನು ಸ್ವಾತಂತ್ರ್ಯ ಯೋಧರು ಸ್ಫೋಟಿಸಿದರಂತೆ. ಮದ್ರಾಸ್ ಸರಕಾರ ಈ ಆರೋಪವನ್ನು ಚಿಕ್ಕಪ್ಪ

ರೈ ಹಾಗೂ ಯಮುನಕ್ಕನ ಮೇಲೆ ಹೊರಿಸಿ ಇಬ್ಬರನ್ನೂ ಜೈಲಿಗೆ ತಳ್ಳಿತು. ಆಗ ಇಡೀ ಮಂಗಳೂರಿನ ಜನರು ಸಾಲುಗಟ್ಟಿ 'ಜೈಲ್ ಭರೋ' ಕಾರ್ಯಕ್ರಮದಲ್ಲಿ ಬಿರುಸಿನಿಂದ ಭಾಗವಹಿಸಿದರು.

ತುಳುನಾಡಿನ ಉದ್ದಗಲಕ್ಕೆ ಶಾಲಾ ವಿದ್ಯಾರ್ಥಿಗಳ ಸತ್ಯಾಗ್ರಹ ನಡೆಯಿತು. ಪಿಕೆಟಿಂಗ್ ನಡೆಸಿದ ವಿದ್ಯಾರ್ಥಿಗಳನ್ನು ಮಂಗಳೂರಿನ ಪೇಟೆಯಲ್ಲಿ ಪ್ರಜ್ಞೆ ತಪ್ಪುವಂತೆ ಹೊಡೆದು ಬಡಿದು ಚರಂಡಿಗೆಸೆಯ ತೊಡಗಿದರು. ಒಂದು ದಿನ ಉಳ್ಳಾಲ ಸೇತುವೆಗೆ ಬಾಂಬ್ ಇಡಲು ಕೆಲವರು ಪ್ರಯತ್ನಿಸುತ್ತಿರುವಾಗ ಸಿಕ್ಕಿ ಬಿದ್ದು, ಅವರನ್ನು ತಿರುಚಿನಾಪಳ್ಳಿ ಜೈಲಿಗೆ ತಳ್ಳಲಾಯಿತು.

ದೇಶದಲ್ಲಿ ಗಾಂಧಿ, ನೆಹರು, ಪಟೇಲರಂತಹ ನಾಯಕರನ್ನೂ ಸರಕಾರ ಜೈಲಿಗೆ ಹಾಕಿತು. ಆಗ ಸ್ವಾತಂತ್ರ್ಯ ಹೋರಾಟಗಾರರು 'ಜೈಲ್ ಭರೋ' ಕಾರ್ಯಕ್ರಮವನ್ನು ಹಮ್ಮಿಕೊಂಡರು. ಎಲ್ಲ ಜೈಲುಗಳೂ ತುಂಬತೊಡಗಿದವು.

ಒಂದು ದಿನ ಮಂಗಳೂರು ಪೇಟೆಯಲ್ಲಿ ಚದುರಿಹೋಗಿದ್ದ ಸ್ವಯಂಸೇವಕರನ್ನೆಲ್ಲಾ ಕಂಬಳಿ ಹೊದ್ದುಕೊಂಡಿದ್ದ ಸನ್ಯಾಸಿಯೊಬ್ಬ ಒಟ್ಟು ಮಾಡುತ್ತಿದ್ದನಂತೆ. ಆತ ಮಂಗಳಾದೇವಿ ದೇವಸ್ಥಾನದಲ್ಲಿ ಕುಳಿತಿದ್ದನು. ತಂಬೂರಿ ಹಿಡಿದುಕೊಂಡು ಗೋಸ್ವಾಮಿಯಂತೆ ತಿರುಗುತ್ತಿದ್ದ ಸನ್ಯಾಸಿ ಸುಬ್ಬಯಣ್ಣನೇ ಆಗಿದ್ದರು. ಅವರು ಮಂಗಳೂರಿನ ಖಜಾನೆ ದೋಚಲು ತಯಾರಿ ನಡೆಸುತ್ತಿದ್ದರು.

ಮರುದಿನ ಬೆಳಗ್ಗೆ ಹತ್ತು ಜನ ಖಜಾನೆಗೆ ನುಗ್ಗಿ ಲೂಟಿ ಮಾಡುವುದು, ಇಬ್ಬರು ದೋಚಿದ ಹಣವನ್ನು ಬಂದರಿನಲ್ಲಿ ಕಾಯುತ್ತಿರುವ ಹಾಯಿ ಹಡಗಿಗೆ ತಲುಪಿಸುವುದು, ಅದನ್ನು ಸುಬ್ಬಯಣ್ಣ ಮುಂಬಯಿಗೆ ಕೊಂಡೊಯ್ಯುವುದು. ಮಂಗಳೂರು ಪೇಟೆ ಇಡೀ ಎತ್ತಿನ ಬಂಡಿಗಳನ್ನು ನಿಲ್ಲಿಸಿ ರಸ್ತೆತಡೆ ಮಾಡಿ ವಾಹನಗಳು ಹೋಗದಂತೆ ಮಾಡುವ ಕೆಲಸ ವನ್ನು ಕಂಡಪ್ಪ ಎನ್ನುವ ಯುವಕನಿಗೆ ವಹಿಸಿಕೊಡಲಾಯಿತು. ಹೀಗೆ ಯೋಜನೆ ರೂಪಿಸಿ, ಅಂದು ರಾತ್ರಿ ಮಂಗಳಾದೇವಿ ದೇವಸ್ಥಾನದಲ್ಲೇ ಮಲಗಿದವರಿಗೆ ಬೆಳಗಾಗುವಾಗಲೇ ಗೊತ್ತಾದದ್ದು ಅವರ ಮಧ್ಯೆ ಒಬ್ಬ ಸರಕಾರಿ ಬೇಹುಗಾರನಿದ್ದನೆಂಬುದು!

ಪೊಲೀಸರು ಎಲ್ಲರನ್ನೂ ಬಂಧಿಸಿದರು. ತಿಂಗಳುಗಟ್ಟಲೆ ಕಾಲ ವಿಚಾರಣೆ ನಡೆದು, ಕೆಲವರನ್ನು ಕಣ್ಣಾನೂರು, ಇನ್ನು ಕೆಲವರನ್ನು ಬಳ್ಳಾರಿ ಜೈಲುಗಳಿಗೆ ಹಾಕಲಾಯಿತು. ಸುಬ್ಬಯಣ್ಣನ ವಿಚಾರಣೆ ಕೆಲವು ತಿಂಗಳು ನಡೆಯಿತು. ಅವರ ವಿರುದ್ಧ ಪೂನಾದಿಂದ ಬಳ್ಳಾರಿಯವರೆಗಿನ ಹಲವು ಪ್ರಕರಣಗಳ ವಿಚಾರಣೆ ನಡೆಯಿತು.

ಒಂದು ದಿನ ಅವರಿಗೆ ಗಲ್ಲು ಶಿಕ್ಷೆಯನ್ನು ಘೋಷಿಸಲಾಯಿತು. ಉಮೇಶ ರಾಯರು, ಕಾರಂತರು ಅಪೀಲು ಸಲ್ಲಿಸಿ ಗಲ್ಲು ಶಿಕ್ಷೆಯನ್ನು ಜೀವಾವಧಿಗೆ ಇಳಿಸುವಂತೆ ಮಾಡಿದರು. ಮಂಗಳೂರು ಜೈಲಿನಿಂದ ತಿರುಚಿನಾಪಳ್ಳಿಗೆ ಒಯ್ಯುತ್ತಿದ್ದ ಸುಬ್ಬಯಣ್ಣನನ್ನು ಕಾರವಾರದಿಂದ ಕಾಸರಗೋಡುವರೆಗಿನ ಸ್ವಾತಂತ್ರ್ಯಯೋಧರು ಬಂದಿದ್ದರು. ಜನ




ಜಯಕಾರ ಹಾಕಿದಾಗ ಪೊಲೀಸರು ಲಾಠಿ ಚಾರ್ಜ್ ಮಾಡಿದರು. ಹೊರಗೆ ಬಂದ ಸುಬ್ಬಯಣ್ಣ ಮಿತ್ತಬೈಲಿನ ಯುವಕರನ್ನೂ, ಯಮುನಕ್ಕನನ್ನೂ ನೋಡಿ ಹೇಳಿದರು,

"ಇನ್ನು ಇಂಗ್ಲಿಷರದ್ದೂ, ಅವರ ನಾಯಿಗಳದ್ದೂ ದಿನ ಲೆಕ್ಕ ಮಾಡಿ ಯಮುನಕ್ಕ. ನಾನಿನ್ನು ಜೈಲಿನಿಂದ ಹೊರಗೆ ಬರುವುದು ಸ್ವತಂತ್ರ ಭಾರತದ ಮಣ್ಣಿಗೇ. ಭಯ ಪಡಬೇಡಿ. ಕೆಲವೇ ದಿನಗಳಲ್ಲಿ ನಾನು ಹೊರಗೆ ಬರುತ್ತೇನೆ."

ಜಯಕಾರ ಹಾಕುತ್ತಿದ್ದ ಜನಸಮೂಹದತ್ತ ನೋಡಿ ಸುಬ್ಬಯಣ್ಣ ಹೇಳಿದರು,

"ಇಂಕ್ವಿಲಾಬ್ ಜಿಂದಾಬಾದ್! ಸಂಪೂರ್ಣ ಸ್ವಾತಂತ್ರ್ಯ ನನ್ನ ಜನ್ಮ ಸಿದ್ಧ ಹಕ್ಕು! ಬೋಲೋ ಭಾರತ್ ಮಾತಾಕೀ ಜೈ!"

"ಬೋಲೋ ಭಾರತ್ ಮಾತಾಕೀ ಜೈ" ಜನಸಮೂಹದ ಒಕ್ಕೊರಳ ಧ್ವನಿ ಮೊಳಗಿತು. ಬಾಯಿಯಿಂದ ಬಾಯಿಗೆ ಹರಡಿದ ಜಯಕಾರದ ಗರ್ಜನೆಗೆ ಮಂಗಳೂರಿನ ಸರಕಾರಿ ಕಚೇರಿಗಳು ನಡುಗತೊಡಗಿದವು.



## ೧೧

## ಜಾತಿ ಕೇದಗೆ ನೀತಿ ಸಂಪಿಗೆ

ಮದ್ರಾಸಿನಲ್ಲಿ ಕಾಂಗ್ರೆಸ್ ಸರಕಾರ ಪ್ರಕಾಶಂ ನೇತೃತ್ವದ ಮಂತ್ರಿಮಂಡಲ ರಚಿಸಿತು. ಮಂಗಳೂರಿನಿಂದ ಕಾರಂತರು ಮಂತ್ರಿಯಾದರು. ಜೈಲಿನಲ್ಲಿದ್ದ ಸ್ವಾತಂತ್ರ್ಯ ಹೋರಾಟಗಾರರನ್ನು ಬಿಡುಗಡೆ ಮಾಡಲಾಯಿತು.

ಸುಬ್ಬಯಣ್ಣನನ್ನೂ ಜೈಲಿನಿಂದ ಬಿಡುಗಡೆಗೊಳಿಸಲಾಯಿತು. ತಿರುಚಿನಾಪಳ್ಳಿ ಜೈಲಿನಿಂದ ಬಿಡುಗಡೆಗೊಂಡಾಗ ಅವರನ್ನು ನೋಡಲು ಯಾರೂ ಬರಲಿಲ್ಲ.ಮದ್ರಾಸಿನಲ್ಲಿದ್ದ ತುಳುನಾಡಿನ ನಾಯಕರಿಗೆ ಒಬ್ಬರಿಗೂ ಅವರ ನೆನಪೇ ಇರಲಿಲ್ಲ. ಅಧಿಕಾರದ ಕುರ್ಚಿ ಹಿಡಿಯುವ ಗಡಿಬಿಡಿಯಲ್ಲಿ ಜೈಲಿನಿಂದ ಹೊರಗೆ ಬಂದ ಸ್ವಯಂಸೇವಕರನ್ನು ಮಾತನಾಡಿಸುವಷ್ಟು ಸಮಯ ಅವರಿಗಿರಲಿಲ್ಲ. ಎಲ್ಲ ಕಾಂಗ್ರೆಸ್ ಪುಢಾರಿಗಳು ಮಂತ್ರಿ ಮಂಡಲದ ಅಧಿಕಾರ ಸ್ವೀಕಾರ ಸಮಾರಂಭದಲ್ಲಿ ಭಾಗವಹಿಸಲು ಮದ್ರಾಸಿಗೆ ಹೋಗಿದ್ದರು. ಜೈಲಿನಲ್ಲಿದ್ದವರನ್ನು ಬಿಡುಗಡೆಗೊಳಿಸುತ್ತಾರೆ ಎಂಬ ಸುದ್ದಿಯನ್ನು ಅವರ ಮನೆಯವರಿಗೆ ತಿಳಿಸಲು ಕೂಡಾ ಯಾರಿಗೂ ನೆನಪಾಗಲಿಲ್ಲ. ಯಾರೋ ಒಬ್ಬರು



ಬಂದು ಒಂದು ರೈಲು ಟಿಕೇಟನ್ನು ಸುಬ್ಬಯಣ್ಣನ ಕೈಗೆ ಕೊಟ್ಟರು. ಸುಬ್ಬಯಣ್ಣ ತಿರುಗಿ ನೋಡದೆ ರೈಲು ಹತ್ತಿ ಮಂಗಳೂರಿನ ಹಾದಿ ಹಿಡಿದರು. ಹಳೆ ಖಾದಿ ಜುಬ್ಬ, ಖಾದಿ ಪಂಚೆ ಧರಿಸಿ, ಹೆಗಲಲ್ಲೊಂದು ಚೀಲ ಹಾಕಿಕೊಂಡು ಮಬ್ಬುಗತ್ತಲಲ್ಲಿ ಮಂಜೇಶ್ವರ ರೈಲು ನಿಲ್ದಾಣದಲ್ಲಿ ಇಳಿದ ಸುಬ್ಬಯಣ್ಣನನ್ನು ಯಾರೂ ಗುರುತು ಹಿಡಿಯಲಿಲ್ಲ. ಮೆಲ್ಲನೆ ಹೆಜ್ಜೆ ಹಾಕುತ್ತಾ ಗೋವಿಂದರ ಮನೆಗೆ ಬಂದಾಗ, ಆ ಸುಕ್ಕುಗಟ್ಟಿದ ದೇಹ, ಅರೆ ನರೆತ ಕೂದಲು, ಉದ್ದಕ್ಕೆ ಬೆಳೆದಿದ್ದ ಗಡ್ಡಮೀಸೆ ನೋಡಿದ ಸುಬ್ರಾಯರ ಮಗಳು, ಯಾರೆಂದು ತಿಳಿಯದೆ ಹೊರಗೆ ನಿಲ್ಲುವಂತೆ ಹೇಳಿ, ''ಯಾರು ಬೇಕೂ?'' ಎಂದು ಕೇಳಿದಳು.

''ಗೋವಿಂದಣ್ಣ!'' ಎಂದು ಹೇಳಿ ಒಳಗೆ ಹೆಜ್ಜೆಯಿಟ್ಟವರನ್ನು ''ಹೊರಗೆ, ಹೊರಗೆ ನಿಲ್ಲಿ'' ಎಂದವಳಿಗೆ, ''ಮಗಳಿಗೆ ಗುರುತು ಸಿಗಲಿಲ್ಲವೇ, ಗೋವಿಂದಣ್ಣ ಇದ್ದಾರೆಯೇ? ಗೋವಿಂದಣ್ಣಾ...'' ಎಂದು ಕರೆಯುತ್ತಾ ಮಾಳಿಗೆ ಹತ್ತಲು ಹೋದರು. ಸುಬ್ರಾಯರ ಮಡದಿ ಸಾವಿತ್ರಮ್ಮ ಬಂದು ''ಇದ್ದಾರೆ, ನೀವ್ಯಾರು?'' ಎಂದು ಕೇಳಿದಾಗ ಮಾಳಿಗೆಯಲ್ಲಿದ್ದ ಗೋವಿಂದರು ಬಂದು ''ಸುಬ್ಬಯಣ್ಣಾ'' ಎಂದು ಕೂಗುತ್ತಾ ಅವರನ್ನು ಅಪ್ಪಿಕೊಂಡರು.

ಸುಬ್ರಾಯರ ಮಡದಿಗೆ ಗಡ್ಡಮೀಸೆ ಹಣ್ಣಾಗಿ, ಮುದುಡಿ ಹೋಗಿ, ಭಿಕ್ಷುಕನಂತಿರುವ ವ್ಯಕ್ತಿಯನ್ನು ಸುಬ್ಬಯಣ್ಣ ಎಂದು ನಂಬಲು ಸಾಧ್ಯವೇ ಆಗಲಿಲ್ಲ. ''ಸುಬ್ಬಯಣ್ಣಾ'' ಎಂದು ಓಡಿ ಬಂದವರು ಅವರ ಕಾಲಿಗೆ ಬಿದ್ದರು.

ಸುಬ್ಬಯಣ್ಣ, ಮಾಳಿಗೆ ಹತ್ತಿ ಗೋವಿಂದರ ಕೋಣೆಯ ಪುಸ್ತಕಗಳ ರಾಶಿಯ ಮಧ್ಯೆ ಬಿದ್ದುಕೊಂಡವರನ್ನು ಮರುದಿನ ಬೆಳಗ್ಗೆ ಹತ್ತು ಗಂಟೆಯವರೆಗೆ ಯಾರೂ ಎಬ್ಬಿಸಲಿಲ್ಲ. ನಿರುಮ್ಮಳವಾಗಿ ಎಲ್ಲವನ್ನೂ ತ್ಯಜಿಸಿದವರಂತೆ ಮಲಗಿದ್ದ ಸುಬ್ಬಯಣ್ಣ ಸುಖವಾದ ನಿದ್ದೆಯಲ್ಲಿ ಮುಳುಗಿ ಬಿಟ್ಟಿದ್ದರು. ಎಚ್ಚರವಾದಾಗ ಗೋವಿಂದರು ಹೇಳಿದರು,

''ನಡು ಮಧ್ಯಾಹ್ನವಾಯಿತು. ಕೆಳಗೆ ಯಮುನಕ್ಕ, ಚಿಕ್ಕಪ್ಪ ರೈಗಳು, ಮಿತ್ತಬೈಲಿನ ಅಳಿಯಂದಿರು, ಯುವಕರು ನಿಮ್ಮನ್ನು ಕಾಯುತ್ತಿದ್ದಾರೆ.''

ಸುಬ್ಬಯಣ್ಣ ತನ್ನ ಬಟ್ಟೆಗಳನ್ನೊಮ್ಮೆ ನೋಡಿಕೊಂಡು ಗೋವಿಂದರ ಮುಖ ನೋಡಿದರು.

''ಈಗ ನೀವು ಕೆಳಗಿಳಿದು ಒಮ್ಮೆ ಅವರಿಗೆಲ್ಲಾ ಮುಖ ತೋರಿಸಿ. ಸ್ನಾನದ ಕೋಣೆಯಲ್ಲಿ ನಿಮಗಾಗಿ ನೀರು ಕಾಯಿಸಿ ಇಟ್ಟಿದ್ದಾರೆ, ಸ್ನಾನ ಮಾಡಿ. ಅಲ್ಲಿಯೇ ಹೊಸ ಖಾದಿ ಅಂಗಿ, ಪಂಚೆ ಇಟ್ಟಿದ್ದಾರೆ. ಅದನ್ನು ಧರಿಸಿಕೊಂಡಿರಾದರೆ ಪೇಟೆಗೂ ಹೋಗಬಹುದು. ಗಡ್ಡ ಮೀಸೆ, ತಲೆಗೂದಲು ಕತ್ತರಿಸಿಕೊಳ್ಳುವಿರಾದರೆ ಕ್ಷೌರಿಕನೂ ಇಲ್ಲೇ ಹೊರಗೆ ನಿಮ್ಮನ್ನು ಕಾಯುತ್ತಿದ್ದಾನೆ. ಜೈಲಿನಲ್ಲಿ ಕಾಫಿ, ಚಹಾದ ಅಭ್ಯಾಸವಾಗಿದ್ದರೆ ಅದೂ ತಯಾರಿದೆ. ಆಶ್ರಮದ ಮಜ್ಜಿಗೆ,ಹಾಲು ಬೇಕಾದರೆ ಅದೂ ಇದೆ. ತುಳುನಾಡಿನ ಕಡುಬು ಮಾಡಿ ಸುಬ್ರಾಯನ ಹೆಂಡತಿ ಸಾವಿತ್ರಿ ಕಾಯುತ್ತಿದ್ದಾಳೆ''.

ಎಂದು ಹೇಳಿದ ಗೋವಿಂದರು ಅವರನ್ನು ಕರೆದುಕೊಂಡು ಚಾವಡಿಗೆ ಬಂದರು.

ಚಾವಡಿ ತುಂಬಾ ಜನ ತುಂಬಿತ್ತು. ಯಮುನಕ್ಕನಿಗೆ ತಮ್ಮನನ್ನು ನೋಡಿ ತನ್ನ ಕಣ್ಣನ್ನೇ ನಂಬಲಾಗಲಿಲ್ಲ. ತಮ್ಮನನ್ನು ಆಲಿಂಗಿಸಿಕೊಂಡು ಬಿಕ್ಕಿ ಬಿಕ್ಕಿ ಅಳತೊಡಗಿದರು.

ಸ್ನಾನ, ಊಟ ಮುಗಿಸಿ ಬಂದ ಸುಬ್ಬಯಣ್ಣನನ್ನು ಪಟ್ಟದ ಗುತ್ತಿಗೆ ಹೋಗೋಣ ಎಂದಾಗ, ಅವರು ಹೇಳಿದರು,

"ಯಮುನಕ್ಕ, ಹಲವು ಊರು ತಿರುಗಿದೆ. ದೇಶಕ್ಕೆ ಬೇಕಾಗಿ ನನ್ನ ಶಕ್ತಿಯನುಸಾರ ದುಡಿದೆ. ಮಿತ್ತಬೈಲಿನ ಯುವಕರಿಗೆ ಎರಡು ತಿಂಗಳ ಒಳಗೆ ಬರುತ್ತೇನೆ ಎಂದು ಮಾತು ಕೊಟ್ಟು ಹೋಗಿದ್ದೆ. ಈಗ ನಾನು ಅವರ ಋಣದಲ್ಲಿದ್ದೇನೆ. ಇನ್ನು ಮುಂದೆ ಸ್ವಲ್ಪ ನನ್ನ ಮನೆಗಾಗಿ ದುಡಿಯಬೇಕೆಂದು ನಿಶ್ಚಯಿಸಿದ್ದೇನೆ. ನನಗೆ ಅಲ್ಲಿಗೆ ಹೋಗಲು ನೀನೂ, ಭಾವನೂ ಒಪ್ಪಿಗೆ ಕೊಡಬೇಕು. ಬನ್ನಿ, ಎಲ್ಲರೂ ಮಿತ್ತಬೈಲಿಗೆ ಹೋಗೋಣ."

ಗೋವಿಂದರ ಒಪ್ಪಿಗೆ ಪಡೆದು ಸುಬ್ಬಯಣ್ಣ ಮಿತ್ತಬೈಲಿಗೆ ಹೊರಟರು.

ಮಿತ್ತಬೈಲಿಗೆ ಬಂದ ಸುಬ್ಬಯಣ್ಣನಿಗೆ ಅಲ್ಲಿಯ ಸ್ಥಿತಿ ಕಂಡು ಆಶ್ಚರ್ಯವಾಯಿತು. ಅಷ್ಟು ದೊಡ್ಡ ಪಚ್ಚೆ ಹಸಿರಿನ ಭೂಮಿ ಪಾಳು ಬಿದ್ದಿತ್ತು. ಮನೆಯ ಸುತ್ತ ಭತ್ತದ ರಾಶಿಗಳಿಲ್ಲದೆ, ಕೋಣಗಳಿಲ್ಲದೆ, ಗದ್ದೆ, ಹಟ್ಟಿ ಖಾಲಿಯಾಗಿ ಬೋಳು ಬೋಳಾಗಿ ಕಾಣುತ್ತಿತ್ತು. ಗುತ್ತಿನ ಮನೆ, ಹುಲಿ ತಿಂದು ಉಳಿದ ಜಾನುವಾರಿನ ದೇಹವನ್ನು ಹೇಗೆ ನರಿ, ತೋಳಗಳು ಎಳೆದಾಡುತ್ತಿರುತ್ತವೋ ಹಾಗೇ ಕಂಡಿತು. ಅಲ್ಲಲ್ಲಿ ಗೋಡೆಗಳು ಜರಿದು ಪಾಳು ಬಿದ್ದಂತೆ ಕಾಣುವ ಮನೆಗೆ ಹುಲ್ಲು ಹೊದೆಸದೆ ಎಷ್ಟು ಕಾಲವಾಗಿತ್ತೋ, ಯಾವ ಕ್ಷಣದಲ್ಲಾದರೂ ಅದು ಕುಸಿಯಬಹುದು ಅನಿಸಿತವರಿಗೆ. ಮನೆಯ ಯುವಕರು, ಮಕ್ಕಳು ಕೇಳುವವರಿಲ್ಲದೆ, ಕೆಲಸವಿಲ್ಲದೆ ಅಲ್ಲಲ್ಲಿ ಬಿದ್ದುಕೊಂಡಿದ್ದರು. ತಮ್ಮ ಮನೆ, ತಮ್ಮ ಭೂಮಿ ಎಂದು ದುಡಿಯುವವರು ಅಲ್ಲಿ ಯಾರೂ ಕಾಣಲಿಲ್ಲ. ಸಿಕ್ಕಿದ ಅಕ್ಕಿ, ಭತ್ತ, ಕಾಯಿಗಳನ್ನು ಕದ್ದು ಮಾರುವುದೇ ಯುವಕರ ಕಸಬಾಗಿ ಬಿಟ್ಟಿತ್ತು. ಇನ್ನು ಕೆಲವರು ರೌಡಿಗಳಂತೆ, ಊರಿನ ದೊಣ್ಣೆನಾಯಕರಂತೆ ತಿರುಗಾಡುತ್ತಿದ್ದರು. ಮನೆಯಲ್ಲಿ ಮೈನೆರೆದು ಹತ್ತು – ಹದಿನೈದು ವರ್ಷಗಳು ಕಳೆದರೂ ಮದುವೆಯಾಗದೆ ಉಳಿದುಕೊಂಡಿದ್ದ ಹೆಣ್ಣು ಮಕ್ಕಳಿಗೆ ಜಗಳವಾಡುವುದೇ ಕೆಲಸವಾಗಿ ಬಿಟ್ಟಿತ್ತು. ಮನೆಯಲ್ಲಿ ಸುಖವಾಗಿ ಮೆರೆಯುತ್ತಿದ್ದದ್ದು ಗುತ್ತಿನ ಯಜಮಾನರ ಹೆಂಡತಿ ಮಕ್ಕಳು ಮಾತ್ರ. ಅವರು ಹೊಸ ಹೊಸ ಸೀರೆ, ಬಟ್ಟೆಯುಟ್ಟು, ಮೈ ತುಂಬಾ ಆಭರಣಗಳನ್ನು ಧರಿಸಿಕೊಂಡು ಉತ್ಸವ, ಆಯನ, ಆಟಕೂಟಗಳಿಗೆ ಹೋಗುತ್ತಿದ್ದರು. ಮನೆಯ ಸೊಸೆಯಂದಿರಿಗೆ ಉಡಲು ಸರಿಯಾದ ಬಟ್ಟೆಗಳಿರಲಿಲ್ಲ. ಮಾವನಲ್ಲಿ ಕೇಳಿದರೆ ಆವಾಚ್ಯ ಬೈಗುಳ, ಅತ್ತೆಯ ತಿರಸ್ಕಾರ.

ನಾಲ್ಕೇ ದಿನಗಳಲ್ಲಿ ಸುಬ್ಬಯಣ್ಣನಿಗೆ ತನ್ನ ಮನೆಯ ಪರಿಸ್ಥಿತಿ ಅರ್ಥವಾಯಿತು. ಅಜಿಲಮಾರಿನಿಂದ ಅಡ್ಕದವರೆಗೆ ಗದ್ದೆಯಲ್ಲಿ ತಿರುಗಾಡಿ ಬಂದ ಸುಬ್ಬಯಣ್ಣನಿಗೆ ಅರ್ಧಕ್ಕರ್ಧ ಭೂಮಿ ತಮ್ಮ ಕೈಬಿಟ್ಟು ಹೋಗಿರುವುದು ಕಂಡು ಹೊಟ್ಟೆಗೆ ಚೂರಿ ಹಾಕಿದಂತಾಯಿತು. ಮದುವೆಯಾಗದೆ ಮನೆಯಲ್ಲಿರುವ ಸೊಸೆಯಂದಿರನ್ನು ಕಂಡು ಎದೆಗೆ



ಕೊಳ್ಳಿ ಇಟ್ಟಂತಾಯಿತು. ಇಬ್ಬರು ತಂಗಿಯರು ಕ್ಷಯ ಹಿಡಿದು ನರಳುತ್ತಿದ್ದರು. ಅವರಿಗೆ ಒಂದು ತೊಟ್ಟು ಕಷಾಯ ಕೂಡಾ ತಂದು ಕೊಡುವವರಿಲ್ಲವೆಂದು ತಿಳಿದಾಗ ಸುಬ್ಬಯಣ್ಣನಿಗೆ ದುಃಖ ತಡೆಯಲಾಗಲಿಲ್ಲ. ಕಳೆದ ಸಲ ಸುಬ್ಬಯಣ್ಣ ಬಂದು ಮಿತ್ತಬೈಲಿನಲ್ಲೇ ಉಳಿಯುತ್ತೇನೆಂದು ಒಪ್ಪಿ, ಮಾತು ಕೊಟ್ಟು ಹೋದ ಮೇಲೆ ಮಾಂಕರಾಲರು ಮಿತ್ತಬೈಲಿನ ಭೂಮಿಯನ್ನು ಹೇಗೆ ಲಗಾಡಿ ತೆಗೆದಿದ್ದಾರೆ ಎಂಬುದನ್ನು ಯುವಕರೆಲ್ಲ ವಿವರಿಸಿದರು.

ಅಜಿಲಮಾರಿನ ಕಾಟಿ ಮೂಲೆಯನ್ನು ಬ್ಯಾರಿಗಳಿಗೆ ವಹಿಸಿ ಕೊಟ್ಟಿದ್ದಾರಂತೆ. ತಮ್ಮ ಹಿರಿಯರು ಸ್ವತಃ ಅಗೆದು ಮಾಡಿದ ಅಡ್ಕದ ಭೂಮಿಯನ್ನು ಕ್ರಿಶ್ಚಿಯನ್ನರಿಗೆ ಅಡಮಾನ ಮಾಡಿದ್ದಾರಂತೆ.

ಪರಿಸ್ಥಿತಿ ಕೈ ಮೀರಿದೆ, ಮಾಂಕರಾಲರಲ್ಲಿ ಲೆಕ್ಕಪತ್ರ ಕೇಳದೆ ಬೇರೆ ದಾರಿಯೇ ಇಲ್ಲ ಎಂದು ಸುಬ್ಬಯಣ್ಣನಿಗೆ ಅನಿಸಿತು. ಪೂವಮ್ಮನ ಚಿನ್ನದ ಹಗರಣ ಅವರಿಗೆ ಮಿತ್ತಬೈಲಿನ ಚಿನ್ನಾಭರಣಗಳು ಹೇಗೆ ಮಾಯವಾಗುತ್ತಿವೆ ಎಂಬುದನ್ನು ತೋರಿಸಿಕೊಟ್ಟಿತು.

ಮಿತ್ತಬೈಲು ಮನೆಯಲ್ಲಿ ಚಿನ್ನಾಭರಣಗಳ ರಾಶಿಯೇ ಇತ್ತು. ಗುತ್ತಿನ ಪೆಠಾರಿಯಲ್ಲಿ ಮಂಜಣಾಳ್ವರ ಕಾಲದ ಚಿನ್ನಾಭರಣಗಳನ್ನು ಪೆಟ್ಟಿಗೆಗಳಲ್ಲಿ ತುಂಬಿಸಿಡಲಾಗಿತ್ತು. ಬಾರಬೈಲಿನಂತಹ ಮನೆಯಲ್ಲಿ ಕಲ್ಯಾಣಪ್ಪನ ಕಾಟುಕಾಯಿ ಪಡೆಯ ಬೀರಣ್ಣ ಬಂಟ ಲೂಟಿ ಮಾಡಿದ್ದ ಕೆಲವು ಚಿನ್ನಾಭರಣಗಳು ಮಿತ್ತಬೈಲಿನ ಪೆಟ್ಟಿಗೆ ಸೇರಿದ್ದವು. ಮಂಜಣಾಳ್ವರಿಗೆ ಊರಿನ ಜನ, ಪೇಟೆಯ ಕೊಂಕಣಿಗಳು, ವ್ಯಾಪಾರದ ಬ್ಯಾರಿಗಳು, ಭಂಡಸಾಲೆಯ ಸೆಟ್ಟಿಗಳು, ಬಹುಮಾನವಾಗಿ ಕೊಟ್ಟಿದ್ದ ಚಿನ್ನದ ಸರಗಳು, ಸುಲ್ತಾನರ ನಾಣ್ಯಗಳು, ರಾಮ ಟಂಕೆಗಳು ಎಲ್ಲವನ್ನೂ ಪೆಟ್ಟಿಗೆಯಲ್ಲಿ ಹಾಕಿ ಪೆಠಾರಿಯಲ್ಲಿಟ್ಟಿದ್ದರು.

ಗಂಡ ತೀರಿ ತವರಿಗೆ ಬಂದ ಹೆಂಗಸರ ಚಿನ್ನಾಭರಣಗಳನ್ನೂ ಮನೆಯ ಪೆಟ್ಟಿಗೆಯಲ್ಲೇ ಇಡುತ್ತಿದ್ದರು.

ಬೆಳ್ಳಿಯ ರೂಪಾಯಿಗಳನ್ನು ಗೋಣಿಗಳಲ್ಲಿ ತುಂಬಿಸಿ ಪೆಠಾರಿಯಲ್ಲಿ ರಾಶಿ ಹಾಕಿದ್ದರು. ಗೋಣಿಗಳಲ್ಲಿರುವ ರೂಪಾಯಿ ಮಜಲೋಡಿಯ ಮನೆ ಖರ್ಚಿಗಾದರೆ, ಕಾಳುಮೆಣಸು, ಕೊಬ್ಬರಿ, ಮಸ್ಕತ್ ಅಕ್ಕಿಗಳನ್ನು ಅರಬಿಗಳಿಗೆ ಮಾರಿದಾಗ ಸಿಗುವ ಹಣ ಚಿನ್ನದ ರೂಪದಲ್ಲಿ ಪೆಠಾರಿ ಸೇರುತ್ತಿತ್ತು.

ಮಿತ್ತಬೈಲಿನಲ್ಲಿ ಚಿನ್ನ ಬೇಕಾಗುವುದು ಮನೆಯ ಹೆಣ್ಣು ಮಕ್ಕಳು ಮದುವೆಯಾಗಿ ಹೋಗುವಾಗ. ಆಗ ಒಬ್ಬೊಬ್ಬ ಹೆಣ್ಣಿಗೂ ಒಂದೊಂದು ಸೇರು ಚಿನ್ನ ಕೊಟ್ಟು ಕಳುಹಿಸುತ್ತಿದ್ದರಂತೆ. ಚಿನ್ನದ ಬಗ್ಗೆ ಹೀಗೆ ನಡೆಸಿಕೊಂಡು ಬಂದ ಧಾರಾಳತನದಿಂದಾಗಿಯೇ ಮಿತ್ತಬೈಲಿನ ಪೆಠಾರಿ ಶಂಖಪಾಲನ ಕೊಪ್ಪರಿಗೆಯಂತೆ ಯಾವತ್ತೂ ಕಮ್ಮಿಯಾಗದೆ ತುಂಬಿ ತುಳುಕುತ್ತಿದೆ ಎನ್ನುವುದು ಊರವರ ನಂಬಿಕೆ.

ಹಾಗಿದ್ದ ಮಿತ್ತಬೈಲಿನ ಚಿನ್ನದ ರಾಶಿಯಿಂದ ಒಂದು ಚಕ್ರಸರ ಮಾಯವಾದ ಘಟನೆ ಒಂದು ದಿನ ಮನೆಯ ಚಾವಡಿಯಲ್ಲಿ ಚರ್ಚೆಗೆ ಬಂತು. ಮನೆಯ ಯುವಕ ನಾರಾಯಣ

ಕೆಳಗಿನ ಅಡ್ಕಕ್ಕೆ ತಿರುಗಾಡಲು ಹೋಗಿದ್ದಾಗ ಐತಪ್ಪನ ಹೆಂಡತಿ ಪೂವಮ್ಮನ ಕೊರಳಲ್ಲಿ ಒಂದು ಚಕ್ರಸರ ನೋಡಿದ. ನೋಡಿದವನೇ ಬಂದು ಸುಬ್ಬಯಣ್ಣನಲ್ಲಿ ಹೇಳಿದ. ಅವರು,

"ಏನು! ಪೂವಮ್ಮನಲ್ಲಿ ಚಕ್ರಸರ ಇರಬಾರದೇ?" ಎಂದು ಕೇಳಿದರು.

"ಇರಬಹುದು ಮಾವಾ. ಆದರೆ ನನ್ನ ತಾಯಿಯ ಕೊರಳಲ್ಲಿದ್ದ ಆ ಚಕ್ರಸರ ಅವಳ ಕೊರಳಲ್ಲಿರಬಾರದು."

"ಅದು ನಿನ್ನ ತಾಯಿಯದ್ದೇ ಎಂದು ನಿನಗೇನು ಗ್ಯಾರಂಟಿ?"

"ಮಾವಾ, ಮಗುವಾಗಿದ್ದಾಗ ಮೊಲೆ ಹಾಲು ಕುಡಿಯುತ್ತಿದ್ದಂದಿನಿಂದ ದೊಡ್ಡವನಾಗಿ, ಅವರು ಮುತ್ತೈದೆತನವನ್ನು ಕಳೆದುಕೊಂಡು ಚಿನ್ನಾಭರಣವನ್ನು ಕಳಚುವವರೆಗೆ ಆ ಚಕ್ರಸರವನ್ನು ನಾನು ದಿನಾ ನೋಡಿದ್ದೇನೆ. ನನಗೆ ಆ ಸರದ ಗುರುತು ಸಿಗದಿದ್ದರೆ ಮತ್ತೆ ಯಾವುದರ ಗುರುತು ಸಿಗಬಹುದು ಹೇಳಿ?"

ಸುಬ್ಬಯಣ್ಣನ ಬಾಯಿ ಬಂದಾಯಿತು. ಅವರಿಗೆ ಮಾಂಕರಾಲರ ಹಾಗೂ ಪೂವಮ್ಮನ ಸಂಬಂಧ ತಿಳಿದಿತ್ತು. ಅವರು ಅವಳಿಗೆ ಹಣ, ಅಕ್ಕಿ, ಭತ್ತ ಕೊಡುತ್ತಿದ್ದಾರೆ ಎಂಬ ದೂರು ಯುವಕರಿಂದ ಬಂದಿತ್ತು. ಆದರೆ ಗುತ್ತಿನ ಚಿನ್ನಾಭರಣಗಳನ್ನು ಇಟ್ಟುಕೊಂಡವಳಿಗೆ ಕೊಟ್ಟಿದ್ದಾರೆ ಎನ್ನುವುದನ್ನು ನಂಬಲು ಸಾಧ್ಯವಾಗಲಿಲ್ಲ.

ಸುಬ್ಬಯಣ್ಣ ಯುವಕರನ್ನು ಕೂಡಿಸಿಕೊಂಡು ಕೆಳಗಿನ ಅಡ್ಕಕ್ಕೆ ಐತಪ್ಪನ ಮನೆಗೆ ಹೋದರು. ಪೂವಮ್ಮನಲ್ಲಿ ಮಾಂಕರಾಲ ಅವಳಿಗೆ ಕೊಟ್ಟಿದ್ದ ಚಕ್ರಸರವನ್ನು ಕೇಳಿದರು. ಪೂವಮ್ಮ ತನ್ನಲ್ಲಿ ಯಾವ ಸರವೂ ಇಲ್ಲ ಎಂದಳು. ಯುವಕರು ಪೊಲೀಸರನ್ನು ಕರೆಸುತ್ತೇವೆ ಎಂದು ಬೆದರಿಸಿದಾಗ ಐತಪ್ಪ ಒಳಗಿಂದ ಬಟ್ಟೆಯಲ್ಲಿ ಕಟ್ಟಿಟ್ಟಿದ್ದ ಚಕ್ರಸರವನ್ನು ತಂದುಕೊಟ್ಟು ಹೇಳಿದ,

"ನಮಗೆ ಇದು ಗುತ್ತಿನ ಮನೆಯ ಸೊತ್ತೆಂದು ತಿಳಿದಿರಲಿಲ್ಲ ಸ್ವಾಮಿ."

"ಈಗ ತಿಳಿಯಿತಲ್ಲಾ, ಮಿತ್ತಬೈಲಿನ ಬೇರೆ ಯಾವ ವಸ್ತುಗಳಿದ್ದರೂ ತಂದು ಕೊಡಿ. ಪೊಲೀಸರು ಬಂದು, ಅವರಿಂದ ಒದೆ ತಿಂದು, ಜೈಲು ಕಂಬಿ ಎಣಿಸುವ ಮೊದಲೇ ತಂದು ಕೊಡುವುದು ನಿಮಗೆ ಒಳಿತು."

ಯುವಕರು ಗದರಿಸಿದಾಗ ಐತಪ್ಪ ಒಳಗಿಂದ ಮತ್ತೊಂದ ಬಟ್ಟೆಯ ಗಂಟು ತಂದು ಕೊಟ್ಟ. ಗಂಟು ಬಿಡಿಸುವಾಗ ಅದರಲ್ಲಿ ಐನೂರು ಬೆಳ್ಳಿಯ ರೂಪಾಯಿಗಳು, ನಾಲ್ಕು ಚಿನ್ನದ ಪವನುಗಳೂ ಇದ್ದವು. ಸುಬ್ಬಯಣ್ಣ ಯುವಕರ ಮುಖ ನೋಡಿದಾಗ ಅವರ ಕಣ್ಣುಗಳಲ್ಲಿ ಬೆಂಕಿಯ ಜ್ವಾಲೆ ಅರಳುತ್ತಿತ್ತು. ಆ ರೋಷ ಪೂವಮ್ಮನ ಮೇಲಲ್ಲ, ತಮ್ಮ ಗುತ್ತಿನ ಯಜಮಾನ ಮಾಂಕರಾಲರ ಮೇಲೆ. ಇಟ್ಟುಕ್ಕೊಂಡವಳಿಗೆ ಮನೆಯ ಹೆಂಗಸರ ಚಿನ್ನಾಭರಣಗಳನ್ನು ತಂದು ಕೊಟ್ಟಿರುವುದೇ ಅವರ ಕೋಪಕ್ಕೆ ಕಾರಣ.

ಸುಬ್ಬಯಣ್ಣ ಬೆಳ್ಳಿ ರೂಪಾಯಿಗಳನ್ನೂ, ಚಿನ್ನದ ಪವನುಗಳನ್ನೂ ಪೂವಮ್ಮನಿಗೇ ಕೊಟ್ಟು, ಚಕ್ರಸರವನ್ನು ತೆಗೆದುಕೊಂಡರು. ಐತಪ್ಪನಲ್ಲಿ ಬೆಳಗಾಗುವುದರೊಳಗೆ ಮನೆ ಖಾಲಿ



ಮಾಡುವಂತೆ ಹೇಳಿದರು. ಯುವಕರು, ನಾಳೆಯಿಂದ ಅವರು ಈ ಮನೆಯಲ್ಲಿದ್ದರೆ ಮನೆಗೆ ಬೆಂಕಿ ಇಡುತ್ತೇವೆ ಎಂದಾಗ ಐತಪ್ಪ ಹಾಗೂ ಪೂವಮ್ಮ ಸುಬ್ಬಯಣ್ಣನ ಕಾಲಿಗೆ ಬಿದ್ದರು.

ಸುಬ್ಬಯಣ್ಣ ಮನೆ ತಲುಪಿದಾಗ ಮಾಂಕರಾಲರು ಮನೆಯಲ್ಲಿರಲಿಲ್ಲ. ಮಂಜೇಶ್ವರಕ್ಕೆ ಹೋಗಿದ್ದಾರೆಂದು ತಿಳಿಯಿತು. ಯುವಕರನ್ನು ಕರೆದು, ಸಂಜೆ ಮಾಂಕರಾಲರು ಬರುವ ಹೊತ್ತಿಗೆ ಪೂವಮ್ಮನನ್ನೂ ಐತಪ್ಪನನ್ನೂ ಕರೆತರಲು ಹೇಳಿದರು. ತಂಗಿ ಸೀತುವನ್ನೂ, ಮಾಂಕರಾಲರ ಮಡದಿ ಮಮ್ಮಕ್ಕತ್ತೆಯನ್ನೂ ಕರೆದು ಚಕ್ರಸರ ತೋರಿಸಿದಾಗ ಅವರಿಗೆ ಆಶ್ಚರ್ಯವಾಯಿತು.

"ಈ ಸರದ ಗುರುತು ಸಿಕ್ಕಿತೇ?" ಎಂದು ಸುಬ್ಬಯಣ್ಣ ಕೇಳಿದಾಗ,

"ಗುರುತು ಸಿಗದೆ ಏನು? ಅತ್ತೆಯೂ ತಾಯಿಯೂ ಅದನ್ನು ಪೆಠಾರಿಯಲ್ಲಿ ಇಟ್ಟಿದ್ದರು. ಅವರಿಗೆ ತಿಳಿದಿದೆ ಅದು ನನ್ನದೆಂದು. ನನ್ನ ಮದುವೆಯ ಸಂದರ್ಭದಲ್ಲಿ ಕೊಟ್ಟ ಚಕ್ರಸರ ಅದು, ನಿಮ್ಮ ಕೈಗೆ ಹೇಗೆ ಬಂತು?"

ಸೀತು ಕೇಳಿದಾಗ ಸುಬ್ಬಯಣ್ಣ ಅತ್ತೆಯ ಮುಖ ನೋಡಿದರು. ಅವರ ಮುಖ ತಗ್ಗಿತು.

"ಪೂವಮ್ಮನ ಕೊರಳಿನಿಂದ ಎಳೆದು ತಂದದ್ದು ಇದು"

ಸುಬ್ಬಯಣ್ಣ ಹೇಳಿದಾಗ ಅತ್ತೆ ಮಮ್ಮಕ್ಕನಿಗೆ ಅರ್ಥವಾಯಿತು. ಅವರು ಮಾತನಾಡದೆ ತಲೆ ತಗ್ಗಿಸಿ ಒಳಗೆ ಹೋದರು. ಚಕ್ರಸರವನ್ನು ತಂಗಿಯ ಕೈಗೆ ಕೊಟ್ಟು, ಮಾಂಕರಾಲ ಬಂದ ಕೂಡಲೇ ತನ್ನನ್ನು ಕರೆಯುವಂತೆ ಯುವಕರಿಗೆ ಹೇಳಿ ಬೈಲು ಇಳಿದರು.

ಗದ್ದೆ ಬದುವಿನ ಗರಡಿಯ ಕಟ್ಟೆಯಲ್ಲಿ ಕುಳಿತ ಸುಬ್ಬಯಣ್ಣನಿಗೆ ಪಶ್ಚಾತ್ತಾಪವಾಯಿತು. ತಾನು ಇಷ್ಟು ದಿನ ಮಿತ್ತಬೈಲಿನ ವಿಚಾರದಲ್ಲಿ ಅಸಡ್ಡೆ ತೋರಿಸಿ ಅದರ ಸರ್ವನಾಶಕ್ಕೆ ಕಾರಣ ನಾದೆನೋ ಎಂದೆನಿಸಿತು. ಯೋಚಿಸುತ್ತಾ ಕಲ್ಲಿನ ಮಂಚದ ಮೇಲೆ ಬಿದ್ದುಕೊಂಡವರಿಗೆ ಯುವಕರು ಬಂದು ಕರೆದಾಗಲೇ ಎಚ್ಚರವಾದುದು.

"ಮಾವಾ, ಮಾಂಕು ಮಾವ ಬಂದಿದ್ದಾರೆ. ಪೂವಮ್ಮನೂ, ಐತಪ್ಪನೂ ಬಂದು ಅಂಗಳದಲ್ಲಿದ್ದಾರೆ. ಅಲ್ಲಿ ಮಾಂಕು ಮಾವನ ಒಡ್ಡೋಲಗ ನಡೆಯುತ್ತಿದೆ!"

ಸುಬ್ಬಯಣ್ಣ ಅಂಗಳಕ್ಕೆ ಬಂದಾಗ ಮಾಂಕರಾಲರ ನಾಟಕ ಮುಗಿಯುತ್ತಾ ಬಂದಿತ್ತು.

"ಸುಬ್ಬಯಾ, ಎಲ್ಲಿಗೆ ಹೋಗಿದ್ದೆ ನೀನು? ಇಂದು ಈ ಹಾದರಕ್ಕೆ ಹುಟ್ಟಿದ ಬೇವರ್ಸಿ ಸೂಳೇಮಕ್ಕಳನ್ನು ಹಿಡಿದು ಬಹಳ ಒಳ್ಳೆಯ ಕೆಲಸ ಮಾಡಿದಿ. ನೀನು ಇವರಿಗೆ ನಾಳೆಯವರೆಗೆ ಸಮಯ ಕೊಟ್ಟಿದ್ದಿಯಂತೆ. ನಾನು ಇವರಿಗೆ ಇಂದೇ ಮನೆ ಬಿಟ್ಟು ಹೊರಡಬೇಕೆಂದು ಹೇಳಿದ್ದೇನೆ. ಇವರನ್ನು ಹೀಗೇ ಬಿಡಬಾರದಿತ್ತು. ಪೊಲೀಸರಿಗೆ ಕೊಡಬೇಕಾಗಿತ್ತು. ನೀನು ಗಾಂಧೀಜಿಯ ಶಿಷ್ಯ. ಎಲ್ಲದರಲ್ಲೂ ಅಹಿಂಸೆ, ಶಾಂತಿ ಎನ್ನುತ್ತಿ. ಅದೆಲ್ಲ ಇವರಿಗೆ ತಿಳಿಯಲಾರದು. ಇವರು ನಿನ್ನ ಒಳ್ಳೆಯತನವನ್ನು ದುರುಪಯೋಗ ಮಾಡುತ್ತಿದ್ದಾರೆ. ನಾನಾಗಿದ್ದರೆ ಕಂಬಕ್ಕೆ ಕಟ್ಟಿ ಹಾಕಿ ಚರ್ಮ ಸುಲಿಯುತ್ತಿದ್ದೆ, ಆದರೆ ನಿನ್ನ ಮಾತಿಗೆ ನಾನು

ಎದುರು ಮಾತನಾಡುವುದಿಲ್ಲ, ನೀನು ಇವರಿಗೆ ಕೊಟ್ಟ ಸೊತ್ತುಗಳನ್ನು ತೆಗೆದುಕೊಂಡು ಈಗಲೇ ಇವರು ಹೊರಡಬೇಕು. ನಿನ್ನ ಮಾತಿಗೊಂದು ಬೆಲೆ ಕೊಡುತ್ತಿದ್ದೇನೆ.''

''ನಾನು ಕೊಟ್ಟ ಸೊತ್ತಲ್ಲ ಯಜಮಾನರೇ, ನೀವು ಕೊಟ್ಟ ಸೊತ್ತು. ನಾನು ಬಿಟ್ಟದ್ದು ಅಷ್ಟೇ''

''ಅದೇ ಅದೇ, ನೀನು ಬಿಟ್ಟ ಸೊತ್ತು. ಸುಬ್ಬಯ್ಯಣ್ಣನ ಮಾತಿಗೆ ಯಾರೂ ಅಡ್ಡಿಪಡಿಸ ಬಾರದು. ಎಷ್ಟಾದರೂ ಆತ ಗಾಂಧೀಜಿಯ ಜನ.''

ಮಾಂಕರಾಲರ ಮಾತು ಕೇಳಿದ ಯಾರಿಗಾದರೂ ಅವರು ಸುಬ್ಬಯ್ಯಣ್ಣನ ಮಾತಿಗೆ ಬಹಳ ಬೆಲೆ ಕೊಡುತ್ತಾರೆ ಎಂದೆನಿಸಬೇಕು. ಅವರು ಬೆಣ್ಣೆಯಿಂದ ನೂಲು ಎಳೆದು ತೆಗೆದಂತೆ ಮಾತನಾಡುತ್ತಿದ್ದರು. ಯುವಕರು ಗುಸುಗುಸು ಮಾತನಾಡುವಾಗ ಸುಬ್ಬಯ್ಯಣ್ಣ ಕೇಳಿದರು,

''ಪೂವಮ್ಮ, ಈ ಚಕ್ರಸರ ನಿನ್ನ ಕೈಗೆ ಹೇಗೆ ಬಂತು ಎಂಬ ಸತ್ಯವನ್ನು ಹೇಳು ನೋಡೋಣ. ಮಿತ್ತಬೈಲಿನ ಹಿರಿಯರು, ಕಿರಿಯರು ಅವರ ಮನೆಯ ವಸ್ತುಗಳು ಹೇಗೆ ಹೋದವು ಎಂಬುದನ್ನು ತಿಳಿದುಕೊಳ್ಳಲಿ'' ಎಂದು ಸುಬ್ಬಯ್ಯಣ್ಣ ಹೇಳಿದಾಗ, ಮಾಂಕರಾಲ ಪೂವಮ್ಮನಿಗೆ ಮಾತನಾಡಲು ಬಿಡದೆ,

''ಸುಬ್ಬಯ್ಯ, ಅದೆಲ್ಲ ಮತ್ತೆ ವಿಚಾರಿಸಿಕೊಳ್ಳೋಣ. ಈ ಸೂಳೆಮಕ್ಕಳು ಈಗ ಹೋಗಿ ಮನೆ ಖಾಲಿ ಮಾಡಲಿ. ನಾಯಿ ಮಗನೇ, ಓಡುತ್ತಿಯಾ ಅಲ್ಲ ಒದೆಯಬೇಕಾ?''

ಐತಪ್ಪನೂ, ಪೂವಮ್ಮನೂ ತಿರುಗಿ ನೋಡದೆ ಅಂಗಳ ಇಳಿದರು. ತಡೆಯಲು ಬಂದ ಯುವಕರನ್ನು ಸುಬ್ಬಯ್ಯಣ್ಣ ಸಮಾಧಾನಿಸಿದರು. ಅಂಗಳದಲ್ಲಿ ಸೇರಿದ್ದ ಯುವಕರನ್ನು ನೋಡಿ ಮಾಂಕರಾಲರು ಒಂದು ನಾಟಕವಾಡಿದ್ದರು,

''ಸುಬ್ಬಯ್ಯ, ಈ ಚಿನ್ನ, ಹಣದ ಪೆಟ್ಟಿಗೆಯಲ್ಲದೆ, ಪೆಠಾರಿಯ ಬೀಗದ ಕೈ ಗೊಂಚಲು ಇಂದಿನಿಂದ ನಿನ್ನ ಬಳಿಯೇ ಇರಲಿ'' ಎಂದು ಗೊಂಚಲನ್ನು ಸುಬ್ಬಯ್ಯಣ್ಣನಿಗೆ ಕೊಡಲು ಹೋದಾಗ ಸುಬ್ಬಯ್ಯಣ್ಣ ಹೇಳಿದರು,

''ಬೇಡ ಮಾವಾ, ಈಗ ಅದು ನಿಮ್ಮಲ್ಲಿಯೇ ಇರಲಿ. ಕುಟುಂಬದ ಎಲ್ಲರ ಮುಂದೆ, ಪೆಠಾರಿಯಲ್ಲಿದ್ದ ಎಲ್ಲದರ ಲೆಕ್ಕಪತ್ರ ಕೊಡಬೇಕು ನಮಗೆ''

''ಹೌದೌದು! ಅದನ್ನೊಮ್ಮೆ ಲೆಕ್ಕ ಮಾಡಿ ನಿಮ್ಮ ಕೈಗೆ ಒಪ್ಪಿಸಿ ಬಿಟ್ಟರೆ ನನ್ನ ಮೇಲೆ ಬರುವ ಅಪವಾದ ಕಡಿಮೆಯಾಗಬಹುದು. ನಾನು ಕೆಲವೇ ದಿನಗಳಲ್ಲಿ ಅದನ್ನೆಲ್ಲ ನಿನಗೆ ವಹಿಸಿಕೊಂಡಬೇಕೆಂದಿದ್ದೆ. ನನಗೂ ಪ್ರಾಯವಾಯಿತು ನೋಡು. ಅಲ್ಲದೆ, ಇನ್ನು ಮುಂದೆ ಮಿತ್ತಬೈಲಿನ ಯಾಜಮಾನ್ಯ ವಹಿಸುವವನು ನೀನೇ ಅಲ್ಲವೇ''

ಮಾಂಕರಾಲರು ಅಷ್ಟು ಹೇಳಿ ಉಗ್ರಾಣಿಯಲ್ಲಿ, ಪಟೇಲತನದ ಪುಸ್ತಕಗಳನ್ನೆಲ್ಲ ಶಾನುಭೋಗರ ಮನೆಗೆ ತಲುಪಿಸುವಂತೆ ಹೇಳಿ ಅಂಗಳದ ಮೆಟ್ಟಲಿಳಿದರು. ಆಗ ಮಡದಿ ಮಮ್ಮಕ್ಕೆ ಕರೆದು ಹೇಳಿದರು,

''ನಾನೂ, ಮಕ್ಕಳೂ ಕಜೆಕೋಡಿಗೆ ಹೋಗಿ ಬರುತ್ತೇವೆ.''



ಅವರಿಗೆ, ಇಂದು ತಾನು ಮಿತ್ತಬೈಲಿನಲ್ಲಿರುವುದು ಸರಿಯಲ್ಲ, ಮಿತ್ತಬೈಲಿನ ಯುವಕರು ಆಕ್ರೋಶಗೊಂಡಿದ್ದಾರೆ ಎಂಬ ಭಯವಿತ್ತು.

''ಹಾಂ, ಬೇಕಾದರೆ ಅಮ್ಮಣನನ್ನೂ ಕರೆದುಕೊಂಡು ಹೋಗು. ನಾನು ಅವನನ್ನು ಕಳುಹಿಸಿಕೊಡುತ್ತೇನೆ.''

ಅಮ್ಮಣ ಮಾಂಕರಾಲರ ಖಾಸಾ ವ್ಯಕ್ತಿ. ಅಲ್ಲದೆ ಭೂತದ ಪಾತ್ರಿ. ಹಾಗಾಗಿ ಕಜೆಕೋಡಿಗೆ ಹೆಂಡತಿ ಮಕ್ಕಳನ್ನು ಬಿಟ್ಟು ಬರಲು ಅವನೇ ಸೂಕ್ತ ವ್ಯಕ್ತಿ. ಮಾಂಕರಾಲರು ಬೈಲಿಗೆ ಇಳಿದ ಕೂಡಲೇ ಸುಬ್ಬಯ್ಯಣ್ಣನೂ ಹೊರಟರು.

ಪಟ್ಟದ ಗುತ್ತಿಗೆ ಹೋಗಿ ಯಮುನಕ್ಕನಿಗೆ ವಿಷಯವೆಲ್ಲ ತಿಳಿಸಬೇಕು. ಅಕ್ಕನೂ, ಭಾವನೂ ಮಿತ್ತಬೈಲಿಗೆ ಬಂದು ಮಾಂಕರಾಲರಲ್ಲಿ ಲೆಕ್ಕಪತ್ರ ಕೇಳಬೇಕು. ಅಲ್ಲದೆ ಈ ಬಾರಿ ವಿಷುವಿಗೆ ಬರುವಾಗ ಮಕ್ಕಳನ್ನೂ ಕರೆದುಕೊಂಡು ಬಂದು ಮಿತ್ತಬೈಲಿನಲ್ಲೇ ಉಳಿಯಬೇಕು. ಮಿತ್ತಬೈಲಿನ ಯಜಮಾನಿಕೆಯನ್ನು ವಹಿಸಿಕೊಳ್ಳಲು ಯಮುನಕ್ಕ ತಯಾರಿರಬೇಕೆಂದು ಒಪ್ಪಿಸಲು ಸುಬ್ಬಯ್ಯಣ್ಣ ಪಟ್ಟದ ಗುತ್ತಿನ ದಾರಿ ಹಿಡಿದರು.

ಸುಬ್ಬಯ್ಯಣ್ಣ ಪಟ್ಟದ ಗುತ್ತಿಗೆ ಹೊರಟಾಗ, ಯುವಕರು ಬೋಳಂಗಳದ ಪದವಿಗೆ ಮಂಗಳೂರು ಮೇಳದ ಆಟ ನೋಡಲು ಹೊರಟರು.

ಪಟ್ಟದ ಗುತ್ತಿಗೆ ಬಂದ ಸುಬ್ಬಯ್ಯಣ್ಣ, ಅಕ್ಕನನ್ನೂ, ಅಳಿಯಂದಿರನ್ನೂ ಎದುರು ಕುಳ್ಳಿರಿಸಿ, ಭಾವ ಚಿಕ್ಕಪ್ಪ ರೈಗಳಿಗೆ ಮಿತ್ತಬೈಲಿನ ಎಲ್ಲ ವಿಷಯಗಳನ್ನು ವಿವರಿಸಿದರು. ಮಿತ್ತಬೈಲಿನ ಸಂಪತ್ತಿನ ಲೆಕ್ಕ ಹಾಕಿಕೊಂಡಿದ್ದ ಅಳಿಯಂದಿರಿಗೆ ಸುಬ್ಬಯ್ಯಣ್ಣನ ಮಾತು ಕೇಳಿ ತಾವು ನಿಂತ ಭೂಮಿಯೇ ಬಾಯಿ ಬಿಟ್ಟು ತಮ್ಮನ್ನು ನುಂಗುತ್ತಿರುವಂತೆ ಭಾಸವಾಯಿತು. ಚಿಕ್ಕಪ್ಪ ರೈಗಳಿಗೆ ಬಾರಬೈಲಿನ ತ್ಯಾಂಪಣ್ಣನೂ, ಕಜೆಕೋಡಿಯ ಯುವಕರೂ ಮಿತ್ತಬೈಲಿನಲ್ಲಿ ಮೆರೆಯುತ್ತಿದ್ದಾರೆ ಎಂದು ತಿಳಿದು ಆಶ್ಚರ್ಯವಾಯಿತು. ಯಾರೂ ಇಲ್ಲದ ಹೊತ್ತಲ್ಲಿ ಮನೆಯ ಹೆಣ್ಣು ಮಕ್ಕಳ ಮೇಲೆ ಕೈ ಹಾಕಲು ಬಾರಬೈಲಿನವರು ಹಾಗೂ ಕಜೆಕೋಡಿ ಯವರು ಯತ್ನಿಸುತ್ತಿದ್ದಾರೆ ಎಂದು ತಿಳಿದು ಯಮುನಕ್ಕನ ರಕ್ತ ಕುದಿಯತೊಡಗಿತು. ಅವರು ಈ ಬಾರಿ ವಿಷು ಹಬ್ಬಕ್ಕೆ ಹೋದಾಗ ಮಿತ್ತಬೈಲಿನಲ್ಲೇ ಇದ್ದು ಬಿಡುವುದು ಎಂದು ತೀರ್ಮಾನಿಸಿ ಮಲಗಲು ಹೋದವರಿಗೆ, ಅಂಗಳದಲ್ಲಿ ಜೋರಾಗಿ ನಾಯಿ ಬೊಗಳುತ್ತಿರುವುದೂ, ಯಾರೋ 'ಅಣ್ಣಾ-ಅಣ್ಣಾ' ಎಂದು ಕರೆಯುತ್ತಿರುವುದೂ ಕೇಳಿ ಆಶ್ಚರ್ಯವಾಯಿತು. ಯಮುನಕ್ಕನೂ ಚಿಕ್ಕಪ್ಪ ರೈಗಳೂ ಉಪ್ಪರಿಗೆಯಿಂದ ಚಿಮಣಿ ದೀಪ ಹಿಡಿದುಕೊಂಡು ಚಾವಡಿಗೆ ಬಂದಾಗ ರಾಮಣ್ಣ, ದುಗ್ಗಪ್ಪ ಮತ್ತು ಸುಬ್ಬಯ್ಯಣ್ಣ ಅಂಗಳದಲ್ಲಿ ಮಿತ್ತಬೈಲಿನ ನಾರಾಯಣ ಮತ್ತು ಇಬ್ಬರು ಕೆಲಸದವರ ಜೊತೆ ಮಾತನಾಡುತ್ತಿದ್ದರು.

''ನಾವು ಬೋಳಂಗಳದ ಪದವಿನಲ್ಲಿ ಬಯಲಾಟ ನೋಡುತ್ತಿದ್ದಾಗ, ನಾರಾಯಣ ನಮ್ಮನ್ನು ಹುಡುಕಿಕೊಂಡು ಬಂದು ಹೇಳಿದ ಸುದ್ದಿ ಕೇಳಿ ನಾವು ಇಲ್ಲಿಗೆ ಓಡಿ ಬಂದೆವು'' ಎಂದು ಯುವಕರು ಸುದ್ದಿಯನ್ನು ವಿವರಿಸತೊಡಗಿದರು.

ಮಿತ್ತಬೈಲಿನಲ್ಲಿ ಅಂದು ಸಂಜೆ ಮಾಂಕರಾಲ ಆಡಿದ ನಾಟಕದ ಬಗ್ಗೆಯೇ ಎಲ್ಲರೂ ಮಾತನಾಡಿಕೊಳ್ಳುತ್ತಿದ್ದರು. ಅತ್ತೆಯ ಮಕ್ಕಳು ಅಮ್ಮಣನನ್ನು ಕರೆದುಕೊಂಡು ಕಜಕೋಡಿಗೆ ಹೊರಡುವಾಗ ಯಾರೋ ಯುವಕರು ಕೇಳಿದರಂತೆ,

''ಅತ್ತೇ, ನೀವು ಇನ್ನು ಇಲ್ಲಿಗೆ ಬರುವುದಿಲ್ಲವೇ?'' ಎಂದು. ಅತ್ತೆ ತಿರುಗಿ ದುರುಗುಟ್ಟಿ ನೋಡಿ, ಧಡ ಧಡನೆ ನಡೆ ಇಳಿದು ಹೋದಾಗ, ಯುವಕರು ಬಯಲಾಟಕ್ಕೆ ಹೊರಟರಂತೆ. ಆಗಲೇ ಮಂಜೇಶ್ವರಕ್ಕೆ ಹೋಗಿದ್ದ ಕಿನ್ಯನ ಬಂದು ತಲುಪಿದನಂತೆ. ಅವನು ಎಲ್ಲರನ್ನೂ, ''ನೀವು ಬಯಲಾಟಕ್ಕೆ ಹೋಗಿ, ನಾನು ಊಟ ಮಾಡಿ ಬರುತ್ತೇನೆ'' ಎಂದು ಕಳುಹಿಸಿದನಂತೆ. ಊಟಕ್ಕೆ ಕುಳಿತ ಕಿನ್ಯನನಿಗೆ ಚಿಕ್ಕಮ್ಮ ಚಕ್ರಸರ ತೋರಿಸಿ ಅಂದು ನಡೆದ ಘಟನೆಯನ್ನೆಲ್ಲ ವಿವರಿಸಿದರಂತೆ.

ಕಿನ್ಯನ, ಕತ್ತಲೆಯಲ್ಲಿ ಒಬ್ಬನೇ ಹೋಗುವುದು ಬೇಡವೆಂದು ಕೇರಿಗೆ ಹೋಗಿ ತುಕ್ರನನ್ನು ಕರೆದುಕೊಂಡು ಬೋಳಂಗಳಕ್ಕೆ ಹೊರಡುವಾಗ ಸ್ವಲ್ಪ ತಡವಾಯಿತು. ಬೈಲಿನಿಂದ ಹೊಳೆಗೆ ಇಳಿಯುವಾಗ ದೂರದಲ್ಲಿ ಯಾರೋ ಪಂಜು, ಲಾಟೀನು ಹಿಡಿದುಕೊಂಡು ಮಿತ್ತಬೈಲಿನತ್ತ ಬರುವುದು ಕಾಣಿಸಿತು. ಬೈಲಿನಲ್ಲಿ ಯಾರೋ ಸಿಳ್ಳು ಹಾಕಿ ಅವರನ್ನು ಹೊಳೆಯಲ್ಲಿ ಭೇಟಿಯಾದುದು ಕಂಡಿತು. ದಿಣ್ಣೆಯ ಬದಿಯಲ್ಲಿ ಅಡಗಿ ಕುಳಿತಿದ್ದ ಕಿನ್ಯನನೂ, ತುಕ್ರನೂ ದೊಣ್ಣೆ, ಕತ್ತಿ ಹಿಡಿದುಕೊಂಡು ಮಿತ್ತಬೈಲಿನತ್ತ ಹೋಗುತ್ತಿದ್ದ ಗುಂಪನ್ನು ನೋಡಿ ತಿರುಗಿ ಕೇರಿಯತ್ತ ಓಡಿದರಂತೆ. ಕೇರಿಯಲ್ಲಿಂದ ನಾಲ್ಕೈದು ಕೆಲಸದವರನ್ನು ಕರೆದುಕೊಂಡು ಮಿತ್ತಬೈಲಿನ ಅಂಗಳಕ್ಕೆ ಇಳಿದರು. ದಾರಿಯಲ್ಲಿ ಸಿಕ್ಕಿದ ಬೇಲಿಯ ಗೂಟ, ಹಾರೆ, ಗುದ್ದಲಿಗಳ ಹಿಡಿಗಳನ್ನು ಹಿಡಿದುಕೊಂಡು ಕಟ್ಟಹುಣಿಯಲ್ಲಿ ಬರುವಾಗ ಗರಡಿಯ ಕಟ್ಟೆಯಲ್ಲಿ ಅಡಗಿ ಕುಳಿತಿದ್ದ ಇಬ್ಬರು ಕಳ್ಳರು ಕಣ್ಣಿಗೆ ಬಿದ್ದರು. ತುಕ್ರನವರು ಅವರನ್ನು ಹಿಡಿದು ಬಡಿದಾಗ 'ಅಯ್ಯಯ್ಯಪ್ಪೊ' ಎಂದು ಕಿರುಚುತ್ತಾ ಬಿದ್ದರಂತೆ. ಕಿನ್ಯನನವರು ಅವರು ಉಟ್ಟಿದ್ದ ಬಟ್ಟೆಯನ್ನೇ ಅವರ ಬಾಯಿಗೆ ತುರುಕಿ, ಕೈಕಾಲು ಕಟ್ಟಿ ಹಾಕುವಾಗ, ಅಂಗಳದಲ್ಲಿ ತುಕ್ರನವರಿಗೂ ಕಜೆಕೋಡಿಯ ಗುಂಪಿಗೂ ಮಾರಾಮಾರಿ ನಡೆಯುತ್ತಿತ್ತು. ಕಿನ್ಯನ ಚಾವಡಿಗೆ ಬಂದು ತಲುಪಿದಾಗ ಒಬ್ಬ ಯುವಕ ಪೆಠಾರಿಯ ಬಾಗಿಲು ತೆರೆದು ಅದರೊಳಗೆ ತಲೆ ಹಾಕಿದ್ದ. ಕಿನ್ಯನ ಅವನನ್ನೆತ್ತಿ ಪೆಠಾರಿಯ ಒಳಗೆ ಹಾಕಿ ಬಾಗಿಲು ಮುಚ್ಚಿದ. ಚಾವಡಿಯ ಒಳಗಿನ ಕೋಣೆಗೆ ಹೋಗುವ ಬಾಗಿಲನ್ನು ಮುಚ್ಚಿ ಚಿಲಕ ಹಾಕಿಬಿಟ್ಟಿದ್ದರು. ಒಳಗಿಂದ ಬಾಗಿಲು ಬಡಿಯುವ ಶಬ್ದ ಕೇಳಿ ಬರುತ್ತಿತ್ತು. ಕಿನ್ಯನ ಚಿಲಕ ತೆಗೆದು ಬಾಗಿಲು ತೆರೆದಾಗ ಒಳಗಿಂದ ಹೆಂಗಸರು ಕತ್ತಿ ಹಿಡಿದುಕೊಂಡು ಹೊರಬಂದರು. ಮಾಂಕರಾಲರ ತಮ್ಮ ಮೈಂದರಾಲರು ಉಪ್ಪರಿಗೆಯಿಂದ ಕೈಯಲ್ಲೊಂದು ದೊಣ್ಣೆ ಹಿಡಿದುಕೊಂಡು ಇಳಿದು ಬಂದರು.

''ಯಾರೂ ಹೊರಗೆ ಬರಬೇಡಿ. ಇವರನ್ನು ನಾವು ನೋಡಿಕೊಳ್ಳುತ್ತೇವೆ'' ಎನ್ನುತ್ತಾ ಕಿನ್ಯನ ಚಾವಡಿಯಿಂದ ಅಂಗಳಕ್ಕಿಳಿದಾಗ ಕೆಲಸದವರು ಎರಡು, ಮೂರು ಮಂದಿಯನ್ನು



ಹಿಡಿದಿಟ್ಟಿದ್ದರು. ಅವರಲ್ಲೊಬ್ಬ ಕಜೆಕೋಡಿಯ ಯುವಕ ಕಾಂತಪ್ಪ. ಅವನಿಗೆ ಗಾಯವಾಗಿತ್ತು. ಅವನನ್ನು ಕೆಲವರು ಬಿಡಿಸಿ ಎತ್ತಿಕೊಂಡು ಕಟ್ಟಹುಣಿಯಲ್ಲಿ ಓಡುವಾಗ ಎದುರಿನಿಂದ ಪಂಜು ಹಿಡಿದುಕೊಂಡು ಬಂದ ನಾಲ್ಕೈದು ಜನ ''ಹಿಡಿಯಿರಿ ಅವರನ್ನು, ಹಿಡಿಯಿರಿ. ಸೂಳೇ ಮಕ್ಕಳನ್ನು ಓಡಲು ಬಿಡಬೇಡಿ. ಹಿಡಿಯಿರಿ'' ಎಂದು ಬೊಬ್ಬೆ ಹಾಕಿದರು. ಹೆದರಿದವರು ಅವನನ್ನು ಅಲ್ಲೇ ಗದ್ದೆಯಲ್ಲಿ ಬಿಟ್ಟು ಓಡಿ ಹೋದರು. ಬೆನ್ನು ಹತ್ತಿದ ಯುವಕರು ಅವರನ್ನೆಲ್ಲ ಹಿಡಿದು ಅಂಗಳಕ್ಕೆ ಕರೆತಂದರು.

ಕಿನ್ಯನನವರು ಬೈಲಿನಿಂದ ಕೇರಿಯಲ್ಲಿಗೆ ಹೋಗಿ ಬರುವಾಗ ಒಬ್ಬನನ್ನು ಬೋಳಂಗಳದ ಪದವಿಗೆ ವಿಷಯ ತಿಳಿಸಿ ಬರಲು ಕಳುಹಿಸಿಕೊಟ್ಟಿದ್ದರು. ಅವನು ಹಿಂದಿರುಗುವಾಗ ಬಯಲಾಟದಲ್ಲಿಂದ ನಾಲ್ಕು ಯುವಕರು ಅವನ ಜೊತೆ ಬಂದಿದ್ದರು.

ಅಂಗಳದಲ್ಲಿ ಕಟ್ಟಿ ಹಾಕಿದ್ದವರನ್ನು ವಿಚಾರಣೆ ಮಾಡಿದಾಗ ಕಿನ್ಯನನವರು ಕೇರಿಯಿಂದ ಬರುವುದಕ್ಕೆ ಮೊದಲೇ ಒಬ್ಬ ಯುವಕ ಗೋಣಿ ಚೀಲದ ಕಟ್ಟೊಂದನ್ನು ಹೊತ್ತುಕೊಂಡು ಕಜೆಕೋಡಿಗೆ ಓಡಿದ್ದಾನೆ ಎಂದು ತಿಳಿಯಿತು. ಯುವಕರನ್ನು ಕರೆದ ಮೈಂದರಾಲರು ಸುಬ್ಬಯಣ್ಣನನ್ನು ಕರೆತರುವಂತೆ ಹೇಳಿ ಕಳುಹಿಸಿದರು. ಆಗ ಯಾರೋ ಹೇಳಿದರು, ''ನಾರಾಯಣ ಬಯಲಾಟದಲ್ಲಿಂದಲೇ ಪಟ್ಟದ ಗುತ್ತಿಗೆ ಸುದ್ದಿ ಮುಟ್ಟಿಸಲು ಓಡಿದ್ದಾನೆ'' ಎಂದು.

ನಾರಾಯಣ ಪಟ್ಟದ ಗುತ್ತಿಗೆ ಹೋಗಿ, ಮಿತ್ತಬೈಲಿಗೆ ಕಳ್ಳರು ನುಗ್ಗಿದ್ದಾರೆ ಎಂದು ತಿಳಿಸಿದಾಗ, ಸುಬ್ಬಯಣ್ಣ ರಾಮಣ್ಣ ಹಾಗೂ ದುಗ್ಗಪ್ಪನವರನ್ನು ಕರೆದುಕೊಂಡು ಓಡೋಡಿ ಬಂದರು. ಹಿಂದಿನಿಂದ ಯಮುನಕ್ಕನೂ, ಚಿಕ್ಕಪ್ಪ ರೈಗಳೂ ಬಂದರು. ಅಂಗಳಕ್ಕೆ ತಲುಪಿ, ಅಲ್ಲಿ ಕಜೆಕೋಡಿ ಮತ್ತು ಬಾರಬೈಲಿನ ಯುವಕರನ್ನು ಕಂಡಾಗ ಎಲ್ಲರಿಗೂ ಈ ದರೋಡೆ ಮಾಂಕರಾಲನದೇ ಕೆಲಸವೆಂದು ತಿಳಿಯಿತು.

ಪೊಲೀಸರಿಗೆ ಜನ ಕಳುಹಿಸಿ ಮಿತ್ತಬೈಲಿನಲ್ಲಿ ದರೋಡೆಯಾಗಿದೆ ಎಂದು ದೂರು ಕೊಟ್ಟಾಗ, ಹತ್ತಿಪ್ಪತ್ತು ಪೊಲೀಸರು ಹಾಗೂ ಸಬ್ ಇನ್ಸ್‌ಪೆಕ್ಟರ್ ಮಿತ್ತಬೈಲಿಗೆ ಬಂದರು. ಅಂಗಳದಲ್ಲಿದ್ದವರನ್ನೆಲ್ಲಾ ಠಾಣೆಗೆ ಸಾಗಿಸಿ, ಇನ್ಸ್‌ಪೆಕ್ಟರ್‌ರ ಮುಂದೆಯೇ ಪೆಠಾರಿಯ ಬಾಗಿಲು ತೆರೆದರು. ಒಳಗಿದ್ದ ಯುವಕನನ್ನು ಹೊರಗೆ ಎಳೆದಾಗ, ಗುಡ್ಡಪ್ಪ! ಎಲ್ಲರಿಗೂ ಆಶ್ಚರ್ಯವಾಗಿತ್ತು. ಗುಡ್ಡಪ್ಪ ಮಾಂಕರಾಲರ ಹಿರಿಯ ಮಗ. ಅವನನ್ನೂ ಠಾಣೆಗೆ ಎಳೆದುಕೊಂಡು ಹೋಗುವಂತೆ ತಿಳಿಸಿದ ಪೊಲೀಸರು ಸುಬ್ಬಯಣ್ಣನನ್ನು ಕರೆದುಕೊಂಡು ಕಜೆಕೋಡಿಗೆ ಬಂದರು. ಕಜಕೋಡಿಯ ಮನೆಯನ್ನು ಸುತ್ತುವರಿದ ಪೊಲೀಸರು ಅಂಗಳಕ್ಕೆ ಬಂದಾಗ ಚಾವಡಿಯಲ್ಲಿ ಲಾಟೀನು ಇಟ್ಟುಕೊಂಡು ಮಾಂಕರಾಲನ ಹೆಂಡತಿ ಹಾಗೂ ಬೀಗರು ಬೆಳ್ಳಿಯ ರೂಪಾಯಿಗಳನ್ನು ಲೆಕ್ಕ ಮಾಡುತ್ತಿದ್ದರು. ಅಂಗಳದಲ್ಲಿ ನಾಯಿ ಬೊಗಳಿದಾಗ ತಮ್ಮವರೇ ಬಂದಿರಬೇಕೆಂದು ಊಹಿಸಿದ್ದ ಮಾಂಕರಾಲರನ್ನು ಸಬ್ ಇನ್ಸ್‌ಪೆಕ್ಟರರೂ, ಸುಬ್ಬಯಣ್ಣನೂ ಅಂಗಳಕ್ಕೆ ಎಳೆದಾಗ ಅವರಿಗೆ ಮೂರ್ಛೆ

ಹೋದಂತಾಯಿತು. ಮಾಂಕರಾಲರ ಹೆಂಡತಿ ಚಾವಡಿಯಲ್ಲೇ ಬಿದ್ದುಕೊಂಡರು.

ಕೈಗೆ ಕೋಳ ಹಾಕುವಾಗ ಮಾಂಕರಾಲರು ''ಸುಬ್ಬಯ, ನನ್ನನ್ನು ಬದುಕಿಸು, ಮನೆಯ ಮರ್ಯಾದೆ ಉಳಿಸು'' ಎಂದು ಕೇಳಿಕೊಂಡರು. ಸುಬ್ಬಯಣ್ಣ ಮಾತನಾಡದೆ ಅಂಗಳಕ್ಕಿಳಿದರು.

ಚಾವಡಿಯಲ್ಲಿದ್ದ ಗೋಣಿ ಚೀಲದ ಕಟ್ಟು, ಮರದ ಪೆಟ್ಟಿಗೆಗಳನ್ನು ಪೊಲೀಸರು ಠಾಣೆಗೆ ಕಳುಹಿಸಿದರು. ಇಷ್ಟೆಲ್ಲಾ ನಡೆಯುತ್ತಿದ್ದರೂ ಚಾವಡಿಯಲ್ಲಿ ದುಡ್ಡು ಲೆಕ್ಕ ಮಾಡಲು ಕುಳಿತಿದ್ದ ಮಾಂಕರಾಲರ ಭಾವ ಸುಂದರ, ಕುಳಿತಲ್ಲಿಂದ ಕದಲಲಿಲ್ಲ. ಇದನ್ನು ನೋಡಿ ಸಬ್ ಇನ್‌ಪೆಕ್ಟರರ ಕೋಪ ನೆತ್ತಿಗೇರಿತು. ಅವನ ಬಳಿಗೆ ಬಂದವರೇ ಬೂಟುಗಾಲಿನಿಂದ ಒದ್ದಾಗ ಆತ ಮೂರು ಸುತ್ತು ಹೊರಳಿ ಅಂಗಳಕ್ಕೆ ಬಿದ್ದ. ಅಲ್ಲೆಲ್ಲಾ ಅವನ ಮಲಮೂತ್ರ ಹರಡಿ ಕೊಂಡಿತು. ಅವನು ಪಾಪ, ಪೊಲೀಸರನ್ನು ಕಂಡಾಗಲೇ ಭಯದಿಂದ ಉಟ್ಟ ಬಟ್ಟೆಯಲ್ಲಿಯೇ ಮಲಮೂತ್ರ ಮಾಡಿಕೊಂಡಿದ್ದ.ಅದು ಯಾರಿಗೂ ತಿಳಿಯಬಾರದೆಂದು ಕುಳಿತಲ್ಲಿಂದ ಎದ್ದಿರಲಿಲ್ಲ.

ಅಂಗಳಕ್ಕೆ ಬಿದ್ದವನ ಜುಟ್ಟಿನಲ್ಲಿ ಹಿಡಿದೆತ್ತಿ ಇನ್ಸ್‌ಪೆಕ್ಟರ್ ಕೇಳಿದರು,

''ಸತ್ಯ ಹೇಳುತ್ತಿಯಾ?''

''ದಮ್ಮಯ, ಒದೆಯಬೇಡಿ, ನನಗೆ ತಿಳಿದಿರುವುದನ್ನೆಲ್ಲಾ ಹೇಳುತ್ತೇನೆ''.

''ಈ ಬೆಳ್ಳಿ, ಚಿನ್ನ ಎಲ್ಲಿಂದ ಬಂತು?''

''ಮಿತ್ತಬೈಲಿನಿಂದ''

''ಇದನ್ನು ಯಾರು ತಂದದ್ದು?''

''ನಾನು ಮತ್ತು ಬಾರಬೈಲಿನ ದೇರಣ್ಣ''

''ಕದ್ದುಕೊಂಡು ಬಂದದ್ದು ಅಲ್ಲವೇ?''

''ಅಲ್ಲ ಸ್ವಾಮಿ, ಮಾಂಕರಾಲರು ಪೆಠಾರಿಯ ಬೀಗದ ಕೈ ಕೊಟ್ಟರು. ನಾವು ಅವರು ಹೇಳಿದಂತೆ ತೆಗೆದುಕೊಂಡು ಬಂದೆವು''.

''ನಾಯಿ ಮಗನೇ. ಕತ್ತಲೆಯಲ್ಲಿ ಹೋಗಿ ಕದ್ದುಕೊಂಡು ಬಂದದ್ದಲ್ಲವೇ?''

ಇನ್ಸ್‌ಪೆಕ್ಟರ್ ಮತ್ತೆ ಒದ್ದಾಗ ಆತ ಮತ್ತೆರಡು ಸುತ್ತು ತಿರುಗಿದ.

''ಕದ್ದು ತಂದದ್ದು ಅಲ್ಲವೇ ಹೇಳು? ಮಧ್ಯರಾತ್ರಿಯಲ್ಲಿ ಮನೆಯಲ್ಲಿ ಗಂಡಸರು, ಕೆಲಸದವರು ಇಲ್ಲದ ಸಮಯ ನೋಡಿ ಕದ್ದು ತಂದದ್ದಲ್ಲವೇ?''ಮತ್ತೊಂದು ಒದ್ದು ಬಿದ್ದವನನ್ನು ಜುಟ್ಟು ಹಿಡಿದು ಎತ್ತಿದರು. ಸುಬ್ಬಯಣ್ಣನಿಗೆ ಆಗ ತಾನು ಸ್ವಾತಂತ್ರ್ಯ ಚಳುವಳಿಯ ಆ ದಿನಗಳಲ್ಲಿ ಪೊಲೀಸರಿಂದ ತಿಂದ ಬೂಟುಗಾಲಿನ ಒದೆಗಳ ನೆನಪಾಯಿತು. ಜೈಲಿನಲ್ಲಿ ಬೆನ್ನು ಒಡೆಯುವಂತೆ ತಿಂದ ಲಾಠಿ ಏಟುಗಳು ಕಣ್ಣೆದುರು ತೇಲಿ ಬಂದಂತಾಯಿತು. ಸುಬ್ಬಯಣ್ಣ ದೂರ ಹೋಗಿ ಅಂಗಳದ ತೆಂಗಿನ ಮರದ ಕಟ್ಟೆಯಲ್ಲಿ ಕುಳಿತುಕೊಂಡರು.



ಇನ್ಸ್‌ಪೆಕ್ಟರ್ ಚಾವಡಿಯತ್ತ ನೋಡುವುದನ್ನು ಗಮನಿಸಿದ ಮಾಂಕರಾಲರ ಹೆಂಡತಿ ಮಮ್ಮಕ್ಕೆ, ಓಡಿ ಹೋಗಿ ಸುಬ್ಬಯಣ್ಣನ ಕಾಲಿಗೆ ಬಿದ್ದು

''ಸುಬ್ಬಯ, ದಮ್ಮಯ ಹೊಡೆಯಬೇಡಿರೆಂದು ಹೇಳು, ನಾವು ಸತ್ಯ ಹೇಳುತ್ತೇವೆ, ದಮ್ಮಯ್ಯ'' ಎಂದು ಅಂಗಲಾಚಿದರು. ಇನ್ಸ್‌ಪೆಕ್ಟರ್ ಸುಂದರನ ಜುಟ್ಟು ಬಿಟ್ಟರು.

''ಹೇಳಿ ಅಮ್ಮ, ನೀವು ಸತ್ಯ ಹೇಳಿ. ಸತ್ಯ ಹೇಳಿದರೆ ನಾವು ಏನೂ ಮಾಡುವುದಿಲ್ಲ, ಸುಳ್ಳು ಹೇಳಿದರೆ ಯಾರನ್ನೂ ಬಿಡುವುದಿಲ್ಲ, ದರೋಡೆಯ ದಾವೆ ಹಾಕಿ ಈ ಬೆಳ್ಳಿ, ಚಿನ್ನ, ಮುಟ್ಟಿದವರನ್ನೆಲ್ಲ ಹತ್ತು ವರ್ಷ ಜೈಲು ಕಂಬಿ ಎಣಿಸುವಂತೆ ಮಾಡುತ್ತೇವೆ. ಸುಬ್ಬಯ ಭಂಡಾರಿಗಳೇ, ಇದು ದರೋಡೆ ಪ್ರಕರಣ, ಇದರಲ್ಲಿ ನೀವು ಹಸ್ತಕ್ಷೇಪ ನಡೆಸಬಾರದು''.

ಇನ್ಸ್‌ಪೆಕ್ಟರ್ ಅಷ್ಟು ಹೇಳುವಾಗ ಮಮ್ಮಕ್ಕ ಅವರಿಗೆ ತಿಳಿದುದನ್ನೆಲ್ಲ ಹೇಳಿದರು.

ಮಾಂಕರಾಲರು ಸಂಜೆ ಮಿತ್ತಬೈಲಿನಿಂದ ಬಂದವರೇ ಕೋಪದಿಂದ ಉರಿಯುತ್ತಿದ್ದರು. ಮಕ್ಕಳನ್ನು ಹಾಗೂ ಕಜೆಕೋಡಿಯ ಭಾವಂದಿರನ್ನೆಲ್ಲ ಕರೆಸಿ ಮಾತುಕತೆ ನಡೆಸಿದರು. ಎಲ್ಲರಿಗೂ ಮಿತ್ತಬೈಲಿನ ಪೆಠಾರಿಯಲ್ಲಿದ್ದ ಸಂಪತ್ತಿನ ಬಗ್ಗೆ ತಿಳಿದಿತ್ತು. ಆದರೆ ಎಷ್ಟಿದೆ ಎಂಬುದು ತಿಳಿದಿರಲಿಲ್ಲ. ಬೆಳ್ಳಿ ರೂಪಾಯಿಗಳನ್ನು ಗೋಣಿಚೀಲಗಳಲ್ಲಿ ತುಂಬಿಸಿ ಇಟ್ಟಿದ್ದಾರೆ, ಪೆಟ್ಟಿಗೆಗಳ ತುಂಬಾ ಚಿನ್ನಾಭರಣಗಳಿವೆ ಎಂದು ಮಾಂಕರಾಲರು ಹೇಳಿದಾಗಲೇ ತಿಳಿದುದು. ಬಲಗೈ ಬಂಟ ಅಮ್ಮಣನನ್ನು ಮಿತ್ತಬೈಲಿಗೆ ಕಳುಹಿಸಿ ಮನೆಯಲ್ಲಿ ಯಾರ್‍ಯಾರಿದ್ದಾರೆ ಎಂದು ನೋಡಿ ಬರುವಂತೆ ಹೇಳಿದರು. ಆತ, ಅಲ್ಲಿ ಮೂರ್‍ನಾಲ್ಕು ಮಂದಿ ಹೆಂಗಸರು ಮತ್ತು ಮುದುಕರು ಮಾತ್ರವಿದ್ದು, ಮಿಕ್ಕವರೆಲ್ಲರೂ ಬಯಲಾಟಕ್ಕೆ ಹೋಗಿದ್ದಾರೆ ಎಂದು ಸುದ್ದಿ ತಿಳಿಸಿದ್ದ. ಮಿತ್ತಬೈಲಿನಲ್ಲಿ ದರೋಡೆ ನಡೆಸಲು ಇಂದೇ ಸರಿಯಾದ ದಿನ ಎಂದು ತೀರ್ಮಾನಿಸಿದ ಮಾಂಕರಾಲರು ಹತ್ತು ಜನ ಯುವಕರನ್ನು ಕೂಡಿಸಿಕೊಂಡು ಕಜೆಕೋಡಿಯ ಅಂಗಳದಲ್ಲಿ ಕುಡಿಕೆ ಶೇಂದಿಯ ಸೇವೆ ನಡೆಸಿ ಮಿತ್ತಬೈಲಿಗೆ ಕಳುಹಿಸಿಕೊಟ್ಟರು.

ಮಾಂಕರಾಲರು ಕಜೆಕೋಡಿಯ ಮನೆಯಲ್ಲಿಯೇ ಉಳಿದು ದರೋಡೆಗೈದ ವಸ್ತುಗಳನ್ನು ನೆಲದೊಳಗೆ ಅಡಗಿಸಿಡಲು ಕೋಳಿ ಕಟ್ಟುವ ಕೊಟ್ಟಿಗೆಯಲ್ಲಿ ವ್ಯವಸ್ಥೆ ಮಾಡುತ್ತಿದ್ದರು. ಸುಂದರ ತಂದ ಒಂದು ಗೋಣಿ ಚೀಲದ ಕಟ್ಟನ್ನು ಬಿಡಿಸಿ ಅದರಲ್ಲಿರುವ ಬೆಳ್ಳಿ ರೂಪಾಯಿಗಳನ್ನು ಲೆಕ್ಕ ಮಾಡುವಾಗಲೇ ಪೊಲೀಸರು ಬಂದು ತಲುಪಿದ್ದರು.

ಮಾಂಕರಾಲರನ್ನು ಮೊದಲೇ ಪೊಲೀಸರು ಠಾಣೆಗೆ ಕರೆತಂದಿದ್ದರು. ಕೈ ಕೋಳ ಧರಿಸಿ ಠಾಣೆಯ ಬೆಂಚಿನಲ್ಲಿ ಕುಳಿತಿದ್ದ ಮಾಂಕರಾಲರಲ್ಲಿ ಇನ್ಸ್‌ಪೆಕ್ಟರ್ ಹೇಳಿಕೆ ನೀಡುವಂತೆ ಕೇಳಿದಾಗ, ತಾನು ನಾಳೆ ತನ್ನ ವಕೀಲರ ಸಮಕ್ಷ ಕಲೆಕ್ಟರ್ ಕಚೇರಿಯಲ್ಲಿ ಹೇಳಿಕೆ ಕೊಡುವುದಾಗಿ ಅವರು ನುಡಿದರು. ಎಷ್ಟಾದರೂ ಅವರು ಊರಿನ ಮುಖಂಡ, ಗ್ರಾಮದ ಪಟೇಲರು. ಅವರನ್ನು ಬೇರೆಯವರಂತೆ ಬೂಟು ಕಾಲಲ್ಲಿ ಒದ್ದು ಪ್ರಶ್ನಿಸಲು ಸಾಧ್ಯವಿರಲಿಲ್ಲ. ಮಿಕ್ಕವರನ್ನೆಲ್ಲಾ ಠಾಣೆಯ ಲಾಕಪ್‌ಗೆ ಹಾಕಿ ಮಾಂಕರಾಲರನ್ನು ಬೆಳಗ್ಗಿನ ರೈಲಲ್ಲಿ ಕಲೆಕ್ಟರ್

ಕಚೇರಿಗೆ ಕರೆತಂದರು. ಮಾಂಕರಾಲರು ಸೀಮೆಯಲ್ಲೇ ಹೆಸರು ಪಡೆದ ಮಿತ್ತಬೈಲು ಮನೆಯ ಯಜಮಾನ. ಅಲ್ಲದೆ, ಊರಿನ ಪಟೇಲ. ಹಾಗಾಗಿ ಕಲೆಕ್ಟರರಿಗೂ ಪೊಲೀಸ್ ಸುಪರಿಂಟೆಂಡೆಂಟ್ ಸಾಹೇಬರಿಗೂ ಅವರ ಬಗ್ಗೆ ಗೌರವ ತೋರಿಸುವುದು ಅನಿವಾರ್ಯವಾಗಿತ್ತು.

ಸ್ವಲ್ಪ ಹೊತ್ತು ಕಳೆದು ಕಲೆಕ್ಟರ್‌ರಿಂದ ಬೆನ್ನು ತಟ್ಟಿಸಿಕೊಂಡು 'ಆಯಿತು ಹುಜೂರು, ಆಯಿತು ಹುಜೂರು' ಎನ್ನುತ್ತಾ ಹೊರಬಂದ ಮಾಂಕರಾಲರನ್ನೂ, 'ಎಸ್ ಸಾರ್, ಎಸ್ ಸಾರ್' ಎನ್ನುತ್ತಾ ಬರುವ ಇನ್ಸ್‌ಪೆಕ್ಟರರನ್ನೂ ಕಂಡು ಎಲ್ಲರಿಗೂ ಆಶ್ಚರ್ಯವಾಯಿತು. ಮಾಂಕರಾಲ ಏನೋ ಒಂದು ಹೊಸ ಆಟ ಆಡಿದ್ದಾನೆ ಎಂದು ಸುಬ್ಬಯಣ್ಣನಿಗೆ ಮನವರಿಕೆಯಾಯಿತು. ಹೊರಗೆ ಬಂದ ಕಲೆಕ್ಟರ್ ಸುಬ್ಬಯಣ್ಣರನ್ನು ಕರೆದು,

''ಸುಬ್ಬಯ ಭಂಡಾರಿಗಳೇ, ನಿಮ್ಮ ಮೇಲೆ ಸರಕಾರದ ಖಜಾನೆ ಲೂಟಿ ಮಾಡಿದ ದಾವೆ ಮೊದಲೇ ಇದೆ. ಆ ದಾವೆಯ ದಾಖಲೆಗಳು ಈಗಲೂ ಸರಕಾರದ ಬಳಿ ಇವೆ. ಈಗ ನೀವು ಮತ್ತೆ, ಗುತ್ತಿನ ಯಜಮಾನ ಮಾಂಕರಾಲರು ಯುದ್ಧದ ನಿಧಿಗೆ ಕೊಡಲೆಂದು ಇಟ್ಟಿದ್ದ ದುಡ್ಡನ್ನು ದೋಚಲು ಯೋಜನೆ ಹಾಕಿದ್ದೀರಿ ಎಂದು ದೂರು ಬಂದಿದೆ. ನಿಮ್ಮ ಮೇಲೆ ದೂರು ದಾಖಲೆ ಮಾಡದೆ ಇರುವಂತಿಲ್ಲ, ಹೋಗಿ ಕೂಡಲೇ ಆ ದುಡ್ಡನ್ನು ಯುದ್ಧ ನಿಧಿಗಾಗಿ ಸರಕಾರದ ಬೊಕ್ಕಸಕ್ಕೆ ಕಳುಹಿಸುವ ವ್ಯವಸ್ಥೆ ಮಾಡಿ''.

ಅಷ್ಟು ಹೇಳಿ ಇನ್ಸ್‌ಪೆಕ್ಟರ್ ಮಾಂಕರಾಲರನ್ನು ಕರೆದು ಹೇಳಿದರು,

''ಪಟೇಲರೇ, ನೀವು ಕೂಡಲೇ ಆ ದುಡ್ಡನ್ನು ಸರಕಾರದ ಬೊಕ್ಕಸಕ್ಕೆ ಹಾಕುವ ವ್ಯವಸ್ಥೆ ಮಾಡಿ. ಇಷ್ಟೊಂದು ದೊಡ್ಡ ಮೊತ್ತದ ಯುದ್ಧ ನಿಧಿಯ ಕಾಣಿಕೆಯನ್ನು ಇಂದೇ ಮದರಾಸಿಗೆ ಕಳುಹಿಸಿ ನಿಮಗೆ 'ರಾವ್ ಬಹದ್ದೂರ್' ಸನದು ನೀಡುವಂತೆ ಬರೆಯುತ್ತೇವೆ. ಅದು ಇಂಗ್ಲೆಂಡ್‌ಗೆ ತಲುಪಿ ಸ್ವತಃ ರಾಣಿಯ ಕೈಯಿಂದ ಬಿರುದು ಬರಬೇಕು. ಅನಂತರ ನೀವು 'ರಾವ್ ಬಹದ್ದೂರ್ ಮಾಂಕರಾಲ' ಆಗುತ್ತೀರಿ.

ಸುಬ್ಬಯಣ್ಣನಿಗೂ ಮಿತ್ತಬೈಲಿನ ಯುವಕರಿಗೂ ಸಿಡಿಲು ಬಡಿದಂತಾಯಿತು. ಕುಟುಂಬದ ಚಿನ್ನ, ಹಣ, ಒಡವೆಗಳನ್ನು ಕದ್ದು, ಪೆಠಾರಿ ಲೂಟಿ ಮಾಡಿ ತಂದ ಸಂಪತ್ತನ್ನು ಕಲೆಕ್ಟರರಲ್ಲಿ ಯುದ್ಧ ನಿಧಿಗೆಂದು ಕೊಟ್ಟು ಮಾಂಕರಾಲ ಜೈಲುಶಿಕ್ಷೆಯನ್ನು ತಪ್ಪಿಸಿಕೊಂಡ. ಅದರ ಜೊತೆಗೆ ದಾವೆಯನ್ನು ಸುಬ್ಬಯಣ್ಣನ ಮೇಲೆಯೇ ತಿರುಗಿಸಿದ. ಅವನ ಈ ಕುತಂತ್ರ ಕಂಡು ಯುವಕರ ರಕ್ತ ಕುದಿಯತೊಡಗಿತು.

ಮಾಂಕರಾಲರ ಹೇಳಿಕೆಯಂತೆ ಯುದ್ಧ ನಿಧಿಗೆ ಕೊಡಲೆಂದು ಕಜೆಕೋಡಿ ಮನೆಯಲ್ಲಿ ಹಣ ಲೆಕ್ಕ ಮಾಡುತ್ತಿದ್ದಾಗ ಸುಬ್ಬಯಣ್ಣನೂ, ಮಿತ್ತಬೈಲಿನ ಯುವಕರೂ ಬಂದು ಮಾರಾಮಾರಿ ನಡೆಸಿ ಅದನ್ನು ತಡೆದರು. ಸುಬ್ಬಯಣ್ಣ ಎಲ್ಲರಿಗೂ ತಿಳಿದಿರುವಂತೆ ಇಂಗ್ಲಿಷ್ ಸರಕಾರದ ವಿರೋಧಿ. ಅವರು ಯುದ್ಧ ನಿಧಿಗೆ ಹಣ ಕಳುಹಿಸುವುದನ್ನು ಒಪ್ಪುವವರಲ್ಲ, ಕಲೆಕ್ಟರರಿಗೆ ಈ ವಿಷಯವನ್ನು ಮಾಂಕರಾಲರು ಬಿಡಿಸಿ ಹೇಳಿದಾಗ ಅಲ್ಲೇ ಕುಳಿತಿದ್ದ ಸಬ್



ಇನ್ಸ್‌ಪೆಕ್ಟರರಿಗೆ ಮಾತನಾಡಲು ಯಾರೂ ಅವಕಾಶವೇ ನೀಡಲಿಲ್ಲ, ದಾಳವನ್ನು ತಿರುಗಿಸಿ, ಮಿತ್ತಬೈಲಿನವರ ಮೇಲೆಯೇ ದಾವೆ ಹಾಕಿಸಿ ಮಾಂಕರಾಲರು ಹೊರಗೆ ಬಂದಿದ್ದರು.

ಸುಬ್ಬಯಣ್ಣ ನೇರ ಕಾಸರಗೋಡಿಗೆ ಹೋಗಿ, ಉಮೇಶ ರಾಯರಿಗೆ ವಿಷಯ ತಿಳಿಸಿ, ಎಲ್ಲರಿಗೂ ಜಾಮೀನಿನ ವ್ಯವಸ್ಥೆ ಮಾಡಿಸಿದರು. ಮಂಜೇಶ್ವರದ ಇನ್ಸ್‌ಪೆಕ್ಟರರಿಗೆ ಸತ್ಯ ಸಂಗತಿ ತಿಳಿದಿದ್ದ ಕಾರಣ ಎಲ್ಲರಿಗೂ ಜಾಮೀನು ದೊರೆಯಿತು.

ಮನೆಗೆ ಬಂದ ಸುಬ್ಬಯಣ್ಣ, ಕೂಡಲೇ ಮಿತ್ತಬೈಲಿಗೆ ಬಂದು ನಿಲ್ಲುವಂತೆ ಯಮುನಕ್ಕನಿಗೆ ಹೇಳಿ ಕಳುಹಿಸಿದರು. ಮಿತ್ತಬೈಲಿನ ಯುವಕರು ಎಲ್ಲೂ ತಿರುಗಾಡಲು ಹೋಗದೆ ಮನೆ ಕಾಯಬೇಕೆಂದು ನಿರ್ಧಾರವಾಯಿತು. ಒಂದಿಬ್ಬರು ಬೀಗರ ಮನೆಗಳಿಗೆ ಹೋಗಿ ವಿಷಯ ತಿಳಿಸಿ, ವಿಷು ಹಬ್ಬಕ್ಕೆ ಮಿತ್ತಬೈಲಿಗೆ ಬರುವಂತೆ ಆಹ್ವಾನಿಸಿ ಬಂದರು.

ಯುಮುನಕ್ಕನೂ, ಚಿಕ್ಕಪ್ಪ ರೈಗಳೂ ಮಿತ್ತಬೈಲಿಗೆ ಬಂದರು. ಯಮುನಕ್ಕ ಇನ್ನು ಮುಂದೆ ಮಿತ್ತಬೈಲಿನಲ್ಲೇ ನೆಲೆಸುವುದೆಂದು ತೀರ್ಮಾನವಾಯಿತು. ಜೊತೆಗೆ ರಾಮಣ್ಣನೂ, ದುಗ್ಗಪ್ಪನೂ ಇರಬೇಕೆಂದು ಹೇಳಿದರು. ನಾಲ್ಕು ದಿನ ಮಿತ್ತಬೈಲಿನಲ್ಲೇ ಉಳಿದ ಚಿಕ್ಕಪ್ಪ ರೈಗಳು ಯುವಕರನ್ನು ಸಂಘಟಿಸಿದರು. ಸುಬ್ಬಯಣ್ಣನ ಜೊತೆಗೆ ಮಂಜೇಶ್ವರ, ಕಾಸರಗೋಡಿಗೆ ಹೋಗಿ ಬಂದರು. ಮಿತ್ತಬೈಲಿಗೆ ಈಗ ಹೊಸ ಜೀವ ಕಳೆ ಬಂದಂತಾಯಿತು. ಯುವಕರು ಸುಬ್ಬಯಣ್ಣ ಮತ್ತು ಯಮುನಕ್ಕನ ಬಾಯಿಯಿಂದ ಮಾತು ಹೊರಬೀಳಲು ಕಾಯುತ್ತಿದ್ದರು. ಅವರು ಹೇಳಿದುದನ್ನು ತಲೆಯ ಮೇಲೆ ಹೊತ್ತು ಮಾಡಿಕೊಡುವ ಹುಮ್ಮಸ್ಸಿನಲ್ಲಿದ್ದರು.

ಮಾಂಕರಾಲರು ಅನಂತರ ಮಿತ್ತಬೈಲಿನ ಮನೆಗೆ ಕಾಲಿಡಲಿಲ್ಲ. ಮಿತ್ತಬೈಲು ಮನೆಯತ್ತ ಕಜೆಕೋಡಿ, ಬಾರಬೈಲಿನ ಒಂದು ನರಪಿಳ್ಳೆಯ ನೆರಳೂ ಬೀಳಲಿಲ್ಲ. ಮಿತ್ತಬೈಲಿನ ಯುವಕರು ತಮ್ಮ ಭೂಮಿಗೆ ಯಾರಾದರೂ ಕಾಲಿಟ್ಟರೆ ತಕ್ಕ ಬುದ್ಧಿ ಕಲಿಸಬೇಕೆಂದು ಕಾಯುತ್ತಿದ್ದರು. ಮಾಂಕರಾಲರು ಈಗ ಹೆಚ್ಚಾಗಿ ಆನೆಕಲ್ಲಿನ ಮಿತ್ತಬೈಲು ಛತ್ರದಲ್ಲಿದ್ದುಕೊಂಡೇ ಪಟೇಲಗಿರಿಯ ಕೆಲಸವನ್ನು ಮಾಡುತ್ತಿದ್ದರು.

ಈ ಮಧ್ಯೆ ದುಗ್ಗಪ್ಪನ ಪರಿಚಯದ ಬ್ಯಾರಿಯೊಬ್ಬ ಮಾಂಕರಾಲರ ಅವ್ಯವಹಾರಗಳನ್ನೆಲ್ಲಾ ತಿಳಿಸಬೇಕೆಂದು ಆನೆಕಲ್ಲಿನಿಂದ ಮಿತ್ತಬೈಲಿಗೆ ಬಂದನು. ಅವನಿಗೆ ದುಗ್ಗಪ್ಪನ ಮುಂಗೋಪದ ಬಗ್ಗೆ ಮೊದಲೇ ತಿಳಿದಿತ್ತು. ಹಾಗಾಗಿ ಭಯದಿಂದ ಅವನು ವಿಷಯವನ್ನೆಲ್ಲಾ ಯಮುನಕ್ಕನಿಗೆ ವಿವರಿಸಿದನು.

ಮಾಂಕರಾಲರು ಮಿತ್ತಬೈಲಿನ ಚಿನ್ನ, ಆಭರಣಗಳನ್ನು ಎಲ್ಲೆಲ್ಲಿ ಮಾರಿದ್ದಾರೆ, ವಿಟ್ಲದ ಆಚಾರಿಗೆ ಪವನು, ರಾಮಟಂಕೆಗಳನ್ನು ಮಾರಿದ್ದುದನ್ನೆಲ್ಲ ಬ್ಯಾರಿ ವಿವರಿಸಿದನು. ಅವರು ಮಾಗಿ ತಿಂಗಳಲ್ಲೊಮ್ಮೆ, ಚೈತ್ರ ತಿಂಗಳಲ್ಲೊಮ್ಮೆ ಎಷ್ಟೆಷ್ಟು ಮುಡಿ ಅಕ್ಕಿ ಭಂಡಸಾಲೆಗೆ ಹಾಕಿಸುತ್ತಿದ್ದರು, ಒಕ್ಕಲಿನವರ ಗೇಣಿಯ ಅಕ್ಕಿ ಮಿತ್ತಬೈಲಿಗೆ ಬಾರದೆ ಹೇಗೆ ಭಂಡಸಾಲೆಗೆ ಸಾಗುತ್ತಿತ್ತು ಎಂಬ ವಿವರಗಳನ್ನೆಲ್ಲ ಬ್ಯಾರಿ ನೀಡಿದನು. ಕೊಬ್ಬರಿ, ಅಡಿಕೆ, ಕರಿಮೆಣಸು ತಮ್ಮ

ಭಂಡಸಾಲೆಗೆ ಎಷ್ಟೆಷ್ಟು ಬರುತ್ತಿತ್ತು, ಮಿತ್ತಬೈಲಿನ ಮನೆಗೆ ಬೇಕಾದ ಸಾಮಾನುಗಳಲ್ಲದೆ, ಇದೇ ಮನೆಯ ಲೆಕ್ಕದಲ್ಲಿ ಬಾರಬೈಲು, ಕಜೆಕೋಡಿಗೆ ಎಷ್ಟೆಷ್ಟು ಸಾಮಾನು ಹೋಗುತ್ತಿತ್ತು ಎಂಬುದರ ಬಗ್ಗೆಯೂ ಬ್ಯಾರಿ ವಿವರ ಕೊಟ್ಟ. ಯಮುನಕ್ಕನಿಗೆ ಈ ಬಗ್ಗೆ ಅಲ್ಪಸ್ವಲ್ಪ ತಿಳಿದಿತ್ತಾದರೂ, ಇಷ್ಟೊಂದು ಪ್ರಮಾಣದಲ್ಲಿ ಅವ್ಯವಹಾರ, ಮನೆಯ ಲೂಟಿ, ದರೋಡೆ ಆಗುತ್ತಿತ್ತೆಂದು ಕೇಳಿದಾಗ ಆಶ್ಚರ್ಯವಾಯಿತು. ಬ್ಯಾರಿ ಮತ್ತೆ ಹೇಳಿದನು,

''ಕಳೆದ ಕೆಲವು ವರ್ಷಗಳಲ್ಲಿ ಬಾರಬೈಲಿನ ಮನೆಗೆ ಬೇಕಾದ ಮನೆ ಸಾಮಾನು ಗಳು, ಬೀಜ, ಭತ್ತ, ದನ, ಕರು, ಎತ್ತು, ಕೋಣಗಳಿಗೆ ದುಡ್ಡು ಕೊಡುತ್ತಿದ್ದುದು ಮಾಂಕರಾಲರು. ಬಾರಬೈಲು ತ್ಯಾಂಪಣ್ಣ ಶೆಟ್ಟರನ್ನು ಅವರು ತನ್ನ ಮಗನಂತೆ ನೋಡುತ್ತಿದ್ದರು. ಅವರ ಮದುವೆಯ ಖರ್ಚಿಗೆ ಬೇಕಾದ ಎಲ್ಲ ಸಾಮಾನೂ ನಮ್ಮ ಭಂಡಸಾಲೆಯಿಂದಲೇ ಹೋದುದು. ಅಷ್ಟು ಮಾತ್ರವಲ್ಲ, ಮಿತ್ತಬೈಲಿನ ಪೆಠಾರಿಯಿಂದ ತಂದ ಪವನು, ರಾಮಟಂಕೆಗಳನ್ನು ಕರಗಿಸಿ ವಿಟ್ಲದ ಆಚಾರಿ ಆಭರಣಗಳನ್ನು ತಯಾರಿಸಿ ಕೊಟ್ಟಿದ್ದ.''

ಮಾಂಕರಾಲರು ಹಾಗೂ ಬಾರಬೈಲಿನ ಆಚಕ್ಕನ ಸಂಬಂಧ ಯಮುನಕ್ಕನ ಕಿವಿಗೆ ಚಿಕ್ಕವರಿರುವಾಗಲೇ ಬಿದ್ದಿತ್ತು. ಮಾಂಕರಾಲರ ಕಚ್ಚೆ ಹರಕು ಬುದ್ಧಿ ತಿಳಿದಿದ್ದವರಿಗೆ ಅದೊಂದು ವಿಶೇಷವೆಂದೆನಿಸಿರಲಿಲ್ಲ. ಆದರೆ  ತ್ಯಾಂಪಣ್ಣನ ಮದುವೆಗೆ ತನ್ನ ಮನೆಯ ಚಿನ್ನಾಭರಣಗಳನ್ನು ಕರಗಿಸಿದ್ದಾರೆ ಎನ್ನುವಾಗ ಅವರಿಗೆ ಉರಿಯತೊಡಗಿತು. ಆ ಮದುವೆಗೆ ಮಾಂಕರಾಲರು ಅಷ್ಟೊಂದು ಮುತುವರ್ಜಿ ವಹಿಸಲು ಇನ್ನೂ ಒಂದು ಕಾರಣವಿತ್ತು. ತ್ಯಾಂಪಣ್ಣ ಮದುವೆಯಾದ ಹೆಣ್ಣು ಕಜೆಕೋಡಿಯವಳು. ಮಮ್ಮಕ್ಕೆಯ ತಂಗಿಯ ಮಗಳು. ಹಾಗಾಗಿ ಹೆಚ್ಚಿನ ಸಹಾಯ ಮಾಡಿರಬಹುದೆಂದೆನಿಸಿದರಾದರೂ, ಇದರ ಹಿಂದೆ ಇನ್ನೂ ಬೇರೇನೋ ಇರಬೇಕು ಎಂಬ ಸಂಶಯ ಅವರ ಮನಸನ್ನು ಕೊರೆಯತೊಡಗಿತ್ತು.

''ಬಾರಬೈಲಿನವರಿಗೆ ಅಷ್ಟೊಂದು ಸಹಾಯ ಮಾಡಲು ಏನಾದರೂ ಕಾರಣ ಇರಲೇ ಬೇಕಲ್ಲ ಸಾಯಿಬರೇ?''

ಯಮುನಕ್ಕ ಏನೂ ತಿಳಿಯದವರಂತೆ ಬ್ಯಾರಿಯಲ್ಲಿ ಕೇಳಿದಾಗ, ಬ್ಯಾರಿ ಮೆಲ್ಲ ಹೇಳಿದನು,

''ನಾನು ಹೇಳಿದೆನೆಂದು ಹೇಳಬೇಡಿ ಅಮ್ಮಾ, ಆದರೆ ಬಾರಬೈಲಿನ ವಿಷಯ ಊರಿಡೀ ತಿಳಿದದ್ದೇ. ತ್ಯಾಂಪಣ್ಣ ಶೆಟ್ಟಿ, ಮಾಂಕರಾಲರಿಗೆ ಹುಟ್ಟಿದವನೆಂದು ಊರೆಲ್ಲ ಹೇಳುತ್ತಿದೆ. ಹಿಂದೆ ಊರ ಜನರ ಮಾತಿನ ಬಗ್ಗೆ ಅಷ್ಟೊಂದು ತಲೆಕೆಡಿಸಿಕೊಳ್ಳದೆ ತಿರುಗುತ್ತಿದ್ದ ತ್ಯಾಂಪಣ್ಣ ಶೆಟ್ಟಿ, ಈಗ ಮಾಂಕರಾಲರನ್ನು ಮನೆಗೆ ಬರಬಾರದು ಎಂದು ಹೇಳಿದ್ದಾನಂತೆ. ತ್ಯಾಂಪಣ್ಣ ಶೆಟ್ಟಿಯ ತಂಗಿಯಂದಿರೂ ಮಾಂಕರಾಲರ ಮಕ್ಕಳೆಂದೇ ಊರಿಡೀ ಸುದ್ದಿ. ಇದರಲ್ಲಿ ಸತ್ಯವೆಷ್ಟು, ಸುಳ್ಳೆಷ್ಟೆಂದು ನನಗೆ ತಿಳಿಯದು. ಅಲ್ಲದೆ, ಮಾಡಿದವರ ಕರ್ಮ ಆಡಿದವರ ಮೇಲೆಯಂತೆ, ಅದೆಲ್ಲ ನಮಗೆ ಯಾಕೆ ಹೇಳಿ, ಅಲ್ಲವೇ ಅಮ್ಮಾ?''



''ಅದು ಹೌದು ಸಾಯಿಬರೇ, ಈ ಧರ್ಮ ಕರ್ಮದ ಮಾತೆಲ್ಲ ನಿಮಗೆ ನೆನಪಾಗುವುದು ನಿಮಗೆ ಬೇಕಾದಾಗ ಮಾತ್ರ. ಮಿತ್ತಬೈಲನ್ನು ಲೂಟಿ ಮಾಡುವಾಗ ಅದೆಲ್ಲ ನಿಮಗೆ ನೆನಪಾಗಲಿಲ್ಲ ಅಲ್ಲವೇ ಸಾಹುಕಾರರೇ?''

''ಮನೆಯ ಯಜಮಾನರೇ ಮನೆ ದೋಚುವಾಗ ಅದನ್ನು ಹೇಳಲು ನಾವ್ಯಾರು? ಬೇಲಿಯೇ ಹೊಲವನ್ನು ಮೇಯುತ್ತದೆ ಎಂದರೆ ಯಾರು ನಂಬುತ್ತಾರಮ್ಮಾ? ಅಷ್ಟೇ ಅಲ್ಲದೆ, ಅವರು ಊರಿನ ಪಟೇಲರು. ಸರಕಾರ, ಪೊಲೀಸು ಎಲ್ಲ ಅವರು ಹೇಳಿದಂತೆ ಇದೆಯಲ್ಲಮ್ಮ!''

''ಅದು ಹೌದು ಸಾಹುಕಾರರೇ, 'ಲಾಭ ಇಲ್ಲದೆ ಶೆಟ್ಟಿ  ನೆರೆಯಲ್ಲಿ ಕೊಚ್ಚಿಕೊಂಡು ಹೋಗುವುದಿಲ್ಲ' ಎಂದು ಒಬ್ಬ ಹೇಳಿದ್ದನಂತೆ. ನಿಮ್ಮ ಕತೆಯೆಲ್ಲ ಹಾಗೆಯೇ. ಲಾಭವಾಗುವುದಾದರೆ ಯಾರ ಕುತ್ತಿಗೆ ಕೊಯ್ಯಲೂ ಹೇಸುವುದಿಲ್ಲ ನೀವು. ಆಗಲಿ, ಇನ್ನಾದರೂ ಸ್ವಲ್ಪ ಎಚ್ಚರಿಕೆಯಿಂದಿರಿ. ಬ್ರಾಹ್ಮಣನ ಮನೆ ಉರಿಯುವಾಗ ಬೀಡಿ ಹೊತ್ತಿಸಿದ ಬ್ಯಾರಿಯ ಹಾಗೆ ಮಾಡಬೇಡಿ! ಮಿತ್ತಬೈಲಿನ ಯುವಕರ ಬಗ್ಗೆಯೂ ನಿಮಗೆ ಸ್ವಲ್ಪ ಭಯವಿರಲಿ''.

ಬ್ಯಾರಿ ಬೆವರುತ್ತಾ ಯಮುನಕ್ಕನ ಅಪ್ಪಣೆ ಪಡೆದು ಹೊರಟನು. ಹೋಗುವಾಗ ಜಗಲಿಯಲ್ಲಿ ಕುಳಿತಿದ್ದ ದುಗ್ಗಪ್ಪನಲ್ಲಿ ಹೇಳಿದನು,

''ಅಣ್ಣಾವ್ರೆ, ಗುತ್ತಿನ ಯಜಮಾನ್ತಿ ಕೋಪಗೊಂಡಿದ್ದಾರೆ. ನಾನು ಯಾವತ್ತೂ ಅವರ ಚಾಕರಿಗೆ ತಯಾರಿದ್ದವ. ನನ್ನಿಂದೇನಾದರೂ ತಪ್ಪಾಗಿದ್ದರೆ ಕ್ಷಮಿಸಲು ಹೇಳಿಬಿಡಿ. ಸಲಾಂ, ಬರುತ್ತೇನೆ''.

''ಇಲ್ಲಿಗೆ ಬಂದು ಹೇಳಿದ ವಿಷಯವನ್ನು ಯಾರಿಗೂ ತಿಳಿಸಬೇಡಿ. ವ್ಯಾಪಾರ ಮಾಡುತ್ತಾ ಇನ್ನೂ ಸ್ವಲ್ಪ ದಿನ ಬದುಕಬೇಕೆಂದು ಆಸೆ ಇದ್ದರೆ ಕಿವಿಗೆ ಬಿದ್ದ ಸುದ್ದಿಗಳನ್ನು ಇಲ್ಲಿಗೆ ಬಂದು ತಿಳಿಸಿ ಹೋಗಬೇಕು ಏನು?'' ಎಂದು ದುಗ್ಗಪ್ಪ ಬ್ಯಾರಿಯನ್ನು ದುರುಗುಟ್ಟಿ ನೋಡಿದ.

ಬ್ಯಾರಿ ಹೇಳಿದ ಒಂದು ಮಾತು ಮಾತ್ರ ಯಮುನಕ್ಕನ ತಲೆಯಲ್ಲಿ ಕೀಟದಂತೆ ಕೊರೆಯತೊಡಗಿತು.

ಬಾರಬೈಲಿನ ತ್ಯಾಂಪಣ್ಣ ಶೆಟ್ಟರು ಮಾಂಕರಾಲರಿಗೆ ಹುಟ್ಟಿದವರೆಂದು ಊರಿನ ಜನರೆಲ್ಲ ಹೇಳುತ್ತಿದ್ದಾರೆ.

ತ್ಯಾಂಪಣ್ಣ ನೋಡಲು, ನಡೆಯುವಾಗ ಮಾಂಕರಾಲರ ಪಡಿಯಚ್ಚಿನಂತೆಯೇ ಕಾಣುತ್ತಿದ್ದ. ಕಾಸರಕನದ ಬೀಜ ಮೊಳೆತರೆ ಕಾಸರಕನ  ಗಿಡವೇ ಆಗಬೇಕಲ್ಲಾ? ಊರವರ ಮಾತಿನಲ್ಲಿ ಸತ್ಯವಿರಬಹುದು.

ಸಂಜೆಯಾಗುವಾಗ ಸುಬ್ಬಯಣ್ಣ, ರಾಮಣ್ಣನ ಜೊತೆ ಮಂಜೇಶ್ವರದಿಂದ ಹಿಂದಿರುಗಿದರು. ಅನಂತರ ಅಲ್ಲಿ ಎಲ್ಲರೂ ಕೂಡಿ ಒಂದು ತೀರ್ಮಾನಕ್ಕೆ ಬಂದರು. ವಿಷು ಹಬ್ಬದಂದು ಮಾಂಕರಾಲರು ಭೂತದ ಗುಂಡದ ಬಾಗಿಲು ತೆಗೆದು ಹೂ, ನೀರು ಇಟ್ಟು,

ಕಣಿ ಇಟ್ಟು ಚಾವಡಿಯಲ್ಲಿ ಕುಳಿತುಕೊಳ್ಳುವಾಗ ಕಿರಿಯರೆಲ್ಲ ಬಂದು ಅವರ ಕಾಲಿಗೆ ಬೀಳುವುದು ಹಬ್ಬದ ದಿನದ ಕ್ರಮ. ಅದು ಮುಗಿದ ಕೂಡಲೇ ಚಾವಡಿಯಲ್ಲೇ ಯುವಕರೆಲ್ಲ ಸೇರಿ ಅವರಲ್ಲಿ ಮಿತ್ತಬೈಲಿನ ಲೆಕ್ಕ ಕೇಳುವುದು. ಅಂದು ಒಕ್ಕಲಿನವರನ್ನಾಗಲೀ, ಹೊರಗಿನವರನ್ನಾಗಲೀ, ಅದರಲ್ಲೂ ಬಾರಬೈಲು, ಕಜೆಕೋಡಿಯ ಯುವಕರನ್ನು ಅಂಗಳಕ್ಕೆ ಬಾರದಂತೆ ನೋಡಿಕೊಳ್ಳಬೇಕೆಂದು ತೀರ್ಮಾನವಾಯಿತು. ಈ ಎಲ್ಲ ಸುದ್ದಿ ಮಾಂಕರಾಲರ ಕಿವಿಗೂ ಬಿತ್ತು.

ಮಿತ್ತಬೈಲಿನಲ್ಲಿ ವಿಷು ಹಬ್ಬದ ದಿನ ಬಂತು.





## ೧೨

## ರಾಮ ರಾಮಾ

ಆ ಮೇಷ ತಿಂಗಳ ಸಂಕ್ರಾಂತಿಯಂದು ಮಾಂಕರಾಲರು ಮನೆಗೆ ಬಂದು, ಮಿತ್ತಬೈಲಿನಲ್ಲಿ ಭೂತದ ಗುಂಡದ ಬಾಗಿಲು ತೆಗೆಸಿ, ಧೂಪ ಕೊಟ್ಟು, ಬೆಳಗ್ಗಿನ ವಿಷು ಹಬ್ಬದ ಕಣಿಗೆ ಬೇಗ ಎದ್ದು ತಯಾರಾಗಬೇಕೆಂದುಕೊಂಡು ಜಗಲಿಗೆ ಬಂದರು. ಜೊತೆಗೆ ಕರೆದುಕೊಂಡು ಬಂದಿದ್ದ ನಂಬಿಕಸ್ಥ ಬಲಗೈ ಬಂಟ ಅಮ್ಮಣನನ್ನು ಅವರ ಮಂಚದ ಬಳಿಯಲ್ಲಿಯೇ ಮಲಗಲು ಹೇಳಿದರು. ಮಲಗಿದ ಕೂಡಲೇ ಅವರಿಗೆ ನಿದ್ದೆ ಹತ್ತಿ ಬಿಟ್ಟಿತು. ಮನೆಯವರು, ಕೆಲಸದವರು ಎಲ್ಲಾ ವಿಷು ಹಬ್ಬದ ತಯಾರಿ ಯಲ್ಲಿದ್ದುದರಿಂದ ಯಾರೂ ಅವರ ಸುದ್ದಿಗೆ ಹೋಗಿರಲಿಲ್ಲ.

ಮಂಚದ ಪಕ್ಕದಲ್ಲಿ ಚಾಪೆ ಹಾಸಿ ಕುಳಿತಿದ್ದ ಅಮ್ಮಣ, ತನ್ನ ಯಜಮಾನರಿಗೆ ನಿದ್ದೆ ಹತ್ತಿದ ಕೂಡಲೇ ಎದ್ದು ಕೇರಿಯತ್ತ ನಡೆದ. ದೆಯ್ಯು ಅಂದು ಗೇರು ಹಣ್ಣಿನ ಸಾರಾಯಿ ತಯಾರಿಸುವ ಸುದ್ದಿಯನ್ನು ಮೊದಲೇ ತಿಳಿಸಿದ್ದ. ಕೇರಿಯ ಬಳಿ ಕೆಂಡ ಹಾಕಿ ಅದರ ಸುತ್ತ ಕುಳಿತು ದುಡಿ ಬಾರಿಸುತ್ತಾ, ತಯಾರಿಸಿದ ಸಾರಾಯಿಯನ್ನು ಎಲ್ಲರೂ ಕುಡಿಯುತ್ತಿದ್ದರು.

ಯಾರೋ ಹೇಳಿದರು, ''ಅಗೋ, ಅಮ್ಮಣ ಪೂಜಾರಿ ಬಂದರು. ಅವರಿಗೆ ಒಳಗಿನ ಮಾಲು ತಂದುಕೊಡು. ಪೂಜಾರಿಗಳೇ, ನಿಮಗೆ ಒಳಗಿನ ಮಾಲು ಆಗಬಹುದಲ್ಲವೇ?''

''ಗೇರುಹಣ್ಣಿನದ್ದಾದರೆ ಒಳಗಿನದ್ದೇ ಆಗಬಹುದು. ಅಲ್ಲದಿದ್ದರೆ ಒಂದು ಕುಡಿಕೆ ಶೇಂದಿಯೇ ಸಾಕು''.

''ಗೇರು ಹಣ್ಣಿದ್ದೇ ಇದೆ ತಗೊಳ್ಳಿ''.

ಲೋಟದಲ್ಲಿ ತಂದ ಸಾರಾಯಿಯನ್ನು ಕುಡಿದಾಗ ಅಮ್ಮಣನಿಗೆ ನಶೆ ನೆತ್ತಿಗೇರಿ ದಂತಾಯಿತು. ಕೇರಿಯ ಯುವಕರು ಒಬ್ಬೊಬ್ಬರೇ ತಂದುಕೊಟ್ಟ ನಾಲ್ಕೈದು ಲೋಟ ಗೇರುಹಣ್ಣಿನ ಸಾರಾಯಿಯನ್ನು ಮುಗಿಸಿದಾಗ ಎದ್ದು ನಿಲ್ಲಲಾಗಲಿಲ್ಲ. ಕೊನೆಗೆ ಇಬ್ಬರು ಯುವಕರು ಅವನ ತೋಳಲ್ಲಿ ಹಿಡಿದು ಎತ್ತಿಕೊಂಡು ಗರಡಿ ಕಟ್ಟೆಯಲ್ಲಿ ತಂದು ಮಲಗಿಸಿ ಅಲ್ಲೇ ಕಾಯುತ್ತಿದ್ದ ಕೆಲವರಿಗೆ ಕೈ ಸನ್ನೆ ಮಾಡಿ ಅಮ್ಮಣನ ಬಳಿ ಕುಳಿತುಕೊಂಡರು. ಆ ಇಬ್ಬರು ಸೊಂಟದಲ್ಲಿ ಬಾಳ ಕತ್ತಿ ಸಿಕ್ಕಿಸಿಕೊಂಡಿದ್ದುದು ಸಾರಾಯಿಯ ಮತ್ತಿನಲ್ಲಿ ಪ್ರಜ್ಞೆ ತಪ್ಪಿದಂತಾಗಿದ್ದ ಅಮ್ಮಣನಿಗೆ ತಿಳಿಯಲಿಲ್ಲ.

ಹೆಬ್ಬಾಗಿಲ ಬಳಿ ಮುಖಕ್ಕೆ ಗೋಣಿಚೀಲದ ಮುಸುಕು ಹಾಕಿಕೊಂಡು ಸರಿದ ಎರಡು ನೆರಳುಗಳ ಜೊತೆ, ಚಾವಡಿಯಿಂದ ಕಂಬಳಿ ಹೊದ್ದುಕೊಂಡು ಎದ್ದು ಬಂದ ಮತ್ತೆರಡು ನೆರಳುಗಳು ಸೇರಿಕೊಂಡವು. ಗೋಣಿಚೀಲ ಹೊದ್ದುಕೊಂಡ ನೆರಳುಗಳು ಮಾಂಕರಾಲರ ತಲೆಯ ಪಕ್ಕದಲ್ಲಿ ನಿಂತಾಗ, ಕಂಬಳಿ ಹೊದ್ದುಕೊಂಡು ಬಂದ ಮತ್ತೆರಡು ನೆರಳುಗಳು ಮಾಂಕರಾಲರ ಕಾಲ ಬಳಿ ನಿಂತುಕೊಂಡವು. ನಾಲ್ಕು ಜನರೂ ಒಮ್ಮೆಲೇ ಗಟ್ಟಿಯಾಗಿ ಹಿಡಿದುಕೊಂಡು ದಿಂಬನ್ನು ಮುಖಕ್ಕೆ ಒತ್ತಿ ಹಿಡಿದಾಗ ಮಾಂಕರಾಲರ ದೇಹ ಸ್ವಲ್ಪ ಕೈಕಾಲು ಬಡಿಯಲು ಪ್ರಯತ್ನಿಸಿತು. ಶೇಂದಿ ಕುಡಿದು ಮಲಗಿದ್ದ ಆ ದೇಹವನ್ನು ಉಸಿರಾಡದಂತೆ ಹಿಡಿದಿಡಲು ಅರೆ ಬಲಿತ ತೆಂಗಿನಕಾಯಿ ತಿಂದು ಬೆಳೆದ ಆ ಯುವಕರಿಗೆ ಕಷ್ಟವಾಗಲಿಲ್ಲ. ಆ ದೇಹ ತನ್ನ ಪ್ರತಿಭಟನೆಯನ್ನು ನಿಲ್ಲಿಸಿ ಸಡಿಲಗೊಂಡಾಗ ನಾಲ್ವರು ಯುವಕರೂ ದಿಂಬು, ಕಂಬಳಿಗಳನ್ನು ಸರಿಯಾದ ಜಾಗದಲ್ಲಿಟ್ಟು ಕತ್ತಲೆಯಲ್ಲಿ ಕರಗಿಹೋದರು.

ಅಷ್ಟರತನಕ ಚಾವಡಿಯ ಪೆಠಾರಿಯ ಮೇಲೆಯೇ ಕುಳಿತಿದ್ದ ಯಮುನಕ್ಕ ಮಲಗಿ, ತಲೆ ತುಂಬಾ ಹೊದಿಕೆ ಎಳೆದುಕೊಂಡರು. ಗರಡಿಯ ಕಟ್ಟೆಯಲ್ಲಿದ್ದ ಯುವಕರು ಅಮ್ಮಣನನ್ನು ಎತ್ತಿ ತಂದು ಮಾಂಕರಾಲರ ಮಂಚದ ಬಳಿ ಮಲಗಿಸಿ ಹೋದರು.

ಸುಬ್ಬಯಣ್ಣ ಹಿಂದಿನ ದಿನ ಚಿಕ್ಕಪ್ಪ ರೈಗಳನ್ನು ಕರೆದುಕೊಂಡು ಮಂಜೇಶ್ವರ ಪೊಲೀಸ್ ಠಾಣೆಗೆ ಹೋಗಿ ಮಿತ್ತಬೈಲಿಗೆ ಇಬ್ಬರು ಪೊಲೀಸರನ್ನು ಕಳುಹಿಸುವಂತೆ ಕೇಳಿ ಹೋಗಿದ್ದರು. ಮಾಂಕರಾಲರಲ್ಲಿ ಭೂಮಿ, ಚಿನ್ನಾಭರಣ, ಗೇಣಿ, ಹುಟ್ಟುವಳಿಯ ಲೆಕ್ಕಪತ್ರ ಕೇಳುವಾಗ ಅಲ್ಲೇನಾದರೂ ಜಗಳವಾಗಬಹುದೆಂದು ಅವರಿಗೆ ಭಯ. ಚಿಕ್ಕಪ್ಪ ರೈಗಳು ಪೊಲೀಸ್ ಠಾಣೆಯಿಂದ ಪಟ್ಟದ ಗುತ್ತಿಗೆ ಹಿಂದಿರುಗಿದ್ದರು. ಸುಬ್ಬಯಣ್ಣ, ಸುಬ್ರಾಯ ಕಮ್ತಿಯವರ ಮನೆಗೆ ಹೋಗಿ ಮಿತ್ತಬೈಲು ಗುತ್ತಿನ ಆಸ್ತಿಯ ವಿವರ ಪಡೆದುಕೊಂಡರು.



ಊರಿನ ಶಾನುಭೋಗ ಕಮ್ತಿಯವರಿಗೆ ಆಸ್ತಿಯ ವಿವರ ತಿಳಿದಷ್ಟು ಬೇರೆ ಯಾರಿಗೂ ತಿಳಿದಿರಲು ಸಾಧ್ಯವಿರಲಿಲ್ಲ.

ಭಂಡಾರಿಗಳು ಅಳಿಯ ಸುಬ್ರಾಯ ಕಮ್ತಿಗೆ ಶಾನುಭೋಗತನವನ್ನು ವಹಿಸಿ ಕೊಡುವಾಗ ಮಿತ್ತಬೈಲಿನ ತಲೆತಲಾಂತರದ ಆಸ್ತಿ, ಸಂಬಂಧಗಳನ್ನು ತಿಳಿಸಿಕೊಟ್ಟು,

''ಸುಬ್ರಾಯ, ಏನೇ ಆಗಲಿ ಮಿತ್ತಬೈಲು ಮನೆಯವರ ಋಣ ಭಂಡಾರ ಮಠದವರ ತಲೆಯ ಮೇಲಿದೆ ಎಂಬ ಮಾತನ್ನು ಯಾವತ್ತೂ ಮರೆಯಬೇಡ'' ಎಂದು ಹೇಳಿದ್ದರು. ಸುಬ್ರಾಯ ಯಾರಿಗೂ ತಿಳಿಯದಂತೆ ಊರನ್ನೇ ಮಾರಿಬಿಡುವಷ್ಟು ಬುದ್ಧಿವಂತ. ಆದರೂ ಮಾವ ಭಂಡಾರಿಗಳ ಮಾತನ್ನು ಆತ ಎಂದೂ ಮರೆತಿಲ್ಲ. ಅಲ್ಲದೆ, ಸುಬ್ಬಯಣ್ಣನೂ, ಅವನ ಮಾವನನಂತರದ ಹಿರಿಯರಾದ ಗೋವಿಂದರೂ ಆತ್ಮೀಯ ಗೆಳೆಯರು ಎಂದು ಅವನಿಗೆ ತಿಳಿದಿತ್ತು.

ಸುಬ್ಬಯಣ್ಣ ಮಿತ್ತಬೈಲಿನ ಆಸ್ತಿಯ ವಿವರಗಳನ್ನೆಲ್ಲ ಪಡೆಯುವಾಗ ರಾತ್ರಿಯಾಗಿತ್ತು. ಸುಬ್ರಾಯ ಕಮ್ತಿ, ಅವರನ್ನು ಅಂದು ರಾತ್ರಿ ಮಂಜೇಶ್ವರದಲ್ಲೇ ಉಳಿದು ಬೆಳಗ್ಗೆ ಹೋಗುವಂತೆ ಹೇಳಿ, ಅವರ ಜೊತೆ ತಾನೂ ಮಿತ್ತಬೈಲಿಗೆ ಬರುವುದಾಗಿ ತಿಳಿಸಿ, ಗೋವಿಂದರ ಮನೆಗೆ ಕಳುಹಿಸಿದನು.

ಸುಬ್ಬಯಣ್ಣ, ಗೋವಿಂದರ ಮನೆಗೆ ಹೋಗಿ ಒಂದು ಲೋಟ ಹಾಲು ಕುಡಿದು ಅಟ್ಟದ ಪುಸ್ತಕಗಳ ಮಧ್ಯೆ ಬಿದ್ದುಕೊಂಡರು. ಗೆಳೆಯರಿಬ್ಬರಿಗೂ ಎಷ್ಟು ಮಾತನಾಡಿದರೂ ಮುಗಿಯುತ್ತಲೇ ಇರಲಿಲ್ಲ. ಸುಬ್ಬಯಣ್ಣ ತನ್ನ ಮಾವ ಮಾಂಕರಾಲರು ತನ್ನ ಕುಟುಂಬಕ್ಕೆ ಕೊಟ್ಟ ಕಷ್ಟ, ಮಾಡಿದ ಅನ್ಯಾಯಗಳನ್ನು ಹೇಳಿದಾಗ ಗೋವಿಂದರಿಗೂ ಆಶ್ಚರ್ಯವಾಯಿತು. ಅವರು ಕೆಲವು ವಿಷಯಗಳನ್ನು ಜನರಿಂದ ಕೇಳಿದ್ದಾದರೂ ಪರಿಸ್ಥಿತಿ ಇಷ್ಟೊಂದು ಹದಗೆಟ್ಟಿದೆ ಎಂದು ತಿಳಿದಿರಲಿಲ್ಲ. ಮಾಂಕರಾಲರು ಮಾರಿದ ಚಿನ್ನ, ಬೆಳ್ಳಿ, ಅಡವು – ಆರುವಾರು ಮಾಡಿದ ಆಸ್ತಿಯ ವಿವರಗಳನ್ನು ಕೇಳಿ ಅವರಿಗೆ ಬೇಸರವಾಯಿತು.

''ನೀವು ಕುಟುಂಬದವರು ನಾಳೆ ಮಾಂಕರಾಲರಲ್ಲಿ ಲೆಕ್ಕಪತ್ರ ಕೇಳುವಾಗ ಅವರು ಕೊಡದಿದ್ದರೆ ಏನು ಮಾಡುತ್ತೀರಿ?'' ಗೋವಿಂದರು ಕೇಳಿದರು.

''ಏನು ಮಾಡುವುದೆಂಬುದೇ ಸಮಸ್ಯೆ ಗೋವಿಂದಣ್ಣ, ನಮ್ಮ ಹುಡುಗರು ಬೆಂಕಿಯಾಗಿದ್ದಾರೆ. ಎಲ್ಲಾದರೂ ಅವರ ಮೈಮೇಲೆ ಕೈ ಹಾಕಿ ಜಗಳ, ಪೆಟ್ಟು ಆಗಬಹುದೇ ಎಂಬ ಭಯ. ಅದರ ಜೊತೆಗೆ ಆ ಬಾರಬೈಲಿನ ಹುಡುಗರೇನಾದರೂ ಅಂಗಳಕ್ಕೆ ಬಂದರೆಂದಾದರೆ ಜಗಳ ಆಗುವುದರಲ್ಲಿ ಸಂಶಯವೇ ಇಲ್ಲ. ನನ್ನ ಬಗ್ಗೆ ನಿಮಗೆ ತಿಳಿದಿದೆ – ಇನ್ನು ಸರಕಾರದ ಬಗ್ಗೆ ಹೇಳುವುದಾದರೆ, ಕಳ್ಳನಿಗೆ 'ರಾವ್ ಬಹದ್ದೂರು' ಬಿರುದು ಕೊಡಲು, ಅನ್ಯಾಯವನ್ನು ತಡೆಯಲು ಹೋದವರನ್ನು ಜೈಲಿಗೆ ಹಾಕಲು ತಯಾರಾಗಿದೆ''.

''ಈ ಕೇಸು ಇನ್ನೆಷ್ಟಾದರೂ ನಿಲ್ಲಲಿಕ್ಕಿಲ್ಲ ಸುಬ್ಬಯಣ್ಣ, ನನಗೆ ಬಂದ ಸುದ್ದಿಯಂತೆ ಇನ್ನು ಮೂರು–ನಾಲ್ಕು ತಿಂಗಳಲ್ಲಿ ಬ್ರಿಟಿಷರೇ ಇಲ್ಲಿಂದ ಜಾಗ ಖಾಲಿ ಮಾಡುತ್ತಾರೆ.


ಹಾಗಾಗಿ ಯುವಕರನ್ನು ಸ್ವಲ್ಪ ತಾಳ್ಮೆಯಿಂದಿರಲು ಹೇಳಿ. ಬ್ರಿಟಿಷರು ಹೋದ ಮೇಲೆ ನಿನ್ನ ಮಾವ ಮಾಂಕರಾಲ ದಾರಿಗೆ ಬರಬಹುದು''.

''ಗೋವಿಂದಣ್ಣಾ, ಈ ಯುವಕರ ತಾಳ್ಮೆಯ ಕಟ್ಟೆಯೊಡೆದಿದೆ. ಮಾಂಕರಾಲರು ಚಿನ್ನ, ಬೆಳ್ಳಿ ಕದ್ದು ಮಾರುವಾಗ ಅವರನ್ನು ಸಮಾಧಾನಿಸಲು ನನಗೆ ಸಾಧ್ಯವಾಗಿತ್ತು. ಆದರೆ ಈಗ ಪರಿಸ್ಥಿತಿ ಕೈ ಮೀರಿದೆ. ಅವರನ್ನು ಹದ್ದುಬಸ್ತಿನಲ್ಲಿಡಬಹುದು ಎಂಬ ವಿಶ್ವಾಸ ನನಗಿಲ್ಲ. ನಾಳೆ ವಿಷು ಹಬ್ಬದ ಮೊದಲ ದಿನ, ಒಳ್ಳೆಯ ದಿನ. ಚೆನ್ನಾಗಿ ಕಳೆದಿದ್ದರೆ ಸಾಕಿತ್ತು. ಆ ಮಾಂಕರಾಲರು ಏನಾದರೂ ಹೊಸ ಆಟ ಆಡದಿದ್ದರೆ ಸಾಕು. ಆ ಮಲರಾಯ ನಾಳೆಯ ದಿನ ಗುತ್ತಿನ ಮಾನ ಕಾಪಾಡಬಹುದೆಂದು ನಂಬಿದ್ದೇನೆ''.

ಇಬ್ಬರೂ ಮಾತಾಡುತ್ತ ಮಾತಾಡುತ್ತ ಮಲಗಿದರು.

ಸುಬ್ಬಯಣ್ಣ ಮುಂಜಾನೆ ಎದ್ದು ಸುಬ್ರಾಯ ಕಮ್ತಿಯ ಜೊತೆ ಮಿತ್ತಬೈಲಿಗೆ ಬಂದು ತಲುಪುವಾಗ ಗಂಡಸರು, ಹೆಂಗಸರೆಲ್ಲ ವಿಷು ಹಬ್ಬದ ಸ್ನಾನದ ಗೌಜಿಯಲ್ಲಿದ್ದರು. ಯುವಕರು ಸ್ನಾನ ಮಾಡಿ ಬಂದವರು ಚಾವಡಿಯಲ್ಲಿ ಮನೆ ಸಿಂಗರಿಸುವ ಸಂಭ್ರಮದಲ್ಲಿದ್ದರು. ಗರಡಿಯಲ್ಲಿ ಮಲಗಿದ್ದ ಮಾಂಕರಾಲ ಮತ್ತು ಅಮ್ಮಣ ಎದ್ದಿರಲಿಲ್ಲ. ಸುಬ್ಬಯಣ್ಣ, ಶಾನುಭೋಗರನ್ನು ಚಪ್ಪರದಡಿಯಲ್ಲಿ ಕುಳ್ಳಿರಿಸಿ, ಗರಡಿಯಲ್ಲಿ ಮಲಗಿದ್ದ ಅಮ್ಮಣನನ್ನು ತಟ್ಟಿ ಎಬ್ಬಿಸಿ,

''ಪಟೇಲರನ್ನು ಎಬ್ಬಿಸು ಶಾನುಭೋಗರು ಬಂದಿದ್ದಾರೆ, ಕಣಿ ಇಡಲು ಸಮಯ ಆಯಿತೆಂದು ಹೇಳು'' ಎಂದು ಹೇಳಿ ಸ್ನಾನದ ಕೋಣೆಗೆ ಹೋದರು.





೧೩

# ಹಸೆಮಣೆಯ ಕೊನೆಯಲ್ಲಿ ಮಸಣದ ಚಿಂತೆ

ಸ್ನಾನದ ಕೋಣೆಗೆ ಹೋದ ಸುಬ್ಬಯಣ್ಣ ಎರಡು ಕೊಳಗ ನೀರು ಹೊಯ್ಯುದ್ಕೊಳ್ಳುತ್ತಿರುವಾಗಲೇ ಯಾರೋ ಕೂಗಿದರು,

''ಸುಬ್ಬಯಣ್ಣಾ... ಸುಬ್ಬಯಣ್ಣಾ... ಬೇಗ ಬನ್ನಿ'' ಸ್ನಾನವನ್ನು ಅರ್ಧದಲ್ಲೇ ನಿಲ್ಲಿಸಿ, ಲುಂಗಿ ಸುತ್ತಿಕೊಂಡು, ಬೈರಾಸಿನಿಂದ ತಲೆ ಒರೆಸಿಕೊಳ್ಳುತ್ತಾ ಹೊರಗೆ ಬಂದಾಗ ಗರಡಿಯಲ್ಲಿ ಮಾಂಕರಾಲರ ಸುತ್ತ ಎಲ್ಲರೂ ಸೇರಿದ್ದರು.

ಸುಬ್ಬಯಣ್ಣ ಹತ್ತಿರ ಬಂದಾಗ, ಸುಬ್ರಾಯ ಕಮ್ತಿ ಮಾಂಕರಾಲರ ನಾಡಿ ಪರೀಕ್ಷಿಸುತ್ತಿದ್ದರು. ಮರಗಟ್ಟಿದ್ದ ಕೈಯನ್ನು ಕೆಳಗೆ ಬಿಟ್ಟಾಗ ಎಲ್ಲರೂ ಅವರ ಮುಖ ನೋಡಿದರು. ಅವರು ತಲೆ ಆಡಿಸಿದರು. ಸುಬ್ಬಯಣ್ಣ ಮಾಂಕರಾಲರ ಮುಖ ನೋಡಿದಾಗ ಕಣ್ಣು ಹೊರಗೆ ಬಂದತ್ತಿದ್ದು ವಿಕಾರವಾಗಿ ಕಾಣುತ್ತಿತ್ತು.

ಮಾಂಕರಾಲರು ಈ ಲೋಕ ಬಿಟ್ಟು ಹೋಗಿದ್ದರು. ಕಾಲ ಬುಡದಲ್ಲಿ ತಲೆಯ ಮೇಲೆ ಕೈ ಹೊತ್ತು ಕುಳಿತಿದ್ದ ಅಮ್ಮಣ ಅಳುತ್ತಿದ್ದ. ಮನೆಯ ಹೆಂಗಸರು, ಮಕ್ಕಳು ವಿಷು ಹಬ್ಬದ ಕಣಿ ಇಡಲು ತಯಾರಾಗಿದ್ದವರು, ಗರಡಿಯಲ್ಲಿ ಮಾಂಕರಾಲರ ಸುತ್ತ ನಿಂತು ಅಳತೊಡಗಿದರು.

ಸುಬ್ಬಯಣ್ಣ ಅಕ್ಕನನ್ನು ಕರೆದು, ಹೆಂಗಸರನ್ನೆಲ್ಲ ಚಾವಡಿಯ ಒಳಗೆ ಕರೆದುಕೊಂಡು ಹೋಗುವಂತೆ ಹೇಳಿ, ಹಿರಿಯರಲ್ಲಿ ಮಾಂಕರಾಲರ ಬಾಯಿಗೆ ನೀರು ಬಿಡುವಂತೆ ಹೇಳಿದರು. ಸತ್ತು ಮರಗಟ್ಟಿದ್ದ ಮಾಂಕರಾಲರ ಬಾಯಿಯ ಒಳಗೆ ಮಲರಾಯ ಗುಂಡದ ನೀರು ಇಳಿಯಲಿಲ್ಲ.

ಸುಬ್ರಾಯ ಕಮ್ತಿ, ಅಮ್ಮಣನನ್ನು ಕರೆದು ವಿಚಾರಿಸಿದರು. ಅಮ್ಮಣ ರಾತ್ರಿ ಮಲಗಿದ ತನಗೆ ಬೆಳಗ್ಗೆಯೇ ಎಚ್ಚರವಾದುದು, ರಾತ್ರಿ ಅವರು ನರಳಿರುವುದನ್ನು ಕೂಡಾ ತಾನು ಕೇಳಿರಲಿಲ್ಲ ಎಂದು ಹೇಳಿದ. ಬರುವಾಗ ವಿಷು ಹಬ್ಬದ ಕಣಿಯ ಬಗ್ಗೆ ಮಾತನಾಡಿಕೊಂಡು ದಾಗಿಯೂ, ಇಬ್ಬರೂ ಒಂದೊಂದು ಕುಡಿಕೆ ಶೇಂದಿ ಕುಡಿದು ಮಲಗಿರುವುದಾಗಿಯೂ ಹೇಳಿದ. ತಾನು ಎಂದಿನಂತೆಯೇ ಅವರ ಕಾಲ ಬಳಿಯಲ್ಲಿಯೇ ಮಲಗಿದವನು, ಮೂತ್ರಕ್ಕೂ ಎದ್ದಿರಲಿಲ್ಲ ಎಂದು ತಿಳಿಸಿದ.

ಬಲ್ಗೈ ಬಂಟ ಎಲ್ಲವನ್ನೂ ಹೇಳಿದ್ದರೂ, ಕೇರಿಗೆ ಹೋಗಿ ಸಾರಾಯಿ ಕುಡಿದುದರ ಬಗ್ಗೆ ಚಕಾರವೆತ್ತಲಿಲ್ಲ. ಅವನಿಗೆ ತಾನು ಗರಡಿಗೆ ಹೇಗೆ ಬಂದೆ, ಎಷ್ಟು ಹೊತ್ತಿಗೆ ಬಂದು ಮಲಗಿದೆನೆಂದು ಎಷ್ಟು ಯೋಚಿಸಿದರೂ ನೆನಪೇ ಆಗಲಿಲ್ಲ. ನೆನಪಿದ್ದುದು ಕೇರಿಯಲ್ಲಿ ಕುಡಿದ ಸಾರಾಯಿ ಮಾತ್ರ. ಹಾಗಾಗಿ ಆತ ಅದರ ಸುದ್ದಿಯೇ ಎತ್ತಲಿಲ್ಲ. ಮನೆಯ ಯುವಕರೂ ''ರಾತ್ರಿ ಅಮ್ಮಣನೂ, ಮಾಂಕರಾಲರೂ ಬಂದು ಮಲಗಿದುದನ್ನು ನಾವು ನೋಡಿದ್ದೇವೆ. ಬೆಳಗ್ಗೆ ಸ್ನಾನಕ್ಕೆ ಹೊರಡುವಾಗಲೇ ನಾವು ಮಲಗಿದವರನ್ನು ನೋಡಿದ್ದು'' ಎಂದರು.

ಸುಬ್ರಾಯ ಕಮ್ತಿ, ಸುಬ್ಬಯಣ್ಣನಲ್ಲಿ ಮಾಂಕರಾಲರ ಹೆಂಡತಿ, ಮಕ್ಕಳನ್ನು ಕರೆಸುವಂತೆ ಹೇಳಿದರು. ಸುಬ್ಬಯಣ್ಣ ಎಲ್ಲ ಕಡೆಗೂ ಜನ ಕಳುಹಿಸಿದರು. ಅಮ್ಮಣನನ್ನೂ, ದೆಯ್ಯುವನ್ನೂ ಕಜೆಕೋಡಿಗೆ ಹೋಗುವಂತೆ ಹೇಳಿದರು.

ಕುಟುಂಬದವರು ಹೆಣವನ್ನು ಚಾವಡಿಗೆ ತಂದು ಬಟ್ಟೆ ಬದಲಿಸಿ ಮುಖಕ್ಕೆ ಬಟ್ಟೆ ಹಾಕುವಾಗ, ಒಬ್ಬ ಹೆಣದ ಮುಖವನ್ನು ಸವರಿ, ತೆರೆದಿದ್ದ ಕಣ್ಣನ್ನು ಮುಚ್ಚುವಂತೆ ಮಾಡಿದನು.

ಯುವಕರು ಚಾವಡಿಯ ನೆಲಕ್ಕೆ ತೆಂಗಿನ ಎಣ್ಣೆಯನ್ನು ಹಚ್ಚಿ, ನೆಲದ ಮೇಲೆ ಹೆಣವನ್ನು ಮಲಗಿಸಿ, ಬೇರೆ ಬೇರೆ ಕೆಲಸಗಳ ಜವಾಬ್ದಾರಿ ಹೊತ್ತು ಹೊರಟು ಹೋದರು. ಇಬ್ಬರು ಹೊಸ ಬಟ್ಟೆ ತರಲು ಹೊರಟರು. ನಾಲ್ಕು ಮಂದಿ ಹೊಳೆಯ ಆ ಬದಿಗೆ ಹೋಗಿ ಮಾವಿನ ಮರ ಕಡಿಸಿ ಚಿತೆಗೆ ಸೌದೆಯ ವ್ಯವಸ್ಥೆ ಮಾಡಲು ಹೊರಟರು. ಆಗಲೇ



ಕ್ಷೌರಿಕನೂ, ಮಡಿವಾಳನೂ ಬಂದು ತಲುಪಿದರು.

ಹೆಣವನ್ನು ತೆಂಕು ದಿಕ್ಕಿಗೆ ತಲೆ ಮಾಡಿ ಮಲಗಿಸಿ, ತಲೆಯ ಪಕ್ಕ ಕಳಸೆ ಅಕ್ಕಿ, ಕಾಲ ಬಳಿ ಕಳಸೆ ಭತ್ತ ರಾಶಿ ಹಾಕಿ ಅದರ ಮೇಲೆ ಸುಲಿಯದ ತೆಂಗಿನಕಾಯಿಯನ್ನು ಭಾಗ ಮಾಡಿ ಅಕ್ಕಿ, ಭತ್ತದ ಮೇಲೆ ಇಟ್ಟು, ತೆಂಗಿನ ಎಣ್ಣೆಯಿಂದ ದೀಪ ಬೆಳಗಿಸಿದರು.

ಹೊತ್ತು ಸ್ವಲ್ಪ ಏರುವಾಗ ಹೆಂಡತಿ, ಮಕ್ಕಳು ಬಂದು ತಲುಪಿದರು. ಊರವರು, ಬಂಧುಗಳು ಬಂದು ತಲುಪುವಾಗ ಮಧ್ಯಾಹ್ನ ಕಳೆಯಿತು. ವಿಷು ಹಬ್ಬದ ಕಣಿ ನೋಡಲು ಬಂದವರಿಗೆಲ್ಲ ಸಿಕ್ಕಿದುದು ಮಾಂಕರಾಲರ ಸಾವಿನ ಸುದ್ದಿ. ಬಾರಬೈಲಿನ ತ್ಯಾಂಪಣ್ಣ, ಅಮ್ಮಣ ಪೂಜಾರಿ ಬಂದವರು ಸುಬ್ರಾಯ ಕಮ್ತಿಯ ಜೊತೆ ಮಾತನಾಡುತ್ತಿದ್ದರು. ಹೊತ್ತು ಸಂಜೆಯಾಯಿತು. ಯಾರೋ ಕೇಳಿದರು,

''ಪೊಲೀಸರಿಗೆ ತಿಳಿಸುವುದು ಬೇಡವೇ?''

''ಯಾಕೆ? ಹೆಣವನ್ನು ಕೊಳೆತು ನಾರುವಂತೆ ಮಾಡಲಿಕ್ಕಾ?''

ಮಾಂಕರಾಲರ ತಮ್ಮ ಮೈಂದರಾಲರು ಹೇಳಿದಾಗ ಗುಸುಗುಸು ಚರ್ಚೆ ಆರಂಭ ವಾಯಿತು. ಕೊನೆಗೆ ಮಾಂಕರಾಲರ ಮಕ್ಕಳು, ಬಾರಬೈಲಿನ ತ್ಯಾಂಪಣ್ಣ, ಚಿಕ್ಕಪ್ಪ ರೈಗಳು ಪರಸ್ಪರ ಮಾತನಾಡಿ ಹೆಣ ತೆಗೆಯುವ ವ್ಯವಸ್ಥೆ ನಡೆಸಿದರು. ತ್ಯಾಂಪಣ್ಣ ಮಾಂಕರಾಲರ ಹೆಂಡತಿ, ಮಕ್ಕಳಲ್ಲಿ ಚರ್ಚಿಸಿ, ಮೈಂದರಾಲರಲ್ಲಿ ಹೆಣ ತೆಗೆಯಲು ಯಾರದ್ದೂ ಅಡ್ಡಿ ಇಲ್ಲ ಎಂದಾಗ ಅಂತ್ಯಕ್ರಿಯೆ ಆರಂಭವಾಯಿತು.

ಅಂಗಳದ ತೆಂಕು ದಿಕ್ಕಿನಲ್ಲಿ ಮೂರು ಕಲ್ಲು ಇಟ್ಟು ಒಲೆ ಹಾಕಿ, ಹೊಸ ಮಡಕೆಯಲ್ಲಿ ನೀರಿಟ್ಟು, ಸೋಗೆಯ ತಡಿಕೆ ಕಟ್ಟಿದರು. ಕಂಬಳದ ಗದ್ದೆ ಸಮತಟ್ಟು ಮಾಡುವ ಹಲಗೆಯನ್ನು ತಂದು ಹೆಣವನ್ನು ಅದರ ಮೇಲೆ ಮಲಗಿಸಿ ಸೀಗೆ, ಅರಸಿನ ಸವರಿದರು. ಕ್ಷೌರಿಕ ಹೆಣದ ಉಗುರು ತೆಗೆದು ತೂತು ಗೆರಟೆಯಲ್ಲಿ ಕಾಲಿಗೆ ನೀರು ಹಾಕಿದನು. ಹೆಂಡತಿ, ಮಕ್ಕಳು ಬಂದು ಕಾಲಿಗೆ ನೀರು ಹಾಕಿ ತೊಳೆಯುವ ಕ್ರಮವನ್ನು ಮುಗಿಸಿದರು. ಕುಟುಂಬದವರು ಬಂದು ತಲೆಗೆ ನೀರು ಹಾಕಿದರು. ಮಡಿವಾಳಗಿತ್ತಿ ಹೆಣದ ಮೇಲಿನ ನೀರನ್ನು ಬೈರಾಸಿನಿಂದ ಒರಸಿ ತೆಗೆದು ಹೊಸ ಬಟ್ಟೆಯನ್ನು ಹೊದಿಸಿದಳು.

ಬಟ್ಟೆಯಲ್ಲಿ ಹೊದ್ದ ಹೆಣವನ್ನು ಚಾವಡಿಗೆ ತಂದು ಕಚ್ಚೆ ಹಾಕಿ, ಮುಂಡಾಸು ಕಟ್ಟಿ ಶೃಂಗರಿಸಿದರು. ಬಡಗು ದಿಕ್ಕಿಗೆ ತಲೆ ಹಾಕಿಸಿ, ತೆಂಕು ದಿಕ್ಕಿಗೆ ಕಾಲು ಹಾಕಿಸಿ ಮಲಗಿಸಿದ ಹೆಣದ ತಲೆಯ ಬಳಿ ಮತ್ತೆ ಅಕ್ಕಿಯ ರಾಶಿಯನ್ನೂ, ಕಾಲಿನ ಬಳಿ ಭತ್ತದ ರಾಶಿಯನ್ನೂ ಹಾಕಿ, ತೆಂಗಿನಕಾಯಿಯ ಗಡಿಯಲ್ಲಿ ತೆಂಗಿನ ಎಣ್ಣೆ ಹಾಕಿ ದೀಪ ಉರಿಸಿ ಇಟ್ಟರು.

ಕುಟುಂಬದವರು ಬಂದು ಕಂಚಿನ ತಂಬಿಗೆಯಲ್ಲಿದ್ದ ನೀರನ್ನು ಹೆಣದ ಬಾಯಿಗೆ ಬಿಟ್ಟರು. ಅದರ ಬೆನ್ನಿಗೆ ಹೆಂಡತಿ, ಮಕ್ಕಳು ಹೆಣಕ್ಕೆ ಸುತ್ತು ಬಂದು ನೀರು ಬಿಟ್ಟರು. ಅನಂತರ ಊರವರು, ಒಕ್ಕಲಿನವರು, ಇತರರು ನೀರು ಬಿಟ್ಟಾಗುವಾಗ ಹೊತ್ತು ಬಹಳವಾಗಿತ್ತು. ನೀರು ಬಿಡುವ ಕ್ರಮ ಮುಗಿಯುವಾಗ ಹೆಂಡತಿ, ಮಕ್ಕಳು, ಕುಟುಂಬದ

ಹೆಂಗಸರ ಅಳುವಿನ ಮಧ್ಯೆ ಅಂಗಳದಲ್ಲಿದ್ದ ಚಟ್ಟಕ್ಕೆ ಇಡೀ ಬಾಳೆ ಎಲೆ ಹಾಸಿ ಅದರ ಮೇಲೆ ಹೆಣವನ್ನು ಮಲಗಿಸಿದರು. ಮನೆಯವರು, ಹೆಂಡತಿ, ಮಕ್ಕಳು, ಬೀಗರು ತಂದಿದ್ದ ಹೊಸ ಬಟ್ಟೆಗಳನ್ನು ಹೆಣದ ಮೇಲೆ ಹಾಕಿದರು. ಒಂದು ತೆಂಗಿನಕಾಯಿ, ಒಂದು ಸೇರು ಅಕ್ಕಿಯನ್ನು ಬಟ್ಟೆಯಲ್ಲಿ ಕಟ್ಟಿ ಇಟ್ಟು, ಎಡಬಲಕ್ಕೆ ಬೆಳ್ತಿಗೆ ಅಕ್ಕಿ ಕಡೆದು ಮಾಡಿದ 'ಪಿಂಡ'ವನ್ನು ಬಾಳೆ ಎಲೆಯಲ್ಲಿ ಇಟ್ಟರು.

ಬೈಲಿನ ಬೆಟ್ಟು ಗದ್ದೆಯಲ್ಲಿ ಚಿತೆ ತಯಾರಾಗಿದೆ ಎಂದು ಯುವಕರು ಕರೆದು ಹೇಳಿದರು. ಮನೆಯ ಯುವಕರು ಚಟ್ಟವನ್ನು ಎತ್ತಿ ಹೆಗಲ ಮೇಲೆ ಇಟ್ಟುಕೊಂಡರು. ಮಕ್ಕಳು ನೀರು, ಎಳನೀರು ಹಿಡಿದುಕೊಂಡರು. ಹೊಸ ಮಡಕೆಯಲ್ಲಿ ಬೆರಣಿಯಿಂದ ಉರಿಸಿದ ಬೆಂಕಿಯನ್ನು ಹಿರಿಯ ಮಗ ಹಿಡಿದುಕೊಂಡನು. ತಂಬಿಗೆಯಲ್ಲಿ ನೀರನ್ನು ಕಿರಿಯವ ಹಿಡಿದುಕೊಂಡನು.

ಚಟ್ಟಕ್ಕೆ ಹೆಗಲು ಕೊಡಲು ಹೋದ ಬಾರಬೈಲಿನ ತ್ಯಾಂಪಣ್ಣನನ್ನು ಯಾರೋ ಯುವಕರು ಹಿಡಿದು ದೂಡಿದರು ''ಮಾವನ ಹೆಣಕ್ಕೆ ಹೆಗಲು ಕೊಡಲು ನಾವು ಅಳಿಯಂದಿರಿದ್ದೇವೆ. ಅದಕ್ಕೆ ಹಾದರಕ್ಕೆ ಹುಟ್ಟಿದವರ ಅಗತ್ಯ ಇಲ್ಲ'' ಎಂದು ಒಬ್ಬ ಗುಟುರು ಹಾಕಿದ.

''ಗೋವಿಂದಾ'' ಎನ್ನುತ್ತಾ ಹೊತ್ತುಕೊಂಡು ಹೋದ ಹೆಣವನ್ನು ಅಪ್ರದಕ್ಷಿಣೆಯಾಗಿ ಮೂರು ಸುತ್ತು ತಂದು ಚಿತೆಯ ಮೇಲೆ ಇಟ್ಟರು. ಕೊನೆಯ ತುಳಸಿ ನೀರು ಬಿಟ್ಟು ಹೆಣದ ಕೊರಳಲ್ಲಿದ್ದ ಚಿನ್ನದ ಚಕ್ರಸರವನ್ನು ತೆಗೆದ ಹಿರಿಯರೊಬ್ಬರು ಮಕ್ಕಳಲ್ಲಿ ಕೊಟ್ಟರು. ಕೈಯಲ್ಲಿದ್ದ ಅಧಿಕಾರ ಕಂಕಣ ಹಾಗೂ ಕಾಲಿನ ಕಡಗಗಳನ್ನು ತೆಗೆದು ಸುಬ್ಬಯಣ್ಣನಲ್ಲಿ ಕೊಟ್ಟರು. ಹೆಣಕ್ಕೆ ಹಾಕಿದ್ದ ಹೊಸ ಬಟ್ಟೆಗಳನ್ನು ತೆಗೆದು ಕೆಲಸದವರಿಗೆ ಕೊಟ್ಟರು. ಮೂರು ಸುತ್ತು ಬಂದು ಕೊಡದ ನೀರನ್ನು ಹಿಂದಿನ ಮಗ್ಗುಲಲ್ಲಿ ಸುರಿದು, ಹಿರಿಯ ಮಗನೂ ಸುಬ್ಬಯಣ್ಣನೂ ಚಿತೆಗೆ ಬೆಂಕಿಯಿಟ್ಟರು.

ದೂರದಿಂದ ಕೊರಗರು ಮರಣದ ಡೋಲು ಬಾರಿಸಿಕೊಂಡು ಬಂದು ಮೇಲಿನ ಗದ್ದೆಯಲ್ಲಿ ನಿಂತು ಬಾರಿಸ ತೊಡಗಿದಾಗ ಅದರ ಶಬ್ದ ಮರಣ ವಾರ್ತೆಯನ್ನು ದೂರ ದವರೆಗೂ ತಿಳಿಸುತ್ತಿತ್ತು.

ಮನೆಗೆ ಬಂದ ಕುಟುಂಬದವರಿಗೆ, ಮಕ್ಕಳಿಗೆಲ್ಲ ಕ್ಷೌರಿಕ ಕ್ಷೌರ ಮಾಡಿ ಮುಗಿಸಿದಾಗ, ಮಡಿವಾಳ 'ಶುದ್ಧ'ದ ನೀರು ಚಿಮುಕಿಸಿದನು. ಚಾವಡಿಯಲ್ಲಿ ಮಾಂಕರಾಲರ ಹೆಂಡತಿ ಓಲೆ, ಮಾಂಗಲ್ಯ, ಬಳೆಗಳನ್ನು ತೆಗೆದಿರಿಸಿ ಶೋಕ ಸೂಚಕ ಸೀರೆ ಉಟ್ಟು, ದುಃಖದ ಕೋಣೆಗೆ ಹೊಕ್ಕರು. ಮಡಿವಾಳಗಿತ್ತಿ ಕೋಣೆಗೆ ಒಂದು ಸೀರೆಯನ್ನು ಅಡ್ಡ ಕಟ್ಟಿದಳು. ಶೋಕಿಸುತ್ತ ಕುಳಿತವರು, ಹೆಣ ಹೊತ್ತವರು ಎಲ್ಲಾ ಸ್ನಾನ ಮಾಡಿ ಬಂದಾಗ ಶೋಕದ ಊಟ ತಯಾರಾಯಿತು. ಗಂಜಿ, ಚಟ್ನಿಯ ಶೋಕದ ಊಟವನ್ನು ಬಾಳೆ ಎಲೆ ಯಲ್ಲಿ ಉಂಡು, ಬೀಗರೆಲ್ಲ ಉಳಿದರು. ಮಿಕ್ಕವರೆಲ್ಲ ಮರಳಿದರು.



ಮರುದಿನ ಬೆಳಗ್ಗಿನಿಂದ ಮತ್ತೆ ಮನೆಯ ಕೆಲಸಗಳೆಲ್ಲ ಪ್ರಾರಂಭವಾದವು. ಸುಬ್ಬಯಣ್ಣನಿಗೆ ಆಕಾಶವೇ ಕಳಚಿ ತಲೆಯ ಮೇಲೆ ಬಿದ್ದಂತಾಗಿತ್ತು. ಯುವಕರನ್ನೆಲ್ಲ ಸೇರಿಸಿಕೊಂಡು ಸುಬ್ಬಯಣ್ಣ ಹೊರಗಿನ ಕೆಲಸದ ಜವಾಬ್ದಾರಿಯನ್ನು ವಹಿಸಿಕೊಂಡರು. ಮಿಕ್ಕ ಜವಾಬ್ದಾರಿಗಳೆಲ್ಲಾ ಯಮುನಕ್ಕನ ತಲೆಗೆ ಬಿದ್ದವು. ಪ್ರತಿಯೊಂದು ವಿಷಯದಲ್ಲೂ ಯುವಕರು ಯಮುನಕ್ಕನನ್ನೇ ಕೇಳತೊಡಗಿದರು. ಬೂದಿ ಮುಚ್ಚುವ ದಿನಕ್ಕಾಗುವಾಗ ಯಮುನಕ್ಕ ಮನೆಯ ಎಲ್ಲ ಜವಾಬ್ದಾರಿಯನ್ನೂ ವಶಕ್ಕೆ ತೆಗೆದುಕೊಂಡರು.

ಐದನೇ ದಿನದಂದು ಬೂದಿ ಮುಚ್ಚಿ, ಉತ್ತರಕ್ರಿಯೆಯ ದಿನ ನಿಶ್ಚಯಿಸಿ, ಹೇಳಿಕೆ ಕೊಡಲು ತಯಾರಿ ಮಾಡಿದರು.

ಮಧ್ಯಾಹ್ನವಾಗುವಾಗ ಮಂಜೇಶ್ವರದಿಂದ ಪೊಲೀಸರು ಬಂದು ಸುಬ್ಬಯಣ್ಣನಲ್ಲಿ ಠಾಣೆಗೆ ಬಂದ ತಳ್ಳಿ ಅರ್ಜಿಯ ವಿಷಯ ತಿಳಿಸಿದರು. ಯಾರೋ, ಮಾಂಕರಾಲರು ಸ್ವಾಭಾವಿಕವಾಗಿ ಸತ್ತದ್ದಲ್ಲ, ಅವರನ್ನು ಕೊಲೆ ಮಾಡಲಾಗಿದೆ ಎಂದು ತಳ್ಳಿ ಅರ್ಜಿ ಹಾಕಿದ್ದರು.

ಪೊಲೀಸರು ಅಮ್ಮಣ ಪೂಜಾರಿಯಿಂದ ಹಿಡಿದು ಕುಟುಂಬದ ಎಲ್ಲರನ್ನೂ ವಿಚಾರಿಸಿ, ಸುಬ್ರಾಯ ಕಮ್ತಿಯವರಿಂದಲೂ ಸಾಕ್ಷಿ ಪಡೆದುಕೊಂಡು, ಮಾಂಕರಾಲರ ಸಾವು ಕೊಲೆಯಲ್ಲ ಸಹಜ ಸಾವು ಎಂದು ವರದಿ ಮಾಡಿದರು.

ಹೆಣ ಸುಟ್ಟಾದ ಮೇಲೆ ಏನು ಮಾಡುವುದು? ಹೆಣ ಸುಡಲು ಹೆಂಡತಿ, ಮಕ್ಕಳು ಒಪ್ಪಿಗೆ ಕೊಟ್ಟಿದ್ದಾರೆ.

ಈಗ ಸುಬ್ಬಯಣ್ಣನನ್ನಾಗಲಿ, ಮಿತ್ತಬೈಲಿನವರನ್ನಾಗಲಿ ಹೆಚ್ಚು ವಿಚಾರಿಸುವ ಧೈರ್ಯ ಪೊಲೀಸರಿಗೂ ಇರಲಿಲ್ಲ. ಪರಿಸ್ಥಿತಿ ಬದಲಾಗಿದೆ. ಇನ್ನು ಕೆಲವೇ ದಿನಗಳಲ್ಲಿ ದೇಶದಲ್ಲಿ ಹೊಸ ಸರಕಾರ ಬರಬಹುದು. ಅದು ಸುಬ್ಬಯಣ್ಣನವರ ಸರಕಾರವೆಂಬುದು ಎಲ್ಲರಿಗೂ ತಿಳಿದಿತ್ತು. ಅಲ್ಲದೆ ಈಗ ಮಂಗಳೂರಿಗೆ ಹೊಸ ಕಲೆಕ್ಟರ್ ಬಂದಿದ್ದಾರೆ. ಅವರು ಭಾರತೀಯರೇ. ಅವರಿಗೆ ಸ್ವಾತಂತ್ರ್ಯ ಹೋರಾಟಗಾರರೆಂದರೆ ಬಹಳ ಅಭಿಮಾನ, ಗೌರವ. ಈ ವಿಷಯ ಕೆಳಗಿನ ಎಲ್ಲ ಅಧಿಕಾರಿಗಳಿಗೂ ತಿಳಿದಿತ್ತು. ಹಾಗಾಗಿ ಈ ಖಾದಿ ಧರಿಸಿದವರ ವಿಷಯಕ್ಕೆ ಹೋಗುವಾಗ ಬಹಳ ಜಾಗ್ರತೆಯಲ್ಲಿರಬೇಕೆಂದು ಎಲ್ಲ ಅಧಿಕಾರಿಗಳೂ ಕಚೇರಿಗಳಲ್ಲಿ ಹೇಳಿಟ್ಟಿದ್ದರು. ಮಂಗಳೂರಿನಿಂದ ಹಿಡಿದು ಚಂದ್ರಗಿರಿ ಹೊಳೆಯವರೆಗೆ 'ಗಾಂಧಿ' ಎಂದೇ ಗುರುತಿಸಿಕೊಂಡು, 'ಗಾಂಧಿ ಸುಬ್ಬಯಣ್ಣ'ನೆಂದೇ ಹೆಸರು ಗಳಿಸಿದ್ದ ಸುಬ್ಬಯಣ್ಣನಲ್ಲಿ ಯಾವ ಪೊಲೀಸರಿಗೂ ಹೆಚ್ಚು ಮಾತನಾಡುವ ಧೈರ್ಯ ಇಂದು ಇಲ್ಲವಾಗಿತ್ತು.

ಮಾಂಕರಾಲರು ಹೃದಯಾಘಾತದಿಂದ ಸತ್ತುದೆಂದು ಬರೆದು ಪೊಲೀಸರು ಕೇಸು ಮುಚ್ಚಿ ಹಾಕಿದರು. ಅಲ್ಲದೆ ಹೆಂಡತಿ, ಮಕ್ಕಳ ಒಪ್ಪಿಗೆ ಪಡೆದು ಹೆಣ ಸುಟ್ಟಾದ ಮೇಲೆ ಅವರಿಗೂ ಏನೂ ಮಾಡಲು ಸಾಧ್ಯವಿರಲಿಲ್ಲ.

ಅಸ್ಥಿ ಸಂಚಯನ ಕ್ರಿಯೆ ಮುಗಿದು ಉತ್ತರಕ್ರಿಯೆಯ ಆಮಂತ್ರಣ ಎಲ್ಲ ಬೀಗರಿಗೂ, ಬಂಧುಗಳ ಮನೆಯವರಿಗೂ ತಲುಪಿತು. ಉತ್ತರಕ್ರಿಯೆ ಬಹಳ ಜೋರಾಗಿಯೇ ನಡೆಯಿತು. ಮಧ್ಯಾಹ್ನದಿಂದ ಮಧ್ಯರಾತ್ರಿಯವರೆಗೂ ಬೊಜ್ಜದ ಊಟ ನಡೆಯಿತು.

ಕಾರ್ಯಕ್ರಮ ಜೋರಾಗಿಯೇ ನಡೆದರೂ ಊರಿನವರಿಗೆ ಮಾತನಾಡಿಕೊಳ್ಳಲು ಒಂದು ವಿಷಯ ಸಿಕ್ಕಿತು. ''ಕಾಗೆಗೆ ಇಟ್ಟ ಪಿಂಡವನ್ನು ಕಾಗೆಗಳು ಬಂದು ಸುತ್ತಮುತ್ತ ಕುಳಿತಿದ್ದರೂ ಮುಟ್ಟಲಿಲ್ಲವಂತೆ! ಕಾಗೆಯನ್ನು ಹಿಡಿದು ತಂದು ತಿನ್ನಿಸಿ ನೆರೆದವರಿಗೆ ಊಟ ಬಡಿಸಬೇಕಾಗಿ ಬಂತಂತೆ! ಮಾಂಕರಾಲರು ಕುಟುಂಬದವರ ಜೊತೆ ಮುನಿಸಿಕೊಂಡಿದ್ದಾರೆ. ಹಾಗಾಗಿಯೇ ಕಾಗೆ ಅನ್ನ ಮುಟ್ಟಲಿಲ್ಲ'' ಎಂದು ಎಲ್ಲರೂ ಮಾತನಾಡಿಕೊಂಡರು. ಅವರನ್ನು ಕೊಲೆ ಮಾಡಲಾಗಿದೆ ಎಂಬ ಮಾತು ಮತ್ತೆ ಗುಸುಗುಸು, ಗುಜುಗುಜು ಆಗಲು ಪ್ರಾರಂಭಿಸಿತು.

ಉತ್ತರಕ್ರಿಯೆಯ ನಂತರ, ರಾತ್ರಿ ಒಳಗೆ ಬಡಿಸುವ ಶಾಸ್ತ್ರ ಮುಗಿದು ಹೆಂಡತಿಗೆ ಹೊಸ ಬಟ್ಟೆ ಕೊಟ್ಟು ಯಮುನಕ್ಕ ಎಲ್ಲರನ್ನೂ ಕಳುಹಿಸಿಕೊಟ್ಟರು.

ಮರುದಿನ ಪಟ್ಟದ ಗುತ್ತಿನಲ್ಲಿ ಚಿಕ್ಕಪ್ಪ ರೈಗಳೂ, ಇತರ ಹಿರಿಯ ಬಂಧುಗಳೂ ಚಾವಡಿಯಲ್ಲಿ ಕುಳಿತು ಕುಟುಂಬದವರೆಲ್ಲರಲ್ಲಿ ಚರ್ಚಿಸಿ ಮಿತ್ತಬೈಲನ್ನು ಸುಬ್ಬಯಣ್ಣನೂ, ಯಮುನಕ್ಕನೂ ನೋಡಿಕೊಳ್ಳಬೇಕೆಂಬ ತೀರ್ಮಾನಕ್ಕೆ ಬಂದರು. ಕುಟುಂಬದಲ್ಲಿ ಯಮುನಕ್ಕನೇ ಎಲ್ಲರಿಗಿಂತ ಹಿರಿಯ ಹೆಣ್ಣು. ಹಾಗಾಗಿ ಅದಕ್ಕೆ ಯಾರೂ ವಿರೋಧ ವ್ಯಕ್ತಪಡಿಸಲಿಲ್ಲ. ಗುರಿಕಾರಿಕೆಯ, ಗಡಿ ಹಿಡಿಯುವ ವಿಷಯ ಬಂದಾಗ ಬೀಗರಲ್ಲಿ ಕೆಲವರು ಮೈಂದರಾಲರ ಹೆಸರು ಎತ್ತಿದರು. ಮೈಂದರಾಲರು ಮಾಂಕರಾಲರ ತಮ್ಮ, ಎಲ್ಲರಿಗಿಂತ ಹಿರಿಯರು. ಆದರೆ ಉಬ್ಬಸದಿಂದ ನರಳುತ್ತಿರುವವರು. ಕುಟುಂಬದ ಮನೆಯ ಯುವಕರೆಲ್ಲ ಸುಬ್ಬಯಣ್ಣನೇ ಮನೆತನದ ಯಜಮಾನನಾಗಬೇಕೆಂದು ಹಟ ಹಿಡಿದರು. ಅಲ್ಲದೆ ಮೈಂದರಾಲರ ಎಡಗಾಲಿನಲ್ಲಿ ಒಂದು ಬೆರಳು ಇಲ್ಲದ ಕಾರಣ ಭೂತದ ಗಡಿ ಹಿಡಿಯುವಂತಿಲ್ಲವೆಂದು ಒಬ್ಬರು ಹೇಳಿದರು. ಬೀಗರು ಈ ವಿಷಯವನ್ನು ನೇಮ ಕಳೆದ ಮೇಲೆ ತೀರ್ಮಾನಿಸೋಣವೆಂದು ಮುಂದಕ್ಕೆ ಹಾಕಿದರು. ಅದಕ್ಕೆ ಮುಖ್ಯ ಕಾರಣ ಸುಬ್ಬಯಣ್ಣ. ಅವರು ಇನ್ನೂ ಮಿತ್ತಬೈಲಿನಲ್ಲೇ ಉಳಿಯಲು ಮಾನಸಿಕವಾಗಿ ಸಿದ್ಧರಾಗಿರಲಿಲ್ಲ. ಅವರನ್ನು ಗಾಂಧಿ ಆಶ್ರಮ ಕರೆಯುತ್ತಿತ್ತು.

ಪಟೇಲತನದ ವಿಷಯಕ್ಕೆ ಮೈಂದರಾಲರು ಆಗುವುದಿಲ್ಲವೆಂದಾಯಿತು. ಪಟೇಲಗಿರಿಗೆ ಕಡಿಮೆಯೆಂದರೂ ಮೂರನೇ ತರಗತಿಯವರೆಗಾದರೂ ಓದಿರಬೇಕು. ಮೈಂದರಾಲರು ಶಾಲೆಗೆ ಹೋದವರಲ್ಲ. ಸರಕಾರ ತತ್ಕಾಲಕ್ಕೆ ಪಕ್ಕದ ಗ್ರಾಮದ ಪಟೇಲರಿಗೆ ಮಿತ್ತಬೈಲನ್ನೂ ನೋಡಿಕೊಳ್ಳುವಂತೆ ಆದೇಶ ನೀಡಿತು. ಕುಟುಂಬದ ಬೀಗರೆಲ್ಲ ಅದನ್ನು ಸುಬ್ಬಯಣ್ಣ ಅಥವಾ ಯಮುನಕ್ಕನ ಹಿರಿಯಮಗ ರಾಮಣ್ಣ ವಹಿಸಿಕೊಳ್ಳಬೇಕೆಂದು ಹೇಳಿದರು. ಸುಬ್ಬಯಣ್ಣ ಅಳಿಯ ರಾಮಣ್ಣನೇ ಅದಕ್ಕೆ ಸೂಕ್ತ ವ್ಯಕ್ತಿಯೆಂದರು. ನೆಂಟರು,



ಬೀಗರು ಮಾತುಕತೆ ಮುಗಿಸಿ ಹೊರಡುವಾಗ ಮಿತ್ತಬೈಲಿನ ಯಾಜಮಾನ್ಯವನ್ನು ಯಮುನಕ್ಕನ ವಶಕ್ಕೆ ಒಪ್ಪಿಸಿ ಹೋದರು.

ಮಾಂಕರಾಲರು ಸತ್ತು ತಿಂಗಳಾಯಿತು. ಮಿತ್ತಬೈಲಿನ ದೈನಂದಿನ ವ್ಯವಹಾರ, ಸಾಗುವಳಿ ಯಮುನಕ್ಕನ ಉಸ್ತುವಾರಿಯಲ್ಲಿ ನಡೆಯತೊಡಗಿತು. ಅವರಿಗೆ ಬಲಗೈ - ಎಡಗೈ ಸಹಾಯಕ್ಕೆ ನಿಂತವರು ಮಗ ದುಗ್ಗಪ್ಪ ಹಾಗೂ ಮೂಲದವರ ಮುಖಂಡ ದೆಯ್ಯು. ಯುವಕರೆಲ್ಲರೂ ಯಮುನಕ್ಕನ ಬೆಂಬಲಕ್ಕೆ ನಿಂತರು. ಕೆಲವು ಯುವಕರು ಸುಬ್ಬಯಣ್ಣನ ಕೈಕೆಳಗೆ ಗೇಣಿ ವಸೂಲಿ, ಒಕ್ಕಲಿನವರ, ಇತರ ವ್ಯವಹಾರಗಳನ್ನು ನೋಡಿಕೊಳ್ಳಲು ಸಹಕರಿಸಿದರು. ಅದಲ್ಲದೆ ಸುಬ್ಬಯಣ್ಣನ ಗಾಂಧೀಜಿಯ ಕೆಲಸಕ್ಕೂ ಯುವಕರು ಸಹಕಾರ ನೀಡಿದರು.

ಒಂದು ದಿನ ಗಾಂಧಿ ಆಶ್ರಮದಿಂದ ಸುಬ್ಬಯಣ್ಣನಿಗೆ ಕೂಡಲೇ ಬರುವಂತೆ ಪತ್ರ ಬಂತು. ಗಾಂಧೀಜಿ ಸಬರಮತಿಯಿಂದ ದೆಹಲಿಗೆ ಹೋಗಿದ್ದರು. ಸುಬ್ಬಯಣ್ಣ ದೆಹಲಿಗೆ ಬಂದು ಗಾಂಧೀಜಿಯವರ ಸೇವಾದಳಕ್ಕೆ ಸೇರಿಕೊಳ್ಳಬೇಕೆಂದೂ ಪತ್ರದಲ್ಲಿತ್ತು. ಸುಬ್ಬಯಣ್ಣ ಯಮುನಕ್ಕನಿಗೆ ಪತ್ರ ತೋರಿಸಿ, ಒಂದು ತಿಂಗಳ ಮಟ್ಟಿಗೆ ಆಶ್ರಮಕ್ಕೆ ಹೋಗಿ ಬರುವ ತನ್ನ ನಿರ್ಧಾರವನ್ನು ತಿಳಿಸಿದರು. ಅಕ್ಕ, ತಮ್ಮ ರಾತ್ರಿ ಇಡೀ ಕುಳಿತು ಎಲ್ಲ ವಿಷಗಳನ್ನು ಚರ್ಚಿಸಿದರು. ಸುಬ್ಬಯಣ್ಣ ಮಿತ್ತಬೈಲಿನ ಬಗ್ಗೆ ತನ್ನ ಗಮನಕ್ಕೆ ಬಂದ ಎಲ್ಲ ವಿಷಯಗಳನ್ನು ಹೇಳಿದರು. ಸುಬ್ರಾಯ ಕಮ್ತಿ ಬರೆದುಕೊಟ್ಟಿದ್ದ ಆಸ್ತಿ ಹುಟ್ಟುವಳಿಯ ಎಲ್ಲ ವಿವರಗಳನ್ನೂ ಅವರು ಅಕ್ಕನ ಕೈಗೆ ಕೊಟ್ಟರು. ಮಧ್ಯರಾತ್ರಿಯಾಗುವಾಗ ಸುಬ್ಬಯಣ್ಣ ಹೇಳಿದರು,

''ಯಮುನಕ್ಕಾ, ನನಗೀಗ ಈ ಮಿತ್ತಬೈಲಿನ ಮನೆ ಒಂದು ಭೂತದ ಬಂಗಲೆಯಂತೆ ಕಾಣುತ್ತಿದೆ. ಈ ಮನೆಯಲ್ಲಿ ಎಷ್ಟೊಂದು ಪಾಪಗಳು ನಡೆದಿವೆಯೋ? ಎಷ್ಟು ಅನ್ಯಾಯಗಳು ಈ ಮನೆಯ ಗರ್ಭದಲ್ಲಿ ಅಡಗಿವೆಯೋ? ನೀನು ಬಹಳ ಎಚ್ಚರಿಕೆಯಿಂದಿರಬೇಕು. ನಿಜ ಹೇಳುತ್ತೇನೆ. ಕಳೆದ ಒಂದು ತಿಂಗಳಿಂದ ಒಂದು ಸಂಶಯ ನನ್ನ ಮನಸ್ಸಿನಲ್ಲಿ ಕೊರೆಯುತ್ತಿದೆ. ಆಶ್ರಮಕ್ಕೆ ಹೋಗುವುದಕ್ಕೆ ಮುಂಚೆ ಅದನ್ನು ನಿನಗೆ ತಿಳಿಸಿ ಹೋಗಬೇಕು ನಾನು''.

''ಏನದು ಸುಬ್ಬಯ, ನಿನ್ನ ಮನಸ್ಸನ್ನು ಕೊರೆಯುವ ಅಷ್ಟು ದೊಡ್ಡ ಸಂಶಯ?''

''ಮಾಂಕರಾಲರ ಸಾವು ಸಹಜ ಸಾವಲ್ಲ ಯಮುನಕ್ಕ. ಅವರು ಅನಾರೋಗ್ಯದಿಂದ ಸತ್ತುದಲ್ಲವೆಂದು ನನ್ನ ಸಂಶಯ''.

''ಹೌದು, ನನಗೂ ಹಾಗೆಯೇ ಅನಿಸಿತ್ತು. ಅವರಿಗೆ ಮನೆಯ ಮಲರಾಯ ದೈವ ಅಲ್ಲದಿದ್ದರೆ ದಾರಿಯಲ್ಲಿ ಬರುವಾಗ ಗುಳಿಗ ಹೊಡೆದಿರಬೇಕು. ನಾನು ನಾಳೆಯೇ ತಂತ್ರಿಯವರನ್ನು ಕಂಡು ಶಕುನ ಇಡಿಸಿ ಜೋತಿಷ್ಯ ಕೇಳುತ್ತೇನೆ. ನೀನು ಅದನ್ನು ತಲೆಗೆ ಹಚ್ಚಿಕೊಳ್ಳಬೇಡ. ಅವರಲ್ಲಿಯೇ ಅದಕ್ಕೆ ಪರಿಹಾರ ಮಾಡಿಸೋಣ''.

''ಯಮುನಕ್ಕ! ಭೂತ, ಗುಳಿಗ ಹೊಡೆಯುವುದು ಎಲ್ಲ ಬುದ್ಧಿ ಇಲ್ಲದವರ ಮಾತು.

ಆ ಮೂಢನಂಬಿಕೆ ನನ್ನದಲ್ಲ.ನನ್ನ ಅಭಿಪ್ರಾಯ ಬೇರೆಯೇ!''

''ಮತ್ತೆ, ಯಾರಾದರೂ ಮದ್ದು, ವಿಷ ಹಾಕಿರಲು ಸಾಧ್ಯವಿದೆಯೇ? ಅವರು ಇಲ್ಲಿ ನೀರು ಕೂಡಾ ಕುಡಿದಿರಲಿಲ್ಲ. ಅವರಿಗೂ ಈ ಮನೆಯವರ ಮೇಲೆ ನಂಬಿಕೆ ಇರಲಿಲ್ಲವೆಂದು ಕಾಣುತ್ತದೆ''.

''ಅದ್ಯಾವುದೂ ಅಲ್ಲ. ನಾನು ಹೇಳುವುದನ್ನು ಸ್ವಲ್ಪ ಕಿವಿಗೊಟ್ಟು ಕೇಳು. ಮಾಂಕರಾಲರ ಜೊತೆ ಬಂದಿದ್ದ ಅಮ್ಮಣ ರಾತ್ರಿಯಲ್ಲಿ ಎದ್ದು ಕೇರಿಗೆ ಹೋಗಿ ಸರೀ ಕುಡಿದು ಬಿದ್ದಿದ್ದ. ಅವನನ್ನು ಯಾರೋ ಎತ್ತಿ ತಂದು ಇಲ್ಲಿ ಮಲಗಿಸಿದ್ದರು. ಅಮ್ಮಣ ತನ್ನ ತಲೆ ಉಳಿಸುವ ಸಲುವಾಗಿ ಈ ಸುದ್ದಿಯನ್ನು ಎತ್ತಿರಲಿಲ್ಲ. ಮಾಂಕರಾಲರು ಸಾಯುವಾಗ ಆತ ಇಲ್ಲಿ ಇರಲಿಲ್ಲವೆಂದು ಕಾಣುತ್ತದೆ''.

''ಹೌದೇ! ಆತ ರಾತ್ರಿ ಇಡೀ ತಾನು ಮಾಂಕರಾಲರ ಕಾಲಬುಡದಲ್ಲಿಯೇ ಮಲಗಿಕೊಂಡಿದ್ದೆ ಎಂದು ಆಣೆ ಹಾಕಿ ಹೇಳುತ್ತಿದ್ದಾನೆ!''

''ಅದು ಅವನ ತಲೆ ಉಳಿಸಿಕೊಳ್ಳಲಿಕ್ಕಾಗಿ ಹೇಳಿದ ಮಾತು. ನೀನು ಹೆಣ ನೋಡಿದ್ದೀಯಾ? ಹೆಣದ ಕಣ್ಣುಗೊಂಬೆ ಹೊರಗೆ ಬೀಳುವಂತಿತ್ತು. ನಾನು ಹೆಣವನ್ನು ನೋಡುವಾಗ ಕೈಕಾಲು ಬಡಿದುಕೊಳ್ಳುತ್ತಾ ಹೊರಳಾಡಲು ಪ್ರಯತ್ನಿಸಿದಂತಿತ್ತು ಅವರ ದೇಹ. ಅವರ ಬಟ್ಟೆಯೆಲ್ಲಾ ಮಲಮೂತ್ರದಿಂದ ಒದ್ದೆಯಾದಂತಿತ್ತು. ಸಾಯುವಾಗ ಅವರು ಮಲ ವಿಸರ್ಜಿಸಿರಬೇಕು''.

''ಹೌದು! ಅದೆಲ್ಲ ಸಹಜ ಸಾವಿನಲ್ಲಾಗುವ ಸಾಧ್ಯತೆಗಳಿಲ್ಲವೇ?''

''ಇದೆ. ಆದರೆ, ಮಾಂಕರಾಲರನ್ನು ಯಾರೋ ಕುತ್ತಿಗೆ ಹಿಸುಕಿ ಕೊಂದಿರಬೇಕು ಮತ್ತು ಈ ಕೆಲಸವನ್ನು ನಮ್ಮ ಮನೆಯ ಒಳಗಿನವರೇ ಮಾಡಿರಬೇಕು''.

''ಹೇಗೆ ಹೇಳಿದೆ ಈ ಮಾತನ್ನು?''

''ಅವರ ಹೆಣವನ್ನು ಗರಡಿಯ ಮಂಚದಿಂದ ಅಂಗಳಕ್ಕೆ ತಂದು ಮಲಗಿಸುವಾಗ ಮನೆಯವರಾರೋ ಹೆಣದ ಕಣ್ಣನ್ನು ಮುಚ್ಚಿಸಿದ್ದಾರೆ. ಮಲಮೂತ್ರದ ಬಟ್ಟೆ ಬದಲಿಸಿ ಬೇರೆ ಬಟ್ಟೆ ತೊಡಿಸಿದ್ದಾರೆ. ಆ ಹೆಣದಲ್ಲಿ ಕುತ್ತಿಗೆ ಹಿಸುಕಿ ಕೊಂದ ಎಲ್ಲಾ ಲಕ್ಷಣಗಳೂ ಇದ್ದವು''.

''ಯಾರಾಗಿರಬಹುದು ಸುಬ್ಬಯಾ?''

''ಯಾಕೆ ಹಾಗೆ ಕೇಳ್ತಿ?'' ಎಂದು ಸುಬ್ಬಯಣ್ಣ ಯಮುನಕ್ಕನ ಮುಖ ನೋಡಿದಾಗ, ಕತ್ತಲೆಯಲ್ಲಿ ಮುಖಭಾವ ಗೋಚರವಾಗಲಿಲ್ಲ.

''ಯಾಕೆ ಯಾರಾಗಿರಬಹುದೆಂದು ಕೇಳುತ್ತಿ ಯಮುನಕ್ಕ?''

''ಅವರನ್ನು ಕತ್ತು ಹಿಸುಕಿ ಕೊಂದುದು ಎಂದಾದರೆ ಯಾರ ಕೆಲಸ ಆಗಿರಬಹುದು? ನಮ್ಮ ಹುಡುಗರೇ ಯಾರಾದರೂ ಆಗಿರಬಹುದಲ್ಲವೇ ಸುಬ್ಬಯ?''.

''ಹೌದು. ಆ ಕೃತ್ಯ ಯಾರೋ ನಮ್ಮ ಹುಡುಗರದೇ ಆಗಿರಬೇಕು. ಕತ್ತು ಹಿಸುಕಿ ಕೊಂದಂತೆಯೇ ಕಾಣುತ್ತಿತ್ತು. ಯಾರೋ ಮೂಗು, ಬಾಯಿ ಒತ್ತಿ ಹಿಡಿದು ಉಸಿರುಗಟ್ಟಿಸಿ



ಕೊಂದಿರಬೇಕು ಎಂಬುದು ನನ್ನ ಅಭಿಪ್ರಾಯ. ಇದು ಒಬ್ಬನ ಕೆಲಸ ಅಲ್ಲ, ಎರಡು ಮೂರು ಜನ ಆದರೂ ಈ ಕೃತ್ಯದಲ್ಲಿ ಪಾಲ್ಗೊಂಡಿರಬೇಕು''.

ಸ್ವಲ್ಪ ಹೊತ್ತು ಮೌನವಾಗಿದ್ದ ಯಮುನಕ್ಕ ಮತ್ತೆ ಕೇಳಿದರು,

''ನಿಜ ಹೇಳು ಸುಬ್ಬಯಣ್ಣ, ಅವರು ಜೀವಂತವಿದ್ದಿದ್ದರೆ ಒಳ್ಳೆಯ ರೀತಿಯಲ್ಲಿ ನಮಗೆ ಆಸ್ತಿಯನ್ನು ಬಿಟ್ಟು ಕೊಡುತ್ತಿದ್ದರೇ? ಈ ಮನೆಯ ಸ್ಥಿತಿ ಏನಾಗುತ್ತಿತ್ತು ಎಂಬುದನ್ನು ಊಹಿಸಲೂ ಸಾಧ್ಯವಿರಲಿಲ್ಲ ಅಲ್ಲವೇ? ಈಗ ಅವರು ಸತ್ತುದರಿಂದ ಮಿತ್ತಬೈಲನ್ನು ಸರಿಪಡಿಸಲು, ಒಂದು ಹಂತಕ್ಕೆ ತರಲು ನಮಗೆ ಒಂದು ಅವಕಾಶ ಸಿಕ್ಕಿತು. ಕುಟುಂಬದ ವ್ಯವಹಾರ, ಆಡಳಿತ ಕುಟುಂಬದವರ ಕೈಗೆ ಬಂದಿದೆ. ಇಲ್ಲದಿದ್ದರೆ ಕೋರ್ಟು, ಕಚೇರಿಗೆ ಅಲೆದು ಮಿತ್ತಬೈಲು ಸರ್ವನಾಶ ಆಗುತ್ತಿರಲಿಲ್ಲವೇ?''

''ಅದು ಹೌದು. ಆದರೆ, ನಮ್ಮ ಮಾವನನ್ನು ಕೊಂದ ಮಹಾ ಪಾಪವನ್ನು ತಲೆಗೆ ಕಟ್ಟಿಕೊಂಡೆವಲ್ಲ ಯಮುನಕ್ಕ''.

''ಪಾಪವೋ ಪುಣ್ಯವೋ ಅದೆಲ್ಲ ನನಗೆ ತಿಳಿಯದು. ಆದದ್ದು ಮಾತ್ರ ಒಳ್ಳೆಯದೇ ಆಯಿತು. ನಮಗೆ ಅಷ್ಟೇ ಸಾಕು''.

''ಯಮುನಕ್ಕ, ನೀವು ಅದಕ್ಕೆ ಬಹಳ ಸಮರ್ಥನೆ ನೀಡುತ್ತಿದ್ದೀರಿ. ನಮಗೆ ನಮ್ಮ ಗುರಿ ಮುಟ್ಟುವುದು ಎಷ್ಟೋ ಮುಖ್ಯವೋ, ಆ ಗುರಿ ಮುಟ್ಟಲು ಹಿಡಿಯುವ ದಾರಿಯೂ ಅಷ್ಟೇ ಮುಖ್ಯ. ಒಳ್ಳೆಯ ಗುರಿ, ಕೆಟ್ಟ ದಾರಿಯೆಂದಾದರೆ ಆ ಕೆಲಸ ದೋಷಪೂರ್ಣ ವಾಗಿರುತ್ತದೆ. ಕೆಟ್ಟ ಅಂತ್ಯ, ಆರಂಭದ ಒಳ್ಳೆಯ ಉದ್ದೇಶವನ್ನೇ ಹಾಳು ಮಾಡಿಬಿಡುತ್ತದೆ. ಆದಿಯನ್ನೂ, ಅಂತ್ಯವನ್ನೂ ಒಳ್ಳೆಯ ದಾರಿಯಲ್ಲಿ ಮುನ್ನಡೆಸಿಕೊಂಡು ಹೋಗಲು ಅವಕಾಶವನ್ನು ಮಾಡಿಕೊಡಬೇಕು. ಹಾಗಾದಾಗಲೇ ನಮಗೆ ಅಂತ್ಯದ ಮೇಲೆ ಹಕ್ಕು. ಹಿಂಸೆ ಹಿಂಸೆಯನ್ನು ಜಯಿಸುವುದಿಲ್ಲ. ನಮ್ಮ ಮಕ್ಕಳು ಹಿಂಸೆಯಿಂದಲೇ ಹಿಂಸೆಯನ್ನು ಗೆಲ್ಲಲು ಹೋದರೆಂದು ಕಾಣುತ್ತದೆ. ಅದಕ್ಕೇ ಹೇಳಿದುದು ನಾನು, ಗುರಿ ದಾರಿಗಿಂತ ದೊಡ್ಡದಲ್ಲ, ದಾರಿ ಒಳ್ಳೆಯದಿದ್ದರೆ ಗುರಿಯೂ ಒಳ್ಳೆಯದಾಗಿರುತ್ತದೆ. ಒಳ್ಳೆಯ ದಾರಿಯಲ್ಲಿ ಹೋಗಿ ಗುರಿ ಮುಟ್ಟುವುದು ಮುಖ್ಯ''.

''ಸುಬ್ಬಯ, ಇಷ್ಟು ವರ್ಷ ನೀನೂ ನೋಡಿದ್ದಿ, ನಾನೂ ನೋಡಿದ್ದೇನೆ. ನಮ್ಮ ಯುವಕರು, ಮಕ್ಕಳೂ ನೋಡಿದ್ದಾರೆ. ಮಾಂಕರಾಲರು ನಿನ್ನ ಒಳ್ಳೆಯತನದ ದುರುಪಯೋಗ ಮಾಡಿಕೊಂಡರು. ಕುಟುಂಬದ ಮಕ್ಕಳನ್ನು ಬೀದಿಗೆ ಹಾಕಿದರು. ಕುಟುಂಬದ ಸಂಪತ್ತನ್ನು ಲೂಟಿ ಮಾಡಿದರು. ಹುಡುಗರ ತಾಳ್ಮೆಗೂ ಒಂದು ಮಿತಿ ಇದೆ. ನಿನ್ನ ಒಳ್ಳೆಯತನವನ್ನು ದುರುಪಯೋಗಪಡಿಸಿಕೊಂಡು ನಿನ್ನ ಮೇಲೆಯೇ ಕಳ್ಳತನದ ಆರೋಪ ಹೊರಿಸಿ ದಾವೆ ಹಾಕಿಸಿದರು. ಕಳ್ಳತನ ಮಾಡಿಸಿದ್ದು ಮಾಂಕರಾಲರೇ, ಕದ್ದದ್ದು ಆತನ ಮಕ್ಕಳು. ನೀನೇ ಹೇಳು ಈ ದಬ್ಬಾಳಿಕೆ, ಅನ್ಯಾಯಕ್ಕೆ ಒಂದು ಅಂತ್ಯ ಬೇಡವೇ? ಅಂತ್ಯ ಹೇಗೇ ಆಗಲಿ ನಮಗ್ಯಾರಿಗೂ ಅದರ ಬಗ್ಗೆ ಬೇಸರವಿಲ್ಲ. ಕಂಸ ಸಾಯಬೇಕು ಎನ್ನುವುದರಲ್ಲಿ ಯಾರದ್ದೂ

ಎರಡಭಿಪ್ರಾಯವಿಲ್ಲ. ಹೋಗಲಿ ಬಿಡು. ನೀನು ಇದನ್ನು ಯಾರಲ್ಲಾದರೂ ವಿಚಾರಿಸಿದೆಯಾ? ಅಥವಾ ಯಾರ ಬಗ್ಗೆಯಾದರೂ ನಿನಗೆ ಸಂಶಯವಿದೆಯೇ?''

''ಇಲ್ಲ, ನನ್ನ ಸಂಶಯವನ್ನು ನಾನು ಯಾರಲ್ಲಿಯೂ ಹೇಳಿಲ್ಲ. ಯಾರಲ್ಲೂ ಕೇಳಿಲ್ಲ. ಕೇಳಿದರೂ ಸತ್ಯದ ಉತ್ತರ ಸಿಗಲಾರದೆಂದು ನನಗೆ ತಿಳಿದಿದೆ. ಆದರೆ ಸತ್ಯ ಯಾವತ್ತಾದರೂ ಒಂದು ದಿನ ಹೊರಗೆ ಬಂದೇ ಬರುತ್ತದೆ. ಆಗ ನಿಮಗೆ ಇಂದು ನಾನು ಹೇಳಿದ ಮಾತು ನೆನಪಾಗಬಹುದು. ಬೆಂಕಿ ಹೊತ್ತಿ ಉರಿಯುವಾಗ ಆ ಬೆಂಕಿಗೆ ಬೆಂಕಿ ಕೊಟ್ಟವನ ಕೈಯದ್ದೂ ಗುರುತು ಇರುವುದಿಲ್ಲ, ಚಾಕುವಿನ ಅಲಗಿಗೆ ನೆತ್ತರಿನ ಬಣ್ಣ ತಿಳಿದಿರುವುದಿಲ್ಲ''.

''ಸುಬ್ಬಯ, ನೀನು ಬ್ರಿಟಿಷ್ ಸರಕಾರದ ಖಜಾನೆ ದೋಚುವಾಗ ಅಥವಾ ಸೇತುವೆ ಸ್ಫೋಟಿಸುವಾಗ ಬಳಸಿದ್ದ ಆಯುಧಗಳು ಮಾಡಿದ ಅನಾಹುತಗಳ ನೆನಪಿದೆಯೇ? ಆಗ ನಿನ್ನ ದಾರಿಯ ಬಗ್ಗೆ ನಿನಗೆ ಯಾವ ಅಭಿಪ್ರಾಯವಿತ್ತು? ಆಗ ನಿನಗೆ ನಿನ್ನ ಗುರಿ ಮಾತ್ರ ಮುಖ್ಯವಾಗಿತ್ತು. ನಿನಗೆ ದೇಶದ ಸ್ವಾತಂತ್ರ್ಯ ಮಾತ್ರ ಮುಖ್ಯವಾಗಿತ್ತು. ಮಿತ್ತಬೈಲಿನಲ್ಲಿ ನಡೆದುದನ್ನೂ ಅದೇ ತಕ್ಕಡಿಯಲ್ಲಿಟ್ಟು ನೋಡು ಸುಬ್ಬಯ, ಇದಕ್ಕೊಂದು ಬೇರೆ ತಕ್ಕಡಿ ಹುಡುಕಬೇಡ. ಅನ್ಯಾಯ ಎಲ್ಲಿ ನಡೆದರೂ ಅದು ಅನ್ಯಾಯವೇ. ಅದು ಎಲ್ಲಿ ನಡೆದರೂ ಅದನ್ನು ಎದುರಿಸಲೇ ಬೇಕು. ಈಗ ಮಲಗೋಣ. ಬೆಳಗಾಗುವ ಹೊತ್ತಾಗುತ್ತಾ ಬಂತು''.

''ಒಂದೇ ಒಂದು ಪ್ರಶ್ನೆ ಯಮುನಕ್ಕ. ಈ ಕೃತ್ಯದ ಹಿಂದೆ ಅದೃಶ್ಯದ ಕೈಯೊಂದಿದೆ. ಆ ಕೈಯೇ ಅದಕ್ಕೆ ಮೂಲ ಶಕ್ತಿ. ಆ ಅದೃಶ್ಯದ ಕೈ ನಿಮ್ಮದೇ ಅಲ್ಲವೇ?''

ಯಮುನಕ್ಕ ನಕ್ಕು ಹೇಳಿದರು,

ಕೃಷ್ಣನ ಸುದರ್ಶನ ಚಕ್ರದಂತೆ ಅಲ್ಲವೇ? ಸುಬ್ಬಯಾ, ನನ್ನನ್ನು ನಂಬು. ಇದರ ಹಿಂದಿನ ಕಾಣದ ಕೈ ಮಲರಾಯನದ್ದು, ನನ್ನದಲ್ಲ. ನನ್ನದು ಮಹಾಭಾರತದ ಕಥೆಯ ಹಾಗೆ, ಮಿತ್ತಬೈಲಿನ ಇತಿಹಾಸಕ್ಕೆ ಬಭ್ರುಬಾಹುವಿನ ತಲೆಯಂತೆ ಸಾಕ್ಷಿ ಮಾತ್ರ. ಮಲಗು ಹೋಗು. ಬೆಳಗ್ಗೆದ್ದು ಸಬರಮತಿಗೆ ಹೋಗಿ ಬಾ. ನಮಗೆ ಮಾಡಲು ಬಹಳಷ್ಟು ಕೆಲಸಗಳಿವೆ. ನಡೆಯಬೇಕಾಗಿರುವ ದಾರಿ ಉದ್ದವಿದೆ. ಗುರಿ ಬಹಳ ದೂರವಿದೆ. ಸಮಯ ಕಡಿಮೆ ಇದೆ. ಬೇಗ ಬಾ''.

ಯಮುನಕ್ಕ ಎದ್ದು ಮಲಗಲು ಹೋದರು. ಸುಬ್ಬಯಣ್ಣ ಜಗಲಿಯಲ್ಲಿ ಹಾಸಿದ್ದ ಚಾಪೆಯಲ್ಲಿ ಬಿದ್ದುಕೊಂಡರು.

ಬೆಳಗ್ಗೆದ್ದ ಸುಬ್ಬಯಣ್ಣ ಸಬರಮತಿ ಆಶ್ರಮಕ್ಕೆ ಹೊರಟರು. ಮಕ್ಕಳು, ಯುವಕರು ಬಂದು ಅವರ ಕಾಲಿಗೆರಗಿದರು. ''ಬೇಗ ಬನ್ನಿ ಅಣ್ಣ, ಬೇಗ ಬನ್ನಿ ಮಾವ'' ಎಂದು ಕಳುಹಿಸಿಕೊಟ್ಟರು. ರಾಮಣ್ಣ ಹಾಗೂ ದುಗ್ಗಪ್ಪ ಮಂಜೇಶ್ವರದ ತನಕ; ಕಿನ್ಯನ ಹಾಗೂ ಮಾಬಲ ಮಂಗಳೂರು ತನಕ ಅವರ ಜೊತೆ ಹೋದರು.

ಕಿನ್ಯನ ಹಾಗೂ ಮಾಬಲರ ಮೇಲೆ ಸುಬ್ಬಯಣ್ಣನಿಗೆ ಬಹಳ ಪ್ರೀತಿ. ಅವರು ತನ್ನ ಗಾಂಧಿ ಕೆಲಸದ ಬಂಟರು. ಅವರು ಹೇಳಿದ ಯಾವುದೇ ಕೆಲಸವನ್ನಾಗಲಿ, ಕಾಲಲ್ಲಿ



ತೋರಿಸಿದುದನ್ನು ತಲೆಯಲ್ಲಿ ಹೊತ್ತು ಮಾಡಿಕೊಡುತ್ತಿದ್ದರು. ತನ್ನ ಗಾಂಧಿಯ ಕೆಲಸ, ಖಾದಿಯ, ಶಾಲೆಯ, ಧರ್ಮಛತ್ರದ ಕೆಲಸಗಳನ್ನೆಲ್ಲ ಮುಂದೆ ನಿಂತು ಮಾಡಿಸುತ್ತಿದುದು ಅವರೇ. ಹಾಗಾಗಿ ಕುಟುಂಬದ ಯುವಕರಲ್ಲಿ ಅವರ ಮೇಲೆ ಸುಬ್ಬಯಣ್ಣನಿಗೆ ಬಹಳ ಮಮತೆ.

ಮಂಗಳೂರಿನ ರೈಲು ನಿಲ್ದಾಣದಿಂದ ಮಾವ, ಅಳಿಯಂದಿರು ಹತ್ತಿರದ ಎಂಕಣ್ಣನ ಬಿಡಾರಕ್ಕೆ ಬಂದರು. ಸಂಜೆಯ ಮದ್ರಾಸ್ ಮೈಲ್‌ನಲ್ಲಿ ಹೋಗಿ ಅಲ್ಲಿಂದ ಅಹಮದಾಬಾದ್‌ಗೆ ಎರಡು ದಿನಗಳ ಪ್ರಯಾಣಕ್ಕೆ ಸುಬ್ಬಯಣ್ಣ ಸಿದ್ಧತೆ ನಡೆಸುತ್ತಿದ್ದಾಗ, ಕಿನ್ಯನ, ಮಾಬಲ ಸಂಜೆಯ ಕಣ್ಣಾನೂರು ಎಕ್ಸ್‌ಪ್ರೆಸ್‌ನಲ್ಲಿ ಮಂಜೇಶ್ವರಕ್ಕೆ ಹಿಂದಿರುಗಲು ತಯಾರಿ ನಡೆಸಿದರು. ಹಾಗೆಯೇ ತಾವಿಬ್ಬರೂ ಗಟ್ಟಕ್ಕೆ ಹೋಗುವುದನ್ನು ಮಾವನಲ್ಲಿ ತಿಳಿಸಿದರು. ಸುಬ್ಬಯಣ್ಣನಿಗೆ ಆಶ್ಚರ್ಯವಾಯಿತು. ಸ್ವಲ್ಪ ಹೊತ್ತು ಮೌನವಾಗಿದ್ದವರು ಮತ್ತೆ ಅವರ ಮುಖ ನೋಡಿ ಕೇಳಿದರು,

''ಮಾಬಲಾ, ಸತ್ಯ ಹೇಳಿ ಅಂದು ರಾತ್ರಿ ಮಾಂಕರಾಲರನ್ನು ಕೊಂದವರು ನೀವೇ ಅಲ್ಲವೇ?''

ಅವರಿಗೆ ಸಿಡಿಲು ಬಡಿದಂತಾಯಿತು ''ಯಾರು ಹಾಗೆ ಹೇಳಿದ್ದು? ಮಾಂಕು ಮಾವನನ್ನು ನಾವು ಕೊಂದದ್ದೆಂದು ಯಾರಾದರೂ ಹೇಳಿದರೇ ಅಣ್ಣಾ?''

''ಯಾರೂ ಹೇಳುವ ಅಗತ್ಯವಿಲ್ಲ. ಮಾಂಕರಾಲರು ಭೂತದ ಅಥವಾ ಗುಳಿಗನ ಪೆಟ್ಟಿಗೆ ಸತ್ತುದಲ್ಲವೆಂದು ನನಗೆ ಗೊತ್ತಿದೆ. ಅವರನ್ನು ಯಾರೋ ಕತ್ತು ಹಿಸುಕಿ ಕೊಂದಿದ್ದಾರೆಂದು ನನಗೆ ಅಂದೇ ಗೊತ್ತಾಗಿದೆ. ಆ ಸತ್ಯವನ್ನು ನಾನೂ ಅಡಗಿಸಿ ಇಟ್ಟೆ. ಈಗ ಆ ಸತ್ಯವನ್ನು ಅಡಗಿಸಿಟ್ಟ ಪಾಪಕ್ಕೆ ಪರಿಹಾರವಾಗಿ ಗಾಂಧಿ ಆಶ್ರಮಕ್ಕೆ ಹೋಗುತ್ತಿದ್ದೇನೆ. ಆ ಕೃತ್ಯವನ್ನು ಮಾಡಿದವರು ನೀವೇ ಎಂದು ನನ್ನ ಸಂಶಯ. ನೀವು ಗಟ್ಟಕ್ಕೆ ಹೋಗುವುದೂ ಅದರ ನೆನಪಿನಿಂದ ದೂರ ಉಳಿಯಲು ಅಲ್ಲವೇ? ಈ ಕೊಲೆಯಲ್ಲಿ ಬೇರೆ ಯಾರಿದ್ದರು?''

ಸುಬ್ಬಯಣ್ಣ ಇಷ್ಟೆಲ್ಲಾ ಹೇಳುವಾಗ ತಲೆ ಬಗ್ಗಿಸಿ ನಿಂತಿದ್ದ ಕಿನ್ಯನ ಹೇಳಿದ,

''ಇದರ ಹಿಂದೆ ಬೇರೆ ಯಾರೂ ಇರಲಿಲ್ಲ ಅಣ್ಣಾ. ಕಂಸನನ್ನು ಕೊಲ್ಲಲು ಬಲರಾಮ, ಕೃಷ್ಣರು ಸಾಕಾಗಲಿಲ್ಲವೇ. ಈ ಕಂಸನ ಅಂತ್ಯವೂ ಅಳಿಯಂದಿರ ಕೈಯಲ್ಲೇ ಆಗಬೇಕು ಎಂಬುದು ವಿಧಿಯಲ್ಲವೇ ಅಣ್ಣಾ! ಈ ಕೆಲಸಕ್ಕೆ ನಮ್ಮ ಜೊತೆ ಇದ್ದ ಇನ್ನಿಬ್ಬರೆಂದರೆ ಕರಿಯ ಮತ್ತು ಮುದರ ಮಾತ್ರ. ಕರಿಯನೂ, ಮುದರನೂ ಅಮ್ಮಣನನ್ನು ಎತ್ತಿ ತಂದು ಗರಡಿಯಲ್ಲಿ ಮಲಗಿಸಿದವರು. ಅವರೂ ನಮ್ಮ ಜೊತೆ ಗಟ್ಟಕ್ಕೆ ಬರುತ್ತಿದ್ದಾರೆ. ಯಮುನಕ್ಕ ನಿಗೂ ಸಂಶಯವಿರಬಹುದು. ಆದರೆ ಯಾರು, ಹೇಗೆ ಎಂಬುದು ತಿಳಿದಿರಲಿಕ್ಕಿಲ್ಲ''.

''ಹೂಂ, ಒಳ್ಳೆಯದನ್ನು ಮಾಡಲಿಲ್ಲ ನೀವು. ಹಿಂಸೆಯನ್ನು ಹಿಂಸೆಯಿಂದಲೇ ಎದುರಿಸಿದಿರಿ ನೀವು. ಹಿಂಸೆಯನ್ನು ಅಹಿಂಸೆಯಿಂದ ಎದುರಿಸಬೇಕು. ಅನ್ಯಾಯವನ್ನು ನ್ಯಾಯದಿಂದ ಎದುರಿಸಬೇಕು''.

‘‘ಸುಬ್ಬಯ್ಯಣ್ಣ, ನೀವು ಇಲ್ಲದಿರುತ್ತಿದ್ದರೆ ಅಂದು ಮನೆಯ ಚಿನ್ನ, ಬೆಳ್ಳಿಯ ಪೆಟ್ಟಿಗೆಗಳನ್ನು ಕಲೆಕ್ಟರ್‌ಗೆ ಕೊಟ್ಟು ಹೊರಗೆ ಬರುವಾಗಲೇ ಅವರನ್ನು ಚೂರಿ ಹಾಕಿ ಮುಗಿಸಬೇಕೆಂದಿದ್ದೆವು. ಗಲ್ಲಿಗೆ ಹೋದರೂ ಸರಿಯೇ, ಅಂದೇ ಈ ಮಿತ್ತಬೈಲು ಕುಟುಂಬವನ್ನು ಆ ರಾಕ್ಷಸನ ಕೈಯಿಂದ ಬಿಡುಗಡೆಗೊಳಿಸಬೇಕೆಂದು ತಯಾರಾಗಿದ್ದೆವು. ಆದರೆ ನೀವು ಅಲ್ಲಿದ್ದಿರಿ. ನಿಮ್ಮ ಎದುರೇ ಈ ಕೊಲೆ ನಡೆಸಲು ನಮ್ಮ ಮನಸ್ಸು ಒಪ್ಪಲಿಲ್ಲ. ಮಾಂಕು ಮಾವ ಮಿತ್ತಬೈಲಿನ ಪೆಠಾರಿ ಖಾಲಿ ಮಾಡಿದರು. ಆಸ್ತಿಯನ್ನು ಅಡವಿಟ್ಟರು. ಆರುವಾರು ಮಾಡಿ ಮಾರಿದರು. ನಾವು ಸುಮ್ಮನಿದ್ದೆವು. ನಮ್ಮ ತಾಯಂದಿರ ಚಿನ್ನಾಭರಣಗಳು ಅವರು ಇಟ್ಟುಕೊಂಡವಳ ಕೊರಳಲ್ಲಿ ಕಂಡಂದೇ ಅವರನ್ನು ಮುಗಿಸಬೇಕೆಂದು ತೀರ್ಮಾನ ಮಾಡಿದೆವು. ಈ ಚಂಡಾಲನನ್ನು ಇಲ್ಲಿಯ ತನಕ ಬಿಟ್ಟದ್ದೇ ಮಿತ್ತಬೈಲು ಕುಟುಂಬದವರ ಮಹಾ ದೊಡ್ಡ ತಪ್ಪು’’.

ಸುಬ್ಬಯ್ಯಣ್ಣ ಯೋಚಿಸಿದರು. ಅವರಿಗೆ ಯುವಕರ ನೋವು ಅರ್ಥವಾಗಿತ್ತು.

‘‘ಆಯಿತು. ಇನ್ನೇನು ಮಾಡಬೇಕೆಂದಿದ್ದೀರಿ?’’

‘‘ನಾವು ಗಟ್ಟಕ್ಕೆ ಜನ ಕಟ್ಟಬೇಕೆಂದು ಬಹಳ ದಿನಗಳಿಂದ ಯೋಚನೆ ಮಾಡುತ್ತಿದ್ದೆವು. ಪಲ್ಲೆಕ್ಕಳದ ಮೊಯ್ದೀನ್ ಬ್ಯಾರಿಯಲ್ಲಿ ಮಾತನಾಡಿದಾಗ, ಸಾಕಮ್ಮನ ತೋಟಕ್ಕೆ ಎಷ್ಟು ಜನ ಕಟ್ಟಿಕೊಂಡು ಬಂದರೂ ತೆಗೆದುಕೊಳ್ಳುವುದಾಗಿ ಭರವಸೆ ಕೊಟ್ಟಿದ್ದಾರೆ. ಎರಡು ವರ್ಷ ನಾವು ಮಿತ್ತಬೈಲಿನಿಂದ ಹೊರಗೆ ಇರುವುದು ಒಳ್ಳೆಯದೆಂದು ತೀರ್ಮಾನಿಸಿದ್ದೇವೆ. ನೀವು ಯಾವಾಗ ಬರಲು ಹೇಳುತ್ತೀರೋ ಆಗ ಹಿಂದಿರುಗುತ್ತೇವೆ. ಆದರೆ ನೀವು ನಮಗೊಂದು ಮಾತು ಕೊಡಬೇಕು ಸುಬ್ಬಯ್ಯಣ್ಣ’’.

‘‘ಏನದು?’’

‘‘ಮಿತ್ತಬೈಲು ಕುಟುಂಬದ ಕೈ ಬಿಡಬೇಡಿ ಸುಬ್ಬಯ್ಯಣ್ಣ. ಈ ಕುಟುಂಬಕ್ಕೆ ನೀವಲ್ಲದೆ ಬೇರೆ ಗತಿ ಇಲ್ಲ. ಮನೆಯೊಳಗೆ ನರಳುತ್ತಿರುವ ಹೆಣ್ಣು ಮಕ್ಕಳಿಗೆ, ಹೊರಗೆ ಅಂತರ ಪಿಶಾಚಿಗಳಂತೆ ತಿರುಗುತ್ತಿರುವ ಯುವಕರಿಗೆ ನೀವಲ್ಲದೆ ಬೇರೆ ಗತಿ ಇಲ್ಲ. ನಮ್ಮ ತಾಯಿ, ತಂಗಿಯರನ್ನು ನಿಮ್ಮ ಕೈಗೊಪ್ಪಿಸಿ ಹೋಗುತ್ತಿದ್ದೇವೆ. ಅವರನ್ನು ಕೈ ಬಿಡಬೇಡಿ ಸುಬ್ಬಯ್ಯಣ್ಣ’’.

ಇಬ್ಬರೂ ಸುಬ್ಬಯ್ಯಣ್ಣನ ಕಾಲು ಹಿಡಿದುಕೊಂಡರು. ಸುಬ್ಬಯ್ಯಣ್ಣ ಇಬ್ಬರನ್ನೂ ಎತ್ತಿ ನಿಲ್ಲಿಸಿ, ತಲೆ ಸವರಿ ಕಳುಹಿಸಿದರು. ಹುಡುಗರ ಮನಸ್ಸಿನ ನೋವು ಅವರಿಗೆ ಅರ್ಥವಾಗಿತ್ತು.

ಸುಬ್ಬಯ್ಯಣ್ಣ ಸಬರಮತಿಗೆ ಹೊರಟರು. ಯುವಕರು ಗಟ್ಟ ಹತ್ತಿದರು.





## ೧೪

# ದೇಶ ದೇಶದೊಳಗೆ ನನ್ನ ದೇಶ ಚಂದ

ಗಾಂಧೀಜಿ ಸಬರಮತಿಯಿಂದ ದೆಹಲಿಗೆ ಹೋಗಿದ್ದರು. ಸುಬ್ಬಯ್ಯಣ್ಣ ದೆಹಲಿಗೆ ತಲುಪುವಾಗ ಬಾಪು ಕಲ್ಕತ್ತಕ್ಕೆ ಹೊರಡುವ ತಯಾರಿ ನಡೆಸುತ್ತಿದ್ದರು. ಸುಬ್ಬಯ್ಯಣ್ಣನೂ ಅವರ ಜೊತೆ ಕಲ್ಕತ್ತಕ್ಕೆ ಹೊರಟರು. ಕಲ್ಕತ್ತದಲ್ಲಿ ಹಿಂದೂ – ಮುಸ್ಲಿಮರು ಹಾಡು ಹಗಲೇ ಪರಸ್ಪರ ಕತ್ತು ಕೊಯ್ಯಲು ತೊಡಗಿದ್ದರು. ಗಲ್ಲಿ ಗಲ್ಲಿಗಳು ಧರ್ಮ, ಜಾತಿಗಳ ಹೆಸರಿನಲ್ಲಿ ರಣರಂಗವಾಗಿತ್ತು.

ಗಾಂಧೀಜಿ ಗಲಭೆಯ ಮಧ್ಯೆ ಉಪವಾಸ ಕುಳಿತರು.

ಒಂದು ದಿನ ಬ್ರಿಟಿಷ್ ಸರಕಾರ ಸ್ವಾತಂತ್ರ್ಯದ ಘೋಷಣೆ ಮಾಡಿತು.

ಆಗಸ್ಟ್ ಹದಿನೈದರಂದು ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿತು.

ಬ್ರಿಟಿಷ್ ಸಾಮ್ರಾಜ್ಯದ ಸೂರ್ಯ ಬಾನಿನ ಮಧ್ಯ ದಲ್ಲಿಯೇ ಮಾಯವಾಗಿ ಬಿಟ್ಟ.

ಆಗಸ್ಟ್ ಹದಿನಾಲ್ಕರ ಮಧ್ಯರಾತ್ರಿ ಕಳೆದು ಹದಿನೈದರ ಮುಂಜಾನೆ ಬ್ರಿಟಿಷ್ ಸಾಮ್ರಾಜ್ಯದ ಪತಾಕೆಯನ್ನು ಕೆಳಗಿಳಿಸ ಲಾಯಿತು. ಆ ಮುಂಜಾವಿನ ಪ್ರಥಮ ಗಳಿಗೆಯಲ್ಲಿ ಭಾರತದ

ತ್ರಿವರ್ಣ ಧ್ವಜ ಮೇಲೇರಿತು. ಪಂಡಿತ್ ಜವಾಹರಲಾಲ್ ನೆಹರು ಕನಸು ಕಟ್ಟುವುದರಲ್ಲಿ ಬಹಳ ಜಾಣ. ಅವರು ಕನಸು ಕಾಣುವುದರಲ್ಲಿ ಎಷ್ಟು ಗಟ್ಟಿಗರೋ, ಆ ಕನಸನ್ನು ನನಸು ಮಾಡಿ ತೋರಿಸುವುದರಲ್ಲಿಯೂ ಅಷ್ಟೇ ಗಟ್ಟಿಗರು. ಅಂದು ಅವರು ಭಾರತದ ಭೂಮಿಗೆ ಹೇಳಿದರು,

''ಈ ದಿನ ನಾವು ನಮ್ಮ ಭವಿಷ್ಯದೊಂದಿಗೆ ಮುಖಾಮುಖಿಯಾಗುತ್ತಿದ್ದೇವೆ''.

ಎಂತಹ ಮುಖಾಮುಖಿ ಅದು!

ಪ್ರೀತಿಯ ಸಂಕೋಲೆ ಕಡಿಯಿತು. ಮನೆ ಪಾಲಾಯಿತು.

ಒಂದೇ ತಾಯಿಯ ಮಕ್ಕಳು ಗಲ್ಲಿ ಗಲ್ಲಿಗಳಲ್ಲಿ ಪರಸ್ಪರ ರಕ್ತ ಹರಿಸುತ್ತಾ ವೈರಿಗಳಾದರು.

ಸುಬ್ಬಯಣ್ಣ ಮಿತ್ತಬೈಲಿಗೆ, ಯಮುನಕ್ಕನಿಗೆ ಬರೆದ ಪತ್ರದಲ್ಲಿ ಸ್ವಾತಂತ್ರ್ಯ ಸಂಭ್ರಮದ ಒಂದು ಸಾಲೂ ಇರಲಿಲ್ಲ, ಬರೀ ಗಲ್ಲಿ ಗಲ್ಲಿಗಳಲ್ಲಿ ನಡೆಯುತ್ತಿದ್ದ ಹಿಂದೂ-ಮುಸ್ಲಿಮರ ಅನಾಚಾರ, ಅತ್ಯಾಚಾರ, ಕಗ್ಗೊಲೆಗಳ ಕತೆಗಳೇ ತುಂಬಿದ್ದವು. ಬಾಪುವಿನ ಉಪವಾಸ ಸತ್ಯಾಗ್ರಹದ ವ್ಯಥೆಯೇ ಕಾಣುತ್ತಿತ್ತು. ದೇಶ ಪಾಲಾಗಿ, ಲಕ್ಷೋಪಲಕ್ಷ ಮಂದಿ ದಿಕ್ಕಾಪಾಲಾದರು. ಮನೆ, ಮಠ, ಬದುಕು ಕಳೆದುಕೊಂಡವರು ದೆಹಲಿಯಲ್ಲಿ ತುಂಬಿ ಹೋಗಿದ್ದರು. ಗಾಂಧೀಜಿ ದೆಹಲಿಗೆ ಓಡಿದರು.

ನಿರಾಶ್ರಿತರನ್ನು ನೋಡಿಕೊಳ್ಳುವುದು, ಅವರಿಗೆ ಜೋಪಡಿ ಕಟ್ಟಿಕೊಡುವ ಜವಾಬ್ದಾರಿಯನ್ನು ಗಾಂಧೀಜಿ ತನ್ನ ಶಿಷ್ಯರಿಗೆ ಹಂಚಿಕೊಟ್ಟರು. ಜೋಪಡಿ ಕಟ್ಟಿಸುವ ಒಂದು ಜವಾಬ್ದಾರಿ ಸುಬ್ಬಯಣ್ಣನ ಹೆಗಲಿಗೂ ಬಿತ್ತು. ಮಿತ್ತಬೈಲಿಗೆ ಹೊರಡಬೇಕು ಎನ್ನುವಾಗ ಏನಾದರೂ ಒಂದು ಅಡ್ಡಿ ಎದುರಾಗುತ್ತಲೇ ಇತ್ತು.

ಗಾಂಧೀಜಿ ದೆಹಲಿಯಲ್ಲಿರುವಾಗಲೇ ಹೊಸ ದೇಶವಾದ ಪಾಕಿಸ್ತಾನದ ಲಾಹೋರಿನಿಂದ ಒಂದು ರೈಲು ಹಿಂದೂಸ್ಥಾನಕ್ಕೆ ಕಾಣಿಕೆಯಾಗಿ ಬಂತು. ಇಡೀ ರೈಲಲ್ಲಿ ಹಿಂದೂಗಳ ಹೆಣಗಳ ರಾಶಿ ಕಂಡು ಸುಬ್ಬಯಣ್ಣನಿಗೆ ಜೀವನದಲ್ಲಿ ಜುಗುಪ್ಸೆ ಹುಟ್ಟಿತು. ಹಿಂದೂ - ಮುಸ್ಲಿಂ ಗಲಭೆಗೆ ಬಲಿಯಾದ ಹೆಣ್ಣುಮಕ್ಕಳ ಕಥೆ ಕೇಳಿ ರಕ್ತ ಕುದಿಯತೊಡಗಿತು. ಅವರಿಗೆ ಎರಡು - ಮೂರು ದಿನ ನಿದ್ದೆಯೇ ಬರಲಿಲ್ಲ, ಯಮುನಾ ನದಿಯ ತಟದಲ್ಲಿ ಅನ್ನ, ನೀರು ಸೇವಿಸದೆ ಹುಚ್ಚನಂತೆ ಮಲಗಿಕೊಂಡರು. ಆ ಲಾಹೋರಿನ ರೈಲು ಇಡೀ ದೆಹಲಿಯನ್ನು ನಡುಗಿಸಿ ಬಿಟ್ಟಿತು.

ಮಾಡಿದಷ್ಟೂ ಮುಗಿಯದ ಕೆಲಸದಿಂದ ಜೀವನದಲ್ಲಿ ಆಸಕ್ತಿಯನ್ನು ಕಳೆದುಕೊಂಡ ಸುಬ್ಬಯಣ್ಣ ಬಾಪೂಜಿಯ ಅಪ್ಪಣೆ ಪಡೆದು ಮಿತ್ತಬೈಲಿಗೆ ಮರಳುವ ಯೋಚನೆ ಮಾಡಿದರೆ ಬಾಪೂಜಿ ಒಂದು ಕ್ಷಣವೂ ಮಾತನಾಡಲು ಸಿಗಲಿಲ್ಲ. ಸಿಕ್ಕಿದಾಗಲೆಲ್ಲಾ ಅವರಿಗೆ ಮಾತನಾಡಲು ಅವಕಾಶವೇ ಕೊಡದೆ ಅವರದೇ ಪ್ರಶ್ನೆಗಳು. ''ಕ್ಯಾಂಪ್‌ಗೆ ಹೋದೆಯಾ? ಜೋಪಡಿ ಕಟ್ಟಿಸಿದೆಯಾ? ಅವರಿಗೆ ರೊಟ್ಟಿ ತಯಾರಿಸಿ ಕೊಟ್ಟೆಯಾ.....?'' ಇತ್ಯಾದಿ.



ಹಾಗೆ ಆರು ತಿಂಗಳು ಸ್ವತಂತ್ರ ಭಾರತದಲ್ಲಿ ಕಳೆಯುವಾಗ, ಒಂದು ದಿನ ಇಡೀ ಕಲ್ಕತ್ತಾ ಚಳಿಯಲ್ಲಿ ಗಡಗಡ ನಡುಗುತ್ತಿದ್ದಾಗ ದೆಹಲಿಯಿಂದ ಒಂದು ಭೀಕರ ಸುದ್ದಿ ಬಂತು. ಆ ಭೀಕರ ಬಿರುಗಾಳಿ ಹಾಡು ಹಗಲೇ ಇಡೀ ದೇಶವನ್ನು ಕಗ್ಗತ್ತಲೆಯಲ್ಲಿ ಮುಳುಗಿಸಿತು.

''ಬಾಪೂವನ್ನು ಯಾರೋ ಗುಂಡು ಹೊಡೆದು ಕೊಂದರು''.

ಸುಬ್ಬಯಣ್ಣ, ನಿರಾಶ್ರಿತರ ಶಿಬಿರದಲ್ಲಿದ್ದವರು ಓಡುತ್ತಾ ಬಿರ್ಲಾ ಮಂದಿರ ತಲುಪುವಾಗ ಅಲ್ಲಿ ನೆರೆದಿದ್ದ ಜನಸಾಗರದಲ್ಲಿ ಕಾಲೂರಲೂ ಸ್ಥಳವಿರಲಿಲ್ಲ. ರಾತ್ರಿಯಿಡೀ ಸ್ವಯಂಸೇವಕರ ಜೊತೆ ಅಳುತ್ತಾ ಮಲಗಿದ ಸುಬ್ಬಯಣ್ಣ ಬೆಳಗ್ಗೆದ್ದು ಯಾರಲ್ಲೂ ಹೇಳದೆ ಕೇಳದೆ ರೈಲು ಹತ್ತಿ ಮದ್ರಾಸಿಗೆ ಹೊರಟರು. ಎರಡು ದಿನಗಳಲ್ಲಿ ಮದ್ರಾಸಿಗೆ ತಲುಪಿದವರು ಅಂದೇ ಮಂಜೇಶ್ವರಕ್ಕೆ ರೈಲು ಹತ್ತಿದರು.

ಮಂಜೇಶ್ವರದಲ್ಲಿ ರೈಲು ಇಳಿದ ಸುಬ್ಬಯಣ್ಣ ಸೀದಾ ಗೋವಿಂದರ ಮನೆಗೆ ಬಂದವರು ಅಟ್ಟ ಹತ್ತಿ, ಯಾರಲ್ಲೂ ಒಂದು ಮಾತೂ ಆಡದೆ ಪುಸ್ತಕಗಳ ಮಧ್ಯೆ ಮಲಗಿಕೊಂಡರು. ಒಂದು ಹಗಲು, ಒಂದು ರಾತ್ರಿಯಿಡೀ ಮಲಗಿದ ಸುಬ್ಬಯಣ್ಣ ಎಚ್ಚರವಾದಾಗ, ಬಾಳೆ ಹಣ್ಣು, ಹಾಲು ಮುಂದಿಟ್ಟು ಕುಳಿತಿದ್ದ ಗೋವಿಂದರನ್ನು ನೋಡಿ ಎದ್ದು ಅಪ್ಪಿಕೊಂಡು ಬಿಕ್ಕಿ ಬಿಕ್ಕಿ ಅತ್ತರು. ಮೌನವಾಗಿ ಹಾಲು ಕುಡಿದವರು ಹೇಳಿದರು,

''ದೇಶ ಅನಾಥವಾಯಿತು ಗೋವಿಂದಣ್ಣಾ''

ಮತ್ತೂ ಒಂದು ದಿನ ಅಟ್ಟದಲ್ಲೇ ಇದ್ದ ಸುಬ್ಬಯಣ್ಣ ಯಾರಲ್ಲೂ ಮಾತನಾಡಲಿಲ್ಲ, ಹಾಲು, ಹಣ್ಣು, ಸುದ್ದಿ ಕೇಳಲು ಗೋವಿಂದಣ್ಣರ ದೊಡ್ಡ ರೇಡಿಯೊ ಮುಂದಿಟ್ಟುಕೊಂಡು ಕುಳಿತು ಬಿಟ್ಟಿದ್ದರು. ಕೊನೆಗೆ ಗೋವಿಂದಣ್ಣ ಸುಬ್ಬಯಣ್ಣನಲ್ಲಿ ಹೇಳಿದರು,

''ಸುಬ್ಬಯಣ್ಣ,ಹತ್ತು ತಿಂಗಳಿಂದ ನಿಮ್ಮನ್ನು ನಿಮ್ಮ ಮಿತ್ತಬೈಲು ಮನೆ ಕಾಯುತ್ತಿದೆ. ಅಲ್ಲಿ ಒಂದು ರೀತಿಯ ಅನಾಥ ಭಾವನೆಯಿದೆ. ಬಾಪುವನ್ನು ಕೊಂದ ಕಾಲ, ನಿಮ್ಮನ್ನು ಕಾಯುತ್ತಾ ಕುಳಿತಿರುವುದಿಲ್ಲ, ಹೋಗಿ ಕಾಲವನ್ನು ವ್ಯರ್ಥ ಮಾಡದೆ ನಿಮ್ಮ ಕರ್ತವ್ಯವನ್ನು ನಿರ್ವಹಿಸಿ. ದೇಶದಲ್ಲಿ ಹೇಗೋ ಹಾಗೆಯೇ ಮಿತ್ತಬೈಲಿನಲ್ಲೂ ನಿಮಗೆ ನಿಮ್ಮದೇ ಆದ ಕರ್ತವ್ಯವಿದೆ. ದೇಶ ಅನಾಥವಾಗದಂತೆ ನೋಡಿಕೊಳ್ಳಲು ಎಷ್ಟೋ ಮಂದಿ ಇದ್ದಾರೆ. ಆದರೆ ಮಿತ್ತಬೈಲಿಗೆ ಯಾರೂ ಇಲ್ಲ, ಹೋಗಿ ನಿಮ್ಮ ಜವಾಬ್ದಾರಿಯನ್ನು ವಹಿಸಿಕೊಳ್ಳಿ''.

ಅಲ್ಲಿಯ ತನಕ ಸುಬ್ಬಯಣ್ಣ ಬಂದ ಸುದ್ದಿಯನ್ನು ಯಾರಿಗೂ ತಿಳಿಸದ ಗೋವಿಂದ, ಅಂದು ಬೆಳಗ್ಗೆ ಮಿತ್ತಬೈಲಿಗೆ ಸುದ್ದಿ ಕಳುಹಿಸಿದರು. ಮಿತ್ತಬೈಲಿನಿಂದ ರಾಮಣ್ಣ, ದುಗ್ಗಪ್ಪ ಮುಂತಾದವರೆಲ್ಲ ಬಂದು ಅವರನ್ನು ಕರೆದುಕೊಂಡು ಹೋದರು. ಹತ್ತು ತಿಂಗಳಲ್ಲಿ ಮಿತ್ತಬೈಲಿನಲ್ಲೂ ಬಹಳಷ್ಟು ಬದಲಾವಣೆಗಳಾಗಿದ್ದವು.

''ಬದಲಾವಣೆಯೇ ಕಾಲದ ಕಥೆ''

## ೧೫

# ಧರ್ಮದ ಮಾಯೆ

ಸುಬ್ಬಯಣ್ಣ ಅಂಗಳಕ್ಕೆ ಬಂದು ತಲುಪುವ ಮೊದಲೇ ರಾಮಣ್ಣ ಹಾಗೂ ದುಗ್ಗಪ್ಪ ಮಿತ್ತಬೈಲಿನಲ್ಲಿ ಆದ ಅಭಿವೃದ್ಧಿಯನ್ನು ದಾರಿಯುದ್ದಕ್ಕೂ ವಿವರಿಸಿಕೊಂಡು ಬಂದರು.

ಪಟ್ಟದ ಗುತ್ತಿನಲ್ಲಿ ಚಿಕ್ಕಪ್ಪ ರೈಗಳು ಕಾಲವಾಗಿ, ಮುತ್ತೈದೆತನವನ್ನು ಕಳೆದುಕೊಂಡಿದ್ದ ಯಮುನಕ್ಕ ಮಿತ್ತಬೈಲಿನಲ್ಲೇ ಉಳಿದರು. ಸುಬ್ಬಯಣ್ಣನ ಸಲಹೆಯಂತೆ ರಾಮಣ್ಣ ಪಟೇಲತನವನ್ನು ಸುಬ್ರಾಯ ಕಮ್ತಿಯ ಸಹಾಯದಿಂದ ಕೈಗೆ ತೆಗೆದುಕೊಂಡ. ಯಮುನಕ್ಕ ಬಾರಬೈಲಿನ ಆಸ್ತಿಯನ್ನು ಭಂಡಾರ ಮಠದವರಿಂದ ಮತ್ತು ಭಕ್ತರ ಮಠದವರಿಂದ ಖರೀದಿಸಿ ಬಾರಬೈಲಿನವರನ್ನು ಮಿತ್ತಬೈಲು ಗುತ್ತಿನ ಒಕ್ಕಲುಗಳಾಗಿ ಮಾಡಿಕೊಂಡರು. ಮಾಂಕರಾಲರು ಮಿತ್ತಬೈಲಿಗೆ ಮಾಡಿದ್ದ ಮೋಸ ಮಂಗಳೂರಿನ ಕಲೆಕ್ಟರ್ ಕಚೇರಿಗೆ ತಿಳಿಯಿತು. ಸುಬ್ಬಯಣ್ಣ ಹಾಗೂ ಮಿತ್ತಬೈಲು ಯುವಕರ ಮೇಲಿದ್ದ ದಾವೆ ರದ್ದುಗೊಳಿಸಿದರು. ಮಿತ್ತಬೈಲಿನವರ ಐವತ್ತು ಸಾವಿರ ಬೆಳ್ಳಿ ರೂಪಾಯಿ, ಚಿನ್ನದ ರಾಮಟಂಕೆಗಳನ್ನು ಹಿಂದಿರುಗಿಸಿದರು. ಹೊಸ ಕಲೆಕ್ಟರರು ಬಾರಬೈಲು, ಕಚೆಕೋಡಿಯ



ಯುವಕರ ಮೇಲೆ ಕಳ್ಳತನದ ದಾವೆ ಹೂಡಲು ಆದೇಶ ನೀಡಿದರು.

ತುಳುನಾಡಿನ ಉದ್ದಗಲದಲ್ಲೂ ಸ್ವಾತಂತ್ರ್ಯೋತ್ಸವ ನಡೆಯುತ್ತಿರುವಾಗ ಬಾಪುವಿನ ಹತ್ಯೆಯ ಸುದ್ದಿ ಬರಸಿಡಿಲಿನಂತೆ ಬಂದೆರಗಿತು. ಅದರ ಬೆನ್ನಿಗೇ ಪೊಲೀಸರು ಕೆಲವು ಕೊಂಕಣಿಗರ, ಬ್ರಾಹ್ಮಣರ ಯುವಕರನ್ನು ಜೈಲಿಗೆ ತಳ್ಳಿದರು. ಅವರೆಲ್ಲಾ ಅದೆಂತಹದೋ ಜನಿವಾರದವರ ರಾಷ್ಟ್ರೀಯ ಸ್ವಯಂಸೇವಕ ಸಂಘದವರಂತೆ. ಬಾಪುವನ್ನು ಕೊಂದ ಗೋಡ್ಸೆ ಎಂಬವನೂ ಅದೇ ಸಂಘದ ಸದಸ್ಯನಂತೆ. ಮಂಜೇಶ್ವರದಲ್ಲೂ ಬೆಳಗ್ಗೆದ್ದು ಚಡ್ಡಿ ಧರಿಸಿಕೊಂಡು, ಲಾಠಿ ತಿರುಗಿಸಿಕೊಂಡಿದ್ದ ಯುವಕರನ್ನೂ ಹಿಡಿದುಕೊಂಡು ಹೋಗಿದ್ದಾರಂತೆ. ಹೀಗೆ ಸುದ್ದಿಗಳ ಪಟ್ಟಿಯನ್ನು ರಾಮಣ್ಣ ಹೇಳುತ್ತಾ ಬರುವಾಗ ಸಂಜೆಯಾಯಿತು.

ಸಂಜೆ ಮಿತ್ತಬೈಲಿನ ಅಂಗಳಕ್ಕೆ ತಲುಪಿದ ಸುಬ್ಬಯಣ್ಣನಿಗೆ ಅಲ್ಲಿಯ ಬದಲಾವಣೆಗಳನ್ನು ಕಂಡು ಆಶ್ಚರ್ಯವಾಯಿತು. ಅರೆ ಬೆಟ್ಟು ಗದ್ದೆಯಂತಿದ್ದ ಬೈಲಿನಲ್ಲಿ ಸುಗ್ಗಿಯ ಬೆಳೆ, ಹಸಿರಾಗಿ ಕಂಗೊಳಿಸುತ್ತಿತ್ತು.

ಯಮುಕ್ಕನನ್ನು ನೋಡಿ ಸಂತೋಷವಾದರೂ, ಅವರ ಮುತ್ತೈದೆತನ ಕಳೆದಿದ್ದ ಮುಖ ನೋಡಿ ದುಃಖವಾಯಿತು. ಅಕ್ಕ, ತಮ್ಮ ರಾತ್ರಿ ಇಡೀ ಮನೆಯ, ಊರಿನ, ದೇಶದ ಬಗ್ಗೆ ಮಾತನಾಡುತ್ತಾ ಕುಳಿತರು. ಬೆಳಗ್ಗಿನ ಮೊದಲ ಜಾವದ ಕೋಳಿ ಕೂಗಿದಾಗಲೇ ಹೊತ್ತಿನ ಅರಿವಾದುದು. ಯಮುನಕ್ಕ ಮಲಗಲು ಹೊರಡುವಾಗ ಹೇಳಿದರು,

''ಸುಬ್ಬಯ, ಇನ್ನು ನನ್ನೊಬ್ಬಳಿಂದ ಈ ಮನೆ, ಸೊತ್ತುಗಳನ್ನು ಕಾಯುತ್ತಾ ಇರಲು ಸಾಧ್ಯವಿಲ್ಲ, ನಾಳೆಯಿಂದ ಅದು ನಿನ್ನ ಕೆಲಸ. ನೀನು ನಾಳೆ ಬೆಳಗ್ಗೆ ಮಲರಾಯನ ಗುಂಡದ ಮುಂದೆ ನನಗೆ ಎರಡು ಮಾತು ಕೊಡಬೇಕು''.

ಸುಬ್ಬಯಣ್ಣ ನಕ್ಕು ಹೇಳಿದರು,

''ಯಮುನಕ್ಕಾ, ನಿಮ್ಮ ಎರಡು ಮಾತು ಯಾವುದೆಂದು ನನಗೆ ತಿಳಿದಿದೆ. ಅದಕ್ಕೆ ಮಲರಾಯನ ಗುಡಿಯ ಸಾಕ್ಷಿ ಬೇಡ. ನನ್ನ ಸಹೋದರಿಗೆ ನಾನು ಆ ಮಾತು ಕೊಡುತ್ತೇನೆ. ಒಂದನೆಯದು ನಾನಿನ್ನು ಮಿತ್ತಬೈಲು ಬಿಟ್ಟು ಹೋಗುವುದಿಲ್ಲ, ಎರಡು, ಮಿತ್ತಬೈಲಿನ ಭೂತದ ಗಡಿ ಹಿಡಿಯಲು ಒಪ್ಪಿಗೆ ಕೊಡುತ್ತೇನೆ. ಆಯಿತಲ್ಲ, ಹೋಗಿ ನಿದ್ದೆ ಮಾಡಿ''.

''ಇಲ್ಲ ಸುಬ್ಬಯ, ನಾನು ನಿನ್ನಲ್ಲಿ ಮಾತು ತೆಗೆದುಕೊಳ್ಳಬೇಕಾದುದು ಅಲ್ಲಿಗೇ ಮುಗಿಯಲಿಲ್ಲ, ಈಗ ಹೋಗಿ ಮಲಗು, ನಾಳೆ ಮಾತನಾಡೋಣ''.

ಬೆಳಗ್ಗೆ ಏಳುವಾಗ ತೋಟದ ಪಕ್ಕದ ಕಾಡಿನಲ್ಲಿ ಕಾಡುಕೋಳಿ, ಬೆಳವಲ ಹಕ್ಕಿ, ಗಿಳಿ, ಪಾರಿವಾಳಗಳ ಚಿಲಿಪಿಲಿ ತುಂಬಿಕೊಂಡಿತ್ತು. ಬೈಲಿನ ಏತದ ಶಬ್ದ, ಹರಿಯುವ ನೀರಿನ ಜುಳುಜುಳು, ಹೊಳೆಯ ಜಳಜಳ ನಾದ, ಅಂಗಳದಲ್ಲಿ ಕೆಲಸದ ಹೆಂಗಸರ ಹಾಡು, ಹಸು ಕರುಗಳ ಅಂಬಾ ಕೂಗು ಸುಬ್ಬಯಣ್ಣನನ್ನು ಬೇರೆಯೇ ಒಂದು ಲೋಕಕ್ಕೆ ಕೊಂಡೊಯ್ದುವು. ಕೆಲವು ತಿಂಗಳಿಂದ ದೆಹಲಿಯಲ್ಲಿ ಬೆಳಗ್ಗೆ ಏಳುವಾಗಲೇ ಅಳು, ಬೊಬ್ಬೆ, ಆಕ್ರಂದನಗಳನ್ನು ಕೇಳಿ ಕಿವಿ ಮುಚ್ಚಿಕೊಳ್ಳುತ್ತಿದ್ದವರಿಗೆ ಸ್ವರ್ಗದ ಅನುಭವವಾಗತೊಡಗಿತು.

ಹಸಿರು ಹುಲ್ಲಿನಲ್ಲಿ ಮಿನುಗುತ್ತಿದ್ದ ಮುತ್ತಿನಂತಹ ನೀರಿನ ಹನಿಗಳು, ಅದರಿಂದ ಇಳಿಯುತ್ತಿದ್ದ ಅಮೃತದಂತಹ ಧಾರೆ, ಪಶ್ಚಿಮದಿಂದ ಹಿತವಾಗಿ ಬೀಸುತ್ತಿದ್ದ ತಂಪುಗಾಳಿ ಅವರನ್ನು ಮನೆಯಂಗಳದಿಂದ ಬೈಲಿನತ್ತ ಎಳೆದೊಯ್ದುವು. ಅಂಗಳ ಇಳಿಯುವಾಗ ದೂರದಿಂದ ಸಮುದ್ರದಲೆಗಳ ಭೋರ್ಗರೆತ ಕರೆಯುತ್ತಿತ್ತು.

ದಿಲ್ಲಿಯಲ್ಲಿ ನೋಡಿದ ಆ ಜಾತಿ, ಧರ್ಮಗಳ ಹೆಸರಿನ ಮಾರಣ ಹೋಮ. ಬಾಪೂಜಿಯ ಹತ್ಯೆ, ಆ ಭೀಕರ ಹತ್ಯಾಕಾಂಡಗಳು, ರಕ್ತದ ಓಕುಳಿಗಳನ್ನು ನೋಡಲಾಗದೆ ಓಡಿ ಬಂದಿದ್ದ ಸುಬ್ಬಯಣ್ಣನಿಗೆ ಅದೆಲ್ಲವನ್ನೂ ಮರೆಸುವ ಸ್ವರ್ಗದ ವಾತಾವರಣ ಮಿತ್ತಬೈಲಿನ ತೋಟದಲ್ಲಿತ್ತು. ತೆಂಗು, ಕಂಗಿನ ಮಧ್ಯೆ ಬೀಳುತ್ತಿದ್ದ ತಿಳಿ ಬಿಸಿಲಿನ ಬಂಗಾರದ ಕಿರಣಗಳಿಂದ ಸ್ವರ್ಗವೇ ಇಳಿದು ಭೂಮಿಗೆ ಬಂದಂತೆ ಕಾಣುತ್ತಿತ್ತು. ಸ್ವರ್ಗವೆಂಬುದು ಇದ್ದರೆ ಅದು ಇದಕ್ಕಿಂತ ಸುಂದರವಾಗಿರಲು ಸಾಧ್ಯವೇ ಇಲ್ಲವೆಂದುಕೊಂಡ ಸುಬ್ಬಯಣ್ಣ ಆಶ್ರಮದಲ್ಲಿ ಅಭ್ಯಾಸವಾದ ಪ್ರಾಣಾಯಾಮ, ಸೂರ್ಯ ನಮಸ್ಕಾರ ಮಾಡಿ ನಡೆ ಇಳಿದರು. ಇಳಿಯುವಾಗ ಕಿನ್ಯನ, ಮಾಬಲರ ನೆನಪಾಯಿತು. ಯಮುನಕ್ಕನಲ್ಲಿ ವಿಚಾರಿಸ ಬೇಕೆಂದುಕೊಳ್ಳುತ್ತಾ ಕಟ್ಟಹುಣಿಯಿಂದ ಬೈಲಿಗೆ ಇಳಿದವರು ಗದ್ದೆಯ ಹುಣಿಯಲ್ಲಿ ಕುಳಿತು ಹರಿದು ಹೋಗುತ್ತಿದ್ದ ನೀರಿಗೆ ಕಾಲು ಹಾಕಿ, ಮಾವಿನ ಎಲೆಯಿಂದ ಹಲ್ಲುಜ್ಜಿ, ಮುಖ, ಕೈಕಾಲು ತೊಳೆದು ಮನೆಯೊಳಗಿನ ಅಡುಗೆ ಕೋಣೆಗೆ ಬಂದರು. ಅಲ್ಲೇ ನೆಲದಲ್ಲಿ ಪದ್ಮಾಸನ ಹಾಕಿ ಕುಳಿತು ಸೊಸೆಯಂದಿರನ್ನು ಕರೆದು ಹೇಳಿದರು,

''ಮಕ್ಕಳೇ, ಬಹಳ ಹಸಿವಾಗಿದೆ, ತಂಗಳನ್ನವೂ, ಮಾವಿನ ಮಿಡಿಯ ಉಪ್ಪಿನಕಾಯಿ, ಅದರ ಜೊತೆ ಸ್ವಲ್ಪ ಮೊಸರು ಕೊಡಿ ನೋಡೋಣ. ತಂಗಳನ್ನದ ರುಚಿ ನೋಡದೆ ವರ್ಷವಾಯಿತು. ದೆಹಲಿಯಲ್ಲಿ ಅದರ ನೆನಪಾದಷ್ಟು ಯಾವುದೂ ಆಗಿರಲಿಲ್ಲ''.

ಸುಬ್ಬಯಣ್ಣ ಮನಸ್ಸಿನಲ್ಲೇ ಲೆಕ್ಕ ಹಾಕಿದರು. ಅವರು ಊಟ ಮಾಡದೆ ಅಂದಿಗೆ ನಾಲ್ಕು ದಿನಗಳಾಗಿದ್ದವು. ತಂಗಳನ್ನ - ಮೊಸರು ತಿನ್ನದೆ ಒಂದು ವರ್ಷವಾಗಿತ್ತು.

ಸೊಸೆಯಂದಿರು ಬೇಗ ಬೇಗ ತಂಗಳನ್ನ, ಮೊಸರು ತಂದಿಟ್ಟು, ಉಪ್ಪಿನಕಾಯಿ ಬಡಿಸುವಾಗ ಕ್ಷಣದಲ್ಲೇ ಎರಡು ಬಟ್ಟಲು ತಂಗಳನ್ನ ಹಾಗೂ ನಾಲ್ಕು ಬಟ್ಟಲು ಮೊಸರು ಅವರ ಹೊಟ್ಟೆ ಸೇರಿಯಾಯಿತು.

ಉಂಡು ಗರಡಿಗೆ ಬಂದಾಗ ಅವರನ್ನು ನೋಡಲು ಬಂದವರ ಸಂತೆಯೇ ನೆರೆದಿತ್ತು. ಕೈ ಮುಗಿದು, ಕಾಲಿಗೆ ಬಿದ್ದವರ ಸುಖ-ದುಃಖ ವಿಚಾರಿಸಿ, ಎಲೆ-ಅಡಿಕೆ ತಿನ್ನಲು ಕೊಟ್ಟು ಕಳುಹಿಸುತ್ತಿರುವಾಗ, ಸೆರಗಿನ ತುಂಬ ಅಡಿಕೆ ಕಟ್ಟಿಕೊಂಡು ಬಂದ ಯಮುನಕ್ಕ ಅದನ್ನು ಅಂಗಳಕ್ಕೆ ಸುರಿದು ಬಂದು ತಮ್ಮನ ಬಳಿ ಕುಳಿತುಕೊಂಡರು. ಸೇರಿದ್ದವರೆಲ್ಲಾ ಹೋದ ಮೇಲೆ ಅಲ್ಲಿಗೆ ಉಗ್ರಾಣಿ ಬಂದು ತಲುಪಿದ. ಅವನ ಬೆನ್ನಿಗೇ ರಾಮಣ್ಣನೂ ಬಂದು, ಅಲ್ಲೇ ಜಗಲಿಯಲ್ಲಿ ಸುಬ್ಬಯಣ್ಣನ ಪಕ್ಕ ಕುಳಿತುಕೊಂಡ. ಯಮುನಕ್ಕನೂ, ದುಗ್ಗಪ್ಪನೂ ಅಂಗಳದಿಂದ ಬೈಲಿಗೆ ಇಳಿದರು.



''ಎಲ್ಲಿಗೆ ಹೋಗಿದ್ದೆ ನೀನು ಬೆಳಗ್ಗೆ?'' ಸುಬ್ಬಯಣ್ಣ ರಾಮಣ್ಣನಲ್ಲಿ ಕೇಳಿದರು. ರಾಮಣ್ಣ ಹೇಳಿದ,

''ಬೋಳಂಗಳದ ಪದವಿನಲ್ಲೊಂದು ಚಿಕ್ಕ ಜಗಳವಾಗಿತ್ತು. ಅದನ್ನು ವಿಚಾರಿಸಿ ಕೊಂಡು ಬರೋಣವೆಂದು ಹೋಗಿದ್ದೆ ಮಾವ''.

''ಬೋಳಂಗಳದ ಪದವಿನಲ್ಲಿ ಅದೇನು ಜಗಳ?''

''ಬೆಳಗ್ಗೆ ಯಾರೋ ಕಾಡಿನವರು ಬಂದು ದೂರು ಕೊಟ್ಟರು. ಪದವಿನ ಬದಿಯ ಮುಗೇರರ ಕೇರಿಯವರು, ಕಾಡಿನವರ ಗುಡಿಸಲುಗಳಿಗೆ ನುಗ್ಗಿ, ಎಳೆದು ಹಾಕಿ, ಹೊಡೆದಿದ್ದಾರಂತೆ. ಕೊರಗರ ಕೇರಿಯವರ ಪಾತ್ರೆ ಪಗಡಗಳನ್ನೆಲ್ಲ ಎಳೆದು ಹೊರಗೆಸೆದಿದ್ದಾರಂತೆ. ಇದನ್ನೆಲ್ಲ ವಿಚಾರಿಸಿ ಬರುವಾಗ ಇಷ್ಟು ಹೊತ್ತಾಯಿತು''.

''ಯಾಕಾಗಿ ಈ ಜಗಳ?''

''ನೀವೇ ವಿಚಾರಿಸಬೇಕು ಈ ಜಗಳವನ್ನು. ಈ ಕಾಡಿನವರು ಪದವಿನ ಬಳಿಯಲ್ಲಿ ಗುಡಿಸಲು ಕಟ್ಟಿಕೊಂಡು ಎಷ್ಟೋ ವರ್ಷಗಳಿಂದ ಬದುಕುತ್ತಿದ್ದಾರೆ. ನಮ್ಮ ಹಿರಿಯರು ಅವರಿಗೆ ಅಲ್ಲಿ ನೆಲೆ ಒದಗಿಸಿದ್ದರಂತೆ. ಅವರ ಗುಡಿಸಲುಗಳಲ್ಲಿ ಪದವಿನ ಹಳ್ಳದ ನೀರನ್ನೇ ಬಳಸುವುದಂತೆ. ಇತ್ತೀಚೆಗೆ ಎರಡು ವರ್ಷಗಳಿಂದ ಆ ಹಳ್ಳದಲ್ಲಿ ನೀರು ಬತ್ತಿರುವುದರಿಂದ ಅವರು ಕಾಡಿನ ಒಸರಿನ ನೀರನ್ನು ಸ್ವಲ್ಪ ತಿರುಗಿಸಿ ಅವರ ಕೇರಿಯ ಬಳಿ ಒಂದು ಗುಂಡಿ ಮಾಡಿ, ಆ ನೀರನ್ನು ಬಳಸುತ್ತಿದ್ದಾರೆ. ಅದುವೇ ಅವರ ದೊಡ್ಡ ತಪ್ಪಾಗಿ ಹೋಯಿತು''.

''ಅದರಿಂದೇನು ತಪ್ಪಾಯಿತು? ಕಾಡಿನ ಒಸರಿನ ನೀರಲ್ಲವೇ? ಕುಡಿಯಲು ಹೊರತು ಬೇಸಾಯಕ್ಕೇನೂ ಉಪಯೋಗಿಸಲಿಲ್ಲವಲ್ಲಾ?''

''ಹೌದು ಮಾವ, ಬೇಸಾಯಕ್ಕೆ ಉಪಯೋಗಿಸಲಿಲ್ಲ. ಆದರೆ, ಅದರ ಕೆಳಗೆ ಈ ಮುಗೇರರ ಗುಡಿಸಲುಗಳಿವೆಯಲ್ಲ. ಅವರ ಕೆರೆಗೆ ಈ ಒಸರಿನ ನೀರೇ ಬಂದು ಬೀಳುವುದು. ಕೆರೆಯಿಂದ ಹರಿದು ಹೋಗುವ ನೀರು ಬಾರಬೈಲಿನ ಸಾಗುವಳಿಗೆ ಹೋಗುವುದು''.

''ಅದರಿಂದೇನಾಯಿತು? ಈ ಗುಡಿಸಲಿನವರು ತೆಗೆದರೆ ಎಷ್ಟು ನೀರು ತೆಗೆಯಬಹುದು? ಕುಡಿಯಲು ಒಂದೆರಡು ಕೊಡ ತೆಗೆಯಬಹುದು. ಸ್ನಾನ ಗೀನವೆಲ್ಲ ತಿಂಗಳಿಗೊಮ್ಮೆಯಲ್ಲವೇ ಅವರು ಮಾಡುವುದು? ಅದಕ್ಕೆ ಯಾಕಪ್ಪಾ, ಈ ಕುಡಿಯುವ ನೀರಿಗೆ ಜಗಳ?''

ರಾಮಣ್ಣ ನಕ್ಕ,

''ಮಾವಾ, ನಿಮ್ಮ ಗಾಂಧಿಯವರ ಕಾಂಗ್ರೆಸ್‌ಗೆ ಹೇಳಿದ ಪ್ರಕರಣ ಇದು. ಸ್ವಲ್ಪ ತಾಳಿ, ಎರಡೂ ಕಡೆಯವರು ಇಲ್ಲಿಗೇ ಬರುತ್ತಿದ್ದಾರೆ. ನೀವೇ ಇದನ್ನು ವಿಚಾರಣೆ ಮಾಡಿ ತೀರ್ಪು ಕೊಡಿ''.

ಕೆಳಗಿನ ಕಟ್ಟಹುಣಿಯಲ್ಲೇ ಬಂದ ನಾಲ್ಕೈದು ಮುಗೇರರು. ಅವರ ಜೊತೆ ಬಂದ

ಪೊಲೀಸನೂ ಅಂಗಳಕ್ಕೆ ಬಂದರು.

''ಅವರೆಲ್ಲಿದ್ದಾರೆ? ಆ ಕಾಡಿನವರು ಬರಲಿಲ್ಲವೇ?''

ರಾಮಣ್ಣ ಪೊಲೀಸನಲ್ಲಿ ಕೇಳಿದ.

''ಪಟೇಲರೇ, ಅವರು ಅಲ್ಲಿ ಕಟ್ಟಹುಣಿಯ ಕೆಳಗೆ ಕಾಲುವೆಯಲ್ಲಿ ನಿಂತುಕೊಂಡಿದ್ದಾರೆ''.

ಅವರೇಕೆ ಅಂಗಳಕ್ಕೆ ಬರಲಿಲ್ಲ, ನಮ್ಮ ಅಂಗಳದಲ್ಲೂ ಅವರಿಗೆ ಇವರ ಭಯವೇ?''

ಸುಬ್ಬಯ್ಯಣ್ಣ ಕೇಳಿದಾಗ ಪೊಲೀಸು ಪಟೇಲರ ಮುಖ ನೋಡಿದ. ರಾಮಣ್ಣ ಕೇಳಿದ,

''ನಿಮಗೆಲ್ಲ ಮಾವನ ಪರಿಚಯವಿದೆಯಲ್ಲವೇ?''

''ಗಾಂಧಿ ಸುಬ್ಬಯ್ಯಣ್ಣರಲ್ಲವೇ?'' ಪೊಲೀಸನವ ಕೇಳಿದ.

''ಒಡೆಯರ ಪರಿಚಯವಿದೆಯೇ ಎಂದು ನೀವು ನಮ್ಮನ್ನು ಕೇಳಬಹುದೇ ದೊರೆ'' ಮುಗೇರರ ಹಿರಿಯನೊಬ್ಬ ಕೇಳಿದ.

''ಹಾಗಾದರೆ ನಿಮ್ಮ ನ್ಯಾಯವನ್ನು ಅವರೇ ಮುಗಿಸಲಿ. ಅವರು ಕೊಟ್ಟ ತೀರ್ಪಿಗೆ ಸರಕಾರದ ಪರವಾಗಿ ನನ್ನ ಒಪ್ಪಿಗೆ ಇದೆ. ಏನು ಹೇಳುತ್ತೀರಿ?''

''ಪೊಲೀಸರೇ, ಮೊದಲು ಆ ಕಾಡಿನವರನ್ನು ಇಲ್ಲಿಗೆ ಕರೆಯಿರಿ''.

ಸುಬ್ಬಯ್ಯಣ್ಣ ಹೇಳಿದಾಗ ಎಲ್ಲರೂ ಪರಸ್ಪರ ಮುಖ ನೋಡಿಕೊಂಡರು. ಯಾರೋ ಕಾಡಿನವರನ್ನು ಅಬ್ಬರಿಸಿ ಕರೆದಾಗ ಅವರು ಅಂಗಳದ ಬದಿಯಲ್ಲಿ, ದೂರದಲ್ಲಿ ಬಂದು ನಿಂತುಕೊಂಡು,

''ಅಡ್ಡ ಬಿದ್ದೆವು ಒಡೆಯರೇ'' ಎಂದರು.

''ಮೇಲೆ ಬನ್ನಿ'' ಸುಬ್ಬಯ್ಯಣ್ಣನ ಮಾತಿಗೆ ಬಹಳ ಮುಜುಗರದಿಂದ ಮೇಲೆ ಅಂಗಳಕ್ಕೆ ಬಂದ ಕಾಡಿನವರು ಒಂದಷ್ಟು ದೂರ ನಿಂತುಕೊಂಡರು.

''ಏನು? ಈ ಅಂಗಳದಲ್ಲೂ ನಿಮಗೆ ಇವರ ಭಯವೇ? ಅಷ್ಟು ದೂರ ಯಾಕೆ ನಿಂತಿದ್ದೀರಿ? ಹತ್ತಿರ ಬನ್ನಿ!''.

ಸುಬ್ಬಯ್ಯಣ್ಣ ಕೇಳಿದಾಗ, ರಾಮಣ್ಣ ಹೇಳಿದ,

''ಮಾವಾ, ನೀವಿನ್ನೂ ಗಾಂಧೀಜಿಯ ಆಶ್ರಮದಲ್ಲಿದ್ದೀರಿ. ಇವರು ದೂರ ನಿಂತದ್ದು ಯಾಕೆಂದರೆ, ಅವರ ನೆರಳು ಈ ಮುಗೇರರ ಮೇಲೆ ಬೀಳಬಾರದೆಂದು''.

''ಯಾಕೆ? ಬಿದ್ದರೆ ಏನಾಗುತ್ತದೆ?''

''ಮಾವಾ, ಬ್ರಾಹ್ಮಣರ ಮೇಲೆ ಈ ಮುಗೇರರ ನೆರಳು ಬಿದ್ದರೆ ಏನಾಗುತ್ತದೋ, ಅದೇ ಈ ಕಾಡಿನವರ ನೆರಳು ಈ ಮುಗೇರರ ಮೇಲೆ ಬಿದ್ದರೆ ಆಗುತ್ತದೆ''.

''ಎಂತಹ ಕರ್ಮವೋ ಇದು. ಬಾಪು ಇಷ್ಟು ವರ್ಷಗಳ ಹೋರಾಟ ಮಾಡಿ, ನಾವು ಅವರ ಹಾದಿಯಲ್ಲಿ ನಡೆದು, ಈ ಅಸ್ಪೃಶತೆ ನಿವಾರಣೆಗೆ ಪ್ರಯತ್ನಿಸಿಯೂ, ನೀನು ಹೇಳುತ್ತಿ,



ಕಾಡಿನವರ ನೆರಳು ಮುಗೇರರ ಮೇಲೆ ಬೀಳಬಾರದೆಂದು. ಅದಕ್ಕೆ ಬೇಕಾಗಿ ಈ ಬಾಪೂ ಪ್ರಾಣಾರ್ಪಣೆ ಮಾಡಿದರೇ?''

ಸುಬ್ಬಯ್ಯಣ್ಣ ಅಂಗಳಕ್ಕೆ ಇಳಿದರು.

''ಪದವಿನ ಜಗಳಕ್ಕೆ ಕಾರಣ ಈ ನೆರಳಿನ ಕತೆ. ನೀರು ಒಂದು ನೆಪ ಮಾತ್ರ. ಕಾಡಿನವರು ಕಾಡಿನ ಒಸರಿನ ನೀರನ್ನು ಮುಟ್ಟಿದರೆ ಆ ನೀರು ಮೈಲಿಗೆಯಾಗುವುದಿಲ್ಲವೇ? ಅದನ್ನು ಈ ಮುಗೇರರು ಹೇಗೆ ಕುಡಿಯುವುದು? ಅದಕ್ಕೆ ಈ ಕಾಡಿನವರ ಗುಡಿಸಲು ಗಳನ್ನು ಧ್ವಂಸ ಮಾಡಿ ಅವರನ್ನು ಓಡಿಸಬೇಕೆಂದು ಮುಗೇರರು ಪ್ರಯತ್ನಿಸುತ್ತಿದ್ದಾರೆ. ಕಾಡಿನಿಂದ ಬರುವ ನೀರನ್ನು ಮುಟ್ಟಿ ಮೈಲಿಗೆ ಮಾಡುವುದು, ಕಾಡಿನವರ ಮಕ್ಕಳು ಊರೊಳಗೆ ಬಂದು ಅಶುದ್ಧ ಮಾಡುವುದು, ಇದಕ್ಕೆಲ್ಲ ಗಾಂಧೀಜಿಯ ಗಾಳಿ ತಾಗಿರುವ ಕಾಡಿನವರ ಮಕ್ಕಳೇ ಕಾರಣ. ಕಾಡಿನಿಂದ ಬರುವ ನೀರು ಬಿಡಿ, ಬೀಸಿ ಬರುವ ಗಾಳಿ ಕಾಡಿನವರ ಗುಡಿಸಲು ಹೊಕ್ಕು ಬಂದು ಮುಗೇರರ ಕೇರಿಗೆ ಬಂದರೂ ಆ ಗಾಳಿ ಮೈಲಿಗೆಯಾಗುವುದಿಲ್ಲವೇ ಮಾವಾ? ಅದಕ್ಕಾಗಿ ಈ ಕಾಡಿನವರ ಗುಡಿಸಲುಗಳನ್ನು ಅಲ್ಲಿಂದ ತೆಗೆದು ಕಾಡಿನ ಆ ಬದಿಗೆ ಸಾಗಿಸುವುದು ಒಳ್ಳೆಯದಲ್ಲವೇ?''

ಸುಬ್ಬಯ್ಯಣ್ಣನಿಗೆ ರಾಮಣ್ಣನ ಮಾತಿನ ವ್ಯಂಗ್ಯ ಅರ್ಥವಾಯಿತು. ಅವರೂ ಅದನ್ನು ಮುಂದುವರಿಸಿದರು,

''ಇಗೋ ರಾಮ, ನೋಡು, ಆ ಮುಗೇರರು ಹೋಗಿ ಆ ಕಾಡಿನವರ ಗುಡಿಸಲು ಗಳಿಗೆ ಬೆಂಕಿ ಕೊಡಲಿ. ಈ ಕಾಡಿನವರನ್ನು ಒಬ್ಬೊಬ್ಬರನ್ನೇ ಆ ಮಾವಿನ ಮರಕ್ಕೆ ಕಟ್ಟಿ ಹಾಕಿ ಹುಣಸೆಯ ಕೋಲಿನಿಂದ ಅವರ ಚರ್ಮ ಸುಲಿದು, ಸ್ವಲ್ಪ ಉಪ್ಪು ಹಾಕಿ ಒಣಗಿಸಲಿ. ಏನು ಮುಗೇರರೇ? ಅವರಿಗೆ ಈ ಶಿಕ್ಷೆ ಸಾಕಲ್ಲವೇ? ದೇವರು ಸುರಿಸುವ ಮಳೆ ನೀರನ್ನು, ಭೂಮಿ ತಾಯಿಯ ಒಸರಿನ ನೀರನ್ನು ಮುಟ್ಟುವ ಹಕ್ಕು ಈ ಕಾಡಿನವರಿಗೆ ಯಾರು ಕೊಟ್ಟಿದ್ದಾರೆ? ಇಲ್ಲಿಯ ತನಕ ಅವರನ್ನು ಹೀಗೆ ಬಿಟ್ಟದ್ದೇ ಬಹಳ ದೊಡ್ಡ ತಪ್ಪು. ಅವರಿರಲಿ, ಈಗ ಈ ಕಾಡಿನವರನ್ನು ಮುಟ್ಟಿದ ಮುಗೇರರನ್ನು ಏನು ಮಾಡುವುದು? ಅವರನ್ನು ಹೇಗೆ ಶುದ್ಧ ಮಾಡುವುದು? ನೀವೇ ಹೇಳಿ. ಈ ಕಾಡಿನವರು ಮುಟ್ಟಿದ ನೀರನ್ನು ಕುಡಿದ ನಿಮ್ಮನ್ನು ಬೆಂಕಿಯಿಂದಲೇ ಶುದ್ಧ ಮಾಡಬೇಕಾದೀತು ಅಲ್ಲವೇ?''

ಮುಗೇರರಿಗೆ ಸುಬ್ಬಯ್ಯಣ್ಣ ಏನು ಹೇಳುತ್ತಿದ್ದಾರೆಂದು ಅರ್ಥವಾಯಿತು. ಅವರು ತಲೆ ಕೆಳಗೆ ಹಾಕಿ ನಿಂತವರು ಉಸಿರೆತ್ತಲಿಲ್ಲ.

ಈ ಮುಗೇರರನ್ನು ಕೆಲವು ವರ್ಷಗಳ ಹಿಂದೆ ಕೋಳ್ಯೂರು ದೇವಸ್ಥಾನಕ್ಕೆ ಕರೆದು ಕೊಂಡು ಹೋಗಿದ್ದವರು ಇದೇ ಸುಬ್ಬಯ್ಯಣ್ಣ. ದೇವರ ಮುಂದೆ ಎಲ್ಲಾ ಜಾತಿಯವರೂ ಒಂದೇ. ಇರುವುದು ಒಂದೇ ಜಾತಿ, ಅದು ಮನುಷ್ಯಜಾತಿ ಎಂದು ಬ್ರಾಹ್ಮಣ ಸಭೆಗೆ ಉಪದೇಶ ಮಾಡಿ, ದೇವಸ್ಥಾನದ ಮುಂದೆ ಅನ್ನ ನೀರು ಬಿಟ್ಟು ಸತ್ಯಾಗ್ರಹ ಮಾಡಿ, ಎಲ್ಲ ದಲಿತರ ಕುಟುಂಬಗಳನ್ನು ಕೆರೆಯಲ್ಲಿ ಸ್ನಾನ ಮಾಡಿಸಿ, ದೇವರ ಮುಂದೆ ನಿಲ್ಲಿಸಿದವರು ಈ

ಗಾಂಧಿ ಸುಬ್ಬಯ್ಯಣ್ಣ, ಬೆಳ್ಳಿ, ಬಂಗಾರದ ದೇವರ ಮೂರ್ತಿಗಳು, ಹೂ, ಹಿಂಗಾರದ ಶೃಂಗಾರ ಮಾಡಿ, ಸುತ್ತಲೂ ಉರಿಸಿಟ್ಟ ದೀಪಗಳು, ದೊಡ್ಡ ಆರತಿಯ ಬೆಳಕಿನಲ್ಲಿ ಕಂಡಾಗ ಏನು ಹೇಳಲೂ ತೋಚದೆ ಅಡ್ಡ ಬಿದ್ದಿದ್ದ ದಲಿತ ಸಮಾಜದವರಲ್ಲಿ ಈ ಮುಗೇರರೂ ಇದ್ದರು. ಅಡ್ಡ ಬಿದ್ದವರು 'ಮಹಾತ್ಮಾ ಗಾಂಧಿಕೀ ಜೈ' ಎಂದು ಘೋಷಣೆ ಕೂಗಿ, ಸುಬ್ಬಯ್ಯಣ್ಣನ  ಕಾಲಿಗೂ ಬಿದ್ದು ಜಯಕಾರ ಹಾಕಿದ್ದರು. ಅಂದಿನ ಆ ಗುಂಪಿನಲ್ಲಿ ಈ ಮುಗೇರರ ಯುವಕರೂ ಇದ್ದರು.

ಕಂಬದಂತೆ ನಿಂತಿದ್ದ ಮುಗೇರರು ಅಂಗಳದಲ್ಲಿ ಶತಪಥ ತಿರುಗುತ್ತಿದ್ದ ಸುಬ್ಬಯ್ಯಣ್ಣನ ಕಾಲಿಗೆ ಬಿದ್ದರು.

''ತಪ್ಪಾಯಿತು ಒಡೆಯಾ, ತಪ್ಪಾಯಿತು. ನಮ್ಮ ತಪ್ಪನ್ನು ಕ್ಷಮಿಸಿ. ನಮಗೆ ಯಾವ ಶಿಕ್ಷೆ ಬೇಕಾದರೂ ಕೊಡಿ, ನಮ್ಮದು ತಪ್ಪಾಯಿತು'' ಎಂದು ಬೇಡಿಕೊಂಡರು. ಅಡ್ಡ ಬಿದ್ದವರನ್ನು ಎಬ್ಬಿಸಿದ ಸುಬ್ಬಯ್ಯಣ್ಣ ಹೇಳಿದರು,

''ನೀವು ಈ ಕಾಡಿನವರ ಕಾಲಿಗೆ ಬೀಳಬೇಕು, ನನ್ನ ಕಾಲಿಗಲ್ಲ. ಹೋಗಿ, ಅವರ ಹೆಗಲ ಮೇಲೆ ಕೈ ಹಾಕಿಕೊಂಡು ಒಂದೇ ತಾಯಿಯ ಮಕ್ಕಳಂತೆ ಈ ಅಂಗಳ ಇಳಿದಿರಾದರೆ ಈ ದೇಶಕ್ಕೆ ಬೇಕಾಗಿ ಮೊನ್ನೆ ಪ್ರಾಣಾರ್ಪಣೆ ಮಾಡಿದ ಆ ಬಾಪೂಜಿಯ ಆತ್ಮಕ್ಕೆ ಸಂತೋಷ ವಾಗಬಹುದು. ಅದು ಅವರಿಗೆ ನೀವು ಕೊಡುವ ಬಹಳ ದೊಡ್ಡ ಗೌರವ. ಹೋಗಿ, ಒಂದೇ ತಾಯಿಯ ಮಕ್ಕಳಂತೆ ಬಾಳಿ''.

ಮುಗೇರರೂ, ಕಾಡಿನವರೂ ಒಬ್ಬರನ್ನೊಬ್ಬರು ಆಲಿಂಗಿಸಿಕೊಂಡು ಕೈ ಕೈ ಹಿಡಿದುಕೊಂಡು ಹೋಗುವಾಗ, ಸುಬ್ಬಯ್ಯಣ್ಣ ಮೇಲೆ ಆಕಾಶವನ್ನು ನೋಡಿದರು. ಒಂದೇ ಒಂದು ನಕ್ಷತ್ರ ಇನ್ನೂ ಅಲ್ಲಿ ಮಿನುಗುತ್ತಿತ್ತು. ಸುಬ್ಬಯ್ಯಣ್ಣ, 'ಬಾಪೂ' ಎಂದು ಕರೆದು ಆ ನಕ್ಷತ್ರಕ್ಕೆ ಕೈ ಮುಗಿದರು.

ಸ್ವಲ್ಪ ಹೊತ್ತಾಗುವಾಗ ಬೈಲಿನಿಂದ ಯಮುನಕ್ಕನೂ, ದುಗ್ಗಪ್ಪನೂ ಬಂದರು. ನಗುತ್ತಾ ಬಂದ ಯಮುನಕ್ಕ ಹೇಳಿದರು,

''ಸುಬ್ಬಯ, ನೀನು ಊರಿಗೆ ಬಂದ ಸಮಾಚಾರಗಳು ಕಟ್ಟಹುಣಿಯಲ್ಲಿ ಕೈ ಕೈ ಹಿಡಿದುಕೊಂಡು ಹೋಗುತ್ತಿದ್ದವು. ನಿನ್ನ ಉಪದೇಶಗಳು ಟಾಂಟಾಂ ಮಾಡುತ್ತಾ ಹೊಳೆಗೆ ಇಳಿದವು. ಇನ್ನು ಹೋಗಿ, ಎಲ್ಲಿಯಾದರೂ ಶರಾಬು ಅಂಗಡಿಯಲ್ಲಿ ಜಗಳ ಮಾಡಿಕೊಳ್ಳದಿದ್ದರೆ ಸಾಕು''.

''ಯಮುನಕ್ಕ, ಬಾಪು ಹೇಳುತ್ತಿದ್ದರು, ಪ್ರತಿಯೊಬ್ಬ ಮನುಷ್ಯನ ಒಳಗೂ ಒಬ್ಬ ರಾಮ ಇದ್ದಾನೆ. ಕೆಲವರ ಹೃದಯಗಳಲ್ಲಿ ಆತ ಎಚ್ಚರದಲ್ಲಿರುತ್ತಾನೆ. ಕೆಲವರ ಹೃದಯಗಳಲ್ಲಿ ಆತ ನಿದ್ರೆಯಲ್ಲಿರುತ್ತಾನೆ. ಆತನನ್ನು ಎಬ್ಬಿಸಬೇಕಾದ ಕೆಲಸ ಮಾತ್ರ ನಾವು ಮಾಡಬೇಕಾಗಿರುವುದು. ಎಲ್ಲರ ಹೃದಯಗಳ ರಾಮ ಎಚ್ಚರಗೊಂಡಾಗ ಇಲ್ಲಿ ರಾಮರಾಜ್ಯ ಆಗುತ್ತದೆ''.



''ಅದೆಲ್ಲ ಸರಿ, ಆ ರಾಮನಿಗೊಬ್ಬಳು ಸೀತೆ ಇದ್ದಳು ಎಂದು ನಿನಗೆ ಯಾರೂ ಗಾಂಧಿ ಆಶ್ರಮದಲ್ಲಿ ಹೇಳಲಿಲ್ಲವೇ? ನಿನ್ನೆ ರಾತ್ರಿ ನನಗೊಂದು ಮಾತು ಕೊಡಬೇಕೆಂದು ಕೇಳಿದಾಗ ನೀನು ಒಪ್ಪಿದ್ದೆ. ಈಗ ಆ ಮಾತು ಏನೆಂದು ನೀನು ಕೇಳುವುದಿಲ್ಲವೇ?''

''ಯಮುನಕ್ಕ, ನಿನ್ನೆಯೇ ಹೇಳಿದ್ದೇನೆ. ನಾನಿನ್ನು ಎಲ್ಲಿಗೂ ಹೋಗುವುದಿಲ್ಲ. ನಿನ್ನ ಭೂತಗಳನ್ನು, ಮನೆ, ಭೂತದ ಗುರಿಕಾರಿಕೆಯನ್ನು ವಹಿಸಿಕೊಂಡು ಇಲ್ಲೇ ಇರುತ್ತೇನೆ. ಇನ್ನೇನು ಆಗಬೇಕು ನಿನಗೆ?''

''ನನ್ನ ಆಸೆ ಅದಲ್ಲ, ಅದು ಬೇರೆಯೇ ಇದೆ. ಅದನ್ನು ನಡೆಸಿ ಕೊಡುತ್ತೇನೆಂದು ಮಾತು ಕೊಡು''.

''ಯಮುನಕ್ಕ, ಈ ಅರುವತ್ತು ವರ್ಷಕ್ಕೆ ಕಾಲಿಟ್ಟಿರುವ ಮುದುಕನಿಂದ ಇನ್ನೇನು ಮಾತು ಬೇಕು ನಿನಗೆ? ಮದುವೆಯ ಬಗ್ಗೆ ಕೇಳುತ್ತಿರುವುದಲ್ಲವಲ್ಲ?''

ಸುಬ್ಬಯ್ಯಣ್ಣ ನಕ್ಕು ಹೇಳಿದಾಗ, ಯಮುನಕ್ಕ ಅವರ ಮುಖ ನೋಡಿದರು. ಅವರ ಕಣ್ಣ ತುಂಬ ಪ್ರಶ್ನೆ ತುಂಬಿತ್ತು.

''ಕೇಳಬಾರದೇ?''

''ಕೇಳುವುದು ಮಾತ್ರ ಅಲ್ಲವೇ? ಹೆಣ್ಣು ಎಲ್ಲಿಯಾದರೂ ನೋಡಿಟ್ಟಿಲ್ಲ ತಾನೇ?''

''ಮದುವೆ ಆಗುತ್ತೇನೆಂದು ಮಾತು ಕೊಡು. ಹೆಣ್ಣು ಹುಡುಕುವ ಕೆಲಸ ನನ್ನದು''.

''ಯಮುನಕ್ಕಾ, ನೀನು ನಿಜವಾಗಿಯೂ ಈ ಮುದುಕನಿಗೆ ಮದುವೆಯ ತಯಾರಿ ನಡೆಸಿಲ್ಲ ತಾನೇ?''

''ಏನು? ನೀನು ಸನ್ಯಾಸಿ ಆಗಿಯೇ ಇರಬೇಕೆಂದು ಹೇಳಿದ್ದಾರೆಯೇ ಬಾಪೂಜಿ. ನೀನು ಮದುವೆಯಾಗಿ ಯಜಮಾನತ್ವ ವಹಿಸಿಕೊಳ್ಳಬೇಕೆಂದು ನಾವು ಇಷ್ಟು ದಿನಗಳಿಂದ ಕಾಯುತ್ತಿದ್ದೇವೆ. ನಿನ್ನ ಮದುವೆಯೊಂದು ಮುಗಿದ ಮೇಲೆ ಮದುವೆಯಾಗುವುದೆಂದು ಸಾಲುಗಟ್ಟಿ ಕಾಯುತ್ತಿರುವ ಯುವಕರ, ಹೆಣ್ಣು ಮಕ್ಕಳ ಬಗ್ಗೆ ಯೋಚಿಸಿದರೆ, ಆಗ ಅರ್ಥ ಆಗುತ್ತದೆ ನಿನಗೆ''.

''ಅಕ್ಕ, ಬೇರೆ ಯಾವ ವಿಷಯದಲ್ಲಿ ಬೇಕಾದರೂ ನಿನ್ನನ್ನು, ನಿನ್ನ ಮಲರಾಯನನ್ನು ಮುಂದಿಟ್ಟು ಮಾತು ತೆಗೆದುಕೊ. ಆದರೆ, ಮದುವೆಯ ಬಗ್ಗೆ ಯಾವುದೇ ಮಾತು ತೆಗೆಯಬಾರದು. ನಾನು ಮದುವೆಯಾಗದೆ ಗಾಂಧೀಜಿಯ ಕೆಲಸ ಮಾಡುತ್ತಿರುತ್ತೇನೆ ಎಂದು ಅವರ ಕಾಲು ಹಿಡಿದು ಪ್ರತಿಜ್ಞೆ ಮಾಡಿಕೊಂಡಿದ್ದೇನೆ. ಈ ವಿಷಯದಲ್ಲಿ ಹಟ ಮಾಡಿ ನೀನು ನನ್ನನ್ನು ಇಲ್ಲಿಂದ ಓಡಿಸಬೇಡ''.

ಸುಬ್ಬಯ್ಯಣ್ಣ ಖಡಾಖಂಡಿತವಾಗಿ ಹೇಳಿದಾಗ ಯಮುನಕ್ಕ ಆ ಮಾತನ್ನು ಅಲ್ಲಿಗೇ ಬಿಟ್ಟು ಬಿಟ್ಟರು.

''ಯಮುನಕ್ಕ, ಆಗಲೇ ಕೇಳಬೇಕೆಂದಿದ್ದೆ, ಮರೆತು ಹೋಯಿತು. ಗಟ್ಟಕ್ಕೆ ಹೋಗಿರುವ ಕಿನ್ಯನ, ಮಾಬಲರ ಸುದ್ದಿ ಇಲ್ಲವೇ? ಅವರು ಹಿಂದಿರುಗಿ ಬರಲಿಲ್ಲವೇ?''

''ಓ, ಹಾಗಾದರೆ ನಿನಗೆ ಅವರು ಗಟ್ಟಕ್ಕೆ ಹೋಗುವುದು ತಿಳಿದಿತ್ತು?''

''ಹೌದು, ಹೇಳಲು ಮರೆತಿದ್ದೆ. ನಾನು ಸಬರಮತಿಗೆ ಹೋಗುವಂದು ಅವರು ನನ್ನ ಒಪ್ಪಿಗೆ ತೆಗೆದುಕೊಂಡಿದ್ದರು''.

''ಇಬ್ಬರೂ ಗಟ್ಟಕ್ಕೆ ಊರಿಂದ ಜನ ಕಟ್ಟುವ ಕೆಲಸ ಮಾಡುತ್ತಿದ್ದಾರೆ. ಮಳೆಗಾಲದಲ್ಲಿ ಸುಗ್ಗಿಯ ಸಮಯದಲ್ಲಿ ಕೆಲವು ಬ್ಯಾರಿಗಳ ಯುವಕರು, ನಮ್ಮ ಕೇರಿಯವರನ್ನು ಕರೆದುಕೊಂಡು ಗಟ್ಟಕ್ಕೆ ಹೋಗಿ ಬರುತ್ತಾರೆ. ಗಟ್ಟದ ಮೇಲೆ ಆದ್ಯಾರೊ ಸಾಕಮ್ಮ ಅಂತೆ, ಅವರ ತೋಟಕ್ಕೆ ಜನ ಕಟ್ಟುತ್ತಿದ್ದಾರೆ. ಈಗ ಕಾಫಿ ತೋಟದಲ್ಲಿ ಕಾಫಿ ಆಗುವ ಸಮಯ. ಅದು ಮುಗಿದು ವಿಷು ಹಬ್ಬಕ್ಕೆ ಬರುತ್ತೇವೆ ಎಂದು ಹೇಳಿ ಹೋಗಿದ್ದಾರೆ. ಆಗಾಗ ಬರುತ್ತಿರುತ್ತಾರೆ. ಬರುವಾಗ ತಾಯಿ, ತಂಗಿಯಂದಿರಿಗೆ ಒಡವೆ, ಸೀರೆ, ಮನೆಗೆ ಕಾಫಿ, ಏಲಕ್ಕಿ ತಗೊಂಡು ಬರುತ್ತಾರೆ. ಯಾವಾಗ ಬಂದರೂ ನಿನ್ನದೇ ಸುದ್ದಿ. ಈ ಸಲ ಬಂದರೆ ಅವರಿಗೆ ಹೆಣ್ಣು ನೋಡಿ, ನಿಶ್ಚಯ ಮಾಡಿ ಕಳುಹಿಸಬೇಕು. ಇಲ್ಲಿ ರಾಮಣ್ಣನೂ, ದುಗ್ಗಪ್ಪನೂ ತಯಾರಾಗಿದ್ದಾರೆ. ಎಲ್ಲರೂ ನಿನ್ನನ್ನೇ ಕಾಯುತ್ತಾ ಬಾಕಿಯಾದುದು. ಇನ್ನು ತಡ ಮಾಡುವಂತಿಲ್ಲ''.

''ಸರಿ, ಈ ಸಲ ಅವರು ಬಂದ ಕೂಡಲೇ ಮದುವೆಯ ತಯಾರು ಮಾಡೋಣ. ಒಂದೇ ಚಪ್ಪರದಲ್ಲಿ ಸಾಲಾಗಿ ಧಾರೆ ಎರೆಯೋಣ''.

''ಇನ್ನೊಂದು ಕೆಲಸವಾಗಬೇಕು ಸುಬ್ಬಯ. ನಮ್ಮ ಧರ್ಮಛತ್ರವನ್ನು ಸ್ವಲ್ಪ ಸರಿಮಾಡಿಸಿ ನಿನ್ನ ಆಶೆಯಂತೆ ಒಂದು ಶಾಲೆ ಕಟ್ಟಿಸೋಣ. ನಮ್ಮ ಮಕ್ಕಳು ಕಲಿಯಲು ದೂರದೂರದ ಶಾಲೆಗಳಿಗೆ ಹೋಗುತ್ತಿದ್ದಾರೆ. ಅಷ್ಟೇ ಅಲ್ಲ, ಶಾಲೆ ಹತ್ತಿರ ಇದ್ದರೆ ನಮ್ಮ ಹೆಣ್ಣುಮಕ್ಕಳು ನಾಲ್ಕು ಅಕ್ಷರ ಹೆಚ್ಚು ಕಲಿಯಬಹುದು''.

''ಯಮುನಕ್ಕ ಇಷ್ಟು ಹೊತ್ತು ಹೇಳಿದ ಮಾತುಗಳಲ್ಲಿ ಬಂಗಾರದಂತಹ ಮಾತು ಎಂದರೆ ಇದೊಂದೇ. ಈ ಕೆಲಸ ಮೊದಲೇ ಆಗಬೇಕಿತ್ತು. ಆ ಭಂಡಸಾಲೆಯ ಬಳಿ ಇದ್ದ ಬೆಲ್ಲ, ನೀರಿನ ಛತ್ರ ನಡೆಯುತ್ತಿದೆಯೇ ಅಥವಾ ಕಿನ್ಯನನೊಂದಿಗೇ ಗಟ್ಟಕ್ಕೆ ಹೋಗಿದೆಯೇ?''

''ಸುಬ್ಬಯಣ್ಣ, ಗಾಂಧಿ ಸುಬ್ಬಯಣ್ಣ ಮಾಡಿ ಹೋದ ಯಾವ ಕೆಲಸವನ್ನೂ ನಿಲ್ಲಿಸುವ ಧೈರ್ಯ ನಿನ್ನ ಅಕ್ಕನಿಗೆ ಇಲ್ಲ, ಅದನ್ನು ನಿನ್ನ ಶಿಷ್ಯರೇ ನಡೆಸುತ್ತಿದ್ದಾರೆ''.


''ಯಮುನಕ್ಕ, ನಾನೊಮ್ಮೆ ಊರು ಸುತ್ತಿಕೊಂಡು ಬರುತ್ತೇನೆ. ಕಳೆದ ಒಂದು ವರ್ಷದಲ್ಲಿ ಏನೆಲ್ಲ ಬದಲಾವಣೆಗಳಾಗಿವೆಯೆಂದು ನೋಡಿಕೊಂಡು ಬರುತ್ತೇನೆ''.

ಸುಬ್ಬಯಣ್ಣ ಅಂಗಳ ಇಳಿದರು. ಯಮುನಕ್ಕ, ಬಡಾಜೆ ತಂತ್ರಿಯವರನ್ನು ಕಂಡು ಭೂತದ ಗಡಿ ಹಿಡಿಯಲು ದಿನ ಕೇಳಿ ಬರುವಂತೆ ತಮ್ಮನಿಗೆ ಹೇಳಿದರು. ಭೂತದ ಧರ್ಮ ನೇಮಕ್ಕೂ ದಿನ ಕೇಳುವಂತೆ ಹೇಳಿದರು.

ಸುಬ್ಬಯಣ್ಣ ನಡೆ ಇಳಿದು ಕಟ್ಟಹುಣಿಗೆ ತಲುಪುವಾಗ ದೆಯ್ಯುವೂ ಬಂದು ಅವರ ಜೊತೆ ಸೇರಿಕೊಂಡ. ಇಬ್ಬರೂ ಬೈಲಲ್ಲೇ ನಡೆದುಕೊಂಡು ಆನೆಕಲ್ಲು ಹತ್ತಿ ಮುಂದೆ



ಹೋದರು. ಗಂಜಿ ಊಟ ಮುಗಿಸಿ ಹೊರಟ ರಾಮಣ್ಣ, ಕುದುರೆ ಏರಿ ಹೋಗುವಾಗ ಯಮುನಕ್ಕನಿಗೆ ಮಂಗಳೂರಿನ ವಕೀಲ ನರಸಿಂಗ ರಾಯರ ಮನೆಯಲ್ಲಿ ನೋಡಿದ ಮೋಟಾರು ಕಾರಿನ ನೆನಪಾಯಿತು. ಅದನ್ನೇ ಯೋಚಿಸುತ್ತಾ ಚಾವಡಿಯಲ್ಲಿ ಕುಳಿತುಕೊಂಡರು. ಮೋಟಾರು ಕಾರು, ಮೋಟಾರು ಬಸ್ಸುಗಳನ್ನು ನೋಡಿದ್ದ ಯಮುನಕ್ಕ, ಅದು ತನ್ನ ಮನೆ ಬಾಗಿಲಿಗೆ ಬರುವ ಕನಸು ಕಾಣತೊಡಗಿದರು.



# ೧೬

# ಉರಿ ಉಷ್ಣದ ಮಾಯೆ

ಮೋಟಾರು ಬಸ್ಸು ಮಿತ್ತಬೈಲಿನ ಬದಿಯಲ್ಲಿಯೇ ಬರಲು ತೊಡಗಿ, ನಾಲ್ಕೈದು ವರ್ಷಗಳಾಗಿದ್ದವಷ್ಟೇ. ಯಮುನಕ್ಕನೂ ಬಸ್ಸಿನಲ್ಲಿ ಕೆಲವು ಸಲ ಭಂಡಸಾಲೆಯಿಂದ ಮಂಜೇಶ್ವರಕ್ಕೆ ಹೋಗಿದ್ದರು. ಮಂಜೇಶ್ವರದಿಂದ ರೈಲಲ್ಲಿ ಮಂಗಳೂರಿಗೆ ಬಂದು ವಕೀಲರ ಮನೆಗೆ ಹೋದವರು ಅಲ್ಲಿ ನಾಲ್ಕು ಚಕ್ರದ ಗಾಡಿಯನ್ನು ಕಂಡು ಬೆಕ್ಕಸ ಬೆರಗಾಗಿದ್ದರು. ಅದನ್ನು ಚಲಾಯಿಸುವ ಸಾಯಿಬನಲ್ಲಿ ಅದರ ಬಾಗಿಲು ತೆರೆಸಿ ಒಳಗೆ ಇಣುಕಿ ನೋಡಿದ್ದರು. ಅದನ್ನು ನೋಡಿದವರು, ಯಾವತ್ತಾದರೂ ಒಂದು ದಿನ ಅಂತಹ ಒಂದು ಗಾಡಿಯನ್ನು ಮಿತ್ತಬೈಲಿಗೆ ಖರೀದಿಸಿ ತರಬೇಕೆಂಬ ತನ್ನ ಆಸೆಯನ್ನು ಮಂಜೇಶ್ವರದ ಭಂಡಾರಿಗಳಲ್ಲಿ ಹೇಳಿದ್ದರು. ಭಂಡಾರಿಗಳು ಅವರಿಗೊಂದು, ತನಗೊಂದು ಕಾರುಗಳನ್ನು ಮದ್ರಾಸಿನಿಂದ ತರಿಸಲು ಒಪ್ಪಿಕೊಂಡರು.

ಮಂಜೇಶ್ವರಕ್ಕೆ, ಪುತ್ತೂರಿಗೆ ಈ ದೊಡ್ಡ ಇಪ್ಪತ್ತು ಜನ ಕುಳಿತುಕೊಳ್ಳುವ ಮೋಟಾರು ಗಾಡಿಯಲ್ಲಿ ಯಮುನಕ್ಕ ಹೋಗಿ



ಬರಲು ಪ್ರಾರಂಭಿಸಿದರು. ಮಂಜೇಶ್ವರ, ಪುತ್ತೂರುಗಳ ನಡುವೆ ದಿನಕ್ಕೊಮ್ಮೆ ಅತ್ತ ಇತ್ತ ಹೋಗಿ ಬರುತ್ತಿದ್ದ ಬಸ್ಸು ಮಿತ್ತಬೈಲಿನ ಭಂಡಸಾಲೆಯ ಮುಂದಿನಿಂದಲೇ ಹಾದು ಹೋಗಬೇಕು. ಮಿತ್ತಬೈಲಿನ ಛತ್ರದ ಬಳಿ ಜನರನ್ನು ಹತ್ತಿಸಿ ಇಳಿಸುತ್ತಿದ್ದರು.

ಒಮ್ಮೆ ಯಮುನಕ್ಕನದ್ದೂ, ಈ ಬಸ್ಸಿನದ್ದೂ ಒಂದು ದೊಡ್ಡ ಕಥೆಯೇ ನಡೆದು ಹೋಯಿತು. ಊರವರು ಒಬ್ಬೊಬ್ಬರು ಒಂದೊಂದು ಕಥೆಯನ್ನು ಹೇಳುತ್ತಿದ್ದರು. ಈ ಮಂಜೇಶ್ವರ – ಪುತ್ತೂರು ಬಸ್ಸಿನ ಮಾಲಕರು ಮಂಗಳೂರಿನ ಕುಡ್ವರು ಹಾಗೂ ಮಂಜೇಶ್ವರದ ಕಮ್ತಿಗಳು. ಅವರು ಬಸ್ಸು ಆರಂಭದಂದು ಮಿತ್ತಬೈಲಿಗೆ ಬಂದು ಯಮುನಕ್ಕನನ್ನು ಸ್ವತಃ ಬಸ್ಸಿನಲ್ಲಿ ಕುಳ್ಳಿರಿಸಿ ಮಂಜೇಶ್ವರಕ್ಕೆ ಕರೆದುಕೊಂಡು ಹೋಗಿ ಬಂದಿದ್ದರು. ಮೊದಮೊದಲು ಸ್ವಲ್ಪ ತಲೆ ತಿರುಗಿದಂತಾಗಿ ವಾಂತಿ ಬಂದರೂ ಯಮುನಕ್ಕ ಬಸ್ಸಿಗೇನೂ ಹೆದರಲಿಲ್ಲ. ಕಾಮತರು ಬಸ್ಸಿನ ಕೆಲಸಗಾರರನ್ನೆಲ್ಲ ಯಮುನಕ್ಕನಿಗೆ ಪರಿಚಯ ಮಾಡಿಸಿಕೊಟ್ಟು, ಅವರಿಗೆ ಎಲ್ಲಿಗಾದರೂ ಹೋಗಲಿಕ್ಕಿದ್ದರೆ ಬಸ್ಸಿನ ಮುಂದಿನ ಇಡೀ ಸೀಟನ್ನು ಅವರಿಗೆಂದೇ ಬಿಟ್ಟು ಕೊಡಬೇಕು. ಹಿಂದಿನ ಸೀಟಿನಲ್ಲಿ ಅವರ ಉಗ್ರಾಣಾಧಿಕಾರಿಗೆ ಜಾಗ ಮಾಡಿ ಕೊಡಬೇಕೆಂದು ತಾಕೀತು ಮಾಡಿದ್ದರು. ಯಮುನಕ್ಕ ಬರುತ್ತಾರೆ ಎಂದಾದರೆ ಅವರಿಗಾಗಿ ಬಸ್ಸು ಕಾಯಲೇಬೇಕು. ಬಸ್ಸಿನ ಸಿಬ್ಬಂದಿಗಳಿಗೆ ಯಮುನಕ್ಕ ಎಂದರೆ ಭಯ –ಭಕ್ತಿ. ಅಲ್ಲದೆ ಅವರ ಮನೆಗೆ ಬೇಕಾದ ಅಕ್ಕಿ, ತೆಂಗಿನಕಾಯಿ ಮಿತ್ತಬೈಲಿನ ಮನೆಯಿಂದ ಬಂದು ಬಸ್ಸಿನ ಟಾಪ್‌ಗೆ ಬೀಳುತ್ತಿತ್ತು. ಈ ಇದ್ದಲಿನಿಂದ ಓಡುವ ಬಸ್ಸಿಗೆ ಯಮುನಕ್ಕನ ಒಕ್ಕಲಿನ ಕಿಸ್ತು ಪೊರ್ಬುನ ಮಗನೂ, ಮಂಜೇಶ್ವರದ ಲಿಂಗಪ್ಪನೂ ಡ್ರೈವರ್, ಕಂಡೆಕ್ಟರ್. ಅವರಿಗೆ ಮಿತ್ತಬೈಲಿನ ಯಜಮಾನತಿ ತುಂಬಾ ಪರಿಚಿತರು. ಯಮುನಕ್ಕ ತನ್ನ ಒಂದು ವರ್ಷದ ಕಾರುಬಾರಿನಲ್ಲೇ ಊರೆಲ್ಲ ಹೆಸರು ಪಡೆದು, ಭಾರೀ ಸಮರ್ಥರು ಮಾತ್ರವಲ್ಲ, ಬಹಳ ಒಳ್ಳೆಯ ತಾಯಿಯಂತಿರುವ ಹೆಂಗಸು ಎಂದು ಹೆಸರು ಪಡೆದಿದ್ದರು. ಹೆಚ್ಚಾಗಿ ಜಟಕಾ ಅಥವಾ ಮೇನೆಯಲ್ಲಿಯೇ ಮಂಜೇಶ್ವರಕ್ಕೆ ಹೋಗಿ ಬರುತ್ತಿದ್ದ ಯಮುನಕ್ಕ, ಈಗ ಬಸ್ಸಿನಲ್ಲಿಯೇ ಹೋಗಿ ಬರಲು ಪ್ರಾರಂಭಿಸಿದರು.

ಬೆಳಗ್ಗೆ ಕೆಲಸದಾಳು ಭಂಡಸಾಲೆಯಲ್ಲಿದ್ದ ಕುರ್ಚಿಯನ್ನು ರಸ್ತೆ ಬದಿಯ ಮರದಡಿಯ ನೆರಳಲ್ಲಿ ತಂದು ಇಟ್ಟನೆಂದರೆ ಯಮುನಕ್ಕ ಅಂದು ಬಸ್ಸಿನಲ್ಲಿ ಪ್ರಯಾಣಿಸುತ್ತಾರೆ ಎಂಬ ಸುದ್ದಿ ಎಲ್ಲರಿಗೂ ತಿಳಿಯುತ್ತಿತ್ತು. ಅವರು ಬೇಗ ಬಂದರೆ ಆ ಕುರ್ಚಿಯಲ್ಲಿ ಕುಳಿತು ಬಸ್ಸಿಗಾಗಿ ಕಾಯುವರು. ಬಸ್ಸು ಬೇಗ ಬಂದರೆ ಕುರ್ಚಿಯ ಬಳಿ ನಿಲ್ಲಿಸಿ ಅವರಿಗಾಗಿ ಕಾಯಬೇಕು. ಕುರ್ಚಿ ರಸ್ತೆಯ ಬದಿಯಲ್ಲಿ ಕಂಡರೆ, ಕೆಲಸವಿಲ್ಲದೆ ಛತ್ರದ ಬಳಿ ತಿರುಗುತ್ತಿದ್ದವರೆಲ್ಲ ಮಾಯವಾಗುತ್ತಿದ್ದರು. ಭಂಡಸಾಲೆಯ ಬ್ಯಾರಿಗಳೂ ಅವರು ಕರೆಯದೆ ಅಲ್ಲಿಗೆ ಬರಬಾರದು. ಅವರು ಕರೆಯದೆ ಯಾರಾದರೂ ಅತ್ತ ಸುಳಿದರೆ ಮರುದಿನ ಬೆಳಗ್ಗೆ ಮಿತ್ತಬೈಲಿನ ಅಂಗಳಕ್ಕೆ ಬಂದು ಅವನು ಅಲ್ಲಿಗೆ ಯಾಕೆ ಬಂದಿದ್ದ ನೆಂಬುದನ್ನು ವಿವರಿಸಬೇಕಿತ್ತು. ಒಂದು ವೇಳೆ ಈ ವಿಷಯಗಳೆಲ್ಲ ತಿಳಿಯದೆ ಪರವೂರಿನ

ಯಾರಾದರೂ ತಪ್ಪಿ ಬಂದರೆ, ಮರುದಿನದಿಂದ ಆತ ತಪ್ಪಿಯೂ ಅಲ್ಲಿಗೆ ಕಾಲಿಡಲಾರ. ಕೆಲವರನ್ನು ಅನ್ನ ನೀರು ಕೊಡದೆ ಅಂಗಳದ ಕಂಬಕ್ಕೆ ಕಟ್ಟಿ ಹಾಕಿದುದೂ ಇದೆ. ಯಮುನಕ್ಕನ ಈ ದರ್ಬಾರು, ಕಾರುಬಾರು ಸುತ್ತಮುತ್ತ ತಿಳಿಯದವರಾರೂ ಇಲ್ಲ. ಅದನ್ನು ಪ್ರಶ್ನಿಸುವ ಧೈರ್ಯ ಮಂಜೇಶ್ವರದ ಪೊಲೀಸರಿಗೂ ಇರಲಿಲ್ಲ.

ಒಮ್ಮೆ ಮಂಜೇಶ್ವರದಿಂದ ಪುತ್ತೂರಿಗೆ ಸಂಚರಿಸುವ ಬಸ್ಸಿಗೆ ಒಬ್ಬ ಹೊಸ ಡ್ರೈವರ್ ಬಂದ. ಅಂದು ರಸ್ತೆಯ ಬದಿಯಲ್ಲಿದ್ದ ಕುರ್ಚಿಯನ್ನು ದೂರದಿಂದಲೇ ನೋಡಿ ಕಂಡೆಕ್ಟರ್‌ನಲ್ಲಿ ಕೇಳಿದ,

''ಏನು? ಇಂದು ಇಲ್ಲಿಗೆ ಕಲೆಕ್ಟರ್ ಏನಾದರೂ ಬರುತ್ತಾರಾ?''

''ಮೆಲ್ಲ ಮಾತನಾಡು ಮಹಾರಾಯ! ಯಾರಾದರೂ ನಿನ್ನ ಮಾತನ್ನು ಕೇಳಿದರೆ ನಾಳೆ ನಾನೂ ನೀನೂ ಮಿತ್ತಬೈಲಿನ ದನದ ಕೊಟ್ಟಿಗೆಯಲ್ಲಿ ಹುಲ್ಲು ತಿನ್ನುತ್ತಾ ಬಿದ್ದಿರಬೇಕಾಗುತ್ತದೆ''.

''ಯಾಕೆ? ಇಂತಹ ಎಷ್ಟು ಕುರ್ಚಿಗಳನ್ನು ನೋಡಿದ್ದೇನೆ ನಾನು ಗೊತ್ತಾ? ಯಾರದು ಅಷ್ಟು ದೊಡ್ಡ ಜನ? ಬಸ್ಸಿನ ಇಡೀ ಸೀಟನ್ನೇ ಖಾಲಿ ಮಾಡಿ ಇಡಲು?''

''ಮಿತ್ತಬೈಲಿನ ಯಜಮಾನಿ. ಇಂದು ಅವರು ಪುತ್ತೂರಿಗೆ ಹೋಗುವ ದಿನ. ಅವರು ಬರುವ ದಿನ ಮಿತ್ತಬೈಲಿನಿಂದ ಅವರಿಗಿಂತ ಮೊದಲೇ ಅವರ ಕುರ್ಚಿ ಬಂದಿರುತ್ತದೆ''.

''ಅದೇನು ಆ ಕಲ್ಲಿನ ಬೆಂಚಿನಲ್ಲಿ ಅವರ ಕುಂಡೆ ಕುಳಿತುಕೊಳ್ಳುವುದಿಲ್ಲವಾ? ಆ ಕುಂಡೆಗೆ ಗುತ್ತಿನ ಕುರ್ಚಿಯೇ ಆಗಬೇಕಾ?''

''ನಿಲ್ಲಿಸಿ, ನಿಲ್ಲಿಸಿ! ಯಜಮಾನತಿ ಬರುವವರೆಗೆ ಕಾಯೋಣ. ಅವರು ಬರುತ್ತಿರಬೇಕು. ಬಸ್ಸು ನಿಲ್ಲಿಸಿ'' ಬಸ್ಸಿನಲ್ಲಿದ್ದವರು ಹೇಳಿದರು.

''ನೋಡಿ, ಇದು ಕಂಪೆನಿಯ ಬಸ್ಸು. ಇದೇನೂ ಗುತ್ತಿನವರ ಸಾರೋಟೂ ಅಲ್ಲ. ಎತ್ತಿನ ಬಂಡಿಯೂ ಅಲ್ಲ. ಇದು ಸರಕಾರದಿಂದ ಪರ್ಮಿಟು ಪಡೆದು ಸಾರ್ವಜನಿಕರ ಅನುಕೂಲಕ್ಕಾಗಿ ಇರುವ ಬಸ್ಸು. ಸಮಯಕ್ಕೆ ಸರಿಯಾಗಿ ಹೋಗಬೇಕಾದುದು ನನ್ನ ಕರ್ತವ್ಯ. ದಾರಿಯಲ್ಲಿರುವ ಶ್ರೀಮಂತರನ್ನು, ಗುತ್ತಿನವರನ್ನು ಕಾಯುತ್ತಾ ನಿಂತರೆ ಬಸ್ಸು ಪುತ್ತೂರು ತಲುಪಲು ಎರಡು ದಿನ ಬೇಕಾದೀತು. ಇಲ್ಲಿ ಯಜಮಾನತಿಯನ್ನು ಕಾಯಲಲ್ಲ ನಮಗೆ ಸಂಬಳ ಕೊಡುತ್ತಿರುವುದು. ಜನರನ್ನು ಸಮಯಕ್ಕೆ ಸರಿಯಾಗಿ ಅವರವರು ಹೋಗುವ ಜಾಗಕ್ಕೆ ತಲುಪಿಸಲು ನಮ್ಮನ್ನು ಸಂಬಳ ಕೊಟ್ಟು ಇಟ್ಟಿರುವುದು''.

''ಅಣ್ಣಾ, ಸ್ವಲ್ಪ ಮೆತ್ತಗೆ ಮಾತನಾಡಿ. ಯಾರಾದರೂ ಒಕ್ಕಲಿನವರು, ಕೆಲಸದವರು ಎಲ್ಲಿಯಾದರೂ ಕೇಳಿಸಿಕೊಂಡು ಗುತ್ತಿಗೆ ಸುದ್ದಿ ಮುಟ್ಟಿಸಿದರೆ, ನಾಳೆ ಅಂಗಳದ ಕಂಬಕ್ಕೆ ಕಟ್ಟಿ ಹಾಕಿ ಅಕ್ಕಚ್ಚು, ಬೈಹುಲ್ಲು ಹಾಕಿಸುತ್ತಾರೆ. ಸುಮ್ಮನೆ ಮಾತನಾಡದೆ ಆ ಭಂಡಸಾಲೆಯ ಮುಂದೆ ನಿಲ್ಲಿಸಿ. ಯಜಮಾನತಿ ಬರುವ ಹೊತ್ತಾಯಿತು''.

''ಯಜಮಾನತಿ, ಯಜಮಾನ ಯಾರು ಬೇಕಾದರೂ ಬರಲಿ. ಆದರೆ ಈ ಬಸ್ಸು ಯಾರನ್ನೂ ಕಾಯುವುದಿಲ್ಲ. ಯಾರೇ ಆಗಿರಲಿ ನಮ್ಮ ಬಸ್ಸನ್ನು ಅವರು ಕಾಯಬೇಕಲ್ಲದೆ,



ನಮ್ಮ ಬಸ್ಸು ಅವರನ್ನು ಕಾಯುತ್ತಾ ನಿಲ್ಲುವುದಿಲ್ಲ ನೆನಪಿರಲಿ''.

ಡ್ರೈವರ್ ಕಂಡಪ್ಪು ಬಸ್ಸನ್ನು ವೇಗವಾಗಿ ಕೊಂಡುಹೋಗಿ ಒಮ್ಮೆಲೇ ಕುರ್ಚಿಯ ಬಳಿ ನಿಲ್ಲಿಸಿದ. ಅವನು ನಿಲ್ಲಿಸಿದ ಭರಕ್ಕೆ ಬಸ್ಸು ಕುರ್ಚಿಗೆ ತಾಗಿತು. ಕುರ್ಚಿ ಹಾರಿ ಒಂದಷ್ಟು ದೂರ ಹೋಗಿ ಬಿತ್ತು. ಕಂಡೆಕ್ಟರ್ ಲಿಂಗಪ್ಪ ತಲೆಯ ಮೇಲೆ ಕೈ ಹೊತ್ತು ಕುಳಿತುಬಿಟ್ಟ. ಬಸ್ಸು ಹೊರಟಿತು. ಕ್ಷಣದಲ್ಲೇ ಯಮುನಕ್ಕ ಬಂದರು. ಬಂದಾಗ ಕೈ ತುಂಡಾದ ಕುರ್ಚಿಯ ಬಳಿ ನಿಂತಿದ್ದ ಕೆಲಸದಾಳು ನಡುಗುತ್ತಿದ್ದ. ಯಮುನಕ್ಕ ವಿಚಾರಿಸಿ, ವಿಷಯವೆಲ್ಲ ತಿಳಿದುಕೊಂಡರು. ಭಂಡಸಾಲೆಯಿಂದ ಬೆಂಚು ತರಿಸಿ ಅಲ್ಲೇ ಕುಳಿತುಕೊಂಡರು. ಆಳು ಕಳುಹಿಸಿ ದುಗ್ಗಪ್ಪನನ್ನೂ ಮಿತ್ತಬೈಲಿನ ಕೆಲಸದವರನ್ನೂ ಕರೆಸಿದರು.

ಮಿತ್ತಬೈಲಿನಿಂದ ಬಂದ ಇಪ್ಪತ್ತು ಕೆಲಸದಾಳುಗಳು ದುಗ್ಗಪ್ಪನ ನೇತೃತ್ವದಲ್ಲಿ ಭಂಡಸಾಲೆಯ ಕೆಳಗಿನ ಇಳಿಜಾರು ರಸ್ತೆಗೆ ಅಡ್ಡವಾಗಿ ನಾಲ್ಕು ಮಾವಿನ ಮರಗಳನ್ನು ಕಡಿದು ಹಾಕಿದರು. ಕನ್ಯಾನದ ರಸ್ತೆಯ ಬದಿಯಲ್ಲಿ ಇನ್ನೂ ನಾಲ್ಕು ಮರಗಳನ್ನು ಅಡ್ಡ ಹಾಕಲು ತಯಾರಿ ಮಾಡಿದರು. ಒಂದೊಂದು ಮರವೂ ನಾಲ್ಕು ಕೋಲಿನ ದೋಣಿಗೆ ಹೇಳಿಸಿದಂತಹ ಮರ. ಎರಡು ದಪ್ಪದ ಮರಗಳನ್ನು ರಸ್ತೆಯಿಂದ ತೆಗೆಯಬೇಕಾದರೆ ಎರಡು ಮೂರು ದಿನಗಳ ಕೆಲಸವಿತ್ತು.

ಬಸ್ಸು ಪದವಿನ ಇಳಿಜಾರಿನ ಕೊನೆಗೆ ತಲುಪಬೇಕಾದರೆ ರಸ್ತೆಯಲ್ಲಿ ಅಡ್ಡವಾಗಿ ಬಿದ್ದಿರುವ ಮರಗಳನ್ನು, ಅದರ ಮುಂದೆ ರಸ್ತೆಗಡ್ಡ ನಿಂತಿರುವ ಹೆಂಗಸನ್ನು ಕಂಡಾಗ ಕಂಡಪ್ಪುವಿಗೆ ಮಹಾಕಾಳಿಯನ್ನು ಕಂಡಂತಾಯಿತು. ಹಿಂದಿರುಗಿ ನೋಡುವಾಗ ಹಿಂದಿನಿಂದ ಇಳಿಜಾರಿನ ಮೇಲಿನಿಂದಲೂ ಮರಗಳು ರಸ್ತೆಗಡ್ಡವಾಗಿ ಬೀಳುತ್ತಿರುವುದು ಕಂಡಿತು. ಅಲ್ಲಿ ಮರಗಳನ್ನು ಉರುಳಿಸುತ್ತಿರುವವನ್ನು ಕಂಡಾಗ ರಾಕ್ಷಸರನ್ನು ಕಂಡಂತಾಯಿತು. ರಸ್ತೆಯ ಬಲ ಬದಿಯಲ್ಲಿ ಕಣ್ಣಿಗೆ ನಿಲುಕದಷ್ಟು ಆಳವಾದ ಗುಂಡಿ.

ಬಸ್ಸು ನಿಂತಾಗ ಬಸ್ಸಿನಲ್ಲಿದ್ದ ಜನರೆಲ್ಲ ಮೌನವಾಗಿ ಇಳಿದು ನಡೆಯ ತೊಡಗಿದರು. ಅವರೆಲ್ಲರೂ ಮಂಜೇಶ್ವರದ ಬಳಿಯವರು. ಅವರೆಲ್ಲರಿಗೂ ಯಮುನಕ್ಕನ ಬಗ್ಗೆ ತಿಳಿದಿತ್ತು. ಕೆಲವರು ಛತ್ರಕ್ಕೆ ಹೋಗಿ ಮಧ್ಯಾಹ್ನದ ಊಟ ಮುಗಿಸಿದರು. ಯಾರಿಗೂ ಯಮುನಕ್ಕನ ಬಳಿ ಬಂದು ಮಾತನಾಡುವ ಧೈರ್ಯವಿರಲಿಲ್ಲ. ಯಮುನಕ್ಕನೇ ಬಸ್ಸಿನ ಬಳಿ ಬಂದು ಕಂಡೆಕ್ಟರ್‌ನನ್ನು ಕರೆದು ಹೇಳಿದರು,

''ಲಿಂಗಪ್ಪ, ಛತ್ರದಲ್ಲಿ ಊಟ ಮಾಡಿ ಮಂಜೇಶ್ವರಕ್ಕೆ ಹೋಗಿ ಕಾಮತರನ್ನು ಅಥವಾ ಕುಡ್ವರನ್ನು ಮಿತ್ತಬೈಲಿಗೆ ಬಂದು ನನ್ನನ್ನು ಕಾಣಲು ಹೇಳು. ಯಾರಲ್ಲಿ? ದುಗ್ಗಪ್ಪ. ಈ ಡ್ರೈವರ್‌ನನ್ನು ಎಳೆದುಕೊಂಡು ಹೋಗಿ ಮನೆಯ ಅಂಗಳದಲ್ಲಿ ಹಾಕಿ''.

ಕೆಲಸದವರು ಡ್ರೈವರ್ ಕುಂಡಪ್ಪುವಿನ ತೋಳಲ್ಲಿ ಹಿಡಿದುಕೊಂಡಾಗ ಆತ ಕೊಡವಲು ಪ್ರಯತ್ನಿಸಿದ. ಅದನ್ನು ಕಂಡ ದುಗ್ಗಪ್ಪ ಅವನ ಒಂದು ತೋಳನ್ನು ಹಿಡಿದುಕೊಂಡ. ಯುವಕ ಕುಂಡಪ್ಪುವಿಗೆ ಆಗ ಮಿಸುಕಾಡಲೂ ಸಾಧ್ಯವಾಗಲಿಲ್ಲ. ಅವನು

ಕೋಪದಿಂದ ಬಾಯಲ್ಲಿದ್ದ ವೀಳ್ಯದ ರಸವನ್ನು ಯಮುನಕ್ಕನತ್ತ ನೋಡಿ ಕ್ಯಾಕರಿಸಿ ಉಗಿದ. ಯಮುನಕ್ಕನ ರೋಷ ನೆತ್ತಿಗೇರಿತು. ಅವರು ಮಾರಮ್ಮನೇ ಆಗಿ ಬಿಟ್ಟರು. ಹತ್ತಿರ ಬಂದು ದುಗ್ಗಪ್ಪನಲ್ಲಿ ಅವನ ತೋಳು ಬಿಡುವಂತೆ ಹೇಳಿ, ಅವನ ಮುಂದೆ ನಿಂತುಕೊಂಡರು. ಎರಡು ಕೋಲು ಎತ್ತರದ ಆ ದೊಡ್ಡ ದೇಹ, ಕಂಡಪ್ಪುವಿನ ಕಪಾಳಕ್ಕೆ ಒಂದು ಬಿಗಿದಾಗ, ಆತ ತಲೆ ಸುತ್ತಿ ಬಂದಂತಾಗಿ ನಾಲ್ಕು ಮಾರು ದೂರಕ್ಕೆ ಹೊರಳಿ ಬಿದ್ದ. ಅವನಿಗೆ ಸ್ಮೃತಿ ತಪ್ಪಿ ತನ್ನ ಸುತ್ತಲೂ ಕತ್ತಲಾವರಿಸತೊಡಗಿತ್ತು. ಯಾರೋ ಒಂದು ತಂಬಿಗೆಯಲ್ಲಿ ನೀರು ತಂದು ಅವನ ಮುಖಕ್ಕೆ ಹಾಕಿದರು. ಎಚ್ಚರಗೊಂಡ ಕುಂಡಪ್ಪು ಕಣ್ಣು ತೆರೆದವನು ಓಡಿ ಬಂದು ಯಮುನಕ್ಕನ ಕಾಲಡಿಗೆ ಬಿದ್ದು ಅವರ ಕಾಲನ್ನು ಬಿಗಿಯಾಗಿ ಹಿಡಿದುಕೊಂಡ,

''ದಮ್ಮಯ್ಯ, ನನ್ನದು ತಪ್ಪಾಯಿತು. ನನ್ನ ಇಬ್ಬರು ಹೆಣ್ಣುಮಕ್ಕಳ ಮೇಲೆ ಕರುಣೆ ತೋರಿಸಿ ನನ್ನನ್ನು ಬಿಟ್ಟು ಬಿಡಿ. ನನ್ನದು ತಪ್ಪಾಯಿತು''.

ಯಮುನಕ್ಕ ಮನೆಯಿಂದ ತರಿಸಿದ್ದ ಮೇನೆಯಲ್ಲಿ ಕುಳಿತುಕೊಂಡು ಮಿತ್ತಬೈಲಿಗೆ ಬಂದರು. ಕೈಕಾಲು ಕಟ್ಟಿ ತಂದ ಡ್ರೈವರ್‌ನನ್ನು ಅಂಗಳದ ಚಪ್ಪರದ ಕಂಬಕ್ಕೆ ಕಟ್ಟಿದರು. ಬೆಳಗ್ಗಿನವರೆಗೆ ಹಾಗೇ ಬಿದ್ದುಕೊಂಡಿದ್ದ ಕಂಡಪ್ಪುವನ್ನು ಬಿಡಿಸಿ ಗಂಜಿಯನ್ನೂ, ಒಣ ಬಲ್ಯಾರ್ ಮೀನಿನ ಚಟ್ನಿಯನ್ನೂ ಕೊಡಿಸಿದರು. ಬೇಡವೆಂದು ಹೇಳುವಷ್ಟು ಧೈರ್ಯ ಸಾಲದ ಆತ ಅದನ್ನು ಉಂಡು, ಮಲರಾಯನ ಗುಂಡಕ್ಕೆ ಕೈಮುಗಿದು, ಯಮುನಕ್ಕನ ಕಾಲಿಗೆ ಬಿದ್ದು, ಮಂಜೇಶ್ವರಕ್ಕೆ ಓಡಿದ. ರಾತ್ರಿ ಬಂದ ಕಮ್ತಿಯವರು ಯಮುನಕ್ಕನ ಕಾಲಿಗೆ ಬಿದ್ದು ಕ್ಷಮೆ ಕೇಳಿ ಇಂದಿನಿಂದ ಈ ರಸ್ತೆಯಲ್ಲಿ ಬರುವ ಬಸ್ಸಿಗೆ ಯಮುನಕ್ಕನ ಬಗ್ಗೆ ತಿಳಿದಿರುವ ಸಿಬ್ಬಂದಿಗಳನ್ನೇ ನೇಮಿಸುವುದಾಗಿ ಭರವಸೆ ಕೊಟ್ಟು, ರಾತ್ರಿ ಅಲ್ಲಿಯೇ ಮಲಗಿ, ಬೆಳಗ್ಗೆ ಎದ್ದು ಪದವಿನ ಭಂಡಸಾಲೆಗೆ ಬಂದಾಗ ರಸ್ತೆಯಲ್ಲಿ ಒಂದೇ ಒಂದು ಮರವಾಗಲೀ, ಅದರ ಕೊಂಬೆಯಾಗಲೀ ಇರಲಿಲ್ಲ. ಬಸ್ಸು ಮಾತ್ರ ಕಾಯುತ್ತಿತ್ತು.

ಅಂದು ಓಡಿದ ಕಂಡಪ್ಪು, ಕಮ್ತಿಯವರ ಬಸ್ಸಿನ ಕೆಲಸ ಬಿಟ್ಟು ಮುಂಬಯಿಗೆ ಹೋದ. ಈ ಸುದ್ದಿ ಸುತ್ತಮುತ್ತಲಿನ ಊರುಗಳಲ್ಲೆಲ್ಲ ಒಂದು ಕತೆಯಾಯಿತು.

ಒಂದು ಕಡೆಯಿಂದ ಯಮುನಕ್ಕನ ಕಾರುಬಾರು ಹೆಚ್ಚುತ್ತಾ ಹೋಯಿತು. ಇನ್ನೊಂದು ಕಡೆಯಿಂದ ಗುತ್ತಿನಲ್ಲಿ ಸಂಪತ್ತು ರಾಶಿ ಬೀಳತೊಡಗಿತು. ಗುತ್ತಿನ ಸುತ್ತಮುತ್ತಲ ಜನ ಮಿತ್ತಬೈಲಿಗೆ ಮತ್ತೆ ಮಂಜಣಾಳ್ವರ ಕಾಲದ ಐಶ್ವರ್ಯ ಬಂದಿದೆ ಎಂದು ಆಡಿಕೊಳ್ಳತೊಡಗಿದರು. ಸಂಪತ್ತು, ಕಾರುಬಾರು, ಅಕ್ಕಿ, ಭತ್ತ, ವ್ಯಾಪಾರ, ದನಕರು, ಆಳುಕಾಳು ಹೆಚ್ಚುತ್ತಾ ಹೋಯಿತು. ಐಶ್ವರ್ಯ ಹಾಲು ಉಕ್ಕಿದಂತೆ ಉಕ್ಕತೊಡಗಿತು. ಯಮುನಕ್ಕ ಎಷ್ಟು ಜನಪ್ರಿಯರಾದರೆಂದರೆ, ಕೆಲವೊಮ್ಮೆ ಅವರನ್ನು ನೋಡಲೆಂದೇ ಬರುವವರು ಚಪ್ಪರ ತುಂಬ ತುಂಬಿಕೊಳ್ಳುತ್ತಿದ್ದರು.

ಇಂತಹ ಸಮಯದಲ್ಲಿಯೇ ಸುಬ್ಬಯಣ್ಣ ದೆಹಲಿಯ ಗಾಂಧಿ ಆಶ್ರಮದಿಂದ ಮರಳಿ ಮನೆಯ ಭೂತದ, ಊರಿನ ಗುರಿಕಾರಿಕೆ ವಹಿಸಿಕೊಳ್ಳಲು ಸಿದ್ಧರಾದರು.



## ೧೭

## ಗಡಿ ಹಿಡಿದ ಗುರಿಕಾರ

ಯಮುನಕ್ಕ ಭೂತದ ಗಡಿ ಹಿಡಿಸುವ ಸಿದ್ಧತೆಗೆಂದು ತಂತ್ರಿಯವರನ್ನು ಕಾಣಲು ಹೋದರು. ಕುಂಬಳೆಯ ಅರಸರ ಅರಸೊತ್ತಿಗೆ ಕೈಬಿಟ್ಟು ಹೋದರೂ, ಬಡಾಜೆಯ ತಂತ್ರಿಗಳಲ್ಲಿಗೆ ತಂತ್ರ, ಮಂತ್ರಗಳಿಗಾಗಿ ತುಳುನಾಡಿನ ಜನ ಬರುತ್ತಲೇ ಇದ್ದರು. ಮಿತ್ತಬೈಲು ಗುತ್ತಿಗೆ ಬಡಾಜೆಯವರು ರಾಜ ಪುರೋಹಿತರಿದ್ದಂತೆ. ಮಂಜಣಾಳ್ವರ ಕಾಲದಿಂದಲೇ ಮಿತ್ತಬೈಲಿನಲ್ಲಿ ಯಾವ ಕೆಲಸ ವಾಗಬೇಕಾದರೂ ಬಡಾಜೆ ತಂತ್ರಿಗಳ ಅಪ್ಪಣೆ ಬೇಕು. ಅನ್ನಪೂರ್ಣೇಶ್ವರಿಯ ಗಂಧಪ್ರಸಾದ ಬಂದೇ ತೀರಬೇಕು. ಊರವರು ಹೇಳುವಂತೆ ಮಿತ್ತಬೈಲು ಗುತ್ತಿನ ಮನೆಯನ್ನು ಕಟ್ಟಿಸುವಾಗ ಅಂದಿನ ತಂತ್ರಿಗಳು, ಲಕ್ಷ್ಮಿಯನ್ನು ಮನೆಯ ಚಾವಡಿಯಲ್ಲಿಯೂ, ಕೆಳಗಿನ ಗುಂಡದಲ್ಲಿ ಮಲರಾಯನನ್ನೂ ಆವಾಹನೆ ಮಾಡಿ ಕುಳ್ಳಿರಿಸಿದ್ದಾರಂತೆ. ಈ ದೇವಿ ಹಾಗೂ ದೈವಗಳೇ ಮಿತ್ತಬೈಲಿನ ರಕ್ಷಾ ಕವಚಗಳು.

ಮಿತ್ತಬೈಲಿನಿಂದ ಬಡಾಜೆ ತಂತ್ರಿಯವರ ಮನೆಗೆ ಈಗಲೂ ದೇವಸ್ಥಾನದ ನೈವೇದ್ಯಕ್ಕೆಂದು ಇಪ್ಪತ್ತೈದು ಮುಡಿ ಬೆಳ್ತಿಗೆ

ಅಕ್ಕಿ, ಇನ್ನೂರೈವತ್ತು ತೆಂಗಿನಕಾಯಿ ಪ್ರತಿವರ್ಷವೂ ತಪ್ಪದೆ ಬರುತ್ತಿದೆ. ಅದು ಮಂಜಣಾಳ್ವರು ಮಾಡಿಟ್ಟು ಹೋದ ನಿಯಮ. ಮಾಂಕರಾಲರ ಕಾಲದಲ್ಲಿ ಊರಿನ ಕೆಲವು ಉಂಬಳಿಗಳನ್ನು ನಿಲ್ಲಿಸಿದ್ದರಾದರೂ ಬಡಾಜೆಯ ಉಂಬಳಿಯು ಚಾಲ್ತಿಯಲ್ಲಿಯೇ ಇತ್ತು. ಅನ್ನಪೂರ್ಣೇಶ್ವರಿಯ ಒಂಬತ್ತು ದಿನಗಳ ನವರಾತ್ರಿ ಪೂಜೆಯಲ್ಲಿ ಒಂದು ದಿನ ಮಾಂಕರಾಲರು ಸ್ವತಃ ಬಂದು ನಿಂತು ಪೂಜೆ ಮಾಡಿಸುತ್ತಿದ್ದರು.

ಈ ವರ್ಷದ ನವರಾತ್ರಿ ಪೂಜೆಯ ಸಮಯದಲ್ಲಿ ತಂತ್ರಿಗಳು ಯಮುನಕ್ಕನ ಹೆಸರಿನಲ್ಲಿ ಚಂಡಿಕಾಹೋಮ ಮಾಡಿಸಿದರು. ಆಗ ಇಟ್ಟ ಶಕುನದಲ್ಲಿ ತಂತ್ರಿಗಳು, ಬೇಸಗೆಯಲ್ಲಿ ಸುಬ್ಬಯ್ಯಣ್ಣ ಬಂದು ಭೂತದ ಗಡಿ ಹಿಡಿಯುತ್ತಾರೆಂದು ಹೇಳಿದ್ದರು. ಯಮುಕ್ಕನಿಗೆ ಆ ಮಾತು ನೆನಪಾಗಿ ಅವರು ತಂತ್ರಿಗಳಲ್ಲಿ ದಿನ ಕೇಳಲು ಹೊರಟರು.

ತಂತ್ರಿಗಳ ಉಪಸ್ಥಿತಿಯಲ್ಲಿಯೇ ಒಂದು ಶುಭದಿನದಂದು ಸುಬ್ಬಯ್ಯಣ್ಣ ಗುರಿಕಾರಿಕೆ ವಹಿಸಿಕೊಂಡರು. ಭೂತ ಗಡಿ ಹಿಡಿಯಲು ಅನುಮತಿ ಕೊಟ್ಟು, ಧರ್ಮ ನೇಮ ಪಡೆದುಕೊಂಡಿತು. ಧರ್ಮ ನೇಮದಲ್ಲಿ ಆವೇಶ ಬಂದ ಭೂತ ಸುಬ್ಬಯ್ಯಣ್ಣನನ್ನು ಭೂತಕ್ಕೆ ಗಡಿ ಹಿಡಿಯುವವ ಹಾಗೂ ಊರಿಗೆ ಗುರಿಕಾರನನ್ನಾಗಿ ಮಾಡಿತು. ಭೂತ, ಸುಬ್ಬಯ್ಯಣ್ಣನ ಒಂದು ಷರತ್ತಿಗೆ ಒಪ್ಪಿಕೊಂಡು ಕಾಲಕ್ಕೆ ತಕ್ಕಂತೆ ತಾನೂ ಬದಲಾಯಿತು. ಸುಬ್ಬಯ್ಯಣ್ಣ ಅಂದು ಒಂದು ಸಂಪ್ರದಾಯವನ್ನೇ ಬದಲಿಸಿಬಿಟ್ಟರು.

ಸುಬ್ಬಯ್ಯಣ್ಣ, ಊರಿನ ದಲಿತರನ್ನು, ಕೊರಗರನ್ನು, ನಲಿಕೆಯವರನ್ನು ಮುಟ್ಟಿದರೆ ಸ್ನಾನ ಮಾಡಿ ಮನೆ ಪ್ರವೇಶಿಸಬೇಕು ಎನ್ನುವ ಕ್ರಮವನ್ನು ಬದಲಿಸಿದರು. ಅವರು ಯಜಮಾನರಾಗಿರುವವರೆಗೆ ಅವರು ಸ್ನಾನ ಮಾಡಿ ಮನೆ ಪ್ರವೇಶಿಸಬೇಕೆಂದಿಲ್ಲ, ಅಲ್ಲದೆ ಶುದ್ಧವಾಗಿರುವ ಊರಿನ ಎಲ್ಲರಿಗೂ ಅಂಗಿ ತೆಗೆದು ನಿಂತರೆ ಸ್ವತಃ ವೀಳ್ಯ ನೀಡಲು ಭೂತ ಒಪ್ಪಿತು. ಹಿಂದಿನಂತೆ ಗಡಿ ಹಿಡಿದವನು ಭೂತದ ಕೈಯಿಂದ ಪಡೆದು ಕೆಲವರಿಗೆ ವೀಳ್ಯ ಕೊಡಬೇಕು ಎಂಬ ನಿಯಮ ಅಂದಿನಿಂದ ರದ್ದಾಯಿತು. ಭೂತದ ಮುಂದೆ ನಿಲ್ಲಲು ಜಾತಿ, ಮತ, ಶ್ರೀಮಂತ, ಬಡವ ಎಂಬ ಭೇದ ಅಂದಿನಿಂದ ಕೊನೆಗೊಂಡಿತು. ಭೂತದ ಮಿಕ್ಕ ಎಲ್ಲ ಕ್ರಮ, ವಿಧಿವಿಧಾನಗಳನ್ನು ಪಾಲಿಸಲು ಸುಬ್ಬಯ್ಯಣ್ಣ ಒಪ್ಪಿಕೊಂಡರು.

ಯಮುನಕ್ಕನಿಗೆ ತಲೆಯ ಮೇಲಿನ ದೊಡ್ಡ ಭಾರವೊಂದು ಇಳಿಸಿದಂತಾಯಿತು. ಯುವಕರಿಗೆ ಸಂಭ್ರಮ. ಅವರಿಗೆ ಮಾಂಕರಾಲರ ಕಾಲದ, ಕುಟುಂಬದ ಅನಾಥ ಮಕ್ಕಳು ಎಂಬ ಭಾವನೆ ತೊಲಗಿ, ತಾವೂ ಮಿತ್ತಬೈಲು ಗುತ್ತಿನ ಸಮಾನ ಹಕ್ಕಿನ ಸದಸ್ಯರು ಎಂಬ ಭಾವನೆಯುಂಟಾಯಿತು.

ಗಡಿ ಹಿಡಿವ ಧರ್ಮ ನೇಮಕ್ಕೆ ಕುಟುಂಬದವರೆಲ್ಲ ಬಂದಿದ್ದರು. ಗಟ್ಟದಿಂದ ಕಿನ್ಯನ, ಮಾಬಲ ಬಂದವರು, ತನ್ನ ಕಾಲಿಗೆ ಬಿದ್ದಾಗ ಗಡಿ ಹಿಡಿದವ ಅವರನ್ನು ಆಲಿಂಗಿಸಿಕೊಂಡು ಕ್ಷೇಮ ವಿಚಾರಿಸಿದರು. ಅವರಿನ್ನು ಗಟ್ಟಕ್ಕೆ ಹೋಗದೆ ಮಿತ್ತಬೈಲಿನಲ್ಲೇ ನಿಂತು ಗುತ್ತಿನ ಬೇಸಾಯದ ಜವಾಬ್ದಾರಿಯನ್ನು ವಹಿಸಿಕೊಳ್ಳುವಂತೆ ಹೇಳಿದರು. ರಾಮಣ್ಣ, ದುಗ್ಗಪ್ಪ



ಹಾಗೂ ಯಮುನಕ್ಕನೂ ಅದಕ್ಕೆ ಧ್ವನಿಗೂಡಿಸಿದರು. ಕಾಫಿ ತೋಟದ ಮಾಲಕರು ಎಲ್ಲ ಜವಾಬ್ದಾರಿಯನ್ನೂ ತಮ್ಮ ತಲೆಯ ಮೇಲೆ ಹಾಕಿ ಇಂಗ್ಲೆಂಡಿಗೆ ಹೋಗಿದ್ದಾರೆ ಎಂದು ಮಾಬಲ ತಿಳಿಸಿದ. ಹಾಗಾಗಿ ಎಲ್ಲರೂ ಕೂಡಿ ಚರ್ಚಿಸಿ ಒಂದು ವರ್ಷದ ಅವಧಿ ಕೊಟ್ಟರು. ಆ ಬೇಸಿಗೆಯಲ್ಲಿ ನಿಶ್ಚಿತಾರ್ಥ ಆಗಿ ಅವರು ಮತ್ತೆ ಗಟ್ಟದಿಂದ ಹಿಂದಿರುಗಿದ ಕೂಡಲೇ ಮದುವೆ ಮಾಡುವುದೆಂದು ತೀರ್ಮಾನವಾಯಿತು. ಕಿನ್ಯನ ಹಾಗೂ ಮಾಬಲರ ಗಟ್ಟದ ಮೇಲಿನ ಕಾರುಬಾರು ನೋಡಿ ಊರವರೆಲ್ಲ ಶಹಭಾಸ್ ಎಂದಾಗ ಬಾರಬೈಲಿನ ತ್ಯಾಂಪಣ್ಣನಿಗೆ ಒಳಗೊಳಗೆ ಉರಿಯತೊಡಗಿತು. ಕಿನ್ಯನನೂ, ಮಾಬಲನೂ ಮಾಂಕರಾಲರನ್ನು ಕೊಂದವರು ಎಂದು ಅವನು ಊರೆಲ್ಲಾ ಹೇಳಿಕೊಂಡು ತಿರುಗಿದರೂ ಜನ ಕಿವಿಗೊಡಲಿಲ್ಲ. ಧರ್ಮ ನೇಮಕ್ಕೆ ಬಂದ ಕುಟುಂಬದವರು ಕೆಲವರು ವಿಷು ಹಬ್ಬದ ತನಕ ಅಲ್ಲೇ ಉಳಿದರು. ಕೆಲವರು ಹೋಗಿ ಮತ್ತೆ ಬಂದರು. ಬೀಗರೆಲ್ಲ ಹಬ್ಬದ ಹಿಂದಿನ ದಿನ ಬಂದು ತಲುಪಿದರು. ಈ ಸಲದ ವಿಷು ಹಬ್ಬ ಹೊಸ ಯಜಮಾನನಿಗೆ ಮೊದಲ ಹಬ್ಬ. ಯಮುನಕ್ಕ ಮನೆಯ ಜವಾಬ್ದಾರಿ ವಹಿಸಿಕೊಂಡು ಒಂದು ವರ್ಷವಾಯಿತು. ಕಳೆದ ವರ್ಷದ ವಿಷು ಹಬ್ಬ ಮಾಂಕರಾಲರ ಸಾವಿನ ಗಡಿಬಿಡಿಯಲ್ಲೇ ಕಳೆದುಹೋಗಿತ್ತು. ಈ ವರ್ಷ ಮತ್ತೆ ಹೊಸ ಯಜಮಾನ, ಹೊಸ ದಿನ ಬಂದಿದೆ.

ಸುಗ್ಗಿ ಕಳೆದು ಸಂಕ್ರಾಂತಿಯ ಮರುದಿನ ತುಳುನಾಡಿಗೆ ಹೊಸ ದಿನ. ಮಿತ್ತಬೈಲಿನ ಚಾವಡಿಯಲ್ಲಿ ಸುಬ್ಬಯ್ಯಣ್ಣ ಯಮುನಕ್ಕನ ಹತ್ತಿರ ಕುಳಿತುಕೊಂಡರು. ಹಿಂದಿನಂತಾಗಿದ್ದರೆ, ಅಕ್ಕನ ಕಾಲಿಗೆ ನಮಸ್ಕಾರ ಮಾಡಿ ಅವರ ದಿನ ಪ್ರಾರಂಭವಾಗುತ್ತಿತ್ತು. ಆದರೆ ಈಗ ಅವರು ಭೂತದ ಗಡಿ ಹಿಡಿದವರು. ಹಾಗಾಗಿ ಯಾರ ಕಾಲಿಗೂ ಎರಗಬಾರದು. ಕುಟುಂಬದವರು, ಒಕ್ಕಲಿನವರು ಹಾಗೂ ಇತರರು 'ಕಣಿ' ಇಟ್ಟು ಕುಳಿತ್ತಿದ್ದ ಯಜಮಾನರ ಕಾಲಿಗೆ ಬಿದ್ದರು. ಹೊಸ ಯಜಮಾನ ಕುಟುಂಬದ ಗಂಡು, ಹೆಣ್ಣುಗಳಿಗೆ ಇನ್ನೂರು ರೂಪಾಯಿ ಹಾಗೂ ಹೆಂಗಸರಿಗೆ ಹತ್ತು ಪವನು ಚಿನ್ನ ಹಂಚಿದರು. ವಿಷು ಹಬ್ಬದ ಆ ಬಹುಮಾನ ಮಾಂಕರಾಲರಿಗಿಂತ ಹಿಂದಿನ ಯಜಮಾನರು ಕೊಡುತ್ತಿದ್ದರಂತೆ. ಆದರೆ, ಮಾಂಕರಾಲರ ಕಾಲದಲ್ಲಿ ಅದು ನಿಂತು ಹೋಗಿತ್ತು. ಈ ಬಹುಮಾನ ಒಂದು ರೀತಿಯಲ್ಲಿ ಕುಟುಂಬದವರಿಗೆ ಉತ್ಪತ್ತಿಯಲ್ಲಿ ಪಾಲು ನೀಡಿದಂತೆ.

ವಿಷುವಿನ ಬಹುಮಾನ ಕುಟುಂಬದವರಿಗೆ ಮಾತ್ರವಲ್ಲ, ಬೆಳೆ ಕಾಣಿಕೆ ಕೊಡಲು ಬಂದ ಎಲ್ಲ ಒಕ್ಕಲಿನವರಿಗೆ ಒಂದೊಂದು ಪವನು ಬಹುಮಾನ ಸಿಕ್ಕಿತು. ಹೊಸ ಯಜಮಾನ ಕೆಲಸದವರಿಗೆಲ್ಲ ಒಂದೊಂದು ಖಾದಿ ಪಂಚೆ, ಹೆಂಗಸರಿಗೆ ಸೀರೆ ಬಹುಮಾನ ಕೊಟ್ಟರು. ಮರುದಿನ ಊರಿಡೀ ಸುಬ್ಬಯ್ಯಣ್ಣ ಕೊಟ್ಟ ಖಾದಿ ಪಂಚೆ, ಮಗ್ಗದ ಸೀರೆಯದೇ ಸುದ್ದಿ.

ಆ ವರ್ಷ ಇಡೀ ದೇಶಕ್ಕೆ ಬರಗಾಲ ಬಡಿದಿತ್ತು. ಆದುದರಿಂದ ಇಡೀ ಊರಿಗೆ ವಿಷು ಹಬ್ಬ ಬಹಳ ಕಷ್ಟದ ಹಬ್ಬವಾಗಿ ಪರಿಣಮಿಸಿತು. ಸರಕಾರ ಚಳವಳಿಯ ಸಮಯದಲ್ಲಿ ತೆರೆದಿದ್ದ ಪಡಿತರ ಅಂಗಡಿಗಳನ್ನು ಮುಂದುವರಿಸಿತು. ಮನೆಯಲ್ಲಿ ಖರ್ಚಿಗಿಂತ ಹೆಚ್ಚು ಅಕ್ಕಿ,

ಭತ್ತಗಳನ್ನು ದಾಸ್ತಾನು ಇಟ್ಟುಕೊಳ್ಳಬಾರದೆಂದು ಕಾನೂನು ಜಾರಿಯಾಯಿತು. ದೊಡ್ಡ ದೊಡ್ಡ ಜಮೀನುದಾರರಿಗೆ ಗೇಣಿಯ ಅಕ್ಕಿ, ಭತ್ತಗಳನ್ನು ನೇರವಾಗಿ ಪಡಿತರ ಅಂಗಡಿಗೆ ಹಾಕಬೇಕೆಂದು ಆದೇಶವಾಗಿತ್ತು.

ಆ ವರ್ಷ ತುಳುನಾಡಿಗೆ ಗೋಧಿ ಬಂತು. ಪಡಿತರ ಅಂಗಡಿಗಳಲ್ಲಿ ಗೋಧಿ, ಸಕ್ಕರೆ ಹಂಚಲು ಪ್ರಾರಂಭವಾಯಿತು. ಪಡಿತರದಲ್ಲಿ ಸಿಕ್ಕಿದ ಗೋಧಿಯನ್ನು ಏನು ಮಾಡುವುದೆಂದು ತಿಳಿಯದ ಜನ ಕಡೆದು ಹಸು ಕರುಗಳಿಗೆ ತಿನ್ನಿಸುತ್ತಿದ್ದರು. ನಿಧಾನವಾಗಿ ಮನೆಮನೆಗಳಲ್ಲಿ ಗೋಧಿಯ ಉಪ್ಪಿಟ್ಟು, ಗೋಧಿಯ ದೋಸೆ ಮಾಡಲು ಪ್ರಾರಂಭಿಸಿದರು. ಮುಂಬಯಿಗೆ ಹೋಗಿ ಬಂದವರು ಗೋಧಿಯ ರೊಟ್ಟಿ ಮಾಡಲು ಕಲಿಸಿದರು.

ಪಟೇಲರಿಗೆಲ್ಲ ಮನೆಮನೆಗೆ ಹೋಗಿ ಅಕ್ಕಿ, ಭತ್ತಗಳನ್ನು ಪಡಿತರ ಅಂಗಡಿಗಳಿಗೆ ಹಾಕಿಸುವ ಕೆಲಸ ಒಪ್ಪಿಸಲಾಗಿತ್ತು. ರಾಮಣ್ಣನಿಗೆ ಮನೆಯ ಅಕ್ಕಿ, ಭತ್ತಗಳನ್ನು ಪಡಿತರ ಅಂಗಡಿಗೆ ಹಾಕಿಸಬೇಕಾದರೆ ಸಾಕು ಸಾಕಾಯಿತು. ಸುಬ್ಬಯಣ್ಣನೂ, ಅವನೂ ಯಮುನಕ್ಕನಿಗೆ ಕಾನೂನಿನ ಆದೇಶ ತಿಳಿಸಿ, ಮನೆಯಲ್ಲಿದ್ದ ಒಂದು ಸಾವಿರ ಮುಡಿ ಅಕ್ಕಿಯನ್ನು ಪಡಿತರ ಅಂಗಡಿಗೆ ಹಾಕಿಸಿದರು. ಇದು ಊರೆಲ್ಲ ಸುದ್ದಿಯಾಯಿತು. ಈ ಸುದ್ದಿ ಅರ್ಕುಳದ ಉಂಞಿ ಸೆಟ್ಟರ ಸುದ್ದಿಯೊಂದಿಗೆ ಇಡೀ ತುಳುನಾಡಿಗೆ ಹರಡಿತು.

ಅರ್ಕುಳದ ಗುರಿಕಾರ ಉಂಞಿ ಸೆಟ್ಟರ ಮನೆಗೆ ಪಟೇಲರು ಹಾಗೂ ಮಣೆಗಾರರು ಹೋಗಿ ಅಟ್ಟದಲ್ಲಿ ದಾಸ್ತಾನು ಇರಿಸಿದ್ದ ನೂರು ಮುಡಿ ಅಕ್ಕಿಯನ್ನು ಇಳಿಸಿ ತೆಗೆದುಕೊಂಡು ಹೋಗುವಾಗ ಅಂಗಳದಲ್ಲಿ ನಿಂತು ನೋಡುತ್ತಿದ್ದ ಸೆಟ್ಟರ ಮಡದಿ ''ಅಯ್ಯೋ ದೇವರೇ, ನಮ್ಮ ಅಕ್ಕಿಯನ್ನೆಲ್ಲಾ ಕೊಂಡು ಹೋಗುತ್ತಿದ್ದಾರಪ್ಪಾ'' ಎಂದು ರೋದಿಸುತ್ತಾ ಎದೆಯೊಡೆದು ಸತ್ತರಂತೆ. ಪಟೇಲರು, ಮಣೆಗಾರರು ಅಕ್ಕಿಯನ್ನು ಅಲ್ಲೇ ಬಿಟ್ಟು, ಬಂದವರ ಜೊತೆ ಅಂಗಳದಿಂದ ಓಡಿದರಂತೆ. ಈ ಸುದ್ದಿಯನ್ನು ಊರೆಲ್ಲ ಹೇಳಿ ನಗತೊಡಗಿತ್ತು.

ಈ ಸಮಯದಲ್ಲಿ ಯಾವ ಮನೆಯಲ್ಲೂ ಹತ್ತು ಜನರಿಗಿಂತ ಹೆಚ್ಚು ನೆಂಟರಿಗೆ ಊಟ ಹಾಕಬಾರದು ಎಂಬ ಕಾನೂನು ಬಂತು. ಮದುವೆ ಸಮಾರಂಭಗಳಲ್ಲಿ ಊಟದ ವ್ಯವಸ್ಥೆಯನ್ನು ಕೈ ಬಿಡಲಾಯಿತು. ಉತ್ತರಕ್ರಿಯೆಗಳಂತಹ ಕಾರ್ಯಗಳನ್ನು ದೇವಸ್ಥಾನಗಳಲ್ಲಿ ಮಾಡಲು ಆರಂಭಿಸಿದರು. ಮದುವೆ ಸಮಾರಂಭಗಳು ಮಂಗಳೂರಿನ ಹಾಲ್‌ಗಳಲ್ಲಿ, ಶಾಲೆಗಳಲ್ಲಿ ನಡೆಯತೊಡಗಿದವು. ದೇವಸ್ಥಾನ, ಭೂತಸ್ಥಾನಗಳಲ್ಲಿ ಊಟ ಹಾಕಬೇಕಾದರೆ ಸರಕಾರದ ಒಪ್ಪಿಗೆ ಪಡೆಯಬೇಕು ಎಂದಾಯಿತು.

ಮಿತ್ತಬೈಲಿನ ಛತ್ರದಲ್ಲಿ ಗೋಧಿಯ ಉಪ್ಪಿಟ್ಟು, ಹೆಸರು, ಕಡಲೆಯ ಉಪ್ಕರಿ ಕೊಡಲು ಪ್ರಾರಂಭಿಸಿದರು. ಬಡಾಜೆಯಲ್ಲಿ ಅನ್ನಪೂರ್ಣೇಶ್ವರಿ ದೇವಿಯ ಅನ್ನಸಂತರ್ಪಣೆ ನಿಂತು, ಉಪ್ಪಿಟ್ಟು, ಬಾಳೆಹಣ್ಣಿನ ಫಲಾಹಾರ ಕೊಡಲು ಪ್ರಾರಂಭಿಸಿದರು.

ಈ ವರ್ಷ ಮಿತ್ತಬೈಲಿನಲ್ಲಿ ವಿಷು ಹಬ್ಬದ ಊಟ ಇರಲಿಲ್ಲ. ಒಕ್ಕಲಿನವರಿಗೆ, ಊರಿನವರಿಗೆ ಬಾಳೆಹಣ್ಣು, ಉಪ್ಪಿಟ್ಟಿನ ಫಲಾಹಾರ ಕೊಟ್ಟರು. ಯಮುನಕ್ಕನಿಗೆ ಬೇಸರ



ವಾದರೂ ಸುಬ್ಬಯಣ್ಣನೂ, ರಾಮಣ್ಣನೂ ಕಾನೂನಿನ ವಿರುದ್ಧ ಹೋಗಲು ಬಿಡಲಿಲ್ಲ.

ಒಕ್ಕಲಿನವರೆಲ್ಲ ಬಂದು ಗೇಣಿ ಲೆಕ್ಕ ಮಾಡಿ ಹಳೆ ಗೇಣಿ ಸಂದಾಯ ಮಾಡಿ, ಹೊಸ ವರ್ಷದ ಗೇಣಿ ನಿಶ್ಚಯಿಸಿ ಯಜಮಾನರ, ಮನೆಯ ಯಜಮಾನತಿಯ ಕಾಲಿಗೆ ನಮಸ್ಕಾರ ಮಾಡಿ ಆಶೀರ್ವಾದ ಪಡೆದು, ಫಲಾಹಾರ ಮಾಡಿ ಹೋದರು.

ಕಣಿಗೆ ಕೈ ಮುಗಿದು ಎಲ್ಲರೂ ಹೊರಟುಹೋದ ಮೇಲೆ ಮನೆಯವರೆಲ್ಲರೂ ಒಟ್ಟಿಗೆ ಕುಳಿತು ಊಟ ಮಾಡಿದರು. ಅನಂತರ ಸುಬ್ಬಯಣ್ಣ, ಯಮುನಕ್ಕ ಹಾಗೂ ಮನೆಯ ಯುವಕರು ಎಲ್ಲ ಒಟ್ಟಿಗೆ ಚಪ್ಪರದಡಿಯಲ್ಲಿ ಕುಳಿತು ಗೇಣಿಯ ಲೆಕ್ಕ, ಮುಂದಿನ ವ್ಯವಸ್ಥೆಯ ಬಗ್ಗೆ ಮಾತನಾಡುವಾಗ ಎಲ್ಲರ ಬಾಯಿಯಿಂದಲೂ ಹೊರಬಿದ್ದುದು ಬಾರಬೈಲಿನ ಸುದ್ದಿ. ತ್ಯಾಂಪಣ್ಣನ ಮನೆಯಿಂದ ಯಾರೂ ಗೇಣಿ ಸಂದಾಯ ಮಾಡಲು ಬರಲಿಲ್ಲ. ಹೊಸ ವರ್ಷದ ಗೇಣಿ ಚೀಟಿ ಮಾಡಿಕೊಳ್ಳಲೂ ಯಾರೂ ಬರಲಿಲ್ಲ. ಈ ವಿಷಯ ಎಲ್ಲರ ತಲೆಯಲ್ಲೂ ತಿರುಗುತ್ತಿತ್ತು. ದುಗ್ಗಪ್ಪ ಉರಿಯುತ್ತಿದ್ದ. ಕಿನ್ಯನ, ಮಾಬಲರು ಬೆಂಕಿಯಂತಾಗಿದ್ದರು. ಬಾರಬೈಲಿನವರಿಗೊಂದು ಪಾಠ ಕಲಿಸಬೇಕೆಂದು ಎಲ್ಲರ ಮನಸ್ಸು ಕುದಿಯುತ್ತಿತ್ತು. ರಾಮಣ್ಣ ಒಬ್ಬ ಮಾತ್ರ ಯುವಕರ ಪೈಕಿ ಶಾಂತವಾಗಿದ್ದುದು. ಆತ ಎಲ್ಲರಿಗೂ ತಾಳ್ಮೆಯಿಂದಿರಲು ಹೇಳಿದ. ಯುವಕರು ಯಾರೂ ಅದರ ಸುದ್ದಿಗೆ ಹೋಗದೆ ಅದನ್ನು ತನಗೆ ಅಥವಾ ಯಮುನಕ್ಕನಿಗೆ ಬಿಟ್ಟು ಬಿಡಬೇಕೆಂದು ಸುಬ್ಬಯಣ್ಣ ಕೇಳಿ ಕೊಂಡರು. ಯುವಕರು ಮಾತಿಗೆ ಒಪ್ಪಿಕೊಂಡರಾದರೂ ಅವರ ಒಳಗೆ ಬೆಂಕಿ ಅರಳತೊಡಗಿತ್ತು. ಯಮುನಕ್ಕ ಮಾತ್ರ ಬಾರಬೈಲಿನ ವಿಷಯಕ್ಕೆ ಯಾರೂ ಹೋಗದೆ ಅದನ್ನು ಸಂಪೂರ್ಣ ತನಗೆ ಬಿಟ್ಟು ಬಿಡಬೇಕೆಂದು ಹೇಳಿದರು.

''ಈ ಬಾರಬೈಲಿನ ಮುಳ್ಳಿನ ಹೊರೆಯನ್ನು ಮಿತ್ತಬೈಲಿನ ಅಂಗಳಕ್ಕೆ ತಂದವಳು ನಾನು. ನಿಮಗೆ ತಿಳಿದಿದೆ ಮಿತ್ತಬೈಲು ಹಾಗೂ ಬಾರಬೈಲಿನ ಹಗೆತನ. ಈ ಹಗೆತನ ನಮ್ಮ ಹಿರಿಯರು ಈ ಬೈಲಿನಲ್ಲಿ ಗುತ್ತು ಸ್ಥಾಪನೆ ಮಾಡಿದಂದಿನಿಂದ ಮುಂದುವರಿದಿದೆ. ಒಮ್ಮೆ ಹಿರಿಯ ಮಂಜಣಾಳ್ವರ ಕಾಲದಲ್ಲಿ ಅವರು ನಿರ್ನಾಮವಾಗಿ ಹೋದರು. ಅನಂತರ ನಮ್ಮ ಅಜ್ಜಿಯ ಮುತ್ತಜ್ಜಿ ಸಂಕಮಕ್ಕನ ದಯೆಯಿಂದ ಬದುಕಿ ಮಾಂಕರಾಲರ ಯಜಮಾನಿಕೆಯ ಕಾಲದಲ್ಲಿ ಬೆಳೆದು ಬಿಟ್ಟರು. ಹುಳದಂತಿದ್ದವರು ಮಾಂಕರಾಲರ ಕಾಲದಲ್ಲಿ ವಿಷಸರ್ಪ ದಂತಾದರು. ತ್ಯಾಂಪಣ್ಣ , ನಮ್ಮ ಗುತ್ತಿನ ವ್ಯವಹಾರದಲ್ಲಿ ಕೈ ಹಾಕಿ ಮಿತ್ತಬೈಲಿನ ಚಿನ್ನ, ಒಡವೆ, ಹಣ ಲೂಟಿ ಮಾಡಲು ಕಜೆಕೋಡಿಯವರಿಗೂ, ಮಾಂಕರಾಲರಿಗೂ ಸಹಾಯ ಮಾಡಿದ. ಮಿತ್ತಬೈಲಿನ ಪಟೇಲತನವನ್ನು ಮಾಂಕರಾಲರ ಮಗನಿಗೆ ಮಾಡಿಕೊಡಲು ಪ್ರಯತ್ನಿಸಿದರು. ನಾವು ಕೆಲವು ಸಮಯ ಏನೂ ಮಾಡಲು ಸಾಧ್ಯವಾಗದೆ ಒದ್ದಾಡಿದೆವು. ಅದಕ್ಕಾಗಿಯೇ, ಅವರ ಕಾರುಬಾರು, ಅಹಂಕಾರವನ್ನು ಅಡಗಿಸಬೇಕೆಂದೇ ಭಂಡಾರ ಮಠದವರಿಂದಲೂ, ಭಕ್ತರ ಮಠದವರಿಂದಲೂ ಬಾರಬೈಲಿನ ಎಲ್ಲ ಆಸ್ತಿಯನ್ನು ನಾನು ಖರೀದಿಸಿದ್ದುದು. ಕಳೆದ ವರ್ಷ ಆಚು ಅತ್ತೆಗೆ ನಾನು ಮಾತು ಕೊಟ್ಟಿದ್ದೆ. ಚೆನ್ನಾಗಿದ್ದರೆ

ಮಕ್ಕಳು, ಮರಿಗಳು ದುಡಿದು ಮಿತ್ತಬೈಲಿಗೆ ಗೇಣಿ ಕೊಟ್ಟು ಒಕ್ಕಲಿನವರಾಗಿ ಸುಖವಾಗಿರಬಹುದು ಎಂದು.''

''ಇಂದು ತ್ಯಾಂಪಣ್ಣ ಗೇಣಿ ಕೊಡದೆ, ಬೆಳೆ ಕಾಣಿಕೆ ಕೊಡದೆ ನನ್ನ ಜೊತೆ ಕಾದಾಡಲು ಸಿದ್ಧತೆ ನಡೆಸುತ್ತಿರುವಂತೆ ಕಾಣುತ್ತಿದೆ. ಇನ್ನೂ ಒಮ್ಮೆ ಅವನಿಗೆ ಸಾರಿ ಹೇಳಿ ಬರಬೇಕೆಂದು ಇದ್ದೇನೆ.....''.

''ನೀವು ಯಾಕೆ ಆ ನಾಯಿ ಮಗನ ಜೊತೆ ಮಾತನಾಡಲು ಹೋಗಬೇಕು. ನಾವು ಯುವಕರು ಹೋಗಿ ಅವರ ಪಾತ್ರೆ ಪಗಡ ಹೊರಗೆ ಎಳೆದು ಹಾಕಿ ಹಿತ್ತಲು, ಗದ್ದೆಗಳನ್ನು ಸ್ವಾಧೀನ ಮಾಡಿಕೊಂಡು ಬರುತ್ತೇವೆ''.

ದುಗ್ಗಪ್ಪ ಕೋಪದಿಂದ ನಡುಗತೊಡಗಿದ. ಸುಬ್ಬಯಣ್ಣ ಅವನನ್ನು ಸಮಾಧಾನಿಸಿ ಎಚ್ಚರಿಕೆ ನೀಡಿದರು,

''ನಿನಗಿಂತ ಹಿರಿಯ ವ್ಯಕ್ತಿಗಳನ್ನು ಹೀಗೆಲ್ಲಾ ಬೈಯಬಾರದು ದುಗ್ಗಪ್ಪ''.

''ನಮಗೆ ತಿಳಿದಿದೆ, ನೀವೆಲ್ಲ ಹೋಗಿ ಅವರಲ್ಲಿ ಜಗಳ ಕಾದು, ಅವರನ್ನು ಓಡಿಸಬೇಕೆಂದಿದ್ದೀರೆಂದು. ಆದರೆ ಅವರ ತಪ್ಪನ್ನು ಅವರಿಗೆ ತಿಳುವಳಿಕೆ ಮಾಡಿಕೊಡದೆ, ಸಾರಿ ಹೇಳದೆ ಯಾವ ಕೆಲಸವನ್ನೂ ಮಾಡಬಾರದು. ಅಲ್ಲದೆ, ಸಾವಧಾನದಿಂದ ಶಾಂತಿಯಿಂದ ಮುಗಿಸಬೇಕಾದುದಕ್ಕೆ ಹಿಂಸೆಯ ಅಗತ್ಯವಿಲ್ಲ. ವಿಷಯವನ್ನು ನಮಗೆ ದೊಡ್ಡವರಿಗೆ ಬಿಡಿ'' ಎಂದು ಸುಬ್ಬಯಣ್ಣ ಹೇಳಿದಾಗ ಯಮುನಕ್ಕ ಕುಳಿತಲ್ಲಿಂದ ಎದ್ದು ನಿಂತರು,

''ಸುಬ್ಬಯ್ಯಾ, ಬಾರಬೈಲು ತ್ಯಾಂಪಣ್ಣನ ವಿಷಯದಲ್ಲಿ ಯಾರೂ ಮಧ್ಯೆ ಬರಬೇಡಿ. ಅದನ್ನು ನನಗೆ ಬಿಡಿ. ಆ ಭೂಮಿಯನ್ನು ನಾನು ಖರೀದಿಸಿದಾಗಲೇ ಇಂತಹ ಒಂದು ಪರಿಸ್ಥಿತಿ ಎದುರಾಗಬಹುದೆಂದು ನನಗೆ ತಿಳಿದಿತ್ತು. ತಿಳಿದೇ ವಿಷದ ಪೊದರಿಗೆ ಕೈ ಹಾಕಿದ್ದು. ಸುಬ್ಬಯ್ಯಾ, ದುಗ್ಗಪ್ಪಾ, ಆ ವಿಷಯವನ್ನು ನಾನು ನೋಡಿಕೊಳ್ಳುತ್ತೇನೆ. ನಾನೊಂದು ತೀರ್ಮಾನಕ್ಕೆ ಬಂದ ಮೇಲೆ ನಿಮಗೆ ತಿಳಿಸುತ್ತೇನೆ. ಶಿಶುಪಾಲನನ್ನು ಕೊಲ್ಲುವಾಗ ಕೃಷ್ಣ ಅವನ ಸಾವಿರ ತಪ್ಪುಗಳನ್ನು ಲೆಕ್ಕಮಾಡಿ, ಸಾವಿರದೊಂದನೇ ತಪ್ಪಿಗಾಗಿ ಕಾದಿದ್ದನಂತೆ. ಯಾಕೆಂದರೆ ಕೃಷ್ಣ ಶಿಶುಪಾಲನ ತಾಯಿಗೆ ಅವನ ಸಾವಿರ ತಪ್ಪುಗಳನ್ನು ಕ್ಷಮಿಸುತ್ತೇನೆಂದು ಮಾತು ಕೊಟ್ಟಿದ್ದನಂತೆ. ನಾನೂ ಆಚು ಅತ್ತೆಗೆ ಮಾತು ಕೊಟ್ಟಿದ್ದೆ. ಅದನ್ನು ಉಳಿಸಿಕೊಳ್ಳಬೇಕೆಂಬ ಆಶೆಯಿದೆ. ಸಾಧ್ಯವಾಗದಿದ್ದರೆ ಅದು ಬಾರಬೈಲಿನ ದೌರ್ಭಾಗ್ಯ''.

ಯಮುನಕ್ಕ ಅಷ್ಟು ಹೇಳಿ ಒಳಗೆ ನಡೆದರು. ಯುವಕರೆಲ್ಲ ಎದ್ದು ಹೋದರಾದರೂ ಅವರ ತಲೆ ತುಂಬಾ ತ್ಯಾಂಪಣ್ಣನೇ ತುಂಬಿಕೊಂಡಿದ್ದ.

★★★

ಬಾರಬೈಲಿನಲ್ಲಿ ಆಚಕ್ಕ ಚಾವಡಿಯಲ್ಲಿ ಕುಳಿತುಕೊಂಡಿದ್ದರು. ಮಕ್ಕಳು ಮರಿಗಳೆಲ್ಲ ಕಾಲಿಗೆ ನಮಸ್ಕಾರ ಮಾಡಿ ಹೋದ ಮೇಲೆ ತ್ಯಾಂಪಣ್ಣನನ್ನು ಕರೆದರು.



''ತ್ಯಾಂಪಣ್ಣ, ಮಿತ್ತಬೈಲಿನ ಗೇಣಿ ಸಂದಾಯ ಮಾಡಿ ಹೊಸ ಗೇಣಿ ಚೀಟಿ ಮಾಡಿಸುವುದು ಏನಾಯಿತು? ಆ ಬಗ್ಗೆ ಏನು ಯೋಚನೆ ಮಾಡಿದ್ದೀ?''

''ಏನೂ ಯೋಚನೆ ಮಾಡಿಲ್ಲ. ನೀವು ಸುಮ್ಮನೆ ಮನೆಯೊಳಗೆ ಇರಿ. ಮಿತ್ತಬೈಲಿನವರನ್ನು ಏನು ಮಾಡಬೇಕು ಎಂಬುದನ್ನು ನಾನು ನೋಡಿಕೊಳ್ಳುತ್ತೇನೆ. ನಿಮಗೆ ಆ ವಿಷಯ ಬೇಡ. ಅವಳಿದ್ದಾಳಲ್ಲಾ ಆ ಯಮುನಾ ಅವಳಿಗೆ ಏನು ಮಾಡಲಿಕ್ಕೆ ಸಾಧ್ಯವೋ ಅದನ್ನು ಅವಳು ಮಾಡಲಿ. ಬಾರಬೈಲಿನ ಮನೆ, ಜಮೀನು ಅವಳ ಒಕ್ಕಲಿನದಲ್ಲ, ಅದು ನನ್ನ ಹಿರಿಯರ ಮಣ್ಣು. ಅದರಲ್ಲಿ ಯಾರಿಗೂ ಹಕ್ಕಿಲ್ಲ. ನಾನು ಯಾರಿಗೂ ಗೇಣಿ ಕೊಡುವುದೂ ಇಲ್ಲ, ಗೇಣಿ ಚೀಟಿ ಬರೆದು ಕೊಟ್ಟು ಅವಳ ಕಾಲಿಗೆ ಬೀಳುವುದೂ ಇಲ್ಲ''.

''ನೀನು ಹೀಗೆ ಹೇಳಿದರೆ, ಅದು ನ್ಯಾಯವೇ? ಬಾರಬೈಲಿನ ಭೂಮಿಯನ್ನು ಅವಳು ಭಕ್ತರ ಮಠ ಮತ್ತು ಭಂಡಾರ ಮಠದವರಿಂದ ಖರೀದಿಸಿದುದು ನಮಗೆ ತಿಳಿದಿದೆ. ಕಳೆದ ವರ್ಷ ನಾವು ಗೇಣಿ ಚೀಟಿ ಬರೆದುಕೊಟ್ಟಿದ್ದೇವೆ. ಎರಡು ಖಂಡಿ ಅಡಿಕೆ, ಐನೂರು ತೆಂಗಿನಕಾಯಿ, ಹತ್ತು ಮುಡಿ ಅಕ್ಕಿ ಗೇಣಿ ಕೊಡಲು ನಾವು ಒಪ್ಪಿದ್ದೇವೆ. ಈಗ ನೀನು ಅದನ್ನು ಕೊಡುವುದಿಲ್ಲ ಎಂದರೆ ಜಗಳಕ್ಕೆ ಕಾಲು ಕೆರೆಯುತ್ತಿದ್ದಿ ಎಂದು ಅರ್ಥ. ಗೇಣಿ ಕೊಡದಿದ್ದರೆ ಅವರು ತಮ್ಮ ಭೂಮಿಯನ್ನು ಸ್ವಾಧೀನ ಮಾಡಿಕೊಂಡರೆ ನಾವು ಮಕ್ಕಳು ಮರಿಗಳನ್ನು ಬೀದಿಗೆ ಹಾಕಬೇಕಾದೀತು''.

''ಅಮ್ಮಾ, ಈ ಗೇಣಿ ಚೀಟಿ ಅಂದು ನಿಮ್ಮ ಒತ್ತಾಯಕ್ಕೆ ನಾನು ಮಾಡಿಕೊಟ್ಟದ್ದು. ಅಂದೇ ನಾನು ಯಾವ ಕಾರಣಕ್ಕೂ ಯಮುನನಿಗೆ ಗೇಣಿ ಕೊಡುವುದಿಲ್ಲ ಎಂದಾಗ ನೀವು ಉಪವಾಸ ಕುಳಿತಿರಿ. ಈ ವರ್ಷ, ನಿಮಗೆ ಈಗಲೇ ಹೇಳುತ್ತೇನೆ. ನೀವು ಈ ಗೇಣಿ ಚೀಟಿಯ ಸುದ್ದಿಗೆ ಬರಬಾರದು. ನಾನು ಮಿತ್ತಬೈಲಿನ ಯಮುನನಿಗೆ ಗೇಣಿ ಕೊಡುವುದಿಲ್ಲ, ಗೇಣಿ ಚೀಟನ್ನೂ ಬರೆದುಕೊಡುವುದಿಲ್ಲ, ಅದರಿಂದಾಗಿ ಜಗಳವಾದರೆ ನಾನು ನೋಡಿಕೊಳ್ಳುತ್ತೇನೆ. ಆ ಯಮುನ ಮಾಂಕರಾಲರನ್ನು ಕೊಲ್ಲಿಸಿದಂತೆ ನನನ್ನೂ ಮುಗಿಸಬಹುದೆಂದು ಎಣಿಸಿದ್ದರೆ ಅದು ಅವಳ ತಪ್ಪು ಲೆಕ್ಕಾಚಾರ. ಇನ್ನು ಎರಡು ದಿನಗಳೊಳಗೆ ವಕೀಲರ ನೋಟಿಸು ತಲುಪಿದಾಗ ಯಮುನಾ ಇಲ್ಲಿಗೆ ಬಂದು ನಿಮ್ಮಲ್ಲಿ ಕತೆ ಹೇಳುವುದಕ್ಕೆ ಮೊದಲು ನೀವು ಇಲ್ಲಿಂದ ಎಲ್ಲಿಗಾದರೂ ನೆಂಟರ ಮನೆಗೆ ಹೋಗಿ. ಈಗ ಒಳಗೆ ಹೋಗಿ. ನನಗೆ ಇವರ ಜೊತೆ ಸ್ವಲ್ಪ ಮಾತನಾಡುವುದಕ್ಕಿದೆ. ನೀವು ಮಧ್ಯೆ ಬಾಯಿ ಹಾಕಬೇಡಿ'' ತ್ಯಾಂಪಣ್ಣ ಸ್ವಲ್ಪ ಜೋರಾಗಿಯೇ ಹೇಳಿದ.

ಆಚಕ್ಕ ಮೌನವಾಗಿ ಎದ್ದು ಒಳಗೆ ಹೋದರು. ಅವರಿಗೆ ಪರಿಸ್ಥಿತಿ ತನ್ನ ಕೈ ಮೀರಿ ಹೋಗುತ್ತಿದೆ ಅನಿಸಿತು. ಏನಾದರೂ ಅನಾಹುತ ಸಂಭವಿಸಿಯೇ ತೀರುತ್ತದೆ ಎಂಬ ಭಯ ಅವರನ್ನು ಆವರಿಸಿತು. ಯಮುನ ಈ ವಿಷಯವನ್ನು ಇಲ್ಲಿಗೇ ಬಿಡುವವಳೇ? ಖಂಡಿತ ಬಿಡುವವಳಲ್ಲ, ಅವಳೂ, ಆ ದುಗ್ಗಪ್ಪನೂ ಏನು ಮಾಡುತ್ತಾರೆ ಎಂದು ಊಹಿಸಲೂ ಸಾಧ್ಯವಿಲ್ಲ. ಎಲ್ಲಿಯಾದರೂ ಇದು ಸುಖಾಂತ್ಯ ಕಾಣಬೇಕಾದರೆ ಆ ಸುಬ್ಬಯ ಅಥವಾ

ರಾಮಣ್ಣನಿಂದ ಮಾತ್ರ ಸಾಧ್ಯ. ಆದರೆ ಯಮುನಾ ಇವರ ಯಾರ ಮಾತನ್ನೂ ಕೇಳುವವಳಲ್ಲ ಎಂದು ಅವರ ಮನಸ್ಸು ಹೇಳುತ್ತಿತ್ತು.

ಯಮುನಕ್ಕನನ್ನು ಬಾಲ್ಯದಲ್ಲಿ ಆಚಕ್ಕ ಸಾಕಿದ್ದರು. ಅವಳು ಯಾವುದಕ್ಕೂ ಹಿಂಜರಿಯುವವಳಲ್ಲ, ಏನು ಮಾಡಲೂ ಹೇಸುವವಳಲ್ಲ, ಯಾವ ಗಂಡಿಗೂ ಕಮ್ಮಿಯಿಲ್ಲದಂತೆ ಕಾರುಬಾರು ನಡೆಸಿ ಕಳೆದ ಒಂದು ವರ್ಷದಿಂದ ಮಿತ್ತಬೈಲನ್ನು ಆಳಿದ್ದಾಳೆ. ಮಾಂಕರಾಲರು ಬದುಕಿದ್ದಾಗ ಅವರು ಭಯಪಡುತ್ತಿದ್ದರೆ ಅದು ಯಮುನಕ್ಕ ಒಬ್ಬಳಿಗೆ ಮಾತ್ರ. ಸುಬ್ಬಯಣ್ಣನನ್ನು ಅವರು ಗಣಿಸುತ್ತಲೇ ಇರಲಿಲ್ಲ, ಮಾಂಕರಾಲ ಸತ್ತ ಮೇಲೆ ಮಿತ್ತಬೈಲಿನ ಗುರಿಕಾರಿಕೆಯನ್ನು  ವಶಕ್ಕೆ ತೆಗೆದುಕೊಂಡು ಒಕ್ಕಲಿನವರನ್ನು, ಕೆಲಸದವರನ್ನು ಮನೆಯ ಯುವಕರನ್ನೆಲ್ಲ ತನ್ನ ಅಂಕೆಯಲ್ಲಿಟ್ಟುಕೊಂಡು ಮಿತ್ತಬೈಲಿನ ಮಾನ, ಮರ್ಯಾದೆಯನ್ನು ಊರು ಮೆಚ್ಚುವಂತೆ ಹೆಚ್ಚಿಸುತ್ತಾ ಹೋದವಳು ಯಮುನಕ್ಕ. ಅವಳ ಮಾತನ್ನು ಮೀರುವ ಧೈರ್ಯ ಸುತ್ತಮುತ್ತ ಯಾರಿಗೂ ಇರಲಿಲ್ಲ. ಕಾರುಬಾರು ಮಾತ್ರವಲ್ಲ, ಶಕ್ತಿಯಲ್ಲಿಯೂ ಅವಳು ಯಾವ ಯುವಕನಿಗೂ ಕಡಿಮೆ ಇರಲಿಲ್ಲ. ಬಲಗೈ ಮುಷ್ಠಿ ಹಿಡಿದು ಒಂದು ಗುದ್ದಿದಳೆಂದಾದರೆ ರಕ್ತ ಕಾರಬೇಕು. ಅಷ್ಟೊಂದು ತ್ರಾಣದ, ಶಕ್ತಿಯ ಹೆಣ್ಣು ಆಕೆ. ಮುಡಿ ಅಕ್ಕಿಯನ್ನು ಒಂದೇ ಕೈಯಲ್ಲಿ ಎತ್ತಿ ಅಟ್ಟಕ್ಕೆ ಹಾಕುವ ಅವಳ ತ್ರಾಣ ಕಂಡು ಅವಳನ್ನು ಮಿತ್ತಬೈಲಿಗೆ ಹೇಳಿದ ಯಜಮಾನತಿ ಎಂದು ಊರೆಲ್ಲ ಹೊಗಳುತ್ತಿದ್ದರು.

ಯಮುನಕ್ಕನ ದ್ವೇಷ ಕಟ್ಟಿಕೊಳ್ಳುವುದೆಂದರೆ ಕೃಷ್ಣ ಸರ್ಪವನ್ನು ಎದುರು ಹಾಕಿಕೊಂಡಂತೆ. ಎಷ್ಟೋ ಒಕ್ಕಲಿನವರಿಗೆ, ವ್ಯಾಪಾರದ ಕೊಂಕಣಿಗಳಿಗೆ, ಸಣ್ಣ ವ್ಯಾಪಾರದ ಬ್ಯಾರಿಗಳಿಗೆ ಅವಳ ಆ ದರ್ಪದ, ಹಗೆಯ ಅನುಭವ ಆಗಿದೆ. ಮಂಜೇಶ್ವರದ ಬಸ್ಸು ಕಂಪನಿಯವರಿಗೂ ಆಗಿದೆ ಎಂಬ ಕೆಲಸದವರ ಮಾತು ಆಚಕ್ಕನ ಕಿವಿಗೆ ಬೀಳುತ್ತಲೇ ಇತ್ತು. ಸರಕಾರದ ಮಣೆಗಾರರಿಗೆ ಅಥವಾ ತಹಶೀಲ್ದಾರರಿಗೂ ಯಮುನಕ್ಕನ ಮುಂದೆ ನಿಂತು ಮಾತನಾಡುವಷ್ಟು ಧೈರ್ಯವಿಲ್ಲವಂತೆ. ಪೊಲೀಸರು ಯಮುನಕ್ಕನ ಅಪ್ಪಣೆಯಿಲ್ಲದೆ ಮಿತ್ತಬೈಲಿಗೆ ಕಾಲಿಟ್ಟಿಲ್ಲವಂತೆ. ಅವರ ಅಂಗಳದ ಕಂಬದ ಕತೆ ಎಲ್ಲರಿಗೂ ತಿಳಿದದ್ದೇ. ಆ ಕಂಬಕ್ಕೆ ಒಮ್ಮೆ ಒಬ್ಬ ಪೊಲೀಸಿನವನನ್ನೂ ಕಟ್ಟಿ ಹಾಕಿಸಿದ್ದಳಂತೆ ಯಮುನಾ. ಇದೆಲ್ಲಕ್ಕಿಂತಲೂ ದುಗ್ಗಪ್ಪನೂ ಅವನ ಜೊತೆ ಇರುವ ಯುವಕರೂ ಬೇಟೆನಾಯಿಯಂತೆ ಮಿತ್ತಬೈಲನ್ನು ಕಾಯುತ್ತಿದ್ದಾರೆ.

ಇಂತಹ ಮಿತ್ತಬೈಲಿನ ಯಮುನಾಳನ್ನು ತನ್ನ ಮಗ ತ್ಯಾಂಪಣ್ಣ ಎದುರು ಹಾಕಿಕೊಂಡಿದ್ದಾನೆ ಎಂದರೆ ಅದಕ್ಕೇನು ಹೇಳಬೇಕು! ಆತ ಹೆಣ್ಣು ಹುಲಿಯ ಬಾಯಿಗೆ ಕೈ ಹಾಕಿದ್ದಾನೆ ಎಂಬುದರಲ್ಲಿ ಆಚಕ್ಕನಿಗೆ ಅನುಮಾನವೇ ಇರಲಿಲ್ಲ.

ಬಾರಬೈಲು-ಮಿತ್ತಬೈಲುಗಳ ಜಗಳ ಬೀರಣ್ಣ ಬಂಟ-ಮಂಜಣಾಳ್ವರ ಕಾಲದಲ್ಲಿ ಪ್ರಾರಂಭವಾದುದು, ನಾಲ್ಕು ತಲೆಮಾರು ಉರುಳಿದರೂ ಮುಗಿಯಲಿಲ್ಲವಲ್ಲಾ ಎಂದು ಚಿಂತಿಸುತ್ತಾ ಆಚಕ್ಕ ಮರುಗಿದರು.



ಆಚಕ್ಕನಿಗೆ ನೆರೆಯಲ್ಲಿ ಕೊಚ್ಚಿಕೊಂಡು ಹೋಗುವವನಿಗೆ ಸಿಕ್ಕಿದ ಬಳ್ಳಿಯಂತೆ ಒಂದು ಧೈರ್ಯ, ಒಂದೇ ಒಂದು ಆಸೆ. ಅದೆಂದರೆ ಊರವರು ಹೇಳುವಂತೆ ಗಾಂಧಿ ಸುಬ್ಬಣ್ಣನದು. ಆತ ಅನ್ಯಾಯ, ಹಿಂಸೆ ನಡೆಯಲು ಬಿಡಲಿಕ್ಕಿಲ್ಲ.

ತಿಂಗಳ ಹಿಂದೆ, ತ್ಯಾಂಪಣ್ಣ, ಅವರನ್ನು ಕಾಸರಗೋಡಿನ ವಕೀಲರ ಬಳಿ ಕರೆದುಕೊಂಡು ಹೋಗಿ ಹೆಬ್ಬೆಟ್ಟು ಒತ್ತಿಸಿದಾಗ, ಒಂದು ಕ್ಷಣ ಮನುಷ್ಯ ಸಹಜವಾದ ಆಶೆ ಅವರಲ್ಲೂ ಮೂಡಿತ್ತು. ವಕೀಲರು ಬಾರಬೈಲಿನ ಭೂಮಿಯನ್ನು ನಿಮಗೇ ಮಾಡಿಸಿ ಕೊಡುತ್ತೇನೆ ಎಂದು ಆಶ್ವಾಸನೆಯಿತ್ತಾಗ ಆ ಆಶೆ ಮರವಾಗಿ ಬೆಳೆಯಿತು. ಅಂದು ಅವರ ಆ ಮಾತನ್ನು ಕೇಳುವಾಗ ಆಚಕ್ಕನಿಗೆ ಬಹಳ ಖುಷಿಯಾಗಿತ್ತು.

''ಕುಟುಂಬದ ಒಬ್ಬ ಸದಸ್ಯ ಅನ್ಯಾಯ ಮಾಡಿದನೆಂದು ಇಡೀ ಕುಟುಂಬದ ಆಸ್ತಿಯನ್ನು ಮುಟ್ಟುಗೋಲು ಹಾಕಿ ವಶಪಡಿಸಿಕೊಳ್ಳುವ ಹಕ್ಕು ಸರಕಾರಕ್ಕೂ ಇಲ್ಲ. ಹೆಚ್ಚೆಂದರೆ ಬೀರಣ್ಣನ ಸ್ವಂತದ ಆಸ್ತಿಪಾಸ್ತಿಗಳನ್ನು ಸ್ವಾಧೀನ ಮಾಡಿಕೊಳ್ಳಬಹುದು ಅಷ್ಟೇ. ಕುಟುಂಬದ ಆಸ್ತಿಯನ್ನು ಹೇಗೆ ಮುಟ್ಟುಗೋಲು ಹಾಕೀತು? ಅಳಿಯ ಸಂತಾನದ ಆಸ್ತಿಯಲ್ಲಿ ಗಂಡಿಗೆ ಹಕ್ಕಿಲ್ಲ. ಅದೇನಿದ್ದರೂ ಹೆಣ್ಣು ಕುಟುಂಬಕ್ಕೆ. ಅದನ್ನು ಸರಕಾರ ಹೇಗೆ ಸ್ವಾಧೀನಪಡಿಸೀತು?''

ವಕೀಲರು ಹೇಳಿದಾಗ ಆಚಕ್ಕನ ಮುದಿ ತಲೆಗೂ ಆ ಸಂಗೀತದಂತಹ ಮಾತು ನಾಟಿತ್ತು.

ಆಸ್ತಿ ಈಗ ಬಾರಬೈಲಿನವರ ವಶ ಇರುವುದರಿಂದ ಯಮುನನಿಗೆ ಗೇಣಿ ಕೊಡುವುದಿಲ್ಲ ಎಂದರೆ, ವಸೂಲಿ ಮಾಡಲು ಅಷ್ಟೊಂದು ಸುಲಭವಿಲ್ಲ. ನ್ಯಾಯಾಲಯಕ್ಕೆ ಹೋದರೆ ಸಿವಿಲ್ ಕೇಸು, ನ್ಯಾಯಾಲಯದಿಂದ ನ್ಯಾಯಾಲಯಕ್ಕೆ ಹೋಗಿ ಏನೆಂದರೂ ಎರಡು ತಲೆಮಾರು ಉರುಳದೆ ಮುಗಿಯದು. ಬಾರಬೈಲಿನವರಿಗೆ ಅಲ್ಲಿ ತನಕ ಅಲ್ಲಿ ಸಾಗುವಳಿ ಮಾಡಿಕೊಂಡು ಅನುಭವಿಸುವುದಕ್ಕೆ ಯಾವ ತೊಂದರೆಯೂ ಇಲ್ಲ. ಪ್ರಕರಣವನ್ನು ಪ್ರೀವಿ ಕೌನ್ಸಿಲ್ ತನಕ ಕೊಂಡು ಹೋದರೆ ಕಡಿಮೆಯೆಂದರೂ ಮುಗಿಯುವಾಗ ಮೂವತ್ತು - ನಲವತ್ತು ವರ್ಷ ಕಳೆಯಬಹುದು. ಆಗ ಯಮುನನೂ ಬದುಕಿರುವುದಿಲ್ಲ, ಮಗ ತ್ಯಾಂಪಣ್ಣನೂ ಇರುವುದಿಲ್ಲ. ಉಳಿಯುವುದು ಹಗೆತನದ ಮಣ್ಣು ಮಾತ್ರ.

ಆಚಕ್ಕನಿಗೆ ಮಗ ಒಮ್ಮೆ ಹೇಳಿದ್ದ. ಇತ್ತೀಚೆಗೆ ಎಲ್ಲೋ ಕೇರಳದಲ್ಲಂತೆ ''ಉಳುವವನಿಗೇ ಭೂಮಿ! ಯಾರೋ ಎಲ್ಲೋ ಕುಳಿತವರು ನಾವು ದುಡಿದುದರಲ್ಲಿ ಪಾಲು ಕೇಳಿದರೆ ಯಾಕೆ ಕೊಡಬೇಕು! ಯಾರಿಗೂ ಗೇಣಿ ಕೇಳುವ ಹಕ್ಕು ಇಲ್ಲ'' ಎಂದು ಮಾತನಾಡಿಕೊಳ್ಳುತ್ತಿದ್ದರಂತೆ. ಅವರು ಯಾರೋ ಕಮ್ಯುನಿಸ್ಟ್‌ನವರಂತೆ. ಒಕ್ಕಲಿನವರ ಪರ ನಿಂತು ಹೋರಾಟ ಮಾಡಲು ತಯಾರಿದ್ದಾರಂತೆ.

''ಭೂಮಿ ಉಳುವವನದು! ದುಡಿಯುವವನದು! ಗೇಣಿ ಕೊಡಬೇಡಿ! ಭೂಮಿ ಬಿಟ್ಟು ಕೊಡಬೇಡಿ!'' ಎಂದು ಘೋಷಣೆ ಕೂಗುತ್ತಾ ಹಳ್ಳಿಗಳಲ್ಲೆಲ್ಲಾ ಈ ಜನರು

ತಿರುಗುತ್ತಿದ್ದಾರಂತೆ. ತ್ಯಾಂಪಣ್ಣ ಅದ್ಯಾರೋ ಕಾಮ್ರೇಡ್‌ನನ್ನು ಕಂಡು ಮಾತನಾಡಿ ಬಂದಿದ್ದಾನಂತೆ.

ಆಚಕ್ಕನಿಗೆ ಇದನ್ನೆಲ್ಲಾ ನೆನೆದು ನಿದ್ದೆಯೇ ಬರಲಿಲ್ಲ. ಬೆಳಗ್ಗೆ ಬೇಗ ಎದ್ದು ಹೊಳೆ ಬದಿಗೆ ಹೋಗುವಾಗ, ಹೊಳೆ ದಾಟಿ ಮೇಲೆ ಬಂದ ಮಿತ್ತಬೈಲಿನ ಹೊಸ ಯಜಮಾನ ಸುಬ್ಬಯ್ಯಣ್ಣ ಎದುರಾದರು. ಖಾದಿ ಲುಂಗಿ, ಖಾದಿ ಶಾಲು ಹೆಗಲಿಗೆ ಹಾಕಿಕೊಂಡು ಬರುವವರನ್ನು ಕಂಡಾಗ ಯಾರೋ ಸ್ವಾಮಿಗಳನ್ನು ನೋಡಿದಂತಾಯಿತು. ಆಚಕ್ಕ ಹತ್ತಿರವಾಗುತ್ತಿದ್ದಂತೆಯೇ ಸುಬ್ಬಯ್ಯಣ್ಣ ಅವರ ಕಾಲಿಗೆ ಬೀಳಲು ಬಗ್ಗಿದರು.

''ಕೂಡದು ಮಗಾ, ಹಾಗೆಲ್ಲ ಮಾಡ ಕೂಡದು. ಗಡಿ ಹಿಡಿದವನು ಯಾರ ಕಾಲಿಗೂ ಬೀಳಬಾರದು'' ಎಂದರು ಆಚಕ್ಕ.

''ತಾಯಿಯ ಕಾಲಿಗೂ ಬೀಳಬಾರದೇ ಅತ್ತೆ?''

''ಅಯ್ಯೋ ಮಾಗಾ...'' ಎನ್ನುತ್ತಾ ಆಚಕ್ಕ ಅವರ ತಲೆ ಸವರಿದರು. ಸುಬ್ಬಯ್ಯಣ್ಣ ಹುಟ್ಟಿದಾಗಲೂ ಹೆರಿಗೆ ಮಾಡಿಸಿ, ಮಗುವನ್ನು ಐದು ದಿನ ಸ್ನಾನ ಮಾಡಿಸಿದವರು ಆಚಕ್ಕ.

ದೇಶದಲ್ಲೇ ಹೆಸರು ಪಡೆದ 'ಗಾಂಧಿ ಸುಬ್ಬಯ' ತನ್ನ ಕಾಲಿಗೆ ಬೀಳುವಾಗ ಆಚಕ್ಕನಿಗೆ ಸಂಕೋಚ, ನಾಚಿಕೆ ಎಲ್ಲ ಒಮ್ಮೆಲೇ ಉಕ್ಕಿ ಬಂತು. ಎಷ್ಟು ಒಳ್ಳೆಯ ಹುಡುಗ, ನೋಡಲು ಎಷ್ಟೊಂದು ಚೆನ್ನಾಗಿದ್ದ. ಇಂದು ಸನ್ಯಾಸಿಯಂತೆ ಕಾಣುತ್ತಿದ್ದಾನೆ. ಸುಬ್ಬಯ ಭಂಡಾರಿಗಳೆಂದರೆ ಧರ್ಮರಾಯನಂತೆ ಎಂದು ಊರಿಗೆ ಊರೇ ಹೊಗಳುತ್ತಿದೆ. ಇತ್ತೀಚೆಗೆ ಆಚಕ್ಕ ಅವರನ್ನು ನೋಡಿರಲಿಲ್ಲ, ನೋಡುವುದೆಲ್ಲಿ? ಊರಲ್ಲಿದ್ದರೆ ತಾನೇ ನೋಡುವುದು! ಮಿತ್ತಬೈಲಿನಲ್ಲಿ ಯಮುನಕ್ಕನ ಬಾಣಂತಣ ಮಾಡಲು ಹೋಗಿದ್ದಾಗ ನೋಡಿದ್ದ ಆ ಸುಂದರ ಯುವಕ ಇಂದು ಸ್ವಾತಂತ್ರ್ಯ ಹೋರಾಟದಲ್ಲಿ ಬಳಲಿ ಮುದುಕನಂತೆ ಕಾಣುತ್ತಿದ್ದಾನೆ. ಮುಖದಲ್ಲಿ ಮಾತ್ರ ರಾಜ ಸನ್ಯಾಸಿಯ ಕಲೆ ಎದ್ದು ಕಾಣುತ್ತಿತ್ತು.

ಪ್ರೀತಿಯಿಂದ ಅವರನ್ನು ಮನೆಗೆ ಕರೆದುಕೊಂಡು ಬಂದ ಆಚಕ್ಕ ಕುಡಿಯಲು ಮಜ್ಜಿಗೆ ಕೊಟ್ಟು ಸುಖದುಃಖ ಮಾತನಾಡುವಾಗ, ಸುಬ್ಬಯ್ಯಣ್ಣ ತ್ಯಾಂಪಣ್ಣನನ್ನೂ, ಮನೆಯ ಹುಡುಗರನ್ನೂ ವಿಚಾರಿಸಿದರು. ಎಲ್ಲರೂ ಹಿಂದಿನ ದಿನ ಅಂಬಿಲಡ್ಕದ ನೇಮಕ್ಕೆ ಹೋಗಿದ್ದಾರೆಂದು ಹೇಳುವಾಗ ಅವರ ಮಾತು ನಡುಗುತ್ತಿತ್ತು. ಸುಬ್ಬಯ್ಯಣ್ಣನಿಗೂ ತಿಳಿದಿತ್ತು, ಅವರು ಕಾಸರಗೋಡಿನ ರೈಲು ಹತ್ತಿದ್ದಾರೆಂದು. ನಿನ್ನೆಯಿಂದ ರಾಮಣ್ಣನ ಬೇಹುಗಾರರು ತ್ಯಾಂಪಣ್ಣನ ಮನೆಯವರ ಮೇಲೆ ಕಣ್ಣಿಟ್ಟಿದ್ದರು. ಹಾಗಾಗಿ ವಿಷಯವೆಲ್ಲ ಅವರಿಗೆ ತಿಳಿಯುತ್ತಿತ್ತು.

''ಅತ್ತೆ, ಯಮುನಕ್ಕ ಬಹಳ ಬೇಸರ ಮಾಡಿಕೊಂಡಿದ್ದಾರೆ. ಬಾರಬೈಲಿನಿಂದ ನಿನ್ನೆ ವಿಷು ಹಬ್ಬಕ್ಕೆ ಯಾರೂ ಬರಲಿಲ್ಲವೆಂದು ನೆನಪು ಮಾಡಿಕೊಳ್ಳುತ್ತಿದ್ದರು. ನಾವೆಲ್ಲ ಸಂಜೆ ತನಕ ಬರಬಹುದೂಂತ ಕಾಯುತ್ತಿದ್ದೆವು''.

''ಹೌದು ಮಗಾ, ಬರಬೇಕಾಗಿತ್ತು. ಏನೋ ಕೆಲಸ ಇದೇಂತ ಎಲ್ಲಿಗೋ



ಹೋದವರು ಅಂಬಿಲಡ್ಕಕ್ಕೆ ಹೋದರೂಂತ ಕಾಣುತ್ತದೆ. ಹಾಗಾಗಿ ಬರಲಿಕ್ಕೆ ಆಗಲಿಲ್ಲ. ಇನ್ನು ಹೇಗೂ ಆಯಿತು. ಎರಡು ದಿನದಲ್ಲಿ ಬರಬಹುದು''.

ಆಚಕ್ಕ ಹೇಳುವಾಗಲೇ ತಿಳಿಯುತ್ತಿತ್ತು. ಅವರು ಅವರ ಮನಸ್ಸಿನ ಸಮಾಧಾನಕ್ಕೆ ಆಡಿಕೊಳ್ಳುತ್ತಿರುವುದು ಎಂದು. ಸುಬ್ಬಯ್ಯಣ್ಣ ನಕ್ಕರು,

''ಅತ್ತೆ ಇರುವಾಗ ಏನೂ ಗಡಿಬಿಡಿ ಇಲ್ಲ, ಎರಡು ದಿನ ಕಳೆದೇ ಬರಲಿ. ಅಲ್ಲದೆ, ಬಾರಬೈಲಿನವರೇನೂ ಹೊರಗಿನವರಲ್ಲ, ನಮ್ಮವರೇ. ಅವರಲ್ಲಿ ಗೇಣಿ, ಗೇಣಿ ಚೀಟಿ ಎಲ್ಲ ಯಾಕೆ?'' ಎಂದು ನಾನು ಹೇಳಿದೆ. ಆದರೆ ನಿಮಗೆ ಗೊತ್ತಿದೆಯಲ್ಲ ಅತ್ತೆ, ನಮ್ಮ ಯಮುನಕ್ಕನ ಸ್ವಭಾವ''.

''ಹೌದು ಮಗಾ, ಆ ಬ್ಯಾರಿಗಳಿಗೋ, ಕೊಂಕಣಿಗಳಿಗೋ ಕೊಡುವುದಕ್ಕಿಂತ ನಿಮಗೆ ಕೊಡುವುದು ಒಳ್ಳೆಯದಲ್ಲವಾ ಎಂದು ನಾನೂ ಹೇಳಿದೆ. ಬೆಳೆ ಆಗದಿದ್ದರೆ ನಮ್ಮವರೇ ಆದ ನಿಮ್ಮಲ್ಲಿ ಬಂದು ಹೇಳಲಿಕ್ಕೆ ನಾಚಿಕೆ ಯಾಕೆ ಪಟ್ಟುಕೊಳ್ಳಬೇಕು ಹೇಳು''.

''ಅತ್ತೇ, ತ್ಯಾಂಪಣ್ಣನನ್ನು ಮನೆಗೆ ಬಂದು ಯಮುನಕ್ಕನ ಕಾಲಿಗೆ ನಮಸ್ಕಾರ ಮಾಡಿ, ನನ್ನನ್ನು ಕಂಡು ಹೋಗಲು ಹೇಳಿಬಿಡಿ'' ಸುಬ್ಬಯ್ಯಣ್ಣ ಎದ್ದು ನಿಂತರು.

''ನಿಲ್ಲು ಮಗಾ, ಊಟ ಮಾಡಿ ಹೋಗು. ಅಪರೂಪಕ್ಕೆ ಬಂದಿದ್ದಿ. ಒಂದು ಕೋಳಿಯ ಸಮ್ಮಾನ ಆಗಿ ಹೋಗಬೇಕು ನೀನು'' ಆಚಕ್ಕ ಹೇಳಿದಾಗ, ಒಳಗಿಂದ ಬಂದ ತ್ಯಾಂಪಣ್ಣನ ಮಡದಿಯೂ ಊಟಕ್ಕೆ ಒತ್ತಾಯಿಸಿದರು. ಸುಬ್ಬಯ್ಯಣ್ಣ ಅಂಗಳ ಇಳಿದವರು ಹೇಳಿದರು.

''ಅತ್ತೇ, ನಿಮಗೆ ತಿಳಿದಿಲ್ಲವೆಂದು ತೋರುತ್ತದೆ. ಗಾಂಧೀಜಿಯ ಆಶ್ರಮಕ್ಕೆ ಹೋದ ಮೇಲೆ ನಾನು ಮಧು ಮಾಂಸ ಬಿಟ್ಟಿದ್ದೇನೆ. ಊಟವೇನಿದ್ದರೂ ತರಕಾರಿಯದ್ದೇ. ಅದಲ್ಲದೇ ಗಡಿ ಹಿಡಿದ ಮೇಲೆ ಸ್ನಾನ ಮಾಡಿಯೇ ಊಟ ಮಾಡಬೇಕು''.

''ಓ, ಹೌದಲ್ವಾ, ನೀನು ಗಡಿ ಹಿಡಿದ ಮೇಲೆ ಬಹಳ ನೇಮ ನಿಷ್ಠೆಯಿಂದ, ಕ್ರಮದಲ್ಲಿದ್ದಿಯಂತೆ ಎಂದು ಕೇಳಿದ್ದೇನೆ. ನಿನ್ನ ಮಾವ ಮಾಂಕರಾಲರಿಗೆ ಯಾವ ನಿಷ್ಠೆಯೂ ಇರಲಿಲ್ಲ''.

''ಅವರವರ ಧರ್ಮ, ಕರ್ಮ ಅವರವರ ತಲೆಯಲ್ಲಿ ಅತ್ತೆ. ಅವರ ಧರ್ಮ ಅವರಿಗೆ, ನನ್ನ ಕರ್ಮ ನನಗೆ, ಬರುತ್ತೇನೆ ಅತ್ತೆ''.

''ಆಯಿತು. ಹೋಗಿ ಬಾ ಮಗಾ. ಎಲ್ಲರೂ ಹೇಳುತ್ತಾರೆ ಸುಬ್ಬಯ್ಯಣ್ಣ ಗಾಂಧಿಯಂತೆ ಬದುಕುತ್ತಿದ್ದಾರೆಂದು. ಮಹಾಧರ್ಮಿಷ್ಠನೆಂದು. ಧರ್ಮವನ್ನು ಬಿಡದೆ ಎಲ್ಲರ ಮೇಲೂ ದಯೆ ತೋರಿಸಿ ಮಿತ್ತಬೈಲು ಊರನ್ನು ನ್ಯಾಯದಿಂದ ನೋಡಿಕೊ ಮಗಾ''.

ಆಚಕ್ಕ ಮನಸಾರೆ ಆಶೀರ್ವಾದ ಮಾಡಿ ಅಂಗಳದ ಕೊನೆಯವರೆಗೆ ಸುಬ್ಬಯ್ಯಣ್ಣನ ಜೊತೆ ನಡೆದರು. ಅವರು ಕಟ್ಟಪುಣಿ ದಾಟಿ ಹೊಳೆಗೆ ಇಳಿಯುವವರೆಗೆ ಅವರನ್ನೇ ನೋಡುತ್ತಿದ್ದವರು. ಚಾವಡಿಗೆ ಬಂದು ಬಾಗಿಲಿಗೊರಗಿ ನಿಂತಿದ್ದ ಸೊಸೆಯನ್ನು ನೋಡಿ ಹೇಳಿದರು,

''ರತ್ನಾ, ಈ ಸಂದರ್ಭದಲ್ಲಿ ನಿನಗೆ ಒಂದು ಮಾತು ಹೇಳುತ್ತೇನೆ. ಬಾರಬೈಲಿನ ಮನೆ ಉಳಿಯಬೇಕಾದರೆ ಅದು ಈ ಗಾಂಧಿ ಸುಬ್ಬಯನಿಂದ ಮಾತ್ರ ಸಾಧ್ಯ. ಇಲ್ಲದಿದ್ದರೆ ನಮಗೆ ಉಳಿಗಾಲವಿಲ್ಲ. ಇನ್ನೊಮ್ಮೆ ನಾವು ಹಿರಿಯರಾದ ಬೀರಣ್ಣ ಬಂಟರ ಕಾಲದಂತೆ ನಿರ್ನಾಮವಾಗಿ ಹೋಗಲೂಬಹುದು. ತ್ಯಾಂಪಣ್ಣನಿಗೆ ನೀನು ಸ್ವಲ್ಪ ಹೇಳು. ನಾವು ಬದುಕುವ ದಾರಿ ನೋಡುವ. ಹಾಲು ಕುಡಿದ ಮಗುವೇ ಬದುಕುವುದಿಲ್ಲ, ವಿಷ ಕುಡಿದವು ಬದುಕುತ್ತವೆಯೇ?''

ಅತ್ತೆ ಹೇಳಿದಾಗ, ರತ್ನಾಳಿಗೆ ಎದೆಯ ಮೇಲೆ ಒರಳು ಕಲ್ಲು ಎತ್ತಿ ಇಟ್ಟಂತಾಯಿತು. ಆದರೆ ಅವಳಿಗೆ ತನ್ನ ಗಂಡನಿಗೆ ಬುದ್ಧಿ ಹೇಳುವಷ್ಟು ಧೈರ್ಯವೂ ಇರಲಿಲ್ಲ, ಅಧಿಕಾರವೂ ಇರಲಿಲ್ಲ. ಅವಳು ಕಣ್ಣೊರೆಸಿಕೊಂಡು ಒಳಗೆ ಹೋದಳು.

ಸಂಜೆ ಕಾಸರಗೋಡಿನಿಂದ ಬಂದ ತ್ಯಾಂಪಣ್ಣನಿಗೆ ತಾಯಿ ಸುಬ್ಬಯಣ್ಣ ಬಂದಿದ್ದ ಸುದ್ದಿ ತಿಳಿಸಿದರು. ತ್ಯಾಂಪಣ್ಣ ಕೇಳಿದ,

''ಯಾಕೆ ಬಂದಿದ್ದ ಆ ಸನ್ಯಾಸಿ?''

''ವಿಷು ಹಬ್ಬದಂದು ಯಾಕೆ ಯಾರೂ ಬರಲಿಲ್ಲ ಎಂದು ಕೇಳಿದ. ಸುಬ್ಬಯ ಗಡಿ ಹಿಡಿದ ಮೇಲೆ ನಾವು ಯಾರೂ ಮಿತ್ತಬೈಲಿಗೆ ಹೋಗಲಿಲ್ಲ. ಅವನು ಬಹಳ ಸಮಾಧಾನ ದಿಂದ ಎಲ್ಲವನ್ನೂ ನೆನಪಿಸಿ ಹೋದ''.

''ಹೌದು, ಮಿತ್ತಬೈಲಿನ ಬೈಲಿನಲ್ಲಿ ಅವನ ಅಳಿಯ ದುಗ್ಗಪ್ಪ ಹೇಳಿದ್ದಾನಂತೆ, ಬಾರಬೈಲನ್ನು ಬಲಾತ್ಕಾರದಿಂದ ಸ್ವಾಧೀನ ಮಾಡಿಕೊಳ್ಳುತ್ತೇವೆ. ಪಾತ್ರೆ ಪಗಡವನ್ನು ಮನೆ ಯಿಂದ ಹೊರಗೆಸೆಯುತ್ತೇವೆ ಎಂದು. ನಾನೂ ಅವನಿಗೆ ಹೇಳಿ ಕಳುಹಿಸಿದ್ದೇನೆ''.

''ಏನೆಂದು ಹೇಳಿ ಕಳುಹಿಸಿದ್ದಿ ತ್ಯಾಂಪಣ್ಣ?''

''ಮಿತ್ತಬೈಲಿನ ನಾಯಿಗಳು ಬಾರಬೈಲಿನ ಕಟ್ಟಹುಣಿಗೆ ಕಾಲಿಟ್ಟರೆ ಅವರ ತಲೆ ಕಡಿದು ಎದುರಿನ ಬಾಕಿಮಾರು ಗದ್ದೆಯಲ್ಲಿ ಚೆಂಡಾಡಿಸುತ್ತೇನೆ ಎಂದು. ಧೈರ್ಯ ಇದ್ದ ಮಗ ಯಾರಾದರೂ ಇದ್ದರೆ ಬರಲಿ ಎಂದು ಹೇಳಿ ಕಳುಹಿಸಿದ್ದೇನೆ''.

''ರಾಮ ರಾಮಾ, ನೀನೇನು ನಿನ್ನ ಹೆಂಡತಿ ಮಕ್ಕಳು ಸುಖವಾಗಿ ಜೀವಿಸುವುದು ಬೇಡವೆಂದು ತೀರ್ಮಾನ ಮಾಡಿದ್ದಿಯಾ ತ್ಯಾಂಪಣ್ಣ?''

''ಅಮ್ಮಾ, ನೀವು, ರತ್ನಾ ಹಾಗೂ ಮಕ್ಕಳ ಜೊತೆ ನಾಳೆ ಬೆಳಗ್ಗೆ ಬಸ್ಸಿನಲ್ಲಿ ಪುತ್ತೂರಿಗೆ ಹೋಗಲು ವ್ಯವಸ್ಥೆ ಮಾಡಿದ್ದೇನೆ. ಅಲ್ಲಿಂದ ಉಪ್ಪಿನಂಗಡಿಗೆ ಹೋಗಿ ಅಲ್ಲಿ ನಿಮ್ಮ ಕುಟುಂಬದವರನ್ನೆಲ್ಲಾ ಕಂಡು ನಾಲ್ಕು ದಿನ ಕಳೆದು ಬನ್ನಿ''.

ತ್ಯಾಂಪಣ್ಣ ಅಂಗಳ ಇಳಿದ. ಗದ್ದೆಯ ಬಳಿ ಹೋಗಿ ಬರುವಾಗ ಕತ್ತಲಾಯಿತು. ಊಟ ಮುಗಿಸಿ ಎಲ್ಲರೂ ಸಾವಿನ ಮನೆಯಂತೆ ಮೌನವಾಗಿ ಮಲಗಿದರು. ಬೆಳಗ್ಗೆ ಎದ್ದು ಅಂಗಳಕ್ಕೆ ಬಂದಾಗ ಮಿತ್ತಬೈಲಿನ ದೆಯ್ಯು ಅಂಗಳದಲ್ಲಿದ್ದ.

''ಯಾರಲ್ಲೀ, ಈ ಮಿತ್ತಬೈಲಿನ ನಾಯಿಯನ್ನು ಅಂಗಳ ಹತ್ತಲು ಯಾರು ಬಿಟ್ಟದ್ದು?''



ತ್ಯಾಂಪಣ್ಣ ಗುಡುಗಿನಂತೆ ಸಿಡಿಯಲು ಪ್ರಾರಂಭಿಸಿದ. ದೆಯ್ಯು ಅಂಗಳದಲ್ಲಿ ಕುಕ್ಕರುಗಾಲಲ್ಲಿ ಕುಳಿತಿದ್ದವನು ಕೈಯಲ್ಲಿದ್ದ ತಲವಾರನ್ನು ನೆಲಕ್ಕೆ ಊರಿ ಎದ್ದು ನಿಂತ,

''ಬಾರಬೈಲಿನ ತ್ಯಾಂಪಣ್ಣ ಬಾರಗರೇ, ನೀವು ಇಂದು ಸೂರ್ಯ ಕಂತುವುದಕ್ಕೆ ಮೊದಲು ಗುತ್ತಿಗೆ ಬಂದು ಹಳೆ ಗೇಣಿ ಸಂದಾಯ ಮಾಡಿ, ಹೊಸ ಗೇಣಿ ಚೀಟಿಗೆ ಹೆಬ್ಬೆಟ್ಟು ಒತ್ತಿ ಭೂಮಿಯನ್ನು ಸಾಗುವಳಿಗೆ ವಹಿಸಿಕೊಳ್ಳಬಹುದಂತೆ. ತಪ್ಪಿದರೆ ಗದ್ದೆಯನ್ನು ಉಳಲು, ತೋಟಕ್ಕೆ ನೀರು ಹಾಯಿಸಲು ನಾವು ಬರುತ್ತೇವೆ ಎಂದು ಹೇಳಿ ಬರುವಂತೆ ಮಿತ್ತಬೈಲಿನ ಯಜಮಾನತಿಯ ಅಪ್ಪಣೆಯಾಗಿದೆ. ತಿಳಿಯಿತಲ್ಲಾ, ಬರುತ್ತೇನೆ ನಾನು. ಹಾಗೆಯೇ ನಿಮ್ಮ ನಾಯಿಗಳನ್ನು ಅಂಗಳದಲ್ಲೇ ದೂರ ನಿಲ್ಲಲು ಹೇಳಿ. ಒಮ್ಮೆ ಕಟ್ಟಹುಣಿಯತ್ತ ದೃಷ್ಟಿ ಹಾಯಿಸಿ ನೋಡಿ. ಅಲ್ಲಿ ನಮ್ಮ ಕೇರಿಯ ಯುವಕರು ನನ್ನನ್ನೂ ನಿಮ್ಮನ್ನೂ ಕಾಯುತ್ತಿದ್ದಾರೆ. ಅವರ ಕೈಯಲ್ಲಿರುವುದು ತಲವಾರು, ಬಾಳೆಯ ದಿಂಡಲ್ಲ. ಮತ್ತೆ ನಾನು ತಿನ್ನಲು ಅನ್ನಕ್ಕೂ ಗತಿ ಇಲ್ಲದ ನಿಮ್ಮ ಮೂಲದ ಬಾಕುಡರಂತೆ ಅಲ್ಲ. ತಿಳಿಯಿತೇ?''

ಕ್ಯಾಕರಿಸಿ ಬಾಯಲ್ಲಿದ್ದ ಎಲೆ ಅಡಿಕೆಯನ್ನು ಉಗುಳಿ ಹೋದ ದೆಯ್ಯುವನ್ನು ನೋಡಿ ತ್ಯಾಂಪಣ್ಣ ಕೋಪದಿಂದ ನಡುಗತೊಡಗಿದ. ಚಾವಡಿಗೆ ಹೋಗಿ ಪೆಠಾರಿಯಿಂದ ಕೋವಿ ಹೊರ ತೆಗೆದು ತಿರುಗಿ ತೋಟದತ್ತ ನೋಡಿದಾಗ ಕಟ್ಟಹುಣಿಯ ತುಂಬಾ ತಲೆಗಳು ಗೋಚರಿಸಿದವು. ಅವರು ಕೈಯಲ್ಲಿ ಕತ್ತಿ, ದೊಣ್ಣೆ ಹಿಡಿದುಕೊಂಡಿದ್ದುದನ್ನು ಕಂಡು ಕೋವಿ ಹಿಡಿದಿದ್ದ ತ್ಯಾಂಪಣ್ಣನ ಕೈ ಸಡಿಲವಾಯಿತು. ಸಮಯ ಇನ್ನೂ ಬಂದಿಲ್ಲ ಎಂದುಕೊಂಡ ಆತ.

ನಿತ್ಯ ಕರ್ಮಗಳನ್ನು ಮುಗಿಸಿದ ತ್ಯಾಂಪಣ್ಣ, ತಾಯಿ ಹಾಗೂ ಹೆಂಡತಿಯನ್ನು ಮಕ್ಕಳ ಜೊತೆ ಉಪ್ಪಿನಂಗಡಿಗೆ ಕಳುಹಿಸಿದನು. ಯುವಕರನ್ನು ಮತ್ತು ಕೆಲಸದ ಬಾಕುಡರನ್ನು ಅಂಗಳದ ಚಪ್ಪರದಡಿಯಲ್ಲಿ ಸೇರಿಸಿ ವಿಷಯವನ್ನೆಲ್ಲ ವಿವರಿಸಿ ಹೇಳಿದನು.

''ಮಿತ್ತಬೈಲಿನ ಯಮುನಾ ನಮ್ಮನ್ನು ಅವಳ ಒಕ್ಕಲು ಮಾಡಬೇಕೆಂದೇ ಈ ಭೂಮಿ ಯನ್ನು ಕೊಂಕಣಿಯವರಿಂದ ಖರೀದಿಸಿದ್ದಾಳೆ. ಬಾರಬೈಲಿನವರನ್ನು ಕ್ರಮೇಣ ಈ ಊರಿ ನಿಂದಲೇ ಓಡಿಸಬೇಕೆಂಬುದು ಅವಳ ಯೋಜನೆ. ನಮ್ಮ ಹಿರಿಯರು ಬಾಳಿ ಬದುಕಿದ ಬೈಲು ಈ ಬಾರಬೈಲು. ಮಜಲೋಡಿಯಿಂದ ಈ ಬೈಲಿಗೆ ಬೇಡಿಕೊಂಡು ಬಂದ ಮಕ್ಕಳು ಮಿತ್ತಬೈಲಿನವರು. ಹಾಗೆ ಬಂದ ಮಕ್ಕಳು ಇಡೀ ಊರನ್ನೇ ತಿಂದು ಹಾಕಿದರು. ಜೋಪಡಿ ಯಂತಿದ್ದ ಗುಡಿಸಲನ್ನು ಬೀಡು ಮಾಡಿದರು. ಊರು ಲೂಟಿ ಮಾಡಿದ ಹಣ, ಚಿನ್ನದಿಂದ ಮೆರೆದರು. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದ ನಮ್ಮ ಹಿರಿಯರನ್ನು ಅವರ ಹಿರಿಯರು ಕೊಂದು ಹಾಕಿದರು. ಅವರನ್ನು ಕಳ್ಳ, ಡಕಾಯಿತನೆಂದು ಅಪಪ್ರಚಾರ ಮಾಡಿದರು. ದೇಶದ ಹೆಸರು ಹೇಳಿಕೊಂಡು ಊರೂರು ತಿರುಗುತ್ತಿದ್ದ ಸುಬ್ಬಯ ಇಂದು ಬಹುದೊಡ್ಡ ಸ್ವಾತಂತ್ರ್ಯ ಹೋರಾಟಗಾರನಂತೆ ವೇಷ ಹಾಕಿದ್ದಾನೆ. ಮಾವನನ್ನು ಕೊಲ್ಲಿಸಿ ಬೆಕ್ಕು ಸನ್ಯಾಸಿಯಂತೆ ಗಾಂಧೀಜಿಯ ಆಶ್ರಮಕ್ಕೆ ಹೋದರೆ, ಪಾಪ ಕಳೆದು ಹೋಗುತ್ತದೆಯೇ?

ಅವನು ಭೂತದ ಗಡಿ ಹಿಡಿದನೆಂದು ನಾವು ಅವನ ಕಾಲಿಗೆ ಬೀಳಬೇಕೇ?''

''ಕಾಲಿಗೆ ಬೀಳುವುದಲ್ಲ, ಕಾಲು ಕಡಿಯಬೇಕು ಮಾವಾ''.

ಒಬ್ಬ ಅಳಿಯ ಮಧ್ಯೆ ಬಾಯಿ ಹಾಕಿದ.

''ನಾನೂ ಕಾಸರಗೋಡಿನ ದೊಡ್ಡ ವಕೀಲರಲ್ಲಿ ವಿಚಾರಿಸಿ ಬಂದಿದ್ದೇನೆ. ನಮ್ಮ ಕುಟುಂಬದ ಆಸ್ತಿಯನ್ನು ಮುಟ್ಟುಗೋಲು ಹಾಕುವ ಅಧಿಕಾರ ಕುಂಬಳೆಯ ಅರಸರಿಗೂ ಇಲ್ಲ, ಕಂಪನಿ ಸರಕಾರಕ್ಕೂ ಇಲ್ಲ, ನಮ್ಮ ಕುಟುಂಬಕ್ಕೆ ಭಾರೀ ದೊಡ್ಡ ಅನ್ಯಾಯ ಆಗಿದೆ ಯೆಂದು ಅವರ ಅಭಿಪ್ರಾಯ. ಅದಕ್ಕೆ ನ್ಯಾಯಾಲಯದಲ್ಲಿ ದಾವೆ ಹೂಡಿ ಎಲ್ಲರಿಗೂ ನೋಟಿಸ್ ಕಳುಹಿಸಿದ್ದಾರೆ. ಹಾಗಾಗಿ ಯಾರೂ ಗೇಣಿ, ಗೇಣಿ ಚೀಟಿಯ ಬಗ್ಗೆ ಏನೂ ಮಾತನಾಡುವಂತಿಲ್ಲ, ನಾನು ಅವರಿಗೆ ಗೇಣಿ ಕೊಡುವುದಿಲ್ಲವೆಂದು ತೀರ್ಮಾನಿಸಿದ್ದೇನೆ. ಮಿತ್ತಬೈಲಿನವರು ಎಲ್ಲಿಯಾದರೂ ಆಸ್ತಿ ಸ್ವಾಧೀನ ಮಾಡಿಕೊಳ್ಳಲು ಬಂದರೆ ನಾವೇನು ಬಳೆ ತೊಟ್ಟುಕೊಂಡು ಕುಳಿತಿಲ್ಲ ಎಂಬುದನ್ನು ತೋರಿಸಬೇಕು''.

''ಒಂದೋ ಬಾರಬೈಲಿನ ಘನತೆ, ಗೌರವವನ್ನು ಒತ್ತೆಯಿಟ್ಟು ಮಿತ್ತಬೈಲಿನ ಒಕ್ಕಲಿನವರಾಗಿ ಗುಲಾಮರಂತೆ ಬದುಕಬೇಕು. ಅದಕ್ಕೆ ತಯಾರಿದ್ದರೆ ಜಗಳವಿಲ್ಲದೆ ಸುಖದಲ್ಲಿ ಉಂಡು, ತಿಂದುಕೊಂಡು ಬದುಕಬಹುದು ನಮಗೆ. ಅಥವಾ ತಲೆ ಎತ್ತಿ ಗಂಡು ಮಕ್ಕಳಂತೆ ಬದುಕುವುದೇ ಎಂಬುದನ್ನು ನಾವಿಂದು ತೀರ್ಮಾನಿಸಬೇಕು''.

ತ್ಯಾಂಪಣ್ಣ ಅಷ್ಟು ಹೇಳುವಾಗ ಎಲ್ಲರೂ ಒಟ್ಟಾಗಿ ''ಗೇಣಿ ಕೊಡಬಾರದು, ಭೂಮಿ ಬಿಡಬಾರದು. ಮಿತ್ತಬೈಲಿನವರನ್ನು ಕತ್ತಿಯಿಂದಾದರೆ ಕತ್ತಿಯಿಂದ, ಕೋವಿಯಿಂದಾದರೆ ಕೋವಿಯಿಂದ ಎದುರಿಸಲು ನಾವು ಸಿದ್ಧ'' ಎಂದರು ಬಾಕುಡರ ಯುವಕರು.

''ಒಡೆಯಾ, ಇನ್ನು ನಮಗೆ ಸಹನೆಯಿಂದಿರಲು ಸಾಧ್ಯವಿಲ್ಲ. ಕಳೆದ ಒಂದು ವರ್ಷದಿಂದ ಈ ಮುಗೇರರನ್ನು ಎದುರಿಸಬೇಕು, ಅವರ ಅಹಂಕಾರವನ್ನು ಮುರಿಯಬೇಕು ಎನ್ನುವಾಗ ನೀವು, ಈಗ ಬೇಡ, ಸಮಯ ಬರಲಿ ಎನ್ನುತ್ತಿದ್ದಿರಿ. ಈಗ ಸಮಯ ಬಂದಿದೆ. ಇನ್ನು ನಮ್ಮನ್ನು ತಡೆಯಬೇಡಿ''.

ಎಲ್ಲರೂ ಒಟ್ಟು ಸೇರಿ ಗೇಣಿ ಕೊಡುವುದು ಬೇಡ, ನ್ಯಾಯಾಲಯದಲ್ಲೇ ನೋಡಿಕೊಳ್ಳೋಣ ಎಂದು ತೀರ್ಮಾನಿಸಿ, ತ್ಯಾಂಪಣ್ಣನನ್ನು ಕಾಸರಗೋಡಿನ ವಕೀಲರ ಬಳಿಗೆ ಕಳುಹಿಸಿದರು. ವಕೀಲರು ಪ್ರಕರಣವನ್ನು ನ್ಯಾಯಾಲಯಕ್ಕೆ ಹಾಕಿರುವುದಾಗಿ ತಿಳಿಸಿದರು.

★★★

ಮಿತ್ತಬೈಲಿನಲ್ಲಿ ಸುಬ್ಬಯಣ್ಣ ತಾಳ್ಮೆಯಿಂದಿರುವಂತೆ ಯಮುನಕ್ಕನಿಗೆ ಹೇಳಿ ಎಲ್ಲ ಯುವಕರಿಗೂ ಒಂದು ಮಾತನ್ನು ಸ್ಪಷ್ಟವಾಗಿ ಹೇಳಿದರು ''ಯಾರಾದರೂ ನ್ಯಾಯ ತಪ್ಪಿ ಹೋದಿರಿ ಎಂದಾದರೆ ನಾನು ಎದ್ದುಕೊಂಡು ನೇರ ಗಾಂಧಿ ಆಶ್ರಮಕ್ಕೆ ಹೋಗುವುದೆಂದು ತೀರ್ಮಾನಿಸಿದ್ದೇನೆ. ಏನಿದ್ದರೂ ಮಿತ್ತಬೈಲಿನ ಘನತೆಗೆ ಕುಂದು ಬಾರದಂತೆ ನಾನು



ನೋಡಿಕೊಳ್ಳುತ್ತೇನೆ. ಬಾರಬೈಲಿನವರಲ್ಲಿ ಮಾತನಾಡಿ ನಾನು ಇದನ್ನು ಮುಗಿಸುತ್ತೇನೆ'' ಎಂದು ಭರವಸೆ ಕೊಟ್ಟರು. ಯುವಕರಿಗೆ, ವಿಶೇಷವಾಗಿ ದುಗ್ಗಪ್ಪನಿಗೆ, ತನಗೆ ತಿಳಿಸದೆ ಈ ಬೈಲು ಇಳಿದು ಎಲ್ಲಿಗೂ ಹೋಗಬಾರದೆಂದು ಅಪ್ಪಣೆ ಮಾಡಿದರು.

ಯಮುನಕ್ಕನಲ್ಲಿ ಚರ್ಚಿಸಿದ ಸುಬ್ಬಯಣ್ಣ,ರಾಮಣ್ಣನನ್ನು ಕಾಸರಗೋಡಿಗೆ ಕಳುಹಿಸಿದರು. ತಮ್ಮ ಎಲ್ಲ ವ್ಯವಹಾರಗಳನ್ನು ನೋಡಿಕೊಳ್ಳುತ್ತಿರುವ ವಕೀಲರನ್ನು ಕರೆಸಿ, ಅವರಲ್ಲಿ ಒಕ್ಕಲೆಬ್ಬಿಸಲು ಬೇಕಾದ ಕಾನೂನು ವ್ಯವಸ್ಥೆಯ ಬಗ್ಗೆ ಚರ್ಚಿಸುವುದೆಂದು ತೀರ್ಮಾನಿಸಿದರು. ಹಿಂದೆಯೂ ಒಕ್ಕಲೆಬ್ಬಿಸುವ ಪ್ರಕರಣವನ್ನು ಅವರೇ ನೋಡಿಕೊಳ್ಳುತ್ತಿದ್ದುದು.

ಮರುದಿನ ಬೆಳಗ್ಗೆ ವಕೀಲರು ಚಾವಡಿಯಲ್ಲಿ ಕುಳಿತು ಮಾತನಾಡುತ್ತಿರುವಾಗ ಕಾಸರಗೋಡಿನಿಂದ ಬಾರಬೈಲಿನ ವಕೀಲರ ಗುಮಾಸ್ತ ಬಂದು, ವಕೀಲರ ನೋಟಿಸೊಂದನ್ನು ಕೊಟ್ಟು ಹೋದನು. ಸುಬ್ಬಯಣ್ಣ ಅದನ್ನು ತೆಗೆದುಕೊಂಡು ತಮ್ಮ ವಕೀಲರ ಕೈಗೆ ಕೊಟ್ಟು ಓದಿ ವಿವರಿಸುವಂತೆ ಹೇಳಿದರು. ಎರಡೆರಡು ಸಲ ಅದನ್ನು ಓದಿದ ವಕೀಲರು ಎಲ್ಲರ ಮುಖ ನೋಡಿದರು.

''ಏನು ವಕೀಲರೇ, ಏನು ಬರೆದಿದೆ ಕಾಗದದಲ್ಲಿ?''

''ಇದು ಬರೀ ಕಾಗದ ಅಲ್ಲ ಸುಬ್ಬಯಣ್ಣ, ಇದು ಬಾರಬೈಲ್‍ನ ಅಚಕ್ಕ ಮತ್ತು ಅವರ ವಾರಸುದಾರರು, ಮಿತ್ತಬೈಲಿನ ಯಮುನಕ್ಕ ಮತ್ತು ಅವರ ವಾರಸುದಾರರಿಗೆ ಕೊಟ್ಟ ನೋಟೀಸು''

''ಏನು ನೋಟೀಸು ಕೊಟ್ಟಿದ್ದಾರೆ ತಾಯಿ ಮಗ, ವಕೀಲರೇ?''

''ಬಾರಬೈಲಿನ ಆಸ್ತಿಯ ಹಕ್ಕನ್ನು ಈ ತನಕ ಅನುಭವಿಸಿಕೊಂಡು ಬಂದ ಭಕ್ತರ ಮಠ, ಭಂಡಾರ ಮಠ, ನೂರು ವರ್ಷಗಳ ಹಿಂದೆ ಅದನ್ನು ಸ್ವಾಧೀನ ಮಾಡಿಕೊಂಡ ಸರಕಾರ, ಈಗ ಅದನ್ನು ಖರೀದಿಸಿದ ಮಿತ್ತಬೈಲಿನ ಯಮುನಕ್ಕ ಮತ್ತು ಅವರ ವಾರುಸುದಾರರಿಗೆಲ್ಲ ಈ ನೋಟಿಸು ಹೋಗಿದೆ''.

ರಾಮಣ್ಣ, ದುಗ್ಗಪ್ಪ, ಕಿನ್ಯನ, ಮಾಬಲ ಹಾಗೂ ಅಲ್ಲಿದ್ದ ಎಲ್ಲ ಯುವಕರೂ ಚಾವಡಿಯ ಬದಿಗೆ ಬಂದರು. ಎಲ್ಲರಿಗೂ ವಕೀಲರ ಮಾತು ಕೇಳಿ ಆಶ್ಚರ್ಯವಾಯಿತು. ಎಲ್ಲರೂ ವಕೀಲರು ಮುಂದೆ ಏನು ಹೇಳುತ್ತಾರೆ ಎಂದು ಕಿವಿಯಾನಿಸಿ ಕಾಯತೊಡಗಿದರು. ಯಮುನಕ್ಕ ಕೇಳಿದರು,

''ಈ ನೋಟಿಸಿನ ಬಗ್ಗೆ ನಮಗೆಲ್ಲರಿಗೂ ಅರ್ಥವಾಗುವಂತೆ ವಿವರಿಸಿ ಹೇಳುತ್ತೀರಾ? ಹಾಗೆಯೇ, ಇದಕ್ಕೆ ನಾವು ಮುಂದೆ ಏನು ಮಾಡಬೇಕು ಎಂಬುದನ್ನೂ ತಿಳಿಸಿ''.

''ಅಮ್ಮಾ, ಇದು ಮಂಗಳೂರಿನ ಹೆಸರಾಂತ ವಕೀಲ ಸಂಜೀವ ರಾಯರು ಕೊಡಿಸಿದ ನೋಟಿಸು. ಕಾನೂನು ಪ್ರಕಾರ ನೂರು ವರ್ಷದ ಹಿಂದೆ ಸರಕಾರ ಬಾರಬೈಲು ಕುಟುಂಬದ ಆಸ್ತಿಯನ್ನು ಸ್ವಾಧೀನಪಡಿಸಿಕೊಂಡು ಏಲಂ ಮಾಡಿರುವುದು ತಪ್ಪು,

ಕುಟುಂಬದ ಒಬ್ಬ ಸದಸ್ಯನಾಗಿದ್ದ ಬೀರಣ್ಣ ಬಂಟ ಸರಕಾರದ ವಿರುದ್ಧ ದಂಗೆ ಎಬ್ಬಿಸಿದನೆಂದು ಇಡೀ ಕುಟುಂಬದ ಆಸ್ತಿಯನ್ನು ವಶಪಡಿಸಿಕೊಂಡು ಏಲಂ ಮಾಡಿರುವುದು ಅಕ್ರಮ. ಅದು ಅನ್ಯಾಯ. ಈ ಆಸ್ತಿಯನ್ನು ಏಲಂನಲ್ಲಿ ಪಡೆದುಕೊಂಡು ಭಕ್ತರ ಮಠ ಹಾಗೂ ಭಂಡಾರ ಮಠದವರೂ ತಪ್ಪು ಮಾಡಿದ್ದಾರೆ. ಅವರು ಅದರಿಂದ ಗೇಣಿ ಅನುಭವಿಸಿದುದೂ ತಪ್ಪು. ಅವರು ಈ ತನಕ ವಸೂಲು ಮಾಡಿರುವ ಗೇಣಿಯನ್ನು ಬಡ್ಡಿ ಸಹಿತ ಬಾರಬೈಲು ಕುಟುಂಬಕ್ಕೆ ಹಿಂದಿರುಗಿಸಬೇಕು. ಹೀಗೆ ಅಕ್ರಮವಾಗಿ ಪಡೆದುಕೊಂಡ ಆಸ್ತಿಯನ್ನು ಮಾರುವುದರ ಮೂಲಕ ಪರಭಾರೆ ಮಾಡಿರುವುದು ಮಠದವರ ತಪ್ಪು. ಬಾರಬೈಲು ಕುಟುಂಬದವರಿಂದ ಅಕ್ರಮವಾಗಿ ವಸೂಲು ಮಾಡಿದ ಗೇಣಿಯನ್ನು ಮಿತ್ತಬೈಲಿನ ಯಮುನಕ್ಕ ಹಿಂದಿರುಗಿಸಬೇಕು. ಅಕ್ರಮವಾಗಿ ಆಸ್ತಿಯನ್ನು ಸ್ವಾಧೀನ ಮಾಡಿಕೊಂಡು ಏಲಂ ಮಾಡಿದ ಸರಕಾರ, ಭಕ್ತರ ಮಠ, ಭಂಡಾರ ಮಠ, ಮಿತ್ತಬೈಲಿನ ಯಮುನಕ್ಕ ಎಲ್ಲರೂ ಬಾರಬೈಲು ಕುಟುಂಬಕ್ಕೆ ಮಾಡಿದ ಅನ್ಯಾಯ, ಕಷ್ಟ ನಷ್ಟಗಳಿಗೆ ಪರಿಹಾರ ಕೊಡಬೇಕು''.

ವಕೀಲರು ವಿವರಿಸಿ ಯಮುನಕ್ಕನ ಮುಖ ನೋಡಿದರು. ಚಾವಡಿಯ ಜಗಲಿಯಲ್ಲಿ ಕುಳಿತಿದ್ದ ಯುವಕರೆಲ್ಲ ಎದ್ದು ನಿಂತರು. ಸುಬ್ಬಯಣ್ಣ ಅವರನ್ನೆಲ್ಲ ಮಾತನಾಡದೆ ಅಲ್ಲಿಯೇ ಕುಳಿತುಕೊಳ್ಳುವಂತೆ ಹೇಳಿ, ಯಮುನಕ್ಕನತ್ತ ನೋಡಿದರು. ಮೌನವಾಗಿ ಕುಳಿತಿದ್ದ ಯಮುನಕ್ಕ ವಕೀಲರಲ್ಲಿ ಕೇಳಿದರು,

''ಈ ನೋಟಿಸಿನಲ್ಲಿ ಸರಿ ಎಷ್ಟು? ತಪ್ಪು ಎಷ್ಟು? ಕಾನೂನು ಎಷ್ಟು? ಅಧಿಕ ಪ್ರಸಂಗ ಎಷ್ಟು ವಕೀಲರೇ?''

''ಕಾನೂನಿನ ಬಗ್ಗೆ ಹೀಗೆಯೇ ಎಂದು ಹೇಳಲು ನನ್ನಿಂದ ಸಾಧ್ಯವಿಲ್ಲ. ಇಷ್ಟು ವರ್ಷಗಳ ನಂತರ ಇದನ್ನು ಕೇಳಬಹುದೇ? ಬಹಳಷ್ಟು ವರ್ಷಗಳು ಕಳೆಯಲಿಲ್ಲವೇ? ಈ ತನಕ ಇವರು ಇದನ್ನು ಯಾಕೆ ಕೇಳಲಿಲ್ಲ? ಎಂಬುದು ಈ ಚಿಕ್ಕ ವಕೀಲನ ತಲೆಯಲ್ಲಿ ಹೊಳೆದ ಯೋಚನೆಗಳು. ಇದಕ್ಕಿಂತ ಹೆಚ್ಚು ನನ್ನಿಂದೇನೂ ಹೇಳಲಿಕ್ಕಾಗದು''.

''ಈಗ ನಿಮಗೆ ತಿಳಿದುದಷ್ಟನ್ನು ಹೇಳಿ ವಕೀಲರೇ?''

''ಅಮ್ಮಾ, ಬಾರಬೈಲಿನವರು ಹೇಳುವುದರಲ್ಲಿ ಅರ್ಥ ಇದೆ. ನೂರು ವರ್ಷಗಳ ಹಿಂದಿನ ಆ ದಂಗೆ, ಡಕಾಯಿತಿಗಳನ್ನು ಈಗ ಮೊದಲ ಸ್ವಾತಂತ್ರ್ಯ ಹೋರಾಟವೆಂದು ಹೇಳುತ್ತಿದ್ದಾರೆ. ನ್ಯಾಯಾಲಯವೂ ಆಗ ನಡೆದ ಲೂಟಿ – ಕೊಲೆಗಳ ಘಟನೆಗಳನ್ನು ಬೇರೆಯೇ ದೃಷ್ಟಿಯಿಂದ ನೋಡಲಿಕ್ಕೂ ಸಾಧ್ಯವಿದೆ. ಅಲ್ಲದೆ ಈ ಸಿವಿಲ್ ಕೇಸು ಇಂದು – ನಾಳೆ ಮುಗಿಯುವಂತಹದಲ್ಲ, ಇದು ಈಗ ಮಂಗಳೂರು ನ್ಯಾಯಾಲಯದಿಂದ ಮದ್ರಾಸು ನ್ಯಾಯಾಲಯಕ್ಕೆ ಹೋಗಬಹುದು. ಅಲ್ಲಿಂದ ದೆಹಲಿಗೆ ಹೋಗಬಹುದು ಅಥವಾ ಪ್ರಿವಿ ಕೌನ್ಸಿಲ್‌ಗೆ ಹೋಗಲೂಬಹುದು. ಕೇಸು ಮುಗಿಯುವಾಗ ಒಂದು ಮೂವತ್ತು ವರ್ಷಗಳಾದರೂ ಕಳೆಯಬಹುದು. ಆಗ ಎಂತೆಂಥ ಹೊಸ ಹೊಸ ಕಾನೂನುಗಳು ಬರುತ್ತವೋ



ಏನೋ?''

''ನಿಮ್ಮ ಅಭಿಪ್ರಾಯದಂತೆ ತ್ಯಾಂಪಣ್ಣನೂ, ಅವನ ವಕೀಲ ಸಂಜೀವ ರಾಯರೂ ನಮಗೆ ಚಳ್ಳೆಹಣ್ಣು ತಿನ್ನಿಸಿದರು ಅಲ್ಲವೇ?''

ದುಗ್ಗಪ್ಪ ಕೋಪದಿಂದ ಹೇಳಿದಾಗ ಎಲ್ಲರೂ ಅವನನ್ನೇ ನೋಡಿದರು.

''ಅಮ್ಮಾ, ಈ ಕೇಸಿನಲ್ಲಿ ನಮಗೊಂದು ದೊಡ್ಡ ಹಿನ್ನಡೆಯೆಂದರೆ ಭೂಮಿ ಅವರ ಸ್ವಾಧೀನದಲ್ಲಿರುವುದು. ಭೂಮಿ ನಮ್ಮ ಸ್ವಾಧೀನ ಇರುತ್ತಿದ್ದರೆ ಕಥೆಯೇ ಬೇರೆ ಇತ್ತು''.

''ಸ್ವಲ್ಪ ಬಿಡಿಸಿ ಹೇಳಿ ವಕೀಲರೇ, ಭೂಮಿ ನಮ್ಮ ಸ್ವಾಧೀನ ಇರುತ್ತಿದ್ದರೆ ಏನಾಗುತಿತ್ತು'' ದುಗ್ಗಪ್ಪ ಕೇಳಿದ.

''ಆಸ್ತಿ ಅವರ ವಶ ಇರುವುದರಿಂದ ಈ ಕೇಸು ಮುಗಿಯುವವರೆಗೆ ಇದರ ಹುಟ್ಟುವಳಿಯನ್ನು ಅನುಭವಿಸುವವರು ಅವರೇ ಅಲ್ಲವೇ? ನಮ್ಮ ಸ್ವಾಧೀನ ಇರುತ್ತಿದ್ದರೆ ಅವರ ಬದಲಿಗೆ ನಾವು ಅನುಭವಿಸುತ್ತಿದ್ದೆವು. ಕಾನೂನಿನಲ್ಲಿ ಮುಕ್ಕಾಲಂಶ, ಆಸ್ತಿ ಸ್ವಾಧೀನ ಇದ್ದವನೇ ಗೆಲ್ಲುತ್ತಾನೆಂದು ಲೆಕ್ಕ. ಅಲ್ಲದೆ, ಅದರಲ್ಲಿ ಈಗ ಬಾರಬೈಲಿನವರ ಮನೆ, ಸಂಸಾರ ಇದೆ. ಇದೆಲ್ಲ ಅವರ ಪರವಾದ ಸಾಕ್ಷಿ ನೋಡಿ. ಅಲ್ಲಿ ಮನೆ ಇಲ್ಲದೆ ಇರುತ್ತಿದ್ದರೆ, ಆಸ್ತಿ ಅವರ ಸ್ವಾಧೀನ ಇಲ್ಲದೆ ಇರುತ್ತಿದ್ದರೆ ಅದರ ಸಂಗತಿಯೇ ಬೇರೆಯಿತ್ತು''.

ವಕೀಲರು ಹೇಳಿದ್ದನ್ನೆಲ್ಲಾ ಆಲಿಸಿದ ಯಮುನಕ್ಕ ಬಹಳ ಹೊತ್ತು ಯೋಚನೆ ಮಾಡಿ ಹೇಳಿದರು,

''ಸುಬ್ಬಯ, ನೀನೂ ರಾಮಣ್ಣನೂ ಮಂಗಳೂರಿಗೆ ಹೋಗಿ ದೊಡ್ಡ ವಕೀಲರನ್ನು ಕಾಣಬೇಕು. ಹೋಗುವಾಗ ನಮ್ಮ ವಕೀಲರನ್ನೂ ಕರೆದುಕೊಂಡು ಹೋಗಿ. ಹೌದಾ ವಕೀಲರೇ, ನೋಟಿಸಿಗೆ ನಾವು ಕೊಡುವ ಉತ್ತರದಲ್ಲಿ ಅದು ನಮ್ಮ ಆಸ್ತಿ, ನಮ್ಮ ಸ್ವಾಧೀನದಲ್ಲಿಯೇ ಇದೆ ಎಂದು ಹೇಳಿದರೆ ಏನಾಗಬಹುದು?''

''ಯಮುನಕ್ಕ, ನಿನ್ನ ಯೋಚನೆ ಏನೆಂದು ಹೇಳುತ್ತಿಯಾ?'' ಸುಬ್ಬಯಣ್ಣ ಕೇಳಿದರು.

''ಯೋಚನೆ ಎಂತದ್ದು? ಕಾನೂನು ಪ್ರಕಾರ ಮಠದವರು ಆಸ್ತಿಯನ್ನು ನಮ್ಮ ಸ್ವಾಧೀನ ಕೊಟ್ಟಿದ್ದಾರೆಂದು ಹೇಳಿದರೆ ಏನಾಗುತ್ತದೆಂದು ಕೇಳಿದೆ. ನೀನು ಯಾಕೆ ಅದಕ್ಕೆ ಬೆಚ್ಚಿ ಬೀಳುವುದು?''

''ಆಸ್ತಿ ನಮ್ಮ ಸ್ವಾಧೀನ ಇದ್ದರೆ ಕೇಸು ಮುಕ್ಕಾಲಂಶ ನಮ್ಮ ಕಡೆಗೆಂದು ಹೇಳಬಹುದು. ಆದರೆ, ನ್ಯಾಯಾಲಯ ಕಮಿಶನ್ ನೇಮಕ ಮಾಡಿ ಆ ಆಸ್ತಿಯನ್ನೆಲ್ಲ ತನಿಖೆ ಮಾಡಲು ಆದೇಶ ಹೊರಡಿಸಬಹುದು''.

''ಹೌದಾ. ವಕೀಲರೇ, ಕಮಿಶನ್‌ನಲ್ಲಿರುವವರೂ ಮನುಷ್ಯರೇ ಅಲ್ಲವೇ? ದೇವರಲ್ಲವಲ್ಲಾ, ಒಂದು ವೇಳೆ ದೇವರೇ ಆದರೂ ಇಂದಿನ ಕಾಲದಲ್ಲಿ ಅವರಿಗೂ ಒಂದು ಹತ್ತು ಕಲಶದ ಪೂಜೆಯೋ, ಹತ್ತು ತೆಂಗಿನಕಾಯಿಯ ಹೋಮವೋ ಏನಾದರೂ ಮಾಡಿಸಿದರೆ ಅವರೂ ನಮ್ಮ ಕಡೆ ಬರುತ್ತಾರೆ. ಇನ್ನು ನಿಮ್ಮ ಕಮಿಶನ್ ಯಾವ ಲೆಕ್ಕ ಹೇಳಿ!''

‘‘ಯಮುನಕ್ಕಾ, ನಿನ್ನ ತಲೆಯಲ್ಲಿ ಯಾವ ಭೂತ ಹೊಕ್ಕಿದೆ? ನೀನಿನ್ನು ಏನಾದರೂ ಹೊಸ ಹಗರಣ ಪ್ರಾರಂಭಿಸಿ ಬಿಡಬೇಡ. ಕಾನೂನಿನಲ್ಲಿ ಹೇಗಿದೆಯೋ ಹಾಗೆಯೇ ಆಗಲಿ. ನ್ಯಾಯ ಯಾರ ಕಡೆಗಿದೆಯೋ ಅವರು ಜಯಿಸಲಿ. ಅನ್ಯಾಯದ ಆಸ್ತಿ, ಸಂಪತ್ತು ಮಿತ್ತಬೈಲು ಕುಟುಂಬಕ್ಕೆ ಬೇಡವೇ ಬೇಡ’’.

‘‘ಸುಬ್ಬಯ, ನೀನು ಯಾವ ನ್ಯಾಯದ ಮಾತನ್ನು ಆಡುತ್ತಿದ್ದಿ? ಮಿತ್ತಬೈಲಿನ ಚಿನ್ನಾಭರಣಗಳನ್ನು ಕದ್ದೊಯ್ದು ಪೆಠಾರಿ ಖಾಲಿ ಮಾಡಿ, ಬಾರಬೈಲಿನವರನ್ನೂ, ಕಜೆಕೋಡಿ ಯವರನ್ನೂ ಸಾಕಿರುವುದು ನ್ಯಾಯವೆಂದು ಹೇಳುವೆಯಾ? ಅಲ್ಲ, ಮಿತ್ತಬೈಲಿನ ಹಿರಿಯವ ಮನೆ ಲೂಟಿ ಮಾಡಿ ಇಟ್ಟುಕೊಂಡವಳನ್ನು ಸಾಕಿದ್ದು ನ್ಯಾಯವೆಂದೇ? ಅಥವಾ ಹೆಣ್ಣು ಮಕ್ಕಳನ್ನು ಬಲಾತ್ಕಾರ ಮಾಡಿ, ಊರು ಲೂಟಿ ಮಾಡಿ ಬಾರಬೈಲಿನ ಪೆಠಾರಿಯಲ್ಲಿಟ್ಟ ಬೀರಣ್ಣ ಬಂಟನ ನ್ಯಾಯವನ್ನು ಹೇಳುತ್ತಿದ್ದೀಯಾ? ಅಲ್ಲ, ಗಂಜಿ ನೀರಿಗೂ ಗತಿಯಿಲ್ಲ ದಿರುವಾಗ ಬಾರಬೈಲಿನ ವಿಷದ ಹಾವಿನ ಮರಿಗಳನ್ನು ಸಾಕಿದ ಸಂಕಮಕ್ಕನ ಅನ್ಯಾಯವನ್ನು ಹೇಳುತ್ತಿದ್ದೀಯಾ? ತಿಂದು, ಉಂಡು ಬೆಳೆದ ಮನೆಯ ಪಟೇಲತನವನ್ನು ಮನೆಯವರಿಗೆ ಸಿಗುವುದನ್ನು ತಪ್ಪಿಸಿ ಯಾರ್‍ಯಾರಿಗೋ ಮಾಡಿಸಿ ಕೊಡಲು ಹೊರಟವರ ನ್ಯಾಯವನ್ನು ಹೇಳುತ್ತಿದ್ದೀಯಾ? ಯಾವ ನ್ಯಾಯವನ್ನು ಹೇಳುತ್ತಿದ್ದಿ ಸುಬ್ಬಯ? ಹೇಳು! ಒಂದು ಮಾತು ನೆನಪಿನಲ್ಲಿಟ್ಟುಕೋ, ಬಾರಬೈಲಿನ ವಿಷ ಸರ್ಪದ ಮರಿಗಳು ಈ ಊರಲ್ಲಿ ಇರುವ ತನಕ ಮಿತ್ತಬೈಲಿಗೆ ಅಪಾಯ ತಪ್ಪಿದ್ದಲ್ಲ. ಕಾನೂನು ರೀತಿಯಲ್ಲೇ ಆ ಕೆಟ್ಟ ಜಂತುಗಳ ವಿಷವನ್ನು ತೆಗೆಯಲು ನೀನು ಪ್ರಯತ್ನಿಸು. ಮಿಕ್ಕುದ್ದನ್ನು ನಾನು ಮಲರಾಯನ ಗುಂಡಕ್ಕೆ ಒಪ್ಪಿಸುತ್ತೇನೆ. ಆತ ನೋಡಿಕೊಳ್ಳಲಿ’’.

ಯಮುನಕ್ಕ ಅಷ್ಟು ಹೇಳಿದಾಗ ಯುವಕರೆಲ್ಲ ಒಮ್ಮೆಲೇ ಎದ್ದು ನಿಂತರು,

‘‘ಮಾವ, ಈ ಸಲ ಎರಡರಲ್ಲಿ ಒಂದು ಆಗಲೇಬೇಕು. ಒಂದೋ ಈ ಊರಿನಲ್ಲಿ ನಾವಿರಬೇಕು ಅಥವಾ ಬಾರಬೈಲಿನವರಿರಬೇಕು. ನಾವು ಮಿತ್ತಬೈಲು ಬಿಟ್ಟು ಹೋಗಲು ತಯಾರಿಲ್ಲ. ನೀವು ಏನೇ ಹೇಳಿ, ಏನೇ ಮಾಡಿ ಆದರೆ ನಾವು, ದೊಡ್ಡಮ್ಮನ ಜೊತೆ ಮಿತ್ತಬೈಲಿಗೆ ಬೇಕಾಗಿ ಪ್ರಾಣ ಕೊಡಲಿಕ್ಕೂ ತಯಾರಾಗಿದ್ದೇವೆ. ನಮಗೆ ಮಿತ್ತಬೈಲು ಉಳಿಯಬೇಕು’’.

ಯುವಕರೆಲ್ಲ ಒಟ್ಟಾಗಿ ಸುಬ್ಬಯಣ್ಣನಿಗೆ ವಿರುದ್ಧವೆಂಬಂತೆ ಮಾತನಾಡಿದರು. ಸುಬ್ಬಯಣ್ಣ ಸ್ವಲ್ಪ ಮೆತ್ತಗಾದರು. ಅವರಿಗೆ ಯುವಕರ ಕೋಪ ಅರ್ಥವಾಗಿತ್ತು.

‘‘ನ್ಯಾಯದಲ್ಲಿ ಏನು ಮಾಡುವುದಾದರೂ ನಾನು ನಿಮ್ಮ ಜೊತೆಗಿದ್ದೇನೆ. ಅನ್ಯಾಯ, ಹಿಂಸೆಗೆ ನನ್ನ ವಿರೋಧವಿದೆ. ಏನಿದ್ದರೂ ನಾವು ಅದನ್ನು ಒಳ್ಳೆಯ ರೀತಿಯಲ್ಲಿ, ಅಹಿಂಸೆಯ ದಾರಿಯಲ್ಲಿ, ನ್ಯಾಯದಲ್ಲಿ ಮುಗಿಸಲು ಪ್ರಯತ್ನಿಸೋಣ. ನಮ್ಮ ಹಿರಿಯರು ನ್ಯಾಯ, ಧರ್ಮದಲ್ಲಿ ನಡೆದವರು. ಮಿತ್ತಬೈಲು ಮನೆ, ಕಾನೂನಿನ ರಕ್ಷಣೆ ಮಾಡುವ ಪಟೇಲರ ಮನೆ ಎಂಬುದನ್ನು ಮರೆಯಬೇಡಿ. ಮಿತ್ತಬೈಲಿನ ಮಾನ ಮರ್ಯಾದೆಗಾಗಿ



ನಿಮ್ಮಂತೆಯೇ ನಾನೂ ನನ್ನ ಪ್ರಾಣವನ್ನು ಒತ್ತೆ ಇಡಲು ತಯಾರಿದ್ದೇನೆ’’.

ಸುಬ್ಬಯಣ್ಣ ಅಷ್ಟು ಹೇಳಿ ಎದ್ದು ನಿಂತು ಚಾವಡಿಯಲ್ಲಿ ನಿಂತಿದ್ದ ಯುವಕರ ಬೆನ್ನು ತಟ್ಟಿದರು.

‘‘ಯಜಮಾನ್ತಿಯಮ್ಮಾ, ನಾಳೆ ಬೆಳಗ್ಗೆ ನೀವೂ ಒಮ್ಮೆ ಮಂಗಳೂರಿಗೆ ವಕೀಲರಲ್ಲಿಗೆ ಬಂದರೆ ಒಳ್ಳೆಯದಿತ್ತು. ಹೆಗ್ಡೆ ವಕೀಲರನ್ನು ಕಾಣೋಣ. ಅವರು ನಿಮ್ಮ ಮಿತ್ತಬೈಲಿನವರ ಬಂಧು. ನಿಮಗೆ ಒಳ್ಳೆಯ ಪರಿಚಿತರಾದುದರಿಂದ ನೀವೇ ಬಂದು ಹೇಳಿದರೆ ಚೆನ್ನಾಗಿತ್ತು’’.

ವಕೀಲರು ಹೇಳಿದಾಗ ಎಲ್ಲರೂ ಒಪ್ಪಿ, ಮರುದಿನ ಬೆಳಗ್ಗಿನ ಬಸ್ಸಿನಲ್ಲಿ ಮಂಜೇಶ್ವರಕ್ಕೆ ಹೋಗಿ, ಮಂಗಳೂರಿಗೆ ಹೋಗುವುದೆಂದು ತೀರ್ಮಾನಿಸಿದರು. ರಾಮಣ್ಣನೂ, ಯಮುನಕ್ಕನೂ ಅಂದೇ ಮಂಜೇಶ್ವರಕ್ಕೆ ಹೋಗಿ ಭಂಡಾರ ಮಠದ ಭಂಡಾರಿಗಳಿಗೆ ವಿಷಯವನ್ನೆಲ್ಲ ವಿವರಿಸಿದರು. ರಾಮಣ್ಣ ಅಲ್ಲಿಂದ ಮಂಗಳೂರಿಗೆ ಹೋಗಿ ಯಮುನಕ್ಕನಿಗೆ ಉಳಿದುಕೊಳ್ಳಲು ಎಂಕಣ್ಣನ ಬಿಡಾರದಲ್ಲಿ ವ್ಯವಸ್ಥೆ ಮಾಡಿ, ಹೆಗ್ಡೆ ವಕೀಲರನ್ನು ಕಂಡು ಯಮುನಕ್ಕ ಬರುವ ಸುದ್ದಿಯನ್ನು ಮುಟ್ಟಿಸಿದನು.

ಮಂಜೇಶ್ವರದಲ್ಲಿ ಭಂಡಾರಿಗಳೂ, ಯಮುನಕ್ಕನೂ ಮಾತುಕತೆ ನಡೆಸಿ, ಭಂಡಾರಿ ಯವರಿಗೆ ಬಂದ ನೋಟಿಸನ್ನೂ ಹಿಡಿದುಕೊಂಡು ಮರುದಿನ ಬೆಳಗ್ಗೆ ಮಂಗಳೂರಿಗೆ ಹೋದರು. ಮಂಗಳೂರಿನಲ್ಲಿ ಒಂದು ದಿನ ಉಳಿದು, ಹೆಗ್ಡೆ ವಕೀಲರಲ್ಲಿ ಎಲ್ಲಾ ವಿಷಯಗಳನ್ನು ಚರ್ಚಿಸಿದ ಯಮುನಕ್ಕ, ಮಿತ್ತಬೈಲಿನ ಕೇಸನ್ನು ಅವರಿಗೆ ಒಪ್ಪಿಸಿದರು. ‘‘ಈ ಕೇಸನ್ನು ಎಲ್ಲಿವರೆಗೆ ಬೇಕಾದರೂ ಕೊಂಡು ಹೋಗಿ, ಆದರೆ, ತೀರ್ಪು ಮಾತ್ರ ಮಿತ್ತಬೈಲಿನ ಪರ ಆಗುವಂತೆ ಮಾಡಬೇಕು’’ ಎಂದು ಹೇಳಿದಾಗ, ಹೆಗ್ಡೆ ವಕೀಲರು ಒಂದು ಮಾತು ಹೇಳಿದರು,

‘‘ಅತ್ತೇ, ಬಂಟರ ಸಮಾಜದಲ್ಲಿ ಮಿತ್ತಬೈಲು ಯಮುನಕ್ಕ ಎಂದರೆ ರಾಣಿ ಅಬ್ಬಕ್ಕನಿಗೆ ಸಮಾನ. ಹಾಗಾಗಿ ನೀವು ನಿಮ್ಮ ಗೌರವವನ್ನು ಉಳಿಸಿಕೊಳ್ಳಬೇಕು. ಆಸ್ತಿ ನಿಮ್ಮ ಸ್ವಾಧೀನ ಇರುತ್ತಿದ್ದರೆ ನೀವು ಇಲ್ಲಿಯವರೆಗೆ ಬರುವ ಅಗತ್ಯವೇ ಇರಲಿಲ್ಲ. ನಾನು ನಿಮ್ಮ ಹುಡುಗರನ್ನು ಕರೆಸಿ ಈ ಕೇಸು ಮುಗಿಸುತ್ತಿದ್ದೆ. ಈಗ ನೀವು ತಾಳ್ಮೆಯಿಂದಿರಬೇಕು’’.

ಸುಬ್ಬಯಣ್ಣನೂ, ರಾಮಣ್ಣನೂ ನ್ಯಾಯಾಲಯಕ್ಕೆ ಬೇಕಾದ ದಾಖಲೆಗಳನ್ನು ಸಿದ್ಧಪಡಿಸಲು ಎರಡು ದಿನ ಮಂಗಳೂರಿನಲ್ಲೇ ಉಳಿದರು. ಯಮುನಕ್ಕ ಭಂಡಾರಿಗಳ ಜೊತೆ ಮಂಜೇಶ್ವರಕ್ಕೆ ಹೊರಟರು. ಮಂಜೇಶ್ವರದಿಂದ ಯಮುನಕ್ಕನನ್ನು ಮಿತ್ತಬೈಲಿಗೆ ಕಳುಹಿಸಿದ ಭಂಡಾರಿಗಳು, ರೆಕಾರ್ಡುಗಳನ್ನೆಲ್ಲ ತೆಗೆದುಕೊಂಡು ಎರಡು ಮೂರು ದಿನಗಳ ಮಟ್ಟಿಗೆ ಮತ್ತೆ ಮಂಗಳೂರಿಗೆ ಹೋದರು. ಮಿತ್ತಬೈಲಿಗೆ ಬಂದ ಯಮುನಕ್ಕ ನ್ಯಾಯಾಲಯಕ್ಕೆ ಬೇಕಾದ ಕಾಗದ ಪತ್ರಗಳನ್ನು ತೆಗೆದಿಡುವ ಕೆಲಸದಲ್ಲಿ ತೊಡಗಿದರು. ಆದರೆ ಅವರ ತಲೆಯಲ್ಲಿ ವಕೀಲರು ಹೇಳಿದ ಆ ಒಂದು ಮಾತು ತಿರುಗುತ್ತಲೇ ಇತ್ತು.

‘‘ಆಸ್ತಿ ಸ್ವಾಧೀನ ಇದ್ದವರು ಮುಕ್ಕಾಲು ಪಾಲು ಕೇಸು ಜಯಿಸಿದಂತೆಯೇ!’’.

# ೧೮

# ಆಟ ಮುಗಿಯಿತು

ಬೋಳಂಗಳದ ಪದವಿನ ಕೆಳಗೆ ಕಾಡು ಇಳಿದು ನಡೆದರೆ ಬಟ್ಟಲಿನಂತಿರುವ ಭೂಮಿ ಬಾರಬೈಲು. ಮಿತ್ತಬೈಲಿನ ಹೊಳೆಯಿಂದಲೇ ಅರ್ಧಮೈಲು ಕೆಳಗೆ ಬಂದರೆ ಒಂದು ಚಿಕ್ಕ ಕಣಿವೆ. ಕಟ್ಟಹುಣಿ ಹತ್ತಿ ಬೆಟ್ಟು ಗದ್ದೆಯ ಹುಣಿಯಲ್ಲೇ ಬಂದರೆ ಬೈಲು ಗದ್ದೆ. ಅದನ್ನು ದಾಟಿದರೆ, ಒಂದು ಸುಂದರವಾದ ತೋಟ. ತೆಂಗು, ಕಂಗಿನ ಆ ತೋಟದಲ್ಲಿ ಹತ್ತು ಖಂಡಿ ಅಡಿಕೆ, ನಾಲ್ಕೈದು ಸಾವಿರ ತೆಂಗಿನಕಾಯಿಗಳ ಉತ್ಪತ್ತಿ. ಆ ತೋಟದ ತುಂಬಾ ಹಸಿರು ತುಂಬಿ ತುಳುಕುವುದನ್ನು ನೋಡುವುದೇ ಕಣ್ಣಿಗೆ ಹಬ್ಬ. ಎಂತಹ ಕೃಷಿಕನಿಗೂ ಅದನ್ನು ನೋಡಿದರೆ ಅಸೂಯೆಯಾಗಬೇಕು. ಕದಳಿ, ಮೈಸೂರು, ಬೂದಿ, ಗಾಳಿ ಬಾಳೆ ಗಿಡಗಳಲ್ಲಿ ಗೊನೆಗಳನ್ನು ನೋಡುವುದೇ ಒಂದು ಹಬ್ಬ. ಇಡೀ ತೋಟಕ್ಕೆ, ಗದ್ದೆಗೆ ಬೋಳಂಗಳದ ಹಳ್ಳ ಹಾಗೂ ಕಾಡಿನಿಂದ ಹರಿದು ಬರುವ ಒಸರಿನ ನೀರು. ಬಾರಬೈಲಿನ ಕಾಡಿನಲ್ಲಿದ್ದ ಕೆರೆಯಲ್ಲಿ ಎಂದೂ ನೀರು ಕಡಿಮೆಯಾದುದಿಲ್ಲ.

ಬಾರಬೈಲಿನ ಮನೆಯನ್ನು ಕುಟುಂಬದ ಹಿರಿಯ ಬೀರಣ್ಣ



ಬಂಟನ ಕಾಲದಲ್ಲಿ ಸರಕಾರ ಧ್ವಂಸಗೊಳಿಸಿತ್ತು. ಬೀರಣ್ಣ ಬಂಟನ ಕಾಲಾನಂತರ ಅವನ ತಾಯಿ, ತಂಗಿಯರು ಒಕ್ಕಲಿನ ಚಿಕ್ಕ ಗುಡಿಸಲಲ್ಲಿ, ಸಂಕಮಕ್ಕನ ದಯೆಯಿಂದ ಕೂಲಿ ನಾಲಿ ಮಾಡಿ, ಸೊಪ್ಪು, ಹುಲ್ಲು ತಂದು ಜೀವನ ಸಾಗಿಸುತ್ತಿದ್ದರು. ಕೆಲವರು ಗಟ್ಟಕ್ಕೆ ಓಡಿದ್ದರು. ಇನ್ನು ಕೆಲವರು ಉಪ್ಪಿನಂಗಡಿಯ ಭಟ್ಟರಲ್ಲಿ ಪರಿಚಯ ಹೇಳದೆ ದುಡಿಯುತ್ತಿದ್ದರು. ಭಟ್ಟರ ತೋಟದಲ್ಲಿ ದುಡಿಯುತ್ತಿದ್ದವರು ಕ್ರಮೇಣ ಅವರ ಒಕ್ಕಲುಗಳಾಗಿ ಅವರ ಭೂಮಿ ಯಲ್ಲಿಯೇ ಗುಡಿಸಲು ಕಟ್ಟಿಕೊಂಡು ಉಳಿದರು.

ಬೀರಣ್ಣ ಬಂಟನ ತಾಯಿ, ತಂಗಿಯರನ್ನು ಸಂಕಮಕ್ಕ ಸಾಕಿದರು. ಸಂಕಮ್ಮಕ್ಕನ ದಯೆಯಿಂದಲೇ ಅವರು ಬದುಕಿದರು ಎಂದು ಹೇಳಬಹುದು. ಒಬ್ಬಳು ಹೆಣ್ಣು ಮಗಳು ಮಳೆಗಾಲದಲ್ಲಿ ಬಂದ ಒಂದು ನೆರೆಯಲ್ಲಿ ಹೊಳೆಗೆ ಬಿದ್ದು ನೀರು ಪಾಲಾದಳು. ಆದರೆ, ಆ ಹೆಣ್ಣುಮಗಳು ಹೊಳೆಗೆ ಬಿದ್ದು ಸತ್ತುದಲ್ಲ, ಮಿತ್ತಬೈಲಿನ ಯುವಕರು ಯಾರೋ ಅವಳಿಗೆ ಬಸಿರು ಮಾಡಿ ಹೊಳೆಗೆ ದೂಡಿದುದೆಂದು ಕೆಲವರು ಹೇಳುತ್ತಿದ್ದರು. ಇನ್ನು ಕೆಲವರು, ಅವಳು ಹೆದರಿ ಹೊಳೆಗೆ ಹಾರಿದ್ದು, ಅವಳ ಹೆಣ ಕೂಡಾ ನೋಡಲು ಸಿಗಲಿಲ್ಲ ಎಂದು ಆಡಿಕೊಳ್ಳುತ್ತಿದ್ದರು. ಆದರೆ ಬಾರಬೈಲಿನ ಆ ಕುಟುಂಬ ಮಾತ್ರ ಎಷ್ಟು ತಲೆಮಾರು ಕಳೆದರೂ ಆ ಹೆಣ್ಣಿನ ಸಾವನ್ನು ಮರೆಯಲಿಲ್ಲ.

ಬದುಕುಳಿದ ಬಾರಬೈಲಿನವರು ಒಕ್ಕಲಿನ ಆ ಗುಡಿಸಲಲ್ಲೇ ಬದುಕಿ, ಕ್ರಮೇಣ ಆ ಗುಡಿಸಲನ್ನೇ ದೊಡ್ಡದು ಮಾಡಿ ಅಲ್ಲೇ ಜೀವಿಸಿದರು. ಆಚಕ್ಕನ ಕಾಲದಲ್ಲಿ ಮಾಂಕರಾಲರ ದಯೆಯಿಂದ ಬಾರಬೈಲು ಅಭಿವೃದ್ಧಿ ಹೊಂದಿತು. ಮಾಂಕರಾಲರ ಸಹಾಯ, ಮಕ್ಕಳು ಮರಿಗಳ ದುಡಿತದಿಂದಾಗಿ ಭೂಮಿಗೆ ಜೀವಕಳೆ ಬಂತು.

ಆಚಕ್ಕನ ಮಗ ತ್ಯಾಂಪಣ್ಣ ಬೇಸಾಯ ಮಾಡುವುದರಲ್ಲಿ ಬಹಳ ನಿಪುಣ. ಬಾರಬೈಲಿನ ಮನೆಯನ್ನು ವಿಸ್ತರಿಸಿ, ಅದರಲ್ಲೊಂದು ಚಾವಡಿ ಕಟ್ಟಿಸಿದ. ಸುತ್ತಮುತ್ತಲಿನ ಆಸ್ತಿಗಳನ್ನು ಗೇಣಿಗೆ ಪಡೆದುಕೊಂಡು, ಕ್ರಮೇಣ ಅವುಗಳನ್ನು ಖರೀದಿಸಿದ. ಮಾಂಕರಾಲರ ಸಹಾಯದಿಂದ ಭಕ್ತರ ಮಠದ, ಭಂಡಾರ ಮಠದ ಆಸ್ತಿಗಳನ್ನು ಗೇಣಿಗೆ ಪಡೆದುಕೊಂಡ. ಅನಂತರದ ದಿನಗಳಲ್ಲಿ ಬೋಳಂಗಳದ ಆನೆಕಲ್ಲಿನ ಪೇಟೆಯಲ್ಲಿ ಅವನೂ ಒಬ್ಬ ಗಣ್ಯ ವ್ಯಕ್ತಿಯಾದ.

ಮೊದಮೊದಲು ಮಾಂಕರಾಲರ ಬಲಗೈ ಬಂಟನಾಗಿದ್ದ ತ್ಯಾಂಪಣ್ಣ, ಮಾಂಕರಾಲರು ಅವನ ತಾಯಿಯನ್ನು ಇಟ್ಟುಕೊಂಡಿದ್ದಾರೆ ಎಂದು ಮಿತ್ತಬೈಲಿನವರು ಹೇಳಿಕೊಂಡು ತಿರುಗತೊಡಗಿದಾಗ, ಅವರ ನಗು, ಹಾಸ್ಯ, ವ್ಯಂಗ್ಯ ಸಹಿಸಲಾರದೆ ತಾಯಿಯಲ್ಲಿ ಮಾಂಕರಾಲರನ್ನು ದೂರ ಇರಿಸುವಂತೆ ಹೇಳಿದ್ದ. ಹೀಗೆ ದೂರವಾಗಿದ್ದ ಅವರ ಸಂಬಂಧ ಮತ್ತೊಮ್ಮೆ ಹತ್ತಿರವಾಯಿತು. ಅದಕ್ಕೆ ಕಾರಣ ತ್ಯಾಂಪಣ್ಣ ಕಜೆಕೋಡಿಯ ಮಾಂಕರಾಲರ ಹೆಂಡತಿಯ ಅಕ್ಕನ ಮಗಳನ್ನು ಮದುವೆಯಾದುದು. ಆಗ ತ್ಯಾಂಪಣ್ಣ, ಕಜೆಕೋಡಿಯವರಿಗೆ ಹೇಳುವ, ಕೇಳುವ ಒಬ್ಬ ತುಂಡು ಯಜಮಾನನೇ ಆದ. ಕೂಟಗಳಲ್ಲಿ, ಪಂಚಾಯತಿಕೆಯ ಕಳಗಳಲ್ಲಿ

ಬಾರಬೈಲಿನವರು ಮತ್ತು ಕಜೆಕೋಡಿಯವರು ಒಂದಾದರು. ಹಾಗಾಗಿಯೇ ಮಾಂಕರಾಲರ ಜಗಳದಲ್ಲಿ ಬಾರಬೈಲು ಹಾಗೂ ಕಜೆಕೋಡಿಯವರು ಒಂದಾಗಿ ಅವರ ಸಹಾಯಕ್ಕೆ ನಿಂತುದು.

ತ್ಯಾಂಪಣ್ಣ ಕಾಸರಗೋಡಿನಿಂದ ಬಂದವನು ಕಜೆಕೋಡಿಗೆ ಹೋಗಿ ಕಜೆಕೋಡಿಯ ಯುವಕರಿಗೆ ನಡೆದುದನ್ನೆಲ್ಲ ವಿವರಿಸಿ ಅವರ ಸಹಾಯ ಕೇಳಿದನು. ಜಗಳ, ಪೆಟ್ಟು ಸಂಭವಿಸಬಹುದು, ಇದಕ್ಕೆ ತಮ್ಮೆಲ್ಲರ ಸಹಕಾರ ಬೇಕು ಎಂದು ಕೇಳಿಕೊಂಡಾಗ ಅವರು ಕೂಡಲೇ ಬಾರಬೈಲಿಗೆ ಬರಲು ಒಪ್ಪಿಕೊಂಡರು.

ಕಜೆಕೋಡಿಯಿಂದ ಆನೆಕಲ್ಲಿಗೆ ಬಂದ ತ್ಯಾಂಪಣ್ಣ ಬ್ಯಾರಿಯ ಭಂಡಸಾಲೆಯಿಂದ ಕೆಲವು ತಲವಾರು, ಕಬ್ಬಿಣದ ಸನಿಕೆ, ಗುದ್ದಲಿಗಳನ್ನು ಖರೀದಿಸಿದನು. ಬ್ಯಾರಿ ಕೇಳಿದರು,

"ಏನು ತ್ಯಾಂಪಣ್ಣನವರೇ, ಏನಾದರೂ ಕಾಡಿಗೆ ಹಂದಿ ಬೇಟೆಗೆ ಹೊರಡ ಬೇಕೆಂದಿದ್ದೀರಾ? ಅಲ್ಲ, ಯಾರಲ್ಲಾದರೂ ಜಗಳಕ್ಕೆ ತಯಾರಿ ಮಾಡಿಕೊಳ್ಳುತ್ತಿದ್ದೀರಾ?"

"ಏನಿಲ್ಲ, ಕಾಲ ಬದಲಾಗಿದೆ ನೋಡಿ! ಊರೆಲ್ಲ ಕಳ್ಳರ ಹಾವಳಿ ಶುರುವಾಗಿದೆ. ಹಾಗಾಗಿ ಕೆಲವು ತಲವಾರುಗಳು ಇರಲಿ ಎಂದು. ಸನಿಕೆ, ಗುದ್ದಲಿಗಳು ಕಾಡಿನ ಕೆರೆಯನ್ನು ಸ್ವಲ್ಪ ಅಗಲ ಮಾಡಬೇಕೆಂದಿದ್ದೇನೆ ಅಷ್ಟೇ".

"ಹೌದೌದು, ಕಳ್ಳರ ಕಾಟ ಬಹಳ ಜಾಸ್ತಿಯಾಗಿದೆ. ಮೊನ್ನೆ ಕನ್ಯಾನದಲ್ಲಿ ಒಂದೇ ರಾತ್ರಿಯಲ್ಲಿ ಒಂದು ಮನೆಯ ಇಡೀ ಅಂಗಳವನ್ನೇ ಗುಡಿಸಿಕೊಂಡು ಹೋಗಿದ್ದಾರಂತೆ! ಸುಮಾರು ನಾಲ್ಕೈದು ಖಂಡಿಯಷ್ಟು ಅಡಿಕೆಯನ್ನೂ ಹೊತ್ತೊಯ್ದಿದ್ದಾರಂತೆ!"

ಬ್ಯಾರಿ ಎಲ್ಲವನ್ನೂ ಕಟ್ಟಿ ಕೆಲಸದವನಲ್ಲಿ ಕಳುಹಿಸಿಕೊಟ್ಟರು. ತ್ಯಾಂಪಣ್ಣ ಕಲ್ಲಡ್ಕದತ್ತ ಹೋದನು. ಕೆಲ ಹೊತ್ತು ಕಳೆದು ಬಿಸಿಲು ಆರುವಾಗ ಯಮುನಕ್ಕ ಮಂಜೇಶ್ವರದಿಂದ ಬಂದು ಇಳಿದರು. ಛತ್ರಕ್ಕೆ ಬಂದ ಯಮುನಕ್ಕನಲ್ಲಿ ಬ್ಯಾರಿ, ಬಾಯಾರಿಕೆಗೆ ಏನಾದರೂ ಕಳುಹಿಸಬೇಕೇ ಎಂದು ಕೇಳಿದಾಗ ಯಮುನಕ್ಕ ಕೇಳಿದರು,

"ಅಲ್ಲಿ ಯಾರೋ ಒಂದು ತಲವಾರು, ಗುದ್ದಲಿಗಳ ಕಟ್ಟು ಹೊತ್ತುಕೊಂಡು ಹೋಗುತ್ತಿದ್ದರಲ್ಲ, ಯಾರದು? ಎಲ್ಲಿಗೆ ಕೊಂಡು ಹೋದದ್ದು?"

"ಅದು ತ್ಯಾಂಪಣ್ಣ ಶೆಟ್ಟರ ಮನೆಗೆ. ಅವರು ಈಗ ಬಂದು ಖರೀದಿಸಿ ಕಳುಹಿಸಿದುದು".

"ಇಲ್ಲಿಂದ ಎಲ್ಲಿಗೆ ಹೋದ. ಕಲ್ಲಡ್ಕಕ್ಕೆ ಹೋದನೇ?"

"ಹೌದು ಅಮ್ಮ, ನಿಮಗೆ ಹೇಗೆ ಗೊತ್ತಾಯಿತು? ಅವರು ಯಾರೋ ಬ್ರಾಹ್ಮಣ ರಲ್ಲಿಗೆ ಪೂಜೆಗೆ ಹೇಳಲೆಂದು ಹೋದರು".

"ಪೂಜೆ! ಅವನ ಅಮ್ಮನ ಸಾವಿನ ಪೂಜೆ. ಅವನು ಹೋದುದು ಕಲ್ಲಡ್ಕದ ಆಚಾರಿಯ ಬಳಿ ಕಳ್ಳ ಕೋವಿ ಕೊಂಡುಕೊಳ್ಳಲು. ಅದು ಬಿಡಿ, ಎಷ್ಟು ತಲವಾರು ಕೊಂಡು ಹೋದ?"



"ಹತ್ತು ತಲವಾರು, ಎರಡು ಸನಿಕೆ, ಎರಡು ಗುದ್ದಲಿ ಕೊಂಡು ಹೋದರು".

"ಗುದ್ದಲಿ, ಸನಿಕೆ ಯಾಕೆ, ಅವನ ಅಮ್ಮನನ್ನು ಹೂಳಲಿಕ್ಕಾ? ಕೇಳಿತೇ ದುಗ್ಗಪ್ಪಾ, ಕಜೆಕೋಡಿಯ ನಾಯಿಗಳು ಬಾರಬೈಲಿನ ಕಾವಲು ಕಾಯಲು ಬರುತ್ತವೆಂದು ಕಾಣುತ್ತದೆ" ಎಂದು ದುಗ್ಗಪ್ಪನಿಗೆ ಹೇಳಿ, ಬ್ಯಾರಿಯಲ್ಲಿ ಕೇಳಿದರು,

"ಈಗ ನಿಮ್ಮಲ್ಲಿ ತಲವಾರು, ಹಾರೆ, ಗುದ್ದಲಿ, ಸನಿಕೆ ಎಷ್ಟಿದೆ?"

"ಏನು ನಡೆಯುತ್ತಿದೆ ಅಮ್ಮಾ ಅಲ್ಲಿ? ನೀವೂ ತಲವಾರು ಕೇಳುತ್ತಿದ್ದೀರಲ್ಲಾ?"

"ನಿಮಗ್ಯಾಕೆ ಅಧಿಕ ಪ್ರಸಂಗ? ನೀವು ಈಗಲೇ ಹತ್ತು ಗುದ್ದಲಿ, ಹತ್ತು ಹಾರೆ, ಹತ್ತು ಸನಿಕೆ ಹಾಗೂ ಇಲ್ಲಿದ್ದ ಎಲ್ಲ ತಲವಾರುಗಳನ್ನು ಸೂರ್ಯ ಮುಳುಗುವುದರೊಳಗೆ ಕಳುಹಿಸಿ ಕೊಡಿ. ವಿಷಯ ಯಾರಿಗೂ ತಿಳಿಯದಂತೆ ನೋಡಿಕೊಳ್ಳಿ. ಯಾರಾದರೂ ಕೇಳಿದರೆ ತ್ಯಾಂಪಣ್ಣನಿಗೆಂದು ಹೇಳಿ. ತಿಳಿಯಿತೇ?"

ಯಮುನಕ್ಕ, ದುಗ್ಗಪ್ಪನನ್ನು ಮಂಜೇಶ್ವರಕ್ಕೆ ಕಳುಹಿಸಿ ಎರಡು ಕಳ್ಳ ಕೋವಿ, ನೂರು ತೋಟೆಗಳನ್ನು ತರಿಸಿದರು. ಕೆಲಸದವರು ತಂದ ದಂಡಿಗೆಯಲ್ಲಿ ಕುಳಿತು ಮನೆಗೆ ಹೊರಡುವಾಗ ಬ್ಯಾರಿ ಪುತ್ತೂರಿಗೆ ಹೊರಟರು. ಅವರಿಗೆ ಸಂಜೆಯೊಳಗೆ ತಲವಾರು, ಹಾರೆ, ಗುದ್ದಲಿ, ಸನಿಕೆ ತರಿಸಿ ಕೊಡಬೇಕು. ಇಲ್ಲದಿದ್ದರೆ ನಾಳೆ ಭಂಡಸಾಲೆಯೇ ಖಾಲಿ ಮಾಡಿ ಊರು ಬಿಡಬೇಕಾದೀತು.

ಸೂರ್ಯ ಮುಳುಗಿ ಘಳಿಗೆಯಾಗುವಾಗಲೇ ಮಿತ್ತಬೈಲಿನ ಯುವಕರು, ಕೆಲಸ ದವರು, ಕೇರಿಯ ಮುಗೇರರು, ಮಜಲೋಡಿಯ ಯುವಕರು ಬಂದು ಮಿತ್ತಬೈಲಿನ ಅಂಗಳದಲ್ಲಿ ಸೇರಿದರು. ಅವರು ಸುಮಾರು ನಲ್ವತ್ತು ಜನರಿದ್ದರು. ಮಧ್ಯರಾತ್ರಿಯವರೆಗೆ ಮಾತನಾಡುತ್ತಾ ಕುಳಿತಿದ್ದವರಿಗೆ ಸ್ವತಃ ಯಮುನಕ್ಕನೇ ನಿಂತು ಪ್ರತಿಯೊಬ್ಬನಿಗೂ ಏನೇನು ಮಾಡಬೇಕೆಂದು ವಿವರಿಸಿದರು. ಕೋವಿ ಹಿಡಿದುಕೊಂಡಿರುವ ಮಜಲೋಡಿಯ ಯುವಕರು, ಮಿತ್ತಬೈಲಿನ ಕಿನ್ನನ, ಮಾಬಲ ಎಲ್ಲ ಒಮ್ಮೆಲೇ ಒಟ್ಟಿಗೆ ಗುಂಡು ಹಾರಿಸಬೇಕು. ಅನಂತರವೇ ಮಿಕ್ಕವರು ಬಾರಬೈಲಿನ ಅಂಗಳಕ್ಕೆ ಇಳಿಯಬೇಕು. ತಲವಾರಿನವರ ಹಿಂದಿನಿಂದ ಗುದ್ದಲಿ, ಸನಿಕೆ ಹಿಡಿದಿದ್ದವರು ಹೋಗಬೇಕು. ಎಲ್ಲ ಆದ ಮೇಲೆ ಹಾರೆಯ ಕೆಲಸ. ಯಮುನಕ್ಕ ಈ ರೀತಿ ವಿವರಿಸುವಾಗ ಮಂಜಣಾಳ್ವರೇನಾದರೂ ಇದ್ದಿದ್ದರೆ ತಾನು ಹೇಗೆ ಯುದ್ಧದ ಸಿದ್ಧತೆ ಮಾಡುತ್ತಿದ್ದೇನೆಂಬುದನ್ನು ನೆನೆಯುತ್ತಿದ್ದರೇನೋ! ಅವರು ಯಾವುದೇ ಜಗಳ, ಯುದ್ಧಗಳಿಗೆ ಹೊರಡುವಾಗ ಚಿಕ್ಕಪುಟ್ಟ ವಿಷಯಗಳನ್ನೂ ಸಹ ತನ್ನ ಸೈನಿಕರಿಗೆ ವಿವರಿಸಿ ಹೇಳುತ್ತಿದ್ದರಂತೆ. ಯಮುನಕ್ಕ, ಪ್ರತಿಯೊಬ್ಬನಿಗೂ ಯಾವ ಹೊತ್ತಿನಲ್ಲಿ ಎಲ್ಲಿರಬೇಕು. ಏನು ಮಾಡಬೇಕು ಎಂಬುದನ್ನು ವಿವರಿಸಿ, ಬಂದು ಗುಂಡದ ಮಲರಾಯ ನಿಗೆ ಕೈ ಮುಗಿದರು. ಬೆಟ್ಟು ಗದ್ದೆಯಲ್ಲಿ ಒಟ್ಟಾಗಿದ್ದ ಯುವಕರಲ್ಲಿ ಇಪ್ಪತ್ತು ಮಂದಿ ಮೂಲದ ಮುಗೇರರು, ಹತ್ತು ಮಂದಿ ಒಕ್ಕಲಿನ ಮರಾಠಿಗಳು, ಬ್ಯಾರಿಗಳು, ಬೆಳ್ಚಡರ ಯುವಕರು, ಮನೆಯ ಹಾಗೂ ಮಜಲೋಡಿಯ ಯುವಕರಿದ್ದರು.

ಯಮುನಕ್ಕ ಉದ್ದೇಶಪೂರ್ವಕವಾಗಿಯೇ ಮಗ ಪಟೇಲ ರಾಮಣ್ಣನನ್ನೂ, ತಮ್ಮ ಸುಬ್ಬಯಣ್ಣನನ್ನೂ ಕೇಸಿಗೆ ಸಂಬಂಧಪಟ್ಟ ತಯಾರಿ ನಡೆಸಲು ಅಲ್ಲೇ ಇರುವಂತೆ ಹೇಳಿ, ಬಿಟ್ಟು ಬಂದಿದ್ದರು. ಅವರು ಇಲ್ಲಿರುತ್ತಿದ್ದರೆ ಈ ದೊಂಬಿಯ ಸಿದ್ಧತೆಗೆ ಆಸ್ಪದವೇ ಇರುತ್ತಿರಲಿಲ್ಲ. ಇಬ್ಬರೂ ಈ ರೀತಿಯ ದೊಂಬಿ, ಹಿಂಸೆಯನ್ನು ವಿರೋಧಿಸುತ್ತಿದ್ದರು. ಒಬ್ಬ ಸರಕಾರದ ಕಾನೂನಿನ ರಕ್ಷಕ, ಮತ್ತೊಬ್ಬ ಗಾಂಧೀಜಿಯ ಪರಮ ಶಿಷ್ಯ. ಅವರಿರುವಾಗ ಈ ಕತ್ತಿ – ಕೋವಿಯ ಜಗಳ ಸಾಧ್ಯವೇ ಇರುತ್ತಿರಲಿಲ್ಲ.

ಬೆಟ್ಟು ಗದ್ದೆಯಲ್ಲಿ ಎಲ್ಲರಿಗೂ ಶೇಂದಿ, ಕೋಳಿ ಮಾಂಸದ ಊಟವಾಯಿತು. ಊಟ ಮುಗಿಸಿದ ದುಗ್ಗಪ್ಪ, ಕಿನ್ಯನ, ಮಾಬಲ, ಮಜಲೋಡಿಯ ಚಿಕ್ಕ ಕಾಂತಪ್ಪ, ಕುಂಟ ರಾಮ ಹಾಗೂ ಬಾಡು ನಾರಾಯಣ ಬಂದು ಮಲರಾಯನ ಗುಂಡಕ್ಕೆ ಅಡ್ಡ ಬಿದ್ದು ಚಾವಡಿಯ ಕಂಬಕ್ಕೊರಗಿ ಕುಳಿತಿದ್ದ ಯಮುನಕ್ಕನ ಕಾಲು ಮುಟ್ಟಿ  ನಮಸ್ಕರಿಸಿದರು. ಕುಳಿತಲ್ಲೇ ಮಂಪರು ನಿದ್ದೆಯಲ್ಲಿದ್ದ ಯಮುನಕ್ಕನಿಗೆ ಎಚ್ಚರವಾಯಿತು.

"ದೆಯ್ಯು ಇಲ್ಲಿರಲಿ, ನಾನೂ, ಅವನೂ ಒಟ್ಟಿಗೆ ಬರುತ್ತೇವೆ" ಎಂದರು ಯಮುನಕ್ಕ.

ಎಲ್ಲರೂ "ನೀವು ಬರುವುದು ಬೇಡ" ಎಂದರೂ ಯಮುನಕ್ಕ ಕೇಳಲಿಲ್ಲ.

"ನನ್ನ ಮಕ್ಕಳನ್ನು ರಣರಂಗಕ್ಕೆ ಕಳುಹಿಸಿ, ನನಗೆ ಮನೆಯಲ್ಲಿ ಕುಳಿತಿರಲು ಸಾಧ್ಯವೇ ಇಲ್ಲ. ಹೊರಡಿ, ನಾನು ಮಲರಾಯನ ಗುಂಡದ ದೀಪ ಹೊತ್ತಿಸಿ ಬರುತ್ತೇನೆ. ನಾನು ಬಂದು ತಲುಪುವವರೆಗೆ ಏನೂ ಮಾಡಬೇಡಿ. ನಾನು ಬಂದು ತಲುಪುವಾಗ ಚಂದ್ರ ಉದಯಿಸಿ ಬೆಳಕಾಗುತ್ತದೆ. ಅನಂತರ ಬೇಟೆ ಪ್ರಾರಂಭಿಸೋಣ".

ಯುವಕರು ಹೊರಟರು. ಯಮುನಕ್ಕ ಮಲರಾಯನಿಗೆ ದೀಪ ಬೆಳಗಿಸಿ, ಪೆಠಾರಿಯ ಬಾಗಿಲು ತೆಗೆದು ಚಾವಡಿ ಇಳಿಯುವಾಗ, ಕಂಪನಿ ಸರಕಾರ ಮಂಜಣಾಳ್ವರಿಗೆ ಬಹುಮಾನವಾಗಿ ಕೊಟ್ಟಿದ್ದ ಜೋಡು ನಳಿಗೆಯ ಕೋವಿ ಅವರ ಕೈಯಲ್ಲಿತ್ತು.

ದೆಯ್ಯುವನ್ನು ಕರೆದು, ನಾಲ್ಕು ಯುವಕರು ಮುಂಜಾನೆ ನಾಲ್ಕು ಜೋಡಿ ಕೋಣಗಳನ್ನು ಬಾರಬೈಲಿಗೆ ತರುವಂತೆ ವ್ಯವಸ್ಥೆ ಮಾಡಲು ಹೇಳಿದರು.

ಬಾರಬೈಲಿಗೆ ಬಂದು ತಲುಪುವಾಗ ಮಧ್ಯರಾತ್ರಿ ಕಳೆದು ಕೆಲವು ಘಳಿಗೆಯಾಗಿತ್ತು. ಮುಗೇರರ ಯುವಕರು ಕೆಲವರು ಅಂಗಳದ ಬದಿಗೆ ಬಂದು ಬೊಗಳುತ್ತಿದ್ದ ನಾಯಿಗಳನ್ನು ಮುಗಿಸಿದರು. ಕೆಲವರು ಮನೆಯ ಹಿಂದಿದ್ದ ದನ, ಕರುಗಳು ಹೋಗುವ ಓಣಿಯಲ್ಲಿ ಅವಿತುಕೊಂಡರು. ಕೆಲವರು ಸ್ನಾನದ ಕೊಟ್ಟಿಗೆ, ಹಟ್ಟಿಯ ಹಿಂದೆ ತಲುಪಿದಾಗ ಬಾರಬೈಲಿನ ಮನೆಯ ಒಳಗೆ ಮಲಗಿದ್ದವರು ಎದ್ದು ಚಾವಡಿಗೆ ಬಂದರು. ಅವರಲ್ಲಿ ಒಬ್ಬ ಅಂಗಳಕ್ಕೆ ಇಳಿಯುವಾಗ, ಹಟ್ಟಿಯಲ್ಲಿದ್ದ ದನಕರುಗಳು ಅಂಗಳಕ್ಕೆ ಬರುತ್ತಿರುವುದನ್ನು ಕಂಡು ಭಯಗೊಂಡನು, ತಿರುಗಿ ಒಳಗೆ ಓಡಿದ.

"ಅಣ್ಣಾ! ಬಂದಿದ್ದಾವೆ!! ಮಿತ್ತಬೈಲಿನ ನಾಯಿಗಳು ಬಂದಿದ್ದಾವೆ!!" ಎನ್ನುತ್ತಾ



ಚಾವಡಿಗೆ ಹಾರುವಾಗ ಕೋವಿಯ ನಾಲ್ಕೈದು ಗುಂಡುಗಳು ಸಿಡಿದವು. ಚಾವಡಿಗೆ ಗುಂಡಿನ ಮಳೆ ಸುರಿಯಿತು. ಅದೇ ಹೊತ್ತಿಗೆ, ಹಟ್ಟಿಯ ಸೋಗೆಯ ಮಾಡಿಗೂ, ಸ್ನಾನದ ಕೊಟ್ಟಿಗೆಯ ಮುಳಿ ಹುಲ್ಲಿನ ಮಾಡಿಗೂ ಒಬ್ಬ ಬೆಂಕಿ ಹಚ್ಚಿದನು. ಮತ್ತೆ ಗುಂಡಿನ ಸುರಿಮಳೆ ಯಾಯಿತು. ಮನೆಯೊಳಗಿದ್ದವರೆಲ್ಲಾ ಹೆದರಿ ಅಂಗಳಕ್ಕೆ ಹಾರಿದರು. ಗುಡ್ಡದ ಬದಿಯಿಂದ ಅಂಗಳಕ್ಕೆ ಹಾರಿದ ಮಿತ್ತಬೈಲಿನ ಯುವಕರು ಉರಿಯುವ ಪಂಜುಗಳನ್ನು ಮನೆಯ ಮಾಡಿಗೆ ಹಾಗೂ ಚಾವಡಿಯ ಒಳಗೆ ಎಸೆದರು. ಮನೆಯ ಮಾಡಿಗೆ ಬೆಂಕಿ ಹತ್ತಿಕೊಳ್ಳ ತೊಡಗಿತು.

ಅಂಗಳದಲ್ಲಿ ತಲವಾರು, ಗುದ್ದಲಿಗಳ ಕಾಳಗ ಆರಂಭವಾಯಿತು. ಯಮುನಕ್ಕನ ಗಮನ ಚಾವಡಿಯತ್ತಲೇ ನೆಟ್ಟಿತ್ತು. ಅವರಿಗೆ ತ್ಯಾಂಪಣ್ಣ ಬೇಕಾಗಿತ್ತು. ಅವರು ಕಣ್ಣು ಮಿಟುಕಿಸುವುದಕ್ಕೆ ಮೊದಲೇ ಎಲ್ಲಿಂದಲೋ ಹಾರಿ ಬಂದ ಇಬ್ಬರು ಅವರ ಎದುರು ನಿಂತಿದ್ದರು. ಇದನ್ನು ಗಮನಿಸಿದ ದೆಯ್ಯು ಹಾಗೂ ಚೋಮ ಅವರಿಬ್ಬರ ತಲೆಗಳನ್ನು ಕಡಿದುರುಳಿಸಿದರು. ಅಂಗಳದ ಬದಿಯಿಂದಲೇ ಬಂದ ದುಗ್ಗಪ್ಪ, ಸೀಮೆಎಣ್ಣೆ ತುಂಬಿದ್ದ ಒಂದು ಡಬ್ಬವನ್ನು ಮನೆಯ ಒಳಗೆ ಎಸೆದು ಕೋವಿಯ ಗುಂಡಿನಿಂದ ಅದನ್ನು ಸಿಡಿಸಿದನು. ಕಿನ್ಯನ, ಚಾವಡಿಯಿಡೀ ಹರಡಿದ ಸೀಮೆಎಣ್ಣೆಗೆ ಬೆಂಕಿ ಹಚ್ಚಿದನು. ಇಡೀ ಚಾವಡಿಗೆ ಬೆಂಕಿ ಹತ್ತಿಕೊಂಡಾಗ, ಕಾಲಭೈರವನಂತೆ ತಲವಾರು ಹಿಡಿದಿದ್ದ ತ್ಯಾಂಪಣ್ಣ ಯಮುನಕ್ಕ ನಿಂತಿದ್ದಲ್ಲಿಗೆ ಓಡಿ ಬಂದನು. ಮನೆಯೊಳಗಿಂದಲೇ ಆತನ ಕಣ್ಣುಗಳು ಯಮುನಕ್ಕನನ್ನು ಹುಡುಕುತ್ತಿದ್ದವು. ತ್ಯಾಂಪಣ್ಣ ತಲವಾರು ಬೀಸಿದಾಗ ಯಮುನಕ್ಕ ಕೋವಿಯನ್ನು ಅಡ್ಡ ಹಿಡಿದರು. ತ್ಯಾಂಪಣ್ಣನ ಕೈಯಲ್ಲಿದ್ದ ತಲವಾರು ಹಾಗೂ ಯಮುನಕ್ಕನ ಕೋವಿ ಕೆಳಗೆ ಬಿದ್ದವು. ಕೈ ಹಿಡಿದು ಎಳೆಯಲು ಬಂದ ತ್ಯಾಂಪಣ್ಣನನ್ನು ಹಿಡಿದು, ತನ್ನ ಕಂಕುಳಲ್ಲಿ ಅವನ ಕುತ್ತಿಗೆಯನ್ನು ಅಮುಕಿ ಹಿಡಿದುಕೊಂಡರು ಯಮುನಕ್ಕ. ಅವನಿಗೆ ಉಸಿರಾಡಲೂ ಸಾಧ್ಯ ವಾಗದಂತೆ ಗಟ್ಟಿಯಾಗಿ ಹಿಡಿದುಕೊಂಡು ಒಂದು ಸುತ್ತು ತಿರುಗಿಸಿದಾಗ, ಗಾಯಗೊಂಡಿದ್ದ ದೆಯ್ಯು ಓಡಿ ಬಂದು, ತನ್ನಲ್ಲಿದ್ದ ಭರ್ಜಿಯಿಂದ ತ್ಯಾಂಪಣ್ಣನ ಹೊಟ್ಟೆಗೆ ತಿವಿದನು. ತ್ಯಾಂಪಣ್ಣ ಯಮುನಕ್ಕನ ಕಂಕುಳಲ್ಲಿಯೇ ಪ್ರಾಣ ಬಿಟ್ಟನು.

ಸೂರ್ಯೋದಯದ ಕೆಂಪು ಬಿಸಿಲು ಬಾರಬೈಲಿನ ಅಂಗಳದ ಭೀಕರ ಹತ್ಯಾಕಾಂಡ ವನ್ನು ಮತ್ತಷ್ಟು ಭೀಕರವಾಗಿ ತೋರಿಸಿತು. ಮನೆ, ಕೊಟ್ಟಿಗೆ, ಹಟ್ಟಿಗಳು ಹೊತ್ತಿ ಉರಿದು ಭಸ್ಮವಾಗಿ ಉರುಳುತ್ತಿದ್ದವು. ಗಾಯಗೊಂಡವರು ಹೆಣಗಳನ್ನು ಎಳೆದು ಮೇಲಿನ ಬೆಟ್ಟು ಗದ್ದೆಯಲ್ಲಿ ಹಾಕಿಸಿದರು. ಕೆಲಸದವರು ಮನೆ, ಹಟ್ಟಿಗಳನ್ನು ನೆಲ ಸಮ ಮಾಡಲು ಆರಂಭಿಸಿದರು. ತಲವಾರಿನ ಕೆಲಸ ಮುಗಿದು ಹಾರೆ, ಗುದ್ದಲಿ, ಸನಿಕೆಗಳ ಕೆಲಸ ಪ್ರಾರಂಭ ವಾಯಿತು. ಗುಡ್ಡದ ಬದಿಯಲ್ಲಿಯೇ ಹರಿದುಬರುವ ನೀರನ್ನು ಅಂಗಳಕ್ಕೆ ತಿರುಗಿಸಿದರು. ಯಾರೋ ಕಾಡಿಗೆ ಹೋಗಿ ಕೆರೆ ಒಡೆದು ನೀರನ್ನು ಅಂಗಳಕ್ಕೆ ತಿರುಗಿಸಿದರು.

ಘಳಿಗೆಯಾಗುವುದರೊಳಗೆ ಕೆಲಸದ ಯುವಕರು ಮಿತ್ತಬೈಲಿನಿಂದ ಅಟ್ಟಿಕೊಂಡು

ಬಂದ ಕೋಣಗಳನ್ನು ಕಟ್ಟಿ, ಇಡೀ ಹಿತ್ತಲನ್ನು ಉಳತೊಡಗಿದರು. ಇಡೀ ಹಿತ್ತಲಲ್ಲಿ ಗುಂಡಿ ತೋಡಿ ಬಾಳೆ ಗಿಡ ನೆಟ್ಟು ಮುಗಿಯುವಾಗ ಮಧ್ಯಾಹ್ನವಾಗುತ್ತಾ ಬಂತು.

ಮುಗೇರರ ಯುವಕರು ಅಲ್ಲೇ ಇದ್ದ ಬಿದಿರಿನ ಹಿಂಡನ್ನು ಕಡಿದು ಸುತ್ತಲೂ ಮುಳ್ಳಿನ ಬೇಲಿ ಹಾಕಿ ಮುಗಿಸಿದಾಗ, ಹಿಂದೆ ಅಲ್ಲೊಂದು ಮನೆ, ಹಟ್ಟಿ ಇತ್ತು ಎಂಬ ಚಿಕ್ಕ ಕುರುಹು ಕೂಡಾ ಉಳಿಯಲಿಲ್ಲ. ಯಾರಾದರು ಹೇಳಿದರೂ ನಂಬುವುದಕ್ಕೇ ಸಾಧ್ಯವಿಲ್ಲದ ರೀತಿಯಲ್ಲಿ ಅಲ್ಲಿ ಬಾಳೆ ತೋಟ ಕಂಗೊಳಿಸುತ್ತಿತ್ತು. ಇಷ್ಟೆಲ್ಲಾ ನಡೆಯುತ್ತಿರುವಾಗ ಯುಮುನಕ್ಕ ಕೋವಿ ಹಿಡಿದುಕೊಂಡು ಅತ್ತಿತ್ತ ನಡೆಯುತ್ತಿದ್ದ ಆ ದೃಶ್ಯ ಎಂತಹವರ ಎದೆಯನ್ನೂ ನಡುಗಿಸಬೇಕು. ಅವರು ಥೇಟು ಭದ್ರಕಾಳಿಯಂತೆಯೇ ಕಾಣುತ್ತಿದ್ದರು. ಒಂದು ಎಳನೀರು ಕುಡಿದು ಮರದಡಿಯಲ್ಲಿ ಕುಳಿತ ಯಮುನಕ್ಕ ಲೆಕ್ಕ ಹಾಕಿದರು,

ಆರು ಜನ ಬಾರಬೈಲಿನವರು, ಇಬ್ಬರು ಮಿತ್ತಬೈಲಿನವರು ಅಲ್ಲೇ ಪ್ರಾಣ ಬಿಟ್ಟಿದ್ದಾರೆ. ಐದಾರು ಜನರಿಗೆ ಗಂಭೀರ ಗಾಯಗಳಾಗಿವೆ. ದುಗ್ಗಪ್ಪನಿಗೂ ಸಣ್ಣಪುಟ್ಟ ಗಾಯ ಗಳಾಗಿವೆ. ಅರ್ಧಂಬರ್ಧ ಸುಟ್ಟಿದ್ದ ವಸ್ತುಗಳನ್ನು ಹಾಗೂ ಕಳ್ಳ ಕೋವಿಗಳನ್ನೆಲ್ಲ ಬಾವಿಗೆ ಹಾಕಿ, ಬಾವಿಗೆ ಮಣ್ಣು ಮುಚ್ಚಿ, ಅದರ ಮೇಲೆಯೂ ನಾಲ್ಕು ಬಾಳೆ ಗಿಡ ನೆಟ್ಟು, ಅಲ್ಲೊಂದು ಬಾವಿ ಇತ್ತು ಎಂಬ ಸುಳಿವೂ ಸಿಗದಂತೆ ಮಾಡಿದರು. ಹೊಸದಾಗಿ ಬಂದು ನೋಡಿದವರಿಗೆ, ಒಂದು ದಿನದ ಹಿಂದೆ ಅಲ್ಲೊಂದು ಮನೆ ಇತ್ತು. ಒಂದು ಸಂಸಾರ ವಾಸವಾಗಿತ್ತು ಎಂದು ನಂಬಲೇ ಸಾಧ್ಯವಾಗದ ರೀತಿಯಲ್ಲಿ, ಯೋಜನೆಯಂತೆಯೇ ಎಲ್ಲ ಕೆಲಸಗಳೂ ಮುಗಿದಿದ್ದವು.

ಬಾರಬೈಲಿನ ಅಂಗಳದಲ್ಲಿ ಇಷ್ಟೆಲ್ಲಾ ನಡೆಯುತ್ತಿದ್ದರೂ ಗುಂಡಿನ ಶಬ್ದ ಕೇಳಿದವರಾಗಲೀ, ಬೆಂಕಿ ಹೊತ್ತಿ ಉರಿಯುವುದನ್ನು ನೋಡಿದವರಾಗಲೀ ಯಾರೂ ಹತ್ತಿರ ಬರುವ ಧೈರ್ಯ ತೋರಲಿಲ್ಲ. ಪದವಿನ ಬದಿಯಲ್ಲಿ ನಿಂತು ನೋಡಲು ಹವಣಿಸುತ್ತಿದ್ದವರನ್ನು ಕೋವಿ ಹಿಡಿದುಕೊಂಡಿದ್ದ ದುಗ್ಗಪ್ಪ ಓಡಿಸಿದ.

ಆನೆಕಲ್ಲಿನಲ್ಲಿ ಯಾರೋ ಒಬ್ಬ "ನಾಶ ಮಾಡಿದರಪ್ಪೋ, ಸರ್ವನಾಶ ಮಾಡಿದರು. ಈ ಬಾರಬೈಲಿನವರೂ ಮಿತ್ತಬೈಲಿನವರೂ ಕಾದಾಡಿಕೊಂಡು ಇಡೀ ಊರನ್ನು ನಾಶ ಮಾಡಿದರು" ಎಂದು ಅರಚಿಕೊಂಡು ಓಡಿದನಂತೆ.

ಸುದ್ದಿ ಸುತ್ತಮುತ್ತಲೆಲ್ಲ ಹರಡಿತು. ಗುಂಡಿನ ಶಬ್ದ ಕೇಳಿದವರು, ಬಾನೆತ್ತರಕ್ಕೆ ಚಾಚಿದ್ದ ಬೆಂಕಿಯ ಕೆನ್ನಾಲಗೆ, ಹೊಗೆಯನ್ನು ಕಂಡವರು ವಿಷಯ ತಿಳಿಯಲು ಪ್ರಯತ್ನಿಸುತ್ತಿದ್ದರು. ಯಾರೋ ಹೋಗಿ ಪೊಲೀಸರಿಗೆ ದೂರು ನೀಡಿದರು. ಮತ್ತೆ ಯಾರೋ ತಂತ್ರಿಗಳಿಗೆ ಸುದ್ದಿ ಮುಟ್ಟಿಸಿದರು. ಮಧ್ಯಾಹ್ನದ ಪೂಜೆಗೆ ಕುಳಿತಿದ್ದ ತಂತ್ರಿಗಳು "ಮತ್ತೊಂದು ಯುಗ ಮುಗಿಯಿತು! ಚಂಡಿಕಾ ಹೋಮ ನಡೆಯಿತೇ?" ಎಂದು ಕೇಳಿದರಂತೆ.

ಸಂಜೆಯಾಗುತ್ತಲೇ ನೂರು - ನೂರೈವತ್ತು ಮಂದಿ ಪೊಲೀಸರು ಬಂದು ಬಾರಬೈಲು, ಮಿತ್ತಬೈಲುಗಳನ್ನು ಸುತ್ತುವರಿದರು. ಪೊಲೀಸರು ತಲುಪಿದಾಗ ಸುತ್ತಮುತ್ತಲ



ಜನರೂ ಬಂದು ಸೇರಿದರು. ಜನ ಹಿಂಡು ಹಿಂಡಾಗಿ ಎಲ್ಲೆಲ್ಲಿಂದಲೋ ಬಂದು ಹೊಸ ಪರಿಸರವನ್ನು ನೋಡುವಂತೆ ನೋಡತೊಡಗಿದರು. ಮಂಗಳೂರಿನಿಂದ ರಾಮಣ್ಣ ಹಾಗೂ ಸುಬ್ಬಯಣ್ಣ ಬಂದು ತಲುಪುವಾಗ ಯಮುನಕ್ಕನನ್ನೂ, ಇನ್ನೂ ಕೆಲವರನ್ನೂ ಪೊಲೀಸರು ಕೋಳ ತೊಡಿಸಿ ಮಂಜೇಶ್ವರಕ್ಕೆ ಕರೆದೊಯ್ದಿದ್ದರು.

ಮಂಜೇಶ್ವರ ಪೇಟೆಗೆ ದಂಡಿಗೆಯಲ್ಲಿ ಹೋಗುತ್ತಿದ್ದ ಯಮುನಕ್ಕ ಕೈಗೆ ಕೋಳ ಹಾಕಿ ರಸ್ತೆಯಲ್ಲಿ ನಡೆದುಕೊಂಡು ಹೋಗುವುದನ್ನು ಊರಿಗೆ ಊರೇ ನೋಡುತ್ತಿತ್ತು. ಯಮುನಕ್ಕ, ಏನೂ ನಡೆಯಲೇ ಇಲ್ಲ ಎಂಬಂತೆ ತಲೆ ಎತ್ತಿಕೊಂಡು ನಡೆಯುತ್ತಿದ್ದರು.

★★★

ಗಾಯಗೊಂಡು, ಎರಡು ದಿನ ಆಸ್ಪತ್ರೆಯಲ್ಲಿದ್ದವರನ್ನು ಬಿಟ್ಟರೆ ಪೊಲೀಸರು ಬಂಧಿಸಿದವರೆಲ್ಲ ಎಲ್ಲಿದ್ದಾರೆಂಬುದು ಯಾರಿಗೂ ತಿಳಿಯಲಿಲ್ಲ. ಯಮುನಕ್ಕನನ್ನು ಯಾರಿಗೂ ನೋಡಲು ಸಾಧ್ಯವಾಗಲಿಲ್ಲ. ಮಂಗಳೂರಿನ ಯಾವುದೋ ಜೈಲಲ್ಲಿ, ಯಾರೂ ಭೇಟಿಯಾಗಲು ಸಾಧ್ಯವಾಗದ ಸ್ಥಳದಲ್ಲಿ ಒಬ್ಬರನ್ನೇ ಇಟ್ಟಿದ್ದರು. ಹೆಗ್ಡೆ ವಕೀಲರು ಮಾತ್ರ ಅವರನ್ನು ನೋಡಿ ಮಾತನಾಡಿ ಬಂದರು. ಬಾರಬೈಲಿನ ದನಿ-ಒಕ್ಕಲಿನ ಜಗಳ ಇಡೀ ದೇಶದಲ್ಲೇ ಸುದ್ದಿಯಾಯಿತು.

ಬಾರಬೈಲಿನಲ್ಲಿ ಮಾತ್ರ ಒಂದೇ ಒಂದು ನರಪಿಳ್ಳೆಯೂ ಕಾಣಸಿಗಲಿಲ್ಲ. ಮನೆಯ ಹೆಚ್ಚಿನ ಯುವಕರು ಗಲಭೆಯಲ್ಲಿ ಹತರಾಗಿದ್ದರು. ಹೆಂಗಸರು ಮಕ್ಕಳು, ಮರಿಗಳನ್ನು ಕರೆದುಕೊಂಡು ಊರು ಬಿಟ್ಟು ಹೋದವರು ಎಲ್ಲಿದ್ದಾರೆಂದೇ ತಿಳಿಯಲಿಲ್ಲ. ಹುಡುಕಿದರೂ ಪ್ರಯೋಜನವಾಗಲಿಲ್ಲ.

ದೊಂಬಿಯಂದು ತ್ಯಾಂಪಣ್ಣನ ಸಹಾಯಕ್ಕೆ ಬರುತ್ತೇವೆಂದಿದ್ದ ಕಜೆಕೋಡಿಯವರು ಒಬ್ಬರೂ ಬರಲಿಲ್ಲ. ದೊಂಬಿಯ ಬಾಯಿಗೆ ಸಿಲುಕಿದವರು ಬಾರಬೈಲಿನ ಯುವಕರು ಹಾಗೂ ಮೂಲದ ತಡಿಕೆಯ ಬಾಕುಡರು ಮಾತ್ರ.

ಏಳು ದಿನಗಳ ನಂತರ ಯಮುನಕ್ಕನನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವಾಗ ನ್ಯಾಯಾಲಯದ ಎದುರು ಜನಸಾಗರವೇ ನೆರೆದಿತ್ತು. ಪತ್ರಿಕೆಯವರು, ಪರ ಊರಿನವರು, ಸುದ್ದಿ ತಿಳಿದು ದೇಶದ ನಾನಾ ಕಡೆಯವರು ಬಂದಿದ್ದರು. ಅವರಲ್ಲಿ ಹೆಚ್ಚಿನವರು ಯಮುನಕ್ಕನ ಪರಾಕ್ರಮ ಕೇಳಿ, ಅವರನ್ನು ನೋಡಲೆಂದೇ ಬಂದವರು.

ವಕೀಲರು ಎಷ್ಟೇ ಪ್ರಯತ್ನಿಸಿದರೂ ಯಮುನಕ್ಕನಿಗೆ ಜಾಮೀನು ದೊರಕಲಿಲ್ಲ. ನ್ಯಾಯಾಲಯದಲ್ಲಿ ಆರು ತಿಂಗಳಿಗೂ ಹೆಚ್ಚು ಕಾಲ ವಿಚಾರಣೆ ನಡೆಯಿತು. ಯಾವುದೇ ಬಲವಾದ ಸಾಕ್ಷಿ ಇಲ್ಲದಿದ್ದುದರಿಂದ ಪ್ರಕರಣ ಖುಲಾಸೆಯಾಯಿತು. ಹೆಗ್ಡೆ ವಕೀಲರೂ, ಅವರ ಜೊತೆ ಬೇರೆ ಐದಾರು ಜನ ವಕೀಲರೂ ಯಮುನಕ್ಕನ ಪರವಾಗಿ ವಾದಿಸಿದ್ದರು.

ಒಬ್ಬನೇ ಒಬ್ಬ ವ್ಯಕ್ತಿಯೂ ಸಾಕ್ಷಿ ಹೇಳಲು ಬಂದಿರಲಿಲ್ಲ.

ಬಿಡುಗಡೆಯಾಗಿ ಮನೆಗೆ ಬಂದ ಯಮುನಕ್ಕ ಬಳಲಿ ಸುಸ್ತಾಗಿ ಹೆಣದಂತಾಗಿದ್ದರು. ಕಣ್ಣು ಮಂಜಾಗಿತ್ತು. ಬೆನ್ನು ಬಾಗಿ ಹೋಗಿತ್ತು. ತಲೆಗೂದಲು ಹಣ್ಣಾಗಿ ಹತ್ತಿಯಂತಾಗಿತ್ತು. ಮನೆಗೆ ಬಂದು ಮಲಗಿದ ಯಮುನಕ್ಕ ಮತ್ತೆ ಏಳಲೇ ಇಲ್ಲ.

ದಿನನಿತ್ಯ ಸಂಜೆ ಅಕ್ಕನ ಹತ್ತಿರ ಕುಳಿತು ಮನೆಯ, ಊರಿನ ವಿಷಯಗಳನ್ನೆಲ್ಲ ಒಪ್ಪಿಸುತ್ತಿದ್ದರು ಸುಬ್ಬಯಣ್ಣ. ಒಂದು ದಿನ ರಾತ್ರಿ ಹೀಗೇ ಪಕ್ಕದಲ್ಲಿ ಕುಳಿತು ಮಾತನಾಡುತ್ತಿದ್ದಾಗ ಯಮುನಕ್ಕ, ಬೆಳಗ್ಗೆ ತನಗೊಮ್ಮೆ ಬೈಲು ಸುತ್ತಿ ಬರಬೇಕೆಂದು ಹೇಳಿದಾಗ ಸುಬ್ಬಯಣ್ಣನಿಗೆ ಆಶ್ಚರ್ಯವಾಯಿತು. ಜೈಲಿನಿಂದ ಬಂದ ಮೇಲೆ ಅಂಗಳಕ್ಕೂ ಇಳಿಯದ ಯಮುನಕ್ಕ ಇಂದು ಬೈಲಿಗೆ ಹೋಗಬೇಕು ಎನ್ನುವಾಗ ಸುಬ್ಬಯಣ್ಣ ಕೇಳಿದರು,

"ಯಾಕೆ ಬೈಲಿಗೆ ಹೋಗುವುದು ಯಮುನಕ್ಕಾ? ನಿನ್ನಿಂದ ನಡೆಯಲು ಸಾಧ್ಯವೇ?"

"ನನಗೆ ಏನಾಗಿದೆ? ಮೊದಲು ನಡೆಯುತ್ತಿರಲಿಲ್ಲವೇ? ಬೆಳಗ್ಗೆ ಸೂರ್ಯ ಮೇಲೆ ಬರುವುದರೊಳಗೆ ಹೋಗಿಬರೋಣ. ಹುಣ್ಣಿಮೆಯ ಬೆಳಕು ಕಳೆಯುವುದರೊಳಗೆ ಹೊರಡೋಣ".

ಸುಬ್ಬಯಣ್ಣ ಬೆಳಗ್ಗೆ ಎರಡನೇ ಜಾವದ ಕೋಳಿ ಕೂಗಿದಾಗ ಚುಮುಚುಮು ಬೆಳಕಾಗುವಾಗ ಎದ್ದು, ತಿಂಗಳ ಬೆಳಕು ಕಂತುವುದಕ್ಕೆ ಮೊದಲು ಹೋಗುವುದೆಂದು ಯೋಚಿಸಿ, ಯಮುನಕ್ಕನನ್ನು ಎಬ್ಬಿಸಲು ಚಾವಡಿಗೆ ಬಂದಾಗ ಅವರು ತಯಾರಾಗಿ ಕುಳಿತಿದ್ದರು. ಅಕ್ಕ, ತಮ್ಮ ಆ ಮಬ್ಬು ಬೆಳಕಲ್ಲಿ ಬೈಲಿಗೆ ಬಂದಾಗ ಹೊಳೆ ಬದಿಯ ಮುಂಡಗೆ ಕೇದಿಗೆಯ ಪೊದರಿನಲ್ಲಿ ಕಾಡುಕೋಳಿ, ಪಾರಿವಾಳ, ಕೊಕ್ಕರೆಗಳಂತಹ ಹಕ್ಕಿಗಳು 'ಬೆಳಗಾಯಿತು' ಎಂದು ಸುಪ್ರಭಾತ ಹಾಡುತ್ತಿದ್ದವು.

ಯಮುನಕ್ಕ ಮೆಲ್ಲನೆ ಬೈಲು ದಾಟಿ ಹೊಳೆಗಿಳಿದರು. ಮೌನವಾಗಿ ಅವರ ಜೊತೆಯೇ ನಡೆಯುತ್ತಿದ್ದ ಸುಬ್ಬಯಣ್ಣ,

"ಯಮುನಕ್ಕ, ಎಲ್ಲಿಗೆ ಹೋಗಬೇಕು ನಿನಗೆ?" ಎಂದು ಕೇಳಿದಾಗ,

"ಬಾ, ಹೇಳುತ್ತೇನೆ" ಎಂದ ಯಮುನಕ್ಕ, ಹೊಳೆಯಲ್ಲಿಯೇ ಹೊಯ್ಗೆಯ ಮೇಲೆ ಹೋಗಿ ಅವರ ಕೈ ಹಿಡಿದುಕೊಂಡು ಹೊಳೆ ದಾಟಲು ನೀರಿಗಿಳಿದರು. ತಿಳಿಯಾದ ನೀರಿನ ಹರಿವಿನಲ್ಲಿ ತಮ್ಮನ ಕೈ ಹಿಡಿದುಕೊಂಡು ಹೊಳೆ ದಾಟಿ ಕಟ್ಟಹುಣಿ ಹತ್ತುವಾಗ ಸುಬ್ಬಯಣ್ಣನಿಗೆ ಅರ್ಥವಾಯಿತು, ಯಮುನಕ್ಕ ಈ ಬೆಳ್ಳಂಬೆಳಗ್ಗೆ ಯಾಕೆ ಬಂದರೆಂಬುದು. ಅವರು ಬಂದುದು ಬಾರಬೈಲಿನ ಕಟ್ಟಹುಣಿಗೆ.

ಪಾಳು ಬಿದ್ದ ಬೈಲು ದಾಟಿ ಒಂದು ಹಲಸಿನ ಮರದಡಿಗೆ ಬಂದ ಯಮುನಕ್ಕ ಅಲ್ಲೇ ಕುಳಿತುಕೊಂಡರು. ಒಂದು ಕಾಲದಲ್ಲಿ ಆ ಹಲಸಿನ ಮರ ಬಾರಬೈಲಿನ ಮನೆಯ ಅಂಗಳದಲ್ಲಿತ್ತು. ಈಗದು ಹಿತ್ತಲಿನಂತಿರುವ ಜಾಗದಲ್ಲಿ ನಾಚಿಕೆ ಮುಳ್ಳಿನ ಪೊದೆಗಳ ಮಧ್ಯೆ ಇದೆ. ಸುಬ್ಬಯಣ್ಣ ಆ ಜಾಗಕ್ಕೆ ಒಂದು ಸುತ್ತು ಹೊಡೆದು ಬಂದರು. ಆ ಜಾಗ ಹಾಡಿ



ಯಂತಾಗಿತ್ತು. ನೀರಿಲ್ಲದೆ, ದನಕರುಗಳು ತಿಂದುಳಿದ ಬಾಳೆಗಿಡಗಳು ಬಾಡಿ ಒಣಗಿ ಹೋಗಿದ್ದವು. ಸೋಗೆಗಳು ಜೋತಾಡುತ್ತಿದ್ದ ತೆಂಗಿನ ಮರಗಳು ಕಂಬದಂತೆ ನಿಂತಿದ್ದವು. ಅವುಗಳ ಕೊಂಬೆಯಲ್ಲಿ ಎಳೆಯ ಮಿಡಿಗಳು ಕೂಡಾ ಇರಲಿಲ್ಲ. ನಾಚಿಕೆ ಮುಳ್ಳು ತುಂಬಿಕೊಂಡಿದ್ದ ಗದ್ದೆ, ಹಿತ್ತಲು ವಿರೂಪವಾಗಿ ಸುಡುಗಾಡಿನಂತೆ ಕಾಣುತ್ತಿತ್ತು. ಸುತ್ತಾಡಿ ಬಂದ ಸುಬ್ಬಯಣ್ಣ ಅಕ್ಕನ ಬಳಿ ಕುಳಿತು ಅವರ ಮುಖ ನೋಡಿದಾಗ ಅವರ ಕಣ್ಣಲ್ಲಿ ನೀರು ಧಾರೆ ಧಾರೆಯಾಗಿ ಹರಿಯುತ್ತಿತ್ತು. ಸುಬ್ಬಯಣ್ಣ ಎದ್ದು ನಿಂತು ಅವರ ಕೈ ಹಿಡಿದು,

"ಹೋಗೋಣವೇ ಯಮುನಕ್ಕಾ?" ಎಂದು ಕೇಳಿದಾಗ, ಯಮುನಕ್ಕ ತಮ್ಮನ ಕೈ ಹಿಡಿದುಕೊಂಡು ಬಿಕ್ಕಿ ಬಿಕ್ಕಿ ಅಳತೊಡಗಿದರು. ಸುಬ್ಬಯಣ್ಣ ಅವರನ್ನು ಸ್ವಲ್ಪ ಹೊತ್ತು ಅಳಲು ಬಿಟ್ಟು ತಲೆ ಸವರಿದರು. ಬೈರಾಸಿನಿಂದ ಅವರ ಮುಖ ಒರಸಿದರು. ತಮ್ಮನ ಕೈ ಹಿಡಿದ ಯಮುನಕ್ಕ ಕೇಳಿದರು,

"ಮಿತ್ತಬೈಲು-ಬಾರಬೈಲುಗಳಿಗೆ ಯಮುನಕ್ಕನೆಂಬ ಒಂದು ಮಾರಿ ನುಗ್ಗಿ ಊರಿಗೆ ಊರನ್ನೇ ಬಲಿ ತೆಗೆದುಕೊಂಡಿತು ಅಲ್ಲವೇ ಸುಬ್ಬಯಾ? ನಾನು ನಿನ್ನ ಮಾತು ಕೇಳಲಿಲ್ಲ ಅಲ್ಲವೇ?"

"ಬಾ, ನಡೆದು ಹೋದುದನ್ನು ಚಿಂತಿಸಿ ಪ್ರಯೋಜನವಿಲ್ಲ. ಇನ್ನು ಆಗಬೇಕಾದುದರ ಬಗ್ಗೆ ಯೋಚಿಸೋಣ ಏಳು" ಸುಬ್ಬಯಣ್ಣ ಮೆಲ್ಲನೆ ಅಕ್ಕನ ತೋಳಲ್ಲಿ ಹಿಡಿದು ಎತ್ತಿ ನಡೆಸಿಕೊಂಡು ಹೊಳೆ ದಾಟಿಸಿದರು. ಮನೆಯಂಗಳಕ್ಕೆ ಬಂದಾಗ ಮೂಡುತ್ತಿರುವ ಸೂರ್ಯನ ಬೆಳಕಿನ ಕಿರಣಗಳು ಅಂಗಳಕ್ಕೆ ಬೀಳುತ್ತಿದ್ದವು.

ಯಮುನಕ್ಕ ಬಂದು ಪೆಠಾರಿಯ ಮೇಲೆ ಮಲಗಿದವರು ಊಟಕ್ಕೆ ಸಹ ಏಳಲಿಲ್ಲ. ಸುಬ್ಬಯಣ್ಣ ಮತ್ತೆ ಬೈಲು ಸುತ್ತಿ ಬಂದು ನೋಡುವಾಗ ಯಮುನಕ್ಕನ ದೇಹ ಕೆಂಡದಂತೆ ಸುಡುತ್ತಿತ್ತು. ಕೊತ್ತಂಬರಿ, ಜೀರಿಗೆಯ ಕಷಾಯ ಮಾಡಿಸಿ ಕೊಟ್ಟು, ಮೈ ತುಂಬ ಕಂಬಳಿ ಹೊದಿಸಿ, ಹಣೆಗೆ ಒದ್ದೆ ಬಟ್ಟೆ ಇಟ್ಟು ಸುಬ್ಬಯಣ್ಣ, ಅವರ ಪಕ್ಕವೇ ಕುಳಿತರು. ನರಳುತ್ತಿದ್ದ ಯಮುನಕ್ಕನಿಗೆ ರಾತ್ರಿ ಬೆವರು ಬಂದು ಜ್ವರ ಇಳಿಯಿತು. ಎಚ್ಚರಗೊಂಡವರು ಹತ್ತಿರ ಕುಳಿತು ತೂಕಡಿಸುತ್ತಿದ್ದ ತಮ್ಮನಿಗೆ ಮಲಗುವಂತೆ ಹೇಳಿ, ಆಚಕ್ಕನನ್ನೂ ಅವರ ಮಕ್ಕಳನ್ನೂ ಎಲ್ಲಿದ್ದರೂ ಹುಡುಕಿ ಕರೆ ತರುವಂತೆ ತಿಳಿಸಿದರು.

ಬೆಳಗ್ಗೆದ್ದ ಸುಬ್ಬಯಣ್ಣ ಯಮುನಕ್ಕನ ತಲೆ ಸವರಿ, ಉಪ್ಪಿನಂಗಡಿಗೆ ಹೋಗಿ ಬರುತ್ತೇನೆಂದು ಹೇಳಿದಾಗ, ನಿದ್ದೆ ಇಲ್ಲದೆ ಅಟ್ಟವನ್ನೇ ದಿಟ್ಟಿಸುತ್ತಿದ್ದ ಅವರ ಕಣ್ಣುಗಳಲ್ಲಿ ನೀರ ಕೋಡಿ ಹರಿಯುತ್ತಲೇ ಇತ್ತು. ಅಕ್ಕನ ಕಣ್ಣ ನೀರು ಒರೆಸಿದ ತಮ್ಮ ಹೇಳಿದರು, "ಚಿಂತೆ ಮಾಡಿದ್ದು ಸಾಕು ಯಮುನಕ್ಕಾ, ನಾನು ಹೇಗಾದರೂ ಮಾಡಿ ಹುಡುಕಿ ಆಚು ಅತ್ತೆಯನ್ನೂ, ಮಕ್ಕಳನ್ನೂ ಕರೆ ತರುತ್ತೇನೆ".

ಯಮುನಕ್ಕ, "ನಾನು ಕಾಯುತ್ತೇನೆ" ಎಂದರು.

★★★

ಆಚಕ್ಕನೂ, ಬಾರಬೈಲಿನ ಹೆಣ್ಣು ಮಕ್ಕಳೂ ಉಪ್ಪಿನಂಗಡಿಯ ತಮ್ಮ ಕುಟುಂಬದ ಮನೆಯಲ್ಲಿದ್ದರು. ಅವರು ಎಷ್ಟು ಒತ್ತಾಯ ಮಾಡಿದರೂ ಮಿತ್ತಬೈಲಿಗಾಗಲೀ, ಬಾರಬೈಲಿಗಾಗಲೀ ಬರಲು ಒಪ್ಪಲಿಲ್ಲ. ಹುಡುಕಿಕೊಂಡು ಬಂದ ಸುಬ್ಬಯಣ್ಣನಿಗೆ ಹಲವು ವಿಷಯಗಳು ತಿಳಿದು ಬಂದವು. ಅವುಗಳಲ್ಲಿ ಒಂದು ತ್ಯಾಂಪಣ್ಣ ಮಾಂಕರಾಲರ ಮಗ ಎಂಬುದು.

ತ್ಯಾಂಪಣ್ಣನಿಗಿಂತ ಕಿರಿಯವಳಾದ ಕಲ್ಯಾಣಿಯೂ ಮಾಂಕರಾಲರಿಗೇ ಹುಟ್ಟಿದವಳು. ಗಂಡ ಸತ್ತು ಮನೆಯಲ್ಲಿದ್ದ ಕಲ್ಯಾಣಿಗೆ ಸುಂದರಿ ಎಂಬ ಒಬ್ಬ ಮಗಳಿದ್ದಳು. ಅವಳಿಗೂ, ಯಮುನಕ್ಕನ ಮಗ ರಾಮಣ್ಣನಿಗೂ ಪ್ರೇಮವಿತ್ತು. ಈ ಮಾತು ಆಚಕ್ಕನ ಬಾಯಿಯಿಂದಲೇ ಕೇಳಿದಾಗ ಸುಬ್ಬಯಣ್ಣನಿಗೆ ಆಶ್ಚರ್ಯವಾಯಿತು. ಯಮುನಕ್ಕನ ಭಯದಿಂದ ಅವರು ತಾಯಿ – ಮಗಳಿಬ್ಬರನ್ನೂ ಗಟ್ಟಕ್ಕೆ ಕಳುಹಿಸಿದ್ದರು. ಯಮುನಕ್ಕನಿಗೇನಾದರೂ ವಿಷಯ ತಿಳಿದರೆ ಅವರನ್ನು ಜೀವಂತ ಇಡುವುದಿಲ್ಲ ಎಂದು ಆಚಕ್ಕನಿಗೆ ಭಯ. ಇಷ್ಟೆಲ್ಲ ಕಥೆಗಳಿರುವಾಗ ಆಚಕ್ಕ ಮಿತ್ತಬೈಲಿಗಾಗಲೀ, ಬಾರಬೈಲಿಗಾಗಲೀ ಬರಲು ಹೇಗೆ ಸಾಧ್ಯ? ಅವರು ಸುತಾರಾಂ ಬರಲು ಒಪ್ಪಲಿಲ್ಲ.

ಮಿತ್ತಬೈಲಿಗೆ ಹಿಂದಿರುಗಿದ ಸುಬ್ಬಯಣ್ಣ ವಿಷಯವನ್ನೆಲ್ಲ ಯಮುನಕ್ಕನಿಗೆ ತಿಳಿಸಿದಾಗ ಅವರು ಆಶ್ಚರ್ಯ ವ್ಯಕ್ತಪಡಿಸಲಿಲ್ಲ. ಅದೆಲ್ಲವೂ ಅವರಿಗೆ ಮೊದಲೇ ತಿಳಿದಿತ್ತು. ಯಮುನಕ್ಕ, ಸುಬ್ಬಯಣ್ಣನಲ್ಲಿ ಸುಂದರಿಯನ್ನು ಹುಡುಕಿ ರಾಮಣ್ಣನಿಗೆ ಮದುವೆ ಮಾಡಿಸುವಂತೆ ಹೇಳಿದಾಗ ಅವರಿಗೆ ಆಶ್ಚರ್ಯವಾಯಿತು. ಯಮುನಕ್ಕ ಎಷ್ಟೊಂದು ಕೊರಗುತ್ತಿದ್ದಾರೆ ಎಂಬುದು ಅವರಿಗೆ ಅರಿವಾಯಿತು.

ಸುಬ್ಬಯಣ್ಣ ಸ್ವತಃ ಗಟ್ಟಕ್ಕೆ ಹೋಗಿ ಕಲ್ಯಾಣಿಯನ್ನೂ, ಸುಂದರಿಯನ್ನೂ ಕರೆದುಕೊಂಡು ಬಂದರು. ಮಿತ್ತಬೈಲಿಗೆ ಬಂದ ಕಲ್ಯಾಣಿಯನ್ನೂ, ಸುಂದರಿಯನ್ನೂ ಹತ್ತಿರ ಕುಳ್ಳಿರಿಸಿಕೊಂಡ ಯಮುನಕ್ಕ ತನ್ನ ಸೊಂಟದಲ್ಲಿದ್ದ ಚಿನ್ನದ ಉಡಿದಾರ ತೆಗೆದು ಸುಂದರಿಯ ಕೈಯಲ್ಲಿಟ್ಟು, ಸೊಂಟಕ್ಕೆ ಹಾಕಿಕೊಂಡು ಬರುವಂತೆ ಹೇಳಿದರು. ಈ ಉಡಿದಾರ ಅವರಿಗೆ ಅವರ ಅತ್ತೆ ಕೊಟ್ಟುದು. ಸೊಂಟಕ್ಕೆ ಉಡಿದಾರ ಹಾಕಿಕೊಂಡು ಬಂದ ಸುಂದರಿ, ಯಮುನಕ್ಕನ ಕಾಲಿಗೆ ನಮಸ್ಕರಿಸಿದಾಗ ಅವರು ಅವಳ ತಲೆ ಸವರಿ ಕಳುಹಿಸಿಕೊಟ್ಟರು.

ಸುಬ್ಬಯಣ್ಣ ರಾತ್ರಿ ಇಡೀ ಯಮುನಕ್ಕನ ಬಳಿ ಕುಳಿತು ಮಾತನಾಡುತ್ತಾ ಮನೆಯ ಯುವಕರಿಗೆಲ್ಲ ಮದುವೆ ಮಾಡಬೇಕೆಂದು ಹೇಳಿದರು. ಯಮುನಕ್ಕ ಅದಕ್ಕೆ ಒಪ್ಪಿದರು.

ಸುಬ್ಬಯಣ್ಣ ಮದುವೆ ಕಳೆದು ಭೂತದ ಗುರಿಕಾರಿಕೆಯನ್ನು ಬೇರೆ ಯಾರಿಗಾದರೂ ವಹಿಸಿ, ತಾನು ಸಬರಮತಿ ಆಶ್ರಮಕ್ಕೆ ಹೋಗುವ ತನ್ನ ನಿರ್ಧಾರವನ್ನು ತಿಳಿಸಿದರು.

ಯಮುನಕ್ಕ 'ಹೂಂ' ಎಂದು, "ತುಂಬಾ ಹೊತ್ತಾಯಿತು. ನನಗೆ ನಿದ್ದೆ ಬರುತ್ತಾ ಇದೆ. ನಾಳೆ ಮಾತನಾಡೋಣ" ಎಂದರು.

ನಾಳೆ ಮಾತನಾಡೋಣ ಎಂದ ಯಮುನಕ್ಕನ ಪಾಲಿಗೆ ಆ ನಾಳೆ ಉದಯಿಸಲೇ ಇಲ್ಲ. ಬೆಳಗೆದ್ದು ನೋಡುವಾಗ ಅವರು ಉಸಿರು ನಿಲ್ಲಿಸಿ ಹೊರಟು ಹೋಗಿದ್ದರು.



ಅಂದು ಊರೆಲ್ಲಾ ಹೇಳಿದ ಒಂದು ಮಾತು,
"ಮಿತ್ತಬೈಲಿನ ಮತ್ತೊಂದು ಯುಗ ಮುಗಿಯಿತು!".

